ಬುರ್ರಕಥಾ ಈರಮ್ಮ : ಒಂದು ಅಧ್ಯಯನ

(BURRAKATHA ERAMMA : A STUDY)

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ.
ಮಹಾಪ್ರಬಂಧ

•

ಸಂಶೋಧಕಿ :
ಶ್ರೀಮತಿ ಸಾರಿಕಾದೇವಿ ಎಲ್. ಕಾಳಗಿ

•

ಮಾರ್ಗದರ್ಶಕರು
ಡಾ. ಕೆ. ಎಂ. ಮೇತ್ರಿ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ. ವಿದ್ಯಾರಣ್ಯ 583 276

2006



ಬುರ್ರಕಥಾ ಈರಮ್ಮ : ಒಂದು ಅಧ್ಯಯನ

(BURRAKATHA ERAMMA : A STUDY)

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ.
ಮಹಾಪ್ರಬಂಧ

•

ಸಂಶೋಧಕಿ :

ಶ್ರೀಮತಿ ಸಾರಿಕಾದೇವಿ ಎಲ್. ಕಾಳಗಿ

•

ಮಾರ್ಗದರ್ಶಕರು
ಡಾ. ಕೆ. ಎಂ. ಮೇತ್ರಿ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ 583 276

2006



ಬುರ್ರಕಥಾ ಈರಮ್ಮ

ಪ್ರಮಾಣ ಪತ್ರ

"ಬುರ್ರಕಥಾ ಈರಮ್ಮ : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಡಾ. ಕೆ. ಎಂ. ಮೇತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿ, ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 05-08-2006

ಸ್ಥಳ : ವಿದ್ಯಾರಣ್ಯ

ಶ್ರೀಮತಿ ಸಾಲಿಕಾದೇವಿ ಎಲ್. ಕಾಳಗಿ

ಸಂಶೋಧಕಿ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ,

ವಿದ್ಯಾರಣ್ಯ 583 276.

ದೃಢೀಕರಣ ಪತ್ರ

ಶ್ರೀಮತಿ ಸಾರಿಕಾದೇವಿ ಎಲ್ ಕಾಳಗಿ ಇವರು "ಬುರ್ರಕಥಾ ಈರಮ್ಮ : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪಿಎಚ್. ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

5.8.06

ದಿನಾಂಕ : 05-08-2006
ಸ್ಥಳ : ವಿದ್ಯಾರಣ್ಯ

ಡಾ. ಕೆ. ಎಂ. ಮೇತ್ರಿ
ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ 583 276.

ನಿವೇದನೆ

ನನ್ನ ಸಂಶೋಧನಾಧ್ಯಯನಕ್ಕೆ ಅನುವು ಮಾಡಿಕೊಟ್ಟ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳಾದ ಡಾ॥ ಲಕ್ಕಪ್ಪಗೌಡರಿಗೂ , ಇಂದಿನ ಕುಲಪತಿಗಳಾದ ಡಾ॥ ಬಿ. ವಿ. ವಿವೇಕ ರೈ ಅವರಿಗೂ ಕೃತಜ್ಞತೆಗಳು. ಬುರ್ರಕಥಾ ಈರಮ್ಮ ಅದ್ಭುತ ಪ್ರತಿಭೆಯುಳ್ಳ ವೃತ್ತಿ ಕಲಾವಿದೆ. ಇಂತಹ ಕಲಾವಿದೆಯನ್ನು ಕುರಿತು ಅಧ್ಯಯನ ಮಾಡುವ ಆಸೆಗೆ ನೀರೆರೆದು ಪೋಷಿಸಿದವರು ಗುರುಗಳು , ಮಾರ್ಗದರ್ಶಕರು ಆದ ಸಹೋದರ ಡಾ॥ ಕೆ. ಎಮ್ ಮೇತ್ರಿಯವರು. ಇವರು ಗುರುವಿನ ಸ್ಥಾನದಲ್ಲಿ ನಿಂತು ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನನ್ನ ಅನಂತ ಕೃತಜ್ಞತೆಗಳು. ಅಧ್ಯಯನಕ್ಕಾಗಿ ಹಂಪಿಗೆ ಬಂದಾಗಲೆಲ್ಲ ಮನೆಗೆ ಕರೆದು ಆದರದ ಆತಿಥ್ಯ ನೀಡಿ , ಸತ್ಕರಿಸಿ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟ ಶ್ರೀಮತಿ ದ್ರಾಕ್ಷಾಯಣಿ ಕೆ ಮೇತ್ರಿ ಅವರಿಗೆ ಚಿರಋಣಿಯಾಗಿರುತ್ತೇನೆ. ಅವರ ಪುಟಾಣಿ ಸಹನಾಳಿಗೂ ಸ್ಮರಿಸುತ್ತೇನೆ.

ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀ ವಿ. ಶಂಕರ ಮತ್ತು ಅಧ್ಯಯನಾಂಗದ ನಿರ್ದೇಶಕರಾದ ಡಾ॥ ಟಿ. ಆರ್. ಚಂದ್ರಶೇಖರ್‌ರವರಿಗೂ ಕೃತಜ್ಞತೆಗಳು ಸಲ್ಲಿಸುತ್ತೇನೆ. ಬುಡಕಟ್ಟು ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ॥ ಕೇಶವನ್ ಪ್ರಸಾದ ಅವರಿಗೂ, ಬುಡ ಕಟ್ಟು ಅಧ್ಯಯನ ವಿಭಾಗದ ಹಿರಿಯರಾದ ಡಾ॥ ಹಿ.ಚಿ ಬೋರಲಿಂಗಯ್ಯ ಅವರಿಗೂ , ಡಾ॥ ಚೆಲುವ ರಾಜು, ಮತ್ತು ಶ್ರೀ ಗಂಗಾಧರ ದೈವಜ್ಞ ಅವರಿಗೂ ನನ್ನ ಕೃತಜ್ಞತೆಗಳು. ಬುಡ ಕಟ್ಟು ಅಧ್ಯಯನ ವಿಭಾಗದ ಕಛೇರಿ ಸಿಬ್ಬಂಧಿಯವರನ್ನೂ ನೆನಪಿಸಿಕೊಳ್ಳುತ್ತೇನೆ.

ನನ್ನ ಅಧ್ಯಯನದ ವಿಷಯ ಕೇಳಿ , ಸಂತೋಷಗೊಂಡು , ಅದಕ್ಕೆ ಪೂರಕವಾದ ಮಾಹಿತಿ ನೀಡಿ, ಶುಭ ಹಾರೈಸಿದ ಡಾ॥ ಎನ್. ಆರ್. ವೆಂಕಟೇಶಂ ಅವರಿಗೆ ಋಣಿಯಾಗಿದ್ದೇನೆ.

ನನ್ನ ಸಂಶೋಧನದ ವಿಷಯ ಕುರಿತು ಆಸಕ್ತಿಯಿಂದ, ಕಲಾವಿದೆ ಬುರ್ರಕಥಾ ಈರಮ್ಮನ ಬಗ್ಗೆ ತಿಳಿದುಕೊಂಡು ಆಶೀರ್ವದಿಸಿದ ಕಲಬುರ್ಗಿ ಶರಣಬಸವೇಶ್ವರ ಸಂಸ್ಥಾನದ ಮಹಾದಾಸೋಹ ಪೀಠಾಧಿಪತಿಗಳಾದ ಪೂಜ್ಯ ಡಾ॥ ಶರಣಬಸವಪ್ಪ ಅಪ್ಪಾ ಅವರಿಗೂ ವಂದಿಸುತ್ತೇನೆ.

ನನ್ನ ಕಾಲೇಜಿನ ಕಾರ್ಯದ ಒತ್ತಡಗಳ ನಡುವೆಯೂ ಅಧ್ಯಯನಕ್ಕೆ ಅನುಕೂಲ ಮಾಡಿ ಕೊಟ್ಟು , ಸಹಕರಿಸಿದ ಶರಣ ಬಸವೇಶ್ವರ ವಾಣಿಜ್ಯ ಮಹಾ ವಿದ್ಯಾಲಯ ಬಿ. ಬಿ. ಎಮ್. ಮತ್ತು ಬಿ.ಸಿ.ಎ. ಪ್ರಾಂಶುಪಾಲರಾದ ಪ್ರೊ. ಬಿ. ಬಿ . ಪಾಟೀಲ್ ಅವರಿಗೆ ಋಣಿಯಾಗಿರುತ್ತೇನೆ. ಅಧ್ಯಯನಕ್ಕೆ ಆಧಾರ ಗ್ರಂಥಗಳನ್ನು ನಿಡಿ ಸಹಕರಿಸಿದ ಮಹಾವಿದ್ಯಾಲಯದ ಗ್ರಂಥ ಪಾಲಕರಾದ ಶ್ರೀ ವಿ.ಬಿ. ಬಂಡಿಯವರಿಗೆ ಮತ್ತು ನನ್ನ ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನ, ಪ್ರೋತ್ಸಾಹ ನೀಡಿರುವ ಪ್ರೊ. ಎಸ್. ಎಮ್. ಹೊಳಿ ಅವರಿಗೂ, ಸಹೊದ್ಯೋಗಿಗಳಾದ ಶ್ರೀಮತಿ ಜಯಶೀಲಾ ಪಾಟೀಲ್, ಶ್ರೀಮತಿ ಮೀರಾ ಪಂಡಿತ, ಶ್ರೀಮತಿ ಜ್ಯೋತಿ ಪ್ರಭಾ, ಕುಮಾರಿ ಮಂಗಳಗೌರಿ , ಕುಮಾರಿ ಶೈಲಜಾ, ಕುಮಾರಿ ತೇಜಸ್ವಿನಿ, ಕುಮಾರಿ ರೂಪಾಲಿ , ಪ್ರೊ. ವಿಶ್ವನಾಥನ್ , ಪ್ರೊ. ಶಿವದತ್ತ ಹೊನ್ನಳ್ಳಿ, ಡಾ॥ ಮಲ್ಲಿಕಾರ್ಜುನ ಬುಕ್ಕಾ, ಶ್ರೀ ಬಸವರಾಜ ಹೂಗಾರ, ಶ್ರೀ ಶಿವಕುಮಾರ ಬೆಳ್ಳಿ, ಶ್ರೀ ಅನುಪ ಹಿರೇಮಠ, ಶ್ರೀ ಶ್ರೀಶೈಲ ಇವರೆಲ್ಲರ ಸಹಾಯ, ಸಲಹೆ, ಸೂಚನೆಗಳಿಗೆ ಅನಂತ ಧನ್ಯವಾದಗಳು.

ನನ್ನನ್ನು ಸಹೋದರಿಯಂತೆ ಸದಾ ಆತ್ಮೀಯತೆಯಿಂದ ನನ್ನ ಅಧ್ಯಯನಕ್ಕೆ ಪ್ರೋತ್ಸಾಹಿಸುತ್ತಲೇ ಬಂದಿರುವ ಶ್ರೀಮತಿ ಕಮಲಾ ನೈಯರ್, ಶ್ರೀಮತಿ ನಿರ್ಮಲಾ ಸವದತ್ತಿ, ಶ್ರೀಮತಿ ಜ್ಯೋತಿ ಹುಲಿ, ಶ್ರೀಮತಿ ವಿದ್ಯಾ ಪಾಲ್ಕೆ ಶ್ರೀಮತಿ ಗಂಗುಬಾಯಿ , ಶ್ರೀಮತಿ ವಿಜಯಲಕ್ಷ್ಮಿ ಪಾಟೀಲ್, ಇವರೆಲ್ಲರಿಗೂ ನನ್ನ ಹೃದಯ ತುಂಬ ಕೃತಜ್ಞತೆಗಳು.

ಸಹೋದರರಾದ ಡಾ॥ ಸೂರ್ಯಕಾಂತ ಸುಜ್ಯಾತ ಅವರು ಸಕಾಲದಲ್ಲಿ ನನ್ನ ಅಧ್ಯಾಯಗಳನ್ನು ತಿದ್ದಿ ಡಿ.ಟಿ.ಪಿ. ಮಾಡಿಸಲು ಸಹಕರಿಸಿದ್ದಾರೆ. ಇವರಿಗೂ ಮತ್ತು ಇವರ ಶ್ರೀಮತಿಯವರಿಗೂ ಋಣಿಯಾಗಿದ್ದೇನೆ.

ಸಹೋದರರಾದ ಡಾ॥ ಗುರುಲಿಂಗಪ್ಪಾ ಧಬಾಲೆಯವರು ಕಾಲ ಕಾಲಕ್ಕೆ ನನ್ನ ಅಧ್ಯಯನಕ್ಕೆ ಮಾರ್ಗದರ್ಶನ ಮಾಡಿರುತ್ತಾರೆ. ಇವರಿಗೂ ನಾನು ಋಣಿಯಾಗಿದ್ದೇನೆ. ಸಹೋದರರಾದ ಶ್ರೀ ಶಿವಶರಣಪ್ಪ ಜಿರಾದಾರ ಅವರು ನನ್ನ ಅಧ್ಯಯನಕ್ಕೆ ಸಲಹೆ ಸೂಚನೆ ನೀಡಿದ್ದಾರೆ. ಇವರಿಗೂ ಮತ್ತು ಅವರ ಮನೆಯವರಾದ ಶ್ರೀಮತಿ ಕನ್ಯಾಕುಮಾರಿಯವರ ಆತ್ಮೀಯತೆಗೆ ಋಣಿಯಾಗಿದ್ದೇನೆ.

ಕಲಾವಿದೆ ಶ್ರೀಮತಿ ಬುರ್ರಕಥಾ ಈರಮ್ಮನವರು ನಾನು ಹಳೇದರೋಜಿಗೆ ಹೋದಾಗಲೆಲ್ಲಾ ಮಾಹಿತಿ ಸಂಗ್ರಹಿಸುವಲ್ಲಿ , ಹಾಡುಗಳ ಧ್ವನಿ ಮುದ್ರಣ ಸಮಯದಲ್ಲಿ ಸಹಕರಿಸಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಿಮ್ಮೇಳ ಗಾಯಕಿಯರಾದ ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀಮತಿ ಶಿವಮ್ಮನವರು ನನಗೆ ಉಪಯುಕ್ತವಾದ ಮಾಹಿತಿ ನಿಡಿದ್ದಾರೆ. ಇವರಿಗೂ ನಾನು ಋಣಿಯಾಗಿದ್ದೇನೆ. ಶ್ರೀಮತಿ ಬುರ್ರ ಕಥಾ ಈರಮ್ಮನ ಕುಟುಂಬದವರೆಲ್ಲರು ಮಾಹಿತಿ ಸಂಗ್ರಹಿಸುವಲ್ಲಿ ಸಹಕರಿಸಿ , ಅಧ್ಯಯನಕ್ಕೆ ಸಂಬಂಧಿಸಿದ ಉಪಯುಕ್ತ ಮಾಹಿತಿ ಒದಗಿಸಿ ಕೊಟ್ಟಿದ್ದಾರೆ. ಇವರೆಲ್ಲರ ಸಹಕಾರಕ್ಕೆ ಮನಃಪೂರ್ವಕವಾಗಿ ವಂದಿಸುತ್ತೇನೆ.

ನನ್ನ ಈ ಅಧ್ಯಯನಕ್ಕೆ ಸ್ಫೂರ್ತಿ ನಮ್ಮ ಯಜಮಾನರು. ನನ್ನಲ್ಲಿರುವ ಪ್ರತಿಭೆ ಕುಗ್ಗಬಾರದು , ಅದು ಬೆಳೆಯಬೇಕೆಂದು ,ನನ್ನ ಪ್ರತಿಯೊಂದು ಹೆಜ್ಜೆಗೂ ಸಲಹೆ ಸೂಚನೆ ಕೊಟ್ಟು , ತಪ್ಪುಗಳನ್ನು ತಿದ್ದುತ್ತಾ ನನ್ನ ಅಭ್ಯುದಯಕ್ಕೆ ಕಾರಣರಾಗಿದ್ದಾರೆ. ಅವರಿಗೆ ನಾನು ಚಿರಋಣಿಯಾಗಿದ್ದೇನೆ. ನನ್ನ ಹೆತ್ತವರಿಗೆ ಹಾಗೂ ತಮ್ಮ - ತಂಗಿಯರಿಗೂ ಋಣಿಯಾಗಿದ್ದೇನೆ. ಸಕಾಲದಲ್ಲಿ ಅಮ್ಮನ ಅಧ್ಯಯನ ಮುಗಿಸಲಿಕ್ಕೆ ಎಲ್ಲ ರೀತಿಯಿಂದಲೂ ಸಹಕರಿಸಿ , ಸ್ಪಂದಿಸಿರುವ ನನ್ನ ಪ್ರೀತಿಯ ತಾರೆಗಳಾದ ಚಿ. ವಿನೀತ ಮತ್ತು ವಿವೇಕರ ಕಾಳಜಿಗೆ ಆಭಾರಿಯಾಗಿದ್ದೇನೆ.

ಅಧ್ಯಯನದ ವಿಷಯಕ್ಕೆ ಸಹಾಯ ಮಾಡಿರುವ ವಿದ್ಯಾರ್ಥಿ ಜಯರಾಮ ರಾವ್ ಕುಲಕರ್ಣಿಗೂ ನನ್ನ ನೆನಕೆಗಳು. ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ ಸಹಾಯ , ಸಹಕಾರ ನೀಡರುವ ಎಲ್ಲ ಮಹನಿಯರಿಗೂ ಅನಂತ ಧನ್ಯವಾದಗಳು.

ಶ್ರೀ ಸಾಯಿ ಗ್ರಾಫಿಕ್ಸನ, ಕುಮಾರಿ ಅನುಪಮಾ ವಿ. ಬುಡಗೆ ಇವರು ಸಕಾಲದಲ್ಲಿ ಈ ಅಧ್ಯಯನದ ಡಿ.ಟಿ.ಪಿಯನ್ನು ಸುಂದರವಾಗಿ ಮಾಡಿ ಕೊಟ್ಟಿರುತ್ತಾರೆ. ಇವರಿಗೂ ನಾನು ಋಣಿಯಾಗಿದ್ದೇನೆ.

ಸಂಶೋಧಕಿ :

ಶ್ರೀಮತಿ ಸಾರಿಕಾದೇವಿ ಎಲ್. ಕಾಳಗಿ

ಪರಿವಿಡಿ

ಅಧ್ಯಾಯ - 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ - 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಔದ್ಯೋಗೀಕರಣ, ಯಾಂತ್ರೀಕರಣದಿಂದಾಗಿ ಮಾನವ ಜೀವನ ಮತ್ತು ಸಮಾಜದಲ್ಲಿ ಅನೇಕ ರೀತಿಯ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಯಾಂತ್ರಿಕತೆಯಿಂದ ನಾಗರೀಕತೆ ಬೆಳೆದಂತೆ ಮನುಷ್ಯನ ಜೀವನ ವಿಧಾನ, ಅವನ ಆಲೋಚನಾ ಸರಣಿ, ಅವನ ಆಹಾರ - ವಿಹಾರ, ಉಡುಗೆ - ತೊಡುಗೆ, ಆಚಾರ - ವಿಚಾರ, ಸಂಪ್ರದಾಯ, ಕಲೆ - ಸಂಸ್ಕೃತಿ ಮುಂತಾದ ಅನೇಕ ಅಂಶಗಳಲ್ಲಿ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಇವತ್ತು ಜಾಗತೀಕರಣ, ಕಂಪ್ಯೂಟರೀಕರಣದಿಂದಾಗಿ ವಿಶಾಲವಾದ ಜಗತ್ತು, ಒಂದು ಸಣ್ಣ ಹಳ್ಳಿಯಾಗಿ ಪರಿಣಮಿಸಿದೆ. ಆಧುನಿಕ ವಿಜ್ಞಾನ; ತಂತ್ರಜ್ಞಾನದ ಆವಿಷ್ಕಾರಗಳಿಂದಾಗಿ, ಜಾನಪದ ಸಂಪ್ರದಾಯ , ನಂಬಿಕೆ, ಆಚರಣೆಗಳಲ್ಲಿ ಬದಲಾವಣೆಗಳಾಗುತ್ತಿವೆ. ಆಧುನಿಕತೆಯ ಪ್ರಭಾವ ಶಿಷ್ಟ ಸಂಸ್ಕೃತಿಗಿಂತಲೂ, ಜಾನಪದ ಸಂಸ್ಕೃತಿಯ ಮೇಲೆ ವಿಶಿಷ್ಟವಾಗಿ ಕಂಡು ಬರುತ್ತದೆ. ಇದರಿಂದ ಎಷ್ಟೋ ಜನಪದ ಕಲೆಗಳು ನಶಿಸಿ ಹೋಗುತ್ತಿವೆ. ಯಾಂತ್ರೀಕರಣದಿಂದಾಗಿ ಹಂತಿಯ ಹಾಡುಗಳು, ಬೀಸುವ, ಕುಟ್ಟುವ ಹಾಡು ಮುಂತಾದವುಗಳು ಇಂದು ಜನರಿಂದ ಕಣ್ಮರೆಯಾಗಿವೆ. ಅದರಂತೆ ಜನಪದ ಕಲಾವಿದರ ಮೇಲೂ ಅದು ಪರಿಣಾಮ ಬೀರಿದೆ. ಸಿನೆಮಾ, ಟಿ.ವಿ., ಕ್ಯಾಸೆಟ್, ಸಿಡಿ ಮುಂತಾದ ದೃಶ್ಯ, ಶ್ರವಣೋಪಕರಣಗಳ ಹಾವಳಿಗಳಿಂದಾಗಿ ವೃತ್ತಿ ಕಲಾವಿದರು, ಮತ್ತು ಅವರ ಕಲೆಗಳು ನಶಿಸಿ ಹೋಗುತ್ತಿವೆ. ಬದಲಾದ ಜನರ ಮನೋಧೋರಣೆ ನಿರುದ್ಯೋಗ, ಮುಂತಾದವುಗಳಿಂದಾಗಿ ಎಷ್ಟೋ ಜನ ಜಾನಪದ ವೃತ್ತಿ ಕಲಾವಿದರು ಅನಿವಾರ್ಯವಾಗಿ ಅನ್ಯ ಮಾರ್ಗಗಳನ್ನು ಅನುಸರಿಸುತ್ತಲಿದ್ದಾರೆ.

ಇಂದಿನ ಸಂಕ್ರಮಣ ಯುಗದಲ್ಲಿ ಜನಪದ ಕಲೆ ಮತ್ತು ಕಲಾವಿದರನ್ನು ಉಳಿಸಿ ಬೆಳೆಸಿಕೊಂಡು ಹೋಗುವುದೆಂದರೆ ನಮ್ಮ ಸಂಸ್ಕೃತಿ ಉಳಿಸಿಕೊಳ್ಳುವುದು ಎಂದರ್ಥವಾಗುತ್ತದೆ. ಈ ಹಿನ್ನೆಲೆಯಿಂದ ಪರಂಪರಾನುಗತವಾಗಿ ಬಂದ ಕಲೆ ಮತ್ತು ಕಲಾವಿದನ ಅಧ್ಯಯನ ಮಹತ್ವದ ಅಂಶವೆನಿಸುತ್ತದೆ. ಇಂದು ಕ್ಷಾಮ, ನೈಸರ್ಗಿಕ ವಿಪತ್ತುಗಳು, ನಿರುದ್ಯೋಗ, ಬಡತನ ಇವುಗಳಿಂದ ಹಳ್ಳಿಯ ಜೀವನ ಅತಂತ್ರ ಸ್ಥಿತಿಯಲ್ಲಿದೆ.

ಸರಕಾರದ ದ್ವಿಮುಖ ಧೋರಣೆ , ನೈಸರ್ಗಿಕ ಆಪತ್ತು ಮತ್ತು ನಗರ ಜೀವನದ ಆಕರ್ಷಣೆ ಇವುಗಳಿಂದ ಜನ ಸಾಮಾನ್ಯರು ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇದರಿಂದ ಜನಪದರ ಕುಲಕಸುಬುಗಳು ಮತ್ತು ಅವರ ಕಲೆ ನಾಶ ಹೊಂದುತ್ತಿವೆ.

ಎಲ್ಲಿ ಮಾನವ ಜೀವನ ನೆಮ್ಮದಿಯಾಗಿರುತ್ತದೆಯೋ ಅಲ್ಲಿ ಸಾಹಿತ್ಯ ಕಲೆಗಳು ಹುಟ್ಟಿಕೊಳ್ಳುತ್ತವೆ. ಇಂದಿನ ಇಂತಹ ದುರ್ಬರ ಸ್ಥಿತಿಯಲ್ಲಿ ಸಾಹಿತ್ಯ , ಕಲೆ, ಹುಟ್ಟುವುದಿರಲಿ ಅದನ್ನು ಉಳಿಸಿ ಕೊಳ್ಳುವುದು ದುಸ್ತರದ ಸಂಗತಿಯಾಗಿದೆ. ನಗರೀಕರಣ , ಯಾಂತ್ರೀಕರಣ, ಕಂಪ್ಯೂಟರೀಕರಣ, ಟಿ.ವಿ. , ಸಿನೇಮಾ

ಮುಂತಾದ ಮಾಧ್ಯಮಗಳಿಂದಾಗಿ ಸಾಂಪ್ರದಾಯಿಕ ಕಲೆಗಳು ಮತ್ತು ಕಲಾವಿದರು ಅಸಡ್ಡೆಗೊಳಪಡುತ್ತಿದ್ದಾರೆ. ಇವೆಲ್ಲವುಗಳಿಂದ ಸಹೃದಯರ ಮತ್ತು ಪ್ರೇಕ್ಷಕರ ಮನೋಧೋರಣೆಯೂ ಬದಲಾಗುತ್ತಿದೆ. ಆಧುನಿಕ ಸಮೂಹ ಮಾಧ್ಯಮಗಳಿಂದ ಸಾಂಪ್ರದಾಯಿಕ ಕಲೆಗಳಲ್ಲಿ ಇವರು ನಿರಾಸಕ್ತಿ ತೋರುತ್ತಿದ್ದಾರೆ. ಆಧುನಿಕ ಮನೋಧೋರಣೆಯಿಂದ ರಾತ್ರಿಯಿಡೀ ಕುಳಿತು ಹಾಡು ಆಲಿಸುವ, ನಾಟಕ ನೋಡುವ ಸಹನೆ , ಇಂದು ಜನರಿಂದ ದೂರವಾಗುತ್ತಿದೆ. ಹೀಗಾಗಿ ಜನಪದ ಕಲಾವಿದರ ಬದುಕು ಮತ್ತು ಅವರ ಕಲೆ ಅತಂತ್ರ ಸ್ಥಿತಿಯಲ್ಲಿದೆ. ನಮ್ಮ ಸಂಸ್ಕೃತಿಯ ವಕ್ತಾರರಂತಿರುವ ಜನಪದ ಕಲಾವಿದರು ಮತ್ತು ಅವರ ಕಲೆ ಉಳಿಸಿ ಕೊಳ್ಳದೇ ಹೋದರೆ, ಉಳಿಸಿಕೊಂಡು ಅದನ್ನು ಮುಂದಿನ ಜನಾಂಗಕ್ಕೆ ತಲುಪಿಸದೇ ಹೋದರೆ ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿ ನಾಶವಾದಂತೆ. ಅದಕ್ಕಾಗಿ ಜನಪದ ಕಲಾವಿದರ ಜೀವನ ಮತ್ತು ಅವರ ಕಲೆ , ಸಾಹಿತ್ಯ, ಕುರಿತ ಅಧ್ಯಯನ ಅತ್ಯಂತ ಅವಶ್ಯಕವೆನಿಸುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ನಮ್ಮ ದೇಶದ ಆಧುನಿಕ ಹೆಣ್ಣುಮಕ್ಕಳಿಗೆ ಜೀಸುವ ಹಾಡುಗಳು, ಕುಟ್ಟುವ ಹಾಡುಗಳು, ಲಾಲಿ ಹಾಡುಗಳು ಮದುವೆ ಹಾಡುಗಳು ಮುಂತಾದ ಅನೇಕ ಹಾಡುಗಳ ಪರಿಚಯವೇ ಇಲ್ಲ ಎನ್ನಬಹುದು. ಅದರಂತೆ ಗಂಡು ಮಕ್ಕಳಿಗೆ ಹಂತಿ ಹಾಡು , ಮಟ್ಟಿ ಹಾಡು ಮುಂತಾದ ಅನೇಕ ಹಾಡುಗಳ ಪರಿಚಯವಿಲ್ಲವೆನ್ನುವದೂ ಅತಿಶಯೋಕ್ತಿಯೆನಿಸದು. ಆಧುನಿಕ ಯಂತ್ರೋಪಕರಣಗಳು ಮತ್ತು ಯಾಂತ್ರೀಕರಣದ ಅತಿಯಾದ ಬಳಕೆ ಮನುಷ್ಯ ಜೀವನದಲ್ಲಿ ಅನೇಕ ರೀತಿಯ ಬದಲಾವಣೆ ತರುತ್ತಿದೆ. ಯಾಂತ್ರೀಕರಣದ ಬದುಕಿನಿಂದ ಮನುಷ್ಯನ ಮಾನಸಿಕ ನೆಮ್ಮದಿ ಹಾಳಾಗುತ್ತಿದೆ. ಇದರಿಂದಾಗಿ ಮಾನಸಿಕ ನೆಮ್ಮದಿಗಾಗಿ ಕಲೆ, ಸಾಹಿತ್ಯ ಪ್ರದರ್ಶಿಸುವ ಮತ್ತು ಆಸ್ವಾದಿಸುವ ಪದ್ಧತಿಯು ಮನುಷ್ಯನಿಂದ ದೂರವಾಗುತ್ತಿದೆ. ಇದರಿಂದ ಕಲಾವಿದ ಮತ್ತು ಅವನ ಕಲೆ ಎರಡೂ ನಾಶ ಹೊಂದುತ್ತಿವೆ.

ಇಂತಹ ಸಂಘರ್ಷಮಯ ವಾತಾವರಣದಲ್ಲಿ ಕಲಾವಿದ ಹಾಗೂ ಆತನ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಕಷ್ಟವೆನಿಸುತ್ತದೆ. ಅನೇಕ ಕಲಾವಿದರು ಹೊಟ್ಟೆ ಹೊರೆದು ಕೊಳ್ಳುವುದಕ್ಕಾಗಿ ತಮ್ಮ ಮೂಲ ವೃತ್ತಿಯನ್ನು ಬಿಟ್ಟು , ಬೇರೆ ವೃತ್ತಿಯನ್ನು ಕೈಗೊಳ್ಳುತ್ತಿದ್ದಾರೆ. ಇನ್ನು ಕೆಲವರು ಎಲ್ಲವನ್ನೂ ಬಿಟ್ಟು ನಗರಗಳಿಗೆ, ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಇದರಿಂದ ಹೊಸ ತಲೆಮಾರಿನ ಜನ ವಂಶ ಪರಂಪರೆಯಿಂದ ಬಂದ ಕುಲಕಸುಬುಗಳು ಮತ್ತು ಕಲೆ ಅಳವಡಿಸಿಕೊಳ್ಳುವುದಿರಲಿ ಅದನ್ನು ಕೇಳುವ ಮತ್ತು ಆ ಸ್ವಾದನೆಯಿಂದ ಬಹುದೂರ ಉಳಿಯುತ್ತಿದ್ದಾರೆ. ಇನು ಕೆಲವು ಕಲಾವಿದರು ತಮಗೆಷ್ಟೇ ಕಷ್ಟ ಬಂದರೂ, ತಾವೆಷ್ಟೇ ತೊಂದರೆ ಅನುಭವಿಸಿದರೂ ತಮ್ಮ ಕಲೆ ಪ್ರದರ್ಶಿಸುತ್ತ, ಹೊಟ್ಟೆ ಹೊರೆಯುತ್ತ ತಮ್ಮಲ್ಲಿಯ ಕಲೆಯನ್ನು ಜೀವಂತವಾಗಿ ಉಳಿಸಿ-ಬೆಳೆಸಿಕೊಂಡು ಬಂದಿದ್ದಾರೆ. ಇದು ಹಳೆಯ ತಲೆ ಮಾರಿನ, ಕಲಾವಿದರಿಂದ ಮಾತ್ರ ಸಾಧ್ಯವಾಗಿದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಇವರಲ್ಲಿ ಕೆಲವರು ವೃತ್ತಿಕಲಾವಿದರಾಗಿ, ಅರೆವೃತ್ತಿ ಕಲಾವಿದರಾಗಿ, ಮತ್ತೆ ಕೆಲವರು ಹವ್ಯಾಸಿ ಕಲಾವಿದರಾಗಿ ಉಳಿದುಕೊಂಡು ಬಂದಿದ್ದಾರೆ. ಇವರಿಗೆ ಕಲಾಪ್ರದರ್ಶನವೆನ್ನುವುದು ದಿನನಿತ್ಯದ ಬದುಕಿನ ಕಾಯಕ. ಯಾವುದೇ ರೀತಿಯ

ಮಹತ್ವಾಕಾಂಕ್ಷೆಯ ಉದ್ದೇಶ ಇವರಿಗಿಲ್ಲ. ತಮ್ಮ ಕಲೆ ಪ್ರದರ್ಶಿಸಿ ಹಣ ಗಳಿಸಬೇಕು. ಹೆಸರು, ಕೀರ್ತಿ ಸಂಪಾದಿಸಬೇಕು. ಪ್ರಶಸ್ತಿ ಪಡೆಯಬೇಕು ಎನ್ನುವ ಆಸೆ ಆಕಾಂಕ್ಷೆಗಳು ಇವರಿಗಿಲ್ಲ. ತಾವಿರುವುದು ತಮ್ಮ ಕಲಾ ಪ್ರದರ್ಶನಕ್ಕಾಗಿ ಮಾತ್ರ. ಇದರಿಂದ ಸರಿ ಹೊತ್ತಿನ ಊಟ, ಬಟ್ಟೆ, ಸಿಕ್ಕರೆ ಸಾಕು ಎನ್ನುವ ಉದ್ದೇಶ ಇವರಿಗಿದೆ. ಜನರ ಕಲಾ ಆಸ್ವಾದನೆ, ಆಶೋತ್ತರಗಳಿಗೆ ಸ್ಪಂದಿಸಬೇಕೆನ್ನುವುದು ಇವರ ಪ್ರಮುಖ ಉದ್ದೇಶವಾಗಿದೆ. ಆದ್ದರಿಂದಲೇ ಇವರು ಇಂತಹ ಯಾಂತ್ರೀಕರಣ ಯುಗದಲ್ಲೂ ಪರಿಸರದೊಡನೆ ಸಂಘರ್ಷ ಮಾಡಿ ತಮ್ಮ ಕಲೆಯನ್ನು ಉಳಿಸಿ, ಬೆಳೆಸಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಡುತ್ತಿರುವುದು ಕಂಡು ಬರುತ್ತಿದೆ.

ಒಬ್ಬ ಕಲಾವಿದ ಆಯಾ ಸಂದರ್ಭದಲ್ಲಿ ಜನರ ಆಚಾರ-ವಿಚಾರ, ನಡೆ-ನುಡಿ, ನಂಬಿಕೆ - ಸಂಪ್ರದಾಯಗಳು, ಜೀವನ - ಮೌಲ್ಯಗಳು ಮುಂತಾದ ಅನೇಕ ಅಂಶಗಳ ವಕ್ತಾರನಾಗಿರುತ್ತಾನೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಯಾವುದೇ ಒಬ್ಬ ಕಲಾವಿದನೆಂದರೆ ಅವನೊಬ್ಬ ಸಾಂಸ್ಕೃತಿಕ ವಕ್ತಾರ . ಕಾಲಾನುಕಾಲದಿಂದ ನಡೆದು ಬರುತ್ತಿರುವ ಕಲೆ, ಸಾಹಿತ್ಯ, ಸಂಸ್ಕೃತಿ ಅಂಶಗಳಿಗೆ ಪ್ರತೀಕವಾಗಿ ಇವನು ಕೆಲಸ ಮಾಡುತ್ತಾನೆ. ಇದರಿಂದ ಒಬ್ಬ ಕಲಾವಿದನ ಅಧ್ಯಯನ ಮಾಡುವುದು ಎಂದರೆ ಒಂದು ಸಂಸ್ಕೃತಿಯ ಅಧ್ಯಯನವೇ ಆಗಿದೆ. ಒಬ್ಬ ಕಲಾವಿದನ ಅಧ್ಯಯನದಿಂದ, ಅವನ ಜೀವನ, ಅದಕ್ಕೆ ಪ್ರಭಾವ ಬೀರಿದ ಅಂಶಗಳು, ಅವನ ಸಾಹಿತ್ಯ, ಕಲೆ ಮುಂತಾದ ಅನೇಕ ಅಂಶಗಳನ್ನು ಅಧ್ಯಯನ ಮಾಡುವುದಾಗಿದೆ. ಒಬ್ಬ ಕಲಾವಿದನ ಅಧ್ಯಯನದಿಂದ ಒಬ್ಬ ಕಲಾವಿದನನ್ನು ಮತ್ತು ಅವನ ಕಲೆಯನ್ನು ಚರಿತ್ರೆಯಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡಬಹುದು. ಇದರಿಂದ ಮುಂದಿನ ಜನಾಂಗಕ್ಕೆ ಅವನ ಹಾಗೂ ಅವನ ಕಲೆಯನ್ನು ಮನವರಿಕೆ ಮಾಡಿಕೊಡಲು ಸಾಧ್ಯವಾಗುತ್ತದೆ.

ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಅವಲೋಕಿಸಿದಾಗ, ನಮ್ಮವರು ಶಿಷ್ಟವಾದ ಕಲೆ ಮತ್ತು ಸಾಹಿತ್ಯವನ್ನು ಮಾತ್ರ ಉಳಿಸಿ ಬೆಳೆಸಿಕೊಂಡು ಬಂದಿರುವುದು ಚರಿತ್ರೆಯಲ್ಲಿ ದಾಖಲಾಗಿರುವುದನ್ನು ನೋಡುತ್ತೇವೆ. ಶಿಷ್ಟವಲ್ಲದ ಕಲೆ ಮತ್ತು ಸಾಹಿತ್ಯವನ್ನು ನಮ್ಮವರು ತಾತ್ಸಾರವಾಗಿ ನೋಡಿರುವ ಸಂದರ್ಭವನ್ನು ಕಾಣುತ್ತೇವೆ. ಕನ್ನಡವು ಇದಕ್ಕೆ ಹೊರತಾಗಿಲ್ಲ. ಪಾಶ್ಚಾತ್ಯ ಸಾಹಿತ್ಯ ಪ್ರಭಾವ ಬೀರುವತನಕ ನಮ್ಮವರು ಶಿಷ್ಟವಲ್ಲದ ಸಾಹಿತ್ಯವನ್ನು ಗೊರವರ ಡುಂಡುಚಿಯೇ ಜೀದಿವರೆಯೆ ಜೀರನ ಕಥೆಯೇ .... ಎಂದು ತಾತ್ಸಾರವಾಗಿ ಕಂಡಿದಷ್ಟೇ ಅಲ್ಲ ಗೇಲಿ ಮಾಡಿದ್ದುಂಟು. ಶಿಷ್ಟವಲ್ಲದ ಸಾಹಿತ್ಯ , ಕಲೆ, ಅದು ಸಾಹಿತ್ಯವೇ ಅಲ್ಲ, ಕಲೆಯೇ ಅಲ್ಲ, ಕಲೆಯನ್ನು ಪ್ರದರ್ಶಿಸುವವ ಕಲಾವಿದನೇ ಅಲ್ಲ ಎಂದು ಒಂದು ಸೀಮಿತ ಜನವರ್ಗ ಭಾವಿಸಿರುವ ಸಂದರ್ಭದಲ್ಲಿ ಅದು ದಾಖಲಾತಿಯಿಂದ ದೂರ ಉಳಿಯಿತು. ಜನಪದ ಕಲಾವಿದರ ಕಲೆ ಮತ್ತು ಸಾಹಿತ್ಯ ತಲೆಮಾರಿನಿಂದ ತಲೆಮಾರಿಗೆ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಅಂದು ಶಿಷ್ಟ ವರ್ಗ ಅದನ್ನು ದೂರವಿಟ್ಟರೂ ಸಾಮಾನ್ಯ ವರ್ಗದಲ್ಲಿ ಜನಪದ ಕಲೆ ಮತ್ತು ಸಾಹಿತ್ಯ ಅತ್ಯಂತ ಜನಪ್ರಿಯತೆಯನ್ನು ಹೊಂದಿತ್ತು. ಒಬ್ಬ ಕಲಾವಿದನನ್ನು ಆರಾಧಿಸುವ ಮತ್ತು ಅವನ ಕಲೆಯನ್ನು ಪ್ರೋತ್ಸಾಹಿಸುವ ಅಪಾರವಾದ ಶ್ರೋತೃಗಳು ಇದ್ದರು. ಯಾವಾಗ ಯಾಂತ್ರೀಕರಣ, ಔದ್ಯೋಗಿಕರಣ ಪ್ರಾರಂಭವಾಯಿತೋ ಕಲಾವಿದ ಹಾಗೂ

ಅವನ ಕಲೆ ಅತಂತ್ರ ಸ್ಥಿತಿಯಲ್ಲಿ ಸಿಲುಕಿಕೊಂಡಿತು. ಇವತ್ತಿನ ಜಾಗತೀಕರಣ ಸಂದರ್ಭದಲ್ಲಂತೂ ಇನ್ನಷ್ಟು ಅತಂತ್ರತೆ ಉಂಟಾಗಿ ಜಾನಪದ ಕಲಾವಿದರು ಮತ್ತು ಅವರ ಕಲೆ ಸಂಘರ್ಷದ ಹಾದಿ ಹಿಡಿದಿವೆ. ಅವನತಿಯ ಹೊಸ್ತಿಲಿನಲ್ಲಿರುವ ಈ ಸಂದರ್ಭದಲ್ಲಿ ಕಲಾವಿದನನ್ನು ಮತ್ತು ಅವನ ಕಲೆಯನ್ನು ಉಳಿಸಿಕೊಳ್ಳುವುದು ಮಹತ್ವದ ಅಂಶವಾಗಿದೆ. ಹೀಗಾಗಿ ಕಲಾವಿದನ ಜೀವನ ಹಾಗೂ ಕಲೆ, ಸಾಹಿತ್ಯ ಕುರಿತು ಅಧ್ಯಯನ ಮಾಡುವುದೆಂದರೆ ಅವನನ್ನು ಹಾಗೂ ಅವನ ಕಲೆಯನ್ನು ಜೀವಂತವಾಗಿ ಉಳಿಸಿಕೊಂಡಂತೆಯೆ ಎನ್ನುವುದು ಪ್ರಮುಖ ಅಂಶವೆನಿಸುತ್ತದೆ. ಈ ಹಿನ್ನೆಲೆಯಿಂದ ಪ್ರಸ್ತುತ ಅಧ್ಯಯನ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ.

ಶಿಷ್ಟ ಪರಂಪರೆ ಮತ್ತು ಸ್ಥಾಪಿತ ಮೌಲ್ಯಗಳೇ ಭಾರತೀಯ ಸಂಸ್ಕೃತಿ ಎಂದು ಇಲ್ಲಿಯವರೆಗೆ ಪ್ರತಿಬಿಂಬಿಸಿರುವುದನ್ನು ನಾವು ಕಾಣುತ್ತೇವೆ. ಸಾಂಸ್ಕೃತಿಕ ಚಿಂತನೆಯ ಪ್ರತೀಕಗಳಾದ ರಾಮಾಯಣ, ಮಹಾಭಾರತ ಗ್ರಂಥಗಳು, ಪುರಾಣ , ಪುಣ್ಯ ಕಥೆ ಮುಂತಾದವುಗಳು ಉದ್ದೇಶಿತ ಮತ್ತು ಪೂರ್ವ ಪ್ರಜ್ಞೆಯಿಂದ ನಿರ್ಮಾಣಗೊಂಡವುಗಳು . ಇಲ್ಲಿ ನಾವು ಕಾಣುವುದು ಮೌಲ್ಯಗಳ ವೈಭವೀಕರಣ ಮಾತ್ರ. ಆದರೆ ಸಾಮಾನ್ಯ ಜನ - ಜೀವನದ ಅಂಶಗಳು ವ್ಯವಸ್ಥಿತವಾಗಿ ಕಡೆಗಣಿಸಲ್ಪಟ್ಟು ಸ್ಥಾಪಿತ ಮೌಲ್ಯಗಳೇ ನಮ್ಮ ಸಂಸ್ಕೃತಿಯೆಂದು ಪ್ರತಿ ಬಿಂಬಿಸಲ್ಪಟ್ಟವು. ಭಾರತೀಯರ ನಿಜವಾದ ಜೀವನಾನುಭವ ಮತ್ತು ಅವರ ಸಂಸ್ಕೃತಿ ಇಲ್ಲಿಯವರೆಗೆ ವ್ಯವಸ್ಥಿತವಾಗಿ ಕಡೆಗಣಿಸಲ್ಪಡುತ್ತಲೆ ಬಂದಿವೆ. ವ್ಯಾಸ, ವಾಲ್ಮಿಕಿಯಂತೆ ಅನೇಕ ಕವಿಗಳು ಬುಡ ಕಟ್ಟು ಜನಾಂಗದಲ್ಲಿಯೇ ಹುಟ್ಟಿದರೂ ಪರಿಸರದ ಅನಿವಾರ್ಯತೆಯಿಂದ ಅವರಲ್ಲಿಯ ಪ್ರತಿಭೆ ಸ್ಥಾಪಿತ ಮೌಲ್ಯಗಳ ಪ್ರತಿಷ್ಠಾಪನೆಯಲ್ಲಿಯೆ ವಿಶಿಷ್ಟತೆಯನ್ನು ಮೆರೆಯಿತೇ ವಿನ: ಸಂಸ್ಕೃತಿಯ ಸಾರ್ವತ್ರಿಕರಣದ ಕಡೆಗೆ ಗಮನ ಹರಿಸಲೇ ಇಲ್ಲ. ಹೀಗಾಗಿ ನಾವು ಸ್ಥಾಪಿತ ಮೌಲ್ಯಗಳೇ ನಮ್ಮ ಸಂಸ್ಕೃತಿ ಎನ್ನುವ ಭ್ರಮೆಗೆ ಅಂಟಿಕೊಂಡು ಬಂದೆವು. ಆಯಾ ಊರು, ಪ್ರದೇಶಗಳಿಗೆ ,ಅಲ್ಲಿಯ ಭಾಷೆಗೆ ಮತ್ತು ಸಂಸ್ಕೃತಿಗೆ ತನ್ನದೆ ಆದ ವೈಶಿಷ್ಟತೆ ಇರುತ್ತದೆ ಎನ್ನುವುದು ಇಲ್ಲಿಯವರೆಗೂ ವಿದ್ವಾಂಸರು ಹೆಚ್ಚು ಆಲೋಚನೆ ಮಾಡದೆ ಇರುವದು ವಿಷಾದನೀಯ ಸಂಗತಿಯೆನಿಸುತ್ತದೆ. ಈ ಹಿನ್ನೆಲೆಯಿಂದ ನಾವು ಅವಲೋಕಿಸಿದಾಗ ಬುಡಕಟ್ಟು ಕಲೆ, ಸಾಹಿತ್ಯ ಮತ್ತು ಅದನ್ನು ಪೋಷಿಸಿಕೊಂಡು ಬರುತ್ತಿರುವ ಕಲಾವಿದನ ಅಧ್ಯಯನ ಅಗತ್ಯ ಎನ್ನುವುದು ಮನವರಿಕೆಯಾಗುತ್ತದೆ.

ಒಬ್ಬ ಕಲಾವಿದ ಅವನ ಸುತ್ತಮುತ್ತಲಿನ ಪರಿಸರ ಅಂದರೆ ಜನ-ಜೀವನ , ಆಚಾರ-ವಿಚಾರ, ನಂಬಿಕೆಗಳು ಮತ್ತು ಪರಂಪರೆಗಳನ್ನು ಪ್ರತಿನಿಧಿಸುತ್ತಾನೆ. ನಿಜವಾದ ಸಂಸ್ಕೃತಿಯನ್ನು ವಾಸ್ತವಿಕ ನೆಲೆಗಟ್ಟಿನ ಮೇಲೆ ಚಿತ್ರಿಸುತ್ತಾನೆ ಎನ್ನುವುದಕ್ಕೆ ಬುಡ ಕಟ್ಟು ಮತ್ತು ಜಾನಪದ ಕಲೆ ಹಾಗೂ ಸಾಹಿತ್ಯ ಸಾಕ್ಷಿಯಾಗಿ ನಿಂತಿದೆ. ಪ್ರತಿಯೊಂದು ಜನವರ್ಗಕ್ಕೂ ತನ್ನದೆ ಆದ ಅದ್ಭುತ ಸಂಸ್ಕೃತಿಯಿದೆ ಎನ್ನುವುದು ಇದರಿಂದ ಮನವರಿಕೆಯಾಗುತ್ತದೆ. ಇಂತಹ ಅದ್ಭುತ ಸಂಸ್ಕೃತಿಯನ್ನು ಅಧ್ಯಯನ ಮಾಡುವುದು ಇಂದು ಅನಿವಾರ್ಯ ಎನಿಸುತ್ತದೆ. ಇಂತಹ ಅಧ್ಯಯನದಿಂದ ಆಯಾ ಜನವರ್ಗ ಮತ್ತು ಅದರ ಸಂಸ್ಕೃತಿ ಏನು ಎನ್ನುವುದು ತಿಳಿಯಲು ಮತ್ತು ಅದನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಸಹಾಯಕವಾಗುತ್ತದೆ.

ಭಾರತದ ಭೂ ಪ್ರದೇಶವು ಅನೇಕ ರೀತಿಯ ಜನವರ್ಗ , ಸಂಸ್ಕೃತಿ. ಭಾಷೆ, ಮೌಲ್ಯಗಳು

ಹೊಂದಿದೆ. ಈ ಪ್ರದೇಶದಲ್ಲಿ ಅನೇಕ ಧರ್ಮ, ಜಾತಿ, ಜನಾಂಗಗಳು, ಪಂಗಡ, ಒಳ ಪಂಗಡಗಳು ಕಂಡು ಬರುತ್ತವೆ. ಹೀಗಾಗಿ ಭಾರತ ಮಿಶ್ರ ಸಂಸ್ಕೃತಿ ಹೊಂದಿದ ದೇಶವಾಗಿದೆ. ಈ ಮಿಶ್ರ ಸಂಸ್ಕೃತಿಯಲ್ಲಿ ಸಮಾಜದ ಕೆಳ ವರ್ಗದ ಸಂಸ್ಕೃತಿ ಅವಜ್ಞತೆಗೆ ಒಳಪಟ್ಟಿದೆ. ಇಲ್ಲಿ ಬಹು ಸಂಖ್ಯಾತರು ಸಮಾಜದ ಕೆಳ ವರ್ಗದವರೇ ಆಗಿದ್ದಾರೆ. ಮೇಲ್ವರ್ಗದ ಸಂಸ್ಕೃತಿ ಅದು ಏನಿದ್ದರೂ ಶಿಷ್ಟತೆಯ ಸೋಗಿನಲ್ಲಿ ಬಹು ಸಂಖ್ಯಾತರಿಂದ ದೂರ ಉಳಿದಿದೆ. ಬಹು ಜನರ ಸಂಸ್ಕೃತಿ ನಿಜವಾದ ಸಂಸ್ಕೃತಿಯಾದರೂ ಅದರ ಅಂತಃಸತ್ವ ಇದುವರೆಗೂ ಅರಿತುಕೊಳ್ಳದೇ ಇರುವುದು ಬಹುಜನ ವರ್ಗದ ಮೇಲೆ ನಡೆಸುತ್ತಿರುವ ಅನ್ಯಾಯ ಎನಿಸುತ್ತದೆ. ಹೀಗಾಗಿ ಬಹು ಜನ ಸಂಸ್ಕೃತಿಯ ಅಧ್ಯಯನಗಳು ದೇಶದ ಸಂಸ್ಕೃತಿಯ ಅಧ್ಯಯನ ಎನಿಸುತ್ತವೆ.

ಬಹುಜನ ಕಲೆ, ಸಂಸ್ಕೃತಿಯು ಅವಜ್ಞೆಗೆ ಒಳಗಾದಂತೆ, ಈ ಕಲೆ ಸಂಸ್ಕೃತಿಯನ್ನು ಪ್ರತಿನಿಧಿಸುವ ಕಲಾವಿದನೂ ಅವಜ್ಞೆಗೆ ಒಳಗಾಗಿದ್ದಾನೆ. ಇವರ ಕುರಿತು ಕವಿರಾಜ ಮಾರ್ಗಕಾರ "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎಂದು ತನ್ನ ಕವಿರಾಜ ಮಾರ್ಗದಲ್ಲಿ ಅವರ ವೈಶಿಷ್ಟ್ಯತೆಯನ್ನು ಕುರಿತು ಹೇಳಿದ್ದರೂ ಈ ಹಿಂದೆ ಯಾರೂ ಅವರ ಮಹತ್ವವನ್ನು ಪರಿಗಣಿಸಲೇ ಇಲ್ಲ. ಶಿಷ್ಟರಲ್ಲದ ಕವಿಗಳನ್ನು ಕಲಾವಿದರನ್ನು ಕವಿ -ಕಲಾವಿದರೆಂದು ಒಪ್ಪಿಕೊಳ್ಳಲೇ ಇಲ್ಲ. ಆದರೂ ಜನಮನದಲ್ಲಿ ಇವರು ಉಳಿದುಕೊಂಡು ಬಂದಿರುವುದು ವಾಸ್ತವಿಕಾಂಶವಾಗಿದೆ. ಈ ಮೇಲಿನ ಎಲ್ಲಾ ಅಂಶಗಳಿಂದ ನಮ್ಮಲ್ಲಿ ಕಲಾವಿದರು , ಕವಿಗಳು ಗಾಯಕರು ಪ್ರಮುಖರೆನಿಸುತ್ತಾರೆ.

ಈ ಹಿನ್ನೆಲೆಯಿಂದ ಬುರ್ರಕಥಾ ಕಲಾವಿದೆ ಈರಮ್ಮನ ಕುರಿತು ಅಧ್ಯಯನ ಬಹು ಮುಖ್ಯ ಅಂಶವೆನಿಸುತ್ತದೆ. ಬುರ್ರ ಕಥಾ ಈರಮ್ಮ ಅಲೆಮಾರಿ ವೃತ್ತಿಗಾಯಕ ಪರಂಪರೆಗೆ ಸೇರಿದಂಥವಳು. ಆಂಧ್ರದ ಬುರ್ರ ಕಥಾ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಂತಹ ಈಕೆ ಕನ್ನಡ ವೃತ್ತಿಗಾಯಕ ಬುರ್ರ ಕಥಾ ಪರಂಪರೆಯ ಒಂದು ಯುಗವನ್ನೇ ನಿರ್ಮಿಸಿದಂತವಳು. ಆಂಧ್ರದಲ್ಲಿ ಬುರ್ರ ಕಥೆ ಅತ್ಯಂತ ಜನಪ್ರಿಯ ಕಲಾಪ್ರಕಾರ. ಈ ಬುರ್ರ ಕಥೆಗಳು ಕರ್ನಾಟಕ ಮತ್ತು ಆಂಧ್ರ ಗಡಿಭಾಗಗಳ ಜಿಲ್ಲೆಗಳಲ್ಲಿ ಅಷ್ಟೇ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಈ ಭಾಗದಲ್ಲಿ ಕಂಡು ಬರುವ ಬಹಳಷ್ಟು ಬುರ್ರ ಕಥಾ ಕಲಾವಿದರು ತೆಲುಗಿನಲ್ಲಿಯೇ ಹಾಡುತ್ತಾರೆ. ಕನ್ನಡದಲ್ಲಿ ಬುರ್ರ ಕಥೆಗಳನ್ನು ಹಾಡುವಂಥವರು ಬಹಳ ಕಡಿಮೆ. ಆದರೆ ಈರಮ್ಮ ಈಕೆಯ ಮಾತೃ ಭಾಷೆ ತೆಲುಗು. ಆದರೂ ಕನ್ನಡದಲ್ಲಿ ಬುರ್ರ ಕಥೆಗಳನ್ನು ಹಾಡಿ ಆಂಧ್ರ ಮತ್ತು ಕರ್ನಾಟಕದ ಗಡಿಭಾಗದಲ್ಲಿ ಅಪಾರ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದಾಳೆ. ಅದ್ಭುತ ಪ್ರತಿಭೆಯನ್ನು ಹೊಂದಿದಂತಹ ಈಕೆ ಆಶು ಕವಿತ್ವ ಹೊಂದಿದ್ದಾಳೆ. ಒಂದೇ ಕಥೆಯನ್ನು ಬೇರೆ ಬೇರೆ ಪದ್ಯದಲ್ಲಿ ಹಾಡುವ ಪ್ರತಿಭೆ ಈಕೆ ಹೊಂದಿದ್ದಾಳೆ. ಈಕೆ ನಮ್ಮೂರಲ್ಲಿ ಹಾಡಿದರೆ ನಮ್ಮೂರಿಗೆ ಒಳ್ಳೆಯದಾಗುತ್ತದೆ, ಮಳೆ ಬೆಳೆ ಚೆನ್ನಾಗಿ ಆಗುತ್ತದೆ. ರೋಗ ರುಜಿನಗಳು ದೂರವಾಗುತ್ತವೆ, ಸುಖ ಸಂಪತ್ತು ನೆಲೆಸುತ್ತದೆ. ಈ ಮುಂತಾದ ಅನೇಕ ರೀತಿಯ ಭಾವನೆಗಳು ಈ ಭಾಗದಲ್ಲಿಯ ಜನ ಬಲವಾಗಿ ನಂಬಿದ್ದಾರೆ. ಈಕೆ ನಮ್ಮೂರಿಗೆ , ನಮ್ಮೋಣಿಗೆ , ನಮ್ಮ ಮನೆಗೆ ಬರುವುದು ಶುಭ ಲಕ್ಷಣವೆಂದು ಈ ಭಾಗದಲ್ಲಿ ಅನೇಕ ಜನ ತಿಳಿದುಕೊಂಡಿರುವುದು

ಆಕೆಯ ಜನಪ್ರಿಯತೆಗೆ ಆಕೆಯಲ್ಲಿನ ಬುರ್ರ ಕಥಾ ಪರಂಪರೆಗೆ ಸಾಕ್ಷಿಯಾಗಿ ನಿಂತಿದೆ.

ಬುರ್ರ ಕಥೆ ಹಾಡುವುದು ಈರಮ್ಮನ ವೃತ್ತಿಯೂ ಹೌದು - ಪ್ರವೃತ್ತಿಯೂ ಹೌದು. ತನ್ನೆಲ್ಲ ಜೀವನವನ್ನು ಹಾಡಿಗಾಗಿಯೇ ಅರ್ಪಿಸಿಕೊಂಡ ಈಕೆ ತನ್ನ ಬದುಕಿನಲ್ಲಿ ಎಷ್ಟೇ ನೋವುಂಡರೂ ಜನರಿಗೆ ನಲಿವನ್ನು ಕೊಟ್ಟಿದ್ದಾಳೆ. ಈಕೆಯ ಕಾವ್ಯಗಳಲ್ಲಿ ಗಡಿಭಾಗದ ಜನರ ಆಚಾರ-ವಿಚಾರ, ನಡೆ-ನುಡಿ ಮುಂತಾದ ಸಾಂಸ್ಕೃತಿಕ ಅಂಶಗಳು ಪ್ರಮುಖವಾಗಿ ಎದ್ದು ಕಾಣುತ್ತವೆ. ಈಕೆಯ ಹಾಡಿನ ಮೋಡಿ ಎಂಥವರನ್ನೂ ಕೂಡ ಮಂತ್ರ ಮುಗ್ಧರನ್ನಾಗಿಸುತ್ತದೆ. ಪರಮಾನಂದದಲ್ಲಿ ಮುಳುಗಿಸಿ ತೇಲಿಸುತ್ತದೆ. ಇಂತಹ ಅದ್ಭುತ ಕಲಾ ಪ್ರತಿಭೆಯನ್ನು ಹೊಂದಿದ ಈರಮ್ಮನ ಜೀವನ ಮತ್ತು ಸಾಹಿತ್ಯದ ಅಧ್ಯಯನ ಮಹತ್ವದ ಅಂಶವಾಗಿದೆ. ಇವಳು ಹಾಡುವ ಬುರ್ರ ಕಥೆಗಳು ಸಮುದಾಯ , ಸಂಸ್ಕೃತಿ, ದೈವ, ಮತ್ತು ಭಾಷೆ ಮುಂತಾದವುಗಳ ಅಧ್ಯಯನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹೀಗಾಗಿ ಬುರ್ರ ಕಥಾ ಪರಂಪರೆ ಹಿನ್ನೆಲೆ ಬುರ್ರ ಕಥಾ ಈರಮ್ಮನ ಜೀವನ . ಆಕೆ ಹಾಡುವ ಕಥನ ಕಾವ್ಯಗಳ ಅವಲೋಕನ, ಅವುಗಳ ವಸ್ತು, ಭಾಷೆ, ಶೈಲಿ, ಒಟ್ಟು ಧೋರಣೆ ಮುಂತಾದವುಗಳ ಅಧ್ಯಯನ ಈ ಮಹಾ ಪ್ರಬಂಧದಲ್ಲಿದೆ.

ಬುರ್ರ ಕಥಾ ಈರಮ್ಮನ ಜೀವನ ಮತ್ತು ಕಾವ್ಯಗಳ ಅಧ್ಯಯನಕ್ಕೆ ವಿಷಯ ಅಥವಾ ವ್ಯಕ್ತಿ ಅಧ್ಯಯನ ವಿಧಾನ, ಸಹಭಾಗಿತ್ವದ ವಿಧಾನ, ತೌಲನಿಕ ವಿಧಾನ , ಸಂದರ್ಶನ ಮತ್ತು ಅವಲೋಕನ ವಿಧಾನ ಮುಂತಾದ ಸಂಶೋಧನಾ ವಿಧಾನವನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಾಯ - 2

ಬುದ್ಧ ಜಂಗಮ ಪರಂಪರೆ

ಅಧ್ಯಾಯ - 2

ಬುಡ್ಗ ಜಂಗಮ ಪರಂಪರೆ

2.1 - ಅರ್ಥ ವಿವರಣೆ :

ಬುಡ್ಗ ಜಂಗಮರು ಮೂಲತಃ ಆಂಧ್ರದಲ್ಲಿ ಅಲೆಮಾರಿ ಜನಾಂಗದವರು. ಇವರದೇ ಆದ ಒಂದು ವಿಶಿಷ್ಟ ಭಾಷೆ, ನಿರ್ದಿಷ್ಟ ವೃತ್ತಿ ರಹಿತತೆ, ಕಟ್ಟು ನಿಟ್ಟಾದ ಸಂಪ್ರದಾಯಾಚರಣೆ, ಅಲೆಮಾರಿತನ, ಕಾಡು - ಮೇಡುಗಳಲ್ಲಿ ವಾಸವಾಗಿರುವುದು ಮುಂತಾದ ಲಕ್ಷಣಗಳಿಂದ ಇವರು ಬುಡಕಟ್ಟು ಜನಾಂಗವಾಗಿ ಕಂಡು ಬರುತ್ತಾರೆ. ಇವರು ಕಲೆಯನ್ನೆ ಆಶ್ರಯಿಸಿದವರು. ತಮ್ಮ ಕಲೆಗಳನ್ನು ಪ್ರದರ್ಶಿಸುತ್ತ ಭಿಕ್ಷೆ ಬೇಡುತ್ತ ಜೀವನ ಸಾಗಿಸುವ ಈ ಜನಾಂಗವನ್ನು ಆಂಧ್ರದಲ್ಲಿ 'ಭಿಕ್ಷುಕ ಗಾಯಕ' ರೆಂದು ಕರೆಯುತ್ತಾರೆ[1].ಅದರಂತೆ, ಬುರ್ರ ಕಥೆಗಾರರು (ತಂದಾನಿ ಕಥೆಗಾರರು) ವೇಷಗಾರರು, ಕುರ್ರ ಮಾಮ, ಬಾಳಸಂತೋಷಿ, ಬೇಡ ಜಂಗಮರು, ಬುಡ್ಗ ಜಂಗಮರು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇವರು ವೃತ್ತಿ ಕಲಾವಿದರು. ಜೀವನೋಪಾಯಕ್ಕಾಗಿ ತಮ್ಮ ಕಲೆಯನ್ನೇ ನಂಬಿದವರು. ಇವರು ಕಲಾಪ್ರದರ್ಶನದಲ್ಲಿ ಬಳಸುವ ವಾದ್ಯಗಳು, ಹೇಳುವ ಕತೆಗಳು , ಹಾಕುವ ವೇಷಗಳು, ಇವುಗಳಿಂದ ಗುರುತಿಸಲ್ಪಟ್ಟಿದ್ದಾರೆ.

ಬುಡ್ಗ ಜಂಗಮ ಎನ್ನುವುದು ಬುಡುಗ ಮತ್ತು ಜಂಗಮ ಎನ್ನುವ ಎರಡು ಪದಗಳಿಂದ ಕೂಡಿದೆ. 'ಬುಡುಗ'ಎಂಬ ಪದವು ಬುಡಿಗ > ಬುಡುಗ > ಬುಡ್ಗ > ಬುರ್ರ ಆಗಿ ಪರಿವರ್ತನೆ ಹೊಂದಿದೆ[2]. ಇದು ವಾದ್ಯಕ್ಕೆ ಸಂಬಂಧಿಸಿದ ಪದವಾಗಿದೆ. 'ಜಂಗಮ' ಎನ್ನುವುದು ಸಂಸ್ಕೃತ ಪದದಿಂದ ಬಂದಿದೆ. ಇದು ಜಂ ಮತ್ತು ಗಮ ಎನ್ನುವ ಎರಡು ಪದದಿಂದ ನಿಷ್ಪನ್ನವಾಗಿ ಜಂಗಮವಾಗಿದೆ. ಜಂ ಅಂದರೆ ಅತಿವೇಗವಾಗಿ ಗಮ ಎಂದರೆ ಹೋಗುವುದು ಅಥವಾ ಚಲಿಸುವುದು ಎನ್ನುವ ಅರ್ಥ ಕೊಡುತ್ತದೆ[3]. ಅಂದರೆ ಯಾವ ವಸ್ತುವು ಅತಿವೇಗವಾಗಿ ಸ್ವತಂತ್ರವಾಗಿ ಸಂಚರಿಸುತ್ತದೆಯೋ ಅದು ಜಂಗಮ ಎನಿಸುತ್ತದೆ. "ಜಂಗಮ ಅಂದರೆ ನಿತ್ಯ ನಿರಂತರವಾಗಿ ಚಲಿಸುವಂತಹದ್ದು ಒಂದೆಡೆ ನಿಲ್ಲುವಂತಹದಲ್ಲ[4]." ಎನ್ನುವ ಅರ್ಥ ಹೊರಡುತ್ತದೆ. ಬುಡ್ಗ ವಾದ್ಯವನ್ನು ಹಿಡಿದುಕೊಂಡು ಕಲಾ ಪ್ರದರ್ಶನ ಮಾಡುತ್ತ ಸದಾ ಊರೂರು ಅಲೆಯುವವರನ್ನೆ ಬುಡ್ಗ ಜಂಗಮರೆಂದು ಕರೆದಿದ್ದಾರೆ.

2.2 - ಜಂಗಮ ಪರಂಪರೆ ಮತ್ತು ಬುಡ್ಗ ಜಂಗಮರು :

'ಜಂಗಮ' ಎನ್ನುವುದು ವಚನಕಾರರಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತು. ಇದು ವೀರಶೈವ ಧರ್ಮದಲ್ಲಿ ಇರುವ ಧಾರ್ಮಿಕ ಹಾಗೂ ಸಾಮಾಜಿಕ ಪ್ರತಿಷ್ಠಾನ. ತನ್ನ ಕ್ರಿಯಾ ಸ್ವರೂಪದಲ್ಲಿ ಇದಕ್ಕೆ ಹೋಲುವಂತಹ ಒಂದು ವ್ಯವಸ್ಥೆ. ಅನ್ಯ ಧರ್ಮಗಳಲ್ಲಿ ಸಿಗುವುದು ಅಪರೂಪ. ಜಾತಿ - ವರ್ಗ - ವರ್ಣ - ಅಂಗಭೇದವನ್ನು ಮೀರಿ ನಿಂತದ್ದು. ವ್ಯಕ್ತಿ ಮತ್ತು ಸಮಾಜವನ್ನವಲಂಭಿಸಿ ನಿಂತದ್ದು. ಜಂಗಮತ್ವ ಲಭಿಸುವುದು ಸಂಸ್ಕಾರದಿಂದ ಹೊರತು ಹುಟ್ಟಿನಿಂದಲ್ಲ. ಮನುಷ್ಯನಿಗೆ ಜಂಗಮತ್ವ ಒದಗಿ ಬರುವುದೆಂದರೆ, ಅವನಿಗೆ ಸಂಸ್ಕಾರ ಸಿಗುವುದೆಂದರ್ಥ. ಹನ್ನೆರಡನೆಯ ಶತಮಾನದಲ್ಲಿಯ ಶರಣ ಚಳುವಳಿಯಿಂದ ಪ್ರೇರಿತರಾದ ಅನೇಕ ಜನರು ಬಸವಾದಿ ಶರಣರಿಂದ ದೀಕ್ಷೆ ಪಡೆದು

ಸಾಮಾಜಿಕ ಜಾಗೃತಿಯ ಕಾಯಕ ಕೈಕೊಂಡರು. ಇವರು ಕಾಯಕದಲ್ಲಿ ನಿರತರಾಗಿದ್ದರು. ಮೊದಲು ತಾವು ಸಂಸ್ಕಾರ ಹೊಂದಿ ಕಾಯಾ - ವಾಚಾ - ಮನಸಾ - ಶುದ್ಧರಾಗಿ, ನಡೆ - ನುಡಿ ಸಮನ್ವಯವಾಗಿರಿಸಿಕೊಂಡು ಅಂದಿನ ಸಾಮಾಜಿಕ ಬದಲಾವಣೆಯ ಸೂತ್ರಧಾರರಾದರು. ಈ ಹಿನ್ನೆಲೆಯಿಂದ ವೀರಶೈವವು 'ಜಂಗಮ'ಕ್ಕೆ ವಿಶಾಲಾರ್ಥ ಕಲ್ಪಿಸಿಕೊಟ್ಟಿತು. ಬಸವಣ್ಣನವರು "ಜಂಗಮ ಸರ್ವವ್ಯಾಪಿ, ನಿರಹಂಕಾರಿಯಾಗಿ, ನಡೆದು ಅಖಿಲ ಜಗತ್ತನ್ನು ಮೀರಿ ಬೆಳೆದವನೇ ನಿಜವಾದ ಜಂಗಮ, . ಈತ ಸಮಾಜ ಜಾಗೃತಿಯ ಮೂಲಕ ವಿಶ್ವ ಚೈತನ್ಯದಿ ಲೀನವಾಗುವನು" ಎಂದು[5] ಎಂದು ಹೇಳಿ ಜಂಗಮವನ್ನು ವಿಶಾಲಾರ್ಥದಲ್ಲಿ ವ್ಯಾಖ್ಯಾನಿಸಿದ್ದಾರೆ.

ವಚನ ಚಳುವಳಿಯಲ್ಲಿ ಜಂಗಮರು ವೀರಶೈವ ತತ್ತ್ವ ಪ್ರಚಾರಕರಾಗಿ ಕಂಡು ಬರುತ್ತಾರೆ. ಕಲ್ಯಾಣದಲ್ಲಿ ನಡೆಯುತ್ತಿರುವ ಕ್ರಾಂತಿಯನ್ನು ದೇಶದ ಮೂಲೆ ಮೂಲೆಗಳಲ್ಲಿ ಪ್ರಚಾರ ಮಾಡುವ ಶರಣರನ್ನು ಜಂಗಮರೆಂದು ಕರೆದರು. ಗುರು ಒಂದೇ ಕಡೆಯಲ್ಲಿ ನೆಲೆಯಾಗಿ ನಿಂತು ಧರ್ಮವನ್ನು ಭೋಧಿಸಿ ಸಾಧನೆಯಲ್ಲಿ ತೊಡಗುವವನಾದರೆ, ಜಂಗಮ ಆ ಮಾರ್ಗದ ಪ್ರಚಾರಕ. ಯಾವುದೇ ಒಂದು ಉದಾತ್ತ ತತ್ತ್ವ ಜನ ಸಾಮಾನ್ಯರಿಗೆ ಮುಟ್ಟಬೇಕಾದರೆ, ಅದನ್ನು ಮನೆ ಮನೆಗೆ ಕೊಂಡೊಯ್ಯುವ ಹರಿಕಾರರು ಬೇಕು. ಕ್ರಿಶ್ಚಿಯನ್ ಧರ್ಮದ ಮಿಷನರಿಗಳನ್ನು ಬಹುಶಃ ಇದಕ್ಕೆ ಸಂವಾದಿಯಾಗಿ ಇಲ್ಲಿ ಸ್ಮರಿಸಿಕೊಳ್ಳಬಹುದು. ಒಂದು ರೀತಿಯಲ್ಲಿ ಬಸವಣ್ಣ ಇಂತಹ ಧರ್ಮ ಪ್ರಚಾರ ವ್ಯವಸ್ಥೆಯನ್ನು ಮಾಡುವುದು ಆಗ ಅಗತ್ಯವಾಗಿತ್ತು. ಬೌದ್ಧಿಕವಾದ ಚರ್ಚೆ ಜಿಜ್ಞಾಸೆಗಳಷ್ಟರಿಂದಲೇ ಆತ ತೃಪ್ತನಾಗುವಂತಿರಲಿಲ್ಲ. ಆ ಉದಾತ್ತ ತತ್ತ್ವಗಳು ನಾಡಿನ ಉದ್ದಗಲಕ್ಕೂ ಹಬ್ಬಿ ಸಂತುಷ್ಟ ಮನಸ್ಸನ್ನು ಎಚ್ಚರಗೊಳಿಸಬೇಕಾಗಿತ್ತು. ಇದನ್ನು ಆಶ್ಚರ್ಯಕರವಾಗುವಷ್ಟು ವ್ಯಾಪಕವಾಗಿ ಕಡಿಮೆ ಕಾಲದಲ್ಲಿ ಮತ್ತು ಬೃಹತ್ ಪ್ರಮಾಣದಲ್ಲಿ ಸಾಧಿಸಲು ಸಮರ್ಥನಾದುದು ಬಹುಶಃ ಈ ಜಂಗಮ ವ್ಯವಸ್ಥೆಯಿಂದ. ತಾನು ಕಲ್ಯಾಣದಲ್ಲೇ ಕುಳಿತಿದ್ದರೂ ಕಲ್ಯಾಣ ಕ್ರಾಂತಿ ಕಾಶ್ಮೀರದವರೆಗೂ ಹರಡಿ ಮೋಳಿಗೆ ಮಾರಯ್ಯ ಮಹಾದೇವಮ್ಮರನ್ನು ಆಕರ್ಷಿಸಿದುದು ಈ ತತ್ತ್ವ ಪ್ರಚಾರ ಮಾಧ್ಯಮದಿಂದಲೇ. ಈತನ ತತ್ತ್ವ ನಿಷ್ಠೆಗೆ ಬೆರಗಾಗಿ ಇಂತಹ ಜಂಗಮರೂ ಅಧಿಕ ಸಂಖ್ಯೆಯಲ್ಲಿ ಈತನ ಸುತ್ತ ಸೇರಿದರು[6] ಎಂದು ಡಾ॥ ಎಚ್. ತಿಪ್ಪೇರುದ್ರ ಸ್ವಾಮಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಪ್ರಚಲಿತವಿದ್ದ ವಿಪರೀತ ಆಚಾರಗಳಿಗೆ ಪ್ರತಿಯಾಗಿ ವೀರಶೈವ ಧರ್ಮ ಸ್ಥಾಪನೆಯಾಯಿತು. ಇದರಿಂದ ಸಮಾಜ ಮತ್ತು ಧರ್ಮದಲ್ಲಿ ಸ್ಥಿತ್ಯಂತರಗಳಾದವು. ಸಮಾಜದ ಪ್ರತಿಯೊಂದು ವರ್ಗದ ಜನ ವೈಚಾರಿಕವಾಗಿ ಮಾತನಾಡಲು ಪ್ರಯತ್ನಪಟ್ಟರು. ಇದರಿಂದ ಕಾಯಕ ಜೀವಿಗಳ ಚಳುವಳಿ ಪ್ರಾರಂಭವಾಯಿತು. ದುಡಿಯುವ ವರ್ಗದ ಜನ ಸಾಂಸ್ಕೃತಿಕವಾಗಿ ಆಲೋಚನೆಗೆ ಮುಂದಾದರು. ಇದರಿಂದ ಕೆಳವರ್ಗದ ಜನರಲ್ಲಿ ವಿಚಾರ ಸಂಚಲನ ಉಂಟಾಯಿತು. ಮಾನವೀಯ ಪ್ರಜ್ಞೆಯ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ವಚನ ಚಳುವಳಿಯಿಂದ ಪ್ರಭಾವಿತರಾಗಿ ನಿಮ್ನ ವರ್ಗದವರಿಂದ ವೈಶ್ಯರವರೆಗೂ ಎಲ್ಲರೂ ಈ ಮತವನ್ನು ಸ್ವೀಕರಿಸಿದರು. ಅಷ್ಟೇ ಅಲ್ಲ, ಜೈನ ಸಮಾಜದ ಒಂದು ವರ್ಗವೂ ವೀರಶೈವ ಮತದೆಡೆಗೆ ಆಕರ್ಷಿಸಲ್ಪಟ್ಟಿತು[7]. ಬಸವಾದಿ ಪ್ರಮಥರಿಂದ

ಪ್ರಾರಂಭವಾದ ಈ ಚಳುವಳಿ ಜಾತಿ - ಧರ್ಮ - ವರ್ಗ - ವರ್ಣ - ಲಿಂಗಭೇದವೆನ್ನದೆ ವೀರಶೈವ ಧರ್ಮ ಸ್ವೀಕರಿಸಲು ಮುಕ್ತ ಅವಕಾಶ ಒದಗಿಸಿ ಕೊಟ್ಟಿತು. ಅದುವರೆಗೂ ಸಮಾಜದ ಮುಖ್ಯ ವಾಹಿನಿಯಿಂದ ದೂರವುಳಿದಿದ್ದ ಜನ ವೀರಶೈವ ಧರ್ಮ ಸ್ವೀಕರಿಸಿ ದೀಕ್ಷೆ ಪಡೆದು ಸಮಾಜದ ಮುಖ್ಯ ವಾಹಿನಿಯಲ್ಲಿ ಒಂದಾದರು. ಇವರು ಮಾನಸಿಕ ಸಂಸ್ಕಾರ ಮತ್ತು ಸಮಾಜಕ್ಕಾಗಿ ದುಡಿಮೆ ಎನ್ನುವ ಪ್ರಜ್ಞೆಯಿಂದ ಕಾಯಕ ತತ್ತ್ವ ಹುಟ್ಟು ಹಾಕಿದರು. ಕಾಯಕ ಜೀವಿಗಳೆನಿಸಿಕೊಂಡರು. ಇದರಿಂದ ಕಾಯಕ ಜೀವಿಗಳ ಚಳುವಳಿ ಪ್ರಾರಂಭವಾಗಿ, ಅನೇಕ ಜನ ಕಲಾವಿದರು, ಮಹಾನುಭಾವರು ಕಾಯಕ ಜೀವಿಗಳಾಗಿ ಮಾರ್ಪಟ್ಟರು.

ಕಾಯಕ ಜೀವಿಗಳಲ್ಲಿ ಹೆಚ್ಚಾಗಿ ಕೆಳವರ್ಗದಿಂದ ಬಂದವರೇ ಆಗಿದ್ದರು. ಅವರಲ್ಲಿ ಬುಡಕಟ್ಟುಗಳು, ಅಲೆಮಾರಿಗಳು ಕಂಡು ಬರುತ್ತಾರೆ. ಆಂಧ್ರ, ಸೌರಾಷ್ಟ್ರ, ಅಫಘಾನಿಸ್ತಾನ, ಕಾಶ್ಮೀರ ಮುಂತಾದ ಕಡೆಯಿಂದ ಇವರು ಕಲ್ಯಾಣಕ್ಕೆ ಬಂದು , ಕಾಯಕ ಜೀವಿಗಳಾಗಿ ಸಮಾಜದ ಮುಖ್ಯವಾಹಿನಿಯಲ್ಲಿ ಒಂದಾಗಿರುವುದು ಕಂಡು ಬರುತ್ತದೆ. ಇವರು ಕಲ್ಯಾಣಕ್ಕೆ ಬಂದು ಹೊಸ ವೃತ್ತಿ ಆರಂಬಿಸಲಿಲ್ಲ. ತಮ್ಮ ವೃತ್ತಿಯನ್ನೇ ಅವಲಂಭಿಸಿ ಅದಕ್ಕೆ ಸಂಸ್ಕಾರ ಕೊಟ್ಟು, ಆ ಮೂಲಕ ಸಮಾಜೋದ್ಧಾರಕ ಕಾರ್ಯದಲ್ಲಿ ನಿರತರಾಗಿರುವುದು ಕಂಡು ಬರುತ್ತದೆ. ಅಲ್ಲಮ ಪ್ರಭು, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಅಂಬಿಗರ ಚೌಡಯ್ಯ, ಬಹುರೂಪಿ ಚೌಡಯ್ಯ, ಢಕ್ಕೆಯ ಮಾರಯ್ಯ, ಮಸಣದ ಮಾರಯ್ಯ, ಇಕ್ಕೆಯ ಮಾರಯ್ಯ, ಕಲಕೇತ ಬ್ರಹ್ಮಯ್ಯ, ಮೇದಾರ ಕೇತಮ್ಮ, ನಗೆಯ ಮಾರಿ ತಂದೆ, ಕಂಕರಿ ಕಕ್ಕಯ್ಯ, ಕಿನ್ನರಿ ಬ್ರಹ್ಮಯ್ಯ ಈ ಮುಂತಾದ ಅನೇಕ ಶರಣರು ಬುಡಕಟ್ಟು ವರ್ಗದಿಂದ ಬಂದಿದ್ದಾರೆ. ಇವರು (ಶಿವ ಶರಣೆಲ್ಲರೂ) ಅಪ್ಪಟ ಮಾನವಧರ್ಮದ ಹರಿಕಾರರಾಗಿ ಬಂದ ಶಿವಶರಣರು ಜನತೆಯನ್ನು , ಪರಾವಲಂಬಿತ್ವ, ದಾರಿದ್ರ್ಯ, ಅಂಧಃ ಶ್ರದ್ಧೆ, ಮೂಢ ಆಚರಣೆ, ಕ್ರೂರ ಸಂಪ್ರದಾಯಗಳಿಂದ ಮುಕ್ತ ಗೊಳಿಸಿ ಭಕ್ತಿಯುಕ್ತ ಮತ್ತು ಶೋಷಣಮುಕ್ತ ನವ ಸಮಾಜ ನಿರ್ಮಾಣದ ಸಂಕಲ್ಪ ಮಾಡಿದರು. 'ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ' ಉದಾತ್ತ ಗುರಿಯನ್ನು ಜನ ಪದರಿಗೆ ವಿವರಿಸಿ ತಿಳಿಸಿ ಹೇಳಲು ಅನೇಕ ಬಗೆಯ ಪ್ರಸಾರಕ ಕ್ರಮಗಳನ್ನು ರೂಪಿಸಿ ಕೊಂಡರು. ಅವರು ಬಳಸಿಕೊಂಡ ವಿವಿಧ ಬಗೆಯ ಸಂವಹನ ಮಾಧ್ಯಮಗಳಲ್ಲಿ ಜನಪದ ಕಲೆಯೂ ಒಂದು[8]. ಮೊದಲು ಹೊಟ್ಟೆ ಹೊರೆಯುವ ಸಾಧನವಾಗಿದ್ದ ಜನಪದ ಕಲೆಗಳು ಶಿವಶರಣರು ಹುಟ್ಟು ಹಾಕಿದ ಕಾಯಕ ಪರಿಕಲ್ಪನೆಯ ಪರಿಷ್ಕಾರಕ್ಕೆ ಒಳಗಾಗಿ ಅವು ಸದಾಚಾರ, ಸದ್ಭಕ್ತಿಯ ಹಿನ್ನೆಲೆಯಿಂದ ಮಾನವ ಕಲ್ಯಾಣ ಸಾಧನೆಯ ವಾಹಕಗಳಾದವು. ಜನಮನದಿಂದ ಬಂದ ಜನಪದ ಕಲೆಗಳಲ್ಲಿ ಹುದುಗಿದ ಜನಾಭಿಮುಖಿ ಸ್ಫೋಟಕ ಶಕ್ತಿಯನ್ನು ಗುರುತಿಸಿದ ಶರಣರು ಅದನ್ನು ಮಾನವ ಕಲ್ಯಾಣದ ಜನಪರ ಧೋರಣೆಗಳ ಪ್ರಸರಣ ನಿರ್ವಹಣೆಗೆ ತೊಡಗಿಸಿದರು. ಜನಪದ ಕಲೆಗಳ ಜನಾಭಿಮುಖಿ ಸ್ಫೋಟಕ ಶಕ್ತಿ ಮತ್ತು ಶಿವಶರಣರ ಸಾಮೂಹಿಕ ಆಂದೋಲನದ ಮಾನವ ಕಲ್ಯಾಣ ಸಮಷ್ಟಿ ದೋರಣೆಗಳು ಒಡವೆರೆದವು. ಶರಣರ ಈ

ಸಾಮೂಹಿಕ ಆಂದೋಲನದ ಫಲವಾಗಿ ಜನಪದ ಕಲೆಗಳು ಮಾನವೀಕರಣಗೊಂಡದ್ದು ಪ್ರಪಂಚದ ಸಾಮಾಜಿಕ ಚರಿತ್ರೆಯಲ್ಲಾಗಲಿ, ಕಲೆಯ ಚರಿತ್ರೆಯಲ್ಲಾಗಲಿ , ಒಂದು ವಿರಳ ಸಂದರ್ಭ, ಸಾಧನೆ[9] ಯಾಗಿದೆ.

ಜನಪದ ಕಲಾ ಮನ್ನಣೆ ಅಂದರೆ, ವಚನಕಾರರು ವ್ಯಕ್ತಿ (ಕಲಾವಿದ) ಗೌರವ ಮತ್ತು ವೃತ್ತಿ (ಕಲೆ) ಗೌರವ ಕೊಟ್ಟಿರುವುದರಿಂದ ಭಾವ ಶುದ್ಧಿಯಿಂದ ಕೈಗೊಂಡ ಎಲ್ಲ ವೃತ್ತಿಗಳು (ಕಲೆ) ಕಾಯಕ ಪರಿಕಲ್ಪನೆಯಲ್ಲಿ ಸಮಾವೇಶಗೊಂಡವು. ವೃತ್ತಿ ಅಥವಾ ಕಲೆ ಯಾವುದೆ ಇರಲಿ ಅದು ಸಮಾಜಕ್ಕೆ ಪೂರಕವಾಗಿದ್ದರೆ, ಪವಿತ್ರ ಎಂಬ ಭಾವನೆ ಮೂಡಿತು . ಇದರಿಂದ ಮೇಲು - ಕೀಳುಗಳೆಂಬ ಪ್ರವೃತ್ತಿ ದೂರವಾಯಿತು. ಅಂತೆಯೇ ಕಲಾ ಪ್ರವೃತ್ತಿಯ ಅಧಿವೇಶದ ಜೊತೆಗೆ ಉದರ ಪೋಷಣೆಯ ಉದ್ದೇಶದಿಂದ ಪ್ರೇರಿತವಾದ ತೊಗಲು ಬೊಂಬೆಯಾಟ, ದೋಂಬರಾಟ, ಕೋಡಂಗಿಯಾಟ , ಜಾತಿಗಾರರ , ಬಹೂ ರೂಪಿ ವೇಷ ಭೃಂಗಿಯವರ ವಿವಿಧ ವೇಶಗಾರಿಕೆ ಇದೆ ಮೊದಲಾದ ಜಾನಪದ ಕಲಾವೃತ್ತಿಗಳೂ ಶರಣರ ಆಂದೋಲನದ ಪ್ರಭಾವಕ್ಕೊಳಗಾಗಿ ಕಾಯಕದ ಘನತೆಯನ್ನು ಪಡೆದವಷ್ಟೇ ಅಲ್ಲ , ಈ ಕಲಾ ವೃತ್ತಿಗಳಲ್ಲಿ ನಿರತರಾದ ಕಲಾವಿದರಲ್ಲಿ ಜೀವನೋತ್ಸಹವು ಪುಟಿದೇಳುವಂತೆ ಮಾಡುವಲ್ಲಿ ಫಲಕಾರಿಯಾದವು[10]. ಅನಾದಿ ಕಾಲದಿಂದಲೂ ತಲೆ ಮಾರಿನಿಂದ ತಲೆಮಾರಿಗೆ ಸಾಗಿ ಬಂದ ನಮ್ಮ ಜನಪದ ಕಲೆಗಳು ಶಿವಶರಣರ ಕಾಯಕ ಸಿದ್ಧಾಂತದ ಸ್ವರೂಪವನ್ನು ಪಡೆದುಕೊಂಡು, ಮಾನವೀಯ ಮೌಲ್ಯಗಳ ಸಂವಹನ ಮಾಧ್ಯಮಗಳಾಗಿ ಪರಿವರ್ತನೆ ಹೊಂದಿರುವುದು ಅಪೂರ್ವ ಅಂಶವೆನಿಸುತ್ತದೆ.

ವಚನ ಚಳುವಳಿಯಲ್ಲಿ ಜನಪದ ಕಲಾವಿದರು ಮಹತ್ತರವಾದ ಪಾತ್ರ ವಹಿಸಿದ್ದಾರೆ. ಶಿವ ಶರಣರ ಚರಿತ್ರೆಗಳು, ಚಿಂತನೆಗಳು, ವೀರಶೈವ ತತ್ತ್ವ, ಶಿವಶರಣರ ಜೀವನ, ನಡೆ- ನುಡಿ ಸಿದ್ಧಾಂತ, ಜನಪರ ಕಾಳಜಿ, ಮಾನವೀಯ ಮೌಲ್ಯಗಳು ಪ್ರಗತಿ ಪರ ಧೋರಣೆಗಳು ಮುಂತಾದ ಎಲ್ಲ ಅಂಶಗಳು ದೇಶದ ಮೂಲೆ ಮೂಲೆ ಸುತ್ತಾಡಿ ಜನ ಮನಕ್ಕೆ ಮುಟ್ಟಿಸಿ, ಜನಮನಕ್ಕೆ ಸಂಸ್ಕಾರ ಕೊಡುವಲ್ಲಿ ಅಪೂರ್ವ ಕೊಡುಗೆಯನ್ನು ಕೊಟ್ಟಿದ್ದಾರೆ. ಅಂತಹ ಜನಪದ ಕಲಾವಿದರಲ್ಲಿ ಗೊರವರು, ಭೈರರು , ಡೊಂಬರು, ದುರುಗ-ಮುರಗಿಯರು , ಮಾಸ್ತಿಕರು , ಹಸ್ತಿಲರು , ಕಿಳ್ಳೆ ಕ್ಯಾತರು , ಬುಡ್ಗ ಜಂಗಮರು , ಕಾಡು ಕುರುಬರು, ಜೇನು ಕುರುಬರು, ಸಿದ್ಧಿಯರು ಮುಂತಾದ ಅನೇಕ ಬುಡಕಟ್ಟು ಗಳು ವಚನಕಾರರಲ್ಲಿ ಕಂಡು ಬರುತ್ತಾರೆ[11]. ಈ ಬುಡ ಕಟ್ಟುಗಳಲ್ಲಿ ಬುಡ್ಗ ಜಂಗಮರು ವಚನ ಚಳುವಳಿ ಸಂದರ್ಭದಲ್ಲಿ ವಿಶಿಷ್ಟವಾಗಿ ಕಂಡು ಬರುತ್ತಾರೆ. '

ಆಂಧ್ರದಲ್ಲಿ ಬುರ್ರ ಕಥೆಗಳನ್ನು ಹೇಳುತ್ತಿದ್ದ ಬುಡ್ಗ ಜಂಗಮರು ವಚನಕಾರರಿಂದ ಪ್ರಭಾವಿತರಾಗಿ ಕಲ್ಯಾಣಕ್ಕೆ ಬಂದು ನೆಲೆಸಿರಬಹುದೆನಿಸುತ್ತದೆ. ಕಲ್ಯಾಣದಲ್ಲಿ ಬಂದು ಬುರ್ರ ಕಥೆಗಳಿಗೆ ಬದಲು ಶರಣರ ಚರಿತ್ರೆಗಳನ್ನು, ಅರವತ್ತೂರು ಪುರಾತನರ ಕಥೆಗಳನ್ನು ವೇಷ ಕಟ್ಟಿ ಹೇಳಿದ್ದಾರೆ. ಅಂತೆಯೇ ಇವರಿಗೆ ವೇಷಗಾರರೆಂಬ ಹೆಸರಿದೆ. ವಚನಕಾರ ಅಂಬಿಗರ ಚೌಡಯ್ಯನು ಈ ಬುಡ್ಗ ಜಂಗಾಲು ಜನಾಂಗದಿಂದ ಬಂದ ಶರಣನಾಗಿದ್ದಾನೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. 'ಬುಡ್ಗ' ಅಥವಾ 'ಬೇಡ'

ಜನಾಂಗದ ಮುಂದುವರೆದ ಜನಾಗಂವೇ 'ತಳವಾರ' ಜನಾಂಗವಾಗಿದೆ. ಹೀಗಾಗಿ ಈ ಬುಡಕಟ್ಟು ಸಂಸ್ಕೃತಿಗೂ ಅಂಬಿಗರ ಚೌಡಯ್ಯನಿಗೂ ಜನಾಂಗಿಕ ಸಂಬಂಧವಿದೆ[12]. ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈ ಎರಡು ಸಮುದಾಯಗಳ ಜೀವನ ವಿಧಾನ ಸಂಪ್ರದಾಯ, ಆಚರಣೆ, ಬೆಡಗುಗಳಲ್ಲಿ ಯಾವುದೇ ರೀತಿಯ ಸಂಬಂಧ ಕಂಡು ಬರುವುದಿಲ್ಲ. ಹೀಗಾಗಿ ಇವೆರಡು ಭಿನ್ನ ಸಮುದಾಯಗಳಾಗಿವೆ. ವೇಷಗಾರಿಕೆ ವೃತ್ತಿ (ಕಾಯಕ)ಯನ್ನು ಅವಲಂಬಿಸಿದ ಶರಣ ಬಹುರೂಪಿ ಚೌಡಯ್ಯ: ಇವನು ರಾಮಾಯಣ , ಭಾರತಾದಿಗಳ ಕತೆಯನ್ನು ಅಭಿನಯಿಸುತ್ತಿದ್ದ. ಭೈರವೇಶ್ವರ ಕಾವ್ಯ ಕಥಾ ಸೂತ್ರರತ್ನಾಕರದ ಪ್ರಕಾರ ಇವನು ಜಾತಿಕಾರ ವಿದ್ಯದಲ್ಲಿ ಹದಿನೆಂಟು ಜಾತಿಯ ನೂರೊಂದು ಕುಲದ ವೇಷಮಂ ತೊಟ್ಟು ಭಾಷೆಯನ್ನಾಡುವ ಕಲೆಯನ್ನು ಬಲ್ಲವನಾಗಿದ್ದ. ಗಾನ, ನರ್ತನ, ಭರತ ವಿದ್ಯೆಗಳಲ್ಲಿ ಪ್ರವೀಣನಾಗಿದ್ದ. ಚೌಡಯ್ಯ ಶಿವನ ಇಪ್ಪತ್ತೈದು ಲೀಲೆಗಳನ್ನು ಆಡಿ ತೋರಿಸಿದನೆಂದೂ ಉಲ್ಲೇಖವಿದೆ. ಆದ್ದರಿಂದ ಬಹುರೂಪ ಎನ್ನುವುದು ಏಕ ವ್ಯಕ್ತಿಯ ಅಭಿನಯ. ಆ ವ್ಯಕ್ತಿ ಒಬ್ಬನೇ ಬೇರೆ ಬೇರೆ ಪೌರಾಣಿಕ ಪ್ರಸಂಗಗಳನ್ನು ಉಚಿತವಾದ ವೇಷ, ಮಾತಿನೊಡನೆ ಅಭಿನಯಿಸುತ್ತಿದುದಲ್ಲದೆ. ಸಮಕಾಲೀನ ಜೀವನದ ಬೇರೆ ಬೇರೆ ಅಂಶಗಳನ್ನು ವ್ಯಕ್ತಿಗಳನ್ನು , ಘಟನೆಗಳನ್ನು ಅಭಿನಯಿಸುತ್ತಿದ್ದುದಾಗಿ ಮೇಲಿನ ಮಾತಿನಿಂದ ತಿಳಿದು ಬರುತ್ತದೆ. ಬಹು ರೂಪಿಗಳು ಬೇರೆ ಬೇರೆ ಜಾತಿಯ ಜನರಂತೆ ವೇಷ ಧರಿಸಿ ಅವರವರ ಮಾತನ್ನು ಅನುಕರಿಸುತ್ತಿದ್ದರು. ಆದ್ದರಿಂದಲೇ ಆ ಕಲಾವಿದರನ್ನು 'ಬಹುರೂಪಿ' ಎಂದು ಕರೆಯುತ್ತಿದ್ದುದು[13]. ಇಂತಹ ಬಹುರೂಪ ಕಲೆಗೆ ಪ್ರಸಿದ್ಧನಾಗಿದ್ದ ಬಹುರೂಪಿ ಚೌಡಯ್ಯ ಹರನ ಲೀಲೆಗಳ ರೂಪ ಧರಿಸಿ ಕುಣಿಯ ತೊಡಗಿದರೆ, 'ಆತ ಶಿವಲೀಲೆ ಆಡಿದರೆ ನಾಡೆಲ್ಲ ಹೂವಾಯ್ತು. ಮೂಡಿ ಶಿವಭಕ್ತಿ ಹಣ್ಣಾಯ್ತು.' ಆತನ ಬಹು ರೂಪವನ್ನು 'ಪುರವೆದ್ದು ಕೇಳುತ್ತಲಿತ್ತು. ಪುರವೆದ್ದು ನೋಡುತಲಿತ್ತು. ನೋಡಿ ಮೈಮರೆಯುತ್ತಿತ್ತು' [14]. ಎನ್ನುವುದು ಆತನಲ್ಲಿಯ ಕಲಾ ಪ್ರಾವಿಣ್ಯತೆಯನ್ನು ಎತ್ತಿ ತೋರಿಸುತ್ತದೆ. ಅವನ ವೇಷಗಾರಿಕೆಯ ಕಲೆಯನ್ನು ಕಾಯಕವನ್ನಾಗಿಸಿದ ಚೌಡಯ್ಯನ ಕಲೆಯ ಕೀರ್ತಿ ಎಣ್ದೆಸೆಗೆ ಹಬ್ಬಿತ್ತು. ನೂರಾರು ಕಲಾ ಪ್ರಿಯರು ಬಂದು ಅವನ ಶಿಷ್ಯತ್ವ ವಹಿಸಿ ಕಲೆಯ ಅಭ್ಯಾಸಕ್ಕೆ ನಿಂತರು. ಚೌಡಯ್ಯನ ಮೇಳ ದೊಡ್ಡದಾಯಿತು. 'ಶಿವ ಮತವ ಹಬ್ಬಿಸಲು ಶಿವನ ಅಪ್ಪಣೆ ಪಡೆದು ಶಿವ ಕಳೆಯು ಸಿಡಿದು ಹುಟ್ಟಿದಂತಿದ್ದರು' ಆತನ ಮೇಳದವರು. ಇಂತಹ ಮೇಳದೊಂದಿಗೆ ಚೌಡಯ್ಯ ಬಹುರೂಪಗಳನ್ನಾಡುತ್ತಿದುದನ್ನು ಜನರು ಮೆಚ್ಚಿ ಧನ, ಮನ ನೀಡುತ್ತಿದ್ದರು. ಚೌಡಯ್ಯ ತನ್ನ ಮೇಳದೊಂದಿಗೆ ನಿತ್ಯದ ದಾಸೋಹ ಮಾಡುತ್ತಿದ್ದನು. ಚೌಡಯ್ಯ ತನ್ನ ಮೇಳದೊಡನೆ ಸಂಚಾರಯ ಕೈಗೊಂಡನು ಹೋದಲ್ಲೆಲ್ಲಾ ಶಿವಲೀಲೆಗಳನ್ನು ಆಡಿ ತೋರಿಸಿದನು. 'ಶಿವ ಗಂಗೆ ಸುತ್ತ ಹರಿದಂತೆ ಶಿವ ನುಡಿಯ ಸಾರಿದನು'. ಊರುರು ತಿರುಗುತ್ತ ಚೌಡಯ್ಯನ ಮೇಳ ನೀಲಗಿರಿ ಪರ್ವತ ಪ್ರದೇಶದ ಕೊಟ್ಟಗೀರಿ (ಕೋಟಗಿರಿ) ಬಂದಿತು. ಅಲ್ಲಿ ಬಹುರೂಪಿಗಳಿಂದ ಚೌಡಯ್ಯನ ಮೇಳ ಬಹುಜನ ಪ್ರಿಯವಾಯಿತು[15]. ಇವನು ತನ್ನ ಒಂದು ವಚನದಲ್ಲಿ ಎಂಬತ್ನಾಲ್ಕು ಲಕ್ಷ ರೂಪಗಳನ್ನು ಧರಿಸಿರುವೆನೆಂದು ಹೇಳಿಕೊಂಡಿದ್ದಾನೆ. ಆ ವಚನ ಹೀಗಿದೆ.

ಎಂಬತ್ತು ನಾಲ್ಕು ಲಕ್ಷ ಬಹುರೂಪ ಚಂದ ಚಂದದಲ್ಲಿ ಆಡಿ,

ಬಂಧುಗಳ ಮೆಚ್ಚಿಸ ಬಂದೆ

ಅವರು ಬಹು ರೂಪದಂದ ವನಲಿಯರ

ರೇಶಣ್ಣ ಪ್ರಿಯ ನಾಗಿನಾಥನಲ್ಲಿ

ಬಹುರೂಪದಂದ ವಿಚ್ಛಂದವಾಯಿತ್ತು[16]

ಇಂತಹ ಅಪರೂಪದ ಕಲಾವಿದ ಬಹುರೂಪವನ್ನು ಹಾಕುವುದರ ಜೊತೆಗೆ ತನ್ನ ಶಿಷ್ಯವೃಂದವನ್ನು ಕಟ್ಟಿ ಅವರಿಗೆ ಸಂಸ್ಕಾರ ಕೊಟ್ಟು ಶಿವನ ಲೀಲೆಗಳು ಕಾಯಕ ದಾಸೋಹದ ಮಹತ್ವವನರುಹಿದ. ಸಕಲ ಪುರಾತನರ, ನೂತನ ಶರಣರ ವೇಷಗಳನ್ನು ಹಾಕಿ ಅಭಿನಯಿಸತೊಡಗಿದ. ಇವನ ಖ್ಯಾತಿ ನಾಡಿನ ಮೂಲೆ ಮೂಲೆಗಳಲ್ಲಿ ಹರಡಿತು. ಇವನಿಂದ ಪ್ರಭಾವಿತವಾದ ಅನೇಕ ಜಾತಿಗಾರ ತಂಡಗಳು ಚೌಡಯ್ಯನ ಮೇಳದೊಂದಿಗೆ ಸೇರಿಕೊಂಡವು. ಕಾಡಸಿದ್ದರು, ಸುಡುಗಾಡ ಸಿದ್ಧರು, ಬುಡಬುಡಕಿಗಳು, ನಾನಾ ರೀತಿಯವರು ಬಂದು ಚೌಡಯ್ಯನ ಮೇಳದಲ್ಲಿ ಕೂಡಿ ಕುಣಿದರು. ತಮ್ಮ ಅಂತಸ್ತನ್ನು ಹೆಚ್ಚಿಸಿಕೊಂಡರು[17] ಹೀಗೆ ತನ್ನಲ್ಲಿಯ ಅಪೂರ್ವ ಕಲಾ ಪ್ರತಿಭೆಯಿಂದ, ಕಾಯಕ ದಾಸೋಹಗಳಿಂದ ಬಹುರೂಪಿ ಚೌಡಯ್ಯ ವಚನ ಚಳುವಳಿಯಲ್ಲಿ ಪ್ರಸಿದ್ಧಿ ಪಡೆದಿದ್ದಾನೆ. ಇಬ್ಬರು ಚೌಡಯ್ಯಗಳು ವಚನ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿರುವುದು ಕಂಡು ಬರುತ್ತದೆ.

ಈ ಮೇಲಿನ ಎಲ್ಲ ಅಂಶಗಳಿಂದ ಬುಡ್ಗ ಜಂಗಮರು ವಚನ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ.ಅಲ್ಲದೆ ಈ ಅಂಕಗಳು ಬುಡ್ಗ ಜಂಗಮರ ಕಲೆ ಹನ್ನೆರಡನೆಯ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎನ್ನುವುದಕ್ಕೆ ಆಧಾರಗಳನ್ನು ಒದಗಿಸುತ್ತವೆ. ಸಮಾಜದ ತತ್ತ್ವಗಳನ್ನು ಜನತೆಗೆ ತಿಳಿಸುವ, ಪ್ರಚಾರ ಪಡಿಸುವ ಮತ್ತು ಅದನ್ನು ಅನುಷ್ಠಾನದಲ್ಲಿ ತರಲು ಪ್ರಯತ್ನಿಸುವ ಹರಿಕಾರರೇ ಜಂಗಮರು[18] ಎನ್ನುವ ತತ್ತ್ವ ಬುಡ್ಗ ಜಂಗಮರಿಗೂ ಅನ್ವಯಿಸುತ್ತದೆ. ಇವರು ಶಿವನ ಲೀಲೆಗಳ (ಜಂಗಮ) ವೇಷಹಾಕಿ ಸಮಾಜದ ತತ್ತ್ವಗಳು ಪ್ರಚಾರಗೊಳಿಸಿದ್ದು ಕಂಡು ಬರುತ್ತದೆ.

ಕಲ್ಯಾಣ ಕ್ರಾಂತಿಯಿಂದಾಗಿ ಶರಣರು ಕಲ್ಯಾಣದಿಂದ ಕನ್ನಡ ನಾಡಿನ ಉತ್ತರ ದಕ್ಷಿಣದೆಡೆಗೆ (ಉಳವಿ ಮುಂತಾದ ಕ್ಷೇತ್ರದೆಡೆಗೆ) ಮತ್ತು ಗಡಿಭಾಗದ ಆಂಧ್ರದೆಡೆಗೆ (ಶ್ರೀ ಶೈಲ ಮುಂತಾದ ಕ್ಷೇತ್ರದೆಡೆಗೆ) ವಲಸೆ ಹೋದರು. ಇದರಿಂದ ಆಂಧ್ರ ಪ್ರದೇಶದ ಹೆಚ್ಚು ಪ್ರದೇಶದಲ್ಲಿ ಶರಣರು (ಜಂಗಮರು) ಹೋಗಿ ನೆಲೆಸಿರುವುದನ್ನು ಕಾಣುತ್ತೇವೆ. ಇದಕ್ಕಿಂತ ಪೂರ್ವದಲ್ಲಿ ಶರಣ ಚಳುವಳಿಯ ಸಂದರ್ಭದಲ್ಲಿ ಶರಣರ (ಜಂಗಮರ) ಪ್ರಭಾವ ಆಂಧ್ರದ ಅನೇಕ ಪ್ರದೇಶಗಳಲ್ಲಿ ಆಗಿರುವುದನ್ನು ಗಮನಿಸಬಹುದು.ಹೀಗಾಗಿ ವೀರಶೈವ ಶರಣರ (ಜಂಗಮರ) ಪ್ರಭಾವದಿಂದ ಆಂಧ್ರ ಪ್ರದೇಶದಲ್ಲಿ ಜಂಗಮ ಎನ್ನುವ ಹೆಸರಿನಿಂದ ಅನೇಕ ಗ್ರಾಮಗಳು ಕಂಡು ಬರುತ್ತವೆ. ಆಂಧ್ರದ ಕಡಪಾ ಜಿಲ್ಲೆಯಲ್ಲಿ 'ಜಂಗಮ' ಎನ್ನುವ ಹೆಸರಿನಿಂದ

ಹನ್ನೆರಡು ಗ್ರಾಮಗಳು ಕಂಡು ಬರುತ್ತವೆ[19] ಮೆಕೆಂಜಿ ಕೈಫಿಯತ್‌ನಲ್ಲಿ ಕೆಲಗ್ರಾಮಗಳ ಸ್ಥಳ ಚರಿತ್ರೆ ಕುರಿತು ಹೀಗೆ ಉಲ್ಲೇಖಿಸಲಾಗಿದೆ.

1) ರಾಜಂಪೇಟ್ ತಾಲ್ಲೂಕಿನ ಜಂಗಾಲಪಲ್ಲೆ (ಜಂಗಾಲಹಳ್ಳಿ) ಕುರಿತು -
"ಜಂಗಾಲ ಕವೀಶ್ವರರಿಗೆ ಮಟ್ಲ ಅನಂತರಾಜು ಹೊಲ ಕೊಟ್ಟಿದ್ದರಿಂದ ಆ ಗ್ರಾಮ ಜಂಗಾಲ ಪಲ್ಲೆ ಆಗಿದೆ". (ಮೆಕೆಂಜಿ ಜಂಗಾಲಪಲ್ಲೆ ಕೈಫಿಯತ್ (1134-343)

2) ಜಮ್ಮಲು ಮಡಗು ತಾಲ್ಲೂಕಿನ ಮತ್ತೊಂದು ಜಂಗಾಲಪಲ್ಲೆ ಕುರಿತು -
"ಗುರು ಪಾದಪ್ಪ ಜಂಗಮ ಮಠ ಕಟ್ಟಿರುವ ಕಾರಣ ಊರು ಜಂಗಾಲ ಪಲ್ಲೆ ಆಯಿತು" ಎಂದಿದ್ದಾರೆ. (ಮೆಕೆಂಜಿ ಕೈಫಿಯತ್ (1204 - 04)

ಚಿತ್ತೂರು ಜಿಲ್ಲೆಯಲ್ಲಿ ಜಂಗಮ ಹೆಸರಿನಲ್ಲಿ 44 ಗ್ರಾಮಗಳಿವೆ[20] ಮೇದಕ್ ಜಿಲ್ಲೆಯ ದುಬ್ಬಾಕ ಮಂಡಲದಲ್ಲಿ ಜಂಗಮಪಲ್ಲೆ, ನರ್ಸಾಪುರ ಮಂಡಲದಲ್ಲಿ ಜಂಗಮ ಪೇಟ, ರಾಮಾಯಂ ಪೇಟ ಮಂಡಲದಲ್ಲಿ ಜಂಗಂರಾಯ , ಎಂಬ ಹೆಸರಿನ ಊರುಗಳು ಕಂಡು ಬರುತ್ತವೆ[21]. ಹೀಗೆ ಅನೇಕ ಭಾಗಗಳಲ್ಲಿ ಜಂಗಮ (ಶರಣ) ಸಂಕುಲ ನೆಲೆಸಿರುವುದರಲ್ಲಿ ಅನೇಕ ಸ್ಥಳಗಳಿಗೆ ಈ ಹೆಸರು ಬಂದಿದೆ. ಶರಣ ಚಳುವಳಿಯ ಸಂದರ್ಭದಲ್ಲಿ ಶರಣ ಸಮಾಜದ ತತ್ತ್ವ ಪ್ರಚಾರಕ್ಕಾಗಿ ಆಂಧ್ರದ ಅನೇಕ ಭಾಗಗಳಲ್ಲಿ ಸಂಚರಿಸಿದ ರು. ನಂತರ ಕಲ್ಯಾಣ ಕ್ರಾಂತಿಯಿಂದಾಗಿ , ಶರಣರು ಅಲೆಮಾರಿಗಳಾಗಿ ತಿರುಗಾಡುತ್ತ ಆಂಧ್ರದ ಆಯಾ ಭಾಗಗಳಲ್ಲಿ ನೆಲೆನಿಂತು ಗ್ರಾಮಗಳು ರಚನೆಗೊಂಡಿರುವುದರಿಂದ ಅವು ಜಂಗಮರ ಹೆಸರಿನಿಂದ ಗ್ರಾಮಗಳಾಗಿ ನಾಮಕರಣಗೊಂಡಿರುವುದು ವಿಶಿಷ್ಟ ಸಂಗತಿಯೆನಿಸುತ್ತದೆ.

2.3 ಬುಡ್ಗ ಜಂಗಮರ ಪರ್ಯಾಯ ನಾಮಗಳು :

ಕಲ್ಯಾಣ ಕ್ರಾಂತಿಯ ನಂತರ ಶರಣರು ಚದುರಿ ಹೋದರು. ವೀರಶೈವ ಮತದಲ್ಲಿ ಭೇದಭಾವ ಬೆಳೆದು ಲಿಂಗವಂತ, ಬಣಜಿಗ, ಜಂಗಮ, ನಿಮ್ನ ಕುಲದ ಜಂಗಮ ಮುಂತಾದ ಪಂಗಡಗಳು ಹುಟ್ಟಿಕೊಂಡವು. ಲಿಂಗವಂತ ಬಣಜಿಗ, ಜಂಗಮ ಮುಂತಾದವರು ಊರೊಳಗೆ ನೆಲೆನಿಂತರೆ, ನಿಮ್ನ ಕುಲದ ಜಂಗಮರು ನೆಲೆ ಕಾಣದೆ ಅಲೆಮಾರಿಗಳಾದರು. ನಿಮ್ನ ವರ್ಗದ ಜಂಗಮರನ್ನು ಅವರ ವೃತ್ತಿಯನ್ನಾಧರಿಸಿ ಮೂಲ ಜಂಗಮ, ಬೇಡ ಜಂಗಮ, ತೆಲುಗು ಜಂಗಮ, ಈ ಮುಂತಾದ ಹೆಸರುಗಳಿಂದ ಕರೆಯತೊಡಗಿದರು. ಕರ್ನಾಟಕ ಆಂಧ್ರ ಮಹಾರಾಷ್ಟ್ರ ರಾಜ್ಯಗಳಲ್ಲಿ ಇವರು ಚೆದುರಿ ಹೋಗಿರುವುದರಿಂದ ಆಯಾ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಮಹಾರಾಷ್ಟ್ರದಲಿ ಇವರನ್ನು 'ಸೊಂಗವಾಲ', 'ಬಹುರೂಪಿ', 'ರಾಮಲೀಲಾದವರು[22]' ಎಂದು ಕರೆಯುತ್ತಾರೆ. ತಮಿಳುನಾಡಿನಲ್ಲಿ 'ಪಗಲವೇಷಂ' (ಹಗಲ ವೇಷ) (Pagalvesham)[23] ಎಂದು ಕರೆಯುತ್ತಾರೆ. 'ಆಂಧ್ರದಲ್ಲಿ ಬುಡ್ಗ ಜಂಗಮ', 'ಗಣಾಯತ ಜಂಗಮ'[24]. 'ಬುಡ್ಗ ಜಂಗಾಲು', 'ಬಾಲ ಸಂತ', 'ಬಿಕ್ಷುಕ ಗಾಯಕಲು', 'ಕೊಯಪಂತು', 'ಏಕತಾರ ಪಂತು', 'ಜಿಂಗಿ' , 'ಜಿಂಗಿಯೊಳು', 'ಭಾಗವತ', 'ಪಕಟೆ ವೇಷಗಾರ್ಲು', 'ಬಹುರೂಪುಡು'[25]. ಎಂದು ಕರೆಯಲ್ಪಡುತ್ತಾರೆ. ಕರ್ನಾಟಕದ ಬಳ್ಳಾರಿ ಪ್ರದೇಶದಲ್ಲಿ ತೆಲುಗು ಜಂಗಮರು, ಬುಡ್ಗ ಜಂಗಮರು, ವೇಷಗಾರರು, ಹಗಲು ವೇಷದವರು, ಕುರ್ರಮಾಮ,

ಕುರ್ರ ಕೊಂಡಯ್ಯ, ಕೊಂಡ ಮಾಮ ಎಂದು ಕರೆಯುತ್ತಾರೆ. ಹೈದ್ರಾಬಾದ್' ಕರ್ನಾಟಕದಲ್ಲಿ ಬಾಳ ಸಂತೋಷಿಗಳು, ಸುಡುಗಾಡು ಸಿದ್ಧರು, ಮುಂಬೈ ಕರ್ನಾಟಕದಲ್ಲಿ ನಿರಂಜಿಗಳೆಂದು ಕರೆಯುತ್ತಾರೆ. ಆದರೂ ಇವರೆಲ್ಲಾ ತಮ್ಮ ಮೂಲ ಕುಲ ಜಂಗಮ ಕುಲ (ಜಂಗಾಲು) ಎಂದೇ ಹೇಳಿಕೊಳ್ಳುತ್ತಾರೆ. ಶೈವ ಜಂಗಮರಂತೆ ವೈಷ್ಣವ ಜಂಗಮರು ಬರುತ್ತಾರೆ. ಆಯಾ ಪ್ರದೇಶಕ್ಕೆ ವಲಸೆ ಹೋದ ಶರಣ ಸಂಕುಲದಲ್ಲಿ ಮೇಲ್ವರ್ಗದವರು ಊರಲ್ಲಿ ನೆಲೆ ನಿಂತರೆ ಕೆಳವರ್ಗದವರು ನೆಲೆ ಕಾಣದೆ ಹೊಟ್ಟೆ ಹೊರೆಯುವುದಕ್ಕಾಗಿ ವೇಷಗಳನ್ನು ಹಾಕುತ್ತಾ ಕಥೆಗಳನ್ನು ಹೇಳುತ್ತ, ಬಿಕ್ಷೆ ಬೇಡುತ್ತ, ಬೇಟೆಯಾಡುತ್ತ ಊರುರು, ಕಾಡು - ಮೇಡು ಅಲೆಯ ತೊಡಗಿದರು. ಜೊತೆಗೆ ವೀರಶೈವ ಮತಾಚರಣೆಗಳನ್ನು ತಮ್ಮ ಜೀವನದಲ್ಲಿ ಉಳಿಸಿ ಬೆಳೆಸಿಕೊಂಡು ಬಂದರು. ಹೀಗಾಗಿ ಇವರು ಬುಡ್ಗ ಜಂಗಮರೆಂದು ಹೇಳಿಕೊಳ್ಳುವರು.

2.4.1 - ಬುಡ್ಗ ಜಂಗಮರ ಕುರಿತು ವಿದ್ವಾಂಸರ ಅಭಿಪ್ರಾಯಗಳು :

ಬುಡ್ಗ ಜಂಗಮರು ವೃತ್ತಿಗಾಯಕರು . ಆಂಧ್ರ ಪ್ರದೇಶದ ಅನೇಕ ಭಾಗಗಳಲ್ಲಿ ಇವರು ವೇಷಗಾರರಾಗಿ ಕಥೆಗಾರರಾಗಿ, ಮಾಟ ಮಂತ್ರಗಾರರಾಗಿ, ಭವಿಷ್ಯ ಹೇಳುವವರಾಗಿ, ತೊಗಲು ಗೊಂಬೆಯಾಟದವರಾಗಿ ಇನ್ನೂ ಮುಂತಾದ ಅನೇಕ ಕಲೆಗಳ ಪ್ರದರ್ಶಕರಾಗಿ ಕಂಡು ಬರುತ್ತಾರೆ. ಅದಕ್ಕಾಗಿ ಇವರನ್ನು ಹಗಲು ವೇಷಗಾರರು, ಬಹು ರೂಪಿಗಳು , ಬುರ್ರ ಕಥೆಗಾರರು, ಜಾತಿಗಾರರು, ಜಿಂಗಿವಾಳ್ಳು, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇವರೆಲ್ಲ ಒಂದೇ ಸಾಂಸ್ಕೃತಿಕ ಗುಣ ಲಕ್ಷಣಗಳನ್ನು ಹೊಂದಿದವರು. ಇವರ ವೃತ್ತಿಯ ಹಿನ್ನೆಲೆಯಿಂದ ಇವರನ್ನು ಬೇರೆ ಬೇರೆ ಕುಲಗಳನ್ನಾಗಿ ನೋಡುವ ಪ್ರಯತ್ನ ನಡೆದಿದೆ. ಮೊದಲು ಆಂಧ್ರ ಮತ್ತು ಕರ್ನಾಟಕ ಗಳೆರಡರಲ್ಲಿ ವಿದ್ವಾಂಸರು ಮೊದಲು ಇದೇ ದೃಷ್ಟಿಕೋನ ಹೊಂದಿದವರಾಗಿದ್ದರು.ಥರ್ಸ್ಟನ್ ಅವರು ತಮ್ಮ "Caste and Tribes of Southern India" ಎಂಬ ಗ್ರಂಥದಲ್ಲಿ, ಹಗಲು ವೇಷದವರನ್ನು ಕುರಿತು (Pagathivesham) A Class of Telgu beggars, who put in disguises (vesham) while begging (Madras Census report 1901). At the Annual festival at Thirupathi in honour of the godess Gangamma, Custom requires the people to appear in a different disguise every morning and evening. These disguises include those of a Bairagi, Serpent etc., ಎಂದು ಬರೆಯುತ್ತಾರೆ. ತಿರುಪತಿ ಗಂಗಮ್ಮ ಎನ್ನುವ ದೇವತೆಯ ಗೌರವಾರ್ಥ ನಡೆಯುವ ವಾರ್ಷಿಕ ಜಾತ್ರೆಯಲ್ಲಿ ಪ್ರತಿದಿನ ಬೆಳಗ್ಗೆ ಸಂಜೆ ಭೈರಾಗಿ ಸರ್ಪ ಮುಂತಾದ ಬೇರೆ ಬೇರೆ ವೇಷ ಧರಿಸಿ ಬಿಕ್ಷೆ ಎತ್ತುವ ತೆಲುಗು ಭಿಕ್ಷುಕ ವರ್ಗವನ್ನು ಹಗಲು ವೇಷದವರು ಎಂದು ಥರ್ಸ್ಟನ್ ದಾಖಲಿಸಿದ್ದಾರೆ[26]. ಆದರೆ ಇವರು ತಮ್ಮ ಗ್ರಂಥದಲ್ಲಿ ಜಂಗಮ, ಬಾಳ ಸಂತೋಷ, ಕಾಡುಪಾಪ ಮುಂತಾದ ಕುಲಗಳೆಲ್ಲವೂ ಬೇರೆ ಬೇರೆ ಕುಲ ಎಂದು ಹೆಸರಿಸಿದ್ದಾರೆ[27].ಸಯದ್ ಸಿರಾಜುಲ್ ಹಸನ್ ಅವರು ತೆಲುಗು ಮಂಡಿಕೇಟ್ಸ ಹೆಸರಿನಲ್ಲಿ ಕಾಡುಪಾಪ, ಬಾಳ ಸಂತೋಷಿ, ಬಹುರೂಪಿ, ತೊಗಲುಗೊಂಬೆಯಾಟದವರು, ಸನ್ಯಾಸಿ ಮುಂತಾದವರನ್ನು ಬೇರೆ

ಬೇರೆ ಕುಲದವರೆಂದು ವಿವರಿಸಿದ್ದಾರೆ[28]. ಆಚಾರ್ಯ ಬಿರುದಿನ ರಾಮರಾಜ ಅವರು ಬುಡಿಗೆ ಜಂಗಮ, ಶಾರದ ಕಾಂಡ್ರ , ಬಾಳಸಂತ ಇವರು ಬೇರೆ ಬೇರೆ ಜಾನಪದ ಗಾಯಕ ಕುಲದವರೆಂದು ಹೆಸರಿಸಿದ್ದಾರೆ[29]. ಆಚಾರ್ಯನಾಯನಿ ಕೃಷ್ಣ ಕುಮಾರಿ ಬುಡಿಗೆ ಜಂಗಮ, ಶಾರದಾ ಕಾಂಡ್ರು ಬೇರೆಯೆಂದು ಅಭಿಪ್ರಾಯಪಟ್ಟರೆ[30]. ಡಾ|| ಬಿಕ್ಕಿಲಿನೇನಿ ರಾಧಾಕೃಷ್ಣಮೂರ್ತಿ ಬುಡಿಗೆ ಜಂಗಮ, ಅಂಜುಬುರಕ (ಪಿಲಿಕಿ) ಜಂಗಮ, ಕಾಡು ಪಾಪ, ಬಾಲಸಂತ ಮುಂತಾದ ವೃತ್ತಿಗಾಯಕರನ್ನು ಪ್ರತ್ಯೇಕ ಶೀರ್ಷಿಕೆಯಡಿ ಸೂಚಿಸಿದ್ದಾರೆ[31]. ಡಾ|| ಯಲ್ದಂಡ ರಘುರಾಂರೆಡ್ಡಿ ಜಾನಪದ ಭಿಕ್ಷುಕರಲ್ಲಿ ಶಾರದ ಕಾಂಡ್ರು, ಬಾಲಸಂತರನ್ನು, ಬೇರೆ ಬೇರೆಯಾಗಿ ಸೂಚಿಸಿರುವುದರ ಜೊತೆಗೆ, ಇವರು ಕಾಡು ಪಾಪ, ಸಾಧು, ತೋಗಲುಬೊಂಬೆ, ಏಕತಾರ ಸನ್ಯಾಸಿ ಮೊದಲಾದ ಸುಮಾರು 30 ವೇಷ ಹಾಕುವರೆಂದು ವಿವರಿಸಿದ್ದಾರೆ[32]. ಆರುದ್ರ ಜಂಗಮ (ಜಂಗಾಲು), ಹಗಲು ವೇಷದವರು, ಬಾಲಸಂತರು , ಬೊಂಬೆಯಾಟದವರು, ಭಾಗವತರು ಮುಂತಾದವರು ವಿಭಿನ್ನ ಕಲಾ ಪ್ರದರ್ಶಕರೆಂದು ವರ್ಣಿಸಿದ್ದಾರೆ [33]. ಡಾ|| ಆರ್. ವಿ. ಎಸ್. ಸುಂದರಂ ಅವರು ಬುಡಿಗೆ ಜಂಗಮ, ಬಾಲಸಂತ, ಬೊಂಬೆಯಾಟದವರನ್ನು ಬೇರೆ ಬೇರೆ ಪ್ರಸ್ತಾಪಿಸಿದ್ದಾರೆ. ಈ ಎಲ್ಲಾ ವಿಂಗಡನೆಗಳು 'ಕುಲ' ದ ಹಿನ್ನೆಲೆಯಲ್ಲಿಯೇ ಮೂಡಿ ಬಂದಿರುವ ಕಾರಣ ಬುಡಿಗೆ ಜಂಗಮರು ಪ್ರದರ್ಶಿಸುವ ಅನೇಕ ವೃತ್ತಿ ವೇಷಗಳನ್ನು ಬೇರೆ ಬೇರೆ ಕುಲವೆಂದೇ ಗುರುತಿಸಲಾಗಿದೆ ಎಂದು ಅಭಿಪ್ರಾಯ ಪಡಬಹುದಾಗಿದೆ. ಪ್ರೊ. ಭೀಮರಾಜು ಅವರು ತಮ್ಮ 'ತೆಲುಗು ಜಾನಪದ ಗೇಯ ಸಾಹಿತ್ಯಂ' ಎನ್ನುವ ಕೃತಿಯಲ್ಲಿ (ಪುಟ 808) ಈ ಜನಾಂಗವನ್ನು ಕುರಿತು ಬರೆಯುತ್ತಾ, 'ಬುಡಿಗೆ' ಎನ್ನುವ ವಾದ್ಯವನ್ನು ನುಡಿಸುತ್ತಾ ಕಥೆ ಹೇಳುವ ಜನರನ್ನು 'ಬುಡ್ಗ ಜಂಗಾಲು' ಎಂದು ಕರೆದಿದ್ದಾರೆ. ಮರುವೂರು ಕೋದಂಡ ರಾಮ ರೆಡ್ಡಿ ಅವರು ಬರೆದಿರುವ 'ಮಾಂಡಲಿಕ ಪದಕೋಶಂ' ಎನ್ನುವ ಗ್ರಂಥದಲ್ಲಿ ಇವರನ್ನು ವಿವರಿಸುತ್ತಾ, 'ತಂದಾನಾ' ಕಥೆಗಳನ್ನು ಹೇಳಿ ಜೀವಿಸುವ ಬುರ್ರ ಕಥೆಯವರು 'ಬುಡಗೇಲು' ವಾದ್ಯವನ್ನು ನುಡಿಸುತ್ತಾ ಬಿಕ್ಷೆ ಎತ್ತುವವರು 'ಬುಡ್ಗ ಜಂಗಾಲು' ಎಂದು ತಿಳಿಸಿರುತ್ತಾರೆ[34]. ಈ ರೀತಿಯಾಗಿ ಆಂದ್ರದ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಕನ್ನಡದಲ್ಲಿಯೂ ಕೂಡ ಇದೇ ರೀತಿ ಅಭಿಪ್ರಾಯವನ್ನು ವಿದ್ವಾಂಸರು ಹೊಂದಿರುವುದನ್ನು ನೋಡುತ್ತೇವೆ. ಜಾನಪದ ವಿದ್ವಾಂಸರಾದ ಡಾ|| ಬಸವರಾಜ ಮಲಶೆಟ್ಟಿ ಅವರು 'ಉತ್ತರ ಕರ್ನಾಟಕದ ಬಯಲಾಟಗಳು' ಎಂಬ ತಮ್ಮ ಸಂಶೋಧನ ಮಹಾಪ್ರಬಂಧ ಕೃತಿಯಲ್ಲಿ ವೇಷಗಾರರು ಬಹುರೂಪಿಗಳು ಇವೆರಡು ಪ್ರತ್ಯೇಕ ಸಮುದಾಯಗಳು [35] . ಎಂದು ಹೇಳಿದ್ದಾರೆ. ಹೊರ ನೋಟಕ್ಕೆ ಇವೆರಡು ಸಮುದಾಯಗಳು ಒಂದೇ ವೃತ್ತಿಯವರಾಗಿ ಕಂಡು ಬಂದರೂ, ಇವರಿಬ್ಬರ ವೃತ್ತಿ ಪರಂಪರೆಗಳಲ್ಲಿ ವ್ಯತ್ಯಾಸವಿರುವುದು ಕಂಡು ಬರುತ್ತದೆ. ಕನ್ನಡ ನಾಡಿನಲ್ಲಿ ಒಂದು ಕಾಲಕ್ಕೆ ಸಾಕಷ್ಟು ಪ್ರಮಾಣದಲ್ಲಿದ್ದ ಬಹುರೂಪಿಗಳು, ವೇಷಗಾರರಷ್ಟು ಸಾಧಾರಣ ವರ್ಗದವರಲ್ಲ [36] ಎಂದು ಅವರ ವೃತ್ತಿ ಜೀವನದ ಮೇಲು - ಕೀಳು ತನವನ್ನು ಉದ್ಧರಿಸುವ ಪ್ರಯತ್ನ ಮಾಡಿದ್ದಾರೆ. ಅಲ್ಲದೆ ಬಹುರೂಪಿಗಳು ಇಂದು ತಮ್ಮ ವೃತ್ತಿ ವೈಶಿಷ್ಟ್ಯತೆಗಳನ್ನು ಕಳೆದುಕೊಂಡು ವೇಷಗಾರರ

ಸಂಪ್ರದಾಯದಲ್ಲಿ ಬೆರೆತಿರುವ ಸಾಧ್ಯತೆಯೂ ಇದೆ [37]. ಎಂದು ಊಹಿಸಿದ್ದಾರೆ.

ಅದರಂತೆ ಬುಡ್ಗ ಜಂಗಮ ಬುಡಕಟ್ಟಿಗೆ ಸೇರಿದ ಕೊಂಡ ಮಾಮ, ಸುಡುಗಾಡು ಸಿದ್ಧರು ಮುಂತಾದ ಕಲಾವಿದರನ್ನು ಬೇರೆ ಬೇರೆ ಬುಡಕಟ್ಟುಗಳೆಂಬಂತೆ ಗುರುತಿಸಿ ವಿದ್ವಾಂಸರು ಅಧ್ಯಯನದಲ್ಲಿ ತೊಡಗಿರುವುದು ಕಂಡು ಬರುತ್ತದೆ[38]. ವಿದ್ವಾಂಸರು ವೃತ್ತಿ ಕಲಾವಿದರ ಮೂಲ ಸಮುದಾಯವನ್ನು ಅರ್ಥೈಸಿಕೊಳ್ಳದೆ ವೃತ್ತಿ ಸೂಚಕವನ್ನಾಧರಿಸಿ ಸಮುದಾಯವನ್ನು ಗುರುತಿಸುವುದು ಅನೇಕ ತೊಡಕುಗಳಿಗೆ ಕಾರಣವಾಗುತ್ತದೆ.

ಬುಡ್ಗ ಜಂಗಮರು ಜೀವನೋಪಾಯಕ್ಕಾಗಿ ಜಾನಪದ ಕಲೆಗಳನ್ನು ವೃತ್ತಿಯಾಗಿಸಿಕೊಂಡು ಬುರ್ರ ಕಥೆಗಾರರಾಗಿ, ವೇಷಗಾರರಾಗಿ, ಜೀದಿ ಭಾಗವತರಾಗಿ, ಕುರ್ರ ಮಾಮ ಅಥವಾ ಕೊಂಡಮಾಮಗಳಾಗಿ ಹಲವಾರು ರೀತಿಯ ಕಲೆಗಳನ್ನು ಅವಲಂಬಿಸಿರುವುದು ಕಂಡು ಬರುತ್ತದೆ. ಇವರು ಜೀವನಪರ್ಯಂತ ಒಂದೇ ವೃತ್ತಿ ವೇಷವನ್ನು ಪ್ರದರ್ಶಿಸುವವರೆಂದು ಹೇಳಲಾಗದು. ಇವರು ಸಂದರ್ಭಾನುಸಾರ ವೃತ್ತಿ ವೇಷವನ್ನು (ಕಲೆ) ಬದಲಾಯಿಸುತ್ತಾ ಹೋಗುತ್ತಾರೆ. ಇಂದು ತುಪಾಕಿರಾಮನ ವೇಷಹಾಕಿದವನು ನಾಳೆ ತಂದಾನ ಕಥೆ ಹೇಳಲು ಹೋಗುವನು. ನಾಳೆ ತಂದಾನಿ ಕಥೆ ಹೇಳಿದವನು ನಾಡಿದ್ದು ಭಾಗವತ ವೇಷ ಹಾಕುವುದುಂಟು. ಹೀಗೆ ಬುಡಿಗೆ ಜಂಗಮರಲ್ಲಿ ಒಂದು ವೃತ್ತಿ ವೇಷ ಒಬ್ಬರಿಗೇ ಸೀಮಿತವಾಗಿರದೆ ಸಮಯ ಸಂದರ್ಭಾನುಸಾರವಾಗಿ ಬದಲಾಗುತ್ತಾ ಹೋಗುತ್ತದೆ. ಆದರೂ ಇವರ ಕುಲವೆಲ್ಲ ಒಂದೇ. ವಿವಾಹ ಸಂಬಂಧ, ಮನೆ ಹೆಸರು, ಆಚಾರ - ವಿಚಾರ, ಸಂಪ್ರದಾಯ, ಗುಡಾರಗಳು, ಕುಲಪಂಚಾಯಿತಿ, ಮುಂತಾದ ಬುಡಕಟ್ಟು ಲಕ್ಷಣಗಳೆಲ್ಲವೂ ಬುಡ್ಗ ಜಂಗಮರಿಗೆ ಒಂದೇ ಯಾಗಿರುತ್ತವೆ [39]. ಎಂದು ಡಾ|| ಎನ್. ಆರ್. ವೆಂಕಟೇಶಂ ಹೇಳಿರುವಲ್ಲಿ ಇವರೆಲ್ಲರ ಕುಲ ಒಂದೇ ಎಂಬುದು ತಿಳಿದುಬರುತ್ತದೆ.

ಕೆ. ಎಸ್. ಸಿಂಗ್ ಅವರು ತಮ್ಮ "The Scheduled Caste" ಎನ್ನುವ ಗ್ರಂಥದಲ್ಲಿ ಈ ಸಮುದಾಯವನ್ನು ಕುರಿತು ಹೀಗೆ ಹೇಳಿದ್ದಾರೆ. "The Budiga Jangam and the Beda Jangam, they are distributed in coastal Andhra, and the Royal Seema and a Telanagana and a Telangana regions of Andhra Pradesh. They are notified as a Beda jangam and the Budga Jangam. They speak in Telugu the Budga Jangams are not vegetarians. Alcoholic drinks are consumed. They have different Surnames, like gandhamm, Bhoota, Toorapati, Pasthamvallu, Kallenmvallu, Muggolu, Chirapati, Boil Padollu etc. These Surnames regulate marriage alliances. The marriageble age for boys is twenty years and for girl sit is fourteen years. The 'Kulapedda' officiates at the marriage proceedings. They are mainly a land-less Community. Budga Jangams are Hindu. Their caste leaders (Kula peddalu) function as priests and perform the birth, marriage and death

rituals they are expert in mat - weaving. Their folk - songs and folk tales are partly community - specific. Folk songs are Sung by both men and women. They use percussion musical instruments [40]. ಬುಡ್ಗ ಜಂಗಮ ಅಥವಾ ಬೇಡ ಜಂಗಮ ಸಮುದಾಯವು ಆಂಧ್ರ ಪ್ರದೇಶದ ಕರಾವಳಿ ಆಂಧ್ರ ರಾಯಲ್ ಸೀಮಾ ಮತ್ತು ತೆಲಂಗಾಣ ಪ್ರದೇಶಗಳಲ್ಲಿ ಚದುರಿ ಹೋಗಿದ್ದಾರೆ. ಅವರು ಬುಡ್ಗ ಜಂಗಮ ಅಥವಾ ಬೇಡ ಜಂಗಮ ಎಂಬ ಹೆಸರಿನಿಂದ ಗುರುತಿಸಲ್ಪಟ್ಟಿದ್ದಾರೆ. ಅವರು ತೆಲುಗು ಭಾಷೆ ಮಾತನಾಡುತ್ತಾರೆ. ಬುಡ್ಗ ಜಂಗಮರು ಮಾಂಸಾಹಾರಿಗಳಾಗಿದ್ದು, ಮದ್ಯ ಸೇವನೆ ಮಾಡುತ್ತಾರೆ. ಇವರಿಗೆ ಬೇರೆ ಬೇರೆ ಅಡ್ಡ ಹೆಸರುಗಳಿವೆ. ಅವು - ಗಂಧಂ, ಭೂಪಂ, ತೂರಪತಿ, ಪಸ್ತಮೋಳ್ಳು, ಕಲ್ಯಾಣ ಮೋಳ್ಳು, ಮುಗ್ಗೋಳ್ಳು, ತಿರಪಾಟಿ, ಬೈಲು ಪಾಡೋಳ್ಳು, ಮುಂತಾದವುಗಳು. ಈ ಅಡ್ಡ ಹೆಸರು ಅಥವಾ ಬಳಿಗಳಿಂದಲೇ ಮದುವೆ ಸಂಬಂಧಗಳನ್ನು ಬೆಳೆಸುತ್ತಾರೆ. ಇವರಲ್ಲಿ ಮದುವೆ ವಯಸ್ಸು, ಹುಡುಗನಿಗೆ 20 ವರ್ಷ, ಹುಡುಗಿಗೆ 14 ವರ್ಷ ಎಂದು ಗುರುತಿಸಲಾಗಿದೆ. ಇವರು ಕುಲದ ಹಿರಿಯನನ್ನು ಕುಲಪೆದ್ದ ಎಂದು ಕರೆಯುತ್ತಾರೆ. ನ್ಯಾಯ ಪಂಚಾಯತಿ, ಮದುವೆ ಇವನ ಸಮ್ಮುಖದಲ್ಲಿಯೇ ನಡೆಯುತ್ತವೆ. ಈ ಸಮುದಾಯಕ್ಕೆ ಯಾವುದೇ ರೀತಿಯ ಸ್ಥಿರ ಆಸ್ತಿಗಳಿಲ್ಲ. ಇವರು ಚಾಪೆ ಹೆಣೆಯುವುದರಲ್ಲಿ ನಿಸ್ಸೀಮರು. ಜನಪದ ಗೀತೆ ಮತ್ತು ಜನಪದ ಕಥೆಗಳನ್ನು ಹೇಳುವ ವೃತ್ತಿ ಕಲಾವಿದರಾಗಿದ್ದಾರೆ ಎಂದು ಹೇಳಿದ್ದಾರೆ. ಈ ಸಮುದಾಯ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಹಿಂದುಳಿದಿದೆ. ಒಟ್ಟಾರೆ ಭಾರತದ ಸಂವಿಧಾನಾತ್ಮಕ ಸೌಲಭ್ಯಗಳಿಂದ ವಂಚಿತವಾಗಿದೆ. ಸದರಿಯವರಿಗೆ ಸಾಮಾಜಿಕ ಸೌಲಭ್ಯ ನೀಡುವ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

ಡಾ॥ ಕೆ. ಎಂ. ಮೈತ್ರಿಯವರು ತಮ್ಮ "Caste certificate problems of Budga Jangamas" ಎಂಬ ಲೇಖನದಲ್ಲಿ ಈ ಸಮುದಾಯವನ್ನು ಕುರಿತು Now they are famous as 'Hagalu Veshagararu'. The term 'Beda' is the symbol of hunting stage. The initial hunters are 'Budas'. Budas became 'Budgas'. The meaning of 'Buda' is root, start, oboringin, clan[41] etc. But in Rev. Kettels dictionary , it means 'Damaru' [42] It is the musical instrument of lord Shiva. The early hunters (Budas) later used the Damaru and than 'Dimki' for worshipping their deities. The term Beda and Buda are derived from Kannada language. So Beda or Budga Jangamas are Originally Kannadigas, their nomadic condition helps them to learn Telugu (Dravidian Language) for their living. It become their mother tongue and till then they had their own 'BUDGA' language. But it is missing it status slowly". [43] ಈಗ ಹಗಲು ವೇಷಗಾರರೆಂದೇ ಪ್ರಸಿದ್ಧ ಹೊಂದಿದ ಇವರ ಮೂಲ 'ಬೇಡ' ಎನ್ನುವುದು, ಬೇಟೆಯ ಚರಮ ಸ್ಥಿತಿಯನ್ನು ಸೂಚಿಸುತ್ತದೆ. ಮೂಲ ಬೇಟೆಗಾರರೆಲ್ಲ ಬುಡದವರು. 'ಬುಡ ' ಅಂದರೆ ಬುಡಗರು ಎಂದು ಬುಡ ಎಂದರೆ ಮೂಲ

ಬೇರು, ಮುಂತಾದ ಅರ್ಥವಿದೆ. ಡಾ. ಕಿಟೆಲ್ ಅವರ ಅರ್ಥ ಕೋಶದಲ್ಲಿ ಬುಡ ಎಂದರೆ `ಡಮರು`. ಇದು ಒಂದು ಸಂಗೀತ ಸಾಧನ. ಶಿವನು ಬಳಸುವ ಇಂತಹ ಡಮರನ್ನು , ಈ ವೇಷಗಾರರು , ಡಿಮಿಕಿ ಎಂದು ತಮ್ಮ ನಿತ್ಯ ಕಾಯಕಕ್ಕೆ ಬಳಸುತ್ತಾರೆ. ಬೇಡ, ಬುಡ ಎನ್ನುವ ಶಬ್ದಗಳು ಕನ್ನಡದಿಂದ ಹುಟ್ಟಿದ ಶಬ್ದಗಳು. ಆದಕಾರಣ ಅವರು ಮೂಲತಃ ಕನ್ನಡಿಗರು. ಆದ್ದರಿಂದ ಬೇಡ ಅಥವಾ ಬುಡಗ ಜಂಗಮರು ಮೂಲತಃ ಕನ್ನಡಿಗರು ಅವರ ಅಲೆಮಾರಿ ಬದುಕೇ ಅವರನ್ನು ತೆಲುಗು ಮತ್ತು ಮುಂತಾದ ದ್ರಾವಿಡ ಭಾಷೆಗಳನ್ನು ಕಲಿಯಲು ಪ್ರೇರೇಪಿಸಿದೆ. ಅವರ ಅಲೆಮಾರಿ ಬದುಕಿಗೆ ಈ ಬಗೆಯ ಭಾಷಾ ಕಲಿಕೆ ಅನಿವಾರ್ಯವೂ ಹೌದು. ತೆಲುಗು ಭಾಷಿಕ ಪರಿಸರದಲ್ಲಿ ಇವರು ಹೆಚ್ಚಾಗಿ ವಾಸಿಸುತ್ತಿರುವುದರಿಂದ ತೆಲುಗು ಮನೆ ಭಾಷೆಯಾಗಿದೆ. ಆದರೂ ಅವರು ತಮ್ಮದೇ ಆದ `ಬುಡಗ ' ಭಾಷೆಯನ್ನು ಹೊಂದಿದ್ದರೂ ಅದರ ಬಳಕೆ ಕಡಿಮೆಯಾಗುತ್ತಿದೆ.

ಬುರ್ರ ಕಥೆಯವರು ವೇಷಗಾರರು (ಬಹುರೂಪಿಗಳು, ಹಗಲು ವೇಷದವರು, ಜಾತಿಗಾರರು) ಬಾಳ ಸಂತೋಷಿಗಳು, (ಶಂಖು ಜಂಗಮರು, ಸುಡುಗಾಡು ಸಿದ್ಧರು), ಕೊಂಡಮಾಮ (ಕುರು ಮಾಮ) ಮುಂತಾದವರೆಲ್ಲರೂ ಒಂದೇ ಸಮುದಾಯಕ್ಕೆ ಸೇರಿದವರಾಗಿದ್ದಾರೆ. "ಉದರ ನಿಮಿತ್ತಂ ಬಹುಕೃತ ವೇಷಂ" ಎನ್ನುವಂತೆ ಹೊಟ್ಟೆ ಹೊರೆದು ಕೊಳ್ಳುವುದಕ್ಕಾಗಿ ಬೇರೆ ಬೇರೆ ಕಲೆಗಳನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ಒಂದೇ ಕುಟುಂಬದಲ್ಲಿ ಬುರ್ರ ಕಥೆಗಾರರು, ವೇಷಗಾರರು, ಕೊಂಡ ಮಾಮ ಕಲಾವಿದರು ಇರುವುದು ಕಂಡು ಬರುತ್ತದೆ [44] ಅಲ್ಲದೆ ಬುರ್ರ ಕಥೆಗಾರರು, ವೇಷಗಾರರು, ಬಾಳಸಂತೋಷಿಗಳು ಇವರಲ್ಲಿ ಮದುವೆಯ ಸಂಬಂಧವೇರ್ಪಡುತ್ತದೆ[45]. ಡಾ. ಬಿ. ಎಂ. ಹೊಸಮನಿ ಅವರು "ಕರ್ನಾಟಕದಲ್ಲಿ ವೇಷಗಾರರು, ಒಂದು ಸಾಂಸ್ಕೃತಿಕ ಅಧ್ಯಯನ" ವೆಂಬ ಪಿ ಹೆಚ್ ಡಿ ಮಹಾ ಪ್ರಬಂಧದಲ್ಲಿ ವೇಷಗಾರರು, ಬುಡ್ಗ ಜಂಗಮ ವೃತ್ತಿಗಾಯಕರು, ಬುರ್ರ ಕಥೆಗಾರರು, ಬಾಳ ಸಂತೋಷಿಗಳು, ಸಂಖು ಜಂಗಮರು ಮುಂತಾದವರಲ್ಲಿ ಪರಸ್ಪರ ಸಂಬಂಧ ಸೂಚಿಸುವ ಸಮಾನ ಅಂಶಗಳನ್ನು ಹೀಗೆ ಗುರುತಿಸಿದ್ದಾರೆ.

1) ಮೂಲದ ಕುಲ `ಜಂಗಾಲು' , `ಸಿರಿ ಜಂಗಾಲು' ಎಂದು ಹೇಳಿಕೊಳ್ಳುವರು.
2) ಬನ್ನಿ ಗಿಡವನ್ನು `ಜಂಬಲಮ್ಮ` ಎಂದು ಕರೆದು ಮದುವೆ ಮುಂತಾದ ಕಾರ್ಯಕ್ರಮಗಳಲ್ಲಿ ಪೂಜಿಸುವರು.
3) ಆಂಧ್ರಪ್ರದೇಶದ ಶಂಶಾಬಾದಿನ `ನೀಲಕಂಠ ಸ್ವಾಮಿಗಳು' ಧರ್ಮ ಗುರು.
4) ಶ್ರೀ ಶೈಲ ಮೂಲದ ಶೈವ ಸಂಪ್ರದಾಯದವರು.
5) ವಿಭೂತಿ , ರುದ್ರಾಕ್ಷಿ , ಕಾವಿ ಬಟ್ಟೆಗಳಿಗೆ ಮನ್ನಣೆ ನೀಡುವರು ಮತ್ತು ಧರಿಸುವರು.
6) ಸತ್ತವರನ್ನು ಹೂಳುವರು. ಈ ಸಮುದಾಯಗಳಲ್ಲಿ ಯಾರೇ ಮರಣ ಹೊಂದಿದರೂ `ಶಂಖ ಜಂಗಮರ 'ನ್ನು ಕರೆಸಿ ಸಂಸ್ಕಾರ ನೆರವೇರಿಸುವರು. ಇಲ್ಲವೆ ಸ್ಥಳೀಯ ಜಂಗಮರನ್ನು ಕರೆದು ಸಂಸ್ಕಾರಗೊಳಿಸುವರು.

7) ಮಧ್ಯ - ಮಾಂಸ ಸೇವಿಸುತ್ತಾರೆ.

8) ಒಂದು ಸಮುದಾಯದಲ್ಲಿರುವ ಬೆಡಗುಗಳು ಉಳಿದ ಸಮುದಾಯಗಳಲ್ಲಿವೆ.

9) ಎಲ್ಲ ಸಮುದಾಯಗಳ ಜೀವನ ವಿಧಾನ ಮತ್ತು ಸಂಪ್ರದಾಯಗಳಲ್ಲಿ ಸಾಮ್ಯತೆ ಇದೆ.

10) ಎಲ್ಲ ಸಮುದಾಯಗಳ ಮಾತೃ ಭಾಷೆ 'ತೆಲುಗು'.

11) ಎಲ್ಲ ಸಮುದಾಯಗಳು ಪರಸ್ಪರ ರಕ್ತ ಸಂಬಂಧ ಹೊಂದಿವೆ[46].

ಈ ಸಮಾನ ಅಂಶಗಳು, ಈ ಎಲ್ಲ ವೃತ್ತಿ ಕಲಾವಿದರು ಒಂದೇ ಮೂಲದಿಂದ ಬಂದಿದ್ದಾರೆ, ಇವರೆಲ್ಲರೂ ಶೈವ ಸಂಪ್ರದಾಯಕ್ಕೆ ಸೇರಿದವರು ಎನ್ನುವುದನ್ನು ಮನವರಿಕೆ ಮಾಡಿ ಕೊಡುತ್ತವೆ. ಜೊತೆಗೆ ಬುಡ್ಗ ಜಂಗಮ ಸಮುದಾಯದ ಮೂಲ, ಸಂಪ್ರದಾಯಗಳತ್ತ ಗಮನ ಸೆಳೆಯುತ್ತವೆ.

2.4.2 - ಬುಡ್ಗ ಜಂಗಮರ ಬಳಿಗಳು ಅಥವಾ ಬೆಡಗುಗಳು :

'ಬುಡ್ಗ ಜಂಗಮ' ಸಮುದಾಯದಲ್ಲಿ ಒಳ ಪಂಗಡಗಳಿದ್ದು , ಇವರೆಲ್ಲರೂ ಬಳಿಗಳು ಅಥವಾ ಬೆಡಗುಗಳಿಂದ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಇವು ಬುಡ್ಗ ಜಂಗಮ ಸಂಸ್ಕೃತಿಯ ಆಚಾರ - ವಿಚಾರ, ವಿಧಿ - ವಿಧಾನಗಳು, ಅರಿಯುವಲ್ಲಿ ಸಹಾಯಕವಾಗುತ್ತವೆ. ಅವರು ತಮ್ಮ ರಕ್ತ ಸಂಬಂಧವನ್ನು ಬೆಳೆಸಬೇಕಾದರೆ, ಈ ಬಳಿಗಳು ಅಥವಾ ಬೆಡಗುಗಳು ಪ್ರಮುಖ ಆಧಾರವಾಗುತ್ತವೆ. ಇಲ್ಲಿ 'ಬಳಿ' ಎನ್ನುವುದು ಅವರ ಕುಲ, ಅವರ ಬೆಡಗು, ಅವರ ವಂಶ , ಅವರ ಮನೆತನವನ್ನು ಸೂಚಿಸುತ್ತವೆ. ಬುಡ್ಗ ಜಂಗಮರ ಬಳಿಗಳು, ಈ ರೀತಿಯಾಗಿವೆ.

1) ಅಶ್ವಿ
2) ಅಲ್ಲಂ
3) ಅವಧೂತ
4) ಆಲೇಟಿ
5) ಆಯಿತಿ ರೆಡ್ಡಿ
6) ಇಬೂತಿ
7) ಇಪ್ಪ
8) ಇಪ್ಪಾ
9) ಇಂಗುವಾ
10) ಇರ್ಲ
11) ಇದುರುಗತ್ಲಾ
12) ಈರ್ಲಪಲ್ಲಿ
13) ಈರ್ಲಾಪಲ್ಲಿ
14) ಈರ್ನಾಲ್
15) ಊರ
16) ಒಂತೆಡ್ಡು
17) ಕದಮಂಚಿ, ಕಾಟ ಮಂಚಿ
18) ಕದಂ, ಕಡ್ಯೆಮ, ಕದ್ಯೆಮಿ
19) ಕಲಾ ಮಾಸ್ತಿ
20) ಕಾಲೆಮ್‌ವಾಲು
21) ಕಲ್ಯಾನಂ, ಕಲ್ಯಾಣ, ಕಲ್ಯಾಣಿ
22) ಕಮಂಡ್ಲಾ ಪಲ್ಲಿ
23) ಕೊಮಂಡ್ಲಾಪಲ್ಲಿ
24) ಕಂಕನಾಲ
25) ಕನ್‌ಪತಿ
26) ಕಾನುಗುರಿ
27) ಕಪ್ಪೆರಾ, ಕಪ್ಪೆರಿ
28) ಕರಿತಂ
29) ಕರ್ನಕೊಟ
30) ಕಾರೆ, ಕಾರಿ

31) ಕಾತುಮುರಿ

32) ಕಿನ್ನರಿ, ಕಿನ್ನಿರಿ, ಕಿನ್ನರಾ

33) ಕೊದಂಡಮ್

34) ಕೊದಿಗಂಟಿ

35) ಕೊಲ್ಲಾ

36) ಕೊಮಾರಿ

37) ಕೊಂಡಪಲ್ಲಿ

38) ಕೊಂಧ್ರಾ

39) ಕೊಂದುರಿ

40) ಕೊಸನ್, ಕೊಸನ

41) ಗದ್ದಂ

42) ಗಗನ, ಗಗನಮ್

43) ಗಂಧಂ, ಗಂಧೋತಿ

44) ಗಂಗಿನಾ ಪಲ್ಲಿ

45) ಗಂಜಾಯಿ

46)ಗಂಟಾ

47) ಗನುಗ

48) ಗಿತ್ತಾ

49) ಗೋನಿಗಂಟಾಲ

50) ಗೋನಿಗಿಂಟಾಲ

51) ಗೋತುರಿ, ಗೊತ್ರು

52) ಗುಂಡ್ಲಾ

53) ಗುಪ್ಪಾ

54) ಗುರನ್, ಗುರಾನಿ

55) ಚರ್ಲಾ, ಚೆರ್ಲಾ

56) ಚಿಂತಲಾ

57) ಚಿರಾಪತಿ

58) ಚಿರುಕುರಿ

59) ಚಿತ್ತಾರಿ

60) ಚೆರ್ಜಲಾ

61)ಚೆನ್ನಾಪಲ್ಲಿ

62)ಚೆರ್ಲಾಪಲ್ಲಿ

63)ಚೈಲಿ ಮಂಡಲಾ

64) ಜಂಪೆಲ್ಲಿ,ಜಂಪಿಲ್ಲಿ,ಜಂಪಾಲ್ಲಿ, ಜಂಪೋಲು

65) ಜೆಡಿಮೆಟ್ಲಾ, ಜೆಡಿ ಮಟ್ಲಾ

66) ಡೊಕ್ಕಾ

67)ತಲಮಂಚಿ

68) ತಾತಿ ಕೊಂಡ

69) ತೆಕಿ

70) ತೋಕಾ

71) ತುರ್ರಾಲಾಪತಿ

72) ದೂಪಂ

73) ದುಡ್ಡು, ದುಡ್ಡಿ

74) ದುದ್ದುಕುರಿ, ದುದ್ದುರ್ಕಿ

75) ದೆವರಾಪಲ್ಲಿ

76) ನ್ಯಾರ ಕಂಟ್ಯೋಳ್ಳು

77) ನಾದು ಪುರಿ, ನಾದಿಕುರಿ

78) ನಾಗುಲು

79)ನಾಮಲಾ

80) ನಾರಿಕುತ್ರಿ, ನರಕುತ್ತಿ

81) ನಿರ್ಲ ಗಂಟಿ, ನಿರಗಂಟಿ

82) ನಿದಾನಕಾವಿ

83)ನಿಡುಗೊಂಡ,ನಿಡುಕೊಂಡ, ನಿರುಕೊಂಡ

84) ನೂನೇ

85) ಪದಿರೆ

86) ಪಚ್ಚಗಂತಾಲ, ಪಚ್ಚಗಂತಲಾ

87) ಪಲಪತಿ

88) ಪನಗಡಾ

89) ಪನಪು
90) ಪಂಚಾದಿ
91) ಪನುಗಂಟಿ
92) ಪರದಕ್ಷಿಣಾ ಪದಕ್ಷಿಣಾ
93) ಪರ್ತಂ
94)ಪರ್ವತಂ
95) ಪಸ್ತುಂವಲ್ಲು
96) ಪತ್ತಿ
97) ಪತ್ರಿ
98) ಪತ್ರೆ
99) ಪಾಕಾ
100) ಪಾರೆ
101) ಪಾಸುಪುಲೆತಿ
102) ಪಾತಿಮಿದಿ, ಪೊತಿ ಮಿದಿ
103) ಪೆಲ್ಲುರಿ
104) ಪೆರ್ಲ, ಪ್ಯಾರ್ಲ
105) ಪುವ್ವನಂ
106) ಪೊನ್ನಾಪೊಳ್ಳು
107) ಪೊನಿತಿ
108) ಪೊನ್ನಕಾಂತಿ
109) ಪ್ರಸಾದಂ
110) ಪುರೊತ್ರಂ
111) ಪುತ್ತಾ
112) ಬಲಗೊಲಾ
113) ಬಡಿಗೋಲು
114) ಬದ್ರಾಕ್ಷಿ, ಬದ್ರಸಿ
115)ಬೂತಂ, ಬೊತಂ
116) ಬಂದರೊಲು
117) ಬೊಮಿಲ್ಲಾ, ಬೊಮಲ್ಲಾ
118) ಬೊದಪರ್ತಿ, ಬೊದಪುರ್ತಿ
119) ಬೊದಪುದಿತಿ
120) ಬೈಲಪತಿ, ಬೈಲಾಪತಿ
121) ಭಾರತ ಕಾವಿ, ಭರತಾಕಾಯಿ ಭಾರತಿ
122) ಮಾದರೆಯೊಳು
123)ಮಾಕಿರೆಡ್ಡಿ
124) ಮಾದೆನ, ಮಾದೆನಂ, ಮಾದೆನ್ನಿ, ಮಾಡಿನಿ
125) ಮಾಮಿದಿ
126) ಮೆಕಲಾ , ಮೈಕಲಾ
127) ಮಿರಿಯಾಲ
128) ಮೊಡಂ
129) ಮೂಲಾ
130) ಮೋಟಂ, ಮೊಗುತಂ
131) ಮೊಟೆ , ಮೊತಿ
132) ಮೊತಿಕುರಿ, ಮೊತಕುರಿ
133) ಮೊತು, ಮೊತಂ
134) ಮುಗ್ಗೊಲು
135) ಯಾಲಪರ್ತಿ
136) ಯಾಲವರ್ತಿ, ಯಾಲಮರ್ತಿ
137) ಯಾಡಪಲ್ಲಿ, ಯಡವಲ್ಲಿ
138) ರಚಿತಿ, ರಾಸುತಿ, ರಾಚೂಟ
139) ರಾನ್ರಾಲೊಲು
140) ರಾಸುಸುರಿ
141) ರೆವಲ್ಲೆ, ರೆವೆಲ್ಲಿ,
142) ರೆವಲ್ಲಾ
143) ರುದ್ರಾಕ್ಷಲಾ
144) ವದ್ದಿ, ಒದ್ದಿ
145) ವನಂ
146) ವಕದಂಡಂ

147) ವನ್‌ಧ್ರಾಸಿ, ಆಂಧ್ರಾಸಿ, ಅನಾರಸಿ, ವನದಾಸಿ 148) ವಿರ್ನಾಪಲ್ಲಿ

149) ವಿನಕೊಂಡಾ, ವಿನುಕೊಂಡಾ, ಇನುಕೊಂಡಾ 150) ವೆಮುಲಾ, ಎಮುಲಾ

151) ವಿರ್ಲಾಪಲ್ಲಿ, ಇರ್ಲಾಪಲ್ಲಿ 152) ವಿಭೂತಿ, ಉಜಿದಿ, ಇಜ್ಜಿ

153) ಶಂಕು, ಶಂಕುಲಾ 154) ಶಿವದೆವುನಿ

155) ಶಿವರಾತ್ರಿ 156) ಸದುಲಾ

157) ಸಲ್ಲಾ 158) ಸೆಜರ್ಲಾ

159) ಸಿರಿಗಿರಿ, ಶ್ರೀಗಿರಿ 160) ಸಿರಿಶ್ಯಾಲ, ಶ್ರೀ ಶೈಲ

161) ಸಿರಿವತಿ, ಸಿರುವತಿ, ಸಿರುಪತಿ 162) ಸೊಮದಾನಿ

163) ಹಜ್ಜದಿ 164) ಹಪ್ಪು

ಈ ಬಳಿಗಳು ಬುಡ್ಗ ಜಂಗಮರ ಮನೆತನದ ಅಡ್ಡ ಹೆಸರುಗಳಾಗಿವೆ[47]. ಇವು ಮತಸಂಬಂಧ , ಸಂಸ್ಕೃತಿ ಸಂಬಂಧ, ಗ್ರಾಮನಾಮ ಸಂಬಂಧ, ವೃಕ್ಷ ಸಂತತಿ ಸಂಬಂಧ, ಪ್ರಾಣಿ, ಪಶು - ಪಕ್ಷಿ ಸಂಬಂಧ, ಆಯುಧ ಆಭರಣ ಸಂಬಂಧಗಳಾಗಿವೆ.

2.4.3 - ಪಗರಣೆಗರು - ಬುಡ್ಗ ಜಂಗಮರು (ವೇಷಗಾರರು) :

ಹನ್ನೆರಡನೆಯ ಶತಮಾನದ ವಚನ ಚಳುವಳಿ ಮತ್ತು ಅದಕ್ಕಿಂತ ಮೊದಲು ಬುಡ್ಗ ಜಂಗಮರನ್ನು ಪರಗಣಿಗರು[48], ವೇಷಗಾರರು, ಬಹುರೂಪಿಗಳು, ಜಾತಿಗಾರರು, ಡೊಂಬರು, ಜಾತಿಡೊಂಬರು[49], ಮುಂತಾದ ಹೆಸರಿನಿಂದ ಕರೆಯಲ್ಪಡುತ್ತಿರುವುದು ಕಂಡು ಬರುತ್ತದೆ. ವೇಷಗಾರ ಅಥವಾ ಬಹುರೂಪಿ ಕಲೆ ಪಗರಣ ವರ್ಗದಿಂದ ಬಂದಿದೆ ಎಂದು ಊಹಿಸಿದ್ದಾರೆ. ಡಾ. ಎಂ. ಎಂ. ಕಲಬುರ್ಗಿಯವರು ವೇಷಗಾರರ ಪ್ರಾಚೀನತೆಯನ್ನು ಕುರಿತು ಪ್ರಸ್ತಾಪಿಸುತ್ತ "ಬೀದಿ ಆಟವೂ ಜಾನಪದೀಯವೂ ಆಗಿರುವ ಇಂದಿನ ಬಹುರೂಪಿ ವೇಷಗಾರಿಕೆ, ಪ್ರಾಚೀನ ಕಾವ್ಯಗಳು ಉಲ್ಲೇಖಿಸುವ ಪಗರಣ ವರ್ಗಕ್ಕೆ ಸೇರುತ್ತವೆ. ಈಗ ತಿಳಿದ ಮಟ್ಟಿಗೆ ಕನ್ನಡದಲ್ಲಿ ಈ ವೇಷಗಾರಕೆಯ ಪಗರಣದ ಉಲ್ಲೇಖ ಕವಿರಾಜಮಾರ್ಗ ವಡ್ಡಾರಾಧನೆಗಳಷ್ಟು ಪ್ರಾಚೀನ" [50] ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕನ್ನಡದ ಮೊಟ್ಟ ಮೊದಲ ಉಪಲಬ್ಧ ಕೃತಿ ಹಾಗೂ ಲಾಕ್ಷಣಿಕ ಗ್ರಂಥವಾದ ಕವಿರಾಜ ಮಾರ್ಗದಲ್ಲಿ 'ಪಗರಣ' ಉಲ್ಲೇಖಗೊಂಡಿದ್ದು, ಇದೊಂದು ಹಾಸ್ಯಪ್ರಧಾನ ಕಲೆ ಎಂದು ಹೇಳಲಾಗಿದೆ.

"ಮಿಗೆ ದುಷ್ಕರ ಕಾವ್ಯಂಗಳೊ
ಳಗರ್ಹಿತ ಪ್ರಾಯಮಕ್ಕುಮಾ ಶೃತಿ ಕಷ್ಟಂ
ಪಗರಣದೊಳುಪಿದ ಮೂವಿಂ
ನಗಿಸುಗು ಮಪ್ಪದಪೆನಲ್ಲಿಗಂತದ ದೋಷಂ" [51]

ಪಗರಣದಲ್ಲಿ, ಕೆಟ್ಟ ಮಾತು , ಕೆಟ್ಟ ಅರ್ಥ , ಕಲ್ಪನೋಕ್ತಿ ಕಷ್ಟ ಇವು (ಕಾವ್ಯ ದೋಷಗಳೆನಿಸಿದರೂ) ದೋಷವೆನಿಸುವುದಿಲ್ಲ ಎನ್ನುವುದು ಈ ಪದ್ಯದ ತಿರುಳಾಗಿದೆ. ಇದು ಪಗರಣದ ಲಕ್ಷಣಗಳನ್ನು ತಿಳಿಸಿಕೊಡುತ್ತದೆ.

ಕನ್ನಡದ ಗದ್ಯ ಕೃತಿಯಾದ 'ವಡ್ಡಾರಾಧನೆ 'ಯಲ್ಲೂ ಪಗರಣದ ಉಲ್ಲೇಖವಿದೆ. ಕಾರ್ತಿಕೇಯ ಮುನಿಗಳ ಕತೆಯಲ್ಲಿ ಈ ಕುರಿತು ಪ್ರಸ್ತಾಪಿಸಲಾಗಿದೆ.

"ಅದಂ ಕೇಳ್ದು ಲೋಗರ್ ಪಗರಣಿಗರಾಗಿ ಎನಿತಾನುಂ ತೆರದ ರೂಪುಗಳಂ ಕೈಕೊಂಡು ಮರೆಮಾಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಂ ಎಂತುಂ ಅಳೆ ವಳ್ಗಿದಿರ್ದೊಡೆ ಒರ್ವಂ ಕಱಿಯ ಕಚ್ಚುಟ ಮನುಟ್ಟು ಮೈಯೆಲ್ಲಂ ಮಸಿಯಂ -ಪೂಸಿ ಬೋಳದಲೆವೆರಸು ಬಾಯೊ-ಳ್ ಕವಡಿಕೆಗಳಂ ಪಲ್ಗಳಂತೆ ಮಾಡಿ, ಕುಂಚಮುಂ ಗುಂಡಿಗೆ-ಯುಂ ಪಿಡಿದು -ಬರ್ಪೊನನ್ ಅರಸಂ ಇಂತೆಂದನ್, ಎಲೆ 'ಅರಸಿ ನಿನ್ನ ಸಹೋದರಂಗಳಪ್ಪ ಭಟಾರರ್ ಆ ಬರ್ಪೊರ್' ಎಂದು ಪೇಳ್ದಾಗಳ್ 'ಎಲ್ಲಿರ್ದ್ದರ್' ಎಂದು ಎಳ್ದು ನೋಡಿ ಕಾಣದೆ ಆ ರೂಪಂ ಕಂಡು ನಕ್ಕು ದುಃಖಮಂ ಮರೆದೊಳ್, ಆಗಳ್ ಆ ನಗಿಸಿದ ಪಗರಣಿಗಂಗೆ ಪಿಱಿದು ಕಸವರಮನಿತ್ತೊನ್. ಅಂದಿಂದೆ ಇತ್ತ ಬಾದುಬ್ಬೆಯ ಪರ್ವಮುಂ ಪಗರಣದ ಆಟ ಪಾಟಮುಂ ಆದವು"[52]. ಕಾರ್ತಿಕೇಯ ಮುನಿಯ ಈ ಕಥೆಯಲ್ಲಿ ವೀರಶ್ರೀ ಎಂಬ ರಾಣಿ ತನ್ನ ಅಣ್ಣನನ್ನು ಕಳೆದುಕೊಂಡು ದುಃಖಿಸುತ್ತಿರುವ ಸಂದರ್ಭದಲ್ಲಿ ಅವಳ ನೋವನ್ನು ಮರೆಸಿ, ಅವಳು ನಗುವಂತೆ ಮಾಡಿದವರಿಗೆ ಒಸಗೆ ಮಾಡಿಸುತ್ತೇನೆ ಎಂದು ರಾಜ ಘೋಷಿಸಿದಾಗ , ಒಬ್ಬ ಪಗರಣಿಗ ಮೇಲಿನಂತೆ ವೇಷಹಾಕಿ, ಅವಳನ್ನು ನಗಿಸುವ ಪ್ರಯತ್ನ ಮಾಡಿದ್ದಾನೆ. ಇಲ್ಲಿಯ ವರ್ಣನೆ, ವಿಕೃತ ವೇಷ ಭಾಷೆಯಿಂದ ನಗಿಸುವ ಒಂದು ಸಾಮಾನ್ಯ ಸೋಗುಗಳ ಸರಣಿ 'ಪಗರಣ' ಎಂಬುದು ಸ್ಪಷ್ಟವಾಗುತ್ತದೆ.

ತದ ನಂತರ ವಚನಕಾರರು ಪಗರಣಿಗರ ಕುರಿತು ಹೇಳಿದ್ದಾರೆ.

ಕೇಶಕಾಷಾಯಾಂಬರ ವೇಷಲಾಂಛನವಾದಡೇನೋ
ಗ್ರಾಸಕ್ಕೆ ಭಾಜನರಲ್ಲದೆ ಅಂಗಕ್ಕೆ ಭಾಜನರಲ್ಲ
ಈ ಆಸೆಯ ವೇಷವ ಕಂಡಡೆ
ಕಾರ ಹುಣ್ಣಿಮೆಯ ಹಗರಣವೆಂಬೆ ಕಾಣಾ
ಕೂಡಲ ಚನ್ನ ಸಂಗಮದೇವಾ [53]

ಇಂತಹ ಪಗರಣ ಜನ ಸಾಮಾನ್ಯರು ಬಾದುಬ್ಬೆ ಮತ್ತು ಕಾರಹುಣ್ಣಿಮೆಯ ಹಬ್ಬಗಳಂದು ಪ್ರದರ್ಶಿಸುತ್ತಿದ್ದರು. ನಯಸೇನನ ಧರ್ಮಾಮೃತದಲ್ಲಿಯೂ ಪಗರಣದ ಸ್ವರೂಪ ಲಕ್ಷಣಗಳ ವಿವರವಿದೆ.

"ಪಗರಣಮಂ ನೋಡುವಂತೆ ನಗುತ್ತುಂ [54] *"*
ಮೂಲೆಯರ್ಬಡಿವ ಪಱಿಯೋಜೆಗಾಡುವ ಪಗರಣಿಗರು
ಕಂಡು ವರ್ನಗುವರಲ್ಲದೆ ಯವರಾಟಕ್ಕೆ ಲಕ್ಷಣಂ ನೋಡರ್ [55] *"*
"ಪಗರಣಿಗನಂತೆ ವಿಪರೀತನಾಗಿ [56] *"*
"ಮೂರು ದಿನದ ಪಗರಣಕ್ಕೆ ಗಡ್ಡ ಮೀಸೆ ಮಂಡೆಯಂ ಬೋಳಿಸಿಕೊಳ್ಳುವಂತೆ [57] *"*

ಈ ಮೇಲಿನ ಉಕ್ತಿಗಳು ಪಗರಣದ ಸ್ವರೂಪ ಲಕ್ಷಣಗಳನ್ನು ವಿವರಿಸುತ್ತವೆ.

ವಿಪರೀತ ವೇಷ ಭೂಷಣಗಳಿಂದ ನಗಿಸುವುದೇ ಪಗರಣದ ಪ್ರಮುಖ ಉದ್ದೇಶವಾಗಿತ್ತು. ಪಗರಣವನ್ನು ಹವ್ಯಾಸಿ ಕಲಾವಿದರು ಸಾಂದರ್ಭಿಕವಾಗಿ ಅಭಿನಯಿಸುತ್ತಿದ್ದರು. ಪಗರಣದ ಸ್ತ್ರೀ ಪಾತ್ರವನ್ನು ಪುರುಷರೇ ನಿರ್ವಹಿಸುತ್ತದೆ. ನಯಸೇನನ ಕಾಲಕ್ಕೆ ಅದು ಸತತವಾಗಿ ಮೂರು ದಿನಗಳವರೆಗೆ ನಡೆಯುತ್ತಿತ್ತು. ಆದರೆ ಗಂಭೀರ ಕಲೆ, ಸಾಹಿತ್ಯದ ಯಾವುದೇ ನೀತಿ ನಿಯಮಗಳಿಂದ ಕೂಡಿದ ಲಕ್ಷಣಗಳು ಅದಕ್ಕಿರಲಿಲ್ಲವೆಂದು ನಯಸೇನನ ಧರ್ಮಾಮೃತದಿಂದ ತಿಳಿದು ಬರುತ್ತದೆ. ಮುಂದೆ ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ, ಕೇಶಿರಾಜನ 'ಶಬ್ದ ಮಣಿ ದರ್ಪಣ' ಮುಂತಾದ ಕೃತಿಗಳಲ್ಲಿ ಪಗರಣದ ಉಲ್ಲೇಖಗಳಿವೆ.

ಪಗರಣವು ವೇಷಗಳ ಸರಣಿ ಮತ್ತು ಪ್ರಾಚೀನ ನಾಟಕದ ಲಕ್ಷಣಗಳನ್ನು ಗರ್ಭೀಕರಿಸಿಕೊಂಡಿದ್ದ ಒಂದು ಜಾನಪದ ಕಲಾಪ್ರಕಾರ. 'ಇದು ಜನ ಸಾಮಾನ್ಯರು ಕೇವಲ ಮನರಂಜನೆಗಾಗಿ ಹಾಕುತ್ತಿದ್ದ ವೇಷವಾಗಿದ್ದಿತು. ಇದರ ಉದ್ದೇಶ ಹಾಸ್ಯ. ಇದರಲ್ಲಿ ಆಟ ಪಾಟಗಳು, ವಿನೋದ, ವಿಡಂಬನೆ, ನೃತ್ಯ ಮುಂತಾದ ಅಂಶಗಳು ಪ್ರಮುಖವಾಗುತ್ತವೆ'. ಇಲ್ಲಿ ಶ್ರವ್ಯಕ್ಕಿಂತ ದೃಶ್ಯಕ್ಕೆ ಹೆಚ್ಚು ಪ್ರಧಾನ್ಯತೆ. ಇದರರ್ಥ ಇದೊಂದು ದೃಶ್ಯ ಪ್ರಧಾನ , ಅಭಿನಯ ಪ್ರಧಾನವಾದ ಮತ್ತು ವೇಷ ಪ್ರಧಾನ ಕಲೆ. ಇದು ಬೇರೆ ಬೇರೆ ವೇಷಗಳ ಮಾಲಿಕೆ. ಹವ್ಯಾಸಿ ಕಲಾಪ್ರಕಾರವಾಗಿದ್ದ, ವೇಷಗಾರಿಕೆಯನ್ನು ಪ್ರಧಾನವಾಗಿಯುಳ್ಳ ಪಗರಣ ಆಮೇಲೆ ವೃತ್ತಿಯಾಗಿ ಪರಿಣಮಿಸಿರುವ ಸಾಧ್ಯತೆಯಿದೆ[58] ಎನ್ನುವ ಡಾ. ಚಿದಾನಂದ ಮೂರ್ತಿಯವರ ಅಭಿಪ್ರಾಯ: ವೇಷಗಾರಿಕೆ ಪಗರಣದ ಮುಂದುವರಿದ ರೂಪವೇ ಆಗಿದೆ. ಪಗರಣದ ಮೂಲ ಉದ್ದೇಶ ಮತ್ತು ಅದರ ಲಕ್ಷಣಗಳನ್ನು ವೇಷಗಾರಿಕೆ ಗರ್ಭೀಕರಿಸಿಕೊಂಡಿದೆ ಎನ್ನುವುದರ ಮೇಲೆ ಬೆಳಕು ಚೆಲ್ಲುತ್ತದೆ. ಆದರೆ ವಡ್ಡಾರಾಧನೆಯ ಕಾಲಕ್ಕೆ ಹಾಸ್ಯ ಪ್ರಧಾನ ವೇಷ ಎಂಬ ಅರ್ಥ ಪಡೆದಿದ್ದ ಪಗರಣವು ನಂತರದಲ್ಲಿ ಅರ್ಥ ವ್ಯತ್ಯಾಸ ಹೊಂದುತ್ತ ಹಾಸ್ಯಾಸ್ಪದವಾದ ಜಗಳ ಗಲಾಟೆ ಎಂಬಲ್ಲಿಗೆ ಬಂದು ನಿಂತಿದೆ. ಇದನ್ನು ಡಾ.ಚಿದಾನಂದ ಮೂರ್ತಿಯವರು "ಪಗರಣ ಇತಿಹಾಸ ಮತ್ತು ಸಮಕಾಲೀನದಲ್ಲಿ" ಎಂಬ ಲೇಖನದಲ್ಲಿ ಕಾಲಾಂತರದಲ್ಲಿ ಹೇಗೆ ಪಗರಣದ ಅರ್ಥ ವ್ಯತ್ಯಾಸ ಹೊಂದಿ ಬದಲಾಗಿದೆ ಎಂಬುದನ್ನು ಹೀಗೆ ವಿವರಿಸಿದ್ದಾರೆ.

ಆದಿಯಿಂದ (?) ಕ್ರಿ.ಶ. ಸು. 1000 ದವರೆಗೆ	ಪಗರಣ =		ಹಾಡು ಮತ್ತು ಮಾತು ಇರುವ ವಿನೋದಪರ ವೇಷ
ಕ್ರಿ.ಶ. ಸು. 1000 ದಿಂದ ಕ್ರಿ.ಶ. ಸು. 1600 ವರೆಗೆ	ಪಗರಣ = (ಹಗರಣ)	1.	ಹಾಡು ಮಾತು ಇರುವ ವಿನೋದ ಪರ ವೇಷ
		2.	ತೋರಿಕೆ : ಆಡಂಬರ : ವ್ಯರ್ಥ ಪ್ರದರ್ಶನ , ಹಾಸ್ಯಾಸ್ಪದ
ಕ್ರಿ.ಶ. ಸು. 1600 ರಿಂದ	ಹಗರಣ =	1.	ತೋರಿಕೆ : ಆಡಂಬರ್ : ವ್ಯರ್ಥ

ಪ್ರದರ್ಶನ, ಹಾಸ್ಯಾಸ್ಪದ

2. ಜಗಳ, ಗಲಾಟೆ, ಅದರಲ್ಲೂ ಹಾಸ್ಯಾಸ್ಪದ ವಾದ ಜಗಳ ಮತ್ತು ಗಲಾಟೆ

ಈಗ ಹಗರಣ = ಜಗಳ, ಗಲಾಟೆ , ಅದರಲ್ಲೂ ಹಾಸ್ಯಾಸ್ಪದ ವಾದ ಜಗಳ ಮತ್ತು ಗಲಾಟೆ.[59]

ಈ ರೀತಿಯ ಲಕ್ಷಣಗಳನ್ನೊಳಗೊಂಡ ಪಗರಣದಲ್ಲಿ ವೇಷಗಾರರ ಪ್ರಾಚೀನತೆಯನ್ನು ಹುಡುಕುವುದು ಸಮಂಜಸವಲ್ಲವೆನಿಸುತ್ತದೆ. ವೇಷಗಾರಿಕೆ - ಇದೊಂದು ಗಂಭೀರಕಲೆ, ವೃತ್ತಿ ಗಾಯಕರು ಕಾಲಾನುಕಾಲದಿಂದ ಇದನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಮಾನವೀಯ ಮೌಲ್ಯಗಳು, ಸಾಮಾಜಿಕ ಪ್ರಜ್ಞೆ, ಜೀವನ ಸಂದೇಶ ಇವುಗಳಲ್ಲಿ ಕೂಡಿರುವುದರಿಂದ ಇಂತಹ ನಿರ್ದಿಷ್ಟ ಕಥಾ ವಸ್ತುವಿಗೆ ಬದ್ಧವಾಗಿರುವುದರಿಂದ ಈ ಕಲೆ ಇಂದಿಗೂ ಜನಮನದಲ್ಲಿ ಜೀವಂತವಾಗಿದೆ.

2.4.4 - ಬುಡ್ಗ ಜಂಗಮರು - ಬುಡ್ಗ ಜಂಗಾಲರು :

ಬುಡ್ಗ ಜಂಗಮರನ್ನು ಬುಡ್ಗ ಜಂಗಾಲರೆಂದು ಕರೆಯುತ್ತಾರೆ. ಬುಡ್ಗ ಜಂಗಮರು ತಮ್ಮನ್ನು ಶಿವ ಜಂಗಾಲರು, ಶ್ರೀ ಜಂಗಾಲರು, ಸಿರಿ ಜಂಗಾಲರೆಂತಲೂ ಕರೆದುಕೊಳ್ಳುತ್ತಾರೆ. (ಬುಡ್ಗ ಜಂಗಾಲು - ಎನ್ . ಆರ್. ವೆಂಕಟೇಶಂ ಪುಟ 41). ಕಾರಣ 'ಜಂಗಮ' ಎನ್ನುವ ಪದ ಬುಡ್ಗ ಜಂಗಮರ ಬುಡಕಟ್ಟಿನ ಮೂಲ ಲಕ್ಷಣಗಳಿಂದಾಗಿ ಕಾಲಾಂತರದಲ್ಲಿ ಬದಲಾದಂತೆ ತೋರುತ್ತದೆ. ಬುಡ್ಗ ಜಂಗಾಲರು, ಸಿರಿ ಜಂಗಾಲರು ಎಂದು ಕರೆದಿರುವುದಕ್ಕೆ ಉರ್ದುವಿನ ಪ್ರಭಾವ ಕಾರಣ ಎನ್ನಬಹುದು. ಬುಡ್ಗ ಜಂಗಮರು ಹೆಚ್ಚಾಗಿ ಆಂಧ್ರದಲ್ಲಿ ಕಂಡು ಬರುವ ಅಲೆಮಾರಿ ಜನಾಂಗ. ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟ ಇಂದಿನ ತೆಲಂಗಾಣ ಮತ್ತು ರಾಯಲಸೀಮಾ ಪ್ರದೇಶದಲ್ಲಿ ಕಾಡಿನಲ್ಲಿ ವಾಸವಾಗಿರುವ ಜನರನ್ನು ಜಂಗಾಲರು ಎಂದು ಕರೆದಿದ್ದಾರೆ. ಈ ಜಂಗಾಲ ಎನ್ನುವ ಪದ ಉರ್ದುವಿನ 'ಜಂಗಲ' ಎನ್ನುವ ಪದದಿಂದ ಬಂದಿದೆ. ಜಂಗಲ್ ಎನ್ನುವುದು ತೆಲುಗಿನಲ್ಲಿ ಜಂಗಾಲು ಆಗಿದೆ. ಉರ್ದುವಿನಲ್ಲಿ ಜಂಗಲ್ ಎಂದರೆ ಕಾಡು ಎಂದರ್ಥ ಕಾಡಿನಲ್ಲಿ ವಾಸಿಸುತ್ತ ಜೀವನೋಪಾಯಕ್ಕಾಗಿ ಬುಡ್ಗ ವಾದ್ಯ ಹಿಡಿದು ಸದಾ ಸುತ್ತುವವರನ್ನು 'ಬುಡ್ಗ ಜಂಗಾಲರು' ಎಂದು ಕರೆದಿದ್ದಾರೆ [60].

'The Mysore Tribes and Caste' ಎನ್ನುವ ಗ್ರಂಥದಲ್ಲಿ ಜಂಗಾಲರನ್ನು ಕುರಿತು ಹೀಗೆ ವಿವರಿಸಲಾಗಿದೆ. " Jangalu is the Telugu word Kandrada Jangalu. In the family countries, they are called Jangam Andies" and In religion, the Jangalas are Saivas'. The Jangalas are originally beggers[61]. ಎಂದು ಬುಡ್ಗ ಜಂಗಾಲರನ್ನು ಕುರಿತು ಹೇಳಿದ್ದಾರೆ.

2.4.5 - ಬುಡ್ಗ ಜಂಗಮರು - ಬೇಡ ಜಂಗಮರು :

ಬುಡ್ಗ ಜಂಗಮರು ವೃತ್ತಿ ಕಲಾವಿದರೂ ಹೌದು. ಬೇಟೆಗಾರರೂ ಹೌದು. ಈ ಜನಾಂಗವನ್ನು ಅವರು ಕಲಾಪ್ರದರ್ಶನದಲ್ಲಿ ಬಾರಿಸುವ ವಾದ್ಯ ಪರಿಕರದಿಂದ ಬುಡ್ಗ ಜಂಗಮರೆಂದು ಕರೆದರೆ, ಅವರಲ್ಲಿಯ ಬೇಟೆಗಾರಿಕೆ ಪ್ರವೃತ್ತಿಯಿಂದ ಬೇಡ ಜಂಗಮರೆಂದು ಕರೆದಿದ್ದಾರೆ. ಬೇಟೆಯೇ ಇವರ ಜೀವನಾಧಾರ. ಹೀಗಾಗಿ ಇವರನ್ನು ಜನಪದರು ಬೇಡ ಜಂಗಮರೆಂದು ಕರೆದಿದ್ದಾರೆ.

ಥರ್ಸ್ಟನ್‌ರು ತಮ್ಮ 'Caste and tribes of Southern India' ಕೃತಿಯಲ್ಲಿ ಬೇಡರನ್ನು ಉಲ್ಲೇಖಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಮ್ಯಾನುವಲ್ ದಿ 'ಬೇಡ' ಜಾತಿಯನ್ನು ಬೇಡರ್, ಬೇಡ, ಬ್ಯಾಡ ಎಂದಿದೆ[62]. 1901 ರ ಮದ್ರಾಸ್ ಜನಸಂಖ್ಯಾ ಸಂಗ್ರಹ ವರದಿಯು ವೀರಶೈವರ ನಡುವೆ ವಾಸಿಸುವ ಬೇಡರು ತಮ್ಮನ್ನು 'ಸದರಿ' (ಸದರು) ಎಂದು ಹೇಳಿಕೊಂಡಿದ್ದಾರೆ[63]. ಡಾ. ಕೆ. ಎಮ್. ಮೈತ್ರಿಯವರು ಬೇಡ ಜಂಗಮ ಮತ್ತು ಬುಡ್ಗ ಜಂಗಮ ಇವೆರಡೂ ಸಮಾನಾರ್ಥಕ ಪದಗಳು. ಅದನ್ನು ಈ ರೀತಿಯಾಗಿ ವಿವರಿಸಿದ್ದಾರೆ. ಬೇಡ ಎಂಬ ಪದವೇ ಬೇಟೆಗಾರಿಕೆಯ ಸಂಕೇತವಾಗಿರುವುದು. ಬೇಟೆಗಾರಿಕೆಯ ಆರಂಭದ ಜನರೇ ಬುಡರು. ಬುಡರೇ ಕಾಲಾಂತರದಲ್ಲಿ ಬುಡ್ಗರಾಗಿರುವರು. ಕನ್ನಡ ಕಸ್ತೂರಿ ಕೋಶವು ಬುಡ ಎಂಬೀ ಪದಕ್ಕೆ ತಳ, ಆದಿ ಕೆಳಭಾಗ, ವಂಶ ಇತ್ಯಾದಿ ಅರ್ಥಗಳನ್ನು ನೀಡಿದೆ. ಆದರೆ ಕಿಟ್ಟೆಲ್ ಕೋಶ 'ಬುಡ' ಎಂಬ ಪದಕ್ಕೆ 'ಡಮರು' ಎಂದು ಅರ್ಥೈಸಿದೆ. ಬೇಟೆಗಾರಿಕೆ ಮೂಲದ ಬುಡರು ಕಾಲಾಂತರದಲ್ಲಿ ಡಮರುದಂತಹ ವಾದ್ಯವನ್ನು ಶೈವೋಪಾಸನೆಗೆ ಬಳಸಿರುವಂತೆ ಭಾಸವಾಗುತ್ತದೆ. ಆ ನಂತರ ಡಮರುವಿನ ಬದಲಾಗಿ ಡಿಮ್ಕಿ ಯಂತಹ ವಾದ್ಯವನ್ನು ನುಡಿಸುತ್ತ ದೈವಾರಾಧನೆ ಮುಂದುವರಿಸುತ್ತ ದೈವಗಳ ವರ್ಣನೆಯನ್ನು ಪಾತ್ರಗಳ ಮುಖೇನ ಪ್ರದರ್ಶಿಸುತ್ತ ಭಿಕ್ಷಾಟನೆಗೆ ಇಳಿದಂತಿದೆ. ಬುಡದವರಾದ ಇವರ ಡಿಮ್ಕಿ ವಾದ್ಯ ಕಾಲಾಂತರದಲ್ಲಿ ಬುಡ್ಗರ ವಾದ್ಯವಾಗಿರುವ ಸಾಧ್ಯತೆಗಳಿವೆ. ಅಂದರೆ ತಮ್ಮ ಸಮುದಾಯದ 'ಬುಡಗ' ಹೆಸರನ್ನೇ ತಾವು ಬಾರಿಸುವ ಡಿಮ್ಕಿ ವಾದ್ಯಕ್ಕೆ ಸಾರ್ವಜನಿಕರು ಆನಂತರ ಕೊಟ್ಟಂತಿದೆ.

ಬೇಡ ಮತ್ತು ಬುಡ ಎಂಬೀ ಪದಗಳು ಅಚ್ಚ ಕನ್ನಡ ಭಾಷೆಯವೇ ಆಗಿರುವವು. ಹೀಗಾಗಿ ಅವರು ಮೂಲತಃ ಕನ್ನಡಿಗರೆಂದೆ ಸಾಧಿತವಾಗುವುದು. ಕನ್ನಡ ಮೂಲದ ಇವರು ಅಲೆಮಾರಿಗಳಾಗಿರುವುದರಿಂದ, ಹಾಗೂ ತೆಲುಗು ಭೂಪ್ರದೇಶ ದಲ್ಲಿರುವುದರಿಂದಲೂ ಅವರ ಮನೆ ಮಾತು ತೆಲುಗು ಎಂಬುದು ಮೇಲ್ನೋಟಕ್ಕೆ ಕಂಡರೂ ಅವರಿಗೆ ಅವರದ್ದೆ ಆದ ಒಂದು 'ಬುಡ್ಗ' ಭಾಷೆ ಇತ್ತೆಂಬುದನ್ನು ಅಲ್ಲಗಳೆಯುವಂತಿಲ್ಲ. ಅದೇ ಅವರ ನಿಜವಾದ ಮಾತೃಭಾಷೆ. ನಗರೀಕರಣ, ಸಂಸ್ಕೃತೀಕರಣ ಮತ್ತು ಪಾಶ್ಚಾತ್ಯೀಕರಣಗಳ ಪ್ರಭಾವದಿಂದ ಅವರಲ್ಲಿಯ ಭಾಷೆಗೆ ಕೊಡಲಿ ಪೆಟ್ಟು ಬಿದ್ದು ಇಂದು ಅವಸಾನದ ಸ್ಥಿತಿಯಲ್ಲಿದೆ. ಆ ಭಾಷೆಯನ್ನು ಉಳಿಸಿ ಬೆಳೆಸುವುದು ಕಷ್ಟ ಸಾಧ್ಯವೆ. ಬೇಡ ಮತ್ತು ಬುಡ್ಗ ಪದಗಳು ಬೇಡ ಮತ್ತು ಬುಡ್ಗ ಸಮುದಾಯದ ಜೀವನ ವಿಧಾನದ ಮೇಲೆ ಕರೆಯಲ್ಪಡುವ ಪದಗಳೆಂಬುದು ವಿದಿತವಾಗುವುದು[64]. ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಬೇಡ ಎನ್ನುವ ಪದ ಬೇಟೆಗಾರಿಕೆ ಪ್ರವೃತ್ತಿಯಿಂದ ಬಂದಿದೆಯಾದರೂ ಬುಡ್ಗ ಜನಾಂಗದ

ಸಾಮಾಜಿಕ ಸ್ಥಾನ ಮಾನ , ವೃತ್ತಿ ಹಾಗ ಇವರ ಸ್ವಭಾವವನ್ನು ಅವಲಂಭಿಸಿಯೂ ಬಂದಿದೆಯನಿಸುತ್ತದೆ. ಬೇಡ ಎನ್ನುವುದು ಕನ್ನಡದ ನಿಷೇಧ ರೂಪ. ಅದನ್ನು ರೆವರೆಂಡ್ ಕಿಟ್ಟೆಲ್ ಅವರು ತಮ್ಮ ಕನ್ನಡ - ಇಂಗ್ಲಿಷ್ ಶಬ್ದ ಕೋಶದಲ್ಲಿ ಹೀಗೆ ಹೇಳಿದ್ದಾರೆ. ಬೇಡ ಎನ್ನುವುದು ನಾವು ಈಗಾಗಲೇ ನೋಡಿದಂತೆ ಬೇಟೆಗಾರ, ಅರಣ್ಯದಲ್ಲಿ ವಾಸಿಸುವವ, ಎನ್ನುವ ಅರ್ಥ ಕೊಟ್ಟರೆ, ಇನ್ನೊಂದು ಅರ್ಥದಲ್ಲಿ , ಬೇಡ ಅಂದರೆ, ಒಲ್ಲೆ ಎನ್ನುವ ನಿಷೇಧ ಅರ್ಥವನ್ನು ಕೊಡುತ್ತದೆ. 'ಬೇಡ' ಇದರರ್ಥ ಬೇಡವಾದವನು. ಸಮಾಜಕ್ಕೆ ಬೇಡವಾದವನು. ಅಂದರೆ ಸಮಾಜದ ಹೊರಗಿರುವವನು ಎಂದರ್ಥವಾಗುತ್ತದೆ. ಲೋಕಾಪವಾದದಿಂದ ಜನರಿಗೆ ಬೇಡಾದವನು ಎನ್ನುವ ಅರ್ಥವೂ ಕೊಡುತ್ತದೆ[65]. ಸಮಾಜದ ನಿಯಮ ನಿಷ್ಠೆ ಮುರಿದು ನಿಷೇಧಕ್ಕೊಳಗಾದ ಒಂದು ಬುಡಕಟ್ಟಿಗೆ ಬೇಡ ಜಂಗಮ ಎಂದು ಸಹ ಹೇಳಲಾಗಿದೆ[66]. ಬಹುಷಃ ಬುಡ್ಗ ಜಂಗಮರು ಸಮಾಜದಿಂದ ಬಹಿಷ್ಕೃತರಾಗಿ ಅಲೆಮಾರಿಗಳಾದಂತೆ ತೋರುತ್ತದೆ.

'ಬೇಡ' ಎನ್ನುವುದರ ಇನ್ನೊಂದರ್ಥ ಅಂಜುಬುರುಕ ಮನುಷ್ಯ[67]. ಡಾ. ಎನ್. ಆರ್. ವೆಂಕಟೇಶಂ ಅವರು ತಮ್ಮ 'ಬುಡ್ಗ ಜಂಗಾಲು' ಕೃತಿಯಲ್ಲಿ ಬುಡ್ಗ ಜಂಗಮರನ್ನು 'ಅಂಜು ಬುರಕ ಜಂಗಮ' (ಪಿರಿಕಿ ಜಂಗಮ) ರೆಂತಲೂ ಕರೆಯುತ್ತಾರೆ ಎಂದು ಹೇಳಿದ್ದಾರೆ[68]. ಬುಡ್ಗ ಜಂಗಮರದು ಅಂಜಬುರುಕ ಸ್ವಭಾವ. ಯಾರಾದರೂ ಇವರನ್ನು ಹೆದರಿಸಿದರೆ, ಓಡಿ ಹೋಗುತ್ತಿದ್ದರಾದ್ದರಿಂದ ಇವರಿಗೆ ಅಂಜ ಬುರುಕ ಜಂಗಮ ಎಂಬ ಹೆಸರು ಬಂದಿದೆ. ಹೀಗಾಗಿ ಬೇಡ ಎನ್ನುವ ಶಬ್ದ, ಬೇಟೆಗಾರ, ಬೇಡವಾದವ, ಅಂಜುಬುರಕ ಎನ್ನುವ ಅರ್ಥ ಕೊಡುತ್ತದೆ.

ಬುಡ್ಗ ಜಂಗಮರು ಮೊದಲು ಸಮಾಜದಿಂದ ಬಹಿಷ್ಕೃತರಾಗಿ ಕಾಡು - ಮೇಡುಗಳಲ್ಲಿ ವಾಸಿಸುತ್ತ ಬೇಟೆಗಿಳಿದಂತೆ ತೋರುತ್ತದೆ. ಬರು ಬರುತ್ತ ಇವರು ಜಾನಪದ ಕಲಾವಿದರಾಗಿ ನಾಡಿಗೆ ಬಂದು ಕಲಾಪ್ರದರ್ಶನಕ್ಕಿಳಿದಾಗ ಜನ ಇವರನ್ನು ಒಪ್ಪಿಕೊಂಡಂತೆ ತೋರುತ್ತದೆ. ಜನ ಇವರ ಕಲೆಯನ್ನು ಒಪ್ಪಿಕೊಂಡರೂ ಇವರಿಗೊಂದು ನೆಲೆಸಿಗಲಿಲ್ಲ. ಕಾರಣ ಕಲೆಗಾರಿಕೆಯೇ ಇವರನ್ನು ಅಲೆಮಾರಿಗಳನ್ನಾಗಿಸಿದೆ. ಕಲೆಯೇ ಇವರ ಜೀವನೋಪಾಯದ ಮಾರ್ಗವಾಗಿರುವುದರಿಂದ, ಇವರು ಪೂರ್ಣವಾಗಿ ಕಲೆಯನ್ನೇ ಅವಲಂಭಿಸಿ ಜೀವನ ನಡೆಸುತ್ತಿರುವುದರಿಂದ, ಇವರಿಗೆ ಸ್ವಂತ ನೆಲೆ ಕಂಡು ಕೊಳ್ಳಲು ಸಾಧ್ಯವಾಗಲಿಲ್ಲವೆನಿಸುತ್ತದೆ. ಊರೂರು ತಿರುಗಿ ತಮ್ಮಲ್ಲಿಯ ಕಲೆಯನ್ನು ಪ್ರದರ್ಶಿಸುತ್ತ ಬಿಕ್ಷೆ ಬೇಡುವುದರಿಂದಲೂ ಇವರಿಗೆ 'ಬೇಡ ಜಂಗಮ' ಎಂದೂ ಕರೆದಿರಬಹುದೆನಿಸುತ್ತದೆ.

2.4.6 ಜಂಗಮ - ಬೇಡ ಜಂಗಮ / ಬುಡ್ಗ ಜಂಗಮ :

ಜಂಗಮ ಎನ್ನುವ ಪದಕ್ಕೆ ಹನ್ನೆರಡನೆಯ ಶತಮಾನದಲ್ಲಿ ವಿಶಾಲಾರ್ಥವಿತ್ತು. ಅಂದು ಜಂಗಮ ಪದ ಸಮಷ್ಟಿ ಪ್ರಜ್ಞೆಯ ಹಿನ್ನೆಲೆಯಲ್ಲಿ ಬಳಕೆಯಾಗಿದೆ. ವ್ಯಕ್ತಿ ತನ್ನನ್ನು ತಾನು ಸಮಾಜಕ್ಕಾಗಿ ಅರ್ಪಿಸಿಕೊಂಡು, ಲೋಕೋದ್ಧಾರಕ್ಕಾಗಿ ಯಾರು ಊರೂರು ಪಯಣಿಸುವನೋ ಅವನೇ ಜಂಗಮ. ಜಂಗಮದಲ್ಲಿ ಮೇಲು - ಕೀಳು, ಉಚ್ಚ - ನೀಚ ಭಾವವಿಲ್ಲ. ಗುರುವಿನಿಂದ

ಶರಣದೀಕ್ಷೆಯನ್ನು ಪಡೆದು ಸಂಸ್ಕಾರ ಹೊಂದಿ ದಾಸೋಹಕ್ಕಾಗಿ ಕಾಯಕದಲ್ಲಿ ತೊಡಗಿ ಸಮಾಜಕ್ಕಾಗಿ ತಾನು ಎಂಬ ಭಾವನೆ ಹೊಂದುತ್ತಾನೋ ಅವನೇ ಜಂಗಮ. ಅವನು ಸಮದರ್ಶಿಯೂ, ದ್ವಂದ್ವಾತೀತನೂ, ನಿತ್ಯತೃಪ್ತನೂ, ನಿರ್ಲಿಪ್ತನೂ, ನಿರಹಂಕಾರಿಯೂ, ದುರ್ವ್ಯಸನ ದೂರಿಯೂ ಆಗಿದ್ದು, ಸದಾ ಲೋಕೋದ್ಧಾರಕ್ಕಾಗಿ, ಲೋಕ ವಿಜಯಕ್ಕಾಗಿ ಚಲಿಸುವವನೇ ಜಂಗಮ [69] ಎಂದು ಹೇಳಿರುವುದು ಜಂಗಮನ ವ್ಯಕ್ತಿತ್ವ ಮತ್ತು ಅವನ ಕರ್ತವ್ಯಗಳನ್ನು ಸೂಚಿಸುತ್ತದೆ. ಹನ್ನೆರಡನೆಯ ಶತಮಾನದ ಶರಣ ಸಮೂಹವನ್ನು 'ಜಂಗಮ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಇದರ ಉದ್ದೇಶ ವ್ಯಕ್ತಿ ಮತ್ತು ಸಮಾಜಕ್ಕೆ ಸಂಸ್ಕಾರ ಕೊಟ್ಟು ವ್ಯಕ್ತಿತ್ವದ ಬೆಳವಣಿಗೆ ಮತ್ತು ಸಮಾಜೋದ್ಧಾರ ಮಾಡುವುದೇ ಆಗಿತ್ತು. ಹೀಗಾಗಿ ಸಮಾಜದ ಎಲ್ಲಾ ವರ್ಗದ ಜನ ಬಸವಣ್ಣನವರ ಕ್ರಾಂತಿಯ ಕಹಳೆಗೆ ಓಗೊಟ್ಟು ಕಲ್ಯಾಣಕ್ಕೆ ಬಂದು ವೀರಶೈವ ದೀಕ್ಷೆಯನ್ನು ಪಡೆದು ಜಂಗಮರಾದುದ್ದು. ತಾವು ಮಾಡುತ್ತಿರುವ ವೃತ್ತಿಯಿಂದ ಕಾಯಕ ದಾಸೋಹಿಗಳಾದುದು ಈ ಹಿಂದೆ ವಿವೇಚಿಸಲಾಗಿದೆ.

ಕಲ್ಯಾಣ ಕ್ರಾಂತಿಯ ನಂತರ ಜಂಗಮ ಎನ್ನುವುದು ಕುಲವಾಚಕವಾಯಿತು. ಕಲ್ಯಾಣ ಕ್ರಾಂತಿಯ ನಂತರ ವಲಸೆ ಹೋದ ಶರಣರಲ್ಲಿ (ಜಂಗಮರು) ಮೇಲ್ವರ್ಗದವರು ಅಲ್ಲಲ್ಲಿ ನೆಲೆ ಕಂಡು ಮಠ ಮಾನ್ಯಗಳನ್ನು ಕಟ್ಟಿಕೊಂಡು ಮಠಾಧಿಪತಿಗಳಾದರು. ವೀರಶೈವ ಜಂಗಮರಾದರು. ಕೆಳವರ್ಗದ ಶರಣರು (ಜಂಗಮರು) ನೆಲೆ ಕಾಣದೆ, ಕಾಡು ಮೇಡು ಅಲೆದಾಡುತ್ತ ಜೀವನೋಪಾಯಕ್ಕಾಗಿ ತಮ್ಮ ಕಲಾಪ್ರದರ್ಶನ ಮಾಡುತ್ತ ಊರೂರು ಸಂಚರಿಸ ತೊಡಗಿದರು. ಬರು ಬರುತ್ತಾ ಬುಡ್ಗ ಜಂಗಮರು ಬೇಡ ಜಂಗಮರೆನಿಸಿಕೊಂಡರು. ಸಾಮಾಜಿಕ ಸ್ಥಾನ ಮಾನಗಳು ಬದಲಾದವು. ಮೇಲ್ವರ್ಗದ ಜಂಗಮರು (ವೀರಶೈವ ಜಂಗಮರು) ಸಮಾಜದಲ್ಲಿ ಉನ್ನತ ಸ್ಥಾನ ಪಡೆದುಕೊಂಡರೆ ಜಂಗಮರು (ಬೇಡ ಜಂಗಮರು) ಅಸ್ಪೃಶ್ಯರಾಗಿಯೇ ಉಳಿದರು. ಸಾಮಾಜಿಕ ಆರ್ಥಿಕ - ಧಾರ್ಮಿಕ ಮತ್ತು ಶೈಕ್ಷಣಿಕವಾಗಿ ಎಲ್ಲ ರಂಗಗಳಲ್ಲಿಯೂ ಹಿಂದುಳಿದರು. ಕಾಲಾನುಕಾಲದಿಂದ ಶೋಷಣೆಗೊಳಗಾಗುತ್ತಲೇ ಬಂದವರು. ಹಸಿವು , ಬಡತನ, ನಿರುದ್ಯೋಗ, ನಿರ್ವಸತಿ, ಅನಕ್ಷರತೆ, ಅಜ್ಞಾನ, ಮೌಢ್ಯತೆ, ಅಂಧ ಶ್ರದ್ಧೆ ಮುಂತಾದವುಗಳು ಇವರನ್ನು ಅಸಂಘಟಿತರನ್ನಾಗಿಸಿದವು. ಇವರು ಅಲೆಮಾರಿಗಳಾಗಿಯೇ ಉಳಿದರು.

ವೀರಶೈವ ಜಂಗಮರು ಸಮಾಜದ ಮೇಲ್ದರ್ಜೆಯ ಪಂಕ್ತಿಯಲ್ಲಿದ್ದಾರೆ. ಇವರು ತಮ್ಮ ಮನೆಯಲ್ಲಿ ಕಾಲಿಟ್ಟರೆ, ತಮ್ಮ ಮನೆ ಪವಿತ್ರವಾಗುತ್ತದೆ. ಯಾವುದೇ ಕೆಲಸ ಕಾರ್ಯ ಇವರಿಂದ ಪ್ರಾರಂಭಿಸಿದರೆ ಶುಭವಾಗುತ್ತದೆ. ಇವರನ್ನು ಪೂಜಿಸಿ ಪಾದೋದಕ ಸೇವಿಸಿದರೆ ಒಳ್ಳೆಯದಾಗುತ್ತದೆ ಎನ್ನುವ ಭಾವನೆ ಸಮಾಜದ ಎಲ್ಲ ವರ್ಣದ ಜನರಲ್ಲಿದೆ. ಹೀಗಾಗಿ ಸಮಾಜದಲ್ಲಿ ಪ್ರತಿಯೊಬ್ಬರಿಂದಲೂ ಪೂಜಿಸಲ್ಪಡುತ್ತಾರೆ. ಇವರು ಎಲ್ಲ ವರ್ಗದಿಂದ ಪೂಜಿಸಲ್ಪಟ್ಟರೂ ಹಿಂದುಳಿದ ಮತ್ತು ಕೆಳ ವರ್ಗದವರ ಮನೆಯಲ್ಲಿ ಊಟ ಮಾಡುವುದಿಲ್ಲ. ಬದಲಾಗಿ ದಕ್ಷಿಣೆ ಮತ್ತು ಸೀದಾ (ಆಹಾರ, ಧಾನ್ಯಗಳು, ಎಣ್ಣೆ , ತುಪ್ಪ, ಸಕ್ಕರೆ, ಹಣ್ಣು , ಹಂಪಲು)

ಇತ್ಯಾದಿ. ಪಡೆದು ಕೊಳ್ಳುತ್ತಾರೆ. ಇವರ ಪ್ರಧಾನ ವೃತ್ತಿ ಪೌರೋಹಿತ್ಯ. ಬೇಡ ಜಂಗಮರಂತೆ ಇವರೂ ಬಿಕ್ಷೆ ಬೇಡುತ್ತಾರಾದರೂ, ಅದು ಸಮಾಜದ ದೃಷ್ಟಿಯಿಂದ ಪ್ರತಿಷ್ಠೆ ವಿಷಯ ಎಂಬ ಭಾವನೆಯಿದೆ. ಬಿಕ್ಷೆ ಬೇಡುವುದರಿಂದ ಇವರ ಸಾಮಾಜಿಕ ಗೌರವಕ್ಕೆ ಯಾವುದೇ ರೀತಿಯ ಧಕ್ಕೆ ಉಂಟಾಗಿಲ್ಲ. ವೀರಶೈವರಿಗೆ ಅಂಗ ದೀಕ್ಷೆ ಕೊಡುವ ಸಮಾಜದ ಪೌರೋಹಿತ್ಯ ವಹಿಸುವ, ಪ್ರತಿಫಲವಾಗಿ ದಕ್ಷಿಣೆ ಸ್ವೀಕರಿಸುವ , ಬಿಕ್ಷೆ ಎತ್ತುವ ಅಧಿಕಾರ ಹುಟ್ಟಿನಿಂದಲೇ ಪಡೆದುಕೊಂಡು ಬಂದಿದ್ದಾರೆ. ಅವರು ಬಿಕ್ಷೆ ಬೇಡುವುದಿಲ್ಲ. ಅವರದು 'ಕೋರಾನ್ನ ಬಿಕ್ಷೆ' ಅವರು ಬೇಡುವ ಬಿಕ್ಷುಕರಲ್ಲ[70] ಎಂದು ಡಾ. ಚಿದಾನಂದ ಮೂರ್ತಿಯವರು ಹೇಳಿದ್ದಾರೆ.

ಇವರು ಅಂಗಧಾರಿಗಳು. ಇವರಲ್ಲಿ ಮಠ, ಹಿರೇಮಠ, ಮಠಪತಿ, ವಿರಕ್ತ ಮಠ ಮುಂತಾದ ಅಡ್ಡ ಹೆಸರುಗಳಿಂದ (ಬೆಡಗು) ಕರೆದು ಕೊಳ್ಳುತ್ತಾರೆ. ಹಿಂದಿನಿಂದಲೂ ಮಠ ಮಾನ್ಯಗಳು ಸಾಂಸ್ಕೃತಿಕ ಕೇಂದ್ರಗಳು. ಅಲ್ಲಿ ವಿದ್ಯಾಭ್ಯಾಸ, ಊಟ, ವಸತಿಗಳಲ್ಲಿ , ಇವರಿಗೆ ಮೊದಲ ಆದ್ಯತೆ. ಶೈಕ್ಷಣಿಕವಾಗಿ ಮುಂದುವರೆದಿದ್ದಾರೆ. ಇವರಲ್ಲಿ ಕಡು ಬಡವರಿದ್ದರೂ ಇವರಿಗೆ ಸಹಾಯ ಸಮಾಜದಲ್ಲಿ ಸರಳವಾಗಿ ದೊರೆಯುತ್ತದೆ. ಇವರಿಗೆ ಸಹಾಯ ಮಾಡುವುದೆಂದರೆ ಇದೊಂದು ಪುಣ್ಯ ಕಾರ್ಯ ಎಂದು ಜನ ಭಾವಿಸಿದ್ದಾರೆ. ಹೀಗಾಗಿ ಇವರಲ್ಲಿ ಕೆಲವರು ಆರ್ಥಿಕವಾಗಿ ಬಡವರಾಗಿದ್ದರೂ ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ ಪ್ರಗತಿ ಹೊಂದಿರುವುದನ್ನು ನೋಡುತ್ತೇವೆ

ವೀರಶೈವ ಜಂಗಮರಲ್ಲಿಯ ಮೇಲಿನ ಯಾವ ಲಕ್ಷಣಗಳು ಬುಡ್ಗ ಜಂಗಮ ಅಥವಾ ಬೇಡ ಜಂಗಮರಲ್ಲಿ ಕಂಡು ಬರುವುದಿಲ್ಲ. ವೀರಶೈವ ಜಂಗಮ ಮತ್ತು ಬೇಡ ಜಂಗಮ ಈ ಎರಡು ಜನಾಂಗಗಳಲ್ಲಿ ಕಂಡು ಬರುವ ಸಾಮ್ಯ - ವೈಷಮ್ಯಗಳ ಕುರಿತು ಆಲೋಚಿಸಿದಾಗ , ಬೇಡ ಜಂಗಮ ಜನಾಂಗ ವೀರಶೈವ ಜನಾಂಗಕ್ಕಿಂತ ಭಿನ್ನವಾಗಿ ನಿಲ್ಲುತ್ತದೆ. ಅದನ್ನು ಈ ರೀತಿಯಾಗಿ ವಿವರಿಸಬಹುದು[71].

ಕ್ರ ಸಂ.	ವೀರಶೈವ ಜಂಗಮ	ಬೇಡ ಜಂಗಮ / ಬುಡ್ಗ ಜಂಗಮ
1.	ಅಸ್ಪೃಶ್ಯರಲ್ಲ	ಅಸ್ಪೃಶ್ಯರು
2.	ಊರೊಳಗೆ ವಾಸಿಸುವರು	ಅಲೆಮಾರಿಗಳು : ಊರ ಹೊರಗೆ ಗುಡಾರ ಹಾಕಿ, ಗುಡಾರದಲ್ಲಿ ವಾಸಿಸುವರು.
3.	ಸಸ್ಯಾಹಾರಿಗಳು	ಮಾಂಸಾಹಾರಿಗಳು, ಬೇಟೆಗಾರರು.
4.	ಸಮಾಜದಲ್ಲಿ ಇವರಿಗೆ ಉನ್ನತ ಸ್ಥಾನಮಾನಗಳಿವೆ.	ಇವರ ಕುರಿತು ಸಮಾಜದಲ್ಲಿ ಕೀಳು ಭಾವನೆಯಿದೆ.
5.	ಸಾಮಾಜಿಕ ಆರ್ಥಿಕ ಶೈಕ್ಷಣಿಕವಾಗಿ ಮುಂದುವರೆದಿದ್ದಾರೆ.	ಎಲ್ಲ ಅಂಶಗಳಲ್ಲೂ ಹಿಂದುಳಿದಿದ್ದಾರೆ.

6.	ಲಿಂಗದೀಕ್ಷೆ ಕಡ್ಡಾಯ.	ಲಿಂಗ ದೀಕ್ಷೆಯಿಲ್ಲ.
7.	ಇತರರಿಗೆ ದೀಕ್ಷೆ ಕೊಡುತ್ತಾರೆ.	ಯಾವ ದೀಕ್ಷೆ ಕೊಡುವ ಪದ್ಧತಿಯೂ ಇವರಲ್ಲಿಲ್ಲ.
8.	ಧರ್ಮ ಪ್ರಸಾರಕ್ಕಾಗಿ ಅಲೆದಾಡುತ್ತಾರೆ.	ಕಲಾಪ್ರದರ್ಶನಕ್ಕಾಗಿ ಅಲೆಮಾರಿಗಳಾಗಿದ್ದಾರೆ.
9.	ಧಾರ್ಮಿಕ ಪಂಚಪೀಠಗಳು ಇವರಿಗಿವೆ.	ಯಾವ ಪೀಠಗಳೂ ಇಲ್ಲ.
10.	ಹೆಚ್ಚು ಜನ ಮಠಮಾನ್ಯಗಳಲ್ಲಿ ವಾಸಿಸುತ್ತಾರೆ	ಇವರಿಗೆ ಮಠಗಳು ಇಲ್ಲ. ಮನೆಗಳೂ ಇಲ್ಲ. ಊರ ಹೊರಗೆ ಟೆಂಟ್‌ಗಳಲ್ಲಿ ವಾಸಿಸುತ್ತಾರೆ.
11.	ಇವರ ಮಾತೃಭಾಷೆ ಕನ್ನಡ	ಇವರ ಮಾತೃ ಭಾಷೆ ಬುಡುಗ ಮತ್ತು ತೆಲುಗು.
12.	ಕಲೆ ಇವರಿಗೆ ವಂಶ ಪಾರಂಪರ್ಯವಾಗಿ ಬಂದದ್ದಲ್ಲ. ದೊಡ್ಡಾಟ, ಸಣ್ಣಾಟ ಹಾಗೂ ಥೇಟರ್ ಸಂಬಂಧಿಸಿದ ಕಲಾವಿದರು ಕಂಡು ಬರುತ್ತಾರೆ. ಸಾಹಿತಿಗಳೂ ಕಂಡು ಬರುತ್ತಾರೆ. ಇವರಲ್ಲಿಯೂ ಕೆಲವು ವೃತ್ತಿ ಕಲಾವಿದರು ಕಂಡು ಬರುತ್ತಾರಾದರೂ ಅವರು ತಮ್ಮ ಕಲೆಯನ್ನು ನಿಲ್ಲಿಸಿದಂತೆ ತೋರುತ್ತದೆ. ಇವರನ್ನು ಪೀಠ, ಮಠದ ಪದ್ಧತಿಯಂತೆ ಗುರುತಿಸುತ್ತಾರೆ ವಿನಃ ಕಲೆಯಿಂದಲ್ಲ.	ಕಲೆ ಇವರಲ್ಲಿ ವಂಶ ಪರಂಪರೆಯಿಂದ ಬಂದದ್ದು ಇವರಲ್ಲಿ ವೇಷಗಾರರು, ಬುರ್ರ ಕಥೆಗಾರರು, ಬಹುರೂಪಿಗಳು, ಬಾಳ ಸಂತರು , ಕೊಂಡ ಮಾಮ,ಕುರ್ರ ಮಾಮ ಮುಂತಾದವರು ಬರುತ್ತಾರೆ. ಇವರು ಮಾಡುವ ಕಲೆಯಿಂದಲೇ ಇವರಿಗೆಗುರುತಿಸಿರುವುದು ಕಂಡು ಬರುತ್ತದೆ.
13.	ಸಮಾಜ (ವೀರಶೈವ) ದ ಮೇಲೆ ಇವರಿಗೆ ಹಿಡಿತವಿದೆ.	ಬೇಡ ಜಂಗಮರು ಅಸಂಘಟಿತರು ಶಿಥಿಲಗೊಂಡ ಸಮಾಜ ಇವರದು.
14.	ವರದಕ್ಷಿಣೆ ಪದ್ಧತಿ ಇಲ್ಲದೆ.	ತೆರ (ವಧು ದಕ್ಷಿಣೆ) ಪದ್ಧತಿ ಇಲ್ಲದೆ.
15.	ಮಾತೃದೈವತ್ವದ ಆರಾಧಕರಲ್ಲ	ಮಾತೃದೈವತ್ವದ ಆರಾಧಕರು. ಜಂಬಲಮ್ಮ ಸುಂಕಲಮ್ಮ, ಎಲ್ಲಮ್ಮ, ಮಾರೆಮ್ಮ, ದುರ್ಗಮ್ಮ ಮುಂತಾದ ಮಾತೃದೇವತೆಗಳನ್ನು ಆರಾಧಿಸುತ್ತಾರೆ.

ಈ ರೀತಿಯಾಗಿ ಅವಲೋಕಿಸಿದಾಗ ಎರಡೂ ಜನಾಂಗಗಳಲ್ಲಿ ಸ್ಪಷ್ಟವಾದ ಭಿನ್ನತೆಗಳು ಕಂಡು ಬರುತ್ತವೆ. ಆಹಾರ ಪದ್ಧತಿ, ಆಚಾರ - ವಿಚಾರ, ರೂಢಿ - ಸಂಪ್ರದಾಯ, ಉಡಿಗೆ - ತೊಡುಗೆ ಯಾವ ವಿಚಾರದಲ್ಲಿಯೂ ಸಮಾನ ಅಂಶಗಳು ಕಂಡು ಬರುವುದಿಲ್ಲ.

2.5 ಬುಡ್ಗ ಜಂಗಮರ ಕಲೆಗಳು :

ಬುಡ್ಗ ಜಂಗಮರಿಗೆ ಕಲೆ ಎನ್ನುವುದು ವಂಶ ಪಾರಂಪರ್ಯದಿಂದ ಬಂದದ್ದು. ಅನೇಕ ತಲೆಮಾರುಗಳಿಂದ, ಕಾಲಾನುಕಾಲದಿಂದ ಇವರು ಬುರ್ರ ಕಥೆಗಾರರಾಗಿ, ವೇಷಗಾರರಾಗಿ, ಬಹುರೂಪಿಗಳಾಗಿ, ಬಾಳಸಂತರಾಗಿ, ಬೈರಾಗಿಗಳಾಗಿ, ಕುರಕುರ ಮಾಮ (ಕುರ್ರ ಮಾಮ) ಗಳಾಗಿ, ಅನೇಕ ಕಲೆಗಳನ್ನು ಅವಲಂಬಿಸಿಯೇ ಬದುಕು ಸಾಗಿಸುತ್ತಿದ್ದಾರೆ. ಇವರು ಪ್ರದರ್ಶಿಸುವ ಕಲೆಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು.

1. ಏಕ ವ್ಯಕ್ತಿ ಪ್ರದರ್ಶನ ಕಲೆ 2. ಸಾಮೂಹಿಕ ಪ್ರದರ್ಶನ ಕಲೆ

2.5.1 ಏಕ ವ್ಯಕ್ತಿ ಪ್ರದರ್ಶನ ಕಲೆ :

ಕಲಾ ಪ್ರದರ್ಶನದಲ್ಲಿ ಒಬ್ಬ ವ್ಯಕ್ತಿಯಿಂದ ಪ್ರದರ್ಶನಗೊಳ್ಳುವ ಕಲೆಯನ್ನು ಏಕವ್ಯಕ್ತಿ ಪ್ರದರ್ಶನ ಕಲೆ ಎನ್ನುವರು[72]. ಉದಾ. : ತುಪಾಕಿ ರಾಮನ ವೇಷ, ಬ್ರಾಹ್ಮಣ ವಿಧವಾ ವೇಷ , ಬಾಳಸಂತರ ವೇಷ, ವೀರ ಬಾಹುವೇಷ, ಫಕೀರ ಸಾಬವೇಷ, ಕೋಯ ಪಂತು (ವೇಷ) , ಮುತ್ತಡಿ ಪಂತು (ವೇಷ), ಏಕತಾರ ಪಂತು (ವೇಷ) , ಜೊತೆಗೆ ಕಪ್ಪೇರ ಪಂತು (ವೇಷ) ತೆಲ್ಲ (ಬಿಳಿ) ಪಂತು, ಕಟ್ಟಿಗೆ ಗೊಂಬೆಯಾಟ, ಜಂಗಮಯ್ಯ, ವಾಲ್ಕಂ, ಭಟ್ರಾಜು ವಾಲ್ಕಂ (ವೇಷ), ಬ್ರಾಹ್ಮಣ ವೇಷ ಮುಂತಾದವುಗಳು ಏಕವ್ಯಕ್ತಿ ಪ್ರದರ್ಶನ ಕಲೆಗಳಾಗಿವೆ.

ಏಕವ್ಯಕ್ತಿ ಪ್ರದರ್ಶನ ಕಲೆಗಳಲ್ಲಿ ಹಾಸ್ಯ, ವಿಡಂಬನೆ, ವಿನೋದ ಮತ್ತು ಸಾಮಾಜಿಕ ಪ್ರಜ್ಞೆ, ಚಾತುರ್ವರ್ಣ ವ್ಯವಸ್ಥೆಯ ವಿಡಂಬನೆ, ಮುಖ್ಯವಾಗಿ ಎದ್ದು ಕಾಣುತ್ತದೆ. ತುಪಾಕಿ ರಾಮನ ವೇಷ ಇಂಗ್ಲೀಷರ ದಬ್ಬಾಳಿಕೆ ನಿಜಾಂಶಾಹಿಯ ದಬ್ಬಾಳಿಕೆಯನ್ನು ಜನರು ಹೇಗೆ ಎದುರಿಸಬೇಕು ಎನ್ನುವುದಕ್ಕಾಗಿ ಹಾಕಿದ ವೇಷ. ಆ ಕಾಲದಲ್ಲಿ ಹಳ್ಳಿಗೆ ಒಬ್ಬ ಪೋಲಿಸ ಬಂದಾಗ ಊರೆಲ್ಲ ಗಡಗಡ ನಡುಗುತ್ತಿತ್ತಂತೆ. ಆಭಯ ನಿವಾರಣೆಗಾಗಿ ತುಪಾಕಿ ರಾಮನ ವೇಷ ಹಾಕುತ್ತಿದ್ದರು ಎಂದು ವೇಷಗಾರರು ಹೇಳುತ್ತಾರೆ[73]. ಈ ವೇಷದ ಮುಖ್ಯ ಉದ್ದೇಶ ಜನ ಪೋಲಿಸರಿಗೆ ಅಂಜಬಾರದು. ಪೋಲಿಸರ ದಬ್ಬಾಳಿಕೆಯನ್ನು ಎದುರಿಸಬೇಕೆನ್ನುವುದೇ ಆಗಿದೆ. ಬ್ರಾಹ್ಮಣ ವಿಧವಾ ವೇಷ ಸಮಾಜದ ವಿಧವಾ ಸ್ತ್ರೀಯರ ನೋವನ್ನು ಚಿತ್ರಿಸುವಂತಹದ್ದು. ಅದು ಉಚ್ಚವರ್ಗದ ಬ್ರಾಹ್ಮಣ ವಿಧವಾ ಸ್ತ್ರೀಯ ಬದುಕಿನ ದುರಂತತೆಯನ್ನು ಚಿತ್ರಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಈ ಬ್ರಾಹ್ಮಣ ವಿಧವಾ ವೇಷವನ್ನು ಬುಡ್ಗ ಜಂಗಮರು 'ಬೋಳಿ ಬ್ರಾಹ್ಮಣಮ್ಮನ ವೇಷ' ವೆಂತಲೂ ಕರೆದಿದ್ದಾರೆ. ಅದರಂತೆ ಕೋಯ ಪಂತು ಇವರು ಜನಪದ ವೈದ್ಯರು. ವೇಷ ಹಾಕಿಕೊಂಡು ಭವಿಷ್ಯ ಹೇಳುತ್ತ ರೋಗ ರುಜಿನಗಳಿಗೆ ಔಷಧಿ ಕೊಡುವರು. ಕಣಿ ಹೇಳುವವರು. ಏಕ ವ್ಯಕ್ತಿ ಪ್ರದರ್ಶನದಲ್ಲಿ ಕಂಡು ಬರುತ್ತಾರೆ. ವೀರ ಬಾಹು ವೇಷದಲ್ಲಿ ಚಾತುರ್ವರ್ಣ ವ್ಯವಸ್ಥೆಯ ವಿಡಂಬನೆಯಿದೆ. ಹೀಗೆ ಏಕವ್ಯಕ್ತಿ ಪ್ರದರ್ಶನ ಕಲೆ ಸಾಮಾಜಿಕ ಜಾಗೃತಿಗಾಗಿ ಮೈದಳೆದಿದೆಯನಿಸುತ್ತದೆ.

2.5.2 ಸಾಮೂಹಿಕ ಪ್ರದರ್ಶನ ಕಲೆ :

ಕಲಾ ಪ್ರದರ್ಶನದಲ್ಲಿ ಒಬ್ಬನಿಗಿಂತ ಹೆಚ್ಚು ಜನರಿಂದ ಪ್ರದರ್ಶನಗೊಳ್ಳುವ ಕಲೆಯನ್ನು ಸಾಮೂಹಿಕ ಪ್ರದರ್ಶನ ಕಲೆಗಳೆಂದು ಕರೆಯುತ್ತಾರೆ. ಬುರ್ರ ಕಥೆ, ಹಗಲು ವೇಷ, ತೊಗಲು ಗೊಂಬೆಯಾಟ, ಜೀದಿ ಭಾಗವತ, ಕಾಡು ಪಾಪ, ಗುರಪ್ಪ ವೇಷ, ನಾಟಾಂ ಪಂತು, ಹರಿಕಥೆ, ಕೊಜ್ಜಾವಾಲ್ಕಲು, ಮುಂದೆಚ್ಚು ವೇಷ ಮುಂತಾದವುಗಳು ಸಾಮೂಹಿಕ ಪ್ರದರ್ಶನ ಕಲೆಗಳಾಗಿವೆ.

ಇವುಗಳಲ್ಲಿ ಬುರ್ರ ಕಥೆ, ಹಗಲು ವೇಷ, ತೊಗಲು ಗೊಂಬೆಯಾಟ, ಜೀದಿಯಾಟ, ಜೀದಿ ಭಾಗವತ, ಮುಂತಾದ ಕಲೆಗಳು ವಿಶಿಷ್ಟವಾಗಿ ಕಂಡು ಬರುತ್ತವೆ. ಸಾಮಾಜಿಕ,ಐತಿಹಾಸಿಕ ಮತ್ತು ಪೌರಾಣಿಕ ಅಂಶಗಳ ಹಿನ್ನೆಲೆಯಲ್ಲಿ ಇವು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಇವುಗಳ ಸಂಕ್ಷಿಪ್ತ ವಿವರ ಇಲ್ಲಿದೆ.

1) ಬುರ್ರ ಕಥೆ :

ಆಂಧ್ರ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯತೆ ಪಡೆದಿರುವ ಕಲಾಪ್ರಕಾರವಿದು. ಆಂಧ್ರದಲ್ಲಿ ಇದನ್ನು ಶಾರದ ಕಥೆಗಳು, ಜಂಗಮ ಕಥೆಗಳು, ತಂದಾನಿ ಕಥೆಗಳೆಂತಲೂ ಕರೆಯುತ್ತಾರೆ. ಕಥೆಯನ್ನು ಹೇಳುವಾಗ ಬಳಸುವ ವಾದ್ಯ ಪರಿಕರದಿಂದ 'ಬುರ್ರ ಕತೆ' ಎನ್ನುವ ಹೆಸರು ಬಂದಿದೆ. ಕಥೆ ಹೇಳುವಾಗ, ಹಾಡುವ ಸಂದರ್ಭದಲ್ಲಿ ಹಾಡಿನ ಕೊನೆಯಲ್ಲಿ ಬರುವ ಸೊಲ್ಲು ತಂದಾನ, ತಂದಾನ, ತಂದಾನದಿಂದ ತಂದಾನ ಕಥೆಗಳು ಎನ್ನುವ ಹೆಸರು ಬಂದಿದೆ. ಮುಖ್ಯ ಕಥೆಗಾರ ಬಳಸುವ ವಾದ್ಯ ಬುರ್ರ (ತಂಬೂರಿ) ಸರಸ್ವತಿಯ ವೀಣೆಯೆಂದು ಭಾವಿಸಿ, ಆಂಧ್ರದ ಕೆಲವು ಪ್ರದೇಶಗಳಲ್ಲಿ ಶಾರದ ಕಥೆಗಳೆಂದು ಕರೆಯುತ್ತಾರೆ. ಕೆಲವು ಪ್ರದೇಶಗಳಲ್ಲಿ ಬುಡ್ಗ ಜಂಗಮರು ಹೇಳುವ ಶೈವ ಕಥೆಗಳಿಗೆ ಜಂಗಮ ಕಥೆಗಳೆಂದೂ ಕರೆಯುತ್ತಾರೆ. (ಬುರ್ರ ಕಥೆಗಳ ಕುರಿತು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಸಮೀಕ್ಷೆ ಮಾಡಲಾಗಿದೆ.

2) ಹಗಲು ವೇಷ :

ಹಗಲಿನಲ್ಲಿ ವೇಷ ಧರಿಸಿ ತಿರುಗುವುದರಿಂದ ಹಗಲು ವೇಷವೆನ್ನುತ್ತಾರೆ. ಬುರ್ರ ಕಥೆಯಂತೆ ಈ ಕಲೆಯೂ ಅತ್ಯಂತ ಜನಪ್ರೀಯತೆ ಪಡಿದಿದೆ. ಆಂಧ್ರ, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ , ಗುಜರಾತ, ರಾಜಸ್ತಾನ ಮುಂತಾದ ರಾಜ್ಯಗಳಲ್ಲಿಯೂ ಹಗಲು ವೇಷ ಕಲೆ ಕಂಡು ಬರುತ್ತದೆ. ಆಂಧ್ರದಲ್ಲಿ ಇವರನ್ನು ಪಗಟಿವೇಷಾಲು, ತಮಿಳಿನಲ್ಲಿ ಪಗಲ್ ವೇಷಂ, ಕರ್ನಾಟಕದಲ್ಲಿ ಬಹುರೂಪಿಗಳು, ಹಗಲು ವೇಷದವರು, ಪಾತ್ರದವರು, ಜಾತಿಗಾರರು, ಮಹಾರಾಷ್ಟ್ರದಲ್ಲಿ ಸೋಂಗಾಡ್ಯಾ, ಸೋಂಗಾಡಿ, ರಾಜಸ್ತಾನ, ಗುಜರಾತ ಮುಂತಾದ ರಾಜ್ಯಗಳಲ್ಲಿ ಬಹುರೂಪಿಯಾ ಎನ್ನುವ ಹೆಸರಿನಿಂದ ಕರೆಯುತ್ತಾರೆ [74].

ಬಹುರೂಪಿ ಎನ್ನುವ ಪದ ಹನ್ನೆರಡನೆಯ ಶತಮಾನದಲ್ಲಿಯೇ ದೊರೆಯುತ್ತದೆ. ಬಹುರೂಪಿ ಚೌಡಯ್ಯ ಒಬ್ಬ ಶ್ರೇಷ್ಠ ವಚನಕಾರ. ವೀರಶೈವ ಧರ್ಮ ಪ್ರಚಾರಕ್ಕಾಗಿ ಅವನು ಅನೇಕ ವೇಷಗಳನ್ನು ಧರಿಸುತ್ತಿದ್ದ. ಅನೇಕ ಜನರನ್ನು ಶಿಷ್ಯರನ್ನಾಗಿಸಿಕೊಂಡು ವೇಷಗಾರಿಕೆಯ ಮೂಲಕ ಸಮಾಜದ ವಿಧಾಯಕ ಕಾರ್ಯದಲ್ಲಿ ತೊಡಗಿದ್ದ ಎನ್ನುವುದು ಸಾಹಿತ್ಯ ಚರಿತ್ರೆಯಿಂದ ವಿದಿತವಾಗುತ್ತದೆ. ನಂತರ

ಬಹು ರೂಪಿ ಎನ್ನುವ ಪದ ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯ ಚರಿತೆಯಲ್ಲಿ ದೊರೆಯುತ್ತದೆ[75]. ಕವಿರಾಜ ಮಾರ್ಗ ಮತ್ತು ವಡ್ಡಾರಾಧನೆ ಕೃತಿಗಳಲ್ಲಿ ಬಹುರೂಪಿಯ ಉಲ್ಲೇಖ ಕಂಡು ಬರುತ್ತದೆಯೆಂದು ಡಾ. ಎಂ. ಎಂ. ಕಲಬುರ್ಗಿಯವರು ಅಭಿಪ್ರಾಯ ಪಡುತ್ತಾರೆ[76]. ಈ ರೀತಿಯಾಗಿ ಸಾವಿರಾರು ವರ್ಷಗಳ ಐತಿಹಾಸಿಕ ಪರಂಪರೆಯುಳ್ಳ , ಈ ಕಲೆ ಐತಿಹಾಸಿಕ ಮತ್ತು ಪೌರಾಣಿಕ ಸನ್ನಿವೇಶಗಳನ್ನು ಜೀವಂತವಾಗಿರಿಸಿದೆ.

ಹಗಲು ವೇಷಗಾರರು ಸಾಂಸ್ಕೃತಿಕ ವಕ್ತಾರರು ನಾಡಿನ ಅಥವಾ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಜನ ಸಾಮಾನ್ಯರಿಗೆ ಮುಟ್ಟಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಿಂದ ಆಯ್ದ ಸುಂದರ ಸನ್ನಿವೇಶಗಳು, ಶಿವಶರಣರು ಹಾಗೂ ಅವರ ಸಂದೇಶಗಳು, ಪ್ರಸ್ತುತ ಸಾಮಾಜಿಕ, ರಾಜಕೀಯ, ಧಾರ್ಮಿಕ ಸಮಸ್ಯೆಗಳು ಇವರ ವೇಷಗಳಲ್ಲಿ ಕಂಡು ಬರುತ್ತವೆ. ಈ ಮುಂತಾದ ಅನೇಕ ಅಂಶಗಳನ್ನು ಹಿನ್ನೆಲೆಯಾಗಿಟ್ಟು ಕೊಂಡು, ಇವರು ಹಾಕುವ 33 ವೇಷಗಳನ್ನು ವಿದ್ವಾಂಸರು ಪಟ್ಟಿ ಮಾಡಿದ್ದಾರೆ. ಅವು ಇಂತಿವೆ[77].

1) ಬೈರಾಗಿ ವೇಷ	2) ಬುಡು ಬುಡುಕಿಯವರ ವೇಷ
3) ಪಠಾನ ವೇಷ	4) ಫಕೀರ ವೇಷ
5) ಸೋಮಯಾಜುಲು ಸೋಮಿದೇವಮ್ಮ ವೇಷ	6) ಅರ್ಧನಾರೀಶ್ವರ ವೇಷ
7) ಬ್ರಾಹ್ಮಣ ವಿಧವಾ ವೇಷ (ಬೋಳಿ ಬ್ರಾಹ್ಮಣ ವೇಷ)	8) ಕೋಮಟಿಗರ ವೇಷ
9) ಹೊಗಳು ಭಟ್ಟರ ವೇಷ	10) ಲಂಬಾಣಿ ವೇಷ
11) ಜಂಗಮ ವೇಷ	12) ಬೇತಾಳ ವೇಷ
13) ಪಕ್ಷಿಗಳ ದೊರೆ ವೇಷ	14) ರಾಮಲಕ್ಷ್ಮಣ ಶೂರ್ಪನಖಿ ವೇಷ (ಪರ್ಣ ಶಾಲೆ)
15) ಸುಂದೋಪ ಸುಂದರನ ವೇಷ	16) ಮೋಹಿನಿ ಭಸ್ಮಾಸುರನ ವೇಷ
17) ಸೌಗಂಧಿಕಪುಷ್ಪ ಹರಣ	18) ನಾರದ ಗರ್ವಭಂಗ
19) ಶ್ರೀ ಕೃಷ್ಣ ರುಕ್ಮಿಣಿ ಪ್ರಣಯ ಕಲಹ	20) ಜೀಮಾಂಜನೇಯ ಯುದ್ಧ
21) ಲವ ಕುಶರ ಕಾಳಗ	22) ಸತ್ಯ ಹರಿಶ್ಚಂದ್ರ
23) ಮೇನಕೆ ವಿಶ್ವಾಮಿತ್ರ	24) ಪೋಲಿಸರ ವೇಷ
25) ಬೇಡರ ವೇಷ	26) ಲಿಂಗ ಬಲಿಜ
27)ಕುರುಡ ದಾಸರ ವೇಷ	28) ಅಗಸರ ವೇಷ

29) ಔಷಧಿ ಮಾರುವವನ ವೇಷ   30) ವಡ್ಡರ ವೇಷ
31) ತ್ರಿಪುರ ಸಂಹಾರ   32) ಹಾವಾಡಿಗರ ವೇಷ
33) ಶಾರದ ವೇಷ

ಇವುಗಳಲ್ಲಿ ಕೆಲವನ್ನು ಮಾತ್ರ ಇಂದು ಬುಡ್ಗ ಜಂಗಮರು (ವೇಷಗಾರರು) ಪ್ರದರ್ಶಿಸುತ್ತಿದ್ದಾರೆ

ಅಲ್ಲದೆ, ಕರ್ನಾಟಕದಲ್ಲಿ ವೇಷಗಾರರು ಹಾಕುವ ವೇಷಗಳು ಈ ಕೆಳಗಿನಂತಿವೆ[78].

1) ಜಂಗಮ ವೇಷ   2) ಅಗಸರ ವೇಷ
3) ಜವಾನರ (ಪೋಲಿಸರ) ವೇಷ   4) ಬ್ರಾಹ್ಮಣರ ವೇಷ
5) ಸಾಧು - ಸಂತರ ವೇಷ   6) ಕಬೀರದಾಸರ ವೇಷ
7) ಲಂಬಾಣಿ ವೇಷ   8) ವಡ್ಡರ ವೇಷ
9)ಕೊರವಂಜಿ ವೇಷ   10) ಬೇಡರ ಕಣ್ಣಪ್ಪನ ವೇಷ
11) ಸಿಂಧೂರ - ಲಕ್ಷ್ಮಣ ವೇಷ   12) ಬಾಲ ಭಸ್ಮಾಸುರ ವೇಷ
13) ಭೀಮಾಂಜನೆಯ ವೇಷ   14) ಜಟಾಸುರ ವಧೆ ವೇಷ
15) ಸುಂದ - ಉಪಸುಂದ ವೇಷ   16) ಕಿರಾತಾರ್ಜುನೀಯ ವೇಷ
17) ವಾಲಿ - ಸುಗ್ರೀವ ವೇಷ   18) ರಾಮ - ಲಕ್ಷ್ಮಣ ವೇಷ
19) ಹೈದ್ರಾಬಾದ ನವಾಬ್ ವೇಷ   20) ಕನಕದಾಸರ ವೇಷ
21) ಪುರಂದರ ದಾಸರ ವೇಷ   22) ಬಾಣಂತಿ ವೇಷ
23) ರಾಮಾಂಜನೆಯ ಯುದ್ಧ   24) ಅರ್ಧನಾರೀಶ್ವರ ವೇಷ
25) ಐರಾವಣ - ಮೈರಾವಣ ವೇಷ   26) ಶುಂಭ - ನಿಶುಂಭ ವೇಷ

ಈ ಮುಂತಾದ ಅನೇಕ ವೇಷಗಳನ್ನು ಹಾಕುತ್ತಾರೆ.

ಇವರು ಹಾಕುವ ಸಾಮಾಜಿಕ ಮತ್ತು ಪೌರಾಣಿಕ ವೇಷಗಳು ಜನಪ್ರಿಯತೆಯನ್ನು ಪಡೆದುಕೊಂಡಿವೆ. "ವೇಷಕ್ಕೆ ತಕ್ಕ ಹಾಸ್ಯ, ದೇಶಕ್ಕೆ ತಕ್ಕ ಭಾಷೆ" ಎನ್ನುವ ಗಾದೆಯಂತೆ ಹಗಲು ವೇಷದವರು ವೇಷಕ್ಕೆ ತಕ್ಕ ಪಾತ್ರ, ಪಾತ್ರಕ್ಕೆ ತಕ್ಕ ಭಾಷೆ, ಭಾವ , ಅಭಿನಯದ ಮುಖಾಂತರ ಜನಮನವನ್ನು ಗೆದ್ದಿದ್ದಾರೆ. ಸುದೀರ್ಘ ಸಂಭಾಷಣೆ, ಪಾತ್ರಗಳ ಅರ್ಭಟ ಆವೇಶದಂತೆ, ಸೌಮ್ಯವಾದ ಪಾತ್ರಗಳನ್ನು ಮಾಡಿ, ನವರಸಗಳನ್ನು ಪಾತ್ರಗಳಲ್ಲಿ ತುಂಬಿ ಅಭಿನಯಿಸುವುದರ ಮೂಲಕ ಜನ ಮನ್ನಣೆ ಗಳಿಸಿದ್ದಾರೆ.

3. ಸುಡುಗಾಡು ಸಿದ್ಧರ ವೇಷ :

ತೆಲುಗಿನಲ್ಲಿ ಇದನ್ನು ಕಾಟಿ ಪಾಪ (ವೇಷ) ವೆಂದು ಕರೆಯುತ್ತಾರೆ. ಬುಡ್ಗ ಜಂಗಮರು ಈ ವೇಷವನ್ನು 'ಕಿಟ್ಟು ಪಂತು' ಎಂದು ಕರೆಯುತ್ತಾರೆ. ತೆಲುಗಿನಲ್ಲಿ ಕಾಟಿ ಪಾಪ ಎಂದರೆ, ಸುಡಗಾಡು ಕಾಯುವವ, ಮಸಣದ ಬಳಿ ವಾಸಿಸುವವ ಎಂದರ್ಥ. ಕನ್ನಡದಲ್ಲಿ ಇವರನ್ನು

'ಸುಡಗಾಡು ಸಿದ್ಧ' ಎಂದು ಕರೆಯುತ್ತಾರೆ. ಗಂಗಡಿಕಾರ ಒಕ್ಕಲಿಗ ಕುಲಕ್ಕೆ ಸೇರಿದ ಇವರು ಪ್ರತ್ಯೇಕವಾಗಿ ಕವಲೊಡೆದು ಸುಡುಗಾಡು ಸಿದ್ಧರಾದರು. ಶ್ಮಶಾನ ಶುಲ್ಕ ಸಂಗ್ರಹಿಸಿ ಜೀವನ ಸಾಗಿಸುತ್ತಾರೆಂದು ಮೆಕೆಂಜಿ ಹೇಳಿದ್ದಾರೆ[79]. ಇವರ ಕೈಯಲ್ಲಿರುವ ಲೋಹದ ಗಂಟೆ, ಕಟ್ಟಿಗೆಯ ಗಂಟೆ ಇವರನ್ನು ಗುರುತಿಸುವ ಸಂಕೇತವಾಗಿದೆ. ತೆಲಂಗಾಣದಲ್ಲಿ ಕಾಡು ಪಾಪರು (ಸುಡುಗಾಡು ಸಿದ್ಧರು) ತಲೆಯ ಮೇಲೆ ನೇರವಾಗಿ ಮೇಲಕ್ಕೆದ್ದಿರುವ ಹಿತ್ತಾಳೆಯ ರೇಕುಗಳಿಂದ ಕೂಡಿದ ಕಿರೀಟ ಧರಿಸುತ್ತಾರೆ. ಕೋಸ್ತಿ ಆಂಧ್ರದ ಕಾಟ ಪಾಪರು ಬೀದಿ ನಾಟಕದಿ ಧರಿಸುವ ರೀತಿಯ ಕಿರೀಟ ಧರಿಸುವರು. ಇವರನ್ನು ಕನ್ನಡದಲ್ಲಿ ಸುಡುಗಾಡು ಸಿದ್ಧ ಎಂದು ಕರೆಯುವುದಲ್ಲದೆ ಕಾಡಸಿದ್ಧ, ಮಸಣದ ಒಡೆಯರು, ಸಿದ್ಧಯ್ಯಗಳು , ಸ್ಮಶಾನ ಜೋಗಿಗಳು, ನಿರಂಜಯ್ಯಗಳು, ತೆಲುಗು ಜಂಗಮರೆಂತಲೂ ಕರೆಯುತ್ತಾರೆ[80]. ಇವರು ಹರಿಶ್ಚಂದ್ರ ಕಥೆಯ ವೀರ ಬಾಹುಕನ ವಂಶದವರೆಂದು ಐತಿಹ್ಯಗಳು ಸಾರುತ್ತವೆ[82]. ಇಂದ್ರಜಾಲ ವಿದ್ಯೆಯಲ್ಲಿ ಇವರು ಪರಿಣಿತರು ಅಲ್ಲದೆ ಜನಪದ ವೈದ್ಯರಾಗಿಯೂ ಕಂಡು ಬರುತ್ತಾರೆ.

ಸುಡುಗಾಡು ಸಿದ್ಧರು "ಕರಿ ಬಣ್ಣದ ಉದ್ದವಾದ ಗೌನು, ಚಿಕ್ಕ ಚಿಕ್ಕ ಹಿತ್ತಾಳೆ ರೇಕು ಹಾಗೂ ನವಿಲು ಗರಿಯಿಂದ ಅಲಂಕರಿಸಿದ ಉದ್ದವಾದ ಕಿರೀಟ, ಕೊರಳಿಗೆ ರುದ್ರಾಕ್ಷಿ ಹಾಗೂ ಹೂ ಮಾಲೆ, ಸೊಂಟಕ್ಕೆ ಕಿರುಗಂಟೆ, ಹಣೆಗೆ ವಿಭೂತಿ ಇಲ್ಲವೆ ಬೆರಣಿಯ ಬೂದಿ, ಕಬ್ಬಿಣದ ಗಂಟೆ", ಜೊತೆಗೆ ಭುಜದ ಮೇಲೆ ಎರಡು ಕಡೆ ಕೆಂಪುರುಮಾಲು, ಶಾಲು, ಕೈಲೊಂದು ಶಂಖ, ಬಲಗೈಲಿ ಹಿತ್ತಾಳಿ, ತಾಮ್ರ ಮಿಶ್ರಿತ ತಗಡಿಂದ ತಯಾರಿಸಿದ ಬಡಿಗೆ, ಮುಖಕ್ಕೆ ಅರಿಶಿಣ, ಕರಿಬೊಟ್ಟು, ಪೊದೆ ಮೀಸೆ, ಗುಬುರು ಗಡ್ಡ - ಈ ಬಗೆಯ ವೇಷ ಭೂಷಣಗಳ ಮೂಲಕ ಪ್ರೇಕ್ಷಕರಲ್ಲಿ ಭಯಭೀತಿ ಮೂಡಿಸುತ್ತಾರೆ. ಗಂಟೆ,ಶಂಖ, ನಾದಗಳ ನಂತರ ತಲೆ ಬುರುಡೆ ಹಾಗೂ ಎರಡು ಎಲುಬುಗಳನ್ನು (ಮೇಕೆ / ಕುರಿ ಕಾಲಿನವು) ತೆಗೆದಿರಿಸಿ ಜಾದೂ ಆರಂಭಿಸುವರು. ಬಾಯಿಯಿಂದ ಕಪ್ಪೆ, ತೇಳು, ವಿಗ್ರಹ, ನಾಣ್ಯ, ಗಜುಗ ಕಾಯಿ ಮುಂತಾದವುಗಳನ್ನು ತೆಗೆದು ಅದ್ಭುತಾನುಭವವನ್ನು ನೋಡುಗರಲ್ಲಿ ಮೂಡಿಸುವರು. ಆಟದ ನಂತರ ಊರಲ್ಲಿ ಭಿಕ್ಷೆ ಬೇಡುವರು. ಊರಿನ ಶವಯಾತ್ರೆಯಲ್ಲಿ ಮಾಮೂಲಿ ವಸೂಲಿ ಮಾಡುವರು. ಕೊಡದ ಪಕ್ಷದಲ್ಲಿ ಕಾಷ್ಟದ ಮೇಲೆ ಮಲಗಿ ಕೊಡುವವರೆಗೆ ಬಿಡರು[82]. ತಮ್ಮಲ್ಲಿಯ ಮಾಯಾಜಾಲ ವಿದ್ಯೆಯಿಂದ ಬುಡ್ಗ ಜಂಗಮರಲ್ಲಿ ಈ ಕಲಾವಿದರು ವಿಶಿಷ್ಟವಾಗಿ ಕಂಡು ಬರುತ್ತಾರೆ.

4. ತೊಗಲು ಗೊಂಬೆಯಾಟ :

ಬುಡ್ಗ ಜಂಗಮರು ಪ್ರದರ್ಶಿಸುವ ಇದೊಂದು ವಿಶಿಷ್ಟ ಕಲೆ. ಸಂಗೀತ, ಸಾಹಿತ್ಯ, ನಾಟ್ಯ, ಚಿತ್ರಕಲೆಗಳ ಸಂಗಮ ಇದಾಗಿದೆ. ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಇದನ್ನು ಆಂಧ್ರ - ಕರ್ನಾಟಕ ಗಡಿ ಭಾಗದಲ್ಲಿ ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾಣಬಹುದು. ಈ ಕಲೆ ಕ್ರಿ.ಶ. ಪ್ರಾರಂಭದಿಂದಲೇ ಆರಂಭವಾಯಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮೊದಲು ಇದನ್ನು ಛಾಯಾನಾಟಕ, ಚರ್ಮ ನಾಟಕ ಎಂದು ಕರೆಯುತ್ತಿದ್ದರು.

ಹದಿಮೂರನೆಯ ಶತಮಾನದಿಂದ ತೆಲುಗು ಶಾಸನಗಳಲ್ಲಿ ಈ ಆಟಗಳ ಪ್ರಸ್ತಾವನೆ ಬರುತ್ತದೆ. ಹದಿನೆಂಟನೆಯ ಶತಮಾನದ ಐಯಲ್ ರಾಜು, ನಾರಾಯಣ ಕವಿ 'ಹಂಸವಿಂಶತಿ' ಯಲ್ಲಿ ತೆರೆ ನಾಟಕ ಜಂಗಮರನ್ನು ಹೆಸರಿಸಿದ್ದಾನೆ. 'ತೆರೆ ನಾಟಕ' ಎಂದರೆ ಪರದೆಗಳನ್ನು ಉಪಯೋಗಿಸಿ, ನಾಟಕಗಳನ್ನು ಪ್ರದರ್ಶಿಸುವುದೆಂದು ಕೆಲವರು ಅರ್ಥೈಸಿದ್ದಾರೆ. ಆದರೆ ತೆರೆ ನಾಟಕವೆಂದರೆ ಇದು ಮತ್ತೇನೂ ಅಲ್ಲ. ತೊಗಲು ಬೊಂಬೆಯಾಟವೆಂದು ಸಂಶೋಧಕರು ನಿರ್ಧರಿಸಿದ್ದಾರೆ. ಸಾರಾಜುಲ್ ಹಸನ್ ಅವರು ತೊಗಲುಗೊಂಬೆಯಾಟದವರನ್ನು ವರ್ಣಿಸುತ್ತಾ, ಇವರೇ ಬುಡ್ಗ ಜಂಗಮರೆಂದು ವರ್ಣಿಸಿದ್ದಾರೆ[83].

ಕರ್ನಾಟಕದಲ್ಲಿ ಮುಖ್ಯವಾಗಿ ಬಳ್ಳಾರಿ, ಹೊಸಪೇಟೆ, ಕೋಲಾರಗಳಲ್ಲಿ ತೊಗಲು ಗೊಂಬೆಯಾಟ ಹೆಚ್ಚು ಪ್ರಚಾರದಲ್ಲಿದೆ. ಈ ಕಲೆಗೆ ಸಂಬಂಧಿಸಿದ ಕ್ರಿ.ಶ. 1521ರ ತೆಲುಗು ಶಾಸನ ಕೋಲಾರ ಜಿಲ್ಲೆಯಲ್ಲಿ ದೊರೆತಿದೆ[84]. ಬಳ್ಳಾರಿ ಜಿಲ್ಲೆಯ ಬೊಮ್ಮನಹಳ್ಳಿಯಲ್ಲಿ ಒಂದು ಶಾಸನ ಸಿಕ್ಕಿದೆ. ಅದು ಗೊಂಬೆಯಾಟದವರಿಗೆ ಉಂಬಳಿ ಕೊಟ್ಟ ಶಾಸನವಾಗಿದೆ[85]. ಹೀಗೆ ಶಾಸನಗಳಲ್ಲಿ ಈ ಕಲೆಯ ವರ್ಣನೆ ಬರುವುದು. ತೊಗಲು ಗೊಂಬೆಯಾಟದವರಿಗೆ ಉಂಬಳಿ ಕೊಟ್ಟಿರುವುದು, ಈ ಕಲೆಯ ಜನಪ್ರೀಯತೆಯನ್ನು ಎತ್ತಿ ತೋರಿಸುತ್ತದೆ.

ಕರ್ನಾಟಕದಲ್ಲಿ ತೊಗಲು ಗೊಂಬೆಯಾಟದವರನ್ನು 'ಕಿಳ್ಳೇಕ್ಯಾತ' ರೆಂದು ಕರೆಯುತ್ತಾರೆ. ತಮಿಳು ನಾಡಿನಲ್ಲಿ 'ತೊಲ್‌ಪಾಲೈ'. ಕೇರಳದಲ್ಲಿ 'ತೋಲ್‌ಪವಕೂತ್ತು' ಎಂದು , ಒರಿಸ್ಸಾದಲ್ಲಿ 'ರವನ್ ಛಾಯ' ಎಂದು ಕರೆದಿದ್ದಾರೆ.

ಬುಡಿಗ ಜಂಗಮರಲ್ಲಿ 'ನಿದಾನ ಕವಿ' ಎಂಬ ಮನೆ ಹೆಸರಿನವರು, ಕೇವಲ ತೊಗಲುಗೊಂಬೆಯಾಟಕ್ಕೆ ಸೀಮಿತವಾಗಿದ್ದರೆ. ಇವರ ಜೊತೆಗೆ ಘರ್ತಂ, ವಾಂಡ್ರಾಸಿ, ಚಿತ್ತಾರಿ , ಎಡವಲ್ಲಿ, ಕೊಂಡಪಲ್ಲಿ, ಕೊಮಾರಿ, ಪೊನ್ನಕಂಟಿ ಮನೆಯವರು ಕೂಡಾ ಈ ಕಲೆಯನ್ನು ಪ್ರದರ್ಶಿಸಿ ಹೊಟ್ಟೆ ಹೊರೆಯುತ್ತಾರೆ.

ತೊಗಲು ಬೊಂಬೆ ಹೆಸರೇ ಸೂಚಿಸುವಂತೆ, ಇವುಗಳನ್ನು ತಯಾರಿಸಲು ಕುರಿ ಚರ್ಮ, ಮೇಕೆ ಚರ್ಮ, ಜಿಂಕೆ ಚರ್ಮ ಬಳಸುತ್ತಾರೆ. ಪುರುಷ ಗೊಂಬೆಗೆ ಮೇಕೆ ಚರ್ಮ ಬಳಸಿದರೆ, ಸ್ತ್ರೀ ಗೊಂಬೆಗೆ ಕುರಿ, ಜಿಂಕೆ ಚರ್ಮ ಬಳಸುತ್ತಾರೆ. ಅವುಗಳಿಗೆ ಬಣ್ಣ ಹಚ್ಚಿ ಬಿಸಿಲಿನಲ್ಲಿ ಒಣಗಿಸಿಡುತ್ತಾರೆ. ಬೆಳಕಿನಿಂದ ಕಂಗೊಳಿಸಲು, ಬೊಂಬೆಗಳ ಮೇಲೆ ರಂಧ್ರ ಕೊರೆದಿರುತ್ತಾರೆ. ಹೀಗೆ ಗೊಂಬೆಗಳನ್ನು ತಯಾರಿಸಿದ ಮೇಲೆ, ನಾಲ್ಕು ಅಥವಾ ಐದು ಅಡಿ ಜಾಗದಲ್ಲಿ ಒಂದು ಬಿಳಿ ಪರದೆ, ಅದರ ಒಂದು ಭಾಗದಲ್ಲಿ ತಮಟೆ ಬಡಿಯುವವನಿರುತ್ತಾನೆ. ಇನ್ನೊಂದೆಡೆ ಸೂತ್ರಧಾರನಿರುತ್ತಾನೆ. ಪರದೆಯ ಹಿಂದುಗಡೆ ದೂರದ ಒಂದು ಕೊನೆಯಲ್ಲಿ ಪ್ರಕಾಶಮಾನವಾಗಿ ಉರಿಯುವ ಒಂದು ಪಂಜಿರುತ್ತದೆ. ಪಂಜು ಹಾಗೂ ಪರದೆಯ ಮಧ್ಯೆ ಗೊಂಬೆಗಳನ್ನು ಆಡಿಸುತ್ತಾರೆ. ಸೂಕ್ಷ್ಮವಾದ ದಾರ ಹಾಗೂ ತೆಳ್ಳನೆಯ ಕಡ್ಡಿಗಳಿಂದ ಗೊಂಬೆಗಳ ಚಲನ ವಲನಗಳನ್ನು ನಿಯಂತ್ರಿಸಲಾಗುತ್ತದೆ. ಇವುಗಳನ್ನು ಸೂತ್ರಧಾರನು ಹಿಡಿದಿರುತ್ತಾನೆ.

ತೊಗಲು ಗೊಂಬೆಯಾಟದ ಒಂದು ಪ್ರದರ್ಶನ ನಡೆಯಬೇಕಾದರೆ ಆ ಕುಟುಂಬದವರೆಲ್ಲರೂ ಅದರಲ್ಲಿ ಭಾಗವಹಿಸಿರುತ್ತಾರೆ. ಗೊಂಬೆಯಾಟಕ್ಕೆ ಸಂಗೀತದ ಹಿನ್ನೆಲೆಗಾಗಿ ತಮಟೆ, ತಾಳ ಇತ್ಯಾದಿ ವಾದ್ಯಗಳನ್ನು ಬಳಸುತ್ತಾರೆ. ತೊಗಲು ಬೊಂಬೆಯಾಟ, ಸರಸ್ವತಿ, ಗಣೇಶ ಪ್ರಾರ್ಥನೆಯೊಂದಿಗೆ ಆರಂಭವಾಗುವುದು. ಸೂತ್ರಧಾರ ಕಥೆ ಆಡಿಸುವಾತನು. ಕತೆಯ ಕಥಾ ಪ್ರಸಂಗ ವಿವರಿಸಿದ ಬಳಿಕ ಆಟ ಆರಂಭವಾಗುವುದು. ತೊಗಲು ಬೊಂಬೆಯಾಟಗಳಲ್ಲಿ ಹೆಚ್ಚಾಗಿ ವಿರಾಟ ಪರ್ವ (ಮಳೆಗಾಗಿ), ರಾವಣ ವಧೆ (ಊರಿನ ಅನಿಷ್ಟ ತೊಲಗಲು) ಆಡಿಸಲಾಗುತ್ತದೆ. ಆಟದ ಮಧ್ಯೆ ಮಧ್ಯೆ ಸಂದರ್ಭಕ್ಕೆ ತಕ್ಕಂತೆ ಕೇತಿಗ, ಜುಟ್ಟು ಪೋಲಿಗ , ಗಂಡೋಳಿಗ, ಬಂಗಾರಕ್ಕ ಹಾಸ್ಯ ಪಾತ್ರಗಳು ಮನರಂಜನೆ ಒದಗಿಸುತ್ತವೆ.

ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲಿ ಹಾಗೂ ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಇಂದಿಗೂ ಇದು ಬಹಳ ಜನಪ್ರಿಯ ಮನ ರಂಜನಾ ಕಲೆಯಾಗಿದೆ. 'ಈ ಪ್ರದರ್ಶನ ನಡೆದರೆ ಕಾಲಕ್ಕೆ ಸರಿಯಾಗಿ ಮಳೆಯಾಗುತ್ತದೆ' ಎಂದು ಜನ ನಂಬಿದ್ದಾರೆ. ತೊಗಲು ಬೊಂಬೆಯಾಟದವರು ತಮ್ಮ ಕಲೆಯನ್ನು ಇಂದಿಗೂ ಉಳಿಸಿ, ಬೆಳೆಸಿಕೊಂಡು ಬಂದಿರುವುದರ ಜೊತೆಗೆ ಗ್ರಾಮೀಣರಿಗೆ ಮನರಂಜನೆ ನೀಡುವ ಮೂಲಕ ತಮ್ಮ ಜೀವನಕ್ಕೊಂದು ಮಾರ್ಗ ಕಂಡು ಕೊಂಡು ಮುನ್ನಡೆದಿದ್ದಾರೆ.

5. ಬೀದಿ ಭಾಗವತರು :

ಬೀದಿ ನಾಟಕ ಯಕ್ಷಗಾನ ಬಯಲಾಟದಂತೆಯೇ ಬೀದಿ ಭಾಗವತ ಕಲೆ ಕಂಡು ಬರುತ್ತದೆ. ಒಂದು ರೀತಿಯಲ್ಲಿ ಈ ಕಲೆಗಳು ಒಂದನ್ನೊಂದು ಹೋಲುತ್ತವೆ. ಈ ಕಲೆಯನ್ನು ಬುಡ್ಗ ಜಂಗಮರು ತಮಗೆ ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಂಡಿದ್ದಾರೆ. ಸಮಯ ಸಂದರ್ಭಾನುಸಾರವಾಗಿ ಪ್ರೇಕ್ಷಕರ ಅಭಿಲಾಷೆಗನುಗುಣವಾಗಿ ಈ ಕಲೆ ಪ್ರದರ್ಶಿಸುತ್ತಾರೆ. ಭಾಗವತರು ಕಥೆ ಹೇಳಿದರೆ, ಬೀದಿ ಭಾಗವತ, ಸಂವಾದವನ್ನನುಸರಿಸಿ ನಾಟಕ ಕ್ರಮದಿಂದ ಹೇಳಿದರೆ, ಬೀದಿ ನಾಟಕ, ಊರ ಹೊರಗೆ ಬಹಿರಂಗ ಪ್ರದೇಶದಲ್ಲಿ ಆಡಿದರೆ, ಅದು ಬಯಲಾಟವಾಗುತ್ತದೆ. ಯಕ್ಷಗಾನವೇ ಭಾಗವತದ ಮೂಲವಾಗಿದೆ. ಕರ್ನಾಟಕದಲ್ಲಿ ಭಾಗವತ ಕಲೆಯನ್ನು 'ಬಯಲಾಟ' ವೆಂದು ಕರೆಯುತ್ತಾರೆ. ತಮಿಳು ನಾಡಿನಲ್ಲಿ 'ತೆರಕೊತ್ತು' ಎಂದು ಕರೆಯುತ್ತಾರೆ.

ಬುಡ್ಗ ಜಂಗಮ ಭಾಗವತ ಕಲೆಯಲ್ಲಿ ಎರಡು ಪ್ರಕಾರಗಳು ಕಂಡು ಬರುತ್ತವೆ.

1. ಯಕ್ಷಗಾನ ಹಿನ್ನೆಲೆಯಿಂದ ಭಾಗವತ ಕಲೆ ಪ್ರದರ್ಶಿಸುವುದು.

2. ತಂದಾನ ಕಥೆಗಳ ಹಿನ್ನೆಲೆಯಿಂದ ಭಾಗವತ ಕಲೆ ಪ್ರದರ್ಶಿಸುವುದು[86].

1) ಯಕ್ಷಗಾನಾಧಾರಿತ ಭಾಗವತ ಕಲೆಯಲ್ಲಿ ಪುರುಷೋತ್ತಮ ರಚಿಸಿದ ಪ್ಯಾರಾವಾರಪುರ ಮೈರಾವಣ ಚರಿತ್ರೆ, ವೇಮುಲವಾಡ ಪಲ್ಲಿಯ ವಿರಾಟ ಪರ್ವ, ಕಾಕತಿಯಾಚಾರ್ಯನ ಸಿಕಂದರಾಬಾದ ಶತಕಂಠ ರಾಮಾಯಣ, ಚಂದ್ರ ಹಾಸ, ಪ್ರಹ್ಲಾದ ಚರಿತೆ, ಸುಗ್ರೀವ ವಿಜಯ ಮುಂತಾದವುಗಳು ಪ್ರಮುಖವಾಗಿವೆ.

2) ಯಕ್ಷಗಾನಾಧಾರಿತ ಭಾಗವತಕ್ಕಿಂತ ತಂದಾನ ಕಥೆಯ ಭಾಗವತ ಸರಳ ಹಾಗೂ ಸುಲಭ. ಇಲ್ಲಿ ಕಂಠ ಪಾಠವಿರುವ ಕಥೆಗಳನ್ನೆ ಆಯ್ದು ಕೊಳ್ಳುತ್ತಾರೆ. ಇದು ನಾಯಕಿ ಪ್ರಧಾನ ಕಲೆ. ಪ್ರಾರಂಭದಲ್ಲಿ ಸರಸ್ವತಿ ವಿನಾಯಕ, ಬಾಲ ಕೃಷ್ಣ, ರಂಭೆ, ಒಬ್ಬರ ನಂತರ ಒಬ್ಬರು ಬರುತ್ತಾರೆ. ಬಾಲಕೃಷ್ಣ ವೇಷ ಹುಡುಗರಲ್ಲಿ ಅರಿವು ಮೂಡಿಸುವ ಉದ್ದೇಶ ಹೊಂದಿರುತ್ತದೆ. ರಂಭೆ ಪಾತ್ರ ನಾಯಕಿ ಪಾತ್ರಕ್ಕೆ ಮುನ್ನುಡಿಯಿದ್ದಂತೆ. ನಾಯಕಿ ಪಾತ್ರವನ್ನು ಆಂಧ್ರದಲ್ಲಿ 'ಮೇಟಿ ವೇಷ'ವೆಂದು ಕರೆಯುತ್ತಾರೆ. ಬುಡ್ಗ ಜಂಗಮರ ಯಾವುದೇ ಕಲೆಯಲ್ಲಿ ಸ್ತ್ರೀಯರು ವೇಷ ಹಾಕುವುದಿಲ್ಲ. ಸ್ತ್ರೀ ವೇಷಗಳನ್ನು ಪುರುಷರೇ ಹಾಕುತ್ತಾರೆ. ಆದರೆ ಇದಕ್ಕೆ ಅಪವಾದವೆನ್ನುವಂತೆ ತಂದಾನ ಕಥೆಯ ಭಾಗವತ ವೇಷದಲ್ಲಿ ಮೇಟಿ ವೇಷ (ಸ್ತ್ರೀ ವೇಷ) ವನ್ನು ಮಹಿಳೆಯೊಬ್ಬಳು ಹಾಕುವುದು ಆಶ್ಚರ್ಯ ಸಂಗತಿಯಾದರೂ ವಾಸ್ತವವೇ ಸರಿ. ಮಹಬೂಬ ನಗರ ಜಿಲ್ಲೆಯ ಕಲ್ಪಕುರ್ತಿ ಸಮೀಪದ ಮಸಿಗುಂಟ್ಲ ಪಲ್ಲೆಯಲ್ಲಿರುವ ಮಂಗಶೆಟ್ಟಿ ಬೀದಿ ಭಾಗವತ ಪ್ರದರ್ಶನಕ್ಕೆ ಎತ್ತಿದ ಕೈ. ಆಜನ್ಮ ಬ್ರಹ್ಮ ಚಾರಿಣಿಯಾಗಿ ತನ್ನ ಇಡೀ ಜೀವನವನ್ನೇ ಭಾಗವತ ವೇಷಕ್ಕಾಗಿ ಮುಡುಪಾಗಿಟ್ಟಿದ್ದಾಳೆ. ಬೀದಿ ಭಾಗವತ ಕಲೆಯ ಸ್ತ್ರೀ ಪಾತ್ರ ಮಾಡುತ್ತ ತನ್ನಲ್ಲಿಯ ಅಪೂರ್ವ ಕಲಾ ಪ್ರತಿಭೆಯನ್ನು ಮೆರೆದಿದ್ದಾಳೆ[87]. ಬುಡ್ಗ ಜಂಗಮರ ಕಲಾವೃತ್ತಿ ಹಲವಾದರೂ ಅಧಿಕ ಜನರು ಬೀದಿ ಭಾಗವತ ಕಲೆಯನ್ನು ಪ್ರದರ್ಶಿಸುತ್ತಾರೆ.

ಆಧಾರಗಳು

1.	ಬುಡಿಗ ಜಂಗಾಲು : ಡಾ. ಎನ್. ಆರ್. ವೆಂಕಟೇಶಂ	ಪುಟ - 18
2.	ಬುಡಿಗ ಜಂಗಾಲು : ಡಾ. ಎನ್. ಆರ್. ವೆಂಕಟೇಶಂ	ಪುಟ - 19
3.	ಮಾನವ ಧರ್ಮ ಶಾಸ್ತ್ರ : ಸುರೇಶ ಸ್ವಾಮಿ,	ಪುಟ - 355
4.	ಕಾಯಕ ಪರಿಣಾಯಿ, ಡಾ. ಎಂ. ಎಂ. ಕಲಬುರ್ಗಿ	ಪುಟ - 780
5.	ಅಲ್ಲೇ	ಪುಟ - 782
6.	ವಚನ ಸಾಹಿತ್ಯ ವೈಚಾರಿಕ ಅಧ್ಯಯನ : ಡಾ॥ ಎಚ್. ತಿಪ್ಪೆರುದ್ರಸ್ವಾಮಿ	ಪುಟ - 58
7.	ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ : ಸಂ. ಜಿ ಎಸ್. ಶಿವರುದ್ರಪ್ಪ	ಪುಟ - 35
8.	ಬಸವೇಶ್ವರರ ಸಮಕಾಲೀನರು : ಬಸವ ಸಮಿತಿ ಬೆಂಗಳೂರು , 1989	ಪುಟ - 596
9.	ಅಲ್ಲೇ	ಪುಟ - 596
10.	ಅಲ್ಲೇ	ಪುಟ - 612
11.	ಗಿರಿಜನ ಸಿರಿ : ಸಂ ಡಾ. ಡಿ. ಬಿ. ನಾಯಕ ,	ಪುಟ -356
12.	ಅಲ್ಲೇ	ಪುಟ:362-3
13.	ಸುವರ್ಣ ಜಾನಪದ ಸಂಪುಟ - 1 : ಸಂ. ಡಾ. ಎಚ್. ಜೆ. ಲಕ್ಕಪ್ಪಗೌಡ	ಪುಟ - 143
14.	ಬಸವೇಶ್ವರರ ಸಮಕಾಲೀನರು :	ಪುಟ - 414
15.	ಅಲ್ಲೇ	ಪುಟ - 415
16.	ಸಕಲ ಪುರಾತನರ ವಚನಗಳು ಸಂಪುಟ - 2 : ಸಂ. - ಎಂ ಎಸ್. ಸುಂಕಾಪುರ , ವಚನ ಸಂಖ್ಯೆ - 1521 ,	ಪುಟ - 536
17.	ಬಸವೇಶ್ವರರ ಸಮಕಾಲೀನರು :	ಪುಟ - 416
18.	ಜಂಗಮ : ಹಿರೆ ಮಲ್ಲೂರು ಈಶ್ವರನ್,	ಪುಟ - 10
19.	ಮೇದಕ್ ಜಿಲ್ಲಾ ಗ್ರಾಮ ನಾಮಗಳು (ಅಪ್ರಕಟಿತ)	ಪುಟ -15
20.	ಗ್ರಾಮ ನಾಮಗಳು : ಭಾಷಾ ಸಾಮಜಿಕ ಚಿಂತನೆ	ಪುಟ - 116
21.	ಮೇದಕ್ ಜಿಲ್ಲಾ ಗ್ರಾಮನಾಮಗಳು (ಅಪ್ರಕಟಿತ)	ಪುಟ -16
22.	Raghunathji K : Bombay Beggars and Criers, The Indian Antiquary, A journal of Oriental Research Vol. X	Page - 71

23. Perumal A.N. (Dr) - Folk Arts of the Tamils, International Institute of Tamil Studies, Taramani, Madras, 1983 Page: 51-52

24. The Caste andTribes of Southern India : Vol. No. II, Page - 450

25. The Caste and Tribes of H.E.H. : The Nizam's Dominions Page- 505

26. Caste and Tribes of Southern India : by Edgar Thurston, Page - 454

27. ಅಲ್ಲೇ ಪುಟ - 903

28. ಅಲ್ಲೇ ಪುಟ - 904

29. ತೆಲುಗು ಜಾನಪದ ಪದ್ಯ ಸಾಹಿತ್ಯ (ತೆಲುಗು) ಪುಟ - 6

30. ತೆಲುಗು ಜಾನಪದ ಗೀತ ಕಥೆಗಳು ಪುಟ - 86

31. ಆಂಧ್ರ ನಾಟಕ ರಂಗ ಚರಿತ್ರೆ ಪುಟ - 6

32. ಬಾಲ ಸಂತನ ಉತ್ತರ ರಾಮಾಯಣ (ಪ್ರಬಂಧ) ಭಾರತಿ ಪುಟ - 18

33. ಪ್ರಜಾಕಲೆಗಳು - ಪ್ರಗತಿವಾದಿಗಳು ಪುಟ - 1

34. ಕರ್ನಾಟಕ ಬುಡಕಟ್ಟುಗಳು : ಸಂಪುಟ - 2, ಪುಟ - 463

35. ಉತ್ತರ ಕರ್ನಾಟಕದ ಬಯಲಾಟಗಳು : ಡಾ. ಬಸವರಾಜ ಮಲಶೆಟ್ಟಿ ಪುಟ - 20

36. ಅಲ್ಲೇ ಪುಟ - 22

37. ಅಲ್ಲೇ ಪುಟ - 23

38. ಕರ್ನಾಟಕ ಬುಡಕಟ್ಟುಗಳು , ಸಂಪುಟ - 2 ಪುಟ - 463

39. ಬುಡಿಗ ಜಂಗಾಲು : ಡಾ. ಎನ್. ಆರ್. ವೆಂಕಟೇಶಂ. ಪುಟ - 42

40. The Scheduled caste : K.S. Singh, Indian Communities A.C., 1998 p. 202-207

41. ಕನ್ನಡ ಕಸ್ತೂರಿ ಅರ್ಥ ಕೋಶ, ಸಂಕೇಶ್ವರ ಪ್ರಕಾಶನ, ಗದಗ

42. Kittel F (Rev) Kannada - English Dictionary Mangalore Basei Mession Book and tract Dipository, 1894 p. 1894

43. Caste certificate problems of Budga Jangama's :
K.M. Metry 1999, page - 5
44. ಮಾಹಿತಿ ನೀಡಿದವರು : ರಾಮುಡು, ವಯಸ್ಸು - 40,
ಹಳೆದರೋಜಿ, ವೃತ್ತಿ, ಎಲ್. ಐ.ಸಿ. ಏಜೆಂಟ್
45. ಮಾಹಿತಿ ನೀಡಿದವರು : ನಾಗಭೂಷಣಪ್ಪ, ವಯಸ್ಸು - 60
ಹಳೆದರೋಜಿ, ವೃತ್ತಿ ವೇಷಗಾರಿಕೆ
46. ಕರ್ನಾಟಕದಲ್ಲಿ ವೇಷಗಾರರು ಒಂದು ಸಾಂಸ್ಕೃತಿಕ ಅಧ್ಯಯನ
(ಪಿ ಎಚ್ ಡಿ ಪ್ರಬಂಧ) ಅಪ್ರಕಟಿತ ಪುಟ - 38
47. ಬುಡ್ಗ ಜಂಗಮ : ಸಂ ಡಾ. ಕೆ. ಎಮ್. ಮೈತ್ರಿ
(Budga Jangams of Karnataka) ಪುಟ:143 - 46
48. ವೇಷಗಾರರು : ಎಂ. ಎಂ. ಕಲ್ಬುರ್ಗಿ,
ಜಾನಪದ ಸಾಹಿತ್ಯ ದರ್ಶನ - 6, ಪುಟ - 302
49. ಬಸವಣ್ಣ, ಚೆನ್ನ ಬಸವಣ್ಣ ಮುಂತಾದ ವಚನಕಾರರು
ತಮ್ಮ ವಚನಗಳಲ್ಲಿ ಈ ಪದಗಳನ್ನು ಬಳಸಿದ್ದಾರೆ.
50. ಜಾನಪದ ಸಾಹಿತ್ಯ ದರ್ಶನ - 6
(ವೇಷಗಾರರು : ಎಂ . ಎಂ. ಕಲ್ಬುರ್ಗಿ) ಪುಟ - 302
51. ಕವಿರಾಜ ಮಾರ್ಗ ಸಂ : ಎಂ. ವಿ. ಸೀತಾರಾಮಯ್ಯ : ಪರಿಚ್ಛೇದ - 1 ,
ಪದ್ಯ - 68, ಪುಟ - 14
52. ವಡ್ಡಾರಾಧನೆ : ಸಂ: ಡಿ. ಎಲ್. ನರಸಿಂಹಾಚಾರ, ಪುಟ - 113
53. ಚೆನ್ನಬಸವಣ್ಣನವರ ವಚನ : ಸಂ :
ಡಾ. ಆರ್. ಸಿ. ಹಿರೇಮಠ , ವ - 200, ಪುಟ - 91
54. ಧರ್ಮಾಮೃತ : ನಯಸೇನ, ಆಶ್ವಾಸ 4 - ಪದ್ಯ 77
55. - ಅದೇ - ಆಶ್ವಾಸ 5 - ಪದ್ಯ 103
56. - ಅದೇ - ಆಶ್ವಾಸ 2 - ಪದ್ಯ 105
57. - ಅದೇ - ಆಶ್ವಾಸ 10 - ಪದ್ಯ 67
58. ಸುವರ್ಣ ಜಾನಪದ ಸಂಪುಟ - 1 :
ಸಂ: ಹಿ . ಶಿ ರಾಮಚಂದ್ರಗೌಡ, ಪುಟ - 140
59. ಅಲ್ಲೇ ಪುಟ - 151
60. ಹಗಲು ವೇಷದವರ ಸಂಸ್ಕೃತಿ : ಯಳನಾಡು ಅಂಜನಪ್ಪ , ಪುಟ - 14

61. 'The Mysore Tribes and Castes,
by H.V. Nanjundayya and L.K. Ananthkrishna Iyer:
Vol - III Page468-471

62. The Boyas called in Canarese Bedars, Byedar or
Byadar Castes andTribes of Southern India, Vol - I Page-183

63. In Madras Census Report - 1901, it is stated that
the Caste Boya has four endogamous
sections : Pedda, Chinna, Sadaru and Myasa.
Sadaru is the name of the Sub-division of
lingayats found mainly in the Bellary,
Ananthapur, districts. Some Bedas who
live a midst those lingayats call themselves
sadaru -Vol I Page-185

64. ಕನ್ನಡ - ಇಂಗ್ಲೀಷ ಡಿಕ್ಸನರಿ : ರೆವರೆಂಡ ಕಿಟ್ಟೆಲ್ : ಪುಟ 1148

65. ಅಲ್ಲೇ, ಪುಟ 1148

66. ಬುಡಿಗ ಜಂಗಾಲು : ಡಾ|| ಎನ್. ಆರ್. ವೆಂಕಟೇಶಂ, ಪುಟ 28

67. ಕನ್ನಡ - ಇಂಗ್ಲೀಷ್ ಡಿಕ್ಸನರಿ : ಕಿಟ್ಟೆಲ್ , ಪುಟ 1149

68. ಬುಡಿಗ ಜಂಗಾಲು : ಡಾ. ಎನ್. ಆರ್. ವೆಂಕಟೇಶಂ, ಪುಟ 41

69. ಲಿಂಗಾಯತ ಅಧ್ಯಯನಗಳು : ಡಾ. ಚಿದಾನಂದ ಮೂರ್ತಿ, ಪುಟ 488

70. ಡಾ. ಚಿದಾನಂದ ಮೂರ್ತಿ ಮತ್ತು ಡಾ. ಎಚ್. ಎಮ್. ಮರುಳ
ಸಿದ್ಧಯ್ಯ ಇವರ ಜಂಟಿ ಹೇಳಿಕೆ (ಬುಡ್ಗ ಜಂಗಮರು :
ಪ್ರಧಾನ ಸಂ: ಡಾ. ಕೆ. ಎಮ್. ಮೈತ್ರಿ) ಪುಟ 125

71. ಆಧಾರ Budga Jangama's of Karnataka : Dr. K.M. Maitry
(ಬುಡ್ಗ ಜಂಗಮರು : ಪ್ರಧಾನ ಸಂ: ಡಾ. ಕೆ. ಎಂ. ಮೈತ್ರಿ , ಪುಟ : 125)

72. ಮಾಹಿತಿ ನೀಡಿದವರು ರಾಮಣ್ಣ , ವಯಸ್ಸು - 45, ಹಳೇದರೋಜಿ

73. ಸದರಿಯವರೇ ಮಾಹಿತಿ ನೀಡಿದ್ದಾರೆ.

74. ಬುಡಿಗ ಜಂಗಾಲು : ಡಾ. ಎನ್. ಆರ್. ವೆಂಕಟೇಶಂ, ಪುಟ 103

75. ತೆಲುಗು ನಾಟಕ ವಿಕಾಸ : ಪುಟ 164

76. ಜಾನಪದ ಸಾಹಿತ್ಯ ದರ್ಶನ ಭಾಗ - 6,
ಸಂ. ಎಂ. ಎಸ್. ಸುಂಕಾಪುರ ಪುಟ 302

77. ಬುಡಿಗ ಜಂಗಾಲು : ಡಾ. ಎನ್. ಆರ್. ವೆಂಕಟೇಶಂ. ಪುಟ 106

78. ಮಾಹಿತಿ ನೀಡಿದವರು ನಾಗಭೂಷಣಪ್ಪ,
ವಯಸ್ಸು - 75, ಹಳೆದರೋಜಿ, ವೃತ್ತಿ ವೇಷಗಾರ

79. The Caste and Tribes of Southern
India Vol VI, Page - 405

80. ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ :
ಡಾ. ಟಿ. ಎಂ. ಭಾಸ್ಕರ , ಪುಟ : 23

81. The Caste and Tribes of H.E.H. the
Nizam's Dominions, Page-503

82. ಜಾನಪದ ಭಿಕ್ಷುಕ ಗಾಯಕರು : ಡಾ. ಎನ್. ಯಾದಗಿರಿ ಶರ್ಮರ
ವಿವರಣೆ (ಅಪ್ರಕಟಿತ ಪಿ ಎಚ್ ಡಿ) ಪುಟ 120

83. The caste and Tribes of H.E.H. the
Nizam's Dominions, Page - 507

84. ಬುಡಿಗ ಜಂಗಾಲು ಡಾ. ಎನ್. ಆರ್. ವೆಂಕಟೇಶಂ ಪುಟ 89

85. ತೆಲುಗು ನಾಟಕ ವಿಕಾಸ : ಪುಟ 147

86. ಬುಡ್ಗ ಜಂಗಾಲು : ಡಾ. ಎನ್. ಆರ್ .ವೆಂಕಟೇಶಂ ಪುಟ 98

87. ಅಲ್ಲೇ , ಪುಟ 98

ಅಧ್ಯಾಯ - 3

ಬುರ್ರಕಥಾ ಪರಂಪರೆ

ಅಧ್ಯಾಯ - 3

ಬುರ್ರ ಕಥಾ ಪರಂಪರೆ

ಜನಪದ ಕಾವ್ಯಗಳು ವಿಶಿಷ್ಟವೂ, ವೈವಿಧ್ಯಮವೂ ಆಗಿ ಸಾವಿರಾರು ವರ್ಷಗಳಿಂದ ಅವು ಮೌಖಿಕವಾಗಿ ತಲೆ ಮಾರಿನಿಂದ ತಲೆಮಾರಿಗೆ ಸಾಗಿ ಬರುತ್ತಿವೆ. ಜನಪದ ಗಾಯಕ ವರ್ಗ ಅವುಗಳನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿದೆ. ತನ್ನ ಸುತ ಮುತ್ತಲಿನ ಪ್ರಕೃತಿ ಪರಿಸರ, ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ರಾಜಕೀಯ, ಘಟನೆಗಳು ಗೀತೆ, ಹಾಡು ಕಾವ್ಯ - ಮಹಾಕಾವ್ಯ ಹೀಗೆ ಅನೇಕ ರೂಪ ತಳೆಯಲಿಕ್ಕೆ ಕಾರಣವಾಗಿದೆ. ಈ ಕಾವ್ಯಗಳು ನಾಡಿನ ಅಥವಾ ದೇಶದ ಸಾಂಸ್ಕೃತಿಕ ಮೌಲ್ಯಗಳು ಹಾಗ ಮಾನವನ (ಸಮಾಜದ) ಉನ್ನತಿ - ಅವನತಿಗಳು ಪ್ರತಿಬಿಂಬಿಸುತ್ತವೆ. ಅಲ್ಲದೆ ಮೂಲ ಸಂಸ್ಕೃತಿಯನ್ನು ಶಿಷ್ಯ ಕಾವ್ಯಗಳನ್ನು ರಚಿಸುವುದರ ಮೂಲಕ ಶಿಷ್ಯ ಸಂಸ್ಕೃತಿಯನ್ನು ಜೀವಂತವಾಗಿಡುತ್ತವೆ. ನಮ್ಮ ಕವಿಗಳು ಜೀವಂತವಾಗಿಸಿದರೆ , ಜನಪದ ಕಾವ್ಯಗಳನ್ನು ವಂಶ ಪಾರಂಪರ್ಯವಾಗಿ ಹಾಡುವುದರ ಮೂಲಕ ಜನಪದ ಗಾಯಕರು, ಜನಪದ (ಮೂಲ) ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಆಯಾ ಕಾಲದ ಸಮಾಜದ ನಡೆ - ನುಡಿ, ಆಚಾರ - ವಿಚಾರ, ಧರ್ಮ , ಸಂಸ್ಕೃತಿ, ನಾಗರಿಕತೆ ಮುಂತಾದ ಅಂಶಗಳನ್ನು ಕಟ್ಟಿಕೊಡುವಲ್ಲಿ ಜನಪದ ಗಾಯಕ ವರ್ಗದ ಪಾತ್ರ ಮಹತ್ವದ್ದಾಗಿದೆ.

ಈ ಗಾಯಕ ವರ್ಗವನ್ನು ನಾವು ಮೂರು ವಿಭಾಗಗಳಲ್ಲಿ ನೋಡಬಹುದು.

1) ಸಾಮಾನ್ಯ ಗಾಯಕ ವರ್ಗ.

2) ಅರೆ ವೃತ್ತಿ ಗಾಯಕ ವರ್ಗ

3) ವೃತ್ತಿ ಗಾಯಕ ವರ್ಗ

I) ಸಾಮಾನ್ಯ ಗಾಯಕ ವರ್ಗ :

ಸ್ವಸಂತೋಷಕ್ಕಾಗಿ ಹಾಡುವ ವರ್ಗ. ಇವರು ಯಾವುದೇ ರೀತಿಯ ನಿರ್ದಿಷ್ಟ ಶ್ರೋತೃ ವರ್ಗವನ್ನು ಹೊಂದಿರುವುದಿಲ್ಲ. ತಾವು ದಿನ ನಿತ್ಯ ಮಾಡುವ ಕೆಲಸದಲ್ಲಿ ತಮ್ಮ ಆಯಾಸವನ್ನು ನೀಗಿಸಕೊಳ್ಳಲು ಹಾಡುತ್ತಾರೆ. ಉದಾಹರಣೆಗೆ ಹೊಲದಲ್ಲಿ ನೇಗಿಲು, ಕುಂಟೆ ಹೊಡೆಯುವಾಗ , ಹಂತಿ ಹೊಡೆಯುವಾಗ, ರಾಶಿ ಮಾಡುವಾಗ, ಬೀಸುವಾಗ, ಕುಟ್ಟುವಾಗ, ಕಳೆ ಕಸ ತೆಗೆಯುವಾಗ , ನಾಟಿ ಮಾಡುವಾಗ , ಹಬ್ಬ ಹರಿದಿನ, ಜಾತ್ರೆ ಉತ್ಸವ, ಮದುವೆ - ಮುಂಜಿ, ಸಭೆ - ಸಮಾರಂಭ ಮುಂತಾದ ಅನೇಕ ಸಂದರ್ಭಗಳಲ್ಲಿ ಇವರು ಹಾಡು ಹೇಳುತ್ತಾರೆ. ಇಲ್ಲಿ ಹಾಡು ಅವರ ಪ್ರವೃತ್ತಿಯಾಗುತ್ತದೆ. ಇಲ್ಲಿ ಹಾಡು ಹಾಡುವ ಹಾಡುಗಾರಿಕೆಗೆ ಯಾವುದೇ ರೀತಿಯ ಸಂಭಾವನೆಯ ಅಗತ್ಯವಿಲ್ಲ. ಅವರ ಹಾಡು ಏನಿದ್ದರೂ, ಅದು ಅವರ ಸ್ವಸಂತೋಷಕ್ಕಾಗಿ. ಇವರು ವ್ಯವಹಾರಕ್ಕಾಗಿ ಹಾಡು ಕಲೆತವರಲ್ಲ. ತಮಗಿಂತ ಹಿರಿಯರು ಅಥವಾ ಕಿರಿಯರು ಯಾರೇ ಆಗಲಿ, ಅವರು ಹಾಡಿದ ಹಾಡನ್ನು ಆಲಿಸಿ ಕೇಳಿ ಕಲಿತು ಕೊಂಡು ಹಾಡುತ್ತಾರೆ.

ಹಾಡುಗಾರಿಕೆಯಲ್ಲಿ ಇವರು ಭಾಗವಹಿಸಿ, ಅದಕ್ಕೆ ಸೊಲ್ಲು ಕೊಟ್ಟು ಕಲಿತು ಕೊಂಡು ಹಾಡುತ್ತಾರೆ. ಇವರು ತಮ್ಮ ಜೀವನದ ಕಷ್ಟ ಕಾರ್ಪಣ್ಯಗಳನ್ನು ಮರೆಯಲು, ಮನಸ್ಸನ್ನು ಹಗುರ ಮಾಡಿಕೊಳ್ಳಲು ಹಾಡುತ್ತಾರೆ. ತಮ್ಮ ನೈಜ ಬದುಕಿನ ಚಿತ್ರಣ ಹಾಗೂ ಬದುಕಿನ ಆಶೋತ್ತರಗಳ ವಿವರಣೆ ಈ ಹಾಡುಗಳಲ್ಲಿರುತ್ತದೆ. ಹೀಗಾಗಿ ಇವರಿಗೆ ಹಾಡು ವ್ಯವಹಾರಿಕವಾಗದೆ, ಮನರಂಜನೆ, ಸಂತೋಷದ ಕ್ಷಣವಾಗಿ ಪರಿಣಮಿಸುತ್ತದೆ.

2) ಅರೆವೃತ್ತಿ ಗಾಯಕ ವರ್ಗ :

ಇವರು ಸಾಮಾನ್ಯ ವರ್ಗದ ಗಾಯಕರಿಗಿಂತ ಸ್ವಲ್ಪ ಭಿನ್ನವಾಗಿ ಕಂಡು ಬರುತ್ತಾರೆ. ಸಾಮಾನ್ಯ ಗಾಯಕ ವರ್ಗದ ಗುಂಪಿನಲ್ಲೇ ಕಂಡು ಬರುವ ಕೆಲವು ಕಲಾವಿದರು, ವ್ಯವಹಾರಿಕವಾಗಿರುತ್ತಾರೆ. ಸಾಮಾನ್ಯ ಗಾಯಕ ವರ್ಗದ ಗಾಯನದಲ್ಲಿ ಸಹಜತೆಯಿದ್ದರೆ, ಇವರಲ್ಲಿ ತಜ್ಞತೆಯಿರುತ್ತದೆ. ಇಂತಹ ವ್ಯವಹಾರಿಕವಾಗಿರುವ, ಹಾಡುಗಾರಿಕೆಯಲ್ಲಿ ಸ್ವಲ್ಪ ತಜ್ಞತೆಯನ್ನು ಹೊಂದಿರುವ ಗಾಯಕರನ್ನೇ ಅರೆವೃತ್ತಿಗಾಯಕರೆಂದು ಕರೆಯುತ್ತಾರೆ. ಇವರು ತಮಗಾಗಿ ಅಷ್ಟೇ ಹಾಡದೇ ಇತರರಿಗಾಗಿಯೂ ಹಾಡುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಹಾಡು ಹಾಡುತ್ತಾರೆ. ಇವರ ಹಾಡುಗಳನ್ನು ಕೇಳಿ ಆನಂದಿಸಿದ ಜನ ಇವರಿಗೆ ಬಹುಮಾನ ಉಡುಗೊರೆಗಳನ್ನು ಕೊಟ್ಟರೂ ಅದು ವೈಯಕ್ತಿಕವಾಗಿ ಬಳಸಿಕೊಳ್ಳದೇ ಸಾಮಾಜಿಕವಾಗಿ ವ್ಯಯಿಸುತ್ತಾರೆ. ಇವರು ಹಾಡುಗಾರಿಕೆ ಜೀವನೋಪಾಯಕ್ಕಾಗಿ ಬಳಸಿಕೊಳ್ಳುವವರಲ್ಲ. ಇವರು ಕಲೆಯಲ್ಲಿ ಎಷ್ಟೇ ನೈಪುಣ್ಯತೆ ಸಾಧಿಸಿದರೂ ಅದನ್ನೇ ವೃತ್ತಿಯನ್ನಾಗಿಸಿ ಕೊಂಡವರಲ್ಲ. ಜಾತ್ರೆ, ಹಬ್ಬ ಹರಿದಿನಗಳ ವಿಶೇಷ ಸಂದರ್ಭದಲ್ಲಿ ತಮ್ಮಲ್ಲಿಯ ಕಲಾ ಪ್ರದರ್ಶನವನ್ನು ಮಾಡಿ ಶ್ರೋತೃವರ್ಗವನ್ನು ತಣಿಸುತ್ತಾರೆ.

ಇವರ ವೃತ್ತಿಯೇ ಬೇರೆ, ಇವರ ಕಲೆಯೇ ಬೇರೆ ಇವರಿಗೆ ಕಲೆ ಏನಿದ್ದರೂ ಅದು ಹವ್ಯಾಸವಾಗಿ ಬರುತ್ತದೆ. ಇದರ ತಾತ್ಪರ್ಯ ಜೀವನೋಪಾಯಕ್ಕಾಗಿ ಇವರು ಬೇರೆ ವೃತ್ತಿಯನ್ನೇ ಅವಲಂಬಿಸಿರುತ್ತಾರೆ. ಇವರಲ್ಲಿರುವ ಕಲೆ ಅಂದರೆ ಹಾಡುಗಾರಿಕೆ ವಿಶೇಷ ಸಂದರ್ಭಗಳಲ್ಲಿ ಹಾಡಿ ಜನಮನವನ್ನು ತಣಿಸುವ ಹವ್ಯಾಸಿ ಕಲಾವಿದರೆನಿಸಿಕೊಂಡಿದ್ದಾರೆ.

3) ವೃತ್ತಿ ಗಾಯಕ ವರ್ಗ :

ಹಾಡ ಹಾಡುವ ಕಲೆ ಕೆಲವರ ವೃತ್ತಿಯೂ ಹೌದು ಪ್ರವೃತ್ತಿಯೂ ಹೌದು. ಇವರ ಜೀವನೋಪಾಯದ ಪ್ರಧಾನ ಕ್ಷೇತ್ರ ಹಾಡುಗಾರಿಕೆ. ಇದರಂತೆ ಇವರು ತಮ್ಮ ಕಲೆಯನ್ನೇ ಅವಲಂಬಿಸಿ ಬದುಕನ್ನು ಸಾಗಿಸುತ್ತಿರುತ್ತಾರೆ. ಇಂತಹ ಗಾಯಕರನ್ನು ವೃತ್ತಿಗಾಯಕರು ಎಂದು ಕರೆಯುತ್ತಾರೆ. ಸಾಮಾನ್ಯ ಗಾಯಕ ವರ್ಗದಲ್ಲಿ ಹಾಡುಗಾರಿಕೆ ಸಹಜವಾಗಿದ್ದರೆ, ವೃತ್ತಿ ಗಾಯಕರಲ್ಲಿ ಹಾಡುಗಾರಿಕೆ, ಮನೋಜ್ಞತೆ, ರಂಜಕತೆ, ಕಲ್ಪಕತೆಯಿಂದ ಕೂಡಿರುತ್ತದೆ. ಇಲ್ಲಿಯ ಹಾಡುಗಾರಿಕೆ, ನೃತ್ಯ, ಅಭಿನಯ, ವೇಷ ಭೂಷಣ, ವಾದ್ಯ ವಿಶೇಷ ಮುಂತಾದವುಗಳಿಂದ ಅತೀ ರಂಜನೀಯವಾಗಿ ಕಂಡು ಬರುತ್ತದೆ. ಇಲ್ಲಿಯ ಮೂಲ ಕಥೆಯು , ಅಡ್ಡ ಕಥೆ, ಉಪಕಥೆ ಮುಂತಾದ ವೈವಿಧ್ಯತೆಯಿಂದ ಕಥೆ ವಿಸ್ತೃತವಾಗಿರುತ್ತದೆ. ಇವರಿಗೆ ಕಥನ ಕಲೆ ಕರಗತವಾಗಿರುತ್ತದೆ. "ಹಿಡಿದರೆ ಹಿಡಿ ತುಂಬ , ಬಿಟ್ಟರೆ

ಮನೆ ತುಂಬ" ಎನ್ನುವಂತೆ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವ ಅಷ್ಟೇ ದೀರ್ಘವಾಗಿ ಹೇಳುವ ಕಲೆ ಇವರಲ್ಲಿದೆ. ಒಂದು ಸಾಧಾರಣ ಜನಪದ ಕಥೆ ವೃತ್ತಿಗಾಯಕರಲ್ಲಿ ಕಥೆ ಉಪಕಥೆ, ಅಡ್ಡ ಕಥೆ, ಹಾಸ್ಯ , ವಿನೋದ ಪ್ರಸಂಗಗಳಿಂದ ತುಂಬಿಕೊಂಡು ಕಾವ್ಯವಾಗಿ, ಮಹಾಕಾವ್ಯವಾಗಿ ರೂಪಗೊಳ್ಳುತ್ತದೆ. ವೇಷ ಭೂಷಣ , ವಾದ್ಯ ವಿಶೇಷಗಳಿಂದ ನೃತ್ಯ ಅಭಿನಯಗಳಿಂದ ಕಾವ್ಯವನ್ನು ರಂಜನೀಯವಾಗಿ ಹೇಳುತ್ತಾರೆ. ಅವರು ಒಂದೆರಡು ಗಂಟೆಯಲ್ಲೂ ಕಥೆ ಮುಗಿಸುತ್ತಾರೆ. ಇಡೀ ರಾತ್ರಿಯೂ ಹೇಳುತ್ತಾರೆ. ಅಷ್ಟೇ ಏಕೆ ಎರಡು , ಮೂರು ದಿನಗಟ್ಟಲೆಯೂ ಕಥೆ ಹೇಳುತ್ತಾರೆ. ಜನಪದ ಕಥೆಯಲ್ಲಿ ಸಾಧಾರಣವಾಗಿ ನಿರ್ದಿಷ್ಟ ಸ್ಥಳಕ್ಕಾಗಲಿ, ನಿರ್ದಿಷ್ಟ ಪಾತ್ರಗಳಿಗಾಗಲಿ ಹೆಸರುಗಳು ಇರುವುದಿಲ್ಲ. ಆದರೆ ವೃತ್ತಿ ಗಾಯಕ ತನ್ನ ಕಥೆಗೆ ಹೆಸರುಗಳನ್ನು ಅಂಟಿಸುತ್ತಾನೆ. ಸ್ಥಳ ನಾಮ, ವ್ಯಕ್ತಿನಾಮಗಳಿಲ್ಲದೆ ಸಾಮಾನ್ಯವಾಗಿ ಈ ಕಾವ್ಯಗಳು ಇರುವುದಿಲ್ಲ. ವೃತ್ತಿ ಗಾಯಕರ ಕಾವ್ಯಗಳು ಬಹು ಮಟ್ಟಿಗೆ ಗಂಭೀರ ವಸ್ತುವನ್ನು ಒಳಗೊಂಡಿರುತ್ತವೆ. ವಿನೋದ ಏನಿದ್ದರೂ ಅದರ ಅಂಗಾಗಿ ಬರಬೇಕು. ಇಲ್ಲವೆ ಉಪಕಥೆಯೊಂದು ನಡುವೆ ಕಾಣಿಸಿಕೊಳ್ಳಬೇಕು. ಕಥೆ ಸರಳವಾಗಿ ನೇರವಾಗಿ ಮುಂದುವರಿಯುತ್ತದೆ[1].

ವೃತ್ತಿಗಾಯಕರು ಆಯಾ ಪ್ರದೇಶ, ಭಾಷೆ, ಜನಾಂಗದ ಆಶೋತ್ತರಗಳಿಗೆ ಅನುಗುಣವಾಗಿ ಕಾವ್ಯಗಳನ್ನು ಹಾಡುತ್ತಾರೆ. ಆಯಾ ಪ್ರದೇಶದ ಐತಿಹಾಸಿಕ, ಪೌರಾಣಿಕ, ಸಾಮಾಜಿಕ, ಘಟನೆಗಳಿಗೆ ಅನ್ವಯಿಸಿ ಕಾವ್ಯಗಳನ್ನು ಹಾಡುವುದರಿಂದ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿದ್ದಾರೆ. ಅಷ್ಟೇ ಅಲ್ಲ ಜನ ಇವರನ್ನು ಕರೆದು ಕಥಾ ಮೇಳಗಳನ್ನು ನಡೆಸುವುದು ಒಂದು ಪುಣ್ಯ ಕಾರ್ಯವೆಂಬ ಬಲವಾದ ನಂಬಿಕೆಯನ್ನು ಜನರಲ್ಲಿ ಬೆಳೆಸಿದ್ದಾರೆ. ಆಯಾ ಭಾಗದಲ್ಲಿ ಆಗಿ ಹೋದ, ಪುಣ್ಯ ಪುರುಷರ , ಸಂತ - ಮಹಂತರ, ಮಹಾತ್ಮರ, ವೀರ - ಧೀರರ, ರಾಜ - ಮಹಾರಾಜರ ಕಥೆಗಳನ್ನೇ ಆರಿಸಿಕೊಂಡು ಆಯಾ ಭಾಗದ ಜನರ ಭಾಷೆಯಲ್ಲಿಯೆ ಹಾಡಿ ಜನ ಮನ್ನಣೆ ಪಡೆದುಕೊಂಡಿದ್ದಾರೆ. ಕಾವ್ಯಗಳನ್ನು ಸ್ಥಳ ನಾಮ ವ್ಯಕ್ತಿ ನಾಮವನ್ನು ಅದರ ಮಹತ್ವವನ್ನು ಹಾಡಿ ಹೊಗಳಿ ಸಾಂಸ್ಕೃತಿಕ ಉನ್ನತಿಗೆ ಕಾರಣರಾಗಿದ್ದಾರೆ. ನಾಡಿನ ಐತಿಹಾಸಿಕ, ಸಾಂಸ್ಕೃತಿಕ ಬದುಕಿಗೆ ಕನ್ನಡಿ ಹಿಡಿದಿದ್ದಾರೆ. ಹಾಡಿಗಾಗಿಯೇ ತಮ್ಮ ಜೀವನವನ್ನು ಸಮರ್ಪಿಸಿಕೊಂಡು, ಶ್ರೋತೃಗಳು ಕೊಟ್ಟ ಉಡುಗೊರೆ, ಕಾಣಿಕೆ ಬಹುಮಾನಗಳಲ್ಲೇ ತೃಪ್ತಿ ಪಟ್ಟುಕೊಂಡು, ಊರಿಂದೂರಿಗೆ ಅಲೆದಾಡುತ್ತ ಕಥಾ ಮೇಳಗಳನ್ನು ನಡೆಸುತ್ತ ಜೀವನ ಸಾಗಿಸುತ್ತಾರೆ. ಇವರು ಒಂದು ರೀತಿಯಲ್ಲಿ ಸಾಂಸ್ಕೃತಿಕ ವಕ್ತಾರರಾಗಿ ಕಂಡು ಬರುತ್ತಾರೆ. ವೃತ್ತಿಗಾಯಕಲ್ಲಿ ಎರಡು ಭಾಗಗಳಿರುವುದನ್ನು ನೋಡುತ್ತೇವೆ.

1) ಧಾರ್ಮಿಕ ವೃತ್ತಿ ಗಾಯಕರು

2) ಲೌಕಿಕ ವೃತ್ತಿಗಾಯಕರು

1) ಧಾರ್ಮಿಕ ವೃತ್ತಿಗಾಯಕರು :

ಧಾರ್ಮಿಕ ವೃತ್ತಿಗಾಯಕರು ತನ್ನದೇ ಆದ ಧರ್ಮದ, ದೈವದ ವ್ಯಾಪ್ತಿಗೆ ಒಳಪಟ್ಟು ಮೇಳಗಳನ್ನು ನಡೆಸುವ ವೃತ್ತಿಗಾಯಕರಿಗೆ ಧಾರ್ಮಿಕ ವೃತ್ತಿಗಾಯಕರೆಂದು ಕರೆಯುತ್ತಾರೆ. ತಮ್ಮ ಅಧಿದೈವದ ಮಹಿಮೆಗಳನ್ನು ಪ್ರಸಾರ ಮಾಡಿ ಜನತೆಯಲ್ಲಿ ಧರ್ಮಶ್ರದ್ಧೆ, ಭಕ್ತಿ ನಿಷ್ಠೆಗಳನ್ನು ತ್ಯಾಗಶೀಲತೆಯನ್ನು

ಕಾಪಾಡಿಕೊಂಡು ಬರುವುದು ಇವರ ಉದ್ದೇಶ. ತಮ್ಮ ಕ್ಷೇತ್ರಕ್ಕೆ ಸಂಬಂಧ ಪಟ್ಟ ಶ್ರೀಮಠವೊಂದರಲ್ಲಿ ದೀಕ್ಷೆಯನ್ನು ಪಡೆದು ವಂಶ ಪಾರಂಪರ್ಯವಾಗಿ ತಮ್ಮ ಸ್ವಾಮಿಗೆ ನಡೆದುಕೊಳ್ಳುವುದಲ್ಲದೆ, ತಮ್ಮ ಆರಾಧ್ಯ ದೈವದ ಒಕ್ಕಲಿರುವ ಕಡೆಗಳಲ್ಲಿ ಅವರು ನಡೆಸುವ ಧಾರ್ಮಿಕ ಆಚರಣೆಗಳ ನೇತೃತ್ವವನ್ನು ವಹಿಸಿ ನಡೆಸಿ ಕೊಡುವ ಹೊಣೆಗಾರಿಕೆಯೂ ಇವರದು. ಆಯಾ ದೈವದ ಒಕ್ಕಲು ಹೆಚ್ಚಾಗಿರುವ ಕಡೆಗಳಲ್ಲಿ ಒಕ್ಕಲುಗಳನ್ನೋ, ಊರುಗಳನ್ನೋ ಹಂಚಿಕೊಂಡು ಈ ಕಲಾವಿದರು ದೇವರ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾರೆ. ದೇವರ ಪ್ರತಿನಿಧಿಯಂತೆ ಓರ್ವ ಪುಣ್ಯ ಪುರುಷನಂತೆ ಗುರುವಿನಂತೆ ಈ ಧಾರ್ಮಿಕ ಪ್ರತಿನಿಧಿಗಳನ್ನು ಆಯಾ ಒಕ್ಕಲುಗಳು ಗೌರವಿಸುತ್ತಾರೆ. ಪೂಜಿಸುತ್ತಾರೆ[2]. ಇವರು ತಮ್ಮ ಇಡೀ ಜೀವನವನ್ನು ತನ್ನ ಅಧಿದೈವಕ್ಕೆ ಸಮರ್ಪಿಸಿಕೊಂಡಿರುತ್ತಾರೆ. ಧರ್ಮದ ವೇಷ ಭೂಷಣಗಳು, ಚಿನ್ಹೆಗಳನ್ನು ಧರಿಸಿ ಕಥಾ ಮೇಳಗಳನ್ನು ನಡೆಸುತ್ತಾರೆ. ಇಂತಹ ವೃತ್ತಿ ಗಾಯಕ ಪರಂಪರೆಯಲ್ಲಿ ಕೆಲವು ಪ್ರಮುಖ ಮೇಳಗಳು ಕಂಡು ಬರುತ್ತವೆ. ಅವು

1) ಕಂಸಾಳೆಯವರು (ದೇವರ ಗುಡ್ಡರು)

2) ನೀಲಗಾರರು

3) ಚೌಡಿಕೆಯವರು

4) ಗೊರವರು

5) ವಾಘೆ - ಮುರಳಿ ಸಂಪ್ರದಾಯದವರು

6) ಭೂತೇರ ಸಂಪ್ರದಾಯದವರು

7) ಗಣೆಯವರು

ಈ ಮುಂತಾದ ಅನೇಕ ಮೇಳಗಳು ಧಾರ್ಮಿಕವಾಗಿ ಬಹು ಪ್ರಸಿದ್ಧಿಯನ್ನು ಪಡೆದಿವೆ.

2)ಲೌಕಿಕ ವೃತ್ತಿಗಾಯಕರು :

ಯಾವ ಧರ್ಮ ಹಾಗೂ ದೈವದ ವ್ಯಾಪ್ತಿಗೂ ಒಳ ಪಡದೆ ಸ್ವತಂತ್ರವಾಗಿ ತಾವು ಬಯಸಿದ ಕಥೆಗಳನ್ನು ಅಭ್ಯಸಿಸಿಕೊಂಡು ಕಥಾ ಮೇಳಗಳನ್ನು ನಡೆಸುವ ಗಾಯಕರಿಗೆ ಲೌಕಿಕ ವೃತ್ತಿ ಗಾಯಕರೆಂದು ಕರೆಯುತ್ತಾರೆ[3]. ಇವರಿಗೆ ಯಾವ ದೈವದ ಸಂಬಂಧವೂ ಇರುವುದಿಲ್ಲ. ಜೀವನೋಪಾಯಕ್ಕಾಗಿ ಜನ ಪದ ಕಾವ್ಯಗಳನ್ನು ಕಲಿತು ಕಥೆ ಹೇಳುತ್ತಾರೆ. ಮೇಳಗಳನ್ನು ನಡೆಸುತ್ತಾರೆ.

1) ದೊಂಬಿದಾಸರು (ಚೆನ್ನ ದಾಸರು)

2) ಹೆಳವರು

3) ತೆಲಗು ಜಂಗಮರು

4) ಬುರ್ರ ಕಥೆಯವರು (ಬುಡ್ಗ ಜಂಗಮರು)

5) ಕರಪಲ್ಲದವರು

6) ತಂಬೂರಿಯವರು

7) ಕಿನ್ನರಿ ಜೋಗಿಯವರು

ಮುಂತಾದವರು ಲೌಕಿಕ ಸಂಪ್ರದಾಯದಲ್ಲಿ ಬರುತ್ತಾರೆ. ಇವರಲ್ಲಿ ದೊಂಬಿದಾಸರು , ಹೆಳವರು, ತೆಲುಗು ಜಂಗಮರು ಮತ್ತು ಬುರ್ರ ಕಥೆಯವರು ಈ ನಾಲ್ಕೂ ಮೇಳಗಳವರು ಆಂಧ್ರದಿಂದ ಕರ್ನಾಟಕಕ್ಕೆ ವಲಸೆ ಬಂದವರು. ಇವರೆಲ್ಲ ತೆಲುಗು ಮಾತನಾಡುವವರು. ಇವುಗಳಲ್ಲಿ ಮೊದಲ ಮೂರು ಮೇಳಗಳು ಮೂಲತಃ ಆಂದ್ರದಿಂದ ಬಂದರೂ, ಇವರು (ಮಾತೃ ಭಾಷೆ) ತೆಲುಗು ಮಾತನಾಡುತ್ತಿದ್ದರೂ ಕನ್ನಡದಲ್ಲಿ ಮೇಳಗಳನ್ನು ನಡೆಸುತ್ತಾರೆ. ಬುರ್ರ ಕಥೆಯವರು ಮಾತ್ರ ಹೆಚ್ಚಾಗಿ ತೆಲುಗಿನಲ್ಲಿಯೇ ಮೇಳಗಳನ್ನು ನಡೆಸುತ್ತಾರೆ. (ಆದರೆ ಈಗ ಕನ್ನಡದಲ್ಲಿ ಬುರ್ರ ಕಥಾ ಮೇಳಗಳು ನಡೆಯುತ್ತಿವೆ) ಇದಕ್ಕೆ ಕಾರಣ ಹೀಗಿರಬೇಕೆನಿಸುತ್ತದೆ. ದೊಂಬಿದಾಸರು, ಹೆಳವರು, ತೆಲುಗು ಜಂಗಮರು, ಅರೆ - ಅಲೆಮಾರಿಗಳು. ಇವರು ಹೆಚ್ಚು ಸಮಯ ಊರಲ್ಲಿ ವಾಸಿಸುವವರು. ನಿರ್ದಿಷ್ಟ ಕಾಲದಲ್ಲಿ ಇವರು ಭಿಕ್ಷಾಟನೆಗೆ ಹೋಗುವುದುಂಟು. ಅಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಬಿಕ್ಷೆ ಬೇಡಿ ಮತ್ತೆ ಊರಿಗೆ ಮರಳುವರು. ಹೆಚ್ಚು ಊರಿನಲ್ಲಿರುವುದರಿಂದ ಕನ್ನಡ ಭಾಷಾ ಸಂಪರ್ಕದಿಂದಾಗಿ ಕನ್ನಡ ಕಲಿಯಲು ಹಾಗು ತಮ್ಮ ಮೇಳಗಳನ್ನು ಕನ್ನಡದಲ್ಲೇ ನಡೆಸಲು ಅನುಕೂಲವಾದಂತೆ ತೋರುತ್ತದೆ. ಆದರೆ ಬುರ್ರಕಥಾ ಮೇಳಗಳನ್ನು ನಡೆಸುವ ಬುಡ್ಗ ಜಂಗಮರು ಅಲೆಮಾರಿಗಳು. ಆಂಧ್ರ ಕರ್ನಾಟಕದ ಗಡಿಭಾಗದಲ್ಲಿ ಇವರು ಹೆಚ್ಚು ಸಂಚರಿಸುತ್ತಿರುವುದರಿಂದ ತೆಲುಗಿನಲ್ಲಿ ಮೇಳಗಳನ್ನು ನಡೆಸಲು ಅನುಕೂಲವಾಗಿದೆ. ಕನ್ನಡದ ಅನಿವಾರ್ಯತೆ ಇವರಿಗೆ ಒದಗಿ ಬಂದಿರಲಿಕ್ಕಿಲ್ಲವೆಂದು ತೋರುತ್ತದೆ. ಆದರೆ ಭಾಷಾ ಸಂಪರ್ಕ ಹೆಚ್ಚಾದಂತೆ ಈಚೆಗೆ ಇವರು ಕನ್ನಡದಲ್ಲೂ ಮೇಳಗಳನ್ನು ನಡೆಸುತ್ತಿರುವುದು ಕಂಡು ಬರುತ್ತಿದೆ.

II ಬುರ್ರ ಕಥೆ ಅರ್ಥ ವಿವರಣೆ :

'ಬುರ್ರ ಕಥೆ' ಎನ್ನುವುದು ಆಂಧ್ರ ಪ್ರದೇಶದಲ್ಲಿ ಅತ್ಯಂತ ಜನಪ್ರಿಯತೆ ಹೊಂದಿದ ಜಾನಪದ ಕಲೆ. ಬುರ್ರ ಕಥಾ ಮೇಳಗಳನ್ನು ನಡೆಸುವವರು ಬುಡ್ಗ ಜಂಗಮು. ಈ ಬುರ್ರ ಕಥೆಗಳನ್ನು ತೆಲುಗಿನಲ್ಲಿ ತಂದಾನಿ ಕಥೆ, ಶಾರದ ಕಾಂಡ್ರು, ಜಂಗಮ ಕಥೆ, ಗುಮ್ಮಟಿ ಕಥೆ ಎಂತಲೂ ಕರೆಯುತ್ತಾರೆ. ಈ ಬುರ್ರ ಕಥೆಗಳನ್ನು ಹಾಡುವ ವರ್ಗದವರನ್ನು "ಸಂಚಾರಿ ಗಾಯಕ ಬಿಕ್ಷುವುಲು"[4] ಎಂದು ಕರೆಯುತ್ತಾರೆ.

'ಬುರ್ರ ಕಥೆ' ಎನ್ನುವುದು ಹಾಡುವಾಗ ಬಳಸುವ ವಾದ್ಯ ಪರಿಕರದಿಂದ ಬಂದಿದೆ. ಬುರ್ರವನ್ನು ನುಡಿಸುತ್ತ ಹಾಡುವ ಕಥೆಗಳಿಗೆ 'ಬುರ್ರ ಕಥೆ'ಗಳೆಂದು ಕರೆಯುತ್ತಾರೆ. 'ಬುರ್ರ' ಎನ್ನುವುದು ಮೂಲತಃ ತಂಬೂರಿಯಿಂದ ಬಂದ ಪದವಾಗಿದೆ. ತಂಬೂರಿ ತಂತ್ರಿ+ಬುರ್ರಿ=ತಂಬೂರಿ ಆಗಿದೆ. ತಂತ್ರಿ + ಬುರ್ರ =ತಂಬೂರ ಈ ಮಾಸದಲ್ಲಿ 'ತಂ' ಲೋಪವಾಗಿ ಶಕಟರೇಫಕ್ಕೆ ಪೂರ್ವ ದ್ವಿತ್ವ ಬಂದು ಬುರ್ರ ಆಗಿ ಪರಿಣಮಿಸಿದೆ. ಕನ್ನಡದಲ್ಲಿ ಬುರ್ರ ಅಂದರೆ ತಲೆ , ಬುರುಡೆ ಎಂದರ್ಥ. ದುಂಡಾಗಿ ಪೊಳ್ಳಾಗಿರುವ ವಸ್ತುವನ್ನು ಬುರುಡೆ ಎಂದು ಕರೆಯುತ್ತಾರೆ. ಈ ಬುರ್ರದ ತಳ ಭಾಗದಲ್ಲಿ ತಂತಿ ಬಿಗಿದಿರುವ ಸ್ಥಳ ತೆಳ್ಳಗೆ ಚಪ್ಪಟೆಯಾಗಿದ್ದು ಉಳಿದ ಭಾಗ ಗೋಲಾಕಾರವಾಗಿದ್ದು ಒಳಗೆ ಪೊಳ್ಳಾಗಿರುತ್ತದೆ. ಇದಕ್ಕೆ ಸಹ ವಾದ್ಯವಾಗಿ ಗುಮ್ಮಟೆ, ತಾಳಗಳನ್ನು ಉಪಯೋಗಿಸುತ್ತಾರೆ. ಈ ರೀತಿಯ ವಾದ್ಯ ಪರಿಕರಗಳಿಂದ ಹಾಡುವ ಕಥೆಗಳನ್ನು 'ಬುರ್ರ ಕಥೆ'ಗಳೆಂದು ಕರೆಯುತ್ತಾರೆ. ಇವುಗಳನ್ನು ಆಂಧ್ರದಲ್ಲಿ ಜಂಗಮ ಕಥೆಗಳೆಂದು ಕರೆಯುತ್ತಾರೆ. ಜಂಗಮರು ಮೊದಲು ಶಿವನ ಕಥೆಗಳನ್ನೇ ಹೇಳಿದರೂ ಕಾಲ ಕ್ರಮೇಣ

ಪ್ರೇಕ್ಷಕರ ಅಭಿರುಚಿಗೆ ಅನುಗುಣವಾಗಿ ಶೈವೇತರ ಕಥೆಗಳನ್ನು ಹೇಳಲಾರಂಭಿಸಿದರು[5]. ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಬುರ್ರ ವಾದ್ಯ ಸರಸ್ವತಿಯ ವೀಣೆ ಎಂದು ಭಾವಿಸಿ ಈ ವಾದ್ಯವನ್ನು ಬಳಸಿ ಹೇಳುವ ಕಥೆಗಳಿಗೆ ಶಾರದಾ ಕಥೆಗಳೆಂದು ಕರೆದಿದ್ದಾರೆ. ಈ ಕಥೆ ಹೇಳುವವರಿಗೆ ಶಾರದವರೆನ್ನುತ್ತಾರೆ[6]. ಈ ಕಥೆಯವರನ್ನು ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ನಿಜಾಂ ಸರಕಾರದ ಪ್ರಾಂತದಲ್ಲಿ ಜಂಗಮ ಕಥೆಗಳು, ತೆಲಂಗಾಣದಲ್ಲಿ ಶಾರದಾ ಕಥೆಗಳು , ರಾಯಲ್ ಸೀಮಾದಲ್ಲಿ ತಮದಾನ ಕಥೆಗಳೆಂದು ಕರೆಯುತ್ತಾರೆ. ಅದರಂತೆ ಹಾಡುವ ರೀತಿಯು ಬೇರೆ ಬೇರೆಯಾಗಿದೆ. ತೆಲಂಗಾಣದಲ್ಲಿ ಕುಳಿತು ಕಥೆ ಹೇಳಿದರೆ ನಿಜಾಮ ಪ್ರಾಂತ್ಯದಲ್ಲಿ ಎದ್ದು ನಿಂತು ನೃತ್ಯ ಮಾಡುತ್ತಾ ಕಥೆ ಹೇಳುವರು. ರಾಯಲ್ ಸೀಮಾ ಪ್ರಾಂತದಲ್ಲಿ ಕೆಲವು ಜಂಗಮರು ತಂಬೂರಿ (ಬುರ್ರ) ಬಳಸಿದರೆ ಚಿಕ್ಕ ಕಟ್ಟಿಗೆ ಹಿಡಿದು ಕೈಯಲ್ಲಿ ಆಡಿಸುತ್ತಾ ಕಥೆ ಹೇಳುತ್ತಾರೆ[7] ಬುರ್ರ ಕಥೆಗಾರರು ಬಳಸುವ ವಾದ್ಯಗಳಲ್ಲಿಯೂ ಕೂಡ ವಿಭಿನ್ನತೆಯನ್ನು ಕಾಣಬಹುದು. ಅಂದರೆ ಕಥೆಗಳನ್ನು ಹೇಳುವಾಗ ಎರಡು ಪ್ರಕಾರದ ತಂಬೂರಿಗಳನ್ನು ಬಳಸುತ್ತಾರೆ.

1) ಬುಡಿಗೆ ತಂಬೂರಿ


2) ಪಡಿಗೆ ತಂಬೂರಿ

ಬುಡಿಗೆ ತಂಬೂರಿಯು ಗುಮ್ಮಿ ಅರ್ಧ ವೃತ್ತಾಕಾರದಲ್ಲಿದ್ದು ತುಸು ಚಿಕ್ಕದಾಗಿರುತ್ತದೆ. ಪಡಿಗೆ ತಂಬೂರಿಯ ಗುಮ್ಮಿ ತುಸು ದೊಡ್ಡದಾಗಿರುವುದು. ಜೊತೆಗೆ ಧ್ವನಿ ಮೀಟುವ ಕಡೆ ನಾಗರ ಹೆಡೆಯ ರೀತಿ ರಚಿತವಾಗಿರುತ್ತದೆ. ಬುಡಿಗೆ ತಂಬೂರಿಯು ತೆಲಂಗಾಣ ಪ್ರಾಂತದ ಜಂಗಮರು ಬಳಸಿದರೆ, ಪಡಿಗೆ ತಂಬೂರಿಯನ್ನು ರಾಯಲ್ ಸೀಮ ಪ್ರಾಂತದಲ್ಲಿ ಬಳಸುತ್ತಾರೆ[8].

ಬುರ್ರ ಕಥೆ ಇದೊಂದು ಸಮ್ಮಿಶ್ರ ಕಲೆ. ಇಲ್ಲಿ ಸಾಹಿತ್ಯ , ಸಂಗೀತ, ನೃತ್ಯ, ಅಭಿನಯಕ್ಕೆ ಹೆಚ್ಚು ಮಹತ್ವ ಕೊಡಲಾಗುತ್ತದೆ. ಚಂಪೂ ಕಾವ್ಯದಂತೆ ಬುರ್ರ ಕಥನ ಕಾವ್ಯಗಳು, ಗದ್ಯ , ಪದ್ಯ ಮಿಶ್ರಿತವಾಗಿರುತ್ತವೆ. ಯಾವ ರಂಗ ಸಜ್ಜಿಕೆ ಇಲ್ಲದೆ ಬಯಲಿನಲ್ಲಿಯೇ ಪ್ರದರ್ಶನಗೊಳ್ಳುವ ಈ ಕಲೆಯಲ್ಲಿ ಮೂವರು ಭಾಗವಹಿಸುತ್ತಾರೆ. ಒಬ್ಬ ಪ್ರಧಾನ ಗಾಯಕ, ಇಬ್ಬರು ಅವನಿಗೆ ಹಿಮ್ಮೇಳವಾಗಿ ಹಾಡುತ್ತಾರೆ. ಬುರ್ರ ಕಥೆಯಲ್ಲಿ ಮುಖ್ಯ ಕಥೆಗಾರ ಮಾತ್ರ ಅಂದವಾಗಿ ಸಿಂಗರಿಸಿಕೊಂಡಿರುತ್ತಾನೆ. ತಲೆಯ ಮೇಲೆ ಮೈಸೂರು ರುಮಾಲಿನಂತೆ ಸುತ್ತಿದ ಜರಿಯ ಪೇಟಾ, ಸಾಧಾರಣ ನಿಲುವಂಗಿಯ ಮೇಲೆ ಕರಿಯ ಕೋಟು, ಹೆಗಲ ಮೇಲಿಂದ ಇಳಿದು ಬಗಲು ಸುತ್ತುವರಿದ ಜರಿಯಂಚಿನ ಶಲ್ಯೆ , ಬಿಳಿ ಕಚ್ಚೆ ಪಂಚೆ ಕಾಲಲ್ಲಿ ಗೆಜ್ಜೆ ಎಡಗೈ ಎರಡು ಬೆರಳಿನ ತುಂಬ ಗಗ್ಗರಿಗಳು, ಬಲ ಗೈಯಲ್ಲಿ ತಂಬೂರಿ,ಹಣೆಯಲ್ಲಿ ಎದ್ದು ಕಾಣುವಂತೆ ವಿಭೂತಿ ಇರುತ್ತದೆ. ಉಳಿದಿಬ್ಬರು ಸಹ ನೃತ್ಯದವರು ಸಾಧಾರಣ ನಿತ್ಯದ ಶುಬ್ರ ಉಡುಪಿನಲ್ಲಿಯೇ ಇರುತ್ತಾರೆ. ಇವರು ಕುಣಿಯುವಂತಿದ್ದರೆ ಮಾತ್ರ ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ಸಹ ನೃತ್ಯದವರು ಗಂಡಸರಾದರೆ ಕಚ್ಚೆ - ಪಂಚೆ, ಜುಬ್ಬ ಅಥವಾ ನಿಲುವಂಗಿ, ತಲೆಗೆ ರುಮಾಲು, ಹಣೆಗೆ ವಿಭೂತಿ ಕಾಲಲ್ಲಿ ಗೆಜ್ಜೆ ಕೈಯಲ್ಲಿ ಗುಮತಿ ಹಿಡಿದು ಮುಖ್ಯ ಕಥೆಗಾರನಂತೆಯೇ ಕುಣಿಯುತ್ತಾರೆ.

ಸಹ ನೃತ್ಯದವರು ಹೆಣ್ಣಾಗಲೀ , ಗಂಗಡಾಗಲೀ ಕುಣಿದರೇ ಈ ಮೇಳ ಕಳೆ ಕಟ್ಟುವುದು. ಇಲ್ಲದಿದ್ದರೆ ಸಪ್ಪೆ ಎನಿಸುತ್ತದೆ[9].

3) ಬುರ್ರ ಕಥೆ ಮೂಲ : ಬುರ್ರ ಕಥೆಗಳಿಗೆ ಮೂಲ ತೆಲುಗಿನ 'ವೀರ ಗಾಥಲು' ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಡಾ|| ತಂಗೀರಾಲ್ , ಸುಬ್ಬಾರಾವ್ ಅವರು ಜಾನಪದ ಕವಿತ್ವ ಎಂಬುದನ್ನು ಪ್ರಧಾನವಾಗಿರಿಸಿ ಕೊಂಡು ಬುರ್ರ ಕಥೆಗಳ ಮೂಲವನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ. ವೀರಗಾಥೆ ಅನುಕರಣದಿಂದ ಬುರ್ರ ಕಥೆಗಳು ಹುಟ್ಟಿರಬಹುದು ಎನ್ನುವುದು. ಅವರ ನಿಲುವಾಗಿದೆ. ಅದನ್ನು ಅವರು ಈ ರೀತಿಯಾಗಿ ವಿಭಾಗಿಸಿ ಹೇಳುತ್ತಾರೆ.



ಇವೆಲ್ಲವೂ ಹಾಡನ್ನೇ ಅವಲಂಬಿಸಿದವುಗಳು. ಇವುಗಳ ವಸ್ತು ಪೌರಾಣಿಕ ಅಂಶಗಳನ್ನೊಳಗೊಂಡಿರಬಹುದು ಅಥವಾ ವೀರಗಾಡೆಗಳ ಅನುಕರಣೆಗಳಿರಬಹುದು. ವೀರ ಗಾಥೆಗಳ ಅನುಕರಣೆ ಇರಬಹುದು. ಅಥವಾ ಜನಪದ ಕಥೆಯ ತುಣುಕುಗಳಿರಬಹುದು. ಇವುಗಳನ್ನು ಇಟ್ಟುಕೊಂಡು ಅದಕ್ಕೆ ಹಿಂದಕ್ಕೆ ಮುಂದಕ್ಕೆ ಸಂಗೀತ ಸೇರಿಸಿ ಮಧ್ಯ ಮಧ್ಯ ಪದ್ಯ ಗಂಧಿಯಾದ ಗದ್ಯ ಸೇರಿಸಿ ಹಾವ ಭಾವ ವಿಲಾಸ ವಿಭ್ರಮಗಳಿಂದ ತಮ್ಮ ವಾದ್ಯಗಳೊಡನೆ ಎರಡು ಮೂರು ರಾತ್ರಿಗಳವರೆಗೂ ಪ್ರದರ್ಶನ ಕೊಡುವುದು ಬುರ್ರ ಕಥನ ಕಲೆಯಾಗಿದೆ ಎಂದಿದ್ದಾರೆ[10].

ಬುರ್ರ ಕಥೆ ಪಿತಾಮಹ ಪದ್ಮಶ್ರೀ ಶೇಖ್ ನಾಜರ್‌ರವ "ಜಂಗಮ ಕಥೆಗಳಿಂದಲೇ ಬುರ್ರ ಕಥೆಗಳು ಹುಟ್ಟಿಕೊಂಡಿವೆ" ಎಂದು ಹೇಳಿದ್ದಾರೆ[11]. ಇಲ್ಲಿ 'ಜಂಗಮ' ಅಂದರೆ ವೀರಶೈವ ಮತ ಪ್ರಚಾರ ಮಾಡುವ ಭಕ್ತ ಸಮೂಹ [12]. ಎನ್ನುವ ಅರ್ಥ ಆಂಧ್ರದಲ್ಲಿದೆ. ಹಿಂದೆ ಶಿವನ ಲೀಲೆಗಳನ್ನು ಶಿವಶರಣರ ಚರಿತ್ರೆಗಳನ್ನು ಹಾಡುತ್ತಿರಬಹುದೆಂದು ತೋರುತ್ತದೆ. ಬಹುರೂಪಿ ಚೌಡಯ್ಯ ಎಂಬತ್ನಾಲ್ಕು ಲಕ್ಷ ಶಿವನ ವೇಷಗಳನ್ನು ಧರಿಸಿ ಅನೇಕ ಶಿಷ್ಯ ವರ್ಗವನ್ನು ಕಟ್ಟಿ ಅವರ ಜೊತೆಗೆ ವೀರಶೈವ ಮತ ಪ್ರಚಾರದಲ್ಲಿ ತೊಡಗಿರುವುದು ಅವನ ವಚನ ಗಳಿಂದ ತಿಳಿದು ಬರುತ್ತದೆ. ಆ ಸಂದರ್ಭದಲ್ಲಿ ವೇಷದ ಜೊತೆಗೆ ಶಿವನ ಲೀಲೆಗಳು ಶಿವಶರಣರ ಚರಿತ್ರೆಗಳ ಕುರಿತು ಕಥೆಗಳನ್ನು ಕಟ್ಟಿ ಹಾಡುತ್ತಿರುವುದರಿಂದ ಇವು ಜಂಗಂ ಕಥೆಗಳಾಗಿವೆ. 'ಸೋಮನನ ಕಾಲದಲ್ಲಿ ವೀರಶೈವ ಧರ್ಮ ಪ್ರಚಾರದ ಕಥೆಗಳನ್ನೇ ಜಂಗಂ ಕಥೆ' ಗಳೆಂದು ಕರೆದಿದ್ದಾರೆ.

ಆ ಜಂಗಮ ಕಥೆಗಳೇ ಇಂದು ಬುಡಿಗ ಜಂಗಾಲರು ಹೇಳುವ ತಂದಾನ ಕಥೆಗಳು ಅಥವಾ ಬುರ್ರ ಕಥೆಗಳು[13]. ಬುಡಿಗ ಜಂಗಾಲರು ಮೊದಲು ಶಿವನನ್ನು ಕುರಿತ ಕಥೆಗಳೇ ಹಾಡುತ್ತಿದ್ದರು. ಬರು ಬರುತ್ತ ಕಾಲ ಕ್ರಮೇಣ ಜನರ ಅಭಿರುಚಿಗೆ ತಕ್ಕಂತೆ ಶೈವೇತರ ಕಥೆಗಳನ್ನು ಕಟ್ಟಿ ಹಾಡತೊಡಗಿದರು[14]. ಹೀಗೆ ಬುರ್ರ ಕಥಾ ವಸ್ತುವಿನಲ್ಲಿ ಕಲಾಂತರದಲ್ಲಿ ಬದಲಾವಣೆಗೊಂಡಿರುವುದು ಕಂಡು ಬರುತ್ತದೆ. ಈ ರೀತಿಯ ಬದಲಾವಣೆಯೋ ಕಲೆಯ ಜೀವಂತಿಕೆಯ ಲಕ್ಷಣ. ಕಾಲ ಧರ್ಮಕ್ಕೆ ತಕ್ಕಂತೆ ಅದು ಬದಲಾವಣೆ ಹೊಂದಲೇಬೇಕು. ಕಲೆ ಎನ್ನುವುದು ನಿಂತ ನೀರಲ್ಲ. ಅದು ಹರಿಯುವ ಪ್ರವಾಹ , ಹರಿಯುವ ನೀರು ಪ್ರಾಂಜಲವಾಗಿರುತ್ತದೆ. ನಿಂತ ನೀರು ಕೊಳೆತು ನಾರುತ್ತದೆ. ಹಾಗಾಗಿಯೇ ಬುರ್ರ ಕಥನ ಕಲೆ ಸಾವಿರಾರು ವರ್ಷಗಳಿಂದ ಜನ ಮನದಲ್ಲಿ ಉಳಿದು ಬೆಳೆದು ಬೆ[illegible]

4) ಬುರ್ರ ಕಥಾ ಮೇಳ ಮತ್ತು ಕರಪಾಲ ಮೇಳ :

ಆಂಧ್ರದ ಬುರ್ರ ಕಥಾ ಮೇಳಕ್ಕೂ, ಕರ್ನಾಟಕದ ಕರಪಾಲ ಮೇಳಕ್ಕೂ ಅನೇಕ ರೀತಿಯ ಸಾಮ್ಯತೆ ಕಂಡು ಬರುತ್ತದೆ. ಅದಕ್ಕಾಗಿ ಇವೆರಡರ ಮೂಲ ಒಂದೇ ಆಗಿರಬಹುದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಎರಡೂ ಮೇಳಗಳಲ್ಲಿಯೂ ಮೂರು ಜನ ಕಲಾವಿದರು ಭಾಗವಹಿಸುತ್ತಾರೆ. ಮುಖ್ಯ ಕಥೆಗಾರ ಕಥೆ ಹೇಳಿದರೆ ಉಳಿದಿಬ್ಬರು ಅವನ ಹಿಂದೆ ಹಾಡುತ್ತಾರೆ. ಜೊತೆಗೆ ಎರಡೂ ಮೇಳಗಳ ವಾದ್ಯ ಪರಿಕರಗಳಲ್ಲಿ ಸಾಮ್ಯತೆ ಕಂಡು ಬರುತ್ತದೆ. ಎರಡರಲ್ಲೂ ತಾಳ ಮತ್ತು ಗುಮ್ಮಟೆಗಳನ್ನು ಬಾರಿಸುತ್ತಾರೆ. ಜನರ ಆಹ್ವಾನದ ಮೇರೆಗೆ ಮೇಳಗಳನ್ನು ನಡೆಸುತ್ತಾರೆ. ಎರಡೂ ಕಡೆಯವರು ಕಥೆಗಳನ್ನು ಅನೇಕ ರಾತ್ರಿಗಳ ವರೆಗೆ ಮಾಡುತ್ತಾರೆ. ಭಾಷೆ ಬೇರೆಯಾದರೂ ಎರಡು ಕಡೆಯವರ ನಿರೂಪಣಾ ವಿಧಾನ ಒಂದೇ. ಕಥೆ ಅಥವಾ ಕಾವ್ಯಗಳ ತಾಂತ್ರಿಕ ಚೌಕಟ್ಟು ಒಂದೇ. ಎರಡರಲ್ಲೂ ಮುಖ್ಯ ಕಥೆಗಾರರು ಮಾತ್ರವೇ ಸಹ ನೃತ್ಯದವರಿಗಿಂತ ಬೇರೆ ತರಹ ವೇಷ ಹಾಕಿರುತ್ತಾರೆ. ಇದೆಲ್ಲ ನೋಡಿದರೆ ಇವೆರಡು ಕಲೆಗಳು ಒಂದೆ ಮೂಲದಿಂದ ಕವಲೊಡೆದು ಪ್ರಚಾರಕ್ಕೆ ಬಂದಿವೆ ಎನ್ನುವುದರಲ್ಲಿ ಸಂಶಯವಿಲ್ಲ[15]. ಎನ್ನುವುದು ಇವುಗಳಲ್ಲಿ ಸಾಮ್ಯತೆಯನ್ನು ಎತ್ತಿ ತೋರಿಸುತ್ತದೆ. ಎರಡೂ ಮೇಳಗಳಿಗೂ ಮೂಲ ಒಂದೇ ಆಗಿರಬೇಕೆನಿಸುತ್ತದೆ.

ಕರಪಾಲ ಮೇಳ ಜಂಗಮರಿಗೆ (ವೀರಶೈವ) ಮಾತ್ರ ಸೀಮಿತವಾದುದು. ಅದನ್ನು ಕಲಿತವರನ್ನು `ಕರಪಲ್ಲದ ಐಗಳು'[16] ಎಂದು ಕರೆಯುತ್ತಾರೆ.ಕರಪಾಲ ಮೇಳದಲ್ಲಿ ಮುಖ್ಯ ಕಥೆಗಾರ ಗುರುವಾಗಿರುತ್ತಾನೆ. ಇನ್ನಿಬ್ಬರು ಅವನ ಶಿಷ್ಯರಿರುತ್ತಾರೆ.ಗುರುಗಳು ದಮ್ಮಡಿಯಂಥ ವಾದ್ಯವನ್ನು ಹಿಡಿದು ನಿಂತರೆ, ಅವರಿಂದ ಸುಮಾರು ಇನ್ನೂರು-ಮುನ್ನೂರು ಅಡಿದೂರದಲ್ಲಿ ಶಿಷ್ಯರು ತಾಳವನ್ನು ಹಿಡಿದು ನಿಲ್ಲುತ್ತಾರೆ. ಗುರುವನ್ನು ಅನುಸರಿಸಿ ಶಿಷ್ಯರು ಹಾಡುತ್ತಾರೆ. ಈ ಹಾಡುಗಳಲ್ಲಿ ಬಹುಮಟ್ಟಿಗೆ ಎಲ್ಲವೂ ಬಸವ, ಚನ್ನಬಸವ ಮುಂತಾದ ಶರಣರಿಗೆ ಸಂಬಂಧಪಟ್ಟ ಕಾಲಜ್ಞಾನಗಳು ಸೇರಿವೆ. ಹೀಗೆ ಇವರು ಸಂಕೇತಗಳಲ್ಲಿ ಊರಿನ ಬೀದಿಗಳಲ್ಲಿ ಹಾಡುತ್ತಿದ್ದರೆ, ಜನ ಮುಖ್ಯವಾಗಿ ಗುರುಗಳ ಸುತ್ತ ನೆರೆಯುತ್ತಾರೆ. ಹಾಡುಗಳನ್ನು ಮಧ್ಯೆ ನಿಲ್ಲಿಸಿ, ಗುರುಗಳು

ನೆರೆದ ಜನರಲ್ಲಿ ನಿಗದಿಯಾದ ಹಣವನ್ನು ಒಂದಾಣೆ ಅಥವಾ ಎರಡಾಣೆ - ಕೊಡಲು ಸಿದ್ಧವಿರುವವರ ಹೆಸರುಗಳನ್ನು ತಿಳಿದುಕೊಂಡು, ದೂರದಲ್ಲಿ ನಿಂತುರುವ ಶಿಷ್ಯರಿಗೆ ಬೆರಳೆಣಿಕೆಯಲ್ಲಿ ಸಂಜ್ಞೆಯ ಮೂಲಕ ತಿಳಿಸುತ್ತಾರೆ.

ಅವರು ಆ ಸಂಜ್ಞೆಗಳನ್ನು ಅರ್ಥ ಮಾಡಿಕೊಂಡು ಹಣಕೊಟ್ಟವರ ಹೆಸರುಗಳನ್ನು ಗಟ್ಟಿಯಾಗಿ ಹೇಳುತ್ತಾರೆ. ಕೆಲವು ಸಾರಿ ಹಣ ಕೊಟ್ಟವರು ತಮ್ಮ ಮನೆ ದೇವರ ಹೆಸರುಗಳನ್ನು ಹೇಳುವಂತೆ ಮಾಡುವುದೂ ಉಂಟು. ಹೆಸರನ್ನು ಹೆಸರನ್ನು ಬಾಯಿ ಬಿಟ್ಟು ಹೇಳದೆ ಸಂಜ್ಞೆಗಳಿಂದ ಹೇಳಿಸುವ ಈ ವಿದ್ಯೆಗೆ ಜನರು ಬೆರಗಾಗುತ್ತಾರೆ. ಕರಪಲ್ಲ ಹೀಗೆ ದುಡಿಮೆಯ ಸಾಧನವೂ ಆಗಿದೆ. ಹೆಸರುಗಳನ್ನು ಹೇಳಿದ ಮೇಲೆ ಮತ್ತೆ ಹಾಡುಗಳನ್ನು ಆರಂಭಿಸಿ ಮುಂದೆ ನಡೆಯುತ್ತಾರೆ. ಮತ್ತೆ ಇನ್ನೊಂದು ಕಡೆ ಕರಪಲ್ಲ ಹೇಳುತ್ತಾರೆ [17].ಕರಪಾಲ ಮೇಳದಲ್ಲಿ ಸಂಜ್ಞೆಗಳ ಮೂಲಕ ಹೆಸರನ್ನೂ ಹೇಳಿಸಿ ಕಾಣಿಕೆ ಸಂಗ್ರಹಿಸುವುದು ವಿಶೇಷತೆಯೆನಿಸುತ್ತದೆ. ಕಥೆಯನ್ನು ಒಂದು ನಿಲುಗಡೆಗೆ ತಂದು, ದೇವರ ಪಟಕ್ಕೆ ಮಂಗಳಾರತಿ ಮಾಡಿಸಿ, ತಟ್ಟೆಯೊಡನೆ ಶಿಷ್ಯನನ್ನು ಜನರ ನಡುವೆ ಕಳಿಸುತ್ತಾನೆ ಗುರು. ತಾನು ಚಪ್ಪರದಲ್ಲಿಯೇ ಉಳಿಯುತ್ತಾನೆ. ಜನರ ನಡುವೆ ಹೋದ ಶಿಷ್ಯ ಹೆಸರು ಹೇಳಿಸಲು ಇಚ್ಛಿಸುವುದರಿಂದ ಕಾಣಿಕೆಯನ್ನು ಪಡೆದು, ಅವರ ಹೆಸರನ್ನು ತಿಳಿದು ಸಂಕೇತಗಳ ಮೂಲಕ ಗುರುವಿಗೆ ಸೂಚಿಸುತ್ತಾನೆ. ಸಂಜ್ಞೆಗಳನ್ನು ಅರ್ಥಮಾಡಿಕೊಂಡ ಗುರು ತಟ್ಟನೆ ಅದನ್ನು ಗುರುತಿಸಿ ಪದ್ಯದಲ್ಲಿಯೇ ಉತ್ತರವನ್ನು ಕೊಡುತ್ತಾನೆ. ಕೈ ಸಂಜ್ಞೆಗಳಿಗೆ 'ಕೈಕರಣಿ' ಎಂದು ಹೆಸರು. ಹೆಸರು ಹೇಳುವ ಸಂಪ್ರದಾಯದಲ್ಲಿ ಎರಡು ಬಗೆಯ ಸಂಜ್ಞೆಗಳನ್ನು ಪಾಲಿಸಲಾಗುತ್ತದೆ.

1) ಮಾತಿನ ಮೂಲಕ ಸೂಚಿಸುವ ಸಂಕೇತಗಳು.

2) ಕೈಗಳಿಂದ ಸೂಚಿಸುವ ಸಂಜ್ಞೆಗಳು.

ಬೆಳಕಿನ ಅನುಕೂಲ ಹೆಚ್ಚಾಗಿಲ್ಲದ ಕಡೆ ಕೈಗಳಿಂದ ನೀಡುವ ಸಂಜ್ಞೆಗಳು ಸ್ಪಷ್ಟವಾಗಿ ಕಾಣದೆ ಹೋಗಬಹುದು. ಅದಕ್ಕಾಗಿ ಮಾತಿನ ಸಂಕೇತಗಳನ್ನು ಅಭ್ಯಾಸ ಮಾಡಿಕೊಂಡಿರುತ್ತಾರೆ[18]. ಕರಪಾಲ ಮೇಳದಲ್ಲಿ ಐದು ಜನರೂ ಭಾಗವಹಿಸುತ್ತಾರೆ. ಅದರಲ್ಲಿ ಒಬ್ಬ ಮುಖ್ಯ ಕಥೆಗಾರ ಅವನ ಜೊತೆಯಲ್ಲಿ ಇಬ್ಬರು ಸಹ ನೃತ್ಯದವರಿರುತ್ತಾರೆ. ಇನ್ನಿಬ್ಬರು ಹಿಮ್ಮೇಳದವರು, ಜೊತೆಗೆ ಇತ್ತೀಚೆಗೆ ವಾದ್ಯ ಪರಿಕರವಾಗಿ ಹಾರ್ಮೋನಿಯಂ ಹಾಗೂ ಮೃದಂಗಗಳು ಸೇರಿಕೊಂಡಿವೆ[19].

ಬುರ್ರ ಕಥಾ ಮೇಳಗಳ ವಾದ್ಯ ಪರಿಕರದಲ್ಲಿ ಹಾರ್ಮೋನಿಯಂ ಸೇರ್ಪಡೆಗೊಂಡರೂ ಕಥಾ ಮೇಳದಲ್ಲಿ ಹೆಚ್ಚು ಬದಲಾವಣೆಯಾಗಿಲ್ಲವೆನ್ನಬಹುದು. ಕರಪಾಲ ಮೇಳದಲ್ಲಿ ಕಂಡು ಬರುವ ಸಂಜ್ಞೆಗಳು, ಬುರ್ರ ಕತೆಗಳಲ್ಲಿ ಕಂಡು ಬರುವುದಿಲ್ಲ. ಬುರ್ರ ಕಥೆಗಳಲ್ಲಿ ಪ್ರಧಾನ ಕತೆಗಾರ ತಂಬೂರಿ ವಾದ್ಯವನ್ನು ಹಿಡಿದು ಹಾಡಿದರೆ ಕರಪಲ್ಲದಲ್ಲಿ ಪ್ರಧಾನ ಕತೆಗಾರ ಡಿಮ್ಮಿ ವಾದ್ಯವನ್ನು ಬಳಸುತ್ತಾನೆ. ಬುರ್ರ ಕಥೆಯಲ್ಲಿ ಹಿಮ್ಮೇಳದವರು ಬಳಸುವ ವಾದ್ಯ ಕರಪಾಲದ ಮುಖ್ಯ ಕಥೆಗಾರ ಬಾರಿಸುತ್ತಾನೆ ಎನ್ನುವುದು ಗಮನಾರ್ಹವಾದುದು.

ಇವೆರಡೂ ಮೇಳಗಳು ಒಂದೇ ಮೂಲದಿಂದ ಬಂದವುಗಳು ಎನ್ನುವುದು ವಿದ್ವಾಂಸರ ಅಭಿಪ್ರಾಯ. ಇವೆರಡಕ್ಕೂ ಜಂಗಂ ಕಥೆಯೇ ಮೂಲ ಎಂದು ಡಾ. ಜೀ. ಶಂ. ಪರಮಶಿವಯ್ಯನವರು ಅಭಿಪ್ರಾಯ ಪಟ್ಟಿದ್ದಾರೆ. "ಕರ್ನಾಟಕ, ಆಂಧ್ರ ಭಾಗದ ಗಡಿಭಾಗಗಳಲ್ಲಿ ಕಂಡು ಬರುವ 'ಬುರ್ರ ಕಥಾ' ಸಂಪ್ರದಾಯಕ್ಕೂ, ದಕ್ಷಿಣ ಕರ್ನಾಟಕದ ಕರಪಾಲ ಮೇಳಕ್ಕೂ ಮೂಲ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ. "ಜಂಗಮ ಕಥೆ"ಯೇ ಎಂಬುದರಲ್ಲಿ ಅನುಮಾನವಿಲ್ಲ. ಆಂಧ್ರದಲ್ಲಿ ತೀರ ಇತ್ತೀಚಿನವರೆಗೆ 'ಬುರ್ರ ಕಥಾ' ಜಂಗಮ ಕಥೆಯೇ ಆಗಿತ್ತು. ನಾನಾ ಉದ್ದೇಶಗಳ ಪ್ರಸಾರ ಕಾರ್ಯಕ್ಕಾಗಿ ಈ ಮೇಳಗಳನ್ನು ಬಳಸಿಕೊಂಡ ಮೇಲೆ ಅದಕ್ಕೆ ಹೆಚ್ಚು ಪ್ರಚಾರ ಬಂದು ಈಗ 'ಬುರ್ರ ಕಥಾ' ಎಂಬ ಹೆಸರಿನಲ್ಲಿಯೇ ಉಳಿದಿದೆ. ಜಂಗಮ ಕಥೆ ಯಾವಾಗ ಹುಟ್ಟಿತು, ಎಲ್ಲಿ ಹುಟ್ಟಿತು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಕಲ್ಯಾಣದ ಧರ್ಮ ಕ್ರಾಂತಿಯ ನಂತರ ಧರ್ಮ ಪ್ರಸಾರದ ಉದ್ದೇಶದಿಂದ ಈ ಕಲೆ ಹುಟ್ಟಿಕೊಂಡಿರಬಹುದೇ ಎಂಬ ಅನುಮಾನಗಳು ಬರುತ್ತವೆ "[20]. ಇವುಗಳು ಒಂದೇ ಮೂಲದವು ಎನ್ನವುದಕ್ಕೆ ಸಂಶಯವಿಲ್ಲ ಎಂದಿದ್ದಾರೆ. ಮೇಲ್ವರ್ಗದ ಜಂಗಮರು ಕರಪಾಲ ಮೇಳವನ್ನು ನಡೆಸಿಕೊಂಡು ಬಂದರೆ, ನಿಮ್ನ ವರ್ಗದ ಜಂಗಮರು (ಬುಡ್ಗ ಜಂಗಮರು) ಬುರ್ರ ಕಥಾ ಮೇಳವನ್ನು ನಡೆಸಿಕೊಂಡು ಬಂದಿದ್ದಾರೆ.

ಈ ಎಲ್ಲ ಅಂಶಗಳು ಬುರ್ರ ಕಥೆಗಳು ಹನ್ನೆರಡನೆಯ ಶತಮಾನದಿಂದಲೇ ಅಸ್ತಿತ್ವಕ್ಕೆ ಬಂದಿರಬೇಕು ಎನ್ನುವ ಊಹೆಗೆ ಆಧಾರಗಳು ಒದಗಿಸುತ್ತವೆ. ಶರಣ ಚಳುವಳಿಯ ಸಂದರ್ಭದಲ್ಲಿ ಜಂಗಮ ಕಥೆಗಳು ನಂತರ ವೀರಶೈವ ಧರ್ಮದ ಪ್ರಭಾವ ಇಳಿಮುಖವಾದಂತೆ ವೈಷ್ಣವ ಧರ್ಮ ಪ್ರಭಾವದಿಂದ ಕಾಲ ಕ್ರಮೇಣ ಜಂಗಂ ಕಥೆಗಳು ಹರಿಕಥೆಗಳ ಪ್ರಭಾವಕ್ಕೊಳಗಾದವು. ಜೊತೆಗೆ ರಾಜ ಮಹಾರಾಜರುಗಳ ವೀರ, ತ್ಯಾಗ, ಛಲ ಮುಂತಾದವುಗಳ ಪ್ರಭಾವವು ಆಯಿತು. ತದನಂತರ ಆದುನಿಕತೆಯ ಪ್ರಭಾವದಿಂದ ಈ ಕಲೆ ಹೊಸತನ ಪಡೆದುಕೊಳ್ಳುತ್ತ, ಆದುನಿಕ ಸ್ಥಿತ್ಯಂತರಗಳಲ್ಲಿ ಪ್ರವೇಶಿಸಿದೆ. ಆದುನಿಕ ಕಾಲದಲ್ಲಿ ಸಾಂಪ್ರದಾಯಿಕ ಬುರ್ರ ಕಥೆಗಾರರಲ್ಲದೆ, ಹವ್ಯಾಸಿ ಬುರ್ರ ಕಥೆಗಾರರೂ ಹುಟ್ಟಿ ಕೊಂಡಿದ್ದಾರೆ. ಹೀಗಾಗಿ ಮೊದಲು ವೃತ್ತಿಗಾಯಕರಾದ ಬುಡ್ಗ ಜಂಗಮರು ಮಾತ್ರ ಬುರ್ರ ಕಥಾ ಮೇಳಗಳನ್ನು ನಡೆಸಿಕೊಂಡು ಬಂದರೆ, ಆಧುನಿಕ ಕಾಲದಲ್ಲಿ ಬುಡ್ಗ ಜಂಗಮರಲ್ಲದವರೂ ಬುರ್ರ ಕಥಾ ಮೇಳಗಳನ್ನು ನಡೆಸುತ್ತಿರುವುದು ಕಂಡು ಬರುತ್ತದೆ ಇವರು ಹವ್ಯಾಸಿ ಕಲಾವಿದರು. ಇದರಿಂದ ಬುರ್ರ ಕಥೆ ಆಧುನಿಕ ವಿಚಾರಗಳ ಮಾಧ್ಯಮವಾಗಿ ಪರಿಣಮಿಸಿದೆ. ಅಂದರೆ ಪ್ರಗತಿಗಾಮಿ ಪಕ್ಷಗಳ ತತ್ತ್ವಗಳನ್ನು, ಪ್ರಣಾಳಿಕೆಯನ್ನು ಜನಗಳಲ್ಲಿ ಪ್ರಚಾರ ಮಾಡಲು ಈ ಮಾಧ್ಯಮವನ್ನು ಸಶಕ್ತವಾಗಿ ಬಳಸುತ್ತಿರುವುದು ಒಂದು ಕಡೆಯಾದರೆ ಜನಪದ ಕಾವ್ಯ ಕಥೆಗಳನ್ನು ಸಾಂಪ್ರದಾಯಿಕವಾಗಿ ಹಾಡುತ್ತಾ ತಮ್ಮ ಜೀವನ ಸಾಗಿಸಲು ಅದೇ ಬುರ್ರ ಕಥೆಯನ್ನೇ ವೃತ್ತಿ ಮಾಡಿಕೊಂಡ ವೃತ್ತಿ ಗಾಯಕ ಗುಂಪು ಇನ್ನೊಂದು ಕಡೆ. ಎರಡರಲ್ಲೂ ಮಾಧ್ಯಮ ಒಂದೇ. ಆದರೆ ಹಾಡುವ ಕಾವ್ಯಗಳು ಮಾತ್ರ ಬೇರೆ ಬೇರೆ. ವಾಮವಾದಿಗಳ ಹಾಗೂ ನಕ್ಸಲೀಯರ ಭಾರಿ ಹಿಡಿತವಿರುವ ಆಂಧ್ರದಲ್ಲಿ ಮಾರ್ಕ್ಸ್ ಮತ್ತು

ಎಂಜೆಲ್ಸ್ ತತ್ತ್ವಗಳನ್ನು ಜಮೀನ್ದಾರಿಗಳ ವಿರುದ್ಧ ದಂಗೆಯೇಳಬೇಕೆಂಬ ಆಕ್ರೋಶ ಭಾವವನ್ನು ಕಥೆಗಳ ಮೂಲಕ , ಹಾಡುಗಳ ಮೂಲಕ ಬುರ್ರ ಕಥಾ ಮಾಧ್ಯಮದಲ್ಲಿ ಪ್ರಚಾರಕ್ಕೆ ತರುತ್ತಿದ್ದಾರೆ. ಎಲೆಕ್ಷನ್ ಸಮಯದಲ್ಲಿ ತಾವೇ ತಮ್ಮ ವಿರೋಧ ಪಕ್ಷದ ಮೇಲೆ ಕತೆ ಕಟ್ಟಿ ಅದನ್ನು ಹಾಡುತ್ತಾ ಜನಗಳ ಭಾವನೆಯನ್ನು ಕೆರಳುವಂತೆ ಮಾಡುತ್ತಾರೆ. ಇಲ್ಲದಿದ್ದರೆ ಆ ಊರಿನ ಅಥವಾ ಆ ಕ್ಷೇತ್ರದ ಮುಖ್ಯರು ಎಲ್ಲಿಂದಲೋ ಬುರ್ರ ಕಥೆಯವರನ್ನು ಕರೆಸಿ ಅವರಿಂದ ತಮ್ಮ ಪಕ್ಷ (ಅದು ಬುರ್ರ ಕಥೆಯವರ ಪಕ್ಷವೂ ಆಗಿರಬೇಕು)ದ ತತ್ತ್ವಗಳನ್ನು ಪ್ರಚಾರ ಮಾಡಿಸುತ್ತಾರೆ. ಊರಿಂದೂರಿಗೆ ಹೋಗಿ, ಹೀಗೆ ಪಕ್ಷದ ಪ್ರಚಾರ ಮಾಡುವ ಬುರ್ರ ಕಥಾ ತಂಡಗಳು ಬಹಳಷ್ಟಿವೆ. ಇವರಿಗೆ ಇದೇ ಉದ್ಯೋಗವಾಗಿರುವುದಿಲ್ಲ. ಸಮಯ ಬಂದಾಗ ಮಾತ್ರ ಹೋಗುತ್ತಾರೆ[21]. ಈ ರೀತಿ ಆಂಧ್ರದಲ್ಲಿ ಹೊಸ ಸಾಮಾಜಿಕ ಬದಲಾವಣೆಗಳಲ್ಲಿ ಬುರ್ರ ಕಥಾ ಮೇಳಗಳು ಪ್ರಮುಖ ಪಾತ್ರ ವಹಿಸಿವೆ. ವೈಚಾರಿಕ ಆಂದೋಲನ, ನಕ್ಸಲೈಟ್ ಚಳುವಳಿ, ರಾಜಕೀಯ ಪ್ರಚಾರ ಮುಂತಾದವುಗಳಲ್ಲಿ ಬುರ್ರ ಕಥೆ ಮಹತ್ವದ ಮತ್ತು ಜನಪ್ರಿಯ ಮಾಧ್ಯಮವಾಗಿ ಪರಿಣಮಿಸಿದೆ.

ಈ ಹಿನ್ನೆಲೆಲಯಿಂದ ಪ್ರಸ್ತುತದಲ್ಲಿ ಬುರ್ರ ಕಥಾ ಮೇಳಗಳಲ್ಲಿ ಎರಡು ಭಾಗಗಳನ್ನು ಗುರುತಿಸಬಹುದಾಗಿದೆ.1) ಸಾಂಪ್ರದಾಯಿಕ ಬುರ್ರ ಕಥೆಗಾರರು 2) ಆಧುನಿಕ ಬುರ್ರ ಕಥೆಗಾರರು.

1) ಸಾಂಪ್ರದಾಯಿಕ ಬುರ್ರ ಕಥೆಗಾರರು :

ಸಾಂಪ್ರದಾಯಿಕ ಬುರ್ರ ಕಥೆಗಾರರು ಬುಡ್ಗ ಜಂಗಮರೇ ಆಗಿದ್ದಾರೆ. ಇವರೆಲ್ಲ ವೃತ್ತಿಕಲಾವಿದರು. ಜೀವನ ನಿರ್ವಹಣೆಗಾಗಿ ಇವರು ಬುರ್ರ ಕಥನ ಕಲೆಯನ್ನೇ ಅವಲಂಬಿಸಿದವರು. ಬುರ್ರ ಕಥಾ ಮೇಳಗಳನ್ನು ನಡೆಸಲು ಜನರಿಂದ ಆಹ್ವಾನ ಬಂದಾಗ ಮೂವರೂ ಒಟ್ಟಿಗೆ ಸೇರಿ ಬುರ್ರ ಕಥೆಗಳನ್ನು ಹಾಡುತ್ತಾರೆ. ಉಳಿದ ಸಮಯದಲ್ಲಿ ಮೂವರೂ ಒಟ್ಟಿಗೆ ಸೇರದೆ ಬೇರೆ ಬೇರೆ ಓಣಿ ಅಥವಾ ಊರುಗಳಿಗೆ ತಿರುಗಿ ಕಥೆ ಹಾಡಿ ಬಿಕ್ಷೆ ಬೇಡುವರು.

2) ಆಧುನಿಕ ಬುರ್ರ ಕಥಗಾರರು :

ಇವರು ಬುಡ್ಗ ಜಂಗಮರಲ್ಲ. ವೃತ್ತಿ ಗಾಯಕರಲ್ಲ. ಹವ್ಯಾಸಿ ಕಲಾವಿದರು. ಇವರು ಬುರ್ರ ಕಥಾ ರೂಪವನ್ನೆ ಮಾದರಿಯನ್ನಾಗಿಟ್ಟು ಕೊಂಡು ಆಧುನಿಕ ವಿಚಾರಗಳಿಗೆ ತಕ್ಕಂತೆ ಹೊಸ ಹೊಸ ಕಥೆಗಳನ್ನು ಸೃಷ್ಟಿಸಿ ಪ್ರಚಾರಗೊಳಿಸುವರು. ಅಂದರೆ ಬುರ್ರ ಕಥಾ ರೂಪವನ್ನಾಧರಿಸಿ ಶಿಷ್ಟ ರೂಪದಲ್ಲಿ ಬುರ್ರ ಕಥನ ಕಾವ್ಯಗಳನ್ನು ರಚಿಸಿ ಪ್ರಚಾರಕ್ಕೆ ತಂದು ಜನಪ್ರೀಯ ಗೊಳಿಸುವುದು. ಬುರ್ರ ಕಥಾ ಕವಿಯೆಂದೇ ಪ್ರಸಿದ್ಧಿ ಪಡೆದ ಶೇಖನಾಜರ್ ಬುರ್ರಕಥಾ ಪರಂಪರೆಯಲ್ಲಿ ಒಂದು ಯುಗವನ್ನೇ ನಿರ್ಮಿಸಿದ್ದಾನೆ. ಆ ಯುಗವನ್ನು "ನಾಜರ್ ಯುಗ" ವೆಂದು ಕರೆಯುತ್ತಾರೆ [22]. ನಾಜರ್‌ನಂತೆಯೇ ಅನೇಕ ಕವಿಗಳು ಬುರ್ರ ಕಥೆಗಳನ್ನು ರಚಿಸುತ್ತಿದ್ದಾರೆ.

ಈ ರೀತಿಯ ಜನಪ್ರೀಯತೆ ಹೊಂದಿದ ಬುರ್ರ ಕಥಾ ಸಾಂಪ್ರದಾಯಿಕ ಮೇಳದಲ್ಲಿ ಸುಮಾರು ಎಂಭತ್ತಕ್ಕಿಂತಲೂ ಹೆಚ್ಚು ಕಥೆಗಳು ಹಾಡಲ್ಪಡುತ್ತವೆ[23].

ಬುರ್ರ ಕಥೆಗಳ ಪಟ್ಟಿ ಇಂತಿದೆ.

1.	ಅಪರೂಪ ರಾಜಲು ಕಥ	2.	ಅಮರ ಮೇಘ ಮಹಾರಾಜು ಕಥ
3.	ಅಲ್ಲಿರಾಣಿ ಕಥ	4.	ಆಡಬಿಡ್ಡ ಶಂಕರಮ್ಮ ಕಥ
5.	ಆರುಟ್ಲ ರಾಮಚಂದ್ರಾ ರೆಡ್ಡಿ ಕಥ	6.	ಅರೆಮರಾ ಕಥ
7.	ಈಡಿಗೋಳ್ಳ ಸತ್ಯಮ್ಮ ಕಥ	8.	ಎರಕುಲ ನಾಂಚಾರಿ ಕಥ
9.	ಎಲ್ಲಮ್ಮ ಕಥ	10.	ಏಕ ಚಕ್ರವರ್ತಿ
11.	ಕನಕತಾರ	12.	ಕಮಲ ಸಂಗಯ್ಯ
13.	ಕಮ್ಮವಾರಿ ಪಡತಿ	14.	ಕಲಿಯುಗ ಪೊನ್ನ
15.	ಕಾಂತಾಮತಿ	16.	ಕಾಂಬೋಜರಾಜ ಕಥ
17.	ಕಾಟಮರಾಜ ಕಥ	18.	ಕಾಮಮ್ಮ ಕಥ
19.	ಕುಂಭಂ ಚೆನ್ನಾರೆಡ್ಡಿ ಕಥ	20.	ಕುಮಾರ ರಾಮನ ಕಥ
21.	ಕುಸುವು ಕೋಮಲಿ	22.	ಗಾಂಧಾರಿ ಕಥ
23.	ಗಾರ್ಲಮನಿ ಕೋಟೆ ಕಥ	24.	ಗೋಲಸು ಮಹಾರಾಜ ಕಥ
25.	ಗೌಂಡ್ಲ ಅಂಜಯ್ಯ ಕಥ	26.	ಚಿನ್ನಮ್ಮ ಕಥ
27.	ಜರಸಂದನ ಕಥ	28.	ತಲವಂಚನಿ ವೀರುಡು ಕಥ
29.	ತಾ ಬೇಲು ಪುತ್ರುಡು ಕಥ	30.	ದೇಶಿಂಗು ರಾಜ ಕಥ
31.	ನರಕಾಸುರ ವಧ	32.	ನಲ ಚಕ್ರ ವರ್ತಿ
33.	ನಲ್ಲತಂಗ ಮಹಾರಾಜ ಕಥ	34.	ನವ ಭೋಜರಾಜ ಕಥ
35.	ನಾಗಿರೆಡ್ಡಿ ಕಥ	36.	ನೀಲರೂಪ ನೀಲನೇನ ಕಥ
37.	ಪಂಚ ಪಾಂಡುವುಲ ಕಥ	38.	ಪೂರ್ವ (ಪೂರೂರವ) ಚಕ್ರವರ್ತಿ ಕಥ
39.	ಬಂಗಾರು ತಿಮ್ಮರಾಜು ಕಥ	40.	ಬಲ್ಲೂಗ್ಗರಿ ಕೊಂಡಯ್ಯ
41.	ಬಾಲ ನಾಗಮ್ಮ	42.	ಜೀರಪ್ಪ ಕಥ
43.	ಬುಡ್ಡಾ ವೆಂಗಳರೆಡ್ಡಿ	44.	ಬೊಬ್ಬಿಲಿಯುದ್ಧಂ
45.	ಬಭ್ರುವಾಹನ	46.	ಮಾಂದಾತ
47.	ಮುಂಗ ಮೋಹನ ಮಹಾರಾಜು ಕಥ	48.	ಮುದ್ದು ರಾಮನ್ನ
49.	ಮೈನಾವತಿ	50.	ರತ್ನನೇನು ಮಹಾರಾಜ ಕಥ
51.	ರಾಜಾ ರಂಪಾಲಕ	52.	ರಾಮುಲಮ್ಮ ಲಂಬಾಡಿ ಕಥ
53.	ರೇಣಿಗುಂಟ ರಾಮಿರೆಡ್ಡಿ	54.	ಲಕ್ಕ ಕೋಟ ವೀರುಲ ಕಥ
55.	ಲಕ್ಷಮ್ಮ ಕಥ	56.	ವೆಕನೂರಿ ವೆಂಕಟರೆಡ್ಡಿ ಕಥ
57.	ವೀರ ಬಲವಂತ	58.	ವೇಶ್ಯ ನಾಗಮ್ಮ

59. ಶಂಖ ಮಹಾರಾಜ ಕಥ
60. ಶಿವಕುಮಾಲಿನಿ ಕಥ
61. ಶೀಲಮೂಲಿ ಚಿನ್ನಮ್ಮ ಕಥ
62. ಸದಾಶಿವ ರೆಡ್ಡಿ ಕಥ
63. ಸನ್ಯಾಸಮ್ಮ
64. ಸರ್ವಾಯಿ ಪಾಪುಡು
65. ಸಾರಂಗಧರ ಕಥ
66. ಸಿರಿಕೊಂಡ ಮಹಾರಾಜ ಕಥ
67. ಸುಗುಣಾವತಿ ಕಥ
68. ಸುಜ್ಜಿರೆಡ್ಡಿ ಕಥ
69. ಸುರಾಸಿಂಧು ರಾಜುಲ ಕಥ
70. ಸೂರ್ಯ ಚಂದ್ರರಾಜುಲ ಕಥ
71. ಹರಿಶ್ಚಂದ್ರ ಕಥ
72. ಹರ್ಕಾರುಬಂಟು
73. ಕಲ್ಲಿ ಚರ್ಲ ನರಸಿಂಹರೆಡ್ಡಿ
74. ಚಿನ್ನಪ್ಪ ರೆಡ್ಡಿ ಕಥ
75. ಪಿಲಾಯಿ ಪಲ್ಲಿ ಪಾಪಿರೆಡ್ಡಿ ಕಥ
76. ಭಟ್ಟಿ ವಿಕ್ರಮಾರ್ಕ
77. ಸವಾರಮ್ಮ
78. ವಂದರಿ ಎಂಕನ್ನ ಕಥ
79. ಸುರೋಜನಮ್ಮ
80. ಮೋಹಿನಿ ರುಕ್ಮಾಂಗದ
81. ಈಡಿಗೆ ದೇವಮ್ಮ
82. ಡ್ರೈವರು ಗಾಲಿ ಕಥ
83. ದೈವಾದೀನಂ ಕಥ
84. ಲಕ್ಷ್ಮಣ ರಾಯುನಿ ಕಥ
85. ಅಪ್ಪನ್ನ ಪಲ್ಲಿ ರೈಲು ಪಡ್ಡ ಕಥ
86. ತೆಲುಗು ಸತ್ತಮ್ಮ ಕಥ
87. ಪತಿ ಪೂರ್ವ ಚಂದ್ರಕಾಂತ ಕಥ

ಕರ್ನಾಟಕದಲ್ಲಿ ಕುಮಾರರಾಮನ ಕಥೆ, ಕೃಷ್ಣ ಗೊಲ್ಲರ ಕಥೆ, ಸ್ಯಾಸಿ ಚೆನ್ನಮ್ಮನ ಕಥೆ, ಬಾಲ ನಾಗಮ್ಮನ ಕಥೆ, ಜೈಸಿಂಗರಾಜನ ಕಥೆ, ಎಲ್ಲಮ್ಮನ ಕಥೆ, ಆದೋನಿ ಲಕ್ಷ್ಮಮ್ಮನ ಕಥೆ ಮುಂತಾದವುಗಳು ಬುರ್ರ ಕಥೆಗಾರರು ಹಾಡುವ ಹೆಚ್ಚು ಜನಪ್ರಿಯ ಕಥೆಗಳಾಗಿವೆ.

ಆದರೂ ಆಧುನಿಕತೆಯಿಂದಾಗಿ ಅಂದರೆ ಸಮೂಹ ಸಂವಹನ ಮಾಧ್ಯಮಗಳ ಬೆಳವಣಿಗೆಯಿಂದಾಗಿ ವೃತ್ತಿ ಗಾಯಕ ಬುರ್ರ ಕಥನ ಕಲೆಗಾರರು ಹಾಗೂ ಅವರ ವೃತ್ತಿ ಸಂಕಟ ಸ್ಥಿತಿಯಲ್ಲಿದೆ. ನಗರೀಕರಣದ ಆಕರ್ಷಣೆ, ಕಲಾಪೋಷಕರ (ಪ್ರೇಕ್ಷಕರ ಬದಲಾದ ಅಭಿರುಚಿ) ಅನಾದರ, ಸಿನೇಮಾ, ಟಿವ್ಹಿ ಮಾಧ್ಯಮಗಳ ಹಾವಳಿಯಿಂದಾಗಿ ಬುರ್ರ ಕಥೆಗಾರರು ತಮ್ಮ ವೃತ್ತಿ ಬಿಟ್ಟು ಹೊಸ ಉದ್ಯೋಗದತ್ತ ವಾಲುತ್ತಿದ್ದಾರೆ.

ಒಟ್ಟಾರೆ ಬುರ್ರ ಕಥಾ ಪರಂಪರೆಯನ್ನು ಮೂರು ಘಟ್ಟಗಳಲ್ಲಿ ಗುರುತಿಸಬಹುದೆನಿಸುತ್ತದೆ.

1) ಪ್ರಾಚೀನ ಯುಗ

2) ಮಧ್ಯ ಯುಗ

3) ಆಧುನಿಕ ಯುಗ

1) ಪ್ರಾಚೀನ ಯುಗ : ಹನ್ನೆರಡನೆಯ ಶತಮಾನದ ಶಿವಶರಣರಿಂದ ಪ್ರಾರಂಭವಾದ ಕಾಲ.

ಇದು ಬುರ್ರ ಕಥೆಗಳ ಮೊದಲ ಘಟ್ಟ ಜಂಗಂ ಕಥೆಗಳು. ಈ ಸಂದರ್ಭದಲ್ಲಿ ಶಿವನ ಲೀಲೆ ಶಿವ ಶರಣರ ಚರಿತ್ರೆಗಳನ್ನು ಕುರಿತು ಕಥೆಗಳು ರಚನೆಗೊಂಡಿರಬಹುದು.

2) ಮಧ್ಯ ಯುಗ : ವೀರಶೈವ ಧರ್ಮದ ಪ್ರಭಾವ ಇಳಿಮುಖವಾದ ನಂತರದ ಕಾಲವೆನ್ನಬಹುದು. ಈ ಕಾಲದಲ್ಲಿ ಬುಡ್ಗ ಜಂಗಮರ ವೇಷಗಾರಿಕೆ, ಬುರ್ರ ಕಥೆಗಳ ಮೇಲೆ ವೈಷ್ಣವ ಧರ್ಮದ ಪ್ರಭಾವವಾಗಿದೆ. ವೇಷಗಾರಿಕೆಯಲ್ಲಿ ಬೀದಿ ಭಾಗವತರ ಕಲೆ ಹೆಚ್ಚು ಪ್ರಸಿದ್ಧಿ ಪಡೆಯಿತು. ಅದರಂತೆ ರಾಜ ಮಹಾರಾಜರ, ಸಾಮಂತರ ಚರಿತ್ರೆ ಮತ್ತು ವೈಷ್ಣವ ಧರ್ಮ, ಮುಸ್ಲಿಂರ ಆಳ್ವಿಕೆ, ಮರಾಠರ ಆಳ್ವಿಕೆ ಇವೆಲ್ಲವೂ ಪ್ರಭಾವ ಬೀರಿರುವುದರಿಂದ ಅನೇಕ ಅರಸರ ಚರಿತ್ರೆಗಳನ್ನು ಕುರಿತು ಬುರ್ರ ಕಥೆಗಳು ಹುಟ್ಟಿಕೊಂಡವು. ಹದಿನೈದು ಹದಿನಾರನೆಯ ಶತಮಾನ, ಅದು ಧರ್ಮ ಸಂಘರ್ಷದ ಕಾಲ. ವೀರ ಶೈವ ಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗುತ್ತಿರುವ ಸಂದರ್ಭ. ಜೊತೆಗೆ ಮುಸ್ಲಿಂರ ಆಕ್ರಮಣ, ದಬ್ಬಾಳಿಕೆ ಜೊತೆಗೆ ಧರ್ಮ ಸಮನ್ವಯತೆಗಾಗಿ ಪ್ರಯತ್ನಿಸುತ್ತಿರುವ ಕಾಲವೂ ಹೌದು. ಈ ಮುಂತಾದ ಅಂಶಗಳು ರಾಜರುಗಳ ವೀರ , ಛಲ, ತ್ಯಾಗ , ನಿಷ್ಠೆಗಳು, ಧಾರ್ಮಿಕ ಸಂಘರ್ಷ ಮತ್ತು ಧರ್ಮ ಸಮನ್ವಯತೆಯ ಮೌಲ್ಯಗಳು ಪ್ರೇರಣೆ ನೀಡಿವೆ. ಉದಾ.: ಕುಮಾರರಾಮ, ಸ್ಯಾಸಿ ಚೆನ್ನಮ್ಮ, ಜೈಸಿಂಗರಾಜ ಇಂತಹ ಅನೇಕ ಬುರ್ರ ಕಥೆಗಳು ರಚನೆಗೊಂಡವು. ಬುರ್ರ ಕಥೆಗಾರರು ಇವುಗಳನ್ನು ಹಾಡುವುದರ ಮೂಲಕ ಜನ ಸಾಮಾನ್ಯರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಲು ಸಾಧ್ಯವಾಯಿತು.ಬುರ್ರ ಕಥೆಗಳು ವಾಸ್ತವಿಕ ಘಟನೆಗಳನ್ನವಲಂಬಿಸಿಯೇ ರಚನೆಗೊಂಡಿವೆ. ಹೀಗಾಗಿ ಜನ ಸಾಮಾನ್ಯರ ಆಶೋತ್ತರಗಳಿಗೆ ಸ್ಪಂಧಿಸಿ ಜನಮನಕ್ಕೆ ಹೆಚ್ಚು ಹತ್ತಿರವಾಗಿವೆ. ಜನ ಪ್ರಿಯತೆಯನ್ನು ಪಡೆದುಕೊಂಡಿವೆ. ವೀರಗಾಥಾ ಯುಗ ಇಲ್ಲಿಂದಲೇ ಪ್ರಾರಂಭವಾಯಿತು.

3) ಆಧುನಿಕ ಯುಗ : ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ, ಜಮೀನದಾರಿ ಪದ್ಧತಿಯ ವಿರುದ್ಧ ಹೋರಾಟ , ಸಾಮಾಜಿಕ ಅಸಮಾನತೆ, ಹಸಿವು ,ಬಡತನ, ನಿರುದ್ಯೋಗ, ಜನ ಸಂಖ್ಯೆ, ಪ್ರಜಾಪ್ರಭುತ್ವ (ಅ) ವ್ಯವಸ್ಥೆ ಈ ಮುಂತಾದ ಅನೇಕ ಅಂಶಗಳು ಆಧುನಿಕ ಬುರ್ರ ಕಥೆಗಾರರಿಗೆ ಪ್ರೇರಣೆ ಒದಗಿಸಿವೆ. ಜನ ಪ್ರಿಯ ಕಲೆಯೆಂಬುದನ್ನರಿತ ಅನೇಕರು (ಬುಡ್ಗ ಜಂಗಮರಲ್ಲದವರು) ಬುರ್ರ ಕಥೆಗಳನ್ನು ರಚಿಸಿ ಕಥಾಮೇಳಗಳನ್ನು ನಡೆಸಿ ಜನಪ್ರಿಯ ಮಾಧ್ಯಮವನ್ನಾಗಿಸಿದರು. ಅನೇಕರು ಬುರ್ರ ಕಥಾ ಕವಿಗಳೆಂದೇ ಪ್ರಸಿದ್ಧಿ ಪಡೆದಿದ್ದಾರೆ.

ಈ ರೀತಿ ಬುರ್ರ ಕಥೆ ಪ್ರಮುಖವಾಗಿ ಈ ಮೂರು ಘಟ್ಟಗಳಲ್ಲಿ ಪ್ರವಹಿಸಿ ಹೆಚ್ಚು ಜನಪ್ರಿಯವಾದ ಕಲಾ ಮಾಧ್ಯಮವಾಗಿದೆ.

ಆಧಾರಗಳು

1) ಕನ್ನಡ ವೃತ್ತಿಗಾಯಕ ಕಾವ್ಯಗಳು : ಪುಟ : X X X
ಡಾ. ಜೀ. ಶಂ. ಪರಮಶಿವಯ್ಯ

2) ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು : ಪುಟ : 75
ಡಾ. ಜಿ.ಶಂ. ಪರಮಶಿವಯ್ಯ

3) ಅಲ್ಲೇ ಪುಟ : 77

4) ಬಂಡಾಯ ಜಾನಪದ : ಪುಟ : 122
ರಂಗಾರೆಡ್ಡಿ ಕೋಡಿರಾಂಪೂರ

5) ತೆಲುಗು ಜಾನಪದ ಗೀತ ಕಥೆಗಳು ಪುಟ : 85

6) ಬುಡಿಗ ಜಂಗಾಲು :ಡಾ. ಎನ್. ಆರ್. ವೆಂಕಟೇಶಂ ಪುಟ : 21

7) ಅಲ್ಲೇ ಪುಟ : 22

8) ಜಾನಪದ ಭಿಕ್ಷುಕ ಗಾಯಕವುಲು :
ಡಾ. ಎನ್. ಯಾದಗಿರಿ ಶರ್ಮ
(ಅಪ್ರಕಟಿತ ಪಿ ಎಚ್ ಡಿ. ಮಹಾಪ್ರಬಂಧ) ಪುಟ : 85

9) ಬಂಡಾಯ ಜಾನಪದ : ರಂಗಾರೆಡ್ಡಿ ಕೋಡಿರಾಂಫುರ ಪುಟ : 130

10) ಬಂಡಾಯ ಜಾನಪದ : ರಂಗಾರೆಡ್ಡಿ ಕೋಡಿರಾಂಫುರ ಪುಟ : 126

11) ಬುಡಿಗ ಜಂಗಾಲು : ಡಾ॥ ಎನ್. ಆರ್. ವೆಂಕಟೇಶಂ ಪುಟ : 88

12) ಬುಡ್ಗ ಜಂಗಂವಾಣಿ : ನಿಧಾನ ಕವಿ ವೆಂಕಟೇಶಂ, ಪುಟ : 2
ಏಪ್ರಿಲ್ 1989 (ಪ್ರತ್ಯೇಕ ಸಂಚಿಕೆ)

13) ತೆಲುಗು ಜಾನಪದ ಗೇಯ ಗಾಥಾಲು : ಪುಟ : 35
ನಾಯನಿ ಕೃಷ್ಣ ಕುಮಾರಿಗಾರು

14) ತೆಲುಗು ಜಾನಪದ ಗೇಯ ಸಾಹಿತ್ಯಂ : ಪುಟ : 805
ರಾಮರಾಜು ಬಿರುದರಾಜು

15) ಬಂಡಾಯ ಜಾನಪದ : ರಂಗಾರೆಡ್ಡಿ ಕೋಡಿರಾಂಫುರ : ಪುಟ : 126-127

16) ಕರಪಾಲ ಮೇಳ : ಡಿ. ಕೆ. ರಾಜೇಂದ್ರ ಪುಟ : 2

17) ಜಾನಪದ : ಸಂಪುಟ - 1 : ಡಾ. ಎಂ. ಚಿದಾನಂದ ಮೂರ್ತಿ ಪುಟ : 45

18) ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು : ಪುಟ : 273
ಡಾ. ಜೀ. ಶಂ. ಪರಮಶಿವಯ್ಯ

19) ಕರಪಾಲ ಮೇಳ : ಡಿ.ಕೆ. ರಾಜೇಂದ್ರ ಪುಟ : 8

20) ಕರಪಾಲ ಮೇಳ : ಡಾ॥ ಜಿ. ಶಂ. ಪರಮಶಿವಯ್ಯ ಪುಟ : 8 viii

21) ಬಂಡಾಯ ಜಾನಪದ : ರಂಗಾರೆಡ್ಡಿ ಕೋಡಿರಾಂಫುರ ಪುಟ : 133-34

22) ಬಂಡಾಯ ಜಾನಪದ : ರಂಗಾರೆಡ್ಡಿ ಕೋಡಿರಾಂಫುರ ಪುಟ : 138

23) ಬುಡಿಗ ಜಂಗಾಲು : ಡಾ॥ ಎನ್. ಆರ್. ವೆಂಕಟೇಶಂ ಪುಟ : 87

ಅಧ್ಯಾಯ - 4

ಬುರ್ರಕಥಾ ಈರಮ್ಮನ ಜೀವನ ಮತ್ತು ಸಾಧನೆ

ಅಧ್ಯಾಯ 4

ಬುರ್ರ ಕಥಾ ಈರಮ್ಮನ ಜೀವನ ಮತ್ತು ಸಾಧನೆ

1) ಜನನ ಮತ್ತು ಬಾಲ್ಯ

2) ವೈವಾಹಿಕ ಜೀವನ

3) ಈರಮ್ಮನ ಜೀವನ ಸಂಘರ್ಷ

4) ಪರಿಸರ ಪ್ರವಾಹದಲ್ಲಿ ಈರಮ್ಮ

5) ಈರಮ್ಮನ ವ್ಯಕ್ತಿತ್ವ ದರ್ಶನ

1. ಜನನ ಮತ್ತು ಬಾಲ್ಯ :

ರಾಯಚೂರು ಬಳ್ಳಾರಿ ಜಿಲ್ಲೆಗಳಲ್ಲಿ ಬುಡ್ಗ ಜಂಗಮರು ಹೆಚ್ಚಾಗಿ ಕಂಡು ಬರುತ್ತಾರೆ. ಕರ್ನಾಟಕ ಮತ್ತು ಆಂಧ್ರ ಗಡಿಭಾಗದಲ್ಲಿ ಹೆಚ್ಚಾಗಿ ಕಾಣಿಸಿ ಕೊಳ್ಳುವ ಈ ಜನಾಂಗ ಮೂಲತಃ ಆಂಧ್ರ ಪ್ರದೇಶದಿಂದ ವಲಸೆ ಬಂದಿದ್ದಾರೆ. ಇವರದು ಅಲೆಮಾರಿ ಜೀವನ. ಕಥೆ ಹೇಳುವ, ವೇಷ ಹಾಕುವ ಕಲೆಗಾರಿಕೆ ವಂಶ ಪರಂಪರೆಯಿಂದ ಬಂದದ್ದು. ಕಥೆ ಹೇಳಿ, ವೇಷ ಹಾಕಿ ಹೊಟ್ಟೆ ತುಂಬಿಸಿಕೊಳ್ಳುವ ಈ ಜನಾಂಗಕ್ಕೆ ಮೂಲ ನೆಲೆಯಿಲ್ಲ. ಸದಾ ಊರೂರು ಅಲೆಯುತ್ತ ಗ್ರಾಮಗಳ ಹೊರಗೆ ಗುಡಾರ ಹಾಕಿಕೊಂಡು ವಾಸಿಸುವ ಜನಾಂಗವಿದು. ಇವರಿಗೆ ಹುಟ್ಟಿದ ಊರು ಕೇಳಿದರೆ, ಉತ್ತರ ಸಿಗುವುದಿಲ್ಲ. ಜೀವನದ ಗೊತ್ತು ಗುರಿಯಿಲ್ಲ. ಬುಡ್ಗ ಜಂಗಮರ ಸಾಕು ಪ್ರಾಣಿಗಳಾದ ಕುದುರೆ, ದನ ಕರುಗಳೊಂದಿಗೆ ಊರೂರು ಅಲೆಯುತ್ತ ಊರ ಹೊರಗಡೆ ಗುಡಾರಗಳನ್ನು ಹಾಕಿಕೊಂಡು ತಂಗುತ್ತಾರೆ. ಕುದುರೆಗಳ ಮೇಲೆ ತಮ್ಮ ಸಾಮಾನು ಸರಂಜಾಮುಗಳನ್ನು ಹೊರಿಸಿ, ವಯಸ್ಸಾದ ಹಿರಿಯರನ್ನು ಕಾವಡಿಯಲ್ಲಿ ಕುಳ್ಳಿರಿಸಿ ಹೊತ್ತುಕೊಂಡು ಊರೂರು ಅಲೆಯುತ್ತಾರೆ. ಹೀಗೆ ಆಂಧ್ರದಿಂದ ತಿರುಗುತ್ತ ತಿರುಗುತ್ತ ಆಂಧ್ರ ಕರ್ನಾಟಕ ಗಡಿಭಾಗದ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಬುಡ್ಗ ಜಂಗಮ ಅಲೆಮಾರಿ ಸಮುದಾಯ ಆಂಧ್ರ ಕರ್ನಾಟಕ ಗಡಿಭಾಗದ ರಾಯಚೂರ, ಬಳ್ಳಾರಿ, ಕೊಪ್ಪಳ, ತುಮಕೂರು, ಕೋಲಾರ, ದಾವರಣಗೆರೆ, ಬೆಂಗಳೂರು, ಬೆಳಗಾವಿ, ಧಾರವಾಡ , ಬಾಗಲಕೋಟೆ, ಬೀದರ , ಗುಲಬರ್ಗಾ, ಬಿಜಾಪೂರ ಮುಂತಾದ ಜಿಲ್ಲೆಗಳಲ್ಲಿ ನೆಲೆ ನಿಂತಿದ್ದಾರೆ. ಜೊತೆಗೆ ನೆರೆಯ ರಾಷ್ಟ್ರವಾದ ಮಹಾರಾಷ್ಟ್ರದಲ್ಲಿಯೂ ಕಂಡು ಬರುತ್ತಾರೆ. ಬುಡ್ಗ ಜಂಗಮರು ಬುರ್ರ ಕಥಾ ಮೇಳಗಳನ್ನು ನಡೆಸುವುದು, ವೇಷ ಹಾಕುವುದು, ಹಸ್ತ ನೋಡಿ ಭವಿಷ್ಯ ಹೇಳುವುದು, ಬಿಕ್ಷೆ ಬೇಡುವುದು ಮುಂತಾದ ಕಲೆಗಾರಿಕೆಯಿಂದ ಜೀವನ ಸಾಗಿಸುತ್ತಿದ್ದಾರೆ.

ಇಂತಹ ಅಲೆಮಾರಿ ಜನಾಂಗಕ್ಕೆ ಸಂಬಂಧ ಪಟ್ಟ ಈರಮ್ಮನ ವಂಶಜರೂ ಕೂಡ ಆಂಧ್ರದಿಂದ ಕರ್ನಾಟಕಕ್ಕೆ ಅಲೆಮಾರಿಗಳಾಗಿ ವಲಸೆ ಬಂದವರು. ಕರ್ನಾಟಕ ಆಂಧ್ರ ಗಡಿಭಾಗದ ಬಳ್ಳಾಗಿ ಜಿಲ್ಲೆಯಲ್ಲಿ ಅಲೆಯುತ್ತ ಸೊಂಡೂರು ತಾಲೂಕಿನ ಹಳೆದರೋಜಿಯಲ್ಲಿ ನೆಲೆ ನಿಂತರು. ಒಂದೆಡೆ ನೆಲೆ ನಿಂತರೂ ಅಲಮಾರಿ ಜೀವನ ಇವರಿಗೆ ತಪ್ಪಿದ್ದಲ್ಲ. ಬುರ್ರ ಕಥಾ ಮೇಳಗಳನ್ನು ನಡೆಸಲು, ವೇಷ ಹಾಕಲು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಸಂಚರಿಸುತ್ತ ಊರ ಹೊರಗಡೆ ಗುಡಾರ ಹೂಡುತ್ತ ಹೊಟ್ಟೆ ಪಾಡಿಗಾಗಿ

ಊರೂರು ಅಲೆಯುತ್ತಿದ್ದರು. ಇಂತಹ ಅಲೆಮಾರಿ ಕುಟುಂಬದಲ್ಲಿ ಈರಮ್ಮನ ಜನನವಾಗುತ್ತದೆ. ಈರಮ್ಮನ ತಂದೆ ಅಶ್ವಿ[1]ಲಾಲಪ್ಪ, ತಾಯಿ ಜಂಬಲಮ್ಮ. ತಾತ (ಅಜ್ಜ) ಅಶ್ವಿ ಜಂಬಣ್ಣ ಅಜ್ಜಿ ಸುಂಕಲಮ್ಮ. ಈರಮ್ಮನ ತಂದೆ - ತಾಯಿ ಬರ್‍ರ ಕಥೆಗಳನ್ನು ತೆಲುಗಿನಲ್ಲಿ ಹಾಡುತ್ತಿದ್ದರು. ತಾತ ಕೂಡ ಬುರ್‍ರ ಕಥಾ ಕಲಾವಿದನಾಗಿದ್ದ. ಈರಮ್ಮನಿಗೆ ಐದು ಜನ ಅಕ್ಕ - ತಂಗಿಯರು[2]. ಮೂರು ಜನ ಅಣ್ಣ - ತಮ್ಮಂದಿರು ಸುಂಕಮ್ಮ, ಮಾರೆಮ್ಮ, ಶಿವಮ್ಮ, ಸಣ್ಣ ಮರೆಮ್ಮ ಇವರು ಅಕ್ಕ ತಂಗಿಯರು. ನಾಗಭೂಷಣಪ್ಪ, ತಿಪ್ಪೇಸ್ವಾಮಿ, ಬಾಲ ಸ್ವಾಮಿ ಇವರು ಈಕೆಯ ಅಣ ತಮ್ಮಂದಿರು. ಈರಮ್ಮನ ಅಣ್ಣ ತಮ್ಮಂದಿರೆಲ್ಲ ವೇಷ ಹಾಕುತ್ತಾರೆ. ಈಕೆಯ ತಂಗಿ ಶಿವಮ್ಮ ಈರಮ್ಮನಿಗೆ ಹಿಮ್ಮೇಳ ಗಾಯಕಿಯಾಗಿ ಈರಮ್ಮನ ಕಲೆಗೆ ಸ್ಫೂರ್ತಿಯ ಸೆಲೆಯಾಗಿದ್ದಾಳೆ.

ಹೀಗೆ ಈರಮ್ಮನ ಬಾಲ್ಯ ಕಥೆ ಕೇಳುವುದರೊಂದಿಗೆ ಪ್ರಾರಂಭವಾಗುತ್ತದೆ. ಬಾಲ್ಯದಲ್ಲಿ ಈರಮ್ಮ ತಂದೆ - ತಾಯಿಯರ, ತಾತ - ಅಜ್ಜಿಯರ ಜೊತೆ ಅಲೆಮಾರಿಯಾಗಿ ಊರೂರು ತಿರುಗುತ್ತಿದ್ದಳು. ತಂದೆ - ತಾಯಿಯಂದಿರು ತಮ್ಮ ಕಲಾ ಪ್ರದರ್ಶನದಲ್ಲಿ ತೊಡಗಿದರೆ, ಚಿಕ್ಕವಳಾದ ಈರಮ್ಮ ತನ್ನ ಅಕ್ಕ- ತಂಗಿಯರೊಂದಿಗೆ ದನ ಕಾಯುತ್ತಿದ್ದಳು. ಕೆಲವೊಮ್ಮೆ ತಂದೆಯ ಜೊತೆ ಬುರ್‍ರ ಕಥಾ ಮೇಳದಲ್ಲಿ ಭಾಗಿಯಾಗುತ್ತಿದ್ದಳು. ಗಂಗಿ - ಗೌರಿ ಹಾಡುತ್ತ ಬಿಕ್ಷೆ ಬೇಡುವ ತಾಯಿಯ ಜೊತೆಗೂ ಊರೂರು, ಮನೆ ಮನೆ ತಿರುಗುತ್ತಿದ್ದಳು. ತಂದೆ - ತಾಯಿ ಕಥೆ ಹೇಳುತ್ತಿರುವಾಗ, ಚಿಕ್ಕವಳಾದ ಈರಮ್ಮ ಕಥೆ ಪ್ರಾರಂಭಿಸುವ ಮುನ್ನ ಇಲ್ಲವೆ ಮುಗಿಯುವವರೆಗೂ ಊದಿನ ಕಡ್ಡಿಗಳನ್ನು ಹಚ್ಚಿಕೊಂಡು, ಹಾಗೆ ತಂದೆ - ತಾಯಿಯವರು ಹಾಡುವ ಕಥೆಗಳನ್ನು ತದೇಕಚಿತ್ತದಿಂದ ಆಲಿಸುತ್ತಿದ್ದಳು. ಅಲ್ಲದೆ ಬಾಲ್ಯದಲ್ಲಿ ಈರಮ್ಮ ದನ ಕಾಯುತ್ತಿದ್ದಳು. ದನ ಕಾಯಲು ಹೋದಾಗ ಅಲ್ಲಿ ತೆಲುಗಿನ ಬುರ್‍ರ ಕಥೆಗಳನ್ನು ನಿಸರ್ಗದ ಮಡಿಲಲ್ಲಿ ಯಾರದೇ ಹಂಗಿಲ್ಲದೆ ಸಂತೋಷದಿಂದ ಕುಣಿದು ಕುಪ್ಪಳಿಸುತ್ತ. ಪ್ರೀತಿಯಿಂದ ಹಾಡುಗಳನ್ನು ಕಂಠ ಪಾಠ ಮಾಡಿಕೊಳ್ಳುತ್ತಿದ್ದಳು. ಕೆಲವೊಮ್ಮೆ ತಂದೆ - ತಾಯಿಯರ ಜೊತೆ ಹಿಮ್ಮೇಳ ಗಾಯಕಿಯಾಗಿ ಹಾಡುತ್ತಿದ್ದಳು. ಹೀಗಾಗಿ ಈರಮ್ಮನಿಗೆ ಕಥೆ ಕಲಿಯುವ ಹವ್ಯಾಸ ಬೆಳೆಯ ತೊಡಗಿತು. ಇವರು ಊರೂರು ತಿರುಗಿ ಕಥೆ ಹೇಳುವ ಸಂದರ್ಭದಲ್ಲಿ ಆಯಾ ಜನರ, ಭಾಷೆ, ಪರಿಸರ, ಅವರ ನಡಾವಳಿಕೆಗಳಗನುಗುಣವಾಗಿ ಕಥೆ ಹೇಳುತ್ತಿದ್ದರು. ಅಂದಿನ ಕಥೆ ಮುಗಿದ ಮೇಲೆ ಇನ್ನೊಂದು ಕಥೆಗೆ ಒಪ್ಪಿಗೆ (ಮಾತು) ಕೊಟ್ಟು, ಅಲ್ಲಿಂದ ಬೇರೆ ಊರಿಗೆ ಪ್ರಯಾಣ ಬೆಳೆಸುತ್ತಿದ್ದರು. ಬುಡ್ಗ ಜಂಗಮರು ಒಂದೂರಿನಿಂದ ಇನ್ನೊಂದೂರಿಗೆ ಕಥೆ ಹೇಳುತ್ತ, ಅಲೆಯುತ್ತ ತಮ್ಮ ಗುಡಾರಗಳನ್ನು ಬದಲಾಯಿಸಬೇಕಾಗುತ್ತಿತ್ತು. ಹೀಗೆ ಊರೂರುಗಳಿಗೆ ತಿರುಗುವುದನ್ನೇ ಅವರು ದೇಶ ತಿರುಗುವ ಕೆಲಸವೆನ್ನುತ್ತಾರೆ. ತಂದೆ - ತಾಯಿಯವರೊಡನೆ ಅಲೆಮಾರಿಗಳಾಗಿ ಊರೂರು ತಿರುಗುತ್ತ ಕಥಾ ಮೇಳದಲ್ಲಿ ಭಾಗವಹಿಸುತ್ತ ಈರಮ್ಮ ಬುರ್‍ರಕಥೆಗಳ ಬಗ್ಗೆ ಹೆಚ್ಚು ಆಸಕ್ತಿ ಬೆಳೆಸಿಕೊಂಡಳು.

ಅದುವರೆಗೂ ತೆಲುಗಿನಲ್ಲಿದ್ದ ಕಥೆ ಕಾವ್ಯಗಳನ್ನು ಜನರ ಅಪೇಕ್ಷೆಯ ಮೇರೆಗೆ ಕನ್ನಡದಲ್ಲಿ ಹಾಡುವುದನ್ನು ರೂಢಿಸಿಕೊಂಡಳು. ಇಲ್ಲಿ ಬಂದು ನೆಲೆಸಿದ ಮೇಲೆ ಅನಿವಾರ್ಯವಾಗಿ ಬುಡ್ಗ ಜಂಗಮರು ಇಲ್ಲಿನ ಭಾಷೆಯ ಜೊತೆಗೂ ಬದುಕು ನಡೆಸಬೇಕಾಯಿತು. ಆಯಾ ಊರಿನ ಭಾಷೆ, ಪರಿಸರಕ್ಕೆ

ಒಪ್ಪಿಕೊಂಡು ಕಥೆಗಳನ್ನು ಹೇಳುತ್ತಿದ್ದರು. ಹಗಲೆಲ್ಲಾ ವೇಷ ಹಾಕುತ್ತಿದ್ದರು. ರಾತ್ರಿ ಬುರ್ರ ಕಥೆಗಳನ್ನು ಹೇಳುತ್ತಿದ್ದರು. ಹಾಡುಗಳನ್ನು ಕಲಿಯುತ್ತಾ, ದನ ಮೇಯಿಸುತ್ತಾ, ತನ್ನ ದಿನ ನಿತ್ಯದ ಕೆಲಸದೊಂದಿಗೆ ಈರಮ್ಮ ಬೆಳೆದು ದೊಡ್ಡವಳಾದಳು. ತಂದೆಯು ಬುರ್ರ ಕತೆಗಳನ್ನು ತಂಬೂರಿ ಬಾರಿಸ್ತಾ ಹಾಡುತ್ತಿದ್ದರೆ,ಈರಮ್ಮ ತನ್ನ ತಾಯಿಯೊಂದಿಗೆ ಹಿಮ್ಮೇಳ ಗಾಯಕಿಯಾಗಿ ಹಾಡುತ್ತಿದ್ದಳು. ಅಣ್ಣ - ತಮ್ಮಂದಿರು ವೇಷಹಾಕುತ್ತಿದ್ದರು. ಬುರ್ರ ಕಥೆ ಇವರಿಗೆ ಬರುವುದಿಲ್ಲ. ತಂದೆಗೆ ಗಂಡು ಮಕ್ಕಳ್ಯಾರು ಹಾಡು ಕಲಿಯಲಿಲ್ಲವೆಂಬ ಕೊರಗಿತ್ತು. ಮಗಳಲ್ಲಿಯ ಆಸಕ್ತಿ ಕಂಡು, ಹಾಡುವುದಕ್ಕೆ ಅವಳಲ್ಲಿ ಮತ್ತಷ್ಟು ಚೈತನ್ಯ ತುಂಬಿ, ಮಗಳಿಗೆ ಕಥೆಗಳನ್ನು ಕಲಿಸಿದರು. ಈರಮ್ಮ ತಂದೆಗೆ ಹೆಣ್ಮಗಳಾದ ನನಗೇಕೆ ಈ ವಿದ್ಯೆ ? ಎಂದು ಪ್ರಶ್ನಿಸುತ್ತಾಳೆ. ಆಗ ತಂದೆಯು 'ಮುಂದೆ ನಿನ್ನ ಹೊಟ್ಟೆ ಪಾಡಿಗಾಗುತ್ತದೆ ಕಲಿಯಮ್ಮ [3] ಎಂದು ಹೇಳುತ್ತಾನೆ. ತಂದೆಯ ಮಾತಿಗೆ ಮಾನ್ಯ ಕೊಟ್ಟು, ಈ ಸರಸ್ವತಿಯನ್ನು ಹೀಗೆ ಸುಮ್ಮನೆ ಮೂಲೆಗೆ ಬೀಳಿಸಬಾರದೆಂದು ಶ್ರದ್ಧೆಯಿಂದ ಕಥೆಗಳನ್ನು ಕಲಿತೆ ಎನ್ನುತ್ತಾಳೆ. ತಾಯಿ ನೀನೇ ನನ್ನ ಕಾಪಾಡು ನನ್ನ ಪಾಲಿಗೆ ನೀ ಒಲಿದರೂ ಸೈ ಒಲಿಯದಿದ್ದರೂ ಸೈ ಎಂದು ಆ ಸೀತಾರ (ತಂಬೂರಿ) ಹಿಡಕೊಂಡೆ, ಅದನ್ನು ಹಿಡಕೊಂಡೆನೆಂದರೇ ಅಷ್ಟು ಉಲ್ಲಾಸ ನನಗಾಗುತ್ತದೆ. ನಾನು ಕಥೆ ಹೇಳದಿದ್ದರೂ, ಅದ್ಹೇಗೋ ನನ್ನ ಆ ಲಯದಲ್ಲಿ ಲೀನವಾಗಿ ಬಿಡುತ್ತೇನೆ' ಎನ್ನುತ್ತಾಳೆ. ಈರಮ್ಮನಿಗೆ ಮನೆಯವರೆಲ್ಲರ ಪ್ರೋತ್ಸಾಹ ಸಿಗುತ್ತದೆ. ಹುಮ್ಮಸ್ಸಿನಿಂದ ಕೈಯಲ್ಲಿ ಬುರ್ರ (ತಂಬೂರಿ) ಬಾರಿಸುತ್ತ ಹಾಡ ಹಾಡುವುದನ್ನು ಕಲಿಯುವಳು. ತಂದೆ - ತಾಯಿಯವರಿಂದ ಪಡೆದ ಬುರ್ರ ಕಥನ ಕಲೆ ಮುಂದೆ ಈರಮ್ಮನ ಬದುಕಿಗೆ ದಾರಿ ದೀಪವಾಗುತ್ತದೆ.

2. ವೈವಾಹಿಕ ಜೀವನ :

ಈರಮ್ಮನ ವೈವಾಹಿಕ ಜೀವನ ದುರಂತಮಯವಾದದ್ದು. ಈ ಕುರಿತು ಈರಮ್ಮನನ್ನು ವಿಚಾರಿಸಿದಾಗ ಆಕೆಗೆ ಕೋಪ ಉಂಟಾಗುತ್ತದೆ. ಜಿಗುಪ್ಸೆಯೂ ಉಂಟಾಗುತ್ತದೆ. ತನ್ನ ಹಾಡಿನ ಬಗ್ಗೆ, ಬಾಲ್ಯದ ಬಗ್ಗೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಅತ್ಯಂತ ಉತ್ಸುಕಳಾಗಿ ವಿವರಗಳನ್ನು ನೀಡುವ ಈರಮ್ಮ ವೈವಾಹಿಕ ಜೀವನದ ಬಗ್ಗೆ ಜಿಗುಪ್ಸೆ ತಾಳುತ್ತಾಳೆ [4]. ನಿರುತ್ಸಾಹದಿಂದ ನಿಟ್ಟುಸಿರು ಬಿಡುತ್ತಾಳೆ. ಕಾರಣ ಆಕೆಗೆ ವೈವಾಹಿಕ ಜೀವನವು ಅನೇಕ ಸಂಕಷ್ಟಗಳಿಗೆ ನೂಕಿದೆ. ಈರಮ್ಮನ ಮದುವೆ ನಡೆದದ್ದು ಆಕೆಯ ಮನಸ್ಸಿಚ್ಛೆಯಿಂದಲ್ಲ. ಅದೊಂದು ಬಲವಂತದ ಮದುವೆ. ಆಗ ಈರಮ್ಮ ಹದಿನಾರರ ಹರೆಯದ ಬಾಲೆ. ಊರೂರು ತಿರುಗಿ ಹಾಡುತ್ತ, 'ಬುರ್ರ ಕಥೆ ಈರಮ್ಮ' ಎಂದು ಹೆಸರುವಾಸಿಯಾಗಿರುತ್ತಾಳೆ. ಅನಿರೀಕ್ಷಿತವಾಗಿ ಈರಮ್ಮನ ಜೀವನದಲ್ಲಿ ಆಕೆಯ ಸೋದರ ಮಾವ ಶಿವಲಿಂಗಪ್ಪನ ಮಗನಾದ ರಾಮಚಂದ್ರಪ್ಪನ[5] ಪ್ರವೇಶವಾಗುತ್ತದೆ. ಈರಮ್ಮನ ರೂಪ, ಯೌವ್ವನಕ್ಕೆ ಮಾರು ಹೋಗುತ್ತಾನೆ. ತನ್ನನ್ನು ಮದುವೆಯಾಗೆಂದು ಈರಮ್ಮನಲ್ಲಿ ಪ್ರಸ್ತಾಪ ಮಾಡುವನು. 'ನನಗೆ ನನ್ನ ಹಾಡುಗಳೇ ಉಸಿರು, ಬದುಕಾಗಿವೆ. ನನಗೆ ಮದುವೆಯು ಇಷ್ಟವಿಲ್ಲದ ವಿಷಯ' ಎನ್ನುವಳು. ಆದರೂ ಮೇಲಿಂದ ಮೇಲೆ ಮದುವೆಗಾಗಿ ಒತ್ತಾಯ ಮಾಡುವನು. ನಿನ್ನನ್ನು ಬಲವಂತವಾಗಿ ಮದುವೆಯಾಗುತ್ತೇನೆ ಎನ್ನುವನು. ಆಗ ಈರಮ್ಮ ಒಂದು ವೇಳೆ ನೀನು ನನ್ನನ್ನು ಬಲವಂತವಾಗಿ ಮದುವೆಯಾಗಿ ತಾಳಿ ಕಟ್ಟಿದರೆ, ತಾಳಿ

ಕಿತ್ತಿ ಅಂಬೈ ಗಿಡಕ್ಕೆ ಕಟ್ಟುತ್ತೇನೆಂದು ಖಡಾ ಖಂಡಿತವಾಗಿ ಅವನ ಪ್ರಸ್ತಾಪವನ್ನು ನಿರಾಕರಿಸುತ್ತಾಳೆ. ಇದರಿಂದಾಗಿ ರಾಮಚಂದ್ರಪ್ಪನಲ್ಲಿ ಈರಮ್ಮನ ಬಗ್ಗೆ ಸೇಡು, ಸಿಟ್ಟು ಮನೆ ಮಾಡಿಕೊಳ್ಳುತ್ತದೆ. ಇದು ತನಗಾದ ಅವಮಾನವೆಂದು ಭಾವಿಸಿದ ರಾಮಚಂದ್ರಪ್ಪ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿರುತ್ತಾನೆ. ಏನಾದರೂ ಸರಿ, ಎಂತಾದರೂ ಸರಿ ಇವಳನ್ನು ಮದುವೆಯಾಗಲೇಬೇಕೆಂದು ಛಲ ತೊಡುತ್ತಾನೆ. ಇದಾದ ಕೆಲ ದಿನಗಳಲ್ಲಿ ಬೇರೆ ಹೆಣ್ಣಿನೊಡನೆ ರಾಮಚಂದ್ರಪ್ಪನ ವಿವಾಹ ನಿಶ್ಚಯವಾಗುತ್ತದೆ. ಅವನ ತಾಯಿ ತಂದೆಯರು ನಾಣಾಪುರದಲ್ಲಿಯ ಕಮಲಮ್ಮನೊಂದಿಗೆ ಈತನ ಮದುವೆ ಮಾಡುತ್ತಾರೆ. ಹೇಗಾದರೂ ಮಾಡಿ ಈರಮ್ಮನನ್ನು ತನ್ನ ಎರಡನೆಯ ಹೆಂಡತಿಯಾಗಿಯಾದರೂ ಸರಿ, ಅವಳನ್ನು ಪಡೆಯಲೇಬೇಕೆಂಬ ಹಟದಿಂದ ಸಮಯ ಕಾಯುತ್ತಿರುತ್ತಾನೆ.

ರಾಮಚಂದ್ರಪ್ಪ ಐದಾರು ಮಕ್ಕಳ ತಂದೆಯಾಗುತ್ತಾನೆ. ಈರಮ್ಮ ಕಥೆ ಹೇಳುತ್ತ, ಊರೂರು ಅಲೆಯುತ್ತಿರುತ್ತಾಳೆ. ಹೀಗಿರಲು ಒಮ್ಮೆ ರಾಮಚಂದ್ರಪ್ಪ ವೇಷ ಹಾಕಲು 'ಹಂದೆಹಾಳ' ಗ್ರಾಮದಲ್ಲಿ ಟೆಂಟ್ ಹಾಕಿ ಅಲ್ಲಿ ಕುಟುಂಬ ಸಮೇತ ವಾಸ ಮಾಡುತ್ತಾನೆ. ಈರಮ್ಮನ ಕುಟುಂಬದ ಟೆಂಟ್ ಅಲ್ಲಿಯೇ ಹಾಕಿರುತ್ತದೆ. ಎಲ್ಲರೂ ತಮ್ಮ ತಮ್ಮ ಕಸಬುಗಳಾದ ವೇಷ ಹಾಕುವುದು,ಕಥೆ ಹೇಳುವುದನ್ನು ಮುಗಿಸಿಕೊಂಡು ಮರಳಿ ಊರಿಗೆ ಹೋಗುವಾಗ, 'ಗುಳ್ಳೆವ್ವ' ದಲ್ಲಿ ಜಾತ್ರೆಗೋಸ್ಕರ ಉಳಿದು ಕೊಳ್ಳುತ್ತಾರೆ. ಅದೇ ಸಮಯದಲ್ಲಿ ಈರಮ್ಮನ ತಮ್ಮನ ಹೆಂಡ್ತಿಯ ಹೆರಿಗೆಯಾಗುತ್ತದೆ. ಹಗಲಲ್ಲಿ ಎಲ್ಲಾ ಗಂಡಸ್ರು ವೇಷ ಮಾಡ್ಲಿಕ್ಕೆ ಹೋಗಿರುತ್ತಾರೆ. ಬಿಡಾರಿನಲ್ಲಿ ಈರಮ್ಮ ಬಾಣಂತಿಯ ಜೊತೆ ಒಬ್ಬಳೇ ಇರುತ್ತಾಳೆ. ಇತ್ತ ಈರಮ್ಮ ಹಾಕಿದ ಬಿಡಾರದಿಂದ ಸ್ವಲ್ಪ ದೂರದಲ್ಲೇ ರಾಮಚಂದ್ರಪ್ಪನು ಕುಟುಂಬ ಸಮೇತ ಬಿಡಾರ ಹಾಕಿರುತ್ತಾನೆ. ಇನ್ನೆಂದೂ ಈರಮ್ಮನ ತಂಟೆಗೆ ಬರೊದಿಲ್ಲವೆಂದು ರಾಮಚಂದ್ರಪ್ಪ ಈರಮ್ಮನ ಮೈದುನನಿಗೆ ಮಾತು ಕೊಟ್ಟಿರುತ್ತಾನೆ. ಹೀಗಿರಲು ಈರಮ್ಮ ಗುಳ್ಳೆವ್ವದಿಂದ ಅರ್ಧ ಕಿಲೋ ಮೀಟರ ದೂರದ ಹಳ್ಳದಿಂದ ನೀರು ತರಲು ಹೊರಡುತ್ತಾಳೆ. ಸದಾ ಈರಮ್ಮನಿಗಾಗಿ ಹೊಂಚು ಹಾಕುತ್ತಿದ್ದ ರಾಮಚಂದ್ರಪ್ಪ ಇದೇ ತಕ್ಕಸಮಯವೆಂದು ಈರಮ್ಮನನ್ನು ಹಿಂಬಾಲಿಸುತ್ತಾ ಹೋಗುತ್ತಾನೆ. ಆ ವೇಳೆ ಹಳ್ಳದ ಅಕ್ಕ - ಪಕ್ಕ ಯಾರು ಇಲ್ಲದಿರುವುದನ್ನು ತಿಳಿದು, ರಾಚಂದ್ರಪ್ಪ ಈರಮ್ಮ ನೀರು ತುಂಬುವಾಗ ಅವಳ ಕೈ ಹಿಡಿಯುತ್ತಾನೆ.ಆಗ ಈರಮ್ಮ ಅವನಿಂದ ದೂರ ಸರಿಯುತ್ತಾಳೆ. ಆದರೂ ಅವನು ಈರಮ್ಮನಿಗೆ, ನೀನು ನನ್ನನ್ನು ಮದುವೆಯಾಗಲು ಒಪ್ಪದಿದ್ದರೆ, ನಿನ್ನ ಶೀಲ ಭಂಗ ಮಾಡ್ತೀನಿ ಎಂದು ಬೆದರಿಕೆ ಹಾಕುತ್ತಾನೆ[6]. ಇಷ್ಟು ವರ್ಷ ಧೈರ್ಯದಿಂದ ಅವನ ಮಾತನ್ನು ತಿರಸ್ಕರಿಸುತ್ತ ಬಂದ ಈರಮ್ಮ ಒಮ್ಮೆಲೇ ಅಧೈರ್ಯದವಳಾಗುತ್ತಾಳೆ. ರಾಮಚಂದ್ರಪ್ಪ ಮದುವೆಯಾಗುವಂತೆ ಈರಮ್ಮನನ್ನು ಒತ್ತಾಯಿಸಿ, ತುಂಬಿದ ಕೊಡಗಂಗೆ, ಮನೆ ದೇವ್ರ ಮೇಲೆ ಪ್ರಮಾಣ ಮಾಡಿಸಿಕೊಳ್ಳುತ್ತಾನೆ. ವಿಧಿಯಿಲ್ಲದೆ ಈರಮ್ಮ ರಾಮಚಂದ್ರಪ್ಪ ಬೀಸಿದ ಜಾಲದಲ್ಲಿ ಬಂಧಿತಳಾಗುತ್ತಾಳೆ. ಈರಮ್ಮ ಮನೆಯವರ ಮುಂದೆ ಮದುವೆ ಪ್ರಸ್ತಾಪ ಮಾಡಿದಾಗ ಕುಟುಂಬದವರೆಲ್ಲರೂ ಅಸಮ್ಮತಿ ವ್ಯಕ್ತ ಪಡಿಸುತ್ತಾರೆ. ಆತನು ಮೊದಲೇ ಮದುವೆಯಾಗೆಂದಾಗ ನಿರಾಕರಿಸಿ, ಈಗ ಆತನಿಗೆ ಎರಡನೇ ಹೆಂಡ್ತಿಯಾಗುವುದು ಸರಿಯಲ್ಲವೆಂದು

ಬುದ್ಧಿ ಮಾತು ಹೇಳುತ್ತಾರೆ. ಅವರೆಷ್ಟೇ ಅವಳ ಮನಸ್ಸನ್ನು ಪರಿವರ್ತಿಸಲು ಪ್ರಯತ್ನಿಸಿದರೂ ಈರಮ್ಮನ ಮನಸ್ಸು ಮಾತ್ರ ರಾಮಚಂದ್ರಪ್ಪನ ಕಡೆಗೇ ಎಳೆಯುತ್ತದೆ. ಅವಳು ಅವಳಾಗಿ ಉಳಿಯದೇ ಅವನ ಕುರಿತೆ ಮಾತಾಡುತ್ತಾಳೆ[7]. ಇದಕ್ಕೆ ನನ್ನ ಮೇಲೆ ಮಾಟ ಮಂತ್ರ ಮಾಡಿಸಿ ವಶೀಕರಣ ಮಾಡಿ ಕೊಂಡಿದ್ದಾನೆಂದು ಈರಮ್ಮ ನಂಜಿರುತ್ತಾಳೆ[8].

ರಾಮಚಂದ್ರಪ್ಪನ ಹೆಂಡತಿ ಕಮಲಮ್ಮ ಗರ್ಭಿಣಿಯಾಗುತ್ತಾಳೆ. ಆ ಸಮಯದಲ್ಲಿ ಈರಮ್ಮ ಕಮಲಮ್ಮನಿಗೆ ಮನೆಗೆಲಸಲ್ಲಿ ನೆರವಾಗುತ್ತಾಳೆ. ಗಂಜಿ ಕಾಸೋದು, ಮಕ್ಕಳಿಗೆ ಅಡಿಗೆ ಮಾಡಿ ಹಾಕೋದು ಮುಂತಾದ ಕೆಲಸವನ್ನೆಲ್ಲಾ ನೋಡಿಕೊಳ್ಳುತ್ತಾಳೆ. ಒಂದು ಸಲ ಕಮಲಮ್ಮ ತಲೆ ನೋವೆಂದು ಕುಳಿತಾಗ , ಈರಮ್ಮ ಐದು ದಿನಸಿ ತಪ್ಲ ತಂದು ,ಚೆನ್ನಾಗಿ ಕುದಿಸಿ ಕಮಲಮ್ಮನನ್ನು ಗಡಗಿ ಮುಂದೆ ಕುಂದ್ರಿಸಿ ಅವಳ ತಲೆ ಮೇಲೆ ರಗ್ಗು ಹೊಚ್ಚಿ ಆವಿ ತೆಗೆದುಕೊಳ್ಳಲು ವ್ಯವಸ್ಥೆ ಮಾಡುತ್ತಾಳೆ. ಈ ರೀತಿಯ ಆತ್ಮೀಯ ಸಂಬಂಧ ಕಮಲಮ್ಮನೊಂದಿಗೆ ಹೊಂದಿರುತ್ತಾಳೆ. ಕೆಲದಿನಗಳಲ್ಲಿ ಕಮಲಮ್ಮನಿಗೆ ಗಂಡು ಮಗುವಾಗುತ್ತದೆ. ಈರಮ್ಮನ ಅಣ್ಣ ಅತ್ತಿಗೆ ಮಾತನಾಡಿಸಲಿಕ್ಕೆ ಕಮಲಮ್ಮನ ಬಿಡಾರಕ್ಕೆ ಬರುತ್ತಾರೆ. ಈರಮ್ಮ ದಿನನಿತ್ಯ ಗಂಜಿ ಕಾಸೋದು, ಎಮ್ಮೆ ಹಾಲು ಹಿಂಡುವುದು, ಮೊಸರು , ಮಜ್ಜಿಗೆ ಮಾಡುವುದು, ಬಾಣಂತಿಯ ಬಟ್ಟೆ ಒಗೆಯೊದನ್ನು ನೋಡುತ್ತಾರೆ. ಅಲ್ಲಿಂದ ಈರಮ್ಮನನ್ನು ಹಳೆದರೋಜಿಗೆ ವಾಪಸ್ಸು ಕರೆದುಕೊಂಡು ಬರುತ್ತಾರೆ. ಸ್ವಲ್ಪ ದಿನ ಕಳೆದ ನಂತರ ಈರಮ್ಮ ಅಜ್ಜಿಗೆ ನಾನು ರಾಮಚಂದ್ರಪ್ಪನೊಂದಿಗೆ ಮದುವೆಯಾಗ್ತೀನೆಂದು ಹೇಳುತ್ತಾಳೆ. ಆಗ ಅಜ್ಜಿಯು ಅರ್ಧ ವಯಸ್ಸಾದ ಮೇಲೆ ಎಂಥದು ಮದುವೆ? ಮದುವೆಯಾಗಬೇಡೆಂದು ಬುದ್ಧಿ ಹೇಳುವಳು. ಆಗ ಈರಮ್ಮ ಮನೆಯವರನ್ನೆಲ್ಲಾ ಕುರಿತು, ನೀವು ಮದುವೆಗೆ ಬಂದ್ರೆ ಬರ್ರಿ, ಬಿಟ್ರೆ ಬಿಡ್ರಿ. ನಾನೊಬ್ಬಳೇ ಹೋಗಿ ಅವನನ್ನೆ ಮದುವೆಯಾಗ್ತೀನಿ. ಊರಿನ ಜನರೆಲ್ಲಾ, ಹಿರಿಯರು ನನ್ನನ್ನು , ಎಷ್ಟು ದಿವಸ ಹೀಂಗೆ ಒಂಟಿಯಾಗಿರ್ತಿ, ನಿನಗೆ ಮದುವೆಯಾಗದೆ ಮೋಕ್ಷ ದೀಕ್ಷೆ ಸಿಗೋದಿಲ್ಲ. ನೀನು ಸತ್ರೇ ನಿನ್ನನ್ನು ಬೊರಲು ಇಡ್ತಾರೆಂದು ಹೇಳುತ್ತಿದ್ದಾರೆ[9]. ನಾನು ಅವನನ್ನೇ ಮದುವೆಯಾಗ್ತಿನಿ ಎಂದು ತನ್ನ ನಿರ್ಧಾರ ತಿಳಿಸುವಳು. ನೆಲ್ಲು ಸುಗ್ಗಿ ಬಂದಾಗ , ಎಲ್ಲರೂ ಕಂಪ್ಲಿ ಪಕ್ಕದಲ್ಲಿರುವ 'ನೆಲ್ಲೂಡ್' ನಲ್ಲಿ ಟೆಂಟ್ ಹಾಕಿ ಇರುತ್ತಾರೆ. ಆಗ ಈರಮ್ಮ ರಾಮಚಂದ್ರಪ್ಪನಿಗೆ ಕಂಪ್ಲಿಗೆ ಬರಲು ಹೇಳಿ ಕಳುಹಿಸುತ್ತಾಳೆ. ಮನೆಯವರ ವಿರೋಧದ ನಡುವೆ ಈರಮ್ಮ ಅಣ್ಣ ನಾಗಭೂಷಣಪ್ಪ, ಅತ್ತಿಗೆ ಪಾರ್ವತಮ್ಮ, ಸವತಿ ಕಮಲಮ್ಮನ ಮಕ್ಕಳ ಸಮ್ಮುಖದಲ್ಲಿ ರಾಮಚಂದ್ರಪ್ಪನೊಂದಿಗೆ ಮದುವೆಯಾಗುತ್ತಾಳೆ[10]. ಹೀಗೆ ಈರಮ್ಮ ರಾಮಚಂದ್ರಪ್ಪನಿಗೆ ಎರಡನೆಯ ಹೆಂಡ್ತಿಯಾಗಿ ಗಂಡನ ಮನೀಗೆ ಸೇರುತ್ತಾಳೆ.

ಈರಮ್ಮ ಮದುವೆಯಾದ ಮೂರು ತಿಂಗಳವರೆಗೆ ಸವತಿ ಕಮಲಮ್ಮ, ಈರಮ್ಮನೊಂದಿಗೆ ಚೆನ್ನಾಗಿರುತ್ತಾಳೆ. ಇಬ್ರು ಕೂಡಿ ದಿನಾಲು ಮನೆ ಮನೆಗೆ ಹೋಗಿ 'ಗಂಗಮ್ಮ - ಗೌರಮ್ಮ' ಹಾಡು ಹೇಳಿ ಬಿಕ್ಷೆ ಎತ್ತಿ , ಜನರಿಂದ ದವಸ , ಧಾನ್ಯ ಪಡೆದುಕೊಂಡು ಬರುತ್ತಾರೆ. ಹೀಗೆ ಇಬ್ರೂ ಹಾಡು ಹೇಳಿ ಸ್ವಲ್ಪ ಬಂಗಾರ, ಬೆಳ್ಳಿ ಸಂಪಾದಿಸುತ್ತಾರೆ. ಇಬ್ರೂ ಅಕ್ಕ - ತಂಗಿಯರಂತೆ ಸಂಬಂಧವಿಟ್ಟು ಕೊಂಡು ಜೀವನ ಸಾಗಿಸುತ್ತಾರೆ. ಪ್ರಾರಂಭದಲ್ಲಿ ಕಮಲಮ್ಮ ಈರಮ್ಮನ ಹಾಡುಗಾರಿಕೆಯಲ್ಲಿ ಹಿಮ್ಮೇಳದಲ್ಲಿ

ದಮ್ಮಡಿ ಬಾರಿಸುತ್ತ ಹಾಡು ಹಾಡುತ್ತಿರುತ್ತಾಳೆ. ಆದರೆ ಬರು ಬರುತ್ತಾ ಕಮಲಮ್ಮನಿಗೆ ಈರಮ್ಮನ ಮೇಲೆ ದ್ವೇಷ , ಅಸೂಯೆ ಉಂಟಾಗುತ್ತದೆ. ಕಾರಣ ಈರಮ್ಮನಿಗೆ ಸಿಕ್ಕ ಜನ ಪ್ರಿಯತೆ ಇವಳಿಗೆ ಸಿಗುತ್ತಿಲ್ಲವೆಂದು, ಈರಮ್ಮ ಚೆನ್ನಾಗಿ ಹಾಡುತ್ತಾಳೆ. ಈಕೆ ಹಾಡುವಾಗ ನಾನು ಅವಳ ಹಿಂದೆ ದಮ್ಮಡಿ ಬಡಿಯಬೇಕಲ್ಲ. ಯಾರು ನನ್ನನ್ನು ಗುರುತಿಸುತ್ತಿಲ್ಲವಲ್ಲ ಎಂದು ಜಿಗುಪ್ಸೆಯಿಂದ ಈರಮ್ಮನ ಜೊತೆಗೆ ಹಾಡಲು ಹೋಗುವುದನ್ನು ನಿಲ್ಲಿಸುತ್ತಾಳೆ. ಈರಮ್ಮ ಆ ಪ್ರದೇಶದ ಸುತ್ತ ಮುತ್ತಲಿನ ಜನಮನದಲ್ಲಿ ತನ್ನ ಕಂಚಿನ ಸಿರಿಕಂಠದಿಂದ ಮನೆ ಮಾಡಿ ಕೊಂಡಿರುತ್ತಾಳೆ. ಇಂತಹ ಜನಪ್ರಿಯತೆಯು ಕಮಲಮ್ಮನಿಗೆ ಸಹಿಸಲಾಗಲಿಲ್ಲ. ಸುತ್ತಲಿನವರೆಲ್ಲಾ ಈರಮ್ಮನನ್ನು ಹುಡುಕಿಕೊಂಡು ಅವಳಿದ್ದಲ್ಲಿಗೆ ಬರುತ್ತಿದ್ದರು. ಈರಮ್ಮನಿಗೆ ಕಥೆಯ ವೀಳ್ಯವನ್ನು ಕೊಟ್ಟು ಹೋಗುತ್ತಿದ್ದರು. ಅಂದರೆ ವೀಳ್ಯೆ ತೆಗೆದು ಕೊಂಡರೆ, ಹೇಳಿದ ದಿನದಂದು ಸರಿಯಾದ ಸಮಯಕ್ಕೆ ಬಂದು ಕಥೆ ಹಾಡುವದೆಂದರ್ಥ, ಕಮಲಮ್ಮ ಇದನ್ನೆಲ್ಲಾ ಕಂಡು, ಈರಮ್ಮನಿಗೆ ಇಷ್ಟೊಂದು ಗೌರವ, ಹಣ , ಬಟ್ಟೆ, ಕಾಳು - ಕಡಿ, ದನ ಕರು ಸಿಗುತ್ತಿದೆ. ನನ್ನ ಗತಿ ಏನಾಗುವುದೋ? ಮಕ್ಕಳ ಗತಿಯೇನಾಗುವುದೋ? ಎಂದು ಮನದಲ್ಲಿ ಅಸೂಯೆ ಪಟ್ಟುಕೊಳ್ಳುವಳು. ಇವಳ ಜನಪ್ರಿಯತೆಯನ್ನು ಸಹಿಸದ ಸವತಿಯು, ಈರಮ್ಮನಿಗೆ ಪರಿ ಪರಿಯಾಗಿ ಕಿರಿ ಕಿರಿ ಕೊಡುತ್ತಾಳೆ. ಯಾವಾಗಲೂ ಚುಚ್ಚು ಮಾತುಗಳಿಂದ ಈರಮ್ಮನ ಮನ ನೋಯಿಸುತ್ತಾಳೆ. ಚುಚ್ಚು ಮಾತು, ಇಲ್ಲ ಸಲ್ಲದ ಆರೋಪ ಹೊರಿಸುವುದು, ಅವಳು ಮಾಡುವ ಕೆಲಸದಲ್ಲಿ ತಪ್ಪನ್ನು ಹುಡುಕಿ ಬೈಯುವುದು ಕಮಲಮ್ಮನ ದಿನ ನಿತ್ಯದ ದಿನಚರಿಯಾಗುತ್ತದೆ. ಸವತಿ ಏನೇ ಅಂದರೂ, ಬೈದರೂ ಈರಮ್ಮ ಒಂದು ಮಾತೂ ಎದುರಾಡದೆ ಅಕ್ಕ ಕಮಲಮ್ಮ ಹೇಳಿದಂತೆ ಕೇಳುತ್ತಾಳೆ. ಈರಮ್ಮ ಮನೆಯಲ್ಲಿ ನಡೆಯುವ ಸಣ್ಣ ಪುಟ್ಟ ಜಗಳವನ್ನು ಗಂಡನಿಗೆ ತಿಳಿಸದೆ, ಸಹಿಸಿಕೊಂಡು ಇರುತ್ತಾಳೆ. ಬರು ಬರುತ್ತಾ ಸವತಿಯ ಮತ್ಸರ ಹೆಚ್ಚಾಗುತ್ತದೆ. ಕಮಲಮ್ಮ ಈರಮ್ಮನಿಗೆ ಚುಚ್ಚು ಮಾತಿನೊಂದಿಗೆ, ದೈಹಿಕ ಹಿಂಸೆ ಕೊಡುವುದಕ್ಕೆ ಪ್ರಾರಂಭಿಸುತ್ತಾಳೆ. ಗಂಡ ರಾಮಚಂದ್ರಪ್ಪನ ತಲೆಯಲ್ಲಿ ಈರಮ್ಮನ ಕುರಿತು ಇಲ್ಲ ಸಲ್ಲದ ವಿಷಯವನ್ನು ತುಂಬುತ್ತಾಳೆ. ಇಷ್ಟೊತ್ತಿಗೆ ರಾಮಚಂದ್ರಪ್ಪ ಸಂಸಾರ ಭಾರ ಹೊರಲಾರದೆ ಕುಡಿತಕ್ಕೆ ಶರಣಾಗಿರುತ್ತಾನೆ. ಮೊದಲ ಹೆಂಡ್ತಿಯ ಮಾತನ್ನು ಕೇಳಿ, ರಾಮಚಂದ್ರಪ್ಪ ಈರಮ್ಮನಿಗೆ ಬೈಯುವುದು, ಹೊಡೆಯುವುದಕ್ಕೆ ಶುರು ಮಾಡುತ್ತಾನೆ. ಗಂಡನೇನೊ ಒಳ್ಳೆಯವನೇ ಇರ್ತಾನೆ. ವೈಯಕ್ತಿಕವಾಗಿ ಈತನಿಂದ ಹೆಚ್ಚು ನೋವಾಗಿರಲಿಲ್ಲ. ಒಂದು ವೇಳೆ ಗಂಡ ಹೊಡೆದಿದ್ದರೆ ಈರಮ್ಮ ಸಹಿಸಿಯಾಳು, ಆದರೆ ಅವಳಷ್ಟೇ ಸಂಸಾರದಲ್ಲಿ ಸಮಭಾಗಿತ್ವ ಪಡೆದಿರುವ ಈರಮ್ಮನನ್ನು ಸವತಿ ಆತನ ಎದುರಲ್ಲೇ ಹೊಡೆಯುವುದನ್ನು , ಕೆಟ್ಟದಾಗಿ ಮಾತನಾಡುವುದನ್ನು ನೋಡಿಯೂ ಈ ಗಂಡನೇಕೆ ಸುಮ್ಮನಿರುತ್ತಿದ್ದ ". ಎನ್ನುವ ಪ್ರಶ್ನೆ ಈರಮ್ಮನಿಗೆ ಕಾಡುತ್ತಿತ್ತು. ಕುಡುಕನಾದ ಇವನಿಗೆ ಸರಿಯಾವುದು ತಪ್ಪಾವುದೆಂದು ತಿಳಿದುಕೊಳ್ಳುವ ಸಹನೆಯೂ ಇರುವುದಿಲ್ಲ. ಸಂಸಾರ ಭಾರ ಹೆಚ್ಚಾಗಿ ತಾಳ ತಪ್ಪಿದ ಬಾಳು ಇವನದಾಗಿದೆ ಎಂದು ಮೊದ ಮೊದಲು ಎಲ್ಲವನ್ನು ಸಹಿಸಿಕೊಳ್ಳುತ್ತಾಳೆ. ಕಮಲಮ್ಮ ಕೆಲವೊಮ್ಮೆ ಹೊಡೆಯುವುದು, ಒದೆಯುವುದರೊಂದಿಗೆ ಮೈಮೇಲೆ ಬಾಸುಂಡೆ ಬರುವವರೆಗೂ ಹೊಡೆಯುವುದು ಮಾಡುತ್ತಾಳೆ. ಈರಮ್ಮನ ಹಾಡಿನಿಂದ ಬಂದ ದುಡ್ಡಿನಲ್ಲಿ ಹೇಗೊ ಸಂಸಾರ ಮುಂದೆ

ಸಾಗುತ್ತಿರುತ್ತದೆ. ಕಮಲಮ್ಮ ತಾಳಕ್ಕೆ ತಕ್ಕಂತೆ ರಾಮಚಂದ್ರಪ್ಪ ಕುಣಿಯುತ್ತಾನೆ. ಈರಮ್ಮ ಕಮಲಮ್ಮನ ಜೊತೆಯಲ್ಲಿ ಎಷ್ಟೇ ಅನುಸರಿಸಿಕೊಂಡು ನಡೆದರೂ ಅವಳಿಗೆ ಒಂದು ದಿನವೂ ನೆಮ್ಮದಿಯಿರದಂತಾಯಿತು. ಪದೇ ಪದೇ ಈರಮ್ಮನ ಮೇಲೆ ಸವತಿ ಮತ್ತು ಗಂಡನ ಹಿಂಸೆ ಜಾಸ್ತಿಯಾಗುತ್ತದೆ. ಕೆಲವೊಮ್ಮೆ ರಾಮಚಂದ್ರಪ್ಪ ಈರಮ್ಮನನ್ನು ವಿವಸ್ತ್ರಳನ್ನಾಗಿ ಮಾಡಿ ದೇಹ ದಂಡನೆ ಮಾಡುತ್ತಿರುತ್ತಾನೆ[12]. ಇಂಥ ಕ್ರೌರ್ಯವನ್ನು ಕಣ್ಣಾರೆ ಕಂಡ ಊರಿನ ಮುಖಂಡರು ಈ ರಮ್ಮನ ಗಂಡನಿಗೆ ಮತ್ತು ಸವತಿಗೆ ಎಚ್ಚರಿಕೆ ಕೊಡುತ್ತಾರೆ. ಹೀಗೆ ಈರಮ್ಮ ದೈಹಿಕವಾಗಿ, ಮತ್ತು ಮಾನಸಿಕವಾಗಿ ತೊಂದರೆ ಅನುಭವಿಸುತ್ತಾಳೆ. ರಾಮಚಂದ್ರಪ್ಪ ಹೆಂಡತಿಗೆ ತಕ್ಕ ಗಂಡನಾಗದೆ, ಈಕೆಯ ಹಾಡಿನಿಂದ ಬಂದ ಹಣವನ್ನು ಕಿತ್ತು ತಿನ್ನುವ ರಾಕ್ಷಸನಾಗುತ್ತಾನೆ.

ಇಂಥ ಕಷ್ಟಗಳ ಮಧ್ಯೆ ಈರಮ್ಮ ಗರ್ಭಿಣಿಯಾಗುವಳು. ಮೂರು ತಿಂಗಳ ಗರ್ಭಿಣಿಯೆಂದು ತಿಳಿದು ಸವತಿಯು ಗಂಡನಿಗೆ ಈರಮ್ಮನ ಬಗ್ಗೆ ಇಲ್ಲ ಸಲ್ಲದ ಆರೋಪಗಳನ್ನು ಮಾಡಿ, ಈಕೆಯ ಮೇಲೆ ಅನೈತಿಕ ಸಂಬಂಧ ಹೊರಿಸುತ್ತಾಳೆ[13]. ಕಮಲಮ್ಮನಂತೆ ರಾಮಚಂದ್ರಪ್ಪ ಈರಮ್ಮನಿಗೆ ಬಾಯಿಗೆ ಬಂದಂತೆ ಹೀಯಾಳಿಸುತ್ತಾನೆ. ಇದರಿಂದ ಈರಮ್ಮನ ಬದುಕು ಇನ್ನಷ್ಟು ಜರ್ಜರಿತವಾಗುತ್ತದೆ. ಇಲ್ಲಿಯವರೆಗೆ ಎಲ್ಲಾ ಕಿರುಕುಳಗಳನ್ನು ಸಹಿಸಿದ ಈರಮ್ಮ ಈ ಅಪಮಾನವನ್ನು ಸಹಿಸದೆ, ಗಂಡನನ್ನು ತೊರೆದು ತವರು ಮನೆಗೆ ಬರುತ್ತಾಳೆ. ಇನ್ನೆಂದೂ ಮತ್ತೆ ಮರಳಿ ಗಂಡನ ಮನೆಗೆ ಹೋಗಬಾರದೆಂದು ತೀರ್ಮಾನಿಸುತ್ತಾಳೆ. ಸ್ವಲ್ಪ ದಿನಗಳು ಉರುಳಿದ ಮೇಲೆ ಗಂಡ ರಾಮಚಂದ್ರಪ್ಪ ಈರಮ್ಮನನ್ನು ಕರೆದೊಯ್ಯಲು ಬರುವನು. ಗಂಡನಿಗೆ ಈರಮ್ಮ ದಯವಿಟ್ಟು ನನ್ನನ್ನು ಒತ್ತಾಯಿಸಬೇಡಿ, ನಾನೆಂದಿಗೂ ಆ ಮನೆಗೆ ಬರುವುದಿಲ್ಲವೆಂದು ಕಡ್ಡಿ ಮುರಿದಂತೆ ಹೇಳುವಳು. ಗಂಡ ಮರಳಿ ಊರಿಗೆ ಹೋಗಿ, ಊರಿನಲ್ಲಿರುವ ಹಿರಿಯರಲ್ಲಿ ತನ್ನ ಹೆಂಡ್ತಿಗೆ ಬುದ್ಧಿ ಹೇಳಿ ವಾಪಸ್ಸು ಕರೆತನ್ನಿರಿ. ಇನ್ನೆಂದೂ ನಾನು ಅವಳನ್ನು ಬೈಯೋದು, ಹೊಡೆಯೊದು, ಅವಮಾನಿಸೋದು ಮಾವುದಿಲ್ಲವೆಂದು, ಅವಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆಂದು, ಭರವಸೆ ಕೊಟ್ಟು ಬೇಡಿಕೊಳ್ಳುತ್ತಾನೆ. ಇವನ ಮಾತನ್ನು ನಂಬಿ ಊರಿನ ಹಿರಿಯರು. ಈರಮ್ಮನ ಊರಿಗೆ ಬಂದು, ಬುದ್ಧಿವಾದ ಹೇಳುವರು. ಹಿರಿಯರ ಮಾತಿಗೆ ಗೌರವ ಕೊಟ್ಟು, ಒಲ್ಲದ ಮನಸ್ಸಿನಿಂದ ಈರಮ್ಮ ಗಂಡನ ಮನೆಗೆ ಹೋಗುತ್ತಾಳೆ. ಆಗ ಗಂಡನು ಕೆಲದಿನ ಹೆಂಡ್ತಿಯನ್ನು ಚೆನ್ನಾಗಿ ನೋಡಿಕೊಳ್ಳುವನು. ಇನ್ನೇನು ಎಲ್ಲಾ ಸರಿಯಾಗುತ್ತದೆ ಎನ್ನುವಷ್ಟರಲ್ಲಿ, ಕಮಲಮ್ಮ ಗಂಡ ಈರಮ್ಮನಿಗೆ ಜೀವ ಮಾಡುತ್ತಿರುವುದನ್ನು ಕಂಡು ಸಹಿಸಿಕೊಳ್ಳುವುದಿಲ್ಲ. ಹೇಗಾದರೂ ಮಾಡಿ ಇವಳನ್ನು ಈ ಮನೆಯಿಂದ ಓಡಿಸಬೇಕೆಂದು ಪುನಃ ಕಮಲಮ್ಮ ತನ್ನ ಹಳೆ ಚಾಳಿಯನ್ನೇ ಮುಂದುವರೆಸುತ್ತಾಳೆ. ಈರಮ್ಮ ಬಸುರಿ ಹೆಣ್ಮಗಳೆಂದೂ ಆಕೆಯ ಮೇಲೆ ಸ್ವಲ್ಪವೂ ಕರುಣೆ ತೋರದೆ ಮತ್ತೆ ಚಿತ್ರ ಹಿಂಸೆ ನೀಡುತ್ತಾಳೆ. ಗಂಡ ಕೂಡ ಕಮಲಮ್ಮನ ಮಾತು ಕೇಳಿ ಈರಮ್ಮನಿಗೆ ಮತ್ತೆ ಕಿರುಕುಳ ಕೊಡಲಿಕ್ಕೆ ಪ್ರಾರಂಭಿಸುತ್ತಾನೆ. ಈಗ ಈರಮ್ಮನ ಮನಸ್ಸು ಯಾವುದನ್ನೂ ಸಹಿಸಿಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ. ನನ್ನ ಗಂಡನಿಗೆ ನಾನು ಬೇಡಾದ ಮೇಲೆ ಇಲ್ಲಿರುವುದರಲ್ಲಿ ಅರ್ಥವಿಲ್ಲ. ಈರಮ್ಮನ ಸಹನೆಯ ಕಟ್ಟೆ ಒಡೆಯುತ್ತದೆ. ಇಲ್ಲಿದ್ದರೆ ನನಗೆ ಕಷ್ಟ ತಪ್ಪಿದಲ್ಲ. ಹೊಟ್ಟೆಯಲ್ಲಿರುವ ಮಗುವಿನ ಗತಿಯೇನು? ಎಂದೆಲ್ಲಾ

ಚಿಂತಿಸಿ, ಈರಮ್ಮ ಧೃಡ ಮನಸ್ಸಿನಿಂದ ಇನ್ನೆಂದೆಂದಿಗೂ ಗಂಡನ ಮನೆ ಹೊಸ್ತಿಲು ತುಳಿಯುವುದಿಲ್ಲವೆಂದು ನಿಶ್ಚಯಿಸಿದ ಐದು ತಿಂಗಳು ಗರ್ಭಿಣಿ ಈರಮ್ಮ ಗಂಡನ ಮನೆ ತೊರೆದು ತವರು ಮನೆಗೆ ಶಾಶ್ವತವಾಗಿ ಬರುವಳು. ಈರಮ್ಮ ಗಂಡನ ಮನೆಯಲ್ಲಿ ಸಂಸಾರ ಮಾಡಿದ್ದು ಕೇವಲ ಎರಡೇ ವರ್ಷ. ಈ ಎರಡೇ ವರ್ಷದಲ್ಲಿ ಈಕೆ ಗಂಡನಿಂದ ಬೇರೆಯಾಗುತ್ತಾಳೆ.

ತವರಿನಲ್ಲಿ ತಂದೆ - ತಾಯಿಯವರ ಪ್ರೀತಿಯ ಸಾಂತ್ವಾನ ಸಿಗುತ್ತದೆ. ಮಗಳು ಗಂಡನ ಮನೆ ತೊರೆದು ಬಂದ್ರೂ ಸಹ, ಮತ್ತೆ ಮರಳಿ ಗಂಡನ ಮನೆಗೆ ಹೋಗೆನ್ನುವುದಿಲ್ಲ. ಮನೆ ಮಂದಿಗೆಲ್ಲಾ ಮಗಳ ಅವಸ್ಥೆ ಕಣ್ಣಾರೆ ಕಂಡೂ ಕಂಡೂ ಬೇಸರವಾಗಿರುತ್ತದೆ. ಅಣ್ಣ - ತಮ್ಮಂದಿರು, ಅಕ್ಕ - ತಂಗಿಯರು, ಅತ್ತಿಗೆಯಂದಿರು ಎಲ್ಲರೂ ಈರಮ್ಮನ ಪರವಾಗಿನೇ ಇರುತ್ತಾರೆ. ಇದರಿಂದಾಗಿ ಈರಮ್ಮನಿಗೆ ಧೈರ್ಯ ಮೂಡುತ್ತದೆ. ನೊಂದ ಮಗಳ ಮನಸ್ಸಿಗೆ ಯಾರೂ ಒಂದು ಮಾತು ಸಹ ಆಡದೆ, ಅವಳನ್ನು ಪ್ರೀತಿಯಿಂದ ಬರ ಮಾಡಿಕೊಳ್ಳುವರು. ತಂದೆ - ತಾಯಿಯವರು ಮಗಳು ಬುರ್ರ ಕಥೆ ಹೇಳಿಕೊಂಡು ಬದುಕು ಸಾಗಿಸುವಂತೆ ಎಂದು ಧೈರ್ಯ, ಆತ್ಮ ವಿಶ್ವಾಸ ತುಂಬುವರು. ಇವಳ ಮುಂದಿನ ಬದುಕಿಗೆ ಬುರ್ರ ಕಥೆಗಳೇ ದಾರಿ ದೀಪಗಳಾಗುತ್ತವೆ. ಗರ್ಭಿಣಿ ಈರಮ್ಮ ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ಮಗಳಿಗೆ 'ಜೀಚಮ್ಮ' [14] ಎಂದು ನಾಮಕರಣ ಮಾಡುತ್ತಾರೆ. ಹಗಲಿನಲ್ಲಿ ಹೊಲ ಗದ್ದೆಗಳಲ್ಲಿ ಕೆಲಸ ಮಾಡುವುದು, ರಾತ್ರಿ ಬುರ್ರ ಕಥೆ ಹೇಳುವುದು ಹೀಗೆ ಈರಮ್ಮ ಮಗುವಿನ ಪಾಲನೆ - ಪೋಷನೆ ಮಾಡುತ್ತ, ಹಾಡನ್ನು ಹಾಡುತ್ತಾ ತನ್ನೆಲ್ಲಾ ಕಷ್ಟವನ್ನು ಮರೆಯುತ್ತಾಳೆ. ತಾನು ಬದುಕಬೇಕಾಗಿರುವುದು ತನ್ನ ಮಗುವಿಗಾಗಿ ಮತ್ತು ಹಾಡಿಗಾಗಿ ಎನ್ನುವ ಆಕೆಯ ಭಾವನೆ, ಬರಡಾದ ಅವಳ ಬದುಕಿಗೆ ಹೊಸ ಚೈತನ್ಯ ನೀಡುತ್ತದೆ. ಮುಂದೆ ಹಾಡುಗಾರಿಕೆಗೆ ತನ್ನ ಜೀವನವನ್ನೇ ಸಮರ್ಪಿಸಿಕೊಳ್ಳುತ್ತಾಳೆ.

3. ಈರಮ್ಮನ ಜೀವನ ಸಂಘರ್ಷ :

ಈರಮ್ಮನ ಜೀವನ ಹೂವಿನ ಹಾಸಿಗೆ ಅಲ್ಲ. ಅದೊಂದು ಮುಳ್ಳಿನ ಹಾಸಿಗೆ. ಜೀವನದಲ್ಲಿ ಸದಾ ನೋವನ್ನೇ ಉಂಡವಳು. ಗಂಡನ ನಿಷ್ಕಾಳಜಿತನ, ಮೋಸ , ವಂಚನೆ, ಸವತಿಯ ಮತ್ಸರ, ಅಸೂಯೆ, ದೈಹಿಕ ಮತ್ತು ಮಾನಸಿಕ ಕಿರುಕುಳ ಮುಂತಾದವುಗಳಿಂದ ಅರಳಬೇಕಾದ ಈಕೆಯ ಬದುಕು ಎಳೆ ವಯಸ್ಸಿನಲ್ಲಿಯೇ ಕಮರಿ ಹೋಗುತ್ತದೆ. ಕುಡುಕ ಹಾಗೂ ವಿಷಯ ಲಂಪಟನಾದ ಗಂಡ ರಾಮಚಂದ್ರಪ್ಪ ಮುಗ್ಧ ಮನಸ್ಸಿನ ಈರಮ್ಮನಿಗೆ ಒತ್ತಾಯ ಪೂರ್ವಕವಾಗಿ ಮತ್ತು ಮೋಸದಿಂದ ಮದುವೆಯಾಗುತ್ತಾನೆ [15]. ರಾಮಚಂದ್ರಪ್ಪನ ಮೋಸ, ವಂಚನೆಗೆ ಬಲಿಯಾದ ಈರಮ್ಮ ಎರಡನೆ ಹೆಂಡತಿಯಾಗಿ ಅವನ ಕೈ ಹಿಡಿಯುತ್ತಾಳೆ. ಗಂಡನ ಮನೆಯಲ್ಲಿ ಸವತಿಯ ಮತ್ತು ಗಂಡನ ಕಿರುಕುಳದಿಂದ , ದೈಹಿಕ ಹಿಂಸೆಯನ್ನು ಅನುಭವಿಸುತ್ತಾಳೆ. ಈಕೆಯ ತಾಳ್ಮೆಯ ಕಟ್ಟೆ ಒಡೆದು , ತವರು ಮನೆ ಸೇರುತ್ತಾಳೆ. ಮೂರು ತಿಂಗಳ ಗರ್ಭಿಣಿಯಾದ ಈರಮ್ಮ ಹಗಲೆಲ್ಲ ಕೂಲಿ ನಾಲಿ ಮಾಡುವುದು. ಕಸ ಮುಸರಿ ಮಾಡುವುದು, ನೆಲ್ಲು ಕೀಳುವುದು, ತೆನೆಸಿಪ್ಪಿಕಿತ್ತೋದು, ಹತ್ತಿ ಬಿಡಿಸುವುದು, ಸಸಿ ಹಚ್ಚುವುದು, ಶೇಂಗಾ ಕಿತ್ತೋದು, ಭತ್ತ ರಾಶಿ ಮಾಡೋದು, ಕಡ್ಲೆ ಕಿತ್ತೋದು, ತೂರೋದು,

ಮೇವು ಒಯ್ಯೋದು ಹೀಗೆ ಈ ಮುಂತಾದ ಕೆಲಸವನ್ನು ಮಾಡುತ್ತಾಳೆ. ರಾತ್ರಿ ಹಾಡಲು ಆಹ್ವಾನ ಬಂದರೆ, ಹಾಡು ಹೇಳಿ ಬರುತ್ತಿದ್ದಳು. ಬಿಡುವಿಲ್ಲದಂತೆ ಸದಾ ಚಟುವಟಿಕೆಯಿಂದ ತನ್ನ ದಿನಗಳನ್ನು ಕಳೆಯುತ್ತಿದ್ದಳು. ಈ ರೀತಿಯಾಗಿ ತನ್ನ ಬದುಕನ್ನೇ ಮಗಳ ಪಾಲನೆ ಮತ್ತು ಹಾಡಿಗಾಗಿ ಮುಡುಪಾಗಿಡುತ್ತಾಳೆ.

ಈರಮ್ಮನಿಗೆ ಇನ್ನೊಬ್ಬರ ದುಡಿತದ ದುಡ್ಡು ಬೇಕಿಲ್ಲ. ತಾನೇ ಸ್ವತಃ ಕಷ್ಟ ಪಟ್ಟು ದುಡಿದು ಸಂಪಾದಿಸಬೇಕು. ಸ್ವಾವಲಂಭಿಯಾಗಿರಬೇಕೆಂದು ಈರಮ್ಮನ ಧ್ಯೇಯವಾಗಿತ್ತು. ಮನೆಯ ಸದಸ್ಯರೊಂದಿಗೆಲ್ಲಾ ಹೊಂದಿಕೊಂಡು ಅವರಿಗೆ ನೆರವಾಗುತ್ತಾಳೆ. ಬರು ಬರುತ್ತಾ ಈರಮ್ಮನ ವ್ಯಕ್ತಿತ್ವ ಹಾಡುಗಾರಿಕೆ ಕ್ಷೇತ್ರದಲ್ಲಿ ಬೆಳೆಯುತ್ತಾ ಸಾಗುತ್ತದೆ. ಈರಮ್ಮನ ಹಾಡುಗಾರಿಕೆಯಲ್ಲಿ, ತಂಗಿ ಶಿವಮ್ಮ ಮತ್ತು ಅತ್ತಿಗೆ ಪಾರ್ವತಮ್ಮ ಹಿಮ್ಮೇಳ ಸಹಗಾಯಕಿಯರಾಗಿ ಸಾಥಿ ನೀಡುತ್ತಾರೆ. ಸುತ್ತ ಮುತ್ತಲಿನ ಊರಿಗೆಲ್ಲಾ ಈರಮ್ಮ 'ಬುರ್ರ ಕಥಾ ಈರಮ್ಮ' ಎಂದೇ ಪ್ರಸಿದ್ಧಳಾಗುತ್ತಾಳೆ. ಕೆಲವು ಸಲ ಸವತಿ ಮಕ್ಕಳು ಈರಮ್ಮನ ಬಳಿಗೆ ಬಂದು ನಾವು ನಿನ್ನ ಜೊತೆಯಲ್ಲಿ ಇರುತ್ತೇವೆ ಇರಿಸಿಕೊಳ್ಳೆಂದು ಬೆನ್ನು ಬೀಳುತ್ತಾರೆ. ಇದು ಚಿಕ್ಕಮ್ಮ ಎಂಬ ಪ್ರೀತಿಯಿಂದಲ್ಲ ಅವಳ ಹಾಡಿನಿಂದ ಸಂಪಾದಿಸುವ ದುಡ್ಡಿನ ಮೇಲೆ ಇವರ ಕಣ್ಣು ಬಿದ್ದಿರುತ್ತದೆ. ಮದುವೆಗೆ ಮುಂಚೆನೇ ಹುಡುಗರು ತಂದೆಯಂತೆ ಕುಡಿತಕ್ಕೆ ಬಲಿಯಾಗಿರುತ್ತಾರೆ. ಒಮ್ಮೆ ಈರಮ್ಮನ ಗಂಡನ ಆಸ್ತಿ ಪಾಲು ಮಾಡುವ ಸಂದರ್ಭದಲ್ಲಿ ಊರಿನ ಶಾನಭೋಗರು ಈರಮ್ಮನನ್ನು ಕರೆಸಿಕೊಳ್ಳುತ್ತಾರೆ. ಗಂಡನ ಆಸ್ತಿಯಲ್ಲಿ ಅವನು ಮಾಡಿದ ಸಾವಿರಾರು ರೂಪಾಯಿ ಸಾಲ ಮತ್ತು ಒಂದು ಎಕರೆ ಜಮೀನಿನೊಂದಿಗೆ ಸವತಿಯ ಒಬ್ಬ ಮಗನನ್ನು ಹೊತ್ತುಕೊಳ್ಳಬೇಕೆಂದು ಹೇಳುತ್ತಾರೆ. ಮೊದಲೇ ಕುಡಿಯುವುದು ಕಲಿತ ಮಕ್ಕಳು ಏನು ಕೆಲಸಿನವರಲ್ಲ ನಾನು ಇವರನ್ನು ನನ್ನ ಜೊತೆ ಇರಿಸಿಕೊಂಡ್ರೆ ನನ್ನ ದುಡಿಮೆಯ ದುಡ್ಡೆಲ್ಲಾ ಇವರ ಬಾಯಿಗೆ ತಂದು ಸುರಿಯಬೇಕಾಗುತ್ತದೆ. ಇವರ ಸಹವಾಸವೇ ತನಗೆ ಬೇಡವೆಂದು , ಈರಮ್ಮ ಶಾನಭೋಗರಿಗೆ, ನನಗೆ ನನ್ನ ಗಂಡನ ಆಸ್ಥಿಯಲ್ಲಿ ಯಾವುದೇ ಪಾಲು ಬೇಡ. 'ಗಂಡನಿಗೆ ಬೇಡೆಂದು ಬಿಟ್ಟು ಹೋದವಳು ನಾನು, ನನ್ನ ಪಾಲಿನ ಆಸ್ತಿಯೆಲ್ಲಾ ಮಕ್ಕಳಿಗೆ ಇರಲಿ. ಅವಳಿಗೆ ಮನೆ ತುಂಬ ಮಕ್ಕಳಿವೆ . ಮಕ್ಕಳ ಬದುಕಿಗಾಗುತ್ತದೆ. ನನಗೇನು, ನಾನು ಬುರ್ರ ಕಥೆಗಳನ್ನು ಹಾಡಿಕೊಂಡು ನನ್ನ ಮಗಳನ್ನು ಸಾಕುತ್ತೇನೆ' ಎಂದು ಖಡಾ ಖಂಡಿತವಾಗಿ ಹೇಳಿ ಆಸ್ಥಿ ಕಾಗದದ ಮೇಲೆ ಹೆಬ್ಬೆಟ್ಟು ಒತ್ತಿ ಹಿಂದಿರುಗುತ್ತಾಳೆ. ಇವಳ ಮಾತಿನಿಂದ ಊರಿನ ಹಿರಿಯರೆಲ್ಲರು ಮೂಕವಿಸ್ಮಿತರಾಗುತ್ತಾರೆ.

ಈರಮ್ಮ ಮಗಳನ್ನು ಬೆಳೆಸುವುದರಲ್ಲಿಯೇ ತನ್ನೆಲ್ಲಾ ದುಃಖ ಮರೆಯುತ್ತಾಳೆ. ಹಾಡು ಹಾಡುವುದರಿಂದ ಅವಳ ಮನಸ್ಸಿಗೆ ಸಂತೋಷ, ನೆಮ್ಮದಿ ಸಿಗುತ್ತದೆ. ಇದೇ ಅವಳ ಬದುಕಾಗುತ್ತದೆ. ದಿನಗಳು ಉರುಳಿದಂತೆ ಈರಮ್ಮನ ಮಗಳು ಬೆಳೆದು ದೊಡ್ಡವಳಾಗುತ್ತಾಳೆ. ಮೈನೆರೆದ ವಿಷಯವನ್ನು ಗಂಡನ ಮನೆಗೆ ತಿಳಿಸುತ್ತಾಳೆ. ಆದ್ರೆ ಯಾರೂ ಬರುವುದಿಲ್ಲ. ಮಗಳಿಗೆ ಈರಮ್ಮನೇ ಉಡಿ ತುಂಬುತ್ತಾಳೆ. ಮುಂದೊಂದು ದಿನ ಈರಮ್ಮ ತನ್ನ ಮಗಳ ಮದುವೆ ನಿಶ್ಚಯಿಸುತ್ತಾಳೆ. ಮಗಳ ಮದುವೆಗೆ ಗಂಡನನ್ನು ಅಕ್ಕ ಕಮಲಮ್ಮ ಮಕ್ಕಳನ್ನು ಕರೆದುಕೊಂಡು ಬರಲು ಅಣ್ಣನಿಗೆ ಕಳಿಸುತ್ತಾಳೆ. ಆಗ ರಾಮಚಂದ್ರಪ್ಪ

ನನಗೆ ಮದುವೆಯಲ್ಲಿ ಎರಡು ಸಾವಿರ ರೂಪಾಯಿ ಕುಡಿಯಲಿಕ್ಕೆ ಕೊಡಬೇಕು. ಒಪ್ಪಿದರೆ ಮದುವೆಗೆ ಬರತೀನಿ ಇಲ್ಲಂದ್ರೆ ಬರೋದಿಲ್ಲವೆಂದು ಹಠ ಹಿಡಿಯುತ್ತಾನೆ[16]. ಮಗಳು ಮದುವೆಯಲ್ಲಿ ತಂದೆ ಇಲ್ಲದಿದ್ದರೆ ಸರಿ ಇಲ್ಲವೆಂದು ಅವನಿಗೆ ಎಲ್ಲ ರೀತಿಯ ಸೌಲಭ್ಯ ಒದಗಿಸಿ ಕೊಡ್ತೀನಿ ಎಂದು ಒಪ್ಪಿಕೊಳ್ಳುತ್ತಾರೆ. ರಾಮಚಂದ್ರಪ್ಪ ತನ್ನ ಮಗಳಿಗೆ ಮದುವೆಯಲ್ಲಿ ಡಾಬು ಮಾಡಿಸಿ ಹಾಕ್ತಿನಿ ಎಂದು ಒಪ್ಪಿಕೊಂಡು ಕೊಡೋದಿಲ್ಲ. ಮದುವೆಯಲ್ಲಿ ರಾಮಚಂದ್ರಪ್ಪ ಹೇಳಿದಂತೆಲ್ಲಾ ಸಾರಾಯಿ ತಂದು ಕೊಡುತ್ತಾರೆ. ಮತ್ತು ಮಗಳ ಮೈಮೇಲೆ ಈರಮ್ಮ ತಾನು ಸಂಪಾದಿಸಿ ಕೂಡಿಟ್ಟ ದುಡ್ಡಿನಿಂದ ಚೈನು, ತಾಳಿ ಮಾಡಿಸಿ ಹಾಕಿ ಮಗಳಿಗೆ ಎಲ್ಲಾ ರೀತಿಯಿಂದಲೂ ಖರ್ಚು ಮಾಡಿ ತನ್ನ ಅಣ್ಣನ ಮಗನಾದ ನಾಗರಾಜಪ್ಪನಿಗೆ ಕೊಟ್ಟು ಮದುವೆ ಮಾಡುತ್ತಾಳೆ. 'ಯಾರದೊ ದುಡ್ಡು ಯಲ್ಲಮನ ಜಾತ್ರೆ' ಅನ್ನುವಂತೆ ರಾಮಚಂದ್ರಪ್ಪನಿಗೆ ಮಗಳ ಮದುವೆಯಲ್ಲಿ ಮನಬಂದಂತೆ ಕುಡಿದು ಮಜಾ ಉಡಾಯಿಸಿ ತನ್ನೂರಿಗೆ ಮರಳುತ್ತಾನೆ. ಅವಾಗಾವಾಗ ಈರಮ್ಮನಬಳಿ ಬಂದು ಕುಡಿಯಲಿಕ್ಕೆ ದುಡ್ಡು ಒಯ್ಯುತ್ತಿರುತ್ತಾನೆ. ತಂದೆಯಾಗಿ ಮಗಳಿಗೆ ಯಾವುದೇ ರೀತಿಯಿಂದಲೂ ಸಹಾಯಕನಾಗುವುದಿಲ್ಲ. ಬದಲಿಗೆ ಹೆಂಡ್ತಿ - ಮಗಳಿಗೆ ಭಾರವಾಗುತ್ತಾನೆ. ಈರಮ್ಮನಿಗೆ ಇಬ್ರು ಮೊಮ್ಮಕ್ಕಳಿದ್ದಾರೆ. ಯಶೋಧಾ ಮತ್ತು ಓಬಣ್ಣ. ಈರಮ್ಮನಿಗೆ ಎಲ್ಲಿಲ್ಲದ ಹಿಗ್ಗು ಮೊಮ್ಮಕ್ಕಳನ್ನು ಪ್ರೀತಿಯಿಂದ ಆರೈಕೆ ಮಾಡುತ್ತಿದ್ದಾಳೆ. ಅಳಿಯ - ಮಗಳನ್ನು ಈರಮ್ಮ ತನ್ನ ಜೊತೆಯಲ್ಲಿಯೇ ಇರಿಸಿಕೊಂಡಿದ್ದಾಳೆ. ಮುಂದೊಂದು ದಿನ ರಾಮಚಂದ್ರಪ್ಪನಿಗೆ ಪಶ್ಚಾತ್ತಾಪವಾಗುತ್ತದೆ. ಹೆಂಡ್ತಿ ಮಕ್ಕಳ್ಯಾರು ಅವನನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಗಂಡನ ಅವಸ್ಥೆ ಕಂಡು ಈರಮ್ಮನ ಮನಸ್ಸು ಚುರ್ ಎನ್ನುತ್ತದೆ. ಹಿಂದಿನ ತನ್ನ ಕಹಿ ಘಟನೆಗಳನ್ನೆಲ್ಲಾ ಮರೆತು ಏನೇ ಆಗಲಿ ಆತ ನನ್ನ ಗಂಡ, ಅವನ ಹೆಂಡತಿಯಾಗಿ ನಾನು ಅವನ ಸೇವೆ ಮಾಡುವುದು ನನ್ನ ಧರ್ಮವೆಂದು[17], ಈರಮ್ಮ ಸ್ವತಃ ಒಬ್ಬಳೇ ಗಂಡನನ್ನು ಆಸ್ಪತ್ರೆಗೆ ಒಯ್ದು ತೋರಿಸುತ್ತಾಳೆ. ಇವಳ ಪ್ರೀತಿಯ ಆರೈಕೆ ಕಂಡು ರಾಮಚಂದ್ರಪ್ಪನಿಗೆ ತನ್ನ ಕೊನೆಗಾಲದಲ್ಲಿ ಹೆಂಡತಿಯ ತ್ಯಾಗ ಗುಣ ಅರ್ಥವಾಗುತ್ತದೆ. ಎಷ್ಟೇ ಪ್ರಯತ್ನ ಪಟ್ಟರು ರಾಮಚಂದ್ರಪ್ಪ ಹೆಚ್ಚು ದಿನ ಉಳಿಯದೇ ಶಿವನ ಪಾದ ಸೇರುತ್ತಾನೆ. ಗಂಡ ಸತ್ತ ಮೇಲೆ ಗಂಡನ ಮನೆ ಬಗ್ಗೆ ಚಿಂತಿಸುವುದನ್ನು ಈರಮ್ಮ ಬಿಡುತ್ತಾಳೆ. ಗಂಡನ ಸಾವಿನಿಂದಾಗಿ ಈರಮ್ಮ ಮಾನಸಿಕವಾಗಿ ಸ್ವಲ್ಪ ಕುಗ್ಗುತ್ತಾಳೆ. ಬಾಳಿನಲ್ಲಿ ಬಂದ ಎಲ್ಲಾ ಕಷ್ಟಗಳ್ನು ಸಹನೆಯಿಂದಲೇ ಸ್ವೀಕರಿಸುತ್ತಾ ಬಂದಿದ್ದಾಳೆ. ಇವಳ ಆತ್ಮ ಬಲಕ್ಕೆ ಇವಳು ಹಾಡುವ ಬುರ್ರ ಕಥೆಗಳೆ ಆಧಾರವಾಗಿವೆ.

ಈರಮ್ಮ ತನ್ನ ಧೃಡತೆ, ಆತ್ಮ ವಿಶ್ವಾಸ, ಸ್ವಾಭಿಮಾನದಿಂದಾಗಿ ಬದುಕಿನಲ್ಲಿ ಬರುವ ಎಲ್ಲಾ ಏರು ಪೇರುಗಳನ್ನು ಮೆಟ್ಟಿ ನಿಂತಿದ್ದಾಳೆ. ಈರಮ್ಮನ ಬದುಕೊಂದು ಸಂಘರ್ಷಮಯ ಬದುಕಾಗಿದೆ. ಅವಳನ್ನು ನೋಡಿ ಕಲಿತು ಕೊಳ್ಳುವುದು ಸಾಕಷ್ಟಿದೆ. ಒಬ್ಬ ಹೆಣ್ಣುಮಗಳು ಮನಸ್ಸು ಮಾಡಿದ್ರೆ ಛಲದಿಂದ ಸಾಧನೆ ಮಾಡಿ, ಸ್ವಾವಲಂಬಿಯಾಗಿ ಬದುಕಬಲ್ಲಳು ಎನ್ನುವುದಕ್ಕೆ ಈರಮ್ಮ ಸಾಕ್ಷಿಯಾಗಿ ನಿಲ್ಲುತ್ತಾಳೆ.

ಬದುಕಿನಲ್ಲಿ ಅಸಾಧ್ಯವಾದುದ್ಯಾವುದೂ ಇಲ್ಲ. ಅದನ್ನು ಹೇಗೆ ಜಯಿಸಬೇಕೆಂಬುದನ್ನು ಈರಮ್ಮನ ಬದುಕಿನಿಂದ ತಿಳಿದುಕೊಳ್ಳಬಹುದು. ಈರಮ್ಮನಲ್ಲಿರುವ ಸ್ವಾಭಿಮಾನ, ಧೈರ್ಯ, ಛಲ,

ಸಹನೆ ಆತ್ಮೀಯತೆ ಎಲ್ಲವು ಅವಳನ್ನು ಎತ್ತರದ ಶಿಖರಕ್ಕೇರಿಸಿವೆ. ಕಷ್ಟ ಬಂದಾಗ ಕುಗ್ಗದೆ ಸುಖ ಬಂದಾಗ ಹಿಗ್ಗದೆ , ಮೊದಲು ಹೇಗಿದ್ದಳೋ ಹಾಗೆಯೇ ಇಂದಿಗೂ ಈರಮ್ಮ ತನ್ನ ಕುಟುಂಬದೊಂದಿಗೆ ಸಂತೋಷದ ಚಿಲುಮೆಯಾಗಿದ್ದಾಳೆ. ಈರಮ್ಮನಲ್ಲಿ ಅಡಗಿರುವ ಬುರ್ರ ಕಥಾ ಹಾಡುಗಾರಿಕೆ ಪ್ರತಿಭೆ ಇವಳ ಬದುಕಿನಲ್ಲಿ ಹೊಸದೊಂದು ತಿರುವು ಮೂಡಿಸುತ್ತ ಈರಮ್ಮನನ್ನು ಕಲಾ ಕ್ಷೇತ್ರದಲ್ಲಿ ಎತ್ತರೆತ್ತರಕ್ಕೆ ಏರಿಸುತ್ತಾ ಹೋಗುತ್ತಿದೆ.

ಈರಮ್ಮನ ವ್ಯಕ್ತಿತ್ವ ದರ್ಶನ :

ಒಬ್ಬ ಕಲಾವಿದನ ವ್ಯಕ್ತಿತ್ವ ದರ್ಶನವೆಂದರೆ, ಅದು ಅವನ ಜೀವನ ಮತ್ತು ಅವನ ಕಲೆಯ ಸಮನ್ವಯವೆಂದರ್ಥ. ಅವನ ವ್ಯಕ್ತಿತ್ವ ರೂಪುಗೊಳ್ಳುವುದು ಅವನ ಕಲೆಯಿಂದಲೇ ಎನ್ನುವುದು ಬಹು ಮುಖ್ಯ. ಅವನಲ್ಲಿಯ ಕಲೆ ಬೆಳೆದಂತೆ ಅವನ ವ್ಯಕ್ತಿತ್ವವೂ ಎತ್ತರಕ್ಕೇರುತ್ತದೆ. ಕಲಾವಿದ ಮತ್ತು ಅವನ ಕಲೆ ಇವೆರಡಕ್ಕೂ ಅವಿನಾಭಾವ ಸಂಬಂಧವಿದೆ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಉನ್ನತವಾದ ವಿಚಾರದಿಂದ ಉನ್ನತವಾದ ಕಲೆ ಹುಟ್ಟುತ್ತದೆ. ಉನ್ನತ ವಿಚಾರ ಎಂದರೆ, ಒಳ್ಳೆಯ ನಡೆ - ನುಡಿ, ಸುಂದರ ಆಲೋಚನೆ, ಸ್ಪೂರ್ತಿಯುತವಾದ ಜೀವನ ಎಂದರ್ಥ. ಇದುವೆ ಅವನ ಕಲೆಗೆ ಸ್ಪೂರ್ತಿಯಾಗುತ್ತದೆ. ಈ ಮಾತು ಈರಮ್ಮನ ವ್ಯಕ್ತಿತ್ವಕ್ಕೂ ಅನ್ವಯಿಸುತ್ತದೆ.

ಈರಮ್ಮನ ಜೀವನದ ಪುಟಗಳು ತೆರೆಯುತ್ತ ಹೋದಂತೆ ಅನೇಕ ವಿಸ್ಮಯಕಾರಿ ಸಂಗತಿಗಳು ಗೋಚರಿಸುತ್ತವೆ. ಆಕೆಯ ಜೀವನದಲ್ಲಿ ನಡೆದು ಬಂದ ದಾರಿ ಅದು ಹೂವಿನ ಹಾಸಿಗೆಯಲ್ಲ. ಮುಳ್ಳಿನ ಹಾಸಿಗೆ. ತನ್ನ ಜೀವನದಲ್ಲಿ ಅನೇಕ ರೀತಿಯ ಏರಿಳಿತಗಳನ್ನು ಈಕೆ ಕಂಡಿದ್ದಾರೆ. ತಾನು ಜೀವನದಲ್ಲಿ ಎಷ್ಟೇ , ಯಾವುದೇ ರೀತಿಯ ಕಷ್ಟಗಳನ್ನು ಅನುಭವಿಸಿದರೂ ಬುರ್ರ ಕಥೆಗಳ ಮೂಲಕ ಜನರಿಗೆ ಸದಾ ನಲಿವನ್ನೇ ನೀಡುವ ವ್ಯಕ್ತಿತ್ವ ಅವಳದು. ತನ್ನ ಬುರ್ರ ಕಥೆಗಳ ಹಾಡಿನ ಮುಖಾಂತರವೇ ಜೀವನದ ನೋವನ್ನು ಮರೆತವಳು. ಅದರಲ್ಲಿಯೇ ನಲಿವನ್ನು ಕಂಡವಳು. ಹಾಡಿಗಾಗಿಯೇ ಬದುಕಿದವಳು. ಈ ಹಾಡುಗಳಿಂದ ತಾವೇನು ಬಯಸುತ್ತೀರಿ ಅಜ್ಜಿ ? ಎನ್ನುವ ಪ್ರಶ್ನೆ ಹಾಕಿದಾಗ ನಾನ್ ಬಯಸಿದ್ದು ಏನೂ ಇಲ್ಲವಮ್ಮ. ಅಮ್ಮಾ ತುತ್ತು ಅನ್ನ ಸಿಕ್ಕರೆ ಸಾಕು. ನನ್ನ ಸರಸತಿಯಿಂದ (ಕಲೆ) ನಾನು ಬದುಕೀನಿ. ನಾನು ಬದುಕೀನಿ. ಹಾಡು ಹೇಳುವಾಗ ಸಿಗುವಷ್ಟು ಆನಂದ ಬೇರೆಲ್ಲೂ ಸಿಗಲ್ಲ. ಭಾಳ ಛಂದ ಹಾಡ್ತಾಳ ಈರಮ್ಮ ಅಂತ ಜನಾ ನನ್ನ ಹಾಡ ಕೇಳಿ ಅಂತಾರಲ್ಲ. ಅದೇ ನನಗ ಬಿರುದು ಬಾವಲಿ. ಜನ ಕರದು ಪ್ರೀತಿಯಿಂದ ಮಾತಾಡ್ಸಿ ಗುರ್ತ ಹಿಡಿತಾರಲ್ಲ, ಅದೇ ನನ್ನ ಸಂಪತ್ತು[18]. ಹೀಗೆ ತತ್ತ್ವಜ್ಞಾನಿಯಂತೆ ಮಾತನಾಡುವ ಈರಮ್ಮನ ಮುಗ್ಧ ಮನಸ್ಸಿನಲ್ಲಿ ಲವಲೇಶವೂ ಕೃತ್ರಿಮತೆಯಿಲ್ಲವೆನಿಸುತ್ತದೆ. ಆಕೆಯ ಮನದಾಳದಿಂದ ಬಂದ ಮಾತುಗಳಿವು.

ಈರಮ್ಮನ ಭೌತಿಕ ವ್ಯಕ್ತಿತ್ವವನ್ನು ನೋಡಿದಾಗ ಬಡಕಲಾದ ದೇಹ. ಎತ್ತರದ ನಿಲುವು. ಕಾಂತಿಯುತವಾದ ಕಣ್ಣುಗಳು, ಸದಾ ಹಸನ್ಮುಖ ಸದಾ ಲವಲವಿಕೆ. ಜೀವನೋತ್ಸಾಹ, ನಯ, ವಿನಯ, ಸೌಜನ್ಯತೆ, ಪ್ರೀತಿ ವಿಶ್ವಾಸ ಎದ್ದು ಕಾಣುವ ಅಂಶಗಳು. ಸದಾ ಊರೂರು ಅಲೆದಾಟದ ಅಲೆಮಾರಿ ಪ್ರವೃತ್ತಿ. ನೇರ ಜನ ಸಂಪರ್ಕ. ಬೇರೆ ಬೇರೆ ವೃತ್ತಿ ಜಾತಿ - ಮತ - ಧರ್ಮಗಳ ಜನರೊಡನೆ

ಒಡನಾಟ. ಇವು ಆಕೆಯ ಬದುಕಿಗೆ ಅಪಾರವಾದ ಅನುಭವಗಳನ್ನು ತಂದು ಕೊಟ್ಟಿವೆ. ಒಬ್ಬ ಹೆಣ್ಮಗಳಾಗಿ , ಕಥೆಗಾರ್ತಿಯಾಗಿ, ಹಾಡುಗಾರ್ತಿಯಾಗಿ , ಬುರ್ರ ಕಥಾ ಕಲಾವಿದೆಯಾಗಿ . ಸಮಾಜಜೀವಿಯಾಗಿ, ತಾಯಿಯಾಗಿ, ಬಹು ಮುಖದ ವ್ಯಕ್ತಿತ್ವವನ್ನು ಹೊಂದಿದ್ದಾಳೆ.

ಈರಮ್ಮ ಜನರ ಮಧ್ಯೆ ಬೆಳೆದವಳು. ಜನರ ಪ್ರೀತಿ, ಗೌರವ ಉಳಿಸಿ ಕೊಂಡವಳು. ಮುಗ್ಧ ಸ್ವಭಾವದವಳು. ಬುರ್ರ ಕಥೆಗಳ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸಿದವಳು. ನಾನು ಹಾಡಬೇಕು. ಚಂದ ಹಾಡಬೇಕು. ನಾಲ್ಕು ಜನ ಕುಂತ ಕೇಳಬೇಕು. ತಲೆ ದೂಗಬೇಕು. ಸಂತೋಷ ಪಡಬೇಕು. ಇದಱಿಂದ ನನ್ನ ಹೊಟ್ಟಿ ತುಂಬಬೇಕು[19]. ಅನ್ನುವುದು ಮಾತ್ರ ಈಕೆಗೆ ಗೊತ್ತು. ಇದಕ್ಕಿಂತ ಹೆಚ್ಚಿನ ಮಹತ್ವಾಕಾಂಕ್ಷೆ ಇವಳು ತನ್ನ ಜೀವನದಲ್ಲಿ ಇಟ್ಟು ಕೊಂಡವಳಲ್ಲ. ಬದುಕು ಬಂದಂತೆ ಸ್ವೀಕಱಿಸಬೇಕು. ಆ ಶಿವಾ ಇಟ್ಟಂಗ ಇರಬೇಕು. ಸುಖದಾಗಿಡೋದು, ಕಷ್ಟದಾಗಿಡೋದು ಅವ್ನ ಕೈಱಿದೆ. ಅದು ನಮ್ಮ ಕೈಱಿಲ್ಲ ಎನ್ನುವ ಭಾವನೆಗಳೇ ಆಕೆಯನ್ನು ಬದುಕಿನ ಎತ್ತರಕ್ಕೇಱಿಸಿವೆ. ಜೊತೆಗೆ ತನ್ನ ಸುತ್ತ ಮುತ್ತಱಿನ ಪಱಿಸರದಲ್ಲಿ ಅಪಾರವಾದ ಶ್ರೋತೃಗಳನ್ನು ಹೊಂದಲು ಸಾ ಧ್ಯವಾಗಿದೆ. ಸುಮಧುರವಾದ ಕಂಠ, ಹಾಡುಗಾಱಿಕೆಯಲ್ಲಿ ತನ್ಮಯತೆ, ಭಾವನಾ ಪರವಶತೆ, ತಾಧ್ಯಾತ್ಮಕತೆ. ಇವುಗಳಲ್ಲಿಯ ಈ ಮುಂತಾದ ಗುಣಗಳು ಜನ , ಮನವನ್ನಾಕರ್ಷಿಸಿವೆ. ಹೀಗಾಗಿ ಜನ ಇವಳಲ್ಲೇನೋ ಒಂದು ದೈವಿ ಶಕ್ತಿ ಇರಬಹುದೆಂದು ಭಾವಿಸಿದ್ದಾರೆ. "ಈರಮ್ಮ ನಮ್ಮ ಊರಲ್ಲಿ ಪಾದ ಇಟ್ಟರೆ ಮಳೆ ಬೆಳೆ ಚೆನ್ನಾಗಿ ಆಗುತ್ತದೆ. ದನ - ಕರುಗಳು ಸೌಖ್ಯವಾಗಿರುತ್ತವೆ. ಈಕೆ ನಮ್ಮ ಮನೆಯಲ್ಲಿ ಕಾಱಿಟ್ಟರೆ ಮನೆಯಲ್ಲಿ ಶಾಂತಿ ನೆಲೆಸುತ್ತದೆ. ಮನೆಗೆ ಒಳ್ಳೆಯದಾಗುತ್ತದೆ. ಈಕೆಯ ಕಥೆ ಕೇಳಿದರೆ, ಪುಣ್ಯ ಸಿಗುತ್ತದೆ [20] ಎಂದು ಜನ ಬಲವಾಗಿ ನಂಬಿದ್ದಾರೆ. ಈಕೆ ದೇವರು, ಧರ್ಮ , ಸತ್ಯ, ಛಲ, ಪ್ರಾಮಾಣಿಕತನ, ಶೌಚ ಗುಣ, ಸುಖ - ದುಃಖ ಮುಂತಾದವುಗಳ ಕುಱಿತು ಕಥೆ ಹೇಳುತ್ತಾಳೆ. ಇಂಥ ಕಥಿಗಳನ್ನು ಹೇಳುತ್ತಿರಬೇಕಾದ್ರೆ ಕುಳಿತಂಥ ಜನರ ಕಣ್ಣಲ್ಲಿ ನೀರು ಬರುತ್ತಿದ್ವು. ನೋಡೇ ಪಾಪ ಆಕೀನ ಬಿಟ್ಟು ಹೋದ ನೋಡೇ. ತಂದಿ ಸತ್ರೂ ತಾಯಿ ಇರಬೇಕು ನೋಡೇ. ನಾಲ್ಕು ಮನೀಗೆ ಬಟ್ಲ ಇಡಕೊಂಡು ಅಪ್ಪ (ಅವ್ವ) ನನ್ನ ಗಂಡ ಸತ್ತ ಹೋಗ್ಯಾನ, ಹುಡ್ಗೂರು ಉಪವಾಸ ಅದಾವಂತ ನಾಲ್ಕು ಮನಿ ಅನ್ನ ಇಸ್ಕಂಬಂದು ಹುಡುಗ ಜೀವನ ಮಾಡಬೇಕು. ಎಷ್ಟಾದರೂ ಮಲತಾಯಿ ಮಲತಾಯಿನೇ ಅಂತ ಒಬ್ಬಱಿಗೊಬ್ಬರು ಮಾತಾಡಿ ಅಳುತ್ತಿರುತ್ತಾರೆ. ಪಾಪ ಗಂಡು ಮಕ್ಳೂ ಕಣ್ಣಲ್ಲಿ ನೀರು ತಂದ ಕಂಡಿರುತ್ತವೆ. ನನಗೂ ಇಂಥ ಹಾಡು ಹೇಳಬೇಕಾದ್ರ, ಜನರ ಹಾಗೆ ನೋಡಿದ್ರ ತುಂಬ ಸಂಕಟ ಬರ್ತದ . ದುಃಖನೇ ಬಂದ್ಬಂಗ ಆಗ್ತದ. ಆದರೂ ಕಥೀ ನಿಲ್ಲಿಸುವಾಂಗಿಲ್ಲ. ದುಃಖ ಮಾಡಿಕೊಳ್ತಾನೇ ನಾನು ಕಥೀನ ಹೇಳ್ತದ್ದೀನಿ. ಕಣ್ಣಲ್ಲಿ ಹಾಗೆ ನೀರು ಹೋಗ್ತಾನೆ ಇರ್ತದ. ಬಾಯಲ್ಲಿ ಕಥಿ ಹಾಗೆ ಮುಂದುವರೆದಿರ್ತದ ಎನ್ನುತ್ತಾಳೆ ಈರಮ್ಮ[21]. ಇಂತಹ ಭಾವನೆಗಳು ಈರಮ್ಮನ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿಯೂ ಹೆಚ್ಚು ಸಹಾಯಕವಾಗಿವೆ.

ಸ್ವಾಭಿಮಾನ ಸ್ವಾವಲಂಬನದ ಬದುಕು ಈರಮ್ಮನದು. ಕೈ ಹಿಡಿದ ಗಂಡ ಎಷ್ಟೇ ಕಿರುಕುಳ ಕೊಟ್ಟರೂ, ಸವತಿಯ ಮತ್ಸರದಿಂದ ಎಷ್ಟೇ ಚಿತ್ರ ಹಿಂಸೆಗೊಳಗಾದರೂ ಏನೇ ಆರೋಪಕ್ಕೀಡಾದರೂ

ಅವನ್ನು ಸಮರ್ಥವಾಗಿ ಎದುರಿಸಿ ಜೀವನದಲ್ಲಿ ಮೇಲೆದ್ದವಳು. ಗಂಡನಲ್ಲಿ ಪ್ರೀತಿಯ ಒರತೆ ಬತ್ತಿದಾಗ, ನಿರ್ಭೀಡೆಯಿಂದ ಅವನನ್ನು ತೊರೆದವಳು. ತನಗೇನೆ ಕಷ್ಟ ಬಂದರೂ ತಾಯಿ - ತಂದೆ, ಅಣ್ಣ - ತಮ್ಮ, ಅತ್ತಿಗೆ ಯಾರಿಗೂ ಭಾರವಾಗದೆ ತನ್ನ ಬದುಕನ್ನು ತಾನು ರೂಪಿಸಿಕೊಂಡವಳು. ಯಾರ ಹಂಗಿನಲ್ಲಿಯೂ ಇರಬಾರದೆನ್ನುವ ಛಲ ಅಳವದು. ಆದರೆ ಸೇಡು , ದ್ವೇಷ, ಅಸೂಯೆ ಮುಂತಾದ ಜೀವ ವಿರೋಧಿ ಶಕ್ತಿಗಳಿಗೆ ತನ್ನ ಮನಸ್ಸಿನಲ್ಲೆಂದೂ ಜಾಗ ಕೊಟ್ಟವಳಲ್ಲ. ತನ್ನ ಗಂಡ ಎಷ್ಟೇ ಕಿರುಕುಳ ಕೊಟ್ಟರೂ, ತಾನು ಗಂಡನಿಂದ ದೂರವಾದರೂ. ಗಂಡ ರೋಗ ಪೀಡಿತನಾದಾಗ, ತನ್ನ ಸ್ವಂತ ಖರ್ಚಿನಲ್ಲೇ ಅವನನ್ನು ದವಾಖಾನೆಗೆ ತೋರಿಸಿ ಮಾನವೀಯ ಪ್ರೀತಿ ಮೆರೆದವಳು[22].

ಗಂಡ ಸತ್ತ ಮೇಲೆ ಕೊನೆಗೊಂದು ದಿನ ಶಾನುಭೋಗರೊಬ್ಬರು ಆಸ್ತಿಪಾಲು ಹಾಕುವ ಸಂದರ್ಭ ಬಂದಾಗಾ ಈರಮ್ಮನನ್ನು ಕರೆಸಿಕೊಂಡಿದ್ದರು. ನಿನ್ನ ಗಂಡನಿಗಿರುವ ಒಂದೆರಡು ಎಕರೆ ಜಮೀನು, ವಸ್ತ್ರ, ಒಡವೆಗಳಲ್ಲಿ ನಿನ್ನದೂ ಪಾಲಿದೆ. ಅದನ್ನು ಪಡೆಯಬೇಕಾದದ್ದು ನಿನ್ನ ಧರ್ಮ ಎಂದಾಗ, ಈ ಧರ್ಮವೇ ನನಗೆ ಸಾಕಾಗಿದೆ. ನನಗೆ ಅವನ ಆಸ್ತಿಯೂ ಬೇಡ, ಯಾವ ಒಡವೆ - ವಸ್ತ್ರವೂ ಬೇಡ, ಹೀಗೆ ಕಥೀ ಹೇಳಿ ಬದುಕುತ್ತೇನೆ. ಎಲ್ಲ ಹಿರಿಯವಳಿಗೆ ಇರಲಿ. ಅವಳಿಗೂ ಬಹಳ ಜನ ಮಕ್ಕಳಿದ್ದಾರೆ. ಅವ್ರೂ ನನ್ನ ಮಕ್ಕಳೇ! ಪಾಪ ಬದುಕಲಿ ಎಂದು ಖಂಡ ತುಂಡವಾಗಿ ಮಾತನಾಡಿ ಹೆಬ್ಬೆಟ್ಟು ಒತ್ತಿ ಬಂದಿದ್ದಳು. ಅಂದು ನೆರೆದಿದ್ದ ಹಿರಿಯರೆಲ್ಲರೂ ಅವಳ ಈ ಮಾತನ್ನು ಕೇಳಿ ತಲೆದೂಗಿ ಹೋಗಿದ್ದರು. ಇಂತಹ ನಿಸ್ವಾರ್ಥ ಪ್ರವೃತ್ತಿ ಅಳವದು. ಗಂಡನ ಆಸ್ತಿಯಲ್ಲಿ ಪಾಲು ತೆಗೆದು ಕೊಂಡು ಸವತಿಯ ಒಬ್ಬ ಮಗನನ್ನು ನನ್ನ ಹತ್ತಿರ ಇಟ್ಟುಕೊಂಡರೆ ನನ್ನ ಮಗಳಗತಿಯೇನು?ಅವರಿಂದಲೇ ಎಷ್ಟೋ ಕಷ್ಟಗಳನ್ನು ಅನುಭವಿಸಿದ ನಾನು ಗಂಡನ ಆಸ್ತಿಯಲ್ಲಿ ಪಾಲು ತೆಗೆದುಕೊಂಡು ಅವರ ಹಂಗಿನಲ್ಲಿ ಏಕೆ ಜೀಳಬೇಕು. ಇದರಿಂದ ಇದ್ದೊಂದು ಮಗಳಿಗೆ ಕಷ್ಟ ಕೊಟ್ಟಂಗಾಗುತ್ತದೆ ಎನ್ನುವ ಮುಂದಾಲೋಚನೆಯೂ ಈರಮ್ಮನಲ್ಲಿದೆ. ಈ ಬದುಕು ನನ್ನದು. ನನ್ನದಲ್ಲದ ವಸ್ತುವಿಗೆ ನಾನೇಕೆ ಆಶೆ ಪಡಬೇಕು ಎನ್ನುವ ನಿಸ್ವಾರ್ಥ ಗುಣ ಅವಳದು. ಇಂತಹ ಗುಣಗಳೇ ಅವಳನ್ನು ಬದುಕಿನ ಪರಿಪೂರ್ಣತೆಯೆಡೆಗೆ ಕೊಂಡೊಯ್ದುವೆ ಎನ್ನಬಹುದು. ಪರಿಸರ ಪ್ರವಾಹದಲ್ಲಿ ಈರಮ್ಮ:

ಪರಿಸರ ಎನ್ನುವುದು ಮನುಷ್ಯ ಜೀವನದ ಪ್ರಮುಖ ಅಂಶ. ಮನುಷ್ಯನ ಪ್ರಗತಿಗೂ ಅವನತಿಗೂ ಪರಿಸರವೇ ಪ್ರಮುಖ ಕಾರಣವಾಗಿದೆ. "ಕೋಣೆ ಕೂಸು ಕೊಳೆಯಿತು, ಓಣಿ ಕೂಸು ಬೆಳೆಯಿತು", ಎನ್ನುವಗಾದೆ. ಮನುಷ್ಯನಿಗೆ ಪರಿಸರ ಎಷ್ಟು ಮುಖ್ಯ ಎನ್ನುವುದು ಎತ್ತಿ ತೋರಿಸುತ್ತದೆ. ಎಂತಹ ಪರಿಸರದಲ್ಲಿ ಮನುಷ್ಯ ಬೆಳೆಯುತ್ತಾನೋ ಅಂತಹ ಪರಿಸರದ ಪ್ರಭಾವ ಅವನ ಮೇಲಾಗಿರುತ್ತದೆ. ಬಾಲ್ಯದಲ್ಲಿ ಸತ್ಯ ಹರಿಶ್ಚಂದ್ರನ ನಾಟಕವನ್ನು ನೋಡಿದ ನಮ್ಮ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಜೀವನ ಸತ್ಯವನ್ನಳವಡಿಸಿಕೊಂಡು ಈ ವ್ರತದ ಮೇಲೆ ಮನುಕುಲದ ಉದ್ಧಾರಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ಹೋರಾಡಿ ಮಹಾತ್ಮರೆನಿಸಿಕೊಂಡುರು. ಹೀಗೆ ಉತ್ತಮ ಪರಿಸರ ಮನಷ್ಯ, ಜೀವನಕ್ಕೆ ಸಂಸ್ಕಾರ ಕೊಡುತ್ತದೆ. ಪ್ರಜ್ಞೆ ನೀಡುತ್ತದೆ. ಆಲೋಚನೆಗೆ ಹಚ್ಚುತ್ತದೆ.

ಈ ಮಾತು ಈರಮ್ಮನ ಬದುಕಿಗೂ ಅನ್ವಯಿಸುತ್ತದೆ. ಈರಮ್ಮ ಬುರ್ರಕಥಾ ಕಲಾವಿದರ

ಕುಟುಂಬದಲ್ಲಿ ಜನಿಸಿದವಳು. ಇವಳ ತಂದೆ-ತಾಯಿ, ತಾತ-ಮುತ್ತಾತಂದಿರರು ಬುರ್ರಕಥಾ ಕಲಾವಿದರು. ಹೀಗಾಗಿ ಬುರ್ರಕಥನ ಕಲೆ ಈರಮ್ಮನಿಗೆ ಹುಟ್ಟಿನಿಂದಲೇ ಬಂದದ್ದು. ಈರಮ್ಮನ ತಂದೆ ತಾಯಿಯಂದಿರರು ಬುರ್ರಕಥಾ ಮೇಳವನ್ನು ನಡೆಸುವಾಗ ಈರಮ್ಮನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಕಥೆ ಹಾಡುವ ರೀತಿ ಅದಕ್ಕೆ ಜನರ ಪ್ರತಿಸ್ಪಂದನೆ, ಮುಂತಾದ ಅಂಶಗಳು ಆಕೆಯ ಮೇಲೆ ವಿಶಿಷ್ಟ ಪ್ರಭಾವ ಬೀರಿವೆ. ಮೇಳದಲ್ಲಿ ಕಥೆ ಕೇಳಿ ಅದರಂತೆಯೇ ದನ ಕಾಯುವಾಗ ಪ್ರಕೃತಿಯ ಸುಂದರ ಮಡಿಲಲ್ಲಿ ಹಾಡುತ್ತ ಹಾಡುಗಳನ್ನು ಕಲಿತು ಕೊಳ್ಳುವುದು. ತಾನೂ ತಂದೆ ತಾಯಿಗಳಂತೆ ಹಾಡಬೇಕು ಎನ್ನುವುದಕ್ಕೆ ಪ್ರೇರಣೆ ನೀಡಿವೆ.

ಈರಮ್ಮ ಪೂರ್ವಜರು ಆಂಧ್ರ ಪ್ರದೇಶದ ಮೂಲದ ಅಲೆಮಾರಿಗಳು. ಬುರ್ರಕಥಾ ಮೇಳಗಳನ್ನು ನಡೆಸುತ್ತ ವೇಷ ಹಾಕುತ್ತ ಊರೂರು ಅಲೆದು ಈ ಕಲೆಗಾರಿಕೆಯಿಂದಲೇ ಜೀವನ ನಡಿಸುವುದು ಅವರಿಗೆ ಅನಿವಾರ್ಯವಾಗಿತ್ತು. ಅಂದರೆ ಇವರ ಕಲೆಯೇ ಇವರಿಗೆ ಜೀವನಧಾರವಾಗಿತ್ತು. ಹೀಗಾಗಿ ಇದನ್ನು ಮುಂದಿನ ಜನಾಂಗ ಮುಂದುವರೆಸಿಕೊಂಡು ಹೋಗಬೇಕು ಎನ್ನುವುದು ಹಿರಿಯರ ಅಭಿಲಾಷೆಯಾಗಿತ್ತು. ಮನೆಯಲ್ಲಿ ತಂದೆ-ತಾಯಿಯರು ಬುರ್ರ ಕಥೆಗಾರರು ಆಗಿರುವುದರಿಂದ ಸಹಜವಾಗಿಯೇ ಆಕೆಗೆ ಹಾಡುಗಳತ್ತ ಒಲವು ಮೂಡಿದೆ. ಬಾಲ್ಯದಲ್ಲಿಯೇ ಈರಮ್ಮ ಬುರ್ರಕಥಾ ಮೇಳದಲ್ಲಿ ತಂದೆ - ತಾಯಿಯರೊಡನೆ ಭಾಗವಹಿಸಿ ಹಿಮ್ಮೇಳದಲ್ಲಿ ತಾಯಿಯೋಂದಿಗೆ ಹಾಡುವುದನ್ನು ಕಲಿತ ಈರಮ್ಮ ನಂತರ ಅವುಗಳನ್ನು ಕನ್ನಡದಲ್ಲಿ ಹಾಡುವುದನ್ನು ಕಲಿತಳು.

ತೆಲುಗಿನಲ್ಲಿಯ ಬುರ್ರಕಥೆಗಳನ್ನು ಕನ್ನಡದಲ್ಲಿ ಏಕೆ ಹಾಡ ಬೇಕಾಯಿತು? ಎನ್ನುವ ಪ್ರಶ್ನೆಗೆ ಈರಮ್ಮ ಹೀಗೆ ಉತ್ತರಿಸುತ್ತಾಳೆ. ನಾನು ಚಿಕ್ಕವಳಿರುವಾಗ ಅವ್ವ ಅಪ್ಪರೊಂದಿಗೆ ಊರೂರು ತಿರುಗಬೇಕಾಗುತ್ತಿತ್ತು. ನಮ್ಮ ಮನೆ ಮಾತು ತೆಲುಗು. ಅಪ್ಪ ಬುರ್ರಕಥೆಗಳನ್ನು ತೆಲುಗಿನಲ್ಲೇ ಹಾಡ್ತಿದ್ದ. ಈ ಬಳ್ಳಾರಿ ಭಾಗದಲ್ಲಿ ಹೆಚ್ಚು ಜನ ಕನ್ನಡ ಮಾತಾಡವು. ಎಷ್ಟೋ ಜನ ಅಪ್ಪನಿಗೆ ಕನ್ನಡದಲ್ಲಿ ಕತಿ ಹೇಳಬೇಕನ್ನವ್ರ. ಆದ್ರ ಅಪ್ಪಗ ಬರ್ತಿರಲಿಲ್ಲ. ಆದ್ರೂ ಅಪ್ಪ ಹೇಳುವ (ಹಾಡುವ) ಕಥಿಗಳನ್ನು ಜನ ಲಕ್ಷಕೊಟ್ಟ ಕೇಳ್ತಿದ್ರು ಅದಕ್ಕ ನಾನು ಕನ್ನಡದಲ್ಲಿ ಯಾಕ ಹೇಳ ಬಾರ್ದು ಅಂತ ವಿಚಾರ ಮಾಡಿ ಇವರಿಗೆ ಹ್ಯಾಂಗ ಅರ್ಥ ಆಗಬೇಕು ಅಂತ ನಾನು ಅರ್ಥ ಮಾಡಿಕೊಂಡು ತೆಲುಗಲ್ಲಿದ್ದದ್ದನ್ನು ಕನ್ನಡಕ್ಕೆ ಹೊಂದ್ಸಿ ತೆಲುಗನಾಗ ಇದ್ದದ್ದನ್ನು ಕನ್ನಡದಲ್ಲಿ ಹೀಂಗ ಅನ್ನಬೇಕಂತ ಉಪಾಯ ಮಾಡಿ ಕನ್ನಡದಲ್ಲಿ ಹಾಡೋದು ಕಲಿತೆ[24]. ಎನ್ನುವಲ್ಲಿಜನರ ಅಭಿ ಪ್ರೇರಣೆಗೆ ತಕ್ಕಂತೆ ಹಾಡಬೇಕಾದ ಅಗತ್ಯತೆಯನ್ನು ಎತ್ತಿ ತೋರಿಸುತ್ತದೆ.

ಈರಮ್ಮ ಹಾಡು ಕಲಿಯುವುದಕ್ಕೆ ಜನರ ಪ್ರೇರಣೆಯಂತೆ ತಂದೆಯ ಪ್ರೋತ್ಸಾಹ ಮತ್ತು ಇವಳಲ್ಲಿಯ ಅದ್ಭುತ ಪ್ರತಿಭೆ ಬಹು ಮುಖ್ಯ ಕಾರಣವಾಗಿದೆ. ಈಕೆಗೆ ಐದು ಜನ ಅಣ್ಣ ತಮ್ಮಂದಿರರು. ಇವರು ಮೂವರು ಅಕ್ಕ ತಂಗಿಯರು. ಐದು ಜನ ಅಣ್ಣ ತಮ್ಮಂದಿರರಲ್ಲಿ

ಯಾರೂ ಬುರ್ರಕಥೆಗಳತ್ತ ಆಸಕ್ತಿ ತೋರಿಸಲಿಲ್ಲ. ಅದಕ್ಕಾಗಿ ಮಕ್ಕಳಾರೂ ಕಲಿಯಲಿಲ್ಲವಲ್ಲಾ ಎನ್ನುವ ಕೊರಗು ತಂದೆಗೆ "ನೀನಾದರೂ ಕಲಿಯವ್ವ ಮುಂದ ಬದುಕಿಗಿ ಆಗದ" ಎನ್ನುವ ಮಾತೇ ಈರಮ್ಮನಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. "ಈ ಸರಸ್ವತಿ ಹೀಗೆ ಸುಮ್ಮನೆ ಮೂಲಿಗೆ ಬಿಳಬಾರದೆಂದು ನಾನೇ ಶ್ರದ್ಧೆಯಿಂದ ಕಲಿತೆ. ತಾಯಿ, ನೀನೇ ನನ್ನ ಕಾಪಾಡು ನನ್ನ ಪಾಲಿಗೆ ನೀನು ಒಲಿದರೂ ಸೈ, ಒಲಿಯದಿದ್ದರೂ ಸೈ ಎಂದು ಆ ಸಿತಾರ (ತಂಬೂರಿ) ಹಿಡಕೊಂಡೆ. ಅದನ್ನು ಹಿಡಕೊಂಡೆನೆಂದರೆ ಅಷ್ಟು ಉಲ್ಲಾಸ ನನಗಾಗುತ್ತದೆ. ನಾನು ಕಥಿ ಹೇಳದಿದ್ರೂ ಅದೇಗೋ ನನ್ನ ಆಲಯದಲ್ಲಿ ಲೀನವಾಗಿ ಹೋಗಿ ಬಿಡುತ್ತೇನೆ"[25]. ಎನ್ನುವಲ್ಲಿ ತನ್ನ ಕಲೆಯ ಕುರಿತು ಎಂತಹ ಅಭಿಮಾನ ಹೊಂದಿದ್ದಾಳೆನ್ನುವುದು ವಿಧಿತವಾಗುತ್ತದೆ. ಜೊತೆಗೆ ಹಾಡು ಹೇಳಲಿಕ್ಕೆ ಊರೂರು ತಿರುಗುವಾಗ ಜನ ಪ್ರೀತಿಯಿಂದ ಕಾಣುತ್ತಿದ್ದರು. "ನೀನು ಭಾಳ ಚೆನ್ನಾಗಿ ಕಥಿ ಹೇಳ್ತಿಯಮ್ಮ" ಎನ್ನುವ ಜನರ ಪ್ರಶಂಸೆಯ ಮಾತುಗಳಿಗೆ ಅವಳನ್ನು ಈ ಎತ್ತರಕ್ಕೆ ತಂದು ನಿಲ್ಲಿಸಿವೆ.

ಈರಮ್ಮನಲ್ಲಿಯ ಆಶು ಕವಿತ್ವದ ಪ್ರತಿಭೆ ಅದ್ಭುತವಾದದ್ದು. ಘಟನೆಯ ಒಂದು ಎಳೆ ಸಿಕ್ಕರೆ ಸಾಕು. ಅದನ್ನು ಸುಂದರವಾಗಿ ಅಭಿವ್ಯಕ್ತಿಸುವ ಕಲೆ ಇವಳಲ್ಲಿದೆ ವಸ್ತುವನ್ನು ಪರಿಣಾಮಕಾರಿಯನ್ನಾಗಿಸಿ ಕೇಳುಗರನ್ನು ಮಂತ್ರ ಮುಗ್ಧರನ್ನಾಗಿಸುವ ಶಕ್ತಿ ಇವಳಲ್ಲಿದೆ. ಬುರ್ರ ಕಥೆಗಳನ್ನು ಹಾಡುವಾಗ ನೃತ್ಯ, ಅಭಿನಯ, ಕಥೆಯೊಂದಿಗೆ ಉಪಕಥೆ, ಅಡ್ಡ ಕಥೆ, ಹಾಸ್ಯ, ವಿನೋದ ವಿಡಂಬನೆ. ಹೀಗೆ ಹತ್ತು ಹಲವಾರು ಬಗೆಯ ವೈವಿಧ್ಯತೆಗಳನ್ನು ಅಳವಡಿಸಿಕೊಂಡು ಕಥೆಯನ್ನು ರಂಜನೀಯವಾಗಿ ಹೇಳುತ್ತಾಳೆ.

ಈಕೆಯ ಸುತ್ತಮುತ್ತಲಿನ ಪ್ರಾದೇಶಿಕ ಮತ್ತು ಇಲ್ಲಿಯ ಐತಿಹಾಸಿಕ ಪರಿಸರವೂ ಈಕೆಯ ಮೇಲೆ ಪ್ರಭಾವ ಬೀರಿದೆ. ಇವಳು ಕಥೆ ಹೇಳುವ ಪರಿಸರ ಕರ್ನಾಟಕಾಂಧ್ರ ಗಡಿಭಾಗದ ಪ್ರದೇಶ. ಈ ಭಾಗಕ್ಕೆ ತನ್ನದೇ ಆದ ಐತಿಹಾಸಿಕ ಪರಂಪರೆಯಿದೆ. ಇಲ್ಲಿ ಅನೇಕ ರಾಜರು ಆಳಿ ಹೋಗಿದ್ದಾರೆ. ಅವರು ವೀರ,ಛಲ, ತ್ಯಾಗ, ಸರ್ವ ಧರ್ಮ ಸಾಮನತ್ವಯತೆ, ಮುಂತಾದ ಮೌಲ್ಯಗಳು ಬಿಟ್ಟು ಹೋಗಿದ್ದಾರೆ. ಇಲ್ಲಿ ಅನೇಕ ಯುದ್ಧಗಳು, ಧಾರ್ಮಿಕ ಸಂಘರ್ಷಗಳು, ಸಾಮಾಜಿಕ ಆಂದೋಲನಗಳು ನಡೆದಿವೆ. ಕಂಪ್ಲಿ ಕಮ್ಮಟ ದುರ್ಗದ ಪರಿಸರದಲ್ಲಿ ವಾಸಿಸುವ ಜನಪದರು ಕುಮಾರರಾಮನನ್ನು ಆರಾಧ್ಯ ದೈವವಾಗಿ ಪೂಜಿಸುತ್ತಾರೆ. ಆರಾಧಿಸುತ್ತಾರೆ. ಅಷ್ಟೇ ಅಲ್ಲ ಕುಮಾರರಾಮ ಕರ್ನಾಟಕ, ಆಂಧ್ರ ಮುಂತಾದ ಪ್ರದೇಶಗಳಲ್ಲಿ ಜನಪ್ರೀಯತೆ ಪಡೆದುಕೊಂಡಿದ್ದಾನೆ. ತನ್ನಲ್ಲಿಯ ವೀರ, ಛಲ, ತ್ಯಾಗ, ಶೌಚಗುಣದಿಂದ ಜನಪದರಷ್ಟೇ ಅಲ್ಲ ಶಿಷ್ಟ ಕವಿಗಳ ಮನಸ್ಸೂ ಸೂರೆಗೊಂಡಿದ್ದಾನೆ. ಜನ ಪದರು ಅವನನ್ನು ಗ್ರಾಮ ದೈವ, ಮನೆದೈವವನ್ನಾಗಿ ಬಳ್ಳಾರಿ ಪರಿಸರದಲ್ಲಿ ಪೂಜಿಸುವುದರ ಜೊತೆಗೆ ಗುಡಿಕಟ್ಟಿ ಆರಾಧಿಸುವುದು ಈರಮ್ಮನ ಮೇಲೂ ಪ್ರಭಾವ ಬೀರಿದೆ. ಅಲ್ಲದೆ ಈ ಭಾಗದಲ್ಲಿ ಕಂಡು ಬರುವ ಧರ್ಮ ಸಮನ್ವಯತೆ (ಜೈಸಿಂಗ ರಾಜನ ಕಾವ್ಯ) ಶೈವ - ವೈಷ್ಣವಗಳ ಮತ ಸಂಘರ್ಷ (ಸ್ಯಾಸಿ

ಚಿನ್ನಮ್ಮನ ಕಾವ್ಯ, ಕೃಷ್ಣ ಗೊಲ್ಲರ ಕಾವ್ಯ) ಮುಂತಾದ ಅಂಶಗಳು ಪ್ರಭಾವ ಬೀರಿರುವುದರಿಂದ ಇಂತಹ ದೈವ ಧರ್ಮಕ್ಕೆ ಸಂಬಂಧಿಸಿದ ಕಥೆಗಳನ್ನೇ ಹೆಚ್ಚಾಗಿ ಹಾಡುತ್ತಾಳೆ. ಜೊತೆಗೆ ಈ ಭಾಗದಲ್ಲಿ ಘಟಿಸಿದ ಸಾಮಾಜಿಕ ಘಟನೆಗಳನ್ವಯಿಸಿಯೂ ಹಾಡುತ್ತಾಳೆ.

ಈರಮ್ಮನ ಕಲಾ ಬದುಕಿನಲ್ಲಿ ಇಬ್ಬರು ವ್ಯಕ್ತಿಗಳ ಪಾತ್ರವನ್ನು ಗಮನಿಸಲೇ ಬೇಕು. ಅವರು ಹಿಮ್ಮೆಳದ ಹಾಡುಗಾರರಾದ ಈರಮ್ಮನ ತಂಗಿ ಶಿವಮ್ಮ, ಅತ್ತಿಗೆ (ಅಣ್ಣನ ಹೆಂಡತಿ) ಪಾರ್ವತಮ್ಮ. ಈರಮ್ಮನ ಐವತ್ತು ವರ್ಷಗಳ ಕಲಾ ಜೀವನದಲ್ಲಿ ಜೊತೆಯಲ್ಲೇ ಇದ್ದವರು. ಹಿಮ್ಮೇಳದಲ್ಲಿ ಹಾಡುತ್ತ, ಸ್ಫೂರ್ತಿಯ ಸೆಲೆಯಾಗಿ ನಿಂತವರು. ಹಾಡುಗಾರಿಕೆಯನ್ನು ಮುಂದುವರೆಸುವ , ಕಥಾಭಾವನೆಯ ಏರಿಳಿತಗಳಿಗೆ ಸ್ಪಂದಿಸುವ ಪ್ರತಿಭೆ ಇವರಲ್ಲಿದೆ. ಬುರ್ರ ಕಥನ ಕಲೆಯಲ್ಲಿ ಹಿಮ್ಮೇಳದವರ ಪಾತ್ರ ಪ್ರಮುಖವಾದದ್ದು. ಹಿಮ್ಮೇಳವಿಲ್ಲದಿದ್ದರೆ. ಕಥೆಗಾರಿಕೆ ಅಪೂರ್ಣ ಮುಖ್ಯ ಕಥೆಗಾರನ ಆಶು ಕವಿತ್ವ ಶಕ್ತಿಗೆ ಸ್ಪಂದಿಸುವ ಶಕ್ತಿ ಹಿಮ್ಮೇಳದವರಲ್ಲಿ ಇರಬೇಕು. ಅಂತಹ ಕಲೆಗಾರಿಕೆ ಇವರಿಬ್ಬರಲ್ಲಿಯೂ ಇದೆ. ಕಥೆಗೆ ಪೂರಕವಾದ ಅಂಶಗಳನ್ನು ಇವರಿಬ್ಬರೂ ಒದಗಿಸುತ್ತಾರೆ. ಇವರ ವೈಯಕ್ತಿಕ ಸಂಬಂಧವೂ ಕೂಡ ಅನ್ಯೋನ್ಯವಾಗಿಯೇ ಇದೆ. ಈರಮ್ಮನ ಜೊತೆಯಲ್ಲಿ ಹಾಡುವಾಗ ನಿಮಗೇನನಿಸುತ್ತದೆ? ಎನ್ನುವ ಪ್ರಶ್ನೆಗೆ ಅವರು ಹೀಗೆ ಉತ್ತರಿಸುತ್ತಾರೆ. "ಈರಮ್ಮ ಹಾಡು ಪ್ರಾರಂಭಿಸಿದರೆ ಸಾಕು, ಆಕೆಯ ಹಿಂದೆ ಹಾಡುವ ಶಕ್ತಿ ನಮಗೆ ತಾನಾಗಿಯೇ ಬರುತ್ತದೆ. ಕಥೆ ಏನು ಅನ್ನುವುದು ಒಂದು ಸಾರಿ ಮಾತ್ರ ಆಕೆ ಹೇಳಿದರೆ, ಸಾಕು. ನಾವು ಆಕೆಯ ಜೊತೆಗೆ ಸರಾಗವಾಗಿ ಹಾಡ್ತೀವಿ". ಹಾಡುವಾಗ ನಮಗೇನೂ ತೊಂದರೆ ಎನಿಸುವುದಿಲ್ಲ. ಕಥೆಯನ್ನು ನೆನಪಿಟ್ಟುಕೊಂಡು ಮಹತ್ವದ ತಿರುವುಗಳಲ್ಲಿ ಅದನ್ನು ಎತ್ತರಿಸಿ, ಇಳಿಸಿ ಭಾವಕ್ಕೆ ತಕ್ಕಂತೆ ಹಾಡ್ತೀವಿ" ಎನ್ನುತ್ತಾರೆ. ಮುಂದುವರೆದು ಕಥಾ ಮೇಳದಿಂದ ಬರುವ ಸಂಭಾವನೆ , ಜನಪ್ರೀಯತೆ, ಹಿಮ್ಮೇಳ ಮುಮ್ಮೇಳ ಎನ್ನುವ ಭಾವನೆ ಈ ಮುಂತಾದ ವಿಷಯಗಳ ಕುರಿತು ಕೇಳಿದಾಗ, ಬುರ್ರ ಕಥೆಯಿಂದ ಜನ ಕೊಟ್ಟ ಹಣ, ದವಸ ಧಾನ್ಯ, ಇನ್ನಿತರ ಏನೇ ವಸ್ತುವಿರಲಿ ನಾವು ಮೂವರೂ ಸಮನಾಗಿ ಹಂಚಿಕೊಳ್ಳುತ್ತೇವೆ. ಇಷ್ಟು ವರ್ಷ ನಾವು ಕೂಡಿ ಹಾಡ್ತಾ ಇದ್ದೀವಿ. ಈ ವಿಷಯದ ಕುರಿತು ನಮ್ಮಲ್ಲಿ ಎಂದೂ ತಕ್ರಾರು ಬಂದಿಲ್ಲ. ಜನರಿಂದ ಏನೇ ಸಂಭಾವನೆ ಬರಲಿ ನಮ್ಮಕ್ಕ (ಈರಮ್ಮ) ಎಲ್ಲರಿಗೂ ಸಮನಾಗಿ ಹಂಚತಾಳ. ಅಂತಹ ದೊಡ್ಡ ಗುಣ ಇರುವುದರಿಂದ ಇಷ್ಟು ವರ್ಷ ನಾವು ಕೂಡಿ ಹಾಡುತ್ತಿದ್ದೇವೆ ಎಂದು ಹೇಳುವಲ್ಲಿ ಇಂತಹ ಸೌಹಾರ್ದಯುತವಾದ ವಾತಾವರಣ ಈರಮ್ಮನ ಕಲಾ ಬದುಕಿಗೆ ಪೂರಕ ಅಂಶವಾಗಿದೆ ಎನಿಸುತ್ತದೆ. ಈರಮ್ಮನಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನೊಳಗೊಂಡು ಅನೇಕ ಪ್ರಶಸ್ತಿ, ಪ್ರಶಂಸೆ ಬಂದಾಗಲೂ ಇವರಿಬ್ಬರ ಮನಸ್ಸಿನಲ್ಲಿ ಯಾವುದೇ ತರಹದ ಬೇರೆ ಭಾವನೆಗಳಿಲ್ಲ. ಹೆಚ್ಚು ಸಂತಸ, ಸಂಭ್ರಮ ಪಟ್ಟವರು ಇವರೆ. ಈರಮ್ಮನ ಮೇಲೆ ಅಪಾರವಾದ ಭಕ್ತಿ ಇವರಲ್ಲಿದೆ. ಪ್ರೀತಿ, ವಿಶ್ವಾಸವಿದೆ. ಬಹು ದೊಡ್ಡ ಕಲಾವಿದೆ ಎನ್ನುವ ಭಾವನೆಯೂ ಇದೆ. ನಮ್ಮವಳೆಂಬ ಆದರ ಅಭಿಮಾನವೂ ಇದೆ. ಕುಟುಂಬದವರೂ ಅಣ್ಣ - ತಮ್ಮ, ಅಕ್ಕ ತಂಗಿಯರು, ಅತ್ತಿಗೆ - ಅಳಿಯಂದಿರು ಮುಂತಾದ ಸಂಬಂಧಿಕರು ಈರಮ್ಮನ ಬಗ್ಗೆ ಹೆಮ್ಮೆ ಪಡುತ್ತಾರೆ. ಇಂತಹ ಅನ್ಯೋನ್ಯ ಪರಿಸರ ಈರಮ್ಮ ಒಬ್ಬ ಶ್ರೇಷ್ಠ ಕಲಾವಿದೆಯಾಗಲು ಪೂರಕ ಅಂಶವಾಗಿ ಪರಿಣಮಿಸಿದೆ.

ಬುರ್ರ ಕಥಾ ಈರಮ್ಮನಿಗೆ ದೊರೆತ ಪ್ರಶಸ್ತಿ / ಪುರಸ್ಕಾರಗಳು :

ಬುರ್ರ ಕಥಾ ಈರಮ್ಮನಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ಅವು ಈ ರೀತಿಯಾಗಿವೆ.

ಬುರ್ರ ಕಥಾ ಈರಮ್ಮ ಪಡೆದು ಪ್ರಶಸ್ತಿಗಳು:

1) 1999ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1-11-1999)

2) 2003 ನೇ ಸಾಲಿನ ಮಂಗಳೂರಿನ ಸಂದೇಶ ಕಲಾ ಪ್ರಶಸ್ತಿ (10,000 ನಗದು ಹಾಗೂ ಪ್ರಶಸ್ತಿ ಫಲಕ) (14-2-2003)

3) 2003ನೇ ಸಾಲಿನ ಕರ್ನಾಟಕ ಸರಕಾರದ ಡಾ. ಬಾಬಾ ಸಾಹೇಬ ಅಂಬೇಡ್ಕರ ಪ್ರಶಸ್ತಿ (25,000 ನಗದು ಹಾಗೂ ಪ್ರಶಸ್ತಿ ಪತ್ರ) (14-04-02003)

4) 2004ನೇ ಸಾಲಿನ ಶ್ರೀ ಅಡವೀಂದ್ರ ಮಹಾ ಸ್ವಾಮಿಗಳವರ ಮಠ, ಗದಗ ಅವರು ನೀಡಿದ ಬುರ್ರ ಕಥಾ ಕಲಾ ಪ್ರಶಸ್ತಿ (2-3-2004)

ಬುರ್ರ ಕಥಾ ಈರಮ್ಮನಿಗೆ ದೊರೆತ ಪುರಸ್ಕಾರ ಪತ್ರಗಳು :

1) ಸ್ಟಾರ್ ಆಫ್ ಬಳ್ಳಾರಿ ಪತ್ರಿಕೆಯ ಪ್ರಥಮ ವಾರ್ಷಿಕೋತ್ಸವದ ಪ್ರತಿಭಾ ಪುರಸ್ಕಾರ (31-01-2000)

2) ಬಳ್ಳಾರಿಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನೀಡಿದ ಪುರಸ್ಕಾರ (8-03-2000)

ಬುರ್ರ ಕಥಾ ಈರಮ್ಮನಿಗೆ ದೊರೆತ ಪ್ರಶಸ್ತಿ ಪತ್ರಗಳು

1) ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ದಿನಾಂಕ 1-12-1992 ರಂದು ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ.

2) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಳ್ಳಾರಿ ದಿನಾಂಕ 14-04-1993 ರಂದು ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ.

3) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಳಗಾವಿಯು ಗಡ ಹಿಂಗ್ಲಜದಲ್ಲಿ ಆಯೋಜಿಸಿದ ಗಡಿನಾಡ ಉತ್ಸವ 2000 ಸಂದರ್ಭದಲ್ಲಿ ದಿನಾಂಕ 29-03-2000 ರಂದು ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ.

4) ಸ್ವರ ಸಂಗಮ ಸಾಂಸ್ಕೃತಿಕ ಬಳಗ ಬಳ್ಳಾರಿಯ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆ ನೀಡ ಗೌರವಿಸಿದೆ.

5) ಅ. ಯು. ಶಿವಕುಮಾರ ಗೌಡ ವಕೀಲರು ಬಳ್ಳಾರಿ ಇವರ ಪುಣ್ಯ ತಿಥಿಯಲ್ಲಿ ಪ್ರಶಸ್ತಿ ಪತ್ರ ಮತ್ತು ಸ್ಮರಣೆ ಕಾಣಿಕೆ ನೀಡಿ ಗೌರವಿಸಿದೆ.

6) 2004-05 ನೇ ಸಾಲಿನ ಭಾರತ ಸರಕಾರದ ಪ್ರಸಾರ ಭಾರತೀಯ ವಿಶೇಷ ಗೌರವಕ್ಕೆ ಪಾತ್ರರಾಗಿದ್ದಾರೆ.

ಬುರ್ರ ಕಥಾ ಈರಮ್ಮನಿಗೆ ದೊರೆತ ಪ್ರಶಂಸನೀಯ ಪತ್ರಗಳು :

1) ಕರ್ನಾಟಕ ಸಂಘ, ಕನ್ನಡ ಅಧ್ಯಯನ ಸಂಸ್ಥೆ ಸ್ನಾತಕೋತ್ತರ ಕೇಂದ್ರ, ಕೃಷ್ಣ ದೇವರಾಯ ನಗರ, ಸೊಂಡೂರು ದಿನಾಂಕ 28-08-92 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿದೆ.

2) ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ದಿನಾಂಕ 4-1-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿದೆ.

3) ಡಾ. ಕೆ. ಎಂ. ಮೈತ್ರಿಪ್ರವಾಚಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯವರು ದಿನಾಂಕ 1-5-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿದ್ದಾರೆ.

4) ಜಾನಪದ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ದಿನಾಂಕ 14-08-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿದೆ.

5) ಡಾ. ಬಿ. ಎಸ್. ಮಾರುತಿಯವರು ದಿನಾಂಕ 11.07.1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸರುವರು.

6) ಡಾ. ಸ. ಚಿ. ರಮೇಶ ಪ್ರವಾಚಕರು, ಜಾನಪದ ವಿಭಾಗ , ಕನ್ನಡ ವಿಶ್ವವಿದ್ಯಾಲಯ, ಹಂಪಿ ರವರು ದಿನಾಂಕ 5-12-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿರುವರು.

7) ಡಾ. ನಿಂಗಪ್ಪ ಮುದೇನೂರು ಅವರು ದಿನಾಂಕ 7.12.1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿರುವರು.

ಆಧಾರಗಳು

1) ಅಶ್ವಿ - ಎನ್ನುವುದು ಇವರ ಕುಲದ ಬೆಡಗು. ಅಶ್ವಿ ಎಂದರೆ ಕುದುರೆ ಎಂದರ್ಥ ಅಶ್ವಿಯರು ಎಂದರೆ ಕುದುರೆ ಗೋತ್ರ ಎಂದರ್ಥವಾಗುತ್ತದೆ. ಈಕೆಯ ಹಿರಿಯರು ಊರಿಂದೂರಿಗೆ ಅಲೆದಾಡುವ ಸಂದರ್ಭದಲ್ಲಿ ಸಾಮಾನು ಸರಂಜಾಮಗಳನ್ನು ಸಾಗಿಸಲು ಕುದುರೆಗಳನ್ನು ಬಳಸುತ್ತಿದ್ದರು. ಇವರ ಜೀವನಕ್ಕೆಕುದುರೆಗಳೆ ಆಧಾರವಾಗಿರುತ್ತಿದ್ದವು. ಹೀಗಾಗಿ ಅಶ್ವಿಯರು ಎಂದು ಬಳಸಿಕೊಂಡಿದ್ದಾರೆ.

2) ಸ್ವತಃ ಈರಮ್ಮನೇ ಈ ವಿಷಯ ಕುರಿತು ಮಾಹಿತಿ ನೀಡಿದ್ದಾಳೆ.

3) ಬುರ್ರ ಕಥಾ ಈರಮ್ಮನಿಂದ ಈ ಮಾಹಿತಿ ಸಂಗ್ರಹಿಸಲಾಗಿದೆ.

4) ಸದರಿ ವಿಷಯ (ಮದುವೆ) ಕುರಿತು ಈರಮ್ಮನಿಂದ ತಿಳಿದುಕೊಳ್ಳಲು ಹತ್ತಾರು ಸಲ ಪ್ರಯತ್ನ ಪಡಬೇಕಾಯಿತು. ಕಾರಣ ವೈವಾಹಿಕ ಬದುಕಿನ ದುರಂತತೆ , ಆ ಜೀವನದ ಜಿಗುಪ್ಸೆ.

5) ಇವನೂ ಒಬ್ಬ ವೇಷಹಾಕುವ ಕಲಾವಿದ.

6) ಸ್ವತಃ ಈರಮ್ಮನೇ ಈ ಮಾತನ್ನು ಹೇಳಿದ್ದಾಳೆ.

7) ಬುಡುಗ ಜಂಗಮರು ಮಾಟ, ಮಂತ್ರಗಳಲ್ಲಿ ಅಪಾರ ನಂಬಿಕೆ ಇಟ್ಟಿರುತ್ತಾರೆ.

8) ಈರಮ್ಮನ ಅತ್ತಿಗೆ ಪಾರ್ವತಮ್ಮ ಈ ವಿಷಯ ತಿಳಿಸಿದ್ದಾಳೆ.

9) ಮದುವೆಯಾಗದಿದ್ದರೆ ಮೋಕ್ಷ ಸಿಗದು ಎನ್ನುವ ನಂಬಿಕೆ ಬುಡುಗ ಜಂಗಮರಲ್ಲಿದೆ.

10) ಇವನ ಊರು ಶಿರಗುಪ್ಪ ತಾಲೂಕಿನ ಹೊಸಳ್ಳಿ. ಇವನ ಮೊದಲ ಹೆಂಡ್ತಿ ಕಮಲಮ್ಮ. ಈಕೆಗೆ ಆರು ಜನ ಗಂಡು ಐದು ಜನ ಹೆಣ್ಮಕ್ಕಳು.

11) ಬುರ್ರ ಕಥಾ ಈರಮ್ಮ ಅಲೆಮಾರಿಯ ಆತ್ಮ ಕಥನ : ಡಾ।। ನಿಂಗಪ್ಪ ಮುದೇನೂರು, ಪುಟ : 24

12) ಈರಮ್ಮ ಈ ಮಾಹಿತಿ ಒದಗಿಸಿದ್ದಾಳೆ.

13) ಬುರ್ರ ಕಥಾ ಈರಮ್ಮನೇ ಹೇಳಿರುವಳು.

14) ಈರಮ್ಮನ ಮಗಳು ಜೀಚಮ್ಮ (ಲಕ್ಷ್ಮೀ)

15) ವೈವಾಹಿಕ ಜೀವನ ಕುರಿತು ಮಾಹಿತಿಯನ್ನು ಸ್ವತಃ ಈರಮ್ಮನೇ ಹೇಳಿಕೊಂಡಿದ್ದಾಳೆ.

16) ಸುಖ - ದುಃಖ ಸಂದರ್ಭಗಳಲ್ಲಿ ಕುಡಿಯುವದೊಂದು ಬುಡ್ಗ ಜಂಗಮರಲ್ಲಿ ಸಂಪ್ರದಾಯವಾಗಿದೆ.

17) ಈರಮ್ಮ ಈ ಮಾಹಿತಿ ನೀಡಿದ್ದಾಳೆ.

18) ಈರಮ್ಮನ ಸಂದರ್ಶನ

19) ಈರಮ್ಮ ಸಂದರ್ಶನದಲ್ಲಿ ಹೇಳಿದ ಮಾತುಗಳು.

20) ಬುರ‍್ರ ಕಥಾ ಈರಮ್ಮ : ಡಾ. ನಿಂಗಪ್ಪ ಮುದೆನೂರು, ಪುಟ : 32

21) ಅಲ್ಲೇ , ಪುಟ :33

22) ಮಾಹಿತಿ ನೀಡಿದವರು ಸಣ್ಣ ರಾಮಣ್ಣ, ವಯಸ್ಸು 55, ಹಳೆದ ರೋಜಿ

23) ಬುರ‍್ರ ಕಥಾ ಈರಮ್ಮ : ಡಾ. ನಿಂಗಪ್ಪ ಮುದೆನೂರು, ಪುಟ 24

24) ಬುರ‍್ರ ಕಥಾ ಈರಮ್ಮ ಸಂದರ್ಶನದಲ್ಲಿ ಹೇಳಿದ ಮಾತುಗಳಿವು.

25) ಬುರ‍್ರ ಕಥಾ ಈರಮ್ಮ : ಡಾ. ನಿಂಗಪ್ಪ ಮುದೆನೂರು, ಪುಟ 28

26) ಮಾಹಿತಿದಾರರು - ಶಿವಮ್ಮ ಮತ್ತು ಪಾರ್ವತಮ್ಮ ಈರಮ್ಮನ ಹಾಡುಗಾರಿಕೆಯ ಹಿಮ್ಮೇಳದ ಗಾಯಕಿಯರು.

ಅಧ್ಯಾಯ - 5

ಬುರ್ರಕಥಾ ಈರಮ್ಮ ಹಾಡುವ ಕಥನ ಕಾವ್ಯಗಳು

ಅಧ್ಯಾಯ - 5

ಬುರ್ರ ಕಥಾ ಈರಮ್ಮ ಹಾಡುವ ಕಥನ ಕಾವ್ಯಗಳು

ಬುರ್ರ ಕಥೆಗಳೇ ಈರಮ್ಮನ ಜೀವನದ ಉಸಿರು. ಈರಮ್ಮನಿಗೆ ಕಥೆಗಳೇ ಅವಳ ಜೀವನದ ಹಾಸು ಹೊಚ್ಚು , ಕಥೆಗಳಿಗಾಗಿಯೇ ತನ್ನ ಇಡೀ ಜೀವನವನ್ನು ಮುಡುಪಾಗಿಟ್ಟವಳು. ಹಾಡು ಎಂದರೆ ಆಕೆಗೆ ಎಲ್ಲಿಲ್ಲದ ಉತ್ಸಾಹ. ಹಗಲು ಇರುಳೆನ್ನದೆ ಸ್ಫೂರ್ತಿಯಿಂದ ರಂಜನೀಯವಾಗಿ ಹಾಡುವ ಕಲೆ ಈಕೆಯಲ್ಲಿಯ ಅದ್ಭುತ ಪ್ರತಿಭೆಗೆ ಸಾಕ್ಷಿಯಾಗಿ ನಿಂತಿದೆ. ಜೀವನದಲ್ಲಿ ತಾನೆಷ್ಟೇ ಕಷ್ಟಗಳನ್ನು ಅನುಭವಿಸಿದರು. ಹಾಡಿನಿಂದ ದುಃಖವನ್ನು ಮರೆತವಳು. ತಾನು ನೋವುಂಡರೂ ನಲಿವನ್ನೇ ನೀಡುವ ಪ್ರವೃತ್ತಿ ಅವಳದು. ಅನೇಕ ಮಹಾಕಾವ್ಯಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡು ಸದಾ ಊರೂರು ಅಲೆಯುತ್ತ ದಿನ, ವಾರಗಟ್ಟಲೆ ಹಾಡು ಹೇಳುವವಳು. ತೆಲಗು ಮತ್ತು ಕನ್ನಡ ಎರಡೂ ಭಾಷೆಯಲ್ಲಿ ಹಾಡುವ ಅದ್ಭುತ ಪ್ರತಿಭೆ ಇವಳಲ್ಲಿದೆ. ತೆಲುಗಿನಲ್ಲಿಯ ಬುರ್ರ ಕಥೆಗಳನ್ನು ಕನ್ನಡಕ್ಕೆ ತಂದು ವಿಶಿಷ್ಟ ಶೈಲಿಯಲ್ಲಿ ಹಾಡುವ ಕಲೆ ಇವಳಿಗೆ ಸಿದ್ಧಿಸಿದೆ.

ಊರೂರು ತಿರುಗಿ ಬುರ್ರ ಕಥೆಗಳನ್ನು ಹೇಳುವುದೇ ಈರಮ್ಮನ ವೃತ್ತಿ. ಜನ ತಮ್ಮ ಬಿಡುವಿನ ಸಮಯದಲ್ಲಿ, ಹಬ್ಬ ಹರಿದಿನಗಳಲ್ಲಿ, ಶುಭ ಸಮಾರಂಭಗಳಲ್ಲಿ ಹಾಗೂ ತಮಗಾದ ಸಂತೋಷ ಸಂದರ್ಭದಲ್ಲಿ ಬುರ್ರ ಕಥೆಗಳನ್ನು ಹಾಡಿಸಲು ಇಚ್ಛಿಸುತ್ತಾರೆ. ಯುಗಾದಿ, ನಾಗಪಂಚಮಿ, ದಸರಾ, ದೀಪಾವಳಿ, ಗೌರಿ ಹುಣ್ಣಿಮೆ, ಶಿವರಾತ್ರಿ ಜಾಗರಣೆ ಮುಂತಾದ ಹಬ್ಬ ಹರಿದಿನಗಳಲ್ಲಿ ಹಾಡುತ್ತಾಳೆ. ಅಲ್ಲದೆ ಹೆಣ್ಣು ಮಕ್ಕಳು ತಮ್ಮ ತವರು ಮನೆಗೆ ಬಂದಾಗ, ಮದುವೆ ಮಾಡುವಾಗ , ಮಗುವಿನ ತೊಟ್ಟಿಲಿಡುವಾಗ ಮನೆ ಶಾಂತಿ ಮಾಡುವಾಗ, ಹೆಣ್ಣು ಮಕ್ಕಳು ದೊಡ್ಡವರಾದಾಗ ನಡೆಯುವ ಕಾರ್ಯಕ್ರಮದಲ್ಲಿ ಹಾಡುತ್ತಾಳೆ. ಹೀಗೆ ಯಾರಾದರೂ ತಿಳಿಕೊಂಡಾಗ ರಾತ್ರಿ ಜಾಗರಣೆಯಲ್ಲಿಯೂ ಹಾಡುತ್ತಾಳೆ. ಮನುಷ್ಯನ ಸುಖ ದುಃಖಗಳ ಸಂದರ್ಭಗಳಲ್ಲಿ ಹಾಡುತ್ತಾಳೆ.

1) ಈರಮ್ಮ ಬುರ್ರ ಕಥೆಗಳನ್ನು ಹಾಡುವ ರೀತಿ :

ಜನಪದ ಕಲಾಪ್ರದರ್ಶನಕ್ಕೆ ತನ್ನದೇಯಾದ ವಿಧಿ ವಿಧಾನಗಳಿವೆ. ಪ್ರತಿಯೊಂದು ಕಲಾ ಪ್ರಕಾರ ಕೂಡ ಪೂಜೆ,ಸ್ತುತಿ, ಮಂಗಳ ಈ ಮೂರು ಅಂಶಗಳೊಂದಿಗೆ ಪ್ರಾರಂಭವಾಗಿ ಸಂಪನ್ನವಾಗುತ್ತದೆ. ಪ್ರಾರಂಭದಿಂದ ಅಂತ್ಯದ ನಡುವೆ ಕಲಾವಿದರು ತಮ್ಮದೇ ಆದ ವಿಧಿ ವಿಧಾನಗಳನ್ನು ಹಾಕಿಕೊಂಡಿರುತ್ತಾರೆ. ಇದಕ್ಕೆ ಈರಮ್ಮ ಕೂಡ ಹೊರತಾಗಿಲ್ಲ. ಈಕೆ ಹಾಡು ಪ್ರಾರಂಭಿಸುವುದರಿಂದ ಹಿಡಿದು ಅದು ಮುಕ್ತಾಯಗೊಳಿಸುವವರೆಗೂ ತನ್ನದೇ ಆದ ಕೆಲವು ವಿಧಿ ವಿಧಾನಗಳನ್ನು ಆಚರಿಸುತ್ತಾಳೆ. ಜನರು ಈರಮ್ಮ ಇರುವಲ್ಲಿಗೆ ಬಂದು ಕಥೆ ಹೇಳಲು ವೀಳ್ಯ ಕೊಟ್ಟು ದಿನ ನಿಗದಿಪಡಿಸಿ ಕೊಳ್ಳುತ್ತಾರೆ. ಕಥೆ ಹೇಳುವ ದಿನದಂದು ಈರಮ್ಮ ಇದ್ದಲ್ಲಿಗೆ ಬಂದು ತಮ್ಮೂರಿಗೆ ಕರೆದೊಯ್ಯುವರು. ಕಥೆ ಹೇಳುವ ಸ್ಥಳವನ್ನು ಶುಚಿಗೊಳಿಸುವರು. ಈರಮ್ಮ ಕಥೆ ಹೇಳುವ ದಿನ ಮಂಗಳವಾರ ಮತ್ತು ಶುಕ್ರವಾರ, ಮನೆದೇವರ ವಾರವಾಗಿದ್ದರೆ. ಸ್ನಾನ, ಪೂಜೆ ಮುಗಿಸಿಕೊಂಡೇ ಕಥೆ ಹೇಳುವಳು. ಈರಮ್ಮ

ಕಥೆ ಹೇಳುವ ದಿನದಂದು, ಊರ ಜನರಿಗೆ ರಾತ್ರಿ ಕಥೆ ಇದೆಯೆಂದು "ದಬಡಿ" ಬಡಿದು (ಡಂಗುರ ಸಾರಿ) ಊರೆಲ್ಲಾ ಸಾರುವರು. ಈರಮ್ಮ ಹಾಡುವ ಸ್ಥಳಕ್ಕೆ ಕಥೆ ಕೇಳಲಿಕ್ಕೆ ಬಂದವರೆಲ್ಲಾ ಚಾಪೆ, ಜಮಕಾನ, ತುಂಬಿದ ಚೆರಿಗೆ, ಊದಿನ ಕಡ್ಡಿ, ಹೂವು ಕಾಯಿ - ಕರ್ಪೂರ, ಕಾಳು , ಅಕ್ಕಿ ಇತ್ಯಾದಿ ತರುತ್ತಾರೆ. ಇನ್ನೇನು ಕಥೆ ಆರಂಭವಾಗುತ್ತದೆ ಎಂದಾಗ , ತುಂಬಿದ ಚೆರಿಗೆಯ ಮೇಲೆ ಕಾಯಿ ಇಟ್ಟು, ಕಾಳು ಹಾಕಿದ ತಟ್ಟೆಯ ಮೇಲೆ, ನಿಧಿಯಂತೆ ಅದನ್ನು ಇಡುತ್ತಾರೆ. ಕಾಯಿಗೆ ಅರಿಶಿನ (ಭಂಡಾರ) ಕುಂಕುಮ ಹಚ್ಚಿ ಹೂವು ಮುಡಿಸುತ್ತಾರೆ. ಇದು ಆ ಕಥೆಗೆ ಹಿನ್ನೆಲೆಯಾಗಿ ರೂಪಗೊಂಡ ದೇವರು. ಅಂದರೆ ಆವತ್ತು ಈರಮ್ಮ ಯಾವ ಕಥೆ ಹೇಳುತ್ತಾಳೋ ಆ ದೇವರು ಇದಾಗಿರುತ್ತದೆ. ಅಥವಾ ಆ ಕಥೆಗೆ ಅದು ಸಂಬಂಧಿಸಿರುತ್ತದೆ. ಮುಖ್ಯವಾಗಿ ಹೇಳಬೇಕೆಂದರೆ, ಆ ಕಥಗೆ ಭಂಗಬಾರದಿರಲೆಂದು ಜನಪದರೇ ಕಂಡು ಕೊಂಡ ಒಂದು ನಂಬಿಕೆಯ ಆಶಯವೂ ಆಗಿರುತ್ತದೆ.

ಕಥೆಯ ಪ್ರಾರಂಭದಲ್ಲಿ ಈರಮ್ಮ ತನ್ನ ಕುಲದೈವಗಳಾದ ಜಂಬಲಮ್ಮ, ಸುಂಕಲಮ್ಮ ಇತ್ಯಾದಿ ಸುತ್ತ ಮುತ್ತಲಿನ ಗ್ರಾಮ ದೇವತೆಗಳನ್ನು, ಭೂಮಿ ತಾಯಿಯನ್ನು ನೆನೆದು, ಪ್ರಾರ್ಥಿಸಿ, ಕಥೆಯ ಆಶಯಕ್ಕೆ ತಕ್ಕಂತೆ ಬುರ್ರ (ತಂಬೂರಿ) ಮತ್ತು ಗೆಗ್ಗರಿ ಬಾರಿಸ್ತಾ ಹಾಡುತ್ತಾಳೆ. ಡಿಮ್ಕಿ ಬಾರಿಸುತ್ತ ಅವಳ ಹಿಂದೆ ಸಹ ಗಾಯಕಿ (ಹಿಮ್ಮೇಳ) ಯರಾದ ಈರಮ್ಮನ ತಂಗಿ ಮತ್ತು ಅತ್ತಿಗೆ ಹಾಡುತ್ತಾರೆ.

ಈರಮ್ಮ ಕಥೆಯ ಪಾತ್ರದಲ್ಲಿ ಒಂದಾಗಿ ಏಕ ಪಾತ್ರಾಭಿನಯ ಮಾಡುತ್ತ ಕುಣಿಯುತ್ತಾಳೆ.

ಈರಮ್ಮನ ಕಥಾ ಶೈಲಿ ಅದ್ಭುತವಾದದ್ದು. ಸುಮಧುರವಾದ ಕಂಠದಿಂದ ಜನಮನವನ್ನು ಆಕರ್ಷಿಸುವ, ತನ್ನ ಹಾಡಿನ ಮೋಡಿಯಿಂದ ಅವರನ್ನು ಮಂತ್ರ ಮುಗ್ಧರನ್ನಾಗಿಸುವ ಪ್ರತಿಭಾ ಶಕ್ತಿ ಇವಳಲ್ಲಿದೆ. ಕಥಾ ವಸ್ತುವಿಗೆ ತಕ್ಕಂತೆ ಹಾಡುವ , ನರ್ತಿಸುವ, ಅಭಿನಯಿಸುವ ಕಲೆ ಅನನ್ಯವಾದದ್ದು. ಸುಮಾರು ಐವತ್ತು ವರ್ಷಗಳಿಗಿಂತಲೂ ಹೆಚ್ಚಾಗಿ ಬುರ್ರ ಕಥಾ ಮೇಳಗಳಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾಳೆ. ಸುದೀರ್ಘಕಾಲ ಹಾಡಿನ ಅನುಭವ ಇವಳಲ್ಲಿರುವುದರಿಂದ ಜನಾಭಿಲಾಷೆಗೆ ತಕ್ಕಂತೆ ಹಾಡುವ , ಅವರನ್ನು ರಂಜಿಸುವ ,ಅವರ ಭಾವನೆಗಳಿಗೆ ಸ್ಪಂದಿಸುವ ಶಕ್ತಿ ಇವಳಿಗಿದೆ. ಆದ್ದರಿಂದಲೇ ಕರ್ನಾಟಕಾಂಧ್ರ ಗಡಿ ಭಾಗದಲ್ಲಿ ಇವಳು ಅಪಾರವಾದ ಜನಪ್ರಿಯತೆಯನ್ನು ಹೊಂದಿದ್ದಾಳೆ. ಒಂದು ಕೈಯಲ್ಲಿ ಬುರ್ರ ಇನ್ನೊಂದು ಕೈಯಲ್ಲಿ ಗೆಗ್ಗರಿ ಹಿಡಿದು ಕಥೆ ಹಾಡಲು ತೊಡಗಿದರೆ ಸಾಕು, ಮಾಯಾ ಲೋಕವನ್ನೇ ಸೃಷ್ಟಿಸಿ ಬಿಡುತ್ತಾಳೆ. ಕಥೆ ವೀರನದಾಗಿದ್ದರೆ, ವೀರನಾಗಿಯೂ, ಭಕ್ತಿಯದಾಗಿದ್ದರೆ, ಭಕ್ತನಾಗಿಯೂ, ಸನ್ನಿವೇಶಕ್ಕೆ ತಕ್ಕ ಹಾಗೆ ಜನರನ್ನು ಭಾವುಕರನ್ನಾಗಿಸುವ , ನಗಿಸುವ, ಆನಂದಿಸುವ ಇವಳ ಕಥನ ಕಲೆ ಅಪೂರ್ವವಾದುದು. ಕಥೆ ಹೇಳುವಾಗ ಒಂದು ಸಂಧು (ಅಧ್ಯಾಯ) ಮುಗಿದಾಗಲೆಲ್ಲಾ ಈರಮ್ಮ ಒಂದು ತೆಂಗಿನ ಕಾಯಿ ಒಡೆಯುತ್ತಾಳೆ. ಮುಂಚಿತವಾಗಿಯೇ ಜನರು ಕಾಯಿಗಳನ್ನು ಸಂಗ್ರಹಿಸಿಟ್ಟು ಕೊಂಡಿರುತ್ತಾರೆ. ಕಥೆಯಲ್ಲಿ ಬರುವ ಯುದ್ಧದಲ್ಲಿ ವೀರನು ವೈರಿಯನ್ನು ಸೋಲಿಸಿದರೆ, ಕೊಂದರೆ ತಕ್ಷಣ ಒಂದು ಕಾಯಿ ಒಡೆಯುತ್ತಾಳೆ. ಕಾಯಿ ಒಡೆದರೆ ಅದು ಅವರಿಗೆ ಮುಟ್ಟುವುದೆಂಬ ನಂಬಿಕೆಯಿದೆ. ಇಲ್ಲಿಗೆ ಕಥೆಯ ಒಂದು ಸಂಧು, ಸಂದರ್ಭ ಮುಗಿಯಿತೆಂದು ಇದರರ್ಥ ಕಥೆಯ ಮುಂದಿನ ಸಂದರ್ಭಕ್ಕೆ ಮತ್ತೊಂದು ಹೊಸ ಕಾಯಿ ಇಟ್ಟು, ಪೂಜೆ, ಮಾಡಿ ಕಥೆ ಪ್ರಾರಂಭಿಸುತ್ತಾಳೆ. ಈರಮ್ಮ ಹಾಡಲು ಪ್ರಾರಂಭಿಸಿದರೆ, ಸಮಯ ಕಳೆಯುವದೇ ಗೊತ್ತಾಗುವುದಿಲ್ಲ. ರಾತ್ರಿ ಹಾಡಲು ಪ್ರಾರಂಭಿಸಿದರೆ ಒಂದು ಸಂಧು ಮುಗಿಯಲಿಕ್ಕೆ ಬೆಳಗು

ಹರಿಯಾವುದು. ಮುಂದಿನ ಕಥೆ ಭಾಗವನ್ನು ಮರುದಿನ ರಾತ್ರಿ ಮುಂದುವರೆಸುವಳು. ಹೀಗೆ ಈರಮ್ಮನ ಒಂದು ಕಥೆಯ ನಾಲ್ಕೈದು ಸಂದು ಮುಗಿಸಲು ನಾಲ್ಕೈದು ದಿನಗಳೇ ಬೇಕಾಗುತ್ತದೆ. ಈರಮ್ಮ ಹಾಡುವ ಒಂದೊಂದು ಕಾವ್ಯ ಮುಗಿಯಬೇಕಾದರೆ ನಾಲ್ಕು ದಿನದಿಂದ, ಎಂಟು ದಿನಗಳು ಬೇಕಾಗುತ್ತದೆ. ಈರಮ್ಮನಿಗೆ ಕಥೆಯನ್ನು ಹಿಗ್ಗಿಸುವ , ಕುಗ್ಗಿಸುವ ಕಲೆಗಾರಿಕೆ ಸಿದ್ಧಿಸಿದೆ. ಒಂದು ಕಥೆಯನ್ನು ಮೂರ್‍ನಾಲ್ಕು ಗಂಟೆಗಳಲ್ಲೆ ಹಾಡಿ ಮುಗಿಸಬಲ್ಲಳು. ಅದೇ ಕಥೆಯನ್ನು ನಾಲ್ಕು ದಿವಸಕ್ಕಿಂತಲೂ ಹೆಚ್ಚು ದಿವಸಗಳವರೆಗೂ ಹಾಡಬಲ್ಲಳು. ಕಥೆ ಹೇಳುವಾಗ ಈರಮ್ಮನಿಗೆ ನಿದ್ದೆ ಬರಬಾರದೆಂದು , ಜನರು ಮಧ್ಯದಲ್ಲಿ ಚಹಾ ಕುಡಿಸುತ್ತಾರೆ. ಈರಮ್ಮ ರಾತ್ರಿ ಹೊತ್ತು ಸ್ವಲ್ಪೆ ಆಹಾರ ಸೇವಿಸುವಳು. ಹೆಚ್ಚು ಉಂಡರೆ ಕಥೆ ಹೇಳುವಾಗ ನಿದ್ದೆ ಬಂದರೆ ಎಂಬ ಭಯ ಅವಳಲ್ಲಿದೆ. ಜನರು ಈರಮ್ಮನಿಗೆ ಪ್ರೀತಿಯಿಂದ ಉಪಚರಿಸುತ್ತಾರೆ. ಈರಮ್ಮ ದೈಹಿಕವಾಗಿ ಚೆನ್ನಾಗಿದ್ದರೆ ಹಾಡು, ಕಥೆ ಗಟ್ಟಿಯಾಗಿರುತ್ತವೆ ಎನ್ನುವ ಭಾವನೆ ಅವರದಾಗಿದೆ.

ಈರಮ್ಮ ಹಾಡುವ ಕಥೆಯಲ್ಲಿ ಬರುವ ಸತ್ಯವನ್ನು ಕೇಳಿ ಜನರು ಸಂತೋಷ ಪಡುತ್ತಾರೆ. ಜನ ತಾವೂ ಸತ್ಯವಾನರಾಗಬೇಕೆಂದು ಕೊಳ್ಳುತ್ತಾರೆ. ಬದುಕಿನಲ್ಲಿ ಎಷ್ಟೇ ಕಷ್ಟ ಬಂದರೂ, ಕಥೆಯಲ್ಲಿ ಬರುವ ಕಥಾ ನಾಯಕರಂತೆ ಧೈರ್ಯದಿಂದ ಕಷ್ಟವನ್ನು ಎದುರಿಸಬೇಕೆಂದು ಕೊಳ್ಳುತ್ತಾರೆ. ಅಂತಂಥವರಿಗೆ ಹೀಗಾದ್ರೆ ನಮ್ಮಂಥವರ ಪಾಡೇನು? ಎಂದು ನಿಟ್ಟುಸಿರು ಬಿಡ್ತಾರೆ. ದುಃಖ ಪಡ್ತಾರೆ. ಈ ಕಥೆಗಳನ್ನು ಕೇಳೋದರಿಂದ ನಮ್ಮ ಕಷ್ಟ ಪರಿಹಾರವಾಗ್ತದೆಂದು ತಿಳಿದುಕೊಳ್ಳುತ್ತಾರೆ. ಕುಮಾರ ರಾಮ, ಬಲಿ ಚಕ್ರವರ್ತಿ, ಕೃಷ್ಣ ಗೋಪಾಲ ಇವರಂತೆ ನಾವೂ ಸತ್ಯದಿಂದ ನಡೀಬೇಕು. ಹೆಸರು ಪಡೀಬೇಕು. ಹಾಡ ಕೇಳಿ ದುಃಖ ಮರಿಬೇಕು ಅಂತಾರೆ ಬಾಲ ನಾಗಮ್ಮ , ಎಲ್ಲಮ್ಮನ ಕಥೆ ಜನ ಇಷ್ಟ ಪಟ್ಟು ಕೇಳ್ತಾರೆ. ನಮ್ಮ ಹಿರಿಯರೆಲ್ಲ ಹೇಗೆ ಬಾಳಿ ದೇವರಾಗಿ , ನಮಗೆ ಸಂಪತ್ತು ಬಿಟ್ಟು ಹೋಗಿದ್ದಾರೆಂಬುದು ತಿಳಿದುಕೊಳ್ಳುತ್ತಾರೆ. ನಮ್ಮ ಹಿರಿಯರು ಈ ಭೂಮಿ ಮೇಲೆ ಬಾಳಿ, ಪಾಪ ಕರ್ಮ, ಒಳ್ಳೇದು ಕೆಟ್ಟದ್ದು ಲೋಕದಲ್ಲಿ ನೋಡಿದವರು. ಅಂದಿನವರು ಭಾಳ ಪುಣ್ಯಾವಂತ್ರು. ನಾವು ಅವರನ್ನ ನೋಡದಿದ್ರೂ ಕಿವಿಲಿ ಆದ್ರೂ ಕೇಳೋ ಪುಣ್ಯ ನೀ ಮಾಡಿಕೊಟ್ಟಿಯಮ್ಮ ಅಂತ ಜನರು ಸಂತೋಷ ಪಡ್ತಾರೆ. ನಿನ್ನ ಕಥೆ ಕೇಳಿ ನಾವ್ ಬದುಕತೀವಿ ಅಂತಾರೆ. ನಿನ್ನ ಆಶೀರ್ವಾದದಿಂದ ನಮ್ಮ ಮಕ್ಕಳು - ಮರಿಗಳು ತಣ್ಣಗಿರಲವ್ವ ಅಂತಾರೆ. ಹಿಂದಿನ ಕಾಲದವ್ರು. ಆಳಿ - ಬಾಳಿದಂತೆ ನಾವೂ ಬಾಳಬೇಕೆಂದು ಕೊಳ್ತಾರೆ. ಜನರು ಈರಮ್ಮ ಹೇಳುವ ಕಥೆಗಳ ಜೊತೆಗೆ ಆಕೆಗೆ ದೈವಶಕ್ತಿಯು ಇದೆಯೆಂದು ಭಾವಿಸಿದ್ದಾರೆ. ಈರಮ್ಮ ನಮ್ಮೂರಿಗೆ ಕಾಲಿಟ್ಟರೆ ಮಳೆ, ಬೆಳೆ, ಆರೋಗ್ಯ, ದನ ಕರುಗಳು, ಸುಖವಾಗಿರುತ್ತವೆಂದು ನಂಬಿದ್ದಾರೆ. ಈರಮ್ಮನ ಹಾಡಿನಿಂದ ಸಂತೋಷಗೊಂಡ ಜನರು ದುಃಖ ಮರೆಯುತ್ತಾರೆ. ಆಕೆಗೆ ಕಾಳು - ಕಡಿ, ಆಕಳು , ಆಡು, ಹೊಸ ಸೀರೆ, ದುಡ್ಡು ಕೊಡ್ತಾರೆ. ಈರಮ್ಮ ತನಗೆ ಕೊಟ್ಟ ದಕ್ಷಿಣೆ, ದನ, ಕರುವೆಲ್ಲವೂ ನನ್ನ ಸರಸ್ವತಿಗೇ ಹೊರತು ನನಗಲ್ಲ ಎಂದೇ ಭಾವಿಸಿದ್ದಾಳೆ. ಮತ್ತೆ ಬೇರೆ ಊರಿನಿಂದ ವೀಳ್ಯೆ ಬಂದರೆ ಈರಮ್ಮ ಕಥೆ ಹೇಳಲು ತನ್ನ ಸಹಗಾಯಕಿಯರೊಂದಿಗೆ ಹಾಜರಾಗುತ್ತಾಳೆ.

ಈ ರೀತಿಯಾಗಿ ಈರಮ್ಮ ಹಾಡುವ ಬುರ್ರ ಕಥೆಗಳ ಶೈಲಿ, ರೀತಿಯು ವಿಭಿನ್ನವಾಗಿ ಕಾಣುತ್ತದೆ. ಈರಮ್ಮ ಹಾಡುವ ಕಥನ ಕಾವ್ಯಗಳು ಐತಿಹಾಸಿಕ, ಪೌರಾಣಿಕ, ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳನ್ನೊಳಗೊಂಡಿವೆ. ಎಲ್ಲಾ ಕಾವ್ಯಗಳು ಗದ್ಯ ಪದ್ಯ ಮಿಶ್ರಿತ ಶೈಲಿಯಲ್ಲಿವೆ.

5.1 ಕುಮಾರ ರಾಮನ ಕಾವ್ಯ * :

ಇದೊಂದು ಐತಿಹಾಸಿಕ ಕಾವ್ಯ. ಕುಮಾರ ರಾಮ ವಿಜಯ ನಗರದ ಇತಿಹಾಸದಲ್ಲೆ ಕಂಡು ಬರುವ ಅತ್ಯಂತ ಜನಪ್ರೀಯ ಹೊಂದಿದ್ದ ವೀರ ಪುರುಷ. ಆನೆಗುಂದಿ ಊರಲ್ಲಿ ಕಂಪ್ಲಿ ರಾಜ. ಇವರ ಮನಿದೇವ್ರು ಜಟಿಂಗೇಶ್ವರ ಸ್ವಾಮಿ. ಆತನ ಹೆಂಡ್ತಿ ಹರಿಯಾಳ ದೇವಿ. ಜಟಿಂಗೇಶ್ವರ ಸ್ವಾಮಿಯು ರಾಜನಿಗೆ ಮಕ್ಕಳ ಫಲಬೇಡುವಾಗ ಹೀಗೆ ಹೇಳುವನು[1].(ಕುಮಾರ ರಾಮ ಕಾವ್ಯ ಪುಟ ಸಂ. 12)

ಈಗಿನ್ನವರ ಲೋಕದಾಗ ಆಗಿನ್ನವರ ಆನೆಗುಂದಿ

ಕಂಪ್ಲಿ ಪಟ್ಣದಾಗ

ಈಶ್ವರ ಥೇರು ಮಾಡಿ

ಎಳೆವಂತನಾದರೆ ನಿನಗಿನ್ನವರ ಜೀವದಲ್ಲಾಗಿ

ಆಗ ಮಕ್ಕು ಫಲಪ್ಪ ನಿನಗಾಗಿ ಕೊಟ್ಟೇನ.

ಎಂದು ಜಟಿಂಗೇಶ್ವರ ಬಾಳೆ ಹಣ್ಣು ಪ್ರಸಾದ ಕೊಡುವನು. ಬಾಳೆಹಣ್ಣಿನ ವರ ಪ್ರಸಾದಕ್ಕೆ ಇಬ್ಬರು ವೀರರು ಜನ್ಮಿಸುತ್ತಾರೆ. ಹಣ್ಣು ತಿಂದ ರಾಣಿಯ ಹೊಟ್ಟೆಯಲ್ಲಿ ಕುಮಾರ ರಾಮ ಹುಟ್ಟಿದರೆ, ಹೋಲಿಕೆ ರಾಮ ಸಿಪ್ಪೆತಿಂದ ದಾಸಿಯ ಹೊಟ್ಟೆಯಲ್ಲಿ ಹುಟ್ಟುತ್ತಾನೆ. ರಾಜನು ಮನೆ ದೇವ್ರಿಗೆ ಕಲ್ಲಿನ ರಥದ ತೇರು ಮಾಡಿಸುತ್ತಾನೆ. ಕುಮಾರ ರಾಮನ ಸ್ವಾದರ ಮಾವ ಬಚ್ಚಣ್ಣನು ಅಳಿಯನಿಗೆ ವಿದ್ಯೆ ಕಲಿಸಲು ಗುರುಗಳ ಬಳಿ ಒಯುತ್ತಾನೆ. ಅಕ್ಕಳಾದ ಹರಿಯಾಳದೇವಿ ಮಗನೊಂದಿಗೆ ಹೋಲಿಕೆ ರಾಮನಿಗೆ ಓದಲು ಕಳುಹಿಸುತ್ತಾಳೆ. ಮಕ್ಕಳು ಓದಿನಲ್ಲಿ ಜಾಣರಿರುತ್ತಾರೆ. ಬೊಳ್ಳು ತೊರ್ಸಿದ್ರ ಬೊಳ್ಳು ನುಂಗುತ್ತಾರೆ. ಕಣ್ಣು ಬಿಟ್ರೆ, ಕಂಠ ಪಾಠ ತೆಗಿತ್ತಾರೆ. ಹೀಗೆ ಮಕ್ಕಳು ವಿದ್ಯಾಭ್ಯಾಸ ಮಾಡುವರು. ಇಬ್ಬರು ಮಕ್ಕಳಿಗೆ ಹದಿನೆಂಟು ವರ್ಷಗಳಾಗುವವು. ಆಗ ಗುರುಗಳು ಇವರ ಬಲದ ಶಕ್ತಿ ಎಷ್ಟೆಂದು ಪರೀಕ್ಷಿಸುವರು. ಗುರುಗಳ ಎಲ್ಲಾ ಪರೀಕ್ಷೆಯಲ್ಲಿ ಮಕ್ಕಳು ಗೆಲ್ಲುವರು. ಅಣ್ಣನಿಗಿಂತಲೂ ತಮ್ಮನು ಒಂದು ಪಾವುಲಿ ತೂಕ ಹೆಚ್ಚು ಬಲವಿರುವುದೆಂದು ಗುರುಗಳು ಹೇಳುವರು. ಕಂಪ್ಲಿ ಪಟ್ಣದಲ್ಲಿ ಚೆಲುವೆಯಾದ ಪಾತರಗಿತ್ತಿ ಇರುತ್ತಾಳೆ. ಅವಳ ಸೌಂದರ್ಯಕ್ಕೆ ಹೋಲಿಕೆ ರಾಮ ಮಾರು ಹೋಗುವನು. ತಮ್ಮ , ಮಾವ ಮಲಗಿರುವಾಗ ಮಧ್ಯ ರಾತ್ರಿಯಲ್ಲಿ ಎದ್ದು ಅಣ್ಣನ ಕಾಲಿಗೆ ಕೈ ಮುಗಿದು , ನೀನು ಹಣ್ಣಿಗ್ಹುಟ್ಟಿದ ಲೋಕದವನು. ನೀನು ದುಷ್ಟರು , ದುರ್ಮಾಗರು, ಕರ್ಮರು ನೋಡೆನಲ್ಲ ನಾನು ಕೆಟ್ಟ ಬುದ್ಧಿಯವನು, ಕೆಟ್ಟವನಾಗಲಿಕ್ಕೆ ಹೋಗ್ತಿದೀನಿ ಅಂತ ಹೇಳಿ ಪಾತರಗಿತ್ತಿ ಮನಿಗಿ ಬರ್ತಾನೆ. ಅವಳು ಹೋಲಿಕೆ ರಾಮನಿಗೆ ನೀನ್ಯಾರೆಂದು ಕೇಳುವಳು. ಹಿರೇ ಕಂಪ್ಲಿ ರಾಜನ ವಟ್ಟಿಗೆ ಹುಟ್ಟಿರೋ ಹೋಲಿಕೆ ರಾಮ ನಾನೆನ್ನುವನು. ದೊಡ್ಡವ್ರ ಮಗ ನನಗೇನು ತಂದಿರುವಿ? ಎಂದು ಮರು ಪ್ರಶ್ನಿಸುವಳು. ತಂದಿ ಕೈಯಾಗ ಇರೋನು ಅಣ್ಣನ ಕೈಯಾಗ ನಡಿಯೋನು , ಸುಮ್ನೆ ಬಂದೀನಿ ಎಂದಾಗ ಪಾತರಗಿತ್ತಿಯು ನಾನು ಉದ್ರಿ ಪಾತರಗಿತ್ತೆಲ್ಲ ನಗದಿ ಪಾತರಗಿತ್ತಿ. ರೊಕ್ಕ ತಂದರೆ ಮನೆಯೊಳಗೆ ಕರೆಯುವೆ ಎಂದಾಗ, ಹೋಲಿಕೆ ರಾಮನು ಸಿಟ್ಟಿನಿಂದ ಮೂರು ಕಾಸಿನವಳೆ ನೀನು ನನಗೆ ರೊಕ್ಕ ಬೇಡುವೆಯಾ ಎನ್ನುವನು.

---

* ಕುಮಾರ ರಾಮ ಮತ್ತು ಕೃಷ್ಣ ಗೊಲ್ಲರ ಮಹಾ ಕಾವ್ಯ: ಸಂ. ಡಾ. ಕೆ. ಎಮ್.ಮೇತ್ರಿ. ಕನ್ನಡ ವಿಶ್ವವಿದ್ಯಾಲಯ- ಹಂಪಿ 1997

ಆಗ ಪಾತರಗಿತ್ತಿಯು ನಾನು ಮೂರು ಕಾಸಿನವಳಾದರೆ ನೀನು ಆರು ಕಾಸಿನವನು ನನ್ನ ಬಳಿಗೇಕೆ ಬಂದಿರುವೆ? ದೊಡ್ಡ ಜ್ಞಾನ ಬಿಟ್ಟು, ಚಿಕ್ಕ ಜಾತಿದವಳ ಹತ್ತಿರೇಕೆ ಬಂದಿರುವೆ ಎಂದು ಬೈಯುತ್ತಾಳೆ. ಹೋಲಿಕೆ ರಾಮ ತಿರುಗಿ ತಂದಿ ಮನಿಗಿ ಬರುತ್ತಾನೆ. ಯಾರಿಗೂ ತಿಳಿಬಾರದೆಂದು ಬಾಗಿಲಿಗೆ ಮೂರು ಮಂತ್ರ ಹಾಕುತ್ತಾನೆ. ಮಂತ್ರ, ತಂತ್ರ ಕಲಿತಿರುತ್ತಾನೆ. ಮನಿಯಲ್ಲಿದ್ದ ಬೆಳ್ಳಿ, ಬಂಗಾರ, ಲಕ್ಷ ರೊಕ್ಕವೆಲ್ಲಾ ಶಲ್ಯಾದಾಗ ಕಟ್ಟಿಕೊಂಡು, ತಂದೀ, ತಾಯಿ ಕಾಲು ಮುಗಿದು ಅಪ್ಪಾ ನಾನು ಈ ರೊಕ್ಕೆಲ್ಲ ತಿಂಬಾಕ, ಹಾಳು ಮಾಡಾಕ ಒಯ್ಯುತಾಯಿಲ್ಲ. ನಿನ್ನ ಸೊಸಿಗಿ ಕೊಡಾಕ ಒಯ್ಯುತೀನಿ ಎಂದು ಹೇಳಿ, ಪಾತರಗಿತ್ತಿ ಮನಿಗೆ ಹೋಗುವನು. ಒಂದು ಗಂಟೆ ಅವಳ ಮನಿಯಲ್ಲಿ ಉಳಿದು ಬಂದು, ಅಣ್ಣನ ಪಕ್ಕದಲ್ಲಿ ಮಲಗುವನು.

ಬೆಳಗ್ಗೆ ಅಣ್ಣ ಕುಮಾರ ರಾಮ ತಮ್ಮನಿಗೆ ಎಬ್ಬಿಸಿದಾಗ , ಮೈಸುತ್ತೆಂದು ತಡ ಮಾಡಿ ಏಳುವನು. ಡಿಲ್ಲಿಯಿಂದ ಮಂತ್ರಿಯು ಗುಂಡು ಬಲ ನೋಡಲು ಬರುವನು. ಅಣ್ಣ - ತಮ್ಮಂದಿರಿಬ್ಬರೂ ತಮ್ಮ ಬಲ ಪ್ರಯೋಗ ತೋರಿಸ್ತಾರೆ. ತಮ್ಮನ ಮೊದಲಿನ ಪರಾಕ್ರಮ ಇಂದು ಇರೋದಿಲ್ಲ. ಅಣ್ಣನು ವಿಚಾರಿಸಿದಾಗ ನೆಪ ಹೇಳುತ್ತಾನೆ. ಮತ್ತೆ ರಾತ್ರಿ ತಮ್ಮನಿಗೆ ಪಾತರಗಿತ್ತಿ ನೆನಪಾಗಿ ಅವಳ ಮನಿಗಿ ಹೋಗುವನು. ಮತ್ತೆ ರೊಕ್ಕ ತಂದರೆ ಒಳಗೆ ಬಾ ಎನ್ನುವಳು. ನಿನಗೇನ ಬೇಕೆಂದು ಕೇಳಿದಾಗ ಕ್ಯಾಮಟರಾಕಿ ಕೊರಳಲ್ಲಿ ಮೂರು ತೋಲ ಬಂಗಾರದ ಸರ ತಂದು ಕೊಡಬೇಕೆನ್ನುವಳು. ಹೋಲಿಕೆ ರಾಮ ಕಳ್ಳರಂತೆ ಕ್ಯಾಮಟ್ರಾಕಿ ಮನಿಗಿ ಹೋಗಿ ಸರ ಕದ್ದು ಪಾತರಗಿತ್ತಿಗೆ ಕೊಡುವನು. ಹೋಲಿಕೆ ರಾಮನು ಪಾತರಗಿತ್ತಿಗೆ ಈ ಸರವನ್ನು ನೀನು ಇರಶೇಟ್ಟಿ ಆತನ ಹೆಂಡ್ತಿ ಇಬ್ಬರೂ ಸಾಯೋವರೆಗೂ ಹಾಕಿಕೊಳ್ಳಬೇಡ. ಇದನ್ನು ನೀನು ಕೊಳ್ಳಾಗ ಕಟ್ಟಿಕೊಂಡರೆ , ಆನೆಗೊಂದ್ಯಾಗ ನನ್ನ ನಿನ್ನ ತಲಿ ಕೊಯ್ಯುತಾರೆ ಎಂದಾಗ ಸರವನ್ನು ಟ್ರಂಕಿನಲ್ಲಿ ಮುಚ್ಚಿಡುತ್ತಾಳೆ. ಬೆಳಗ್ಗೆ ಎದ್ದು ತನ್ನ ಸರಕಾಣದ್ದನ್ನು ಕೋಮುಟ್ರಾಕಿ ಗಂಡನಿಗೆ ಹೇಳುವಳು. ಇರಶೆಟ್ಟಿ ಕಂಪ್ಲಿ ರಾಜನಿಗೆ ಹೋಗಿ ದೂರು ಕೊಡುತ್ತಾನೆ. ರಾಜನು ಆನೆಗೊಂದಿ ಊರಾಗ ಕಳ್ಳ ಹುಟ್ಟಬಾರ್ದು, ಸೂಳೆ ಇರಬಾರ್ದೆಂದು ಊರ ಅಗಸಿ ಸುತ್ತ ಹಂದಿ ಬಲೆ ಹಾಕಿಸುವನು. ಊರನ್ನು ಕಾಯಲು ಐದು ಮಂದಿ ತಳವಾರರಿಗೆ ಕಾವಲಿರಿಸುವನು. ಹೋಲಿಕೆ ರಾಮನು ಹತ್ತು ಮಂದಿ ಕಾಯ್ದರೂ , ನಾನು ಮಾತ್ರ ಒಬ್ಬಗೂ ಸಿಗೋದಿಲ್ಲೆಂದು ಮತ್ತೆ ಪಾತರಗಿತ್ತಿ ಮನಿಗಿ ಬರ್‍ತಾನೆ. ಮತ್ತೆ ನೀನು ಕ್ಯಾಮುಟರು ಶ್ಯಾನಭೋಗನು ಭೂಮ್ಯಾಗ ಹಣ ಹೂತಿಟ್ಟಾನ ತೆಗೆದುಕೊಂಡು ಬಾ ಎಂದಾಗ, ಹಾಗೆ ಮಾಡುವನು. ಮತ್ತೆ ರಾಜನ ಬಳಿ ದೂರು ಹೋಗುವುದು. ರಾಜನು ಬೇಲಿದಾಟಿ ಯಾರು ಬರಲು ಸಾಧ್ಯವಿಲ್ಲ. ಇದ್ದೂರಿನವರೇ ಯಾರೋ ಕಳ್ಳರು ಇರಬೇಕೆಂದು ಕೊಂಡು , ಓಣಿ ಓಣಿ ಹುಡುಕಲು ಹಚ್ಚುತ್ತಾನೆ. ಪಾತರಗಿತ್ತಿಯನ್ನು ಹೋಲಿಕೆರಾಮ ಊರ ಅಗಸಿ ಹೊರಗೆ ಮನಿಕಟ್ಟಿ ಇಡುವನು. ಬೇಲಿ ದಾಟಿ ಮತ್ತೆ ಅವಳ ಬಳಿ ಹೋದಾಗ, ಪಾತರಗಿತ್ತಿಯು ನಿಮ್ಮ ತಂದೀ - ತಾಯಿ ಮುದಿಯಾದೋರು, ಬೆಳ್ಳಿ ಹೊರ್‍ಸುಗಳಲ್ಲಿ ಮಲುಗೋರು. ಅವರಿಗ್ಯಾಕೆ ಬೇಕವು. ಬೆನ್ನಿಗೆ ಕಟ್ಟಿಕೊಂಡು ತಂದರೆ ಸಾಯೋತನಕ ನಯಾಪೈಸ ಕೇಳೊದಿಲ್ಲವೆನ್ನುವಳು. ಅವಳು ಹೇಳಿದಂತೆ ಮಾಡುತ್ತಾನೆ. ಇದನ್ನೆಲ್ಲಾ ಜಟಿಂಗೇಶ್ವರ ಸ್ವಾಮಿ ನೋಡುತ್ತಾನೆ. ಹೋಲಿಕೆ ರಾಮ ಬೇಲಿ ಕುಪ್ಪಳಿಸಿ ಪಾತರಗಿತ್ತಿ

ಮನಿ ಮ್ಯಾಲೆ ಹಾರುತ್ತಾನೆ. ಅಲ್ಲೆ ಇದ್ದ ತಳವಾರರು ಹಂದಿ ಬಲ್ಯಾಗ ಬಿತ್ತೆಂದು ಹಿಡಿದುಕೊಳ್ಳುವರು. ಹೋಲಿಕೆ ರಾಮನನ್ನು ರಾಜನ ಬಳಿಗೆ ಕರೆದೊಯ್ದು , ರಾಜನಿಗೆ ನೀವೇ ಕಳ್ಳತನ , ಸೂಳೆತನ ಮಾಡ್ತಿರಿ ಎನ್ನುವರು. ರಾಜನು ಮಗನಿಗೆ ವಿಚಾರಿಸಿದಾಗ , ಎಲ್ಲಾ ನಿನ್ನ ಸೊಸೆಗೋಸ್ಕರ ಮಾಡ್ದೆ ಎನ್ನುವನು. ತಳವಾರರು ಹೋಗಿ ಪಾತರಗಿತ್ತಿಯನ್ನು ಎಳೆದುಕೊಂಡು ಬರುವರು. ರಾಜನು ಆಕೆಗೆ ಕುದ್ರಿಗಿ ಹೊಡೆಯೋ ಬಾರಕೋಲದಿಂದ ಹೊಡೆಸುತ್ತಾನೆ. ಹೆಣ್ಣು ಮಗಳಿಗೆ ಹೊಡಿಬ್ಯಾಡ್ರೆಂದು ಮಗನು ಕೇಳಿಕೊಳ್ಳುವನು. ಆಗ ರಾಜನು ಇವಳ ತಲಿ ಕಡಿದು ಅಗಸ್ಯಾಗ ಕಟ್ಟಿ ಎಂದಾಗ, ಮಗನು ಕಡಿದರೆ ಇಬ್ರು ತಲಿನೂ ಕಡಿರೆನ್ನುತ್ತಾನೆ, ಆಗ ರಾಜನು ಮಗನ ತಲಿ ಹೇಗೆ ಕಡಿಬೇಕೆಂದು ಕೊಂಡು , ಇಬ್ಬರಿಗೂ ಉಕ್ಕಿನ ಬೀಗ ಹಾಕಿ ಕಡ್ಡಿ ರೂಮಿನಾಗ ಹಾಕುವರು. ಇದನ್ನೆಲ್ಲಾ ರಾಮಯ್ಯ ನೋಡುವನು. (ಕುಮಾರ ರಾಮ ಕಾವ್ಯ ಪುಟ ಸಂ. 51)

ಕುಮಾರ ರಾಮನು ತಮ್ಮನ ಈ ಕೃತ್ಯಕ್ಕೆ ಮಾವನೆದುರು ಶೋಕಪಡುವನು[2].

ಆಹಾ ತಮ್ಮ ಎಷ್ಟು ಮೋಸ ಮಾಡ್ದಾ

ಈಗ ಜೇಲದಾಗ ಬಿದ್ದಾ

ಹ್ಯಾಂಗ ಮಾಡ್ಲಿ ಮಾವಾ

ಆಯ್ತುಪ್ಪಾ ತಮ್ಮಗ ಮರೆಂಗಿಲ್ಲ

ತಂದಿ ಮಾತಿಗಿ ಎದುರಾಡಂಗಿಲ್ಲ

ಇಪ್ಪತ್ತೆಳ್ಳಿಗೆ ಬುದ್ಧೀವಂತ

ರಾಜತನ ಮಾಡುವನು

ಈಗ ನ್ಯಾಯ ಪಂಚಾಯತಿ ಹೇಳುವನು

ಈಗ ರಾಜವಾಳವನು ॥ ತಂದಾನಾ ॥

ತಂದೆಯು ಮಗನಿಗೆ ನೀನು ಹಣ್ಣಿಗೆ ಹುಟ್ಟಿದವನು ಹುಶಾರಾಗಿ ಇರ್ಬೇಕು. ಯಾವ ಹೆಣ್ಣಿಗೂ ಕಣ್ಣೆತ್ತಿ ನೋಡಬಾರದು, ನಗಬಾರದು, ಮಾತಾಡಬಾರದೆಂದು ಬುದ್ಧಿ ಮಾತು ಹೇಳುವನು. ಓರುಗಲ್ಲು ಪಟ್ಟಣದಲ್ಲಿರುವ ಅಂಬಿಗರಿಗೆ ತಿಮಿಂಗಿಲು ಬಲಿಯಲ್ಲಿ ಸಿಗುತ್ತದೆ. ಅದರ ಹೊಟ್ಟೆಯೊಳಗೆ ಇಪ್ಪತ್ತಾರುದಡೇವು ಚಂದ್ರಾಯುಧವಿರುತ್ತದೆ. ಇದನ್ನು ಆನೆಗುಂದಿ ರಾಮಯ್ಯನೆ ಒಯ್ಯಬೇಕೆಂದು ವಿಳಾಸ ಬರಿದು ಹಾಕುತ್ತಾರೆ. ಗಣಪತರಾಜನು ಕೆರೆದಾಗ ಕಡ್ಲಿ ಹಾಕಿದ್ದನು. ಮೂರು ಮೇಘದಾಗಿರುವ ಎರಡು ದೇವತಾ ಕುದ್ರಿಗಳು ಬಂದು, ದಿನಾಲು ತಿಂದು ರೆಕ್ಕೆ ಪಟ ಪಟ ಬಡಿಯುತ್ತಾ ಹಾರಿ ಹೋಗುತ್ತವೆ. ರಾಜ ಅವುಗಳನ್ನು ಹಿಡಿಯಲು ಭೂಮಿಯಲ್ಲಿ ಗುಂಡು ಇಟ್ಟು ಹಾರಿಸುತ್ತಾನೆ. ಗರ್ಭ ಧರಿಸಿದ ಕುದುರಿಯು ಹಾರಲು ಹೋದಾಗ , ಹೊಟ್ಯಾಗಿನ ಪಿಂಡ ಕೆಳಗೆ ಬೀಳುತ್ತದೆ. ಎರಡು ರೆಕ್ಕೆ ಕುದುರಿ ನೋಡಿ ಅದನ್ನು ಹಿಡಿಯುತ್ತಾರೆ. ಈ ಕುದ್ರಿ ಮ್ಯಾಲೆ ಯಾರು ಕುಂತು ಗೆಲ್ಬುರೊ ಅವರಿಗೆ ಇಪ್ಪತ್ತೆಳ್ಳಿ ಕೊಡುವೆನೆಂದು ಎಲ್ಲಾ ಕಡೆ ಪತ್ರ ಕಳಿಸ್ತಾನೆ. ಡಿಲ್ಲಿ ರಾಜನಿಗೆ ಆನೆಗುಂದಿ ರಾಮಯ್ಯನಿಗೆ ಪತ್ರ ಬಂದು ತಲುಪುತ್ತದೆ. ಪತ್ರ ಓದಿ ರಾಮಯ್ಯನು ಓರೆಗಲ್ಲಿಗೆ ಹೋಗಿ ಅಲ್ಲಿ ಮೀನಿನ ಹೊಟ್ಟೆಯೊಳಗಿದ್ದ

ಚಂದ್ರಾಯುಧವನ್ನು ವಶ ಪಡಿಸಿಕೊಳ್ಳುತ್ತಾನೆ. ದಾರಿಯಲ್ಲಿ ಬಂದವರನ್ನು ಆಯುಧದಿಂದ ಕೊಲ್ಲುತ್ತಾನೆ. ಗಣಪತಿರಾಜನನ್ನು ಕೊಂದು, ಕುದುರಿ ಗೆದ್ದು ಕೊಂಡು ಡಿಲ್ಲಿ ಕಳ್ಸೊ ಕರ್ನಾಟಕ ರೊಕ್ಕವನ್ನೆಲ್ಲಾ ಆನೆಗುಂದಿಗೆ ತರುತ್ತಾನೆ. ಓರಗಲ್ಲಿನ ಗಣಪತಿ ರಾಜನ ರೊಕ್ಕವೆಲ್ಲಾ ಆನೆಗೊಂದಿರಾಮ ಒಯ್ದ ವಿಷಯ ತಿಳಿದು ದಿಲ್ಲಿ ಗೊಲ್ಕಂಡ ನವಾಬುದಾರ ಕರ್ನಾಟಕ, ಆಂಧ್ರ ಎಲ್ಲವೂ ಒಂದೆ ಎಂದು ಬರಿದು ಹಾಕುತ್ತಾನೆ. ಆನೆಗುಂದಿಗೆ ಯುದ್ಧ ಮಾಡಲು , ಸೈನ್ಯದೊಂದಿಗೆ ಊರ ಹೊರಗೆ ಬಂದು ಗೂಡಾರ ಹಾಕುತ್ತಾರೆ. ಊರೊಳಗೆ ಹೊಗಲು ಸಾಧ್ಯವಾಗದಿದ್ದರಿಂದ , ಆಯುಧ, ಗುಂಡು, ತೋಪ ಊರಾಗ ಒಗಿಯುತ್ತಾರೆ. ಇದನ್ನೆಲ್ಲಾ ಬಚ್ಚಣ್ಣನು ನೋಡಿ ರಾಮಯ್ಯನಿಗೆ ವಿಷಯ ತಿಳಿಸುತ್ತಾನೆ. ರಾಮಯ್ಯನು ಸೊದರ ಮಾವನಿಗೆ ಇಲ್ಲಿನ ರೊಕ್ಕ ಡಿಲ್ಲಿಗ್ಯಾಕೆ ಹೋಗಬೇಕು. ಅರ್ಧ ರಾಜ್ಯ ನಮ್ಮದು ಕರ್ನಾಟೆಲ್ಲಾ ನಂದೇ, ಆಂಧ್ರವೆಲ್ಲಾ ಅವರದು ಎಂದು ಧೈರ್ಯ ತುಂಬಿ ಕುದುರೆ ಏರಿ ಕೈಯಲ್ಲಿ ಚಂದ್ರಾಯುಧ ಹಿಡಿದು ಅವರೊಂದಿಗೆ ಶೌರ್ಯದಿಂದ ಯುದ್ಧ ಮಾಡ್ತಾನೆ[3].(ಕುಮಾರ ರಾಮ ಕಾವ್ಯ ಪುಟ ಸಂ. 107)

ಡಿಲ್ಲಿ ಗೋಲ್ಕಂಡದ ನವಾಬುದಾರ

ಆಗ ಆತನ ಗಡ್ಡ ಎಡಗೈಲಿ ಹಿಡ್ಕಂದ ಮಡಿಸಿ ರೀ ಯಾರಂತ ತಿಳ್ಕಂಡಿಯ

ನೀನು ರಾಜ್ಯವೆಲ್ಲಾ ನಿಂದು

ಕರ್ನಾಟೆಲ್ಲಾ ನಂದು

ಕರ್ನಾಟದ ರೊಕ್ಕ

ಆಂಧ್ರಕ್ಕ ಖಳ್ಸೋದಿಲ್ಲ

ನಿಂದೇ ಇರಬೋದು ರಾಜ್ಯವು

ನಾನು ಮಂತ್ರಿ ಇಪ್ಪತಳ್ಳಿ ಇನಾಮು

ಅರವತ್ತೂರು ಸಂಬಳ ನಂದು

ಎಂದು ಹೇಳುವನು ಆಗ ನವಾಬ ನನ್ನನ್ನು ಬಿಟ್ಟುಬಿಡೆಂದು ಬೇಡಿಕೊಂಡಾಗ, ಈ ಕಡೆ ತಲೆ ಹಾಕಿದರೆ ನಿನ್ನ ತಲೆ ಉರುಳಿಸುವೆನೆಂದು ಎಚ್ಚರಿಕೆ ನೀಡುತ್ತಾನೆ. ನವಾಬ ವಾಪಸ್ಸು ಡಿಲ್ಲಿಗೆ ಹೋಗುತ್ತಾನೆ.

ರಾಮಯ್ಯನಿಗೊಂದು ಮದುವೆ ಮಾಡಬೇಕೆಂದು ಸೋದರ ಮಾವ ಬಚ್ಚಣ್ಣ, ಹೆಣ್ಣು ಹುಡುಕುತ್ತಾ ಚಿತ್ರ ಗೇರಿ ಪಟ್ಟಕ್ಕೆ ಬರುತ್ತಾನೆ. ಅಲ್ಲಿ ಚಾವುಲರಾಜನ ಮಗಳು ರತ್ನಾಕ್ಷಿ ಅತಿಯಾದ ಸೌಂದರ್ಯದಿಂದ ಹೊಳೆಯುತ್ತಿರುತ್ತಾಳೆ. ಬಚ್ಚಣ್ಣ ಅಳಿಯನ ಫೋಟೊ ತೋರಿಸಿದಾಗ , ರತ್ನಾಕ್ಷಿ ರಾಮಯ್ಯನ ಫೋಟೊ ನೋಡಲು ಕಣ್ಣಿಗೆ ಮಿಂಚು ಹೊಡೆದಂತಾಗುತ್ತದೆ. ಅವನನ್ನೆ ಮೆಚ್ಚಿಕೊಳ್ಳುತ್ತಾಳೆ. ತನ್ನ ಒಪ್ಪಿಗೆ ನೀಡುತ್ತಾಳೆ. ರತ್ನಾಕ್ಷಿಯ ಫೋಟೊ ರಾಮಯ್ಯನಿಗೆ ತೋರಿಸಲು ಬಚ್ಚಣ್ಣ ಒಯ್ಯುವನು. ರಾಜನಿಗೆ, ಅಕ್ಕಳಿಗೆ ವಿಷಯ ತಿಳಿಸಿ ಫೋಟೊ ತೋರಿಸುವನು. ರತ್ನಾಕ್ಷಿಯ ಫೋಟೊ ನೋಡಿ ರಾಜನು ತನಗಾಗಲೆ ಹೆಂಡತಿ ಇದ್ದರೂ, ರತ್ನಾಕ್ಷಿಯ ಚೆಲುವಿಗೆ ಮೋಹಗೊಳ್ಳುವನು[4]. (ಕುಮಾರ ರಾಮ ಕಾವ್ಯ

ಪುಟ ಸಂ. 119)

ಚಿಕ್ಲೇಣ್ತಿ ಅಂತ ಬಾರ್ಲ ಬಿದ್ದ ಬಿಟ್ಟ
ಫೋಟೋ ಮ್ಯಾಲೆ
ಚಂಪೆ ಚಂಪೆ ಮುದ್ದು ಕೊಡ್ತಾನ
ಯಪ್ಪಾ ಭಾವ ಮೈದ
ಆ ಕಾಲಕ್ಕೆ ನಿಮ್ಮ ಅಕ್ಕನ ಕೊಟ್ಟಿ
ಈ ಕಾಲಕ್ಕೆ ಈ ರತ್ನಾಕ್ಷಿಯ ನನಗೇ ಮಾಡ್ಬೇಕು
ನನ್ನ ಜೀವ ನಿಂದ್ರದಿಲ್ಲಂತ ॥ತಂದಾನಾ॥

ಈ ಚೆಲುವೆಯನ್ನು ನಾನೇ ಮದಿವೆಯಾಗಬೇಕೆಂದು ಹಟ ಮಾಡುವನು. ಬಚ್ಚಣ್ಣನಿಗೆ ರಾಜನು ನಿಮ್ಮ ಅಕ್ಕನ ನೀನೆ ಕೊಟ್ಟಿದಿ. ಈಕೆಯನ್ನು ನೀನೆ ತಗದೀದಿ. ಅದಕ್ಕೆ ನೀನೆ ನನಗ ಈಕೆಯ ಗೂಡ ಮದುವೆ ಮಾಡಿಸೆನ್ನುವನು. ನಮ್ಮ ಅಕ್ಕ ಇನ್ನೂ ಗುಡ್ಡ ಇದ್ದಾಂಗ ಅದಾಳೆ. ಮಗನಿಗೆ ತಗದ ಹೆಣ್ಣು ನೀನು ಬಯಸಿದರೆ ಹೇಗೆ? ಇದು ಸರಿಯಲ್ಲ. ನಿನ್ನ ಮಗನಿಗೆ ಮಾಡೋಣ. ನಿನ್ನ ಬಾಯಲ್ಲಿ ಹಲ್ಲಿಲ್ಲ. ಬಿಳೇ ಕೂದಲು ಬಂದಾವ, ಮುದಿಯವನಾಗಿ ಮಾಡಿಕೊಂತೀನಿ ಅಂತೀಯಲ್ಲ ಎಂದು ಬೈದು ಹಟ ಮಾಡಬೇಡೆಂದರೂ ರಾಜನು ಮಾತಾಡಿದ ಮಾತೆ ಕೊನೆ ಎನ್ನುವನು. ನೀನು ಹೇಗಾದ್ರೂ ಮಾಡಿ ಮದುವೆ ಮಾಡಿಸೆಂದು ಕಂಪಲಿರಾಜ ಬಚ್ಚಣ್ಣನ ಪಾದ ಹಿಡಿದುಕೊಳ್ಳುತ್ತಾನೆ. ಕೊನೆಗೂ ಬಚ್ಚಣ್ಣ ಒಪ್ಪುವ ಮನಸ್ಸು ಮಾಡ್ತಾನೆ. ನನ್ನಕ್ಕನ ಗಂಡ ನೀನು ಪಾದಕ್ಕೆ ಬೀಳಬಾರ್ದು. ನಿನ್ನ ಇಷ್ಟದಂತೆ ಮಾಡ್ತಿನೆಂದು ಮಾತು ಕೊಡುವನು. ಅಳಿಯ ರಾಮಯ್ಯನ ಬಳಿ ಬಂದು ನಿನಗೆ ನೋಡಿದ ಹೆಣ್ಣನ್ನು ನಿನ್ನ ತಂದಿ ಮನಸ್ಸು ಮಾಡ್ಯಾನೆಂದಾಗ, ರಾಮಯ್ಯನು ಥೀ ಮಾವ ಆಕೆ ನನಗೆ[5]. (ಕುಮಾರ ರಾಮ ಕಾವ್ಯ ಪುಟ ಸಂ. 122)

ತಾಯಿ ಇದ್ದಂಗಿದ್ದಾರೆ ನನಗೆ ತಾಯೇ ನೋಡಪ್ಪಾ
ಏಽ ನನಗೆ ಬ್ಯಾಡೋಲೋ ಮಾವ ನನಗೆ ಲೋಕನೇ ಬ್ಯಾಡಯ್ಯಾ
ಲೋಕನೇ ಬ್ಯಾಡ
ಏಽ ದುಷ್ಠ ಲೋಕ ಹುಟ್ಟೀನಿ ನಾನು ಕರ್ಮ ಲೋಕ ಬೆಳದಿನಿ
ತೋಽ ದುಷ್ಠಗುಣ ಇಲ್ಲಯ್ಯ ನನ ಕರ್ಮ ಗುಣ ಇಲ್ಲಯ್ಯ
ನನ್ನ ಆತ್ಮದಲ್ಲಿ ॥ತಂದಾನಾ॥

ನಿನು ಅವಳನ್ನು ನನ್ನ ತಂದೆಗೆ ಕೊಟ್ಟು ಮದುವೆ ಮಾಡಿಸೆನ್ನುವನು. ಅಳಿಯನನ್ನು ಕೆಳಮನಿಯಲ್ಲಿ ಮುಚ್ಚಿಡುವನು. ಇತ್ತ ಮದುವಿ ತಯಾರಿ ಮಾಡುವನು. ರಾಜನ ಮುಖವನ್ನು ಕಂಬಳಿಯಿಂದ ಮುಚ್ಚಿ, ಹಾಗೆ ರತ್ನಾಕ್ಷಿಯ ಕೊರಳಿಗೆ ತಾಳ

ಕಟ್ಟಿಸುವನು. ಮುಖ ನೋಡಬೇಕೆಂದು[6].(ಕುಮಾರ ರಾಮ ಕಾವ್ಯ ಪುಟ ಸಂ. 132)

ಜಾಡ್ಸಿ ಕಂಜ್ಯ ಕಿತ್ತೋ ಹೊತ್ತಿಗೆ
ಆಗಿನವು ಒಂದು ಹಲ್ಲಿಲ್ಲಪ್ಪ ಬಾಯಾಗ
ಮುದೇವ್ನ ಜೀವದಲ್ಲಿ
ಏಸ ಈಗ ನೀನು ಕೇಳಮ್ಮ ಮಗಳೇ ರತ್ನಾಕ್ಷಿ
ಒಳ್ಳೆ ಒಳ್ಳೆ ಫೋಟೊ ತಂದ್ರೆಯಾವ್ನೂನು ಬ್ಯಾಡಂದಿದ್ದಿ
ರಾಮನು ಬೇಕಂತ ಒಪ್ಪಿದಲ್ಲಾಯ್ತು
ರಾಮಲೋಕ ಹುಟ್ಟಿದ ರಾಮಲ್ಲ
ಈಗ ಜೀವಕ್ಕೆ ನಿನಗ ಕಳಿಲಿಲ್ಲಮ್ಮ
ಈಗ ರಾಮನ ತೆಗ್ದ ನಿನಗ ಕಳಿಲಿಲ್ಲಮ್ಮ
ಈಗ ರಾಮನ ತೆಗ್ದ ಫೋಟೋ ತೋಲ್ಸಿ
ಈಗ ಕಂಜ್ಯಮ್ಯಾಲೆ ಕಂಜ್ಯ ಮೂರು ಕಂಜ್ಯ ಹೊದ್ಸಿ
ಆಗ ಆಗಲೆ ಕಣ್ಣು ತೆರೆದು ತಾಳಿ ಕಟ್ಟಿಸಿದ್ರು
ಅಮ್ಮಾ ರತ್ನಾಕ್ಷಿ
ಈಗ ತಾಳಿಯಿಂದ ಮಗಳು ಕೊಟ್ಟಿದ ಮ್ಯಾಲೆ
ಅಳಿಯಲ್ಲ ಮಗಳಿದ್ದಂಗ
ನಾನು ಕೈಯೆತ್ತಿ ಬಡೀಬಾರ್ದು ॥ ತಂದಾನು ॥

ತಂದಿಯ ಮಾತಿಗೆ ರತ್ನಾಕ್ಷಿಯು ತನ್ನ ತಂದೆಗೆ ಹೀಗೆ ಹೇಳುವಳು. ಮಗನ ಫೋಟೋ ತೋಲಿಸಿ, ತಂದಿಗೆ ಮದುವೆ ಮಾಡ್ಯಾರ. ಯಾರು ತಾಳಿ ಕಟ್ಟಿದರೇನು ರಾಮನೇ ನನ್ನ ಗಂಡನು. ಮಗಳಿಗೆ ತಂದಿ ಸಮಾಧಾನಿಸುತಾ. ಈತ ರಾಮನಲ್ಲ, ತಾಳಿ ಕಟ್ಟಿದ ಮೇಲೆ ನನ್ನ ಅಳಿಯ. ಇವನೊಂದಿಗೆ ನೀನು ಬಾಳಬೇಕೆಂದು ಹೇಳಿ, ತನ್ನೂರಿಗೆ ಹೋಗುವನು. ರಾಜನು ರತ್ನಾಕ್ಷಿಗೆ ಮೂರಂತಸ್ತಿನ ಮಾಳಿಗಿ ಮ್ಯಾಲೆ ಬೇರೆ ಮನಿ ಮಾಡಿ ಇಡುವನು. ರಾಮಯ್ಯನನ್ನು ಹತ್ತು ದಿನದ ಮೇಲೆ ಹಗೆದಾಗಿಂದ ಹೊರ ತೆಗೆಯುವರು. ರಾಮಯ್ಯ ಕೊನೆಯವರೆಗೂ ಕುಮಾರ ರಾಮ ಆಗಿಯೇ ಇರುತ್ತಾನೆ.

ಹೀಗಿರಲು ಒಂದು ದಿನ ಕಂಪ್ಲಿ ರಾಜನು ಆರಂಡಿಗೆ ಬೇಟೆಗಾಗಿ ಹೊರಡುವಾಗ , ಬಚ್ಚಣ್ಣನಿಗೆ ಚಿಕ್ಕ ಹೆಂಡ್ತಿ ರತ್ನಾಕ್ಷಿ ಮನೆ ಕಡೆಗೆ ನೋಡಿಕೊಂಡಿರೆಂದು ಹೇಳಿ ಹೋಗುವನು. ಒಮ್ಮೆ ರಾಮಯ್ಯನಿಗೆ ಚೆಂಡು ಆಡುವ ಮನಸ್ಸಾಗುವುದು. ಮಾವನಿಗೆ ಹೇಳಿದಾಗ ತಾಯಿಯ ಬಳಿಯಿರುವ ಮುತ್ತಿನ ಚೆಂಡನ್ನು ತರುವನು. ಮಾವನಿಗೆ ಚೆಂಡು ಹಿಡಿಯೊದಕ್ಕೆ ಆಗುವುದಿಲ್ಲ. ಅಷ್ಟರಲ್ಲಿ ಊರ ಜನರೆಲ್ಲರೂ ಇವರ ಆಟ ನೋಡಲು ನೆರೆಯುವರು. ರಾಮಯ್ಯನು ಮಾವನಿಗೆ ನಾನು ಯಾರೊಂದಿಗೆ ಚೆಂಡಾಟ ಆಡಲೆಂದಾಗ, ತಂದಿ ಅಂತೂ ಬೇಟೆಗಾಗಿ ಅಡವಿಗೆ ಹೋಗ್ಯಾನ, ಅವನು ಮರಳಿ ಬರುವಷ್ಟರಲ್ಲಿ

ನಿನ್ನ ತಮ್ಮನೊಂದಿಗೆ ಆಡೆಂದು ಜೈಲಿನಿಂದ ಹೋಲಿಕೆ ರಾಮನನ್ನು ಬಿಡಿಸಿಕೊಂಡು ಬರುವನು. ಆಗ **ಇಬ್ಬರು ಅಣ್ಣ - ತಮ್ಮಂದಿರು ಚೆಂಡಾಟ ಆಡುತ್ತಾರೆ.** ಇವರ ಆಟವನ್ನು ರತ್ನಾಕ್ಷಿಯು ಮೂರಂತಸ್ತಿನಿಂದ ಇಣುಕಿ ನೋಡುವಳು. ರಾಮಯ್ಯನು ಸೂರ್ಯಕಂಡಾಂಗ ಆಕಿಗೆ ಕಾಣುವನು. ಹೇಗಾದರೂ ಮಾಡಿ ರಾಮಯ್ಯನನ್ನು ತನ್ನ ಬಳಿಗೆ ಬರುವಂತೆ ಮಾಡಬೇಕೆಂದು , ಆದಿ ಶಕ್ತಿ ಗಾಳಿ ದೇವತೆಗೆ ಬೇಡಿಕೊಳ್ಳುವಳು.

ಗಾಳೆಮ್ಮಳು ಜೋರಾಗಿ ಗಾಳಿ ಬೀಸುತ್ತಾ, ಮಣ್ಣು ತೂರುತ್ತಾ ಬರುವಳು. ಎಲ್ಲರ ಕಣ್ಣಿಗೆ ಮಣ್ಣು ತೂರಿ ಬಿಡುವಳು. ಆಗ ಚೆಂಡು ರತ್ನಾಕ್ಷಿ ಮನೆಯೊಳಗೆ ಹೋಗಿ ಬೀಳುತ್ತದೆ. ರತ್ನಾಕ್ಷಿ ಅದನ್ನು ಕಬ್ಬಿಣ ಪುಟ್ಟಿಯಲ್ಲಿ ಮುಚ್ಚಿಡುತ್ತಾಳೆ.

ಹೋಲಿಕೆ ರಾಮನು ಆ ಮನಿಗೆ ಹೋಗಬೇಡ ವೆಂದರೂ ರಾಮಯ್ಯ ತನ್ನ ತಾಯಿ ಬಳಿ ಹೋಗಿ ಚೆಂಡು ಕೇಳುವನು. ಆಗ ರತ್ನಾಕ್ಷಿಯು[7] . (ಕುಮಾರ ರಾಮ ಕಾವ್ಯ ಪುಟ ಸಂ. 157)

ರಾಮ ನಿನ್ನ ಬಂಗಾರದ ಫೋಟ ತೋರ್‍ಸಿ
ಈಗ ನಿನ್ನ ಬಚ್ಚಿಟ್ಟು ನಿಮ್ಮ ತಂದಿ
ಕಂಜ್ಯ ಮುಚ್ಚಿಗ್ಯಂಡು
ಹಗಲತ್ತೇ ಕಣ್ಣು ತೆರ್‍ದು ತಾಳಿ ಕಟ್ಟಿಸಿದ
ಇದೋ ನಿಮ್ಮ ತಂದಿ
ಇನ್ನವ್ರ ತಾವಾಗಿ ಇರೋನಲ್ಲ
ನೀನೇ ನನ್ನ ಜೀವದ ಗಂಡ
ಜೀವ ಫೋಟೋ ನೋಡಿದವ್ನು
ಈಗ ನನ್ನ ಇನ್ನ ಕೈಲಿ ಹಿಡಿ
ನನ್ನ ಮನಸ್ಸು ಕಳಿ ರಾಮ
ಚೆಂಡು ಕೊಡ್ತಿನಿ ॥ತಂದಾನಾ ॥

ಈ ಮಾತು ಕೇಳಿ ರಾಮಯ್ಯನು ತಾಯಿಗೆ, ಪಾಪಿ ಮಾತ ನುಡಿಬ್ಯಾಡ. ನಾನು ನಿನ್ನ ಮಗ ಇದೀನೆನ್ನುವನು. ಇವರಾಡುವ ಮಾತುಗಳ ಮಧ್ಯೆಯೇ ಮುತ್ತಿನ ಚೆಂಡು ಹಾರಿ ಹೋಗುವುದು. ಅದನ್ನು ಹಿಡಿಯಲು ರಾಮಯ್ಯ ಚಂದ್ರಾಯ್ಧ ಕೆಳಗಿಟ್ಟು, ಅದರ ಹಿಂದೆ ಓಡುವನು. ಆಗ ರತ್ನಾಕ್ಷಿ ಚಂದ್ರಾಯುಧ ಕೈಯಲ್ಲಿಡಿದು ಹೊರ್‍ಸ ಮ್ಯಾಲಿದ್ದ ಕುಪ್ಪಳ್ಸಿ ಎಗರಿ ರಾಮನ ಲುಂಗಿ ಬಟ್ಟೆ ಕೊಯ್ದು ಕೊಳ್ಳುವಳು. ರಾಮಯ್ಯನು ಮಾವನಿಗೆ ನಡೆದ ವಿಷಯವೆಲ್ಲಾ ತಿಳಿಸುವನು. ಹೋಲಿಕೆರಾಮನನ್ನು ಮತ್ತೆ ಕೈಗೆ ಬೇಡಿ ಹಾಕಿ ನೆಲಮನೆ ಗರಡಿಯಲ್ಲಿ ಕೂಡಿಹಾಕುವವೆನು. ರಾಜನಿಗೆ ಬೇಟೆ ಮಾರ್ಗದಲ್ಲಿ ಚಿಕ್ಕ ಹಂತ್ತಿ ನೆನಪಾಗಿ ಮರಳುವನು. ಆಗ ರತ್ನಾಕ್ಷಿಯು ಗಂಡನಿಗೆ ನೀನು ಹೋದ ಮೇಲೆ ನಿನ್ನ ಮಗ ಬಂದು ನನ್ನ ಭಂಗ ಮಾಡ್ದ ಎಂದಾಗ, ರಾಜ ನಂಬುವುದಿಲ್ಲ. ರಾಮಯ್ಯನ ಹರಿದ ಲುಂಗಿ , ಚಂದ್ರಾಯುಧ ತೋರಿಸಿದಾಗ ರಾಜನು ಈ ಮಗ ತಾಯಿಯನ್ನೆ ಭಂಗ ಮಾಡ್ದ ಎಂದು ಸಿಟ್ಟಿನಿಂದ ಬಂದು ಬಚ್ಚಣ್ಣನಿಗೆ

ಬೈಯುವನು. ನಡೆದ ವಿಷಯವೆಲ್ಲಾ ತಿಳಿಸಿ ಹೇಳಿದರೂ.ರಾಜನು ನಂಬದೇ ಮಗನ ತಲೆ ಕಡಿಸಬೇಕೆಂದು ನನ್ನ ಚಿಕ್ಕ ಹೆಂಡ್ತಿ ಹೇಳಿರುವಳು. ಇಲ್ಲದಿದ್ರೆ ನನ್ನ ಜೀವಕ್ಕಿರದಿಲ್ಲವಂತೆ ಮಗನ ತಲೆ ಕಡಿಸಲು ಭಾವ ಮೈದುನಿಗೆ ಆರ್ಡರ್ ಕೊಡುತ್ತಾನೆ. ಆಗ ಸೋದರ ಮಾವನು[8].(ಕುಮಾರ ರಾಮ ಕಾವ್ಯ ಪುಟ ಸಂ. 164)

ರಾಮನ ಜಲ್ಮ ಕಳಿಯ ಬ್ಯಾಡ ಲೋಕದಾಗ

ನಿನ್ನ ಮಾತಿಗೆ ಯಾರು ಎದುರು ಮಾತು ಕೊಡೋದಿಲ

ರಾಮೋಟ ಇನ್ನ ಸತ್ತ ಮ್ಯಾಲೆ ಊರಾಗ

ಆನೆಗುಂದಿ ಪಟ್ಟದಾಗ

ಡಿಲ್ಲಿದವ್ನು ಬರ್ತಾನ ಲೋಕದವ್ನು ಕೇಳೊ ಮಾವ ॥ತಂದಾನ ॥

ಎಂದು ದುಃಖಿಸುತ್ತಾನೆ. ಈ ವಿಯವನ್ನು ರಾಮಯ್ಯನಿಗೆ ತಿಳಿಸಲು, ರಾಮಯ್ಯನು ತಂದಿ ಮಾತು ಮೀರಬಾರದು, ಆರು ಮಂದಿ ಕಟುಕರೊಂದಿಗೆ ಊರ ಅಗಸಿ ಹೊರಗೆ ತಲೆಯೊಡ್ಯೋ ಮರಗಿಡ ಅಚ್ಚನ ಬಂಡೆ ಮ್ಯಾಲೆ ರಾಮನು ತಲೆ ಬಗ್ಗಿಸುವನು. ತಲೆಯನ್ನು ಚಂದ್ರಾಯುದ್ಧ ಹಿಡಿದು ಕಡ್ಯಾಕ ಹೋದ್ರೆ ಹುಬಿನಾರವಾಗುತ್ತದೆ. ಆಗ ರಾಮನು, ನಾನು ಯಾರಿಂದಲೂ ಸಾಯುವುದಿಲ್ಲ. ನನ್ನ ಒಡಹುಟ್ಟಿದ ತಮ್ಮನಿಂದಲೇ ನಾನು ಸಾಯುತ್ತೇನೆನ್ನುವನು.

ಬಚ್ಚಣ್ಣ ಹೋಗಿ ಹೋಲಿಕೆರಾಮನಿಗೆ ವಿಷಯ ತಿಳಿಸಿದಾಗ, ತಮ್ಮನು ನನ್ನ ಒಡ ಹುಟ್ಟಿದ ಅಣ್ಣನನ್ನು ನಾ ಹೇಗೆ ಕಡಿಯಲಿ? ಹೊಟ್ಟೆ ಗುಟ್ಟಿದ ಮಕ್ಕಳ್ನ ಕಡಿಸೋನು. ಅಣ್ಣ ಸತ್ತ ಮ್ಯಾಲೆ ನಾವಿದ್ದು ಪ್ರಯೋಜನವೇನು? ತಾಯಿ - ತಂದಿನ ಕಡಿಕ್ಯೆಂಡು ಬರ್ತಿನಿ ಎನ್ನುತ್ತಾನೆ. ಅದಕ್ಕೆ ಮಾವನು ಜೀವ ಕೊಟ್ಟ ತಾಯಿ - ತಂದಿನ ಕಡಿಬಾರದೆನ್ನುವನು. ಹಾಗಾದರೆ ಈ ಪಾತರಗಿತ್ತಿಗೇಕೆ ಉಳಿಸಲೆಂದು ಚಂದ್ರಾಯುದ್ಧದಿಂದ ಕತ್ತರಿಸುವನು. ಅಣ್ಣನ ಬಳಿ ಬರುವನು. ನನ್ನ ತಲಿ ಕಡಿ ತಮ್ಮಾ ಎಂದಾಗ ಅಣ್ಣನ ಬದಲು ತಾನೇ ತನ್ನ ತಲೆಯನ್ನು ಚಂದ್ರಾಯುಧದಿಂದ ಕಡಿದುಕೊಂಡು ಸಾಯುತ್ತಾನೆ. ಮಾವನು ರಾಮಯ್ಯನನ್ನು ನೆಲಮನಿಯಲ್ಲಿ ಬಚ್ಚಿಡುತ್ತಾನೆ. ಹೋಲಿಕೆ ರಾಮನ ತಲೆಯನ್ನು ರಾಮಯ್ಯನದೇ ಎಂದು ತಿಳಿಸುತ್ತಾನೆ. ತಾಯಿ ಬಹಳ ದುಃಖ ಮಾಡ್ತಾಳೆ. ತಾಯಿ ತನ್ನ ಮುತ್ತಿನ ಸೆರಗಿನಲ್ಲಿ ರಾಮನ ತಲೆಯನ್ನು ತಂದು ರತ್ನಾಕ್ಷಿಗೆ ತೋರಿಸುತ್ತಾಳೆ. ಮುಖವನ್ನು ನೋಡಿ ಈತ ರಾಮಯ್ಯ ಅಲ್ಲ. ಹೋಲಿಕೆ ರಾಮಯ್ಯನಿರುವನೆನ್ನುವಳು. ತಲೆಯನ್ನು ಬೆಳ್ಳಿ ಸೂಜಿ, ಬೆಳ್ಳಿ ತಂತಿಯಿಂದ ಹೊಲಿದು ಕೂಡಿಸುತ್ತಾಳೆ. ಹಾಗೆ ಹೊಲಿಕ್ಯರಾಮ ಅಣ್ಣನ ಜೊತೆಗೆ ಇರುತ್ತಾನೆ.

ಕುಮಾರರಾಮ ಸತ್ತನೆಂದು ಸುದ್ದಿ ತಿಳಿದ ಡಿಲ್ಲಿ ನವಾಬನು ಆನೆಗುಂದಿ ಮ್ಯಾಲೆ ದಾಳಿ ಮಾಡುವನು. ಬಚ್ಚಣ್ಣ ಈ ವಿಷಯ ರಾಜನಿಗೆ ತಿಳಿಸುವನು. ನಿನ್ನ ಮಗನನ್ನ ಬೇಡವೆಂದರೂ ಕಡಿಸಿದೆ. ಈಗ ಯಾರು ಯುದ್ಧ ಮಾಡಬೇಕು. ನಿನ್ನ ಹೆಂಡ್ತಿ ರತ್ನಾಕ್ಷಿಯನ್ನು ನವಾಬನಿಗೆ ಕೊಟ್ಟು ಕೈ ಮುಗಿ ಎನ್ನುವನು. ಹೇಗೆ ಕೊಡಲೆಂದು ರಾಜನು ದುಃಖ ಮಾಡುವನು. ಡಿಲ್ಲಿ ನವಾಬನ ಏಳು ಸಾವಿರ ಮಂದಿ ಸೈನಿಕರು ಆನೆಗುಂದಿಗೆ ಮುತ್ತಿಗೆ ಹಾಕುವರು. ಊರು ಹಾಳಾಗುವುದೆಂದು ಬಚ್ಚಣ್ಣನು ಶಾಸ್ತ್ರೀಯ ವೇಷಹಾಕಿಕೊಂಡು ಅಗಸಿ ಬಳಿಗೆ ಹೋಗಿ, ರಾಮಯ್ಯನಿಗೆ ಎಲ್ಲಾ ವಿಷಯ ತಿಳಿಸುವನು. ಬಚ್ಚಣ್ಣ ರಾಮಯ್ಯನ ಕುದುರಿ,

ಆಯುಧಗಳನ್ನೆಲ್ಲಾ ಕೊಡುತ್ತಾನೆ. ಮರಳಿ ಊರೊಳಗೆ ಹೋಗುವಾಗ ಶಾಸ್ತ್ರೀಯನ್ನು ಸೈನಿಕರು ಹಿಡಿದುಕೊಳ್ಳುವರು. ಅವರಿಗೆಲ್ಲಾ ಶಾಸ್ತ್ರ ಹೇಳುವನು. ನೀವು ರತ್ನಾಕ್ಷಿಯು ಸೂರ್ಯ , ಚಂದ್ರ ಇದ್ದಂಗ ಇದಾಳೆ. ಆಕಿನ್ನ ಸೆರಗು ಹಿಡ್ಕಂಡು ಡಿಲ್ಲಿಗೆ ಹೋಗ್ರಿ ಇಲ್ಲಾಂದ್ರೆ ತಲೆ ಕಡಿತಾರ ಎಂದು ಹೇಳಿ ಮನಿಗಿ ಬರುವನು.

ರಾಮಯ್ಯನು ಯುದ್ಧಕ್ಕೆ ತನ್ನ ಕುದುರಿ ಮೇಲೆ ಸಿದ್ಧನಾಗಿ ಹೋಗುವನು. ಇತ್ತ ಕಂಪ್ಲಿ ರಾಜ ಬಚ್ಚಣ್ಣ ಮತ್ತು ರತ್ನಾಕ್ಷಿಯು ಕುದುರಿ ಏರಿ ಯುದ್ಧಕ್ಕೆ ಹೊರಡುವರು. ರಾಮಯ್ಯನು ಎಲ್ಲರ ತಲೆಗಳನ್ನು ಕಡಿದು ನವಾಬನ ಬಳಿ ಬರುವನು. ನವಾಬ ನನ್ನನ್ನು ಬಿಟ್ಟು ಬಿಡಿರೆಂದು ಬೇಡಿಕೊಂಡಾಗ ಇನ್ನು ಮುಂದೆ ಇತ್ತ ಕಡೆ ಬರಬ್ಯಾಡವೆಂದು ಎಚ್ಚರಿಸುವನು. ನವಾಬ ಡಿಲ್ಲಿಗೆ ವಾಪಸ್ಸಾಗುವನು. ಅಲ್ಲಿ ತಂದಿ - ಮಗನ ಎದುರಾಗುವುದು. ಬಚ್ಚಣ್ಣ ಎಲ್ಲ ವಿಷಯವನ್ನು ರಾಜನಿಗೆ ತಿಳಿಸಿದಾಗ ರಾಜನು ರತ್ನಾಕ್ಷಿಗೆ ಮರಣ ದಂಡನೆ ನೀಡುವನು. ಸಾಯುವ ಮುಂಚೆ ರತ್ನಾಕ್ಷಿಯು ರಾಮಯ್ಯನಿಗೆ[9]. (ಕುಮಾರ ರಾಮ ಕಾವ್ಯ ಪುಟ ಸಂ.195)

ಈ ಜೀವದಲ್ಲಿ ನಿನ್ನ ಜೀವ ಕಲೀಲಿಲ್ಲ
ನಿಮ್ಮ ತಂದಿ ತಾಳಿ ಕಟ್ಟಿದ್ದಕ್ಕೆ
ಆಗ ತಾಯಿ ಅಂತಿದ್ದಿ
ಇಲ್ಲಿ ಸತ್ತಿದವಳು ನಾನು ಇಲ್ಲಿ ಹುಟ್ಟುತ್ತೀನಂದ್ರೆ
ಡಿಲ್ಲಿಯವ್ನ ಹೋಟ್ಯಾಗ
ಈಗ ಕುದುರಿ ಕಿವಿಯಾಗ ಹುಟ್ಟ ಬಿಡ್ತಿನಿ
ಆಗ ಸಾಯಬ್ರು ಕುಲ್ದಾಗ ಹುಟ್ಟಿ
ಆಗ ನಿಮ್ಮ ಆನೆಗುಂದಿಗೆ ಬರ್ತಿನಿ
ಆಗನ್ನ ರಾಮಯ್ಯ ನನ್ನ ಜೀವ ಕಲೀಬೇಕಯ್ಯೋ ॥ತಂದಾನಾ॥

ಎಂದಾಗ ರಾಮಯ್ಯನು ನೀನು ಲೋಕದಾಗ ಎಷ್ಟು ಅವತಾರ ತಾಳಿದ್ರು, ನೀನು ನನ್ನ ತಾಯಿನೇ ಎನ್ನುತ್ತಾನೆ. ನಿನ್ನ ಜೀವ ಕಳಕೊಂತಿ ರಾಮಯ್ಯ ಎಂದು ಹೇಳುತ್ತಾ ರತ್ನಾಕ್ಷಿ ಪ್ರಾಣ ಬಿಡುತ್ತಾಳೆ. ಮುಂದೆ ಸತ್ತ ರತ್ನಾಕ್ಷಿಯು ಡಿಲ್ಲಿ ನವಾಬನ ಕುದುರಿ ಕಿವಿಯಾಗಲಿದ್ದ ಹುಟ್ಟುತ್ತಾಳೆ. ಅವಳಿಗೆ ನವಾಬನು ಹುಸೇನಿ ಎಂದು ನಾಮಕರಣ ಮಾಡುತ್ತಾನೆ. ಮಗಳು ವಿದ್ಯಾ ಕಲಿತು ಬೆಳೆದು ಹದಿನೆಂಟು ವರ್ಷದವಳಾಗುವಳು. ತಂದೆಯ ಅಪ್ಪಣೆ ಪಡೆದು ಹುಸೇನಿಯು[10] . (ಕುಮಾರ ರಾಮ ಕಾವ್ಯ ಪುಟ ಸಂ. 203)

ಕೋಟಿ ಮಂದಿ ಕರ್ಕಂಡು
ಕುದುರಿ ಮ್ಯಾಲೆ ಕುಂತಾಳ
ಘೋತಧಿ ಇಂಥ ರಣವೇನಣ್ಣ
ಅಣ್ಣಾ ಡೋಲು ಹೊಡೆದ್ರೆ ನಿಂದ್ರಬೇಕು
ಆಗ ರಣಭೇರಿ ಹೊಡೆದ್ರೆ ಹೋಗಬೇಕು
ಜನ ಸಂಖ್ಯಾ ಕರ್ಕಂಡು
ಆಗ ಡಿಲ್ಲಿಲ್ಲಿದ್ದಣ್ಣ

ಆನೆಗುಂದಿಗೆ ಬಂದಾಳ ॥ತಂದಾನಾ ॥

ಬಚ್ಚಣ್ಣನು ರಾಮಯ್ಯನಿಗೆ ವಿಷಯ ತಿಳಿಸುವನು. ರಾಮಯ್ಯ ಕುದುರೆ ಏರಿ ಯುದ್ಧ ಮಾಡುತ್ತಾನೆ. ಸೈನಿಕರೆಲ್ಲರೂ ಇವನನ್ನು ಕಂಡು ಅಂಜಿ ಓಡಿ ಹೋಗುತ್ತಾರೆ. ಹುಸೇನಿಯು ಕೂಡ ಓಡಲು ಯತ್ನಿಸಿದಾಗ, ಅವಳ ತಲೆ ಮೇಲಿನ ಟೋಪಿ ಕೆಳಗೆ ಬೀಳುತ್ತದೆ. ಆಗ ರಾಮಯ್ಯನು ಈಕೆ ಹೆಣ್ಣೆಂದು ಅರಿತು[11]. (ಕುಮಾರ ರಾಮ ಕಾವ್ಯ ಪುಟ ಸಂ. 206)

ಆಗ ಹೆಣ್ಣು ಮಗಳು

ಕೈಯೆತ್ತಿ ಹ್ಯಾಂಗ ಕಡಿಬೇಕು ನಾನು

ಹೆಣ್ಣು ಮಗಳ್ನ ಕಡೀಬಾರದಂತ

ಆಗ ಕೈಯಾಗಿದ್ದದು ಕೆಳಗ್ಹಾಕಿ

ಕುದುರಿ ಮ್ಯಾಗಿದ್ದ ಕೆಳಗಿಳಿದು

ಒಂದು ಪಾದ ಎರಡು ಕೈ ಜೋಡಿಸಿ

ಯಮ್ಮ ತಾಯಾಗಿ ನೀನಮ್ಮ ಮಗನಾಗಿ ನಾನಮ್ಮ

ಯಮ್ಮ ಮಗನ್ನ ನೋಡಾಕ ಬಂದೇನೆ ಆನೆಗುಂದಿ ಲೋಕಕ್ಕೆ

ಏಽ ನಿನ್ನ ಮಗ ನೋಡಮ್ಮ

ಅರ್ಧ ರಾಜ್ಯ ಮಗನದಮ್ಮ ಅರ್ಧರಾಜ್ಯ ತಾಯದಮ್ಮ ಎನ್ನಲು

ನಿನ್ನ ಮಗನಮ್ಮಾ ಎನ್ನುವನು. ಇದರಿಂದ ಕೋಪಗೊಂಡು ರತ್ನಾಕ್ಷಿ ಹಾಗೆನ್ನಬೇಡ. ನೀನು ನನ್ನ ಕೈ ಹಿಡಿ ಎಂದಾಗ ಅದು ಸಾಧ್ಯವಿಲ್ಲವೆನ್ನುವನು. ಹಾಗಾದರೆ ನಿನ್ನ ರೊಕ್ಕವೆಲ್ಲ ನನಗೆ ಕೊಟ್ಟುಬಿಡು, ಇಲ್ಲಾಂದ್ರೆ ನಿನ್ನ ತಲೆ ಕಡಿತಿನಿವೆಂದಾಗ , ರಾಮಯ್ಯನು ಕೈ ಮುಗಿದು ಬೇಡಿಕೊಳ್ಳುವನು. ಈ ಮಗನನ್ನು ಬಿಟ್ಟು ಡಿಲ್ಲಿಗೆ ಹೋಗು, ನನ್ನ ರಾಜ್ಯ ಕೊಡೆದಿಲ್ಲ. ನನ್ನ ಜೀವಾನೆ ಕೊಡ್ತಿನಿ ಅಂತ ಹೇಳಿ ತಲೆಯನ್ನು ಕಡಿದು ಕೊಳ್ಳುವನು. ರಾಮನ ತಲೆ ಡಿಲ್ಲಿ ನವಾಬನ ಅಗಸಿ ಮ್ಯಾಲೆ ಹೋಗಿ ಕುಂತು ಬಿಡುತ್ತದೆ. ರಾಮ ಕ್ಯಾಕಿ ಹೊಡೆದಂಗೆಲ್ಲ ಎಗರಿ ಎಗರಿ ಜನ ಬೀಳ್ತಾರೆ. ಇದನ್ನು ಕಂಡ ನವಾಬನು ರಾಮಯ್ಯನಿಗೆ ಕೈ ಮುಗಿದು ಮನೆಯೊಳಗೆ ಸಿಂಹಾಸನದ ಮೇಲೆ ಬಂದು ಕೂಡು ರಾಮ ಎಂದು ಬೇಡಿಕೊಂಡಾಗ, ಕಿಲ ಕಿಲ ನಗುತ್ತಾ ಅಗಸಿ ಮೇಲಿಂದ ಸಿಂಹಾಸನದ ಮೇಲೆ ರಾಮನ ತಲೆ ಬಂದು ಕೂಡುತ್ತದೆ. ಡಿಲ್ಲಿ ರಾಜನು ಆನೆಗುಂದಿಗೆ ಸುದ್ದಿ ಕಳಿಸುತ್ತಾನೆ. ರಾಮಯ್ಯ ಸತ್ತು ಹೋದ . ಅವನ ಮುಂಡ ಡಿಲ್ಯಾಗ ಐತಿ ಜೀವದಲ್ಲಿ ಹಿಡಕೊಂಡು ಕುಂತಾನ. ಅದನ್ನು ಕೇಳಿ ಹರಿಯಾಳದೇವಿ ದುಃಖ ಮಾಡ್ತಾಳೆ. ಒಳ್ಯಾಡಕಂತ ಡಿಲ್ಲಿಗೆ ಬರ್ತಾಳೆ. ತನ್ನ ಮುತ್ತಿನ ಸೆರಗೊಡ್ಡಿ ಮಗನಿಗೆ ಬಾ ಎನ್ನುತ್ತಾಳೆ . ಗರ್ ಗರ್ ತಿರುಗುತ್ತ ರಾಮನ ತಲೆ ತಾಯಿ ಉಡಿಯೊಳಗೆ ಬಂದು ಬೀಳುತ್ತದೆ. ಉಡಿಯಲ್ಲಿ ತಲೆಯನ್ನು ಕಟ್ಟಿಕೊಂಡು ಆನೆಗುಂದಿಗೆ ಬರುತ್ತಾಳೆ.

ಆನೆಗುಂದಿಯಲ್ಲಿ ರಾಮನ ಮುಂಡ ಇರುವುದನ್ನು ತಿಳಿದು ಹುಸೇನಿಯು ಎರಡು ಅವತಾರದಲ್ಲಿ ಬಂಧ್ರು ರಾಮಯ್ಯ ನನ್ನ ಜೀವಕ್ಕಾಗಲಿಲ್ಲ. ನೀನಿಲ್ಲದೆ ನಾನು ಹೇಗೆ ಬದುಕಲಿ ಅಂತ ಚಂದ್ರಾಯುಧದಿಂದ ಕಡಿದುಕೊಂಡು, ರಾಮ ಎನ್ನುತ್ತಾ ಜೀವ ಬಿಡುತ್ತಾಳೆ. ಡಿಲ್ಲಿ ನವಾಬ ಮಗಳನ್ನು ಕಂಡು[12]. (ಕುಮಾರ

ರಾಮ ಕಾವ್ಯ ಪುಟ ಸಂ. 213)

ಮಗಳ ಇನ್ನ ನೀನು ಕಡಿಕ್ಯಂಡು ಸತ್ತೇನಮ್ಮ

ರಾಮ ಸತ್ತೇತಲ್ಲಿ ನೀನು ಸತ್ತೇನಮ್ಮ

ರಾಮನ ಜಲ್ಮ ಕಳದು ಜಲ್ಮ ಬಿಟ್ಟೇನಮ್ಮ ॥ ತಂದಾನಾ ॥

ಎಂದು ದುಃಖ ಮಾಡ್ತಾನೆ. ಮಗಳನ್ನು ಸುಟ್ಟು, ಅಲ್ಲಿ ಸಮಾಧಿ ಕಟ್ಟಿಸುತ್ತಾನೆ. ಆನೆಗುಂದಿ ಪಟ್ಟದಾಗ ನಿನ್ನ ದರಗಾ ಆಗಬೇಕು. ನಿನ್ನ ಪೂಜಾ ನಡೀಬೇಕಮ್ಮ ಎಂದು ಹುಸೇನಿ ದರಗಾ ಕಟ್ಟುವನು. ರಾಮನ ತಲೆಯನ್ನು ಹೊಳೆದು ಬಿಡುತ್ತಾರೆ. ಆಗ ರಾಮನು ಎದ್ದು ನಿಲ್ಲುತ್ತಾನೆ. ಅಮ್ಮಾ ನಾನು ಎರಡು ಅವತಾರದಲ್ಲೂ ಜೀವ ಬಿಡೋನಲ್ಲ. ಹೆಣ್ಣು ಮಕ್ಕಳ ಕಾಲಾಗ ಜೀವ ಬಿಟ್ಟೀನಿ. ಹೆಣ್ಣು ಮಕ್ಕಳ ಮಕ ನೋಡದಿಲ್ಲ ಎಂದು ಹೇಳಿ ಮಾವನ ಬಳಿ ಬರುತ್ತಾನೆ. ಮಾವನಿಗೆ ಆನೆಗೊಂದ್ಯಾಗ ನಿಮ್ಮದೇ ನಡೀಬೇಕು. ಜೀವ ಉಳಿಸಿದೋರ ಜೀವ ತೇರು ಮಾಡಿ ಎಳಿಸಬೇಕು. ರಾಮ ಅಂಬೋ ಹೂವಿನ ತೇರು ಮಾಡಿ ಲೋಕದಲ್ಲಿ ಎಳಿಸಿರಿ, ಮುಂದೆ ನಿಮ್ಮ ತೇರು ಹಿಂದೆ ನನ್ನ ತೇರು ಎಂದು ಹೇಳುವನು.

ನೀನು ಹೇಳಿದಂತೆ ಆಗಲೆಂದು ಮಾವ ಒಪ್ಪುವನು. ಸೊಂಡೂರ ನಗರ ಮ್ಯಾಕೆ ಹೋಗುವಾಗ ಏಳು ಮಂದಿನ ಕಡ್ಡ , ರಾಮ ಅಂತ ಜೀವ ಬಿಟ್ರು. ಅಲ್ಲಿ ಏಳು ಮಸೀದಿ ನಡೀಬೆಕೆಂದು ಹೇಳಿ, ಸೊಂಡೂರು ಗುಡ್ಡದ ಮ್ಯಾಗೆ ಆರಂಡಿಗೆ ಗುಡ್ಡದಲ್ಲಿ ಸೇರಿ ಬಿಡುತ್ತಾನೆ. ತಂದಿ - ತಾಯಿ ಹುಡುಕುತ್ತಾ ಗುಡ್ಡಕ್ಕೆ ಬರುತ್ತಾರೆ. ಜಟಿಂಗೇಶ್ವರ ಸ್ವಾಮಿ ನೀನೆ ಕೊಟ್ಟ ಮಗ ಎಲ್ಲಿಗೆ ಹೋಗ್ಯಾನ ಎಂದು ಕೇಳುವರು. ಆಗ ಗುಡ್ಡದೊಳಗಿದ್ದ ದೇವರು ಹೀಗೆನ್ನುವನು. ನಿನ್ನ ಮಗನನ್ನು ಕೊಲ್ಲು ಕೊಲ್ಲು ನೋಡಿಕ್ಯಂತ , ಗಿಡ ಗಿಡ ನೋಡಕ್ಯಂತ ಏರಬೇಕಮ್ಮ ಆರಂಡಿ ರಾಮಯ್ಯ ಅಂತ ಹೇಳುತ್ತಾನೆ. ತಂದಿ -ತಾಯಿ ಹುಡುಕುತ್ತ ಆರಂಡಿಯೊಳು ಹೋಗುವಾಗ ತಾಯಿಗೆ ಬಾಯಾರಿಕೆಯಾಗುವುದು. ಇದನ್ನು ರಾಮಯ್ಯ ಕೇಳುತ್ತಾನೆ. ಹಡೆದ ತಾಯಿಯ ಗೋಳಾಟ ಕೇಳಿ ಇಲ್ಲಿದ್ದೀನಿ ತಾಯಿ ಎನ್ನುವನು. ನೀವು ನನ್ನ ಬಳಿಗೆ ಬರಬೇಡಿ ಮೂರು ಗೇಣು ದೂರ ನಿಲ್ಲಿರಿ ಎನ್ನುತ್ತಾನೆ. ಆಗ ತಾಯಿಯು ಮಗನಿಗೆ ಬೇಡಿಕೊಳ್ಳುತ್ತಾಳೆ. ಜೀವದಲ್ಲಾಗಿ ಹ್ಯಾಂಗ ಮಾಡಬೇಕು ರಾಮಾ ನೀನು ಆರಂಡಿದಾಗ ಸೇರಿಕೊಂಡೆ . ಆನೆಗುಂದಿ ಪಟ್ಟದಲ್ಲಿ ಯಾರಿಗೆ ಬಿಟ್ಟು ಬಂದಿ? ಎಂದು ಕೇಳಿದಾಗ, ಸ್ವಾದರ ಮಾವ ಬಚ್ಚಣ್ಣ, ಸ್ವಾದರತ್ತಿ ಹಂಪಕ್ಕರಿಗೆ ಬಿಟ್ಟು ಬಂದಿರುವೆ ಎನ್ನುವನು.

ಇತ್ತ ಆನೆಗುಂದಿಯಿಂದ ಆರಂಡಿಗೆ ಅತ್ತಿ , ಮಾವ ಅಳಿಯನನ್ನು ಹುಡುಕುತ್ತ ಬರುತ್ತಾರೆ. ಅವರನ್ನು ಕಂಡು ರಾಮಯ್ಯನು, ನೀವು ಹಿಂದಕ್ಕೆ ಹೋಗಿ ಅಲ್ಲಿ ಪೂಜೆ ನಡಿಸಬೇಕೆನ್ನುವನು. ತಾಯಿಯು ಮಗನಿಗೆ ನೀನು ನನ್ನ ಮುಖ ನೋಡೋದಿಲ್ಲವೆಂದರೆ ನಾನು ಕುಡಿಸಿದ ಹಾಲು ಕೊಡು ಎನ್ನುವಳು. ಆಗ ಬಲಕ್ಕೆ ಬಕ್‌ನಂತ ತಿರುವಣ ಮಾಡಿದ್ರೆ , ಬೆಳ್ಳಗ ಹಾಲು ಹೋಗಿ, ವಿಭೂತಿ ಆಗಿ ಬಿಡ್ತು, ಎಡಕ್ಕೆ ತಿರುವಣ ಮಾಡಿದ್ರೆ, ಕೆಂಪು ರಕ್ತ ಬಿದ್ದು ಬಿಡ್ತು. ಅದು ಒಂದು ಜಾಜ ಆಗಿ ಬಿಡ್ತು. ಈ ಲೋಕನೇ ಹೆಣ್ಣು ಮಕ್ಕು ನೋಡಬಾರದು. ನನ್ನ ಜಾಜ ನನ್ನ ರಕ್ತನೇ ಬಾಕ್ಲಿಗೆ ಸಾರಿಸಬೇಕು. ನನ್ನ ವಿಭೂತಿಯೇ ಮೊಲೆ ಹಾಲು ಹಣಿ ಮ್ಯಾಲೇ ರಾಮ ಅಂತ ಹಚ್ಚಬೇಕೆಂದು ಹೇಳಿ ಆರಂಡಿದಾಗ ಕುಮಾರಸ್ವಾಮಿ ಅವತಾರನಾಗಿ ನಿಂತ್ಕಂಡು ಬಿಡುತ್ತಾನೆ.

5.2- ಕೃಷ್ಣಗೊಲ್ಲರ ಕಾವ್ಯ *:

'ಚಾಂಪುರ' ಪಟ್ನದಲ್ಲಿ ಚಾಮರಾಜ. ಅವನ ಹೆಣ್ತಿ ನೀಲವೇಣಿದೇವಿ. ಇವರ ಕುಲ ಕೃಷ್ಣಗೊಲ್ಲರು, ಹಾಲದ ಗೊಲ್ಲರು ಅಂತ. ಚಾಮರಾಜನ ಮಗನೆ ಕಾಂಭೋಜರಾಜ. ವಿಷ್ಣು, ಪರಮಾತ್ಮ, ಶಾಂಭದೇವೆಂದ್ರ,ಜಟಿಂಗೇಶ್ವರದಲ್ಲಿರೋ ಕಲ್ಪ ವೃಕ್ಷದ ಕಾಮದೇವತೆ, ಗೋಪ್ಯಮ್ಮ ತುಂಬಿದ ಗರ್ಭಿಣಿ. ಎರ್ಡು ರೆಕ್ಕೆ ಸಡ್ಲ ಮಾಡಿಕ್ಯಂಡು ಬರ್ತೀನಿ ಎಂದು ಚಾಮರಾಜನ ತ್ವಾಟದಾಗ ಬಂದು ಇಳಿತೈತಿ.ದೇವತೆಗಳು ದುಷ್ಟ ಲೋಕ , ಕರ್ಮಲೋಕದಾಗ ಕಣ್ಣಿಗೆ ಕಾಣಬಾರ್ದು. ನಿನ್ನನ್ನು ಕೊಲ್ತಾರೆ ಅಂಧ್ರು ಕೇಳದೆ ಕಾಮದೇವತಿ ಹೋಗುವಳು. ಇತ್ತ ಚಾಮರಾಜ ಮಗ ಹುಟ್ಟಿದ ಮೂರು ತಿಂಗಳಿಗೆ ಬ್ಯಾಟಿ ಹಿಡಿದು ಕೊಂಡು ಬರಲು ಹೋಗುವಾಗ, ಹೊಂಡದ ಬಳಿ ನೀರಡಿಕೆಯಾಗಿ ಬರಲು, ನಾಕ ಪಾದದ ಗುರುತು ನೋಡಿ ಹುಲಿ, ಕರ್ಡಿ ತ್ವಾಟದಾಗ ಬಂದೈತೆಂದು ಬಂದೂಕಿನಿಂದ ಶಬ್ದ ಮಾಡುತ್ತಾನೆ. ಶಬ್ದ ಕೇಳಿ ಕಾಮದೇವತಿ ರೆಕ್ಕೆ ಪಟಪಟನೇ ಬಡ್ದು ಗಗನಕ್ಕೆ ಹಾರುವಾಗ, ಚಾಮರಾಜ ತಲೆ ಮೇಲೆತ್ತಿ ನೋಡಿ ನವಿಲೆಂದು ತಿಳಿದು ಏಳು ಗುಂಡುಗಳನ್ನು ಹಾರಿಸುವನು. ಕಾಮದೇವತಿ ಕೆಚ್ಚಲದಾಗ ಒಂದು ಕೊಡ ಹಾಲು, ಈಗ ಆಗ ಹುಟ್ಟುವ ಮಗ ಹಾಗೆ ಕೆಳಗೆ ಬೀಳುತ್ತಾಳೆ. ಕಾಮದೇವತಿಯನ್ನು ನೋಡಿ ಚಾಮರಾಜ ಕ್ಷಮೆಯಾಚಿಸುತ್ತಾನೆ. ಹಡ್ಯೋತಾಯೀನ ಹ್ಯಾಂಗ ಕೊಲ್ದೆಯೋ, ನಿನ್ನ ಮನಿಗೆ ಹಡ್ಯೋರು ಇಲ್ದಾಂಗ ಆಗಲಿ. ಈ ದುಷ್ಟ ಲೋಕದಲ್ಲೆ ನನ್ನ ಪೂಜೆ ಆಗಲಿ, ನನ್ನ ಶಾಪ ನಿನ್ನ ಮಗನಿಗೆ ಹತ್ತಲೆಂದು ಪ್ರಾಣ ಬಿಡುತ್ತದೆ. ಕಾಮದೇವತಿಯ ಸಮಾಧಿಯನ್ನು ತನ್ನ ತೋಟದಲ್ಲೆ ಮಾಡಿ ಮನಿಗಿ ಬರ್ತಾನೆ.

ದುಃಖ ಮಾಡ್ತಾ ಮನಿಗಿ ಬಂದು, ಮನಿದೇವ್ರಿ ಗೋಪಿನ ಕೊಂದೆ ಎನ್ನುತ್ತಾ ಮನಿ ಮುಂದೆ ಜೀವ ಬಿಡ್ತಾನೆ. ಹೆಂಡ್ತಿಯು ಮೂರು ತಿಂಗಳ ಮಗನೊಂದಿಗೆ ಹೇಗೆ ಬದುಕು ಕಳೆಯಲೆಂದು ದುಃಖ ಮಾಡುತ್ತಾಳೆ. ಗೋಪಮ್ಮನ ಬಗಲಾಗ ಚಾಮರಾಜನ ಸಮಾಧಿ ಊರ ಜನರು ಮಾಡುತ್ತಾರೆ. ಕಾಂಭೋಜರಾಜ ವಿದ್ಯಾಭ್ಯಾಸ ಕಲಿತು ಹದಿನೆಂಟು ವರ್ಷದ ಮಗನಾಗಿ ಬೆಳೆದು , ರಾಜ್ಯವಾಳುತ್ತಾನೆ. ಶಾನುಭೋಗರು ತಾಳೆಗರೆ ಹೊತ್ತಿಗೆ ನೋಡಿ ಕಾಂಭೋಜರಾಜನಿಗೆ ತಂದೆಗೆ ಕಾಮದೇವತಿ ಕೊಟ್ಟ ಶಾಪ ತಿಳಿಸುತ್ತಾನೆ. ಏಳು ಮಂದಿ ಹೆಣ್ಮಕ್ಕಳೊಂದಿಗೆ ಕಾಂಭೋಜರಾಜನ ಮದುವೆಯಾಗುತ್ತದೆ. ಮದುವೆಯಾಗಿ ಎಂಟು ವರುಷ ಕಳೆದರೂ ಅವನಿಗೆ ಮಕ್ಕಳಾಗುವುದಿಲ್ಲ. ರಾಜ ತಾಳಗರಿ ಹೊತ್ತಿಗೆ ತೆಗೆಸಿ ನೋಡುತ್ತಾನೆ. ಊರು ಗೌಡಿಕೆ ಬಿಟ್ಟು ಹೋಗಬೇಕೆನ್ನುವನು. ಮೂರು ಗಾವುದ ಹೋಗಿ, ಮೂರು ದಾರಿ ಕಲಿತಲ್ಲಿ ಮಠಾ ಕಟ್ಟಬೇಕು, ಹಿತ್ತಾಳಿ ಮಠ, ರಾಗಿ ಮಠ, ಬೆಳ್ಳಿ ಮಠ ಎದುರು ಬಸವಣ್ಣನಿಂದ್ರಿಸಬೇಕು. ಎಂದು ಹೇಳುತ್ತಾನೆ. ಕಾಂಭೋಜೆರಾಜ ತಾಯಿಗೆ ನಮಸ್ಕರಿಸಿ ಏಳು ಹೆಂಡಿರೊಂದಿಗೆ ತೀರ್ಥಯಾತ್ರೆಗೆ ಹೋಗುತ್ತಾನೆ. ಹೆಂಡ್ತಿಯರೊಂದಿಗೆ ಕಷ್ಟ ಪಟ್ಟು ವನ - ಮಠಗಳ ನಿರ್ಮಾಣ ಮಾಡುತ್ತಾನೆ. ಹೀಗೆ ಹನ್ನೆರಡು ವರ್ಷ ಮೀರಿತು. ಮಕ್ಕಳಾಗಲಿಲ್ಲ. ಆಗ ಹೆಂಡಂದಿರು ರಾಜನಿಗೆ, ಭೂಮಿಮ್ಯಾಲೆ ಗೊಡ್ಡವನು ಅನ್ನಿಸಿಕೊಳ್ಳುವುದ ವಿಷಾ ಕುಡಿದು ಸಾಯೋಣವೆಂದು ಕುಡಿಯುತ್ತಿರಲು, ದೇವಲೋಕದಿಂದ ಮುನೀಶ್ವರ, ನಾಗೀಶ್ವರ , ದೇವಿಶ್ವರ ನೋಡಿ, ವಿಷ್ಣುವು ದಾಸಪ್ಪನ

---

* ಕುಮಾರ ರಾಮ ಮತ್ತು ಕೃಷ್ಣ ಗೊಲ್ಲರ ಮಹಾ ಕಾವ್ಯ: ಸಂ. ಡಾ. ಕೆ. ಎಮ್.ಮೇತ್ರಿ, ಕನ್ನಡ ವಿಶ್ವವಿದ್ಯಾಲಯ- ಹಂಪಿ 1997

ವೇಷಹಾಕಿ ಕೊಂಡು ಕೈಯಲ್ಲಿ ದೀಪ , ಗರುಡ, ಜೋಳಿಗೆ, ಜಾಗಟೆ ಮೂರು ನಾಮ ಹಾಕಿಕೊಂಡು ಬಂದು, ದಾನಕೊಡಿ ಎಂದು ಕೇಳುತ್ತಾನೆ. ಏನಿಲ್ಲವೆಂದು ರ್‍ಯಾಜನು ತನ್ನ ಕಿರಿಬಳ್ಳಿನಲ್ಲಿದ್ದ ಉಂಗುರ ದಾನ ಮಾಡಿದನು. ಆಗ ಏಳು ಮಂದಿ ಹೆಂಡ್ರು ಬಂದು ಮುತ್ತಿನ ಸೆರಗೊಡ್ಡಿದ್ರು. ಆರು ಮಂದಿಗೆ ಕಜ್ಜುರಿ ಹಣ್ಣು ಉಡ್ಯಾಗ ಹಾಕುವನು. ಕೊನೆಯಾಕಿ ಸಿರಿದೇವಿ ಸೆರಗೊಡ್ಡಿದಾಗ ಇಲ್ಲೆನ್ನುವನು. ಆಗ ಆಕಿ ಬಾಯಿಗೆ ಬಂದಂತೆ ಬೈಯುವಳು ಮಣ್ಣು ತೂರುವಳು. ನಿನ್ನ ಗುಡಿಗೆ ಗುಂಡು ಹಾಕಾ, ಬಾಯಿಗೆ ಬೇಲಿ ಬಡಿಯಾ, ಗುಡಿಗೆ ಬೆಂಕಿ ಹಾಕಾ, ನಾನು ಏನು ಪಾಪ , ಕರ್ಮ ಮಾಡಿದ್ದೆ. ಒಬ್ಬರು ಪತ್ರಾಳ್ದಾಗ ಅನ್ನಿಟ್ಟೆ, ಒಬ್ಬರು ಪತ್ರಾಳ್ದಾಗ ಸುಣ್ಣಿಟ್ಟೆ ಎಂದು ಬೈಯುವಳು. ಆಗ ದಾಸಪ್ಪನು ಕಾಂಭೋಜ ರಾಜನಿಗೆ ವರ ಕೊಟ್ಟನಿ ಹಡ್ಯಾದು ಸರ್ತಿ ಅವುದು, ಜೋಪಾನ ಮಾಡೋದು ಸಿರಿದೇವಿದು. ರಾಜನನಿಗೆ ಹತ್ತೇಟು ಇರ್‍ತಾವೆ. ಅವಳಿಗೆ ಹೊಡಿಬಾರ್‍ದು ಹುಷಾರು ಎಂದು ಹೇಳಿ ಹೋಗುವನು.

ಆರು ಮಂದಿ ಅಕ್ಕ - ತಂಗಿಯರು, ಬಸುರಾದ್ರು, ಸಿರಿದೇವಿ ಗೊಡ್ಡಾಗಿರುವಳು. ಇವಳ ನೆರಳು ನಮ್ಮ ಮೇಲೆ ಬಿದ್ದರೆ, ಹುಟ್ಟೋ ಮಕ್ಕಳು ಕರಗಿ ಹೋಗ್ತಾರೆ ಎಂದು ಗಂಡನಿಗೆ ಹೇಳಿ, ಊರ ಹೊರಗಿನ ಅಗಸಿಯಲ್ಲಿ ಮನಿ ಕಟ್ಟಿಸಿ ಸಿರಿದೇವಿಯನ್ನು ಇಡುವರು. ಮುಂದೆ ಆರು ಮಂದಿಗೆ ರಾಜ ಆರು ಮಕ್ಳು ಹುಟ್ಟುತ್ತವೆ. ಕಾಂಭೋಜ ಆರು ಮಕ್ಕಳನ್ನು ಎತ್ತಿಕೊಂಡು ಸಿರಿದೇವಿಗೆ ಜೋಪಾನ ಮಾಡಲು ಕೊಡ್ತಾನೆ. ಮಕ್ಕಳಿಗೆ ತೊಟ್ಲಿಟ್ಟು ಅಕ್ಕಂದಿರಿಗೆ ಕರೆಯಲು ಕಳಸಿದರೆ, ಸುಡಗಾಡಿಗೆ ಒಯ್ದು ಮಕ್ಳು, ನಮ್ಮ ಪಾಲಿಗೆ ಸತ್ತು ಹೋಗ್ಯಾರ ಎಂದು ಹೋಗುವುದಿಲ್ಲ. ಸಿರಿದೇವಿ ನಾಗಚತ್ತಿರಿ, ದೇವಚತ್ತಿರಿ, ಅಪ್ಪ ಕುಲ ಚತ್ತಿರಿ, ಯೋಗ ಚತ್ತರಿ, ಭೋಗ ಚತ್ತಿರಿ, ಮುನಿ ಚತ್ತರಿ ಅಪ್ಪ ಅಂತ ಆರು ಮಕ್ಕಳಿಗೂ ಹೆಸರಿಡುವಳು. (ಇವು ಮರಿಯಾದಿ ಕಳಿಯೋಕಂತೆ ಹುಟ್ಟಿದವು) ಅದಕ್ಕೇಂದೇ ಈ ರೀತಿ ಹೆಸರಿಡುತ್ತಾಳೆ.

ಹತ್ತು ವರ್ಷದವರಾದರು , ಎಷ್ಟೇ ತಿಳಿಸಿ ಹೇಳಿದರೂ. ವಿದ್ಯೆ ಮಕ್ಕಳ ತಲೆಗೆ ಹತ್ತೊದಿಲ್ಲ. ಮಕ್ಕಳಿಗೆ ಸಿರಿದೇವಿ ಪ್ರೀತಿಯಿಂದ ಜೋಪಾನ ಮಾಡ್ತಾಳೆ. ಅಗಸಿಯಲ್ಲೇ ಬೆಳೆಯುವ ಮಕ್ಕಳು ಒಂದು ದಿನ ಊರಲ್ಲಿ ಗೋಲಿಯಾಡುತ್ತಿರುವ ಹುಡುಗ್ರನ್ನು ಕಂಡು ನಮಗೂ ಆಡಬೇಕಾಗಿದೆ ಕಳಸೆಂದಾಗ, ಅಡವಿ ಚಂಚರು, ಮಕ್ಕಳಿಗೆ ಹಣ್ಣು ಕೊಟ್ಟು ಅವರ ಹಿಂದೆ ಒಯ್ಯುತ್ತಾರೆ. ಹೋಗಬಾರದೆನ್ನುವಳು. ಎಷ್ಟೇ ಹೇಳಿದ್ರು ಮಕ್ಳು ತಾಯಿ ಕಣ್ಣು ತಪ್ಪಿಸಿ ಗೋಲಿ ಆಡಲು ಹೋಗ್ತಾರ. ಅಲ್ಲಿ ಆರು ಮಂದಿ ಅಕ್ಕಂದಿರು ಹುಡುಗ್ರು ಬಳಿ ಹೋಗಿ , ನಾವೇ ನಿಮ್ಮ ತಾಯಂದಿರೆಂದು ಹಣ್ಣು ಕೊಡಲು ಬಂದಾಗ , ಹುಡುಗರು ತಾಯಿಗೆ ವಿಷಯ ತಿಳಿಸುತ್ತಾರೆ. ಆರು ಮಂದಿ ತಾಯಿಯಂದಿರು ಮನೆಯಲ್ಲಿ ಮಕ್ಕಳ ಬಳಿ ಬಂದು ಹಣ್ಣು ತಿನ್ನಲು ಕೊಟ್ಟಾಗ ಒಲ್ಲೆನ್ನುತ್ತವೆ. ಒಲ್ಲೆನ್ನಬಾರದು ಇವರೆ ನಿಮ್ಮ ತಾಯಿಂದಿರು ಎಂದು ಸಿರಿದೇವಿ ತಿನ್ನಿಸಿದಾಗ ತಿನ್ನುತ್ತವೆ. ಅವರು ತಂಗಿಯ ಮೇಲೆ ಸೇಡು ತೀರಿಸಿಕೊಳ್ಳಲು ಹಣ್ಣಿನಾಗ ವಿಷ ಇಟ್ಟು ಕೊಟ್ಟಿರುತ್ತಾರೆ. ಹಣ್ಣು ತಿಂದ ಮಕ್ಳು ಒದ್ದಾಡಿ ನೆಲಕ್ಕೆ ಬೀಳುತ್ತವೆ. ಅಕ್ಕಂದಿರು ತಂಗಿಗೆ ಬೈದು

ಗಂಡನಿಗೆ ವಿಷಯ ತಿಳಿಸುತ್ತಾರೆ. ಚಿಕ್ಕ ಹೆಂಡ್ತಿ ಮದ್ದು ಇಟ್ಟಿದ್ದಕ್ಕೆ ಆಕಿಗೆ ಮಕ್ಕಳಾಗಲಿಲ್ಲ. ಮಕ್ಕಳಿಗೆ ವಿಷ ಹಾಕಿದ್ದಾಳೆ ಎನ್ನುವ ಆರೋಪ ಮಾಡಿದಾಗ, ರಾಜನು ರೂಮಿನೊಳ್ಗೆ ಹಾಕಿ ಸಿರಿದೇವಿಗೆ ಬಾರಕೋಲಿನಿಂದ ಮೂರು ಏಟು ಹಾಕುತ್ತಾನೆ. ಊರ ಜನ ಮಕ್ಕಳಿಗೆ ಮದ್ದು ಹಾಕಿದ್ದವಳನ್ನು ಊರ ಹೊರಗೆ ನೆಲಮನೆಯಲ್ಲಿ ಇಡಬೇಕು. ಮುಳ್ಳಾಗ ಹಾಕಿ ಕಬ್ಬಿಣ ಹೊರಸಾನ ಮೇಲೆ ಸಿರಿದೇವಿನ ಮಲಗಿಸಬೇಕು. ಮಕ್ಕಳು ಸಾಯುವಾಗ ಪಟ್ಟ ಕಷ್ಟ ಅನುಭವಿಸಲೆಂದು ಬೀಗ ಹಾಕಿ, ಮುಚ್ಚಿ ಹೋಗ್ತಾರೆ.

ಇತ್ತ ಅಕ್ಕಂದಿರು ಮಕ್ಕಳಿಗೆ ಮಜ್ಜಿಗೆ - ಅನ್ನ ಉಣಿಸಿದಾಗ ಬದುಕುತ್ತವೆ. ಸುಡುಗಾಡು ರುದ್ರಭೂಮಿಗೆ ಶಿವನು ಸಿರಿ ದೇವಿ ಹತ್ತಿರ ದಾನ ಬೇಡಲು ಬರುವನು. ಸಾಯೋ ಸಮಯದಲ್ಲಿ ನಾನೇನು ದಾನ ಕೊಡ್ಲಿ ಎಂದಾಗ, ಅವಳ ತಾಳಿ ಕೇಳುವನು. ಕೊಡುತ್ತೇನೆಂದಾಗ ತೃಪ್ತಗೊಂಡ ಶಿವನು, ಅವಳಿಗೆ ಕಟ್ಟಿದ ಸರಪಳಿ ಮಾಯದಿಂದ ಬಿಚ್ಚಿ, ರುದ್ರ ಭೂಮಿಯಲ್ಲಿಯೆ ಮೂರು ಅಂಕಣದ (ಅಂತಸ್ತು) ಮನಿ ಕಟ್ಟುತ್ತಾನೆ. ನನ್ನ ಗಂಡನಿಗೆ ಮನಿ ಕಟ್ಟಿದ್ದು ಗೊತ್ತಾದ್ರೆ ಕೊಲ್ಲುತ್ತಾನೆ ಒಲ್ಲೆ ಎಂದಾಗ, ಶಿಷ್ಯಳಿಗೆ ಗುರು ಖರ್ಜೂರ (ಮಗ) ಫಲ ನೀಡುತ್ತಾನೆ. ಗಂಡನಿಲ್ಲದೆ ಮಗ ಹಡೆಯೋದು ಒಲ್ಲೆನ್ನುತ್ತಾಳೆ. ಆಗ ದಾಸಪ್ಪ ಇಲ್ಲಮ್ಮ ಇದು ಗುರು ಕೊಟ್ಟಿದ್ದು, ಗುರು ಮಠ ಸೇರೊದು ಎಂದು ಹೇಳಿ ಮಾಯವಾಗುತ್ತಾನೆ. ಒಂಭತ್ತು ತಿಂಗಳಿಗೆ ಮಗ ಹುಟ್ಟುತ್ತಾನೆ. ಮಗನಿಗ ಕೊಲ್ಲಲು ಪ್ರಯತ್ನಿಸುತ್ತಾಳೆ. ಮಗ ಸಾಯೋದಿಲ್ಲ. ಬಟ್ಟೆ, ನೀರು ಎಲ್ಲವೂ ಅಲ್ಲೆ ತಯಾರಾಗುತ್ತದೆ. ಶಿವನಿಂದ ಹುಟ್ಟಿದ್ದಕ್ಕೆ 'ಶರ ಬಂಧನ' ಅಂತ ಹೆಸರಿಡುತ್ತಾಳೆ. ಮಗ ರುದ್ರ ಭೂಮಿಯಲ್ಲಿಯೇ ಓದು ಕಲಿಯುತ್ತಾನೆ.

ಶಿವನು ಕಾಂಭೋಜ ರಾಜನಿಗೆ ಧರ್ಮಕೊಡೆಂದು ರಾಜಕಛೇರಿಗೆ ಬರುವನು. ನಾವು ನಾಮ ಉದ್ದ ಹಚ್ಚೊರು ಹಾಲು ಗೊಲ್ರು, ಕೃಷ್ಣ ಗೋಲ್ರು. ಶಿವ ಅಂದೋರಿಗೆ, ಅಡ್ಡ ನಾಮ ಹಚ್ಚಿದವರಿಗೆ ದಾನ ಮಾಡಲ್ಲ ಎನ್ನುವನು. ಅಕ್ಕಿ ಬೇಳೆ ಕೊಡೆಂದಾಗ , ಹೊಟ್ಟು ಕೂಡಾ ಕೊಡೊದಿಲ್ಲವೆನ್ನುವನು. ಕೊನೆಗೆ ಶಿವನು ವಿಭೂತಿ ಎಲ್ಲಿ ಹಚ್ಚಲೆಂದಾಗ, ಆಗ ಕಾಂಭೋಜರಾಜನ ಬೆನ್ನಿಗೆ ಹಚ್ಚೆನ್ನುತ್ತಾನೆ. ಶಿವನು ಜೋಳಗಿಯೊಳಗಿಂದ ವಿಭೂತಿ ರೂಪದಲ್ಲಿ ಅಡಗಿದ್ದ ಶನಿ ದೇವನಿಗೆ ಕಾಂಭೋಜ ರಾಜನ ಬೆನ್ನಿನಲ್ಲಿ ಹುಣ್ಣಾಗಿ ಕೂಡಲು ಆಜ್ಞೆ ಮಾಡುವನು. ಬೆನ್ನಿನ ಹುಣ್ಣು ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಗುತ್ತದೆ. ಎಷ್ಟೇ ಔಷಧೋಪಚಾರ ಮಾಡಿದ್ರು ಕಮ್ಮಿ ಆಗೋದಿಲ್ಲ. ಇತ್ತ ಶರಬಂಧನು ಹದಿನೆಂಟು ವರ್ಷದವನಾಗಿ ಬೆಳೆಯುತ್ತಾನೆ. ಊರೊಳಗೆ ಆಡಲು ಶರಬಂಧ ಬರುವನು. ಹುಣ್ಣಿನ ಗಬ್ಬು ವಾಸನೆ ತಾಳಲಾರದೆ ಹೆಂಡಿರು ರಾಜನನ್ನು ರುದ್ರಭೂಮಿಯಲ್ಲಿ ಇಟ್ಟಿರುತ್ತಾರೆ. ಅಲ್ಲಿ ಕಾಂಭೋಜರಾಜ ಬೆನ್ನಿನ ಹುಣ್ಣಿನ ನೋವು ತಾಳಲಾರದೆ ರುದ್ರ ಭೂಮಿಯಿಂದ ಚಿಕ್ಕ ಹೆಣ್ತಿ ದೆವ್ವಾಗಿ ಬಂದು, ನನ್ನನ್ನು ಒಯ್ಯಬಾರದೆ ಎಂದು ರಾಜ ಬೊಬ್ಬೆ ಹಾಕುತ್ತಿರುತ್ತಾನೆ. ಇದನ್ನು ಮಗ ಕೇಳಿಸಿಕೊಳ್ಳುತ್ತಾನೆ. ದನ ಕಾಯೋ ಮುದುಕನಿಂದ ಸಿರಿದೇವಿಯಾರೆಂದು ಸಂಪೂರ್ಣವಾಗಿ ತಿಳಿದುಕೊಂಡು, ಮನೆಗೆ ಬಂದು ತಾಯಿಗೆ ತಂದಿ ಬಗ್ಗೆ ಕೇಳುವನು. ತಾಯಿ ಎಲ್ಲಾ ವಿಷಯ ತಿಳಿಸುವಳು. ತನ್ನ ತಂದಿಗೆ ಹುಣ್ಣಾಗಿದೆ ವಾಸಿ ಮಾಡಲು ಶರಬಂಧ ರಾಜ ಔಷಧಿ ಮಾರುವವನ ವೇಷ ಹಾಕಿಕೊಂಡು , ತಾಯಿ ಅಪ್ಪಣೆ ಪಡೆದು ಊರೊಳಗೆ ಬರುತ್ತಾನೆ.

ಮೇಟಿ ಔಷಧಿ ಮಾರುತ್ತ ರಾಜನ ಬಳಿಗೆ ಬರುತ್ತಾನೆ. ರಾಜನು ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ. ಶರ ಬಂಧನ ಹುಣ್ಣು ನೋಡಿ , ಇದು ಮಾಯೋದಿಲ್ಲ. ಶನಿಮಾತ್ಮ ಸೇರ್ಯಾನ. ಲೋಕೌಷಧ ಹಾಕಿದ್ರ ಸಾಯೋದಿಲ್ಲ. ಏಳು ಸಮುದ್ರ ದಾಟಿ, ಬಕಾಸುರನ ತಂಗಿ ವೈರಾಮನ ಮಗಳು, ಹನ್ನೆರಡು ಕೈ ಆದಿಶಕ್ತಿ, ಆಗ ನಗೊ ಎಲೆ, ಓಡಾಡ್ಯೋ ಕಾಂಚ, ಸೂಗುರು ಸುಣ್ಣ, ಬೆಂಕಿ ತಿಂದ ರಕ್ತ ಪಕ್ಷಿ ಕೂಟ, ಆವುಷದ್ಧ ಮೇಟಿ ಮಾಡ್ಬೇಕು. ಬೆಳ್ಳಟ್ರೆ ಉಳಿತೈತಿ, ಕೆಳಗೆ ಬಿದ್ರೆ ಮಾತು ಬಿದ್ದ ಕಂಡು ಹೋತೈತಿ, ಸೌಟಿ ಕೂಟ ತಕ್ಕಡಿ ಒಳಗ ಹಾಕಿ ಕರೆಕ್ಟ ಬಂಗಾರ ತೂಕ ಮಾಡಿದ್ವಾಂಗ ಮಾಡ್ಬೇಕು. ಬೆನ್ನಿಗ್ಹಾಕಿದ್ರೆ ಬೆನ್ನೊಳಗಿನ ಶನಿ ಮಹಾತ್ಮ ಹೋಗ್ತಾನೆ ಎಂದು ಹೇಳುವನು. ಕಾಂಭೋಜ ರಾಜನ ಆರು ಮಕ್ಳು ಮೇಟಿ ಔಷಧ ತರಲು ಹೋಗುತ್ತಾರೆ. ಶರಬಂಧನ ಕೂಡ ಮೇಟಿ ಔಷಧ ನಾನೇ ತರುತ್ತೇನೆಂದು ತಾಯಿ ಅಪ್ಪಣೆ ಪಡೆಯುತ್ತಾನೆ. ಸಮುದ್ರ ದಾಟಿ ಹೋಗೊದು ಆರು ತಿಂಗಳು ಬರೋದು ಮೂರು ತಿಂಗಳು. ತಾಯಿ ಹೊಟ್ಟೆಲ್ಲಿ ಸ್ಏಳಿಗ್ಹುಟ್ಟಿಧ್ರೆ. ತಾಯಿ ತಂದಿಗೆ ಪುಣ್ಯ ಮಾಡಿಧ್ರೆ ತಿರುಗಿ ಬರ್ತಿನಿ ಎಂದು ತಾಯಿಗೆ ನಮಸ್ಕರಿಸುವನು. ಶನಿಮಾತ್ಮನಿಗೆ ನಮ್ಮಪ್ಪನ ತಣ್ಣಗಿರಿಸು, ಕಷ್ಟ ಕೊಡಬೇಡ, ನಾನು ಜೀವಂತವಿರುವತನಕ ಎಂದು ಪ್ರಾರ್ಥಿಸಿಕೊಳ್ಳುವನು. ಮೇಟೌಷಧಿ ತರಲು ಹೊರಡುವನು. ಇತ್ತ ಆರು ಮಂದಿ ಅಕ್ಕಂದಿರು ತಮ್ಮ ಆರು ಜನ ಮಕ್ಕಳ ಮೇಟೌಷಧಿ ತರಲು ಹೊರಡುವ ಸಂದರ್ಭದಲ್ಲಿ ರಾಜನಿಗೆ ಬೈಯುತ್ತಾರೆ.

ಹೀಗೆ ಹೋಗುವಾಗ 'ಇಲಾಮಂತ್ರ' ಪಟ್ಣ ಬರೈತೆ. ಅಲ್ಲಿ ಪಾತರಗಿತ್ತಿಯ ರಾಜ್ಯಭಾರ. ಗಂಡಸರು ಮೀಸೆ ಎಡ ಗೈ, ಮುಂಗೈಗೆ ಕಟ್ಟಿಕೊಂಡು ಆಕಿ ಕುಣಿತಾಳೆ. ಕುಣಿವಾಗ ಉಟ್ಟಿದ ಸೀರೆ , ಉಚ್ಚಿ ಕೆಳಗ ಜೀಳಂಗ ಮಾಡಿಧ್ರೆ ಅವನೇ ನನ್ನ ಗಂಡ ಎಂದು ಬೋರ್ಡ ಹಾಕಿರುತ್ತಾಳೆ. ಆರು ಮಂದಿ ಅಣ್ಣಂದಿರು ಅವಳ ಮನಿಗೆ ಹೋದಾಗ , ಅಲ್ಲಿ ಅವರನ್ನು ಪಾತರಗಿತ್ತಿ ಹಗೇವಿಇದ್ದ ಗಡ್ಡಿಗಿಯಲ್ಲಿ ಮುಚ್ಚಿಟ್ಟು, ಕಾಂಭೋಜರಾಜನಿಗೆ ನಿನ್ನ ಮಕ್ಕಳನ್ನು ಬಿಡಬೇಕಾದರೆ, ನನ್ಗೆ ಆರ್ಡರಿಲ್ಲ. ಗವರಮೆಂಟಗ್ಹೋಗಿ ರೊಕ್ಕಾ ಕಟ್ಟಿ ಅಲ್ಲಿದ್ದ ಪತ್ರ ತಂದು ನನ್ಗೆ ಪತ್ರ ತೋಱಸಿದ್ರೆ ನಿನ್ನ ಮಕ್ಕಳ್ನ ಬಿಡ್ತಿನಿ ಎಂದು ಪತ್ರ ಬಱತಾಳೆ. ತಂದೆಯು ಪತ್ರ ನೋಡಿ ಎಂಥಾ ಮಕ್ಳು ಕುಲಮರ್ಯಾದಿ ಕಳೆಯಕ್ಕೆ ಹುಟ್ಟಿದ್ರೆಂದು ದುಃಖ ಮಾಡ್ತಾನೆ.

ಶರಬಂಧರಾಜನು ಮೇಟೌಷಧಿ ತರಲು ಹೊರಡುವ ಮಾರ್ಗದಲ್ಲಿ ಭೂಪತಿ ಪಟ್ಣ ಬರುತ್ತೆ, ಆ ಊರಲ್ಲಿ ಎಲ್ಲಿ ಭೂಮಿ ತೋಡಿದ್ರು ಉಪ್ಪು ನೀರೆ ಸಿಗುವುದು. ಭೂಪತಿ ರಾಜನ ತ್ವಾಟದಲ್ಲಿರುವ ಭಾವಿಯಲ್ಲಿ ಸಿಹಿನೀರಿರುತ್ತೆ. ಅಲ್ಲಿ ಹುಲಿ ವಾಸವಾಗಿರುವುದು. ಅದನ್ನು ಶರಬಂಧ ರಾಜ ಕಡಿದು ಹಾಕುವನು. ರಾಜನು ತನ್ನ ಮಗಳನ್ನು ಕೊಟ್ಟು ಮದುವೆ ಮಾಡುವನು. ಹೆಂಡ್ತಿಯನ್ನು ಅಲ್ಲೆ ಬಿಟ್ಟು ಮೇಟೌಷಧಿ ತರಲು ಸಮುದ್ರ ಮಾರ್ಗದೆಡೆಗೆ ಹೋಗುತ್ತಾನೆ. ದೇವಗಿರಿ ಪಟ್ಣದಲ್ಲಿ ದೇವಸ್ಥಾನಿ ಇರುತ್ತಾಳೆ. ಆಕಿ ಮೂಗಿನ್ಯಾಗ ಒಂದು ರಾಕ್ಷಸಿ, ಒಂದು ಕರ್ಡಿ ಇರುತ್ತವೆ. ಆಕಿಗೆ ಬಂಡಿ ಗುರ್ರಿ, ಬಂಡಿ ಕೊಡಬು, ಒಂದು ಮಣ್ಸೇನ ದಿನಾ ಕೊಡಬೇಕು. ಮಣ್ಸೆರು ಕೊಡಬೇಕು.

ಅಲ್ಲಿರುವ ರಾಕ್ಷಸ ಮತ್ತು ಕಲ್ಡಿಗ ಶರಬಂಧರಾಜ ಕೊಲ್ಲುತ್ತಾನೆ. ದೇವಸ್ಥಾನಿಯೊಂದಿಗೆ ಮದುವೆಯಾಗುವವನು. ಮುಂದೆ ಚಾವುಲ್‌ರಾಜ ಪಟ್ಟಕ್ಕೆ ಬರುತ್ತಾನೆ. ಅಲ್ಲಿ ಚಾವುಲ್ ರಾಜನ ಮಗಳು ಶಾಮಗಂಥಿಯು ಅವಳ ತಂಗಿ ಎದಿನಗಂಧಿ. ಅವಳ ಬಳಿ ಇರುವ ಗಾಜ್ನ ಬುಡ್ಡು ಮದ್ದಿರುತ್ತದೆ. ಅದು ಥೈ ಥೈ ಥೈ ಕುಣೀತೈತಿ. ಬೊಳ್ಳಿಟ್ರೆ ಉಳೀತೈತಿ. ಭೂಮಿಮ್ಯಾಲೆ ಬಿದ್ರೆ ತೂತು ಬೀಳೈತಿ. ಕೈಚಿಲ್ಡಾಗ ಗಾಜ್ನ ಬುಡ್ಡು ತಲೆ ಅಡಿಯಲ್ಲಿ ಅವಳಿಗೆ ಮದ್ದಿದ್ರ ನಿದ್ದಿ, ಇಲ್ಲಾಂದ್ರೆ ನಿದ್ದಿ ಇಲ್ಲ. ಅವಳಿಂದ ಆ ಗಾಜ್ನ ಬುಡ್ಡು ಮದ್ದು ವಶ ಪಡಿಸಿಕೊಳ್ಳುತ್ತಾನೆ. ರಾಜನು ಇಬ್ಬರಿಗೂ ಮದುವೆ ಮಾಡುತ್ತಾನೆ. ಮತ್ತೆ ಮೇಟೌಷಧಿ ತರಲು ಮುಂದೆ ಸಾಗುವಾಗ , ಚಿತ್ತಗಿರಿ ಪಟ್ಣ ಬರುತ್ತದೆ. ಅಲ್ಲಿ ಹೆಣ್ಣು, ಗಂಡು ರಾಕ್ಷಸಿಗಳು ಊರಲ್ಲಿ ನುಗ್ಗಿ ಎಲ್ಲರನ್ನು ಕೊಂದು ಶಾನುಭೋಗರಾಕೆ ಚೊಚ್ಚಲು ಗರ್ಭವರ್ತಿ ಅವಳನ್ನು ಉಗುರಿನಿಂದ ಹೊಟ್ಟೆಗೆ ತಿವ್ಡು, ಹೆಣ್ಣು ಮಗಳನ್ನು ಎತ್ತಿಕೊಂಡು ಜೋಪಾನ ಮಾಡತ್ತವೆ. ಆಕಿಗೆ ಚಿತ್ರಾಂಗಿ ಎಂದು ಹೆಸರಿಟ್ಟು, ಹದಿನೆಂಟು ವರ್ಷ ಅವಳನ್ನು ಜೋಪಾನ ಮಾಡಿ ಊರಲ್ಲಿ ಬಿಟ್ಟು ಆರಂಡಿಗೆ ಹೋಗಿ ಬಿಡುತ್ತವೆ. ಆ ಊರಲ್ಲಿ ಯಾರು ಮನಸೆಲಿಲ್ಲ ಇವಳೊಬ್ಬಳೆ ಚಿತ್ರಗಿರಿ ಪಟ್ಣದಲ್ಲಿ ಇರುತ್ತಾಳೆ. ಅಲ್ಲಿಗೆ ಶರಬಂಧ ಬರುವನು. ಚಂದ್ರಾಯುಧದಿಂದ ರಾಕ್ಷಸಿಗಳನ್ನು ಕೊಂದು, ಚಿತ್ರಾಂಗಿಗೆ ತಾಳಿ ಕಟ್ಟಿ, ಹೆಣ್ತಿನ ಅಲ್ಲೆ ಬಿಟ್ಟು ಮುಂದೆ ಸಾಗುತ್ತಾನೆ. ಏಳು ಸಮುದ್ರಕ್ಕೆ ಬರುವನು. ಸಮುದ್ರ ನೋಡಿ, ಏಳು ಸಮುದ್ರ ಹೇಗೆ ದಾಟೋದು? ಎಂದು ಚಿಂತಿಸುತ್ತಿರುವಾಗ ಅಲ್ಲಿ ಸಮುದ್ರದ ದಂಡೀಲಿ ಜಟಂಗಿ ಸ್ವಾಮೀದ ಮಠವಿರತ್ತದೆ. ಅಲ್ಲಿ ನಾಗಮುನೀಶ್ವರ ತಪಸ್ಸಿಗೆ ನಿಂತಿರುತ್ತಾನೆ. ಅವನ ಪಾದಕ್ಕೆ ಬೀಳುತ್ತಾನೆ. ನನಗೆ ದಾರಿ ತೋರೆಂದು ಕೇಳಿಕೊಳ್ಳುತ್ತಾನೆ. ತನ್ನ ಬೆಳ್ಳಿ ಪಾದಗಳನ್ನು ತೊಟ್ಟಗೊಂಡು ಹಾರಿ ಹೋಗೆನ್ನುವನು. ಮಗನು ಹಾಲು ಸಮುದ್ರ , ನೀಲಿ ಸಮುದ್ರ, ಸಿಹಿ ನೀರ ಸಮುದ್ರ, ಮತ್ಸ್ಯ ಸಮುದ್ರ, ಮಹಿಂದ್ರ ಸಮುದ್ರ, ಮಸುರ ಸಮುದ್ರ, ಹೊಂಡ ನೀರ ಸಮುದ್ರ, ಹೀಗೆ ಏಳು ಸಮುದ್ರ ದಾಟಿ ಹೋಗುವನು.

ಅಲ್ಲಿ ಹನ್ನೆರ್ಡು ಕೈ ಆದಿ ಶಕ್ತಿ ಎದಿನಗಂಧಿ, ಮಾತಾಡೊ ಅಡಿಕೆ, ನಗೋ ಎಲೆ, ಓಡ್ಯಾಡೋ ಕಾಂಚು, ಸುಗೂರು ಸುಣ್ಣ, ಬೆಂಕಿ ತಿಂದ ಪಕ್ಷಿ, ರಕ್ತ ಕೂಟ ತಯಾರು ಮಾಡ್ಡೈತಿ ಮೇಟಿ ಔಷಧ ಶನಿಮಹಾತ್ಮ ಸಾಯೋ ಔಷಧ. ಅದು ಭೂಮ್ಯಾಗ ಬಿದ್ರೆ ಪಾತಾಳ ಲೋಕಕ್ಕೆ ಹೋಗ್ತದೆ. ಬಳ್ಳಿಟ್ರೆ ಹಂಗೆ ಉರಕಂಡು ಹೋತೈತೆ. ಮೂರು ತಿಂಗಳ ಊಟ ಮಾಡಾಕಿ, ಆರು ತಿಂಗಳ ನಿದ್ದಿ ಮಾಡಾಕಿ, ಸೀದಾ ಅಲ್ಲಿಗೆ ಶರಬಂಧ ಬಂದಿಳಿಯುವನು. ಅಲ್ಲಿ ವರಸು ವ್ಯಾಲೆ ಎದಿನಗಂದಿ ಮಲಗಿರುತ್ತಾಳೆ.ಅವಳನ್ನು ನೋಡಿ ಎಷ್ಟು ದರಬಾರು ನಿನಗೆ ನಡೀತೈತೆ, ಹನ್ನೆರಡು ಕೈ ಆದಿ ಶಕ್ತಿ ನೀನು. ಮೂರು ನಾಮ ಗೊಲ್ಲರಪ್ಪ ನಾನು, ನಿನಗೆ ಮೂರು ನಾಮ ಹಚ್ಚಿ ಹೋಗತಿನೆಂದು - ಜಟಿಂಗ ಮುನಿಶ್ವರ ಹೇಳಿದಂತೆ ಮಾತಾಡ ಅಡಿಕೆ, ನಗೋ ಎಲೆ, ಓಡ್ಯಾದೋ ಕಾಂಚು, ಸುಗೂರು ಸುಣ್ಣ, ಎಲೆ , ಅಡಿಕೆ ಹಾಕ್ಯಂಡು ಹೊರಸಿನ ಸುತ್ತ ಉಗುಳಿ ಬಿಡ್ತಾನೆ. ಆಕೆಯ ಎದೆ ಮ್ಯಾಲೆ ಎಡಗಾಲಿಟ್ಟು , ಒಂದು ಬೊಗಸೆ ಅಡ್ಡಾಲು ಪತ್ರ ಬರಿದು , ಕಳ್ಳತನದಿಂದ ಔಷಧಿ ಒಯ್ದುನಿ

ಅನಬ್ಯಾಡ, ನಾನು ಗೊಲ್ಲರವನು. ನೀನು ರೋಷದ ಹೆಣಮಗಳಾದ್ರೆ ನನ್ನ ಮ್ಯಾಲೆ ಯುದ್ಧಕ್ಕೆ ಬಾ ಎಂದು ತನ್ನ ಹೆಸರು , ಊರು, ತಂದೆ ಹೆಸರು, ಎಲ್ಲಾ ಬರೆದು , ಔಷಧಿಯೊಂದಿಗೆ ಬೆಳ್ಳಿ ಪಾದದಿಂದ ಸಮುದ್ರ ದಾಟಿ ಹೋಗುವನು.

ಮೂರು ತಿಂಗಳ ನಿದ್ದಿಯಿಂದ ಎದಿನಗಂಧಿ ಎಚ್ಚರವಾಗುವಳು. ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳುವಳು ಹಣೆಗೆ ಮೂರು ನಾಮ, ಎರ್ಡು ಮೀಸೆ ಇಟ್ಟಾರೆ, ಪತ್ರ ಓದುತ್ತಾಳೆ. ಗಾಜಿನ ಬುಡ್ಡೆ ಒಯ್ದು, ಸಾವಿರ ಲಕ್ಷ ಮುರ್ಗಗಳು ಕಡ್ದು ಹೋಗ್ಯಾನ ಎಂಥಾದು ನಿದ್ದೆ ನನ್ನದು. ಹೆಣ್ಣಂದ ಮೇಲೆ ಒಂದ ಕಣ್ಣೀಲಿ ನಿದ್ದಿ, ಬಂದು ಕಣ್ಣಲಿ ತಿಳವಳಿಕೆ ಇರಬೇಕು. ಕಾಲ ಸ್ರರಕ್ ಅಂದ್ರ ತಿಳವಳಿಕೆ ಇರಬೇಕೆಂದು ಯುದ್ಧಕ್ಕಾಗಿ ಚಿತ್ರಗಿರಿ ಪಟ್ಟಕ್ಕೆ ಬರುತ್ತಾಳೆ. ಶರಬಂಧನ ಮತ್ತು ಎದಿನಗಂಧಿ ನಡುವೆ ಯುದ್ಧವಾಗಿ ಸೋಲುವಳು. ಶರಬಂಧನ ಹಿಂದೆ ಬೆನ್ನು ಹತ್ತುತ್ತಾಳೆ. ಮದ್ದು ಕೊಡು ಎಂದಾಗ , ಗೊಲ್ರು ನಾವು ಹೆಂಗಸರಿಗೆ ದರ್ಬಾರು ಕೊಡಂಗಿಲ್ಲಾ ಎನ್ನುವನು. ಹಾಗೆ ಬೆನ್ನತ್ತುವಳು. ಇತ್ತ ಎದಿನಗಂಧಿಯ ತಂದೆ ಬಕಾಸುರ ಮಗಳಿಲ್ಲದ್ದು ಕಂಡು , ಸಮುದ್ರ ಹಾರಿ ಮಗನಾದ ಮಹಿರಾಮನೊಂದಿಗೆ ಹುಡುಗನಿಗೆ ಯುದ್ಧ ಮಾಡಲು ಬಂದರೆ ಇಬ್ರನ್ನು ಚಂದ್ರಾಯುಧದಿಂದ ಕೊಲ್ಲುತ್ತಾನೆ. ಚಿತ್ರಗಿರಿ ಪಟ್ಟದಲ್ಲಿ ಚಿತ್ರಾಂಗಿ, ಶಾಮಗಂಧಿ , ಎದಿನ ಗಂದಿ, ದೇವಸ್ಥಾನಿ ಹೆಂಡಿರೊಂದಿಗೆ ಪಾತರಗಿತ್ತಿ ಅಣ್ಣಂದಿರನ್ನು ಜೀಗ್ಹಾಕಿ ಮುಚ್ಚಿಟ್ಟವರನ್ನು ಬಿಡಿಸಿಕೊಂಡು ಬರುತ್ತಾನೆ. ಅಣ್ಣಂದಿರಿಗೆ ತನ್ನ ಪರಿಚಯ ಮಾಡಿ ಕೊಡುವನು. ನಾನು ನಿಮ್ಮ ತಮ್ಮನೆಂದು ಹೇಳುವನು. ಆಗ ಆರು ಮಂದಿ ಅಣ್ಣಂದಿರೊಂದಿಗೆ ಶರಬಂಧರಾಜನು ಎಲ್ಲಮ್ಮ ದೇವಿಗೆ ಕಾಯಿ ಒಡೆಸಲೆಂದು ಗುಡಿಗೆ ಹೋಗುವಾಗ ಐದು ಮಂದಿ ಹೆಂಡತಿಯರು, ನಿನ್ನ ಅಣ್ಣಂದಿರು ಕೆಟ್ಟವರು ನಿನ್ನನ್ನು ಕಡಿದು ಹಾಕುತ್ತಾರೆ. ಹೋಗಬ್ಯಾಡ್ರೆಂದು ತಡೆಯುತ್ತಾರೆ. ಆಗ ಶರಬಂಧ ಹೆಂಡಿರಿಗೆ ಸಮಾಧಾನ ಹೇಳಿ ಪಾತರಗಿತ್ತಿಯನ್ನು ಅವರೊಂದಿಗೆ ಕಳುಹಿಸಿ ಕೊಡುವನು. ಎಲ್ಲಮ್ಮ ದೇವಿ ಗುಡಿಯಲ್ಲಿ ಅಣ್ಣಂದಿರು ತಮ್ಮನಿಗೆ ನೀನೆ ಪೂಜೆ ಮಾಡೆಂದು ಹೇಳುವರು. ತಮ್ಮನು ಪೂಜೆ ಮಾಡಿ ಬಕ್ ಬಾರ್ಲಿ ಬಿದ್ದು ಶರಣು ಮಾಡುವ ಸಮಯದಲ್ಲಿ ಅಣ್ಣತಮ್ಮಂದಿರು ಹೀಗೆ ಮಾತಾಡಿಕೊಳ್ಳುವರು. ಈ ಸುಡಗಾಡ್ಯಾಗ ಯಾವ್ಹೋನಿಗೆ ಹುಟ್ಟ್ಯಾನೋ , ಆರು ಮಂದಿ ಹೆಂಡ್ರು ಕರಕೊಂಡು ಏಳು ಸಮುದ್ರ ದಾಟಿ ಮೇಟೌಷಧಿ ತಂದಾನೆ. ನಮ್ಮ ತಂದಿ ನಮಗೆ ಬೈತಾನೆ. ಇವನಿಗೆ ಮಂಜೂರು ಮಾಡ್ತಾನೆ. ಅವನನ್ನು ಚಂದ್ರಾಯುಧದಿಂದ ಕೊಂದು , ತಂದೆಗೆ ನಾವೇ ಔಷಧಿ ತಂದೆವೆಂದು ಸುಳ್ಳು ಹೇಳೋಣವೆಂದುಕೊಳ್ಳುತ್ತಾರೆ. ತಮ್ಮನಿಗೆ ಕಡಿಯಲು ಹೋದಾಗ , ತಾಯಿ ಎಲ್ಲಮ್ಮಾ ನೋಡಿ ಕುಪ್ಪಳಿಸಿ ಮಗನ ಬೆನ್ನ ಮೇಲೆ ಕುಳಿತುಕೊಳ್ಳುತ್ತಾಳೆ. ದುಷ್ಟರು ಸರ್ವತಪ್ಪಾಯಿತೆಂದು ಬೇಡಿಕೊಳ್ಳುತ್ತಾರೆ. ಶರಬಂಧ ಎದ್ದು ಗುಡಿ ಪ್ರದಕ್ಷಿಣೆ ಹಾಕುವಾಗ ಆರು ಮಂದಿ ಅಣ್ಣಂದಿರು ಅವನಿಗೆ ಬೈಯ್ದು ಆರು ತುಂಡಾಗಿ ಕತ್ತರಿಸುತ್ತಾರೆ. ಎಲ್ಲಮ್ಮ ತಾಯಿಗೆ ಸಿಟ್ಟು ಬಂದು, ನನ್ನ ಮಗನನ್ನು ಕಡಿದಿರೆಂದು , ಆರು ಮಂದಿಯ ಕಣ್ಣುಗಳನ್ನು ತೆಗೆಯುತ್ತಾಳೆ. ಕುರ್ಡರಿಗೆ ಇದ್ದೋಟು ಯುಕ್ತಿ ಯಾವ್ಹೋನಿಗಿಲ್ಲ.

ಕುಂಟ್ರುಗಿದ್ದ ಶಕ್ತಿ ಯಾರಿಗಿಲ್ಲ. ಹಾಗೆ ಕುರುಡರಾಗಿಯೇ ದಾರಿ ಹುಡುಕುತ್ತಾ , ಆರು ಮಂದಿ ಚಾಂಪುರ ಪಟ್ಣಕ್ಕೆ ಬರುತ್ತಾರೆ. ತಾಯಂದಿರು ಇವರನ್ನು ನೋಡಿ ದುಃಖ ಮಾಡ್ತಾರೆ.

ಗುಡಿಯಲ್ಲಿ ಬಿದ್ದ ಮೃತದೇಹವನ್ನು ಶಿವ ನೋಡುವನು. ಜೀವ ಎರ್ಡು ಮೇಘದಾಗ ಬರುವಾಗ ಜೀವವನ್ನು ಸೀಸದಾಗ ತುಂಬಿಕೊಂಡು, ಸಾಧು ಅವತಾರ ತಾಳಿ, ಒಂದು ರಾಗಿ ಚರಗ್ಯಾಗ ಜೀವ ಹಿಡಿದುಕೊಂಡು ಬರುತ್ತಾನೆ. ಇತ್ತ ಗಂಡ ಬಾರದಿದ್ದನ್ನು ಕಂಡು , ಹೆಂಡತಿಯರು ಗುಡಿಗೆ ಬಂದು ನೋಡಿದಾಗ, ಗಂಡನ ದೇಹವು ಆರು ತುಂಡಾಗಿ ಬಿದ್ದಿರುವುದನ್ನು ಕಂಡು ದುಃಖ ಮಾಡ್ತಾರೆ. ಅದೇ ಸಮಯಕ್ಕೆ ಸಾಧು ಬಂದು ವಿಚಾರಿಸುತ್ತಾನೆ. ಕಡ್ಡ ತುಂಡುಗಳನ್ನು ಕುಣಿಯಾಗ ಹಾಕಿ, ರಾಗಿ ಚರಗಿಯಿಂದ ಮುಖ ತೊಳೆದು, ನೀರು ಕುಡಿಯಬೇಕೆಂದಾಗ ಹಾಗೆ ಮಾಡಲು ಹೋಗಿ ಚರಗಿ ಜಾರಿ ಬಾವಿಯಲ್ಲಿ ಬೀಳುತ್ತದೆ. ಆರು ಮಂದಿ ತಾತನಿಗೆ ಬಾಯಿಗಿ ಬಂದಂತೆ ಬಯ್ಯುತ್ತಾರೆ. ಆರು ಮಂದಿ ತಮ್ಮ ಅರ್ಧರ್ಧ ಸೀರೆ ಹರಿದು ಪ್ಯಾಂಟಿಗೆ ಮ್ಯಾಲೆ ಹಾಕಿ, ಅರ್ಧರ್ಧ ಸೀರೆ ಸುತ್ತಕೊಂಡು ಬಾಯಾಗ ಇಳಿದು ಚರಿಗಿ ಹುಡುಕಾಡುತ್ತಾರೆ. ಇತ್ತ ಶಿವ ಆರು ತುಂಡುಗಳ ಮೇಲೆ ವಿಭೂತಿ ಒಗೆದು ಬಿಟ್ಟ ಆರು ಮಂಡೆ ಹತ್ತಿಗ್ಯಂಡ್ವು, ಅದನ್ನು ಸೀಸನ್ಯಾಗ ತುಂಬಿಕ್ಯಂಡು ಬರುವನು. ಆಗ ಜೀವವು ಎಡಕ್ಕೆ ಬಲಕ್ಕೆ ಮೂಗು ಮುಚ್ಚಿದ, ತೆಲಿಗೆ ಜೀವ ಹರಿದು, ಮಗ ಏಳುತ್ತಾನೆ. ಹೋದ ಪ್ರಾಣ ವಿತಕ್ಕಾಗಿ ಉಳಿಸಿದೆ ಶಿವನೆ ಎಂದು ಕೇಳುವನು. ಆಗ ಶಿವನು ಗೊಲ್ರು ಕುಲದಾಗ ಹುಟ್ಟಿರೋನಿಗೆ, ಮೂರು ನಾಮದವನಿಗೆ ಸಾವಿಲ್ಲ. ನಿನ್ನ ಹೆಂಡ್ರು ಬಾವ್ಯಾಗ ಬಿದ್ದು ಸಾಯುತ್ತಿದ್ದಾರೆ. ಹೊಗಿ ನೋಡೆನ್ನಲು, ಅತ್ತ ತಿರುಗಲು ಶಿವ ಮಾಯವಾಗುತ್ತಾನೆ.

ಶಿವ ಮಾಯವಾಗಿರುವುದು ಅರಿತು, ಮಗನು ಹೆಂಡಿರ ಸೀರೆಯನ್ನು ತೆಗೆದುಕೊಂಡು ಗಿಡದ ಮೇಲೆ ಹೋಗಿ, ಬೆಳ್ಳಿನ ಊದುನುಗೋಲು ಹಿಡಿದು, ಹೆಂಡ್ರನ್ನು ಕರೆಯುತ್ತಾನೆ. ಆಗ ಹೆಂಡಿರು ಕೃಷ್ಣವಂತ ಬಂದಾರೆಂದು ತಿಳಿದು ಕೂದಲು ಬಿಟ್ಟುಕೊಂಡು ಬಗ್ಗಿ ಬಗ್ಗಿ ಬರ್ತಾರೆ. ಎಲ್ಲಾ ನಿಜಾಂಶ ಹೆಂಡ್ರಿಗೆ ಹೇಳುವನು. ದೇವಿದರುಷನ ಮಾಡಿಕೊಂಡು ಮದ್ದಿನೊಂದಿಗೆ ಸುಡುಗಾಡು ರುದ್ರ ಭೂಮಿಗೆ ಹೋಗಿ ತನ್ನ ತಾಯಿಗೆ ನಮಸ್ಕರಿಸಿ, ಸೊಸೆಯಂದಿರನ್ನು ತೋರಿಸುವನು. ತಾಯಿಗೆ ತಂದಿ ಬಳಿಗೆ ಹೋಗೋಣವೆಂದು ಕರೆಯಲು, ಆಕೆ ನಾನು ನಿನ್ನ ತಂದೀ ಬಂದು ಕರೆದರೆ ಬರುವೆನೆನ್ನುವಳು. ಶರಬಂಧನನು ಯೇಧಿನಗಂಧಿಯೊಂದಿಗೆ ತಂದಿಯ ಬಳಿಗೆ ಬರುತ್ತಾನೆ. ಕಾಂಭೋಜರಾಜನ ಬೆನ್ನಿನ ಹುಣ್ಣು ಹೆಣ ನಾತು ಹೊಡಿದಾಂಗ ನಾತ ಹೊಡಿಯುವುದು ಎಳ್ಳಷ್ಟು ಭೇದವಿಲ್ಲದೆ ಯೇದಿನ ಗಂಧಿಯು ಬಿಸಿನೀರಿನಿಂದು ಹುಣ್ಣು ತೊಳೆದು, ಮುತ್ತಿನ ಸೆರಗಿಲಿ ಹುಣ್ಣು ಒರೆಸಿ ಬಿಟ್ಟು, ಮಗನು ಗಾಜಿನ ಬುಡ್ಡದಾಗ ಮದ್ದು ತೊಗೊಂಡು, ತೂಕ ಮಾಡಿ ಬೆನ್ನಿನಲ್ಲಿ ಮದ್ದು ್ಧ ಹಾಕುವನು. ಆಗ ಶನಿಮಾತ್ಮ ಕುಪ್ಪಿಸಿ ಎಗರಿ ಬಿಡುವನು, ಶರಬಂಧ ಯೇಧಿನಗಂಧಿಗೆ ಶನಿಮಹಾತ್ಮ ನಮಸ್ಕರಿಸಿ, ಶಿವನ ಬಳಿಗೆ ಹೋಗುವನು. ಹದಿನೆಂಟು ವರ್ಷ ಬಾರ್ಲ್ಲ ಜೀಳಿಸಿದ ಹುಣ್ಣು ಮಾಯ್ದ ಬಿಡುವುದು. ಹುಣ್ಣಿಲ್ಲ ಹುಣ್ಣು ಮ್ಯಾಲೆ ಗಾಯಿಲ್ಲ. ಬೆನ್ನಲ್ಲಿ

ಕಾಂಭೋಜರಾಜನಿಗೆ. ಹೆಣ್ಮಕ್ಕಳು ಕರ್ಮದಿಂದ ಇಷ್ಟು ದಿವಸ ಕಷ್ಟ ಪಟ್ಟೆ ಎನ್ನುವನು. ಆಗ ಮಗನು ತಂದಿಗೆ ನಾನು ನಿನ್ನ ಚಿಕ್ಕ ಹೆಂಡತಿ ಸಿರಿದೇವಿ ಮಗನೆಂದು ಪರಿಚಯ ಮಾಡಿ ಕೊಡುವನು. ತಾಯಿ ಬಳಿಗೆ ಹೋಗೋಣವೆಂದಾಗ ತಂದೆಯು, ನಾ ಬಂದರೆ ನಿನ್ನ ತಾಯಿ ಬೈಯುವಳು. ಅವಳಿಗೆ ನನ್ನ ಮ್ಯಾಲೆ ಸಿಟ್ಟೈತಿ ಎನ್ನುವನು.

ಆಗ ಮಗನು ನಾನು ಜೀವಗಟ್ಟಿದವನು ಸುಮ್ಮಿರುತ್ತಿನ್ಯಾ ಎನ್ನುವನು. ತಂದೆಯನ್ನು ಕರೆದುಕೊಂಡು ತಾಯಿ ಬಳಿಗೆ ಬಂದು, ತಂದಿ ಪಾದ ಮುಗಿ ಎಂದಾಗ , ತಾಯಿ ಹೆದರಿ , ಇಲ್ಲಪ್ಪ ಮಗನೆ ನಾನು ಬರೋದಿಲ್ಲ. ನಿನ್ನ ತಂದಿ ನನಗೆ ಕಡಿದು ಹಾಕ್ತಾನೆ. ನಿನಗೆ ಮೂರು ಅಂಕಣ ಮನಿ ಯಾರಿಗ್ಹುಟ್ಟಿದ ಈ ಮಗ ಅಂತ ಕೇಳ್ತಾನೆಂದಾಗ ನಾನೇ ತಂದೀನ ಕಡೀತಿನವ್ಮಾ ನಿನಗೆ ಒಂದು ಮಾತು ಬೈಯದ ಹಾಗೆ ನೋಡಿಕೊಳ್ಳುವೆನೆಂದು , ತಂದಿಯನ್ನು ಕರೆದು ತಾಯಿಯಿಂದ ಪಾದ ತೊಳಿಸಿ ನೀರನ್ನು ಕುಡಿಸುವನು. ತಂದಿಗೆ ತಾಯಿಯ ಕೈ ಕೊಡಲು ತಂದೆ ಒಪ್ಪುವುದಿಲ್ಲ. ನಿಮ್ಮ ತಾಯಿ ನಾನು ಹೇಳಿದ ಹಾಗೆ ಕೇಳಬೇಕು. ನಿಮ್ಮ ತಾಯಿಗೆ ತುಂಬಿದ ಕೊಡಪಾನದಲ್ಲಿ ನೀರು ಹಾಕಬೇಕು. ಬಿಳಿ ಸೀರೆ ಬಿಳೆ ಕುಪ್ಪಸ ತೊಡಿಸಿ, ಉಡ್ಯಕ್ಕಿ ಹಾಕಬೇಕು. ಗುಂಡದಾಗ ನಿಮ್ಮ ತಾಯಿನ ನಿಂದ್ರಿಸಿ, ಸುತ್ತೆಲ್ಲಾ ಎದಿಮಟ್ಟ ಗಂಧದ ಚೆಕ್ಕಿ ಹಾಕಿ, ಬೆಂಕಿ ಹಚ್ಚಬೇಕು. ನಮ್ಮದು ಹಾಲಂತಕುಲ ಉಟ್ಟಿದ ಸೀರೆ ಸುಡಬಾರ್ದು, ಇಟ್ಟಿದ ಕುಂಕಮ ಕೆಡಬಾರ್ದು. ಆಗ ಬೆಂಕಿಗೊಂಡು ಹೋಗಿ, ಹಾಲು ಗುಂಡೆ ಆಗಬೇಕೆನ್ನುವನು. ತಂದಿಗೆ ಮಗನು. ಇದು ಶಿವ ಕಟ್ಟಿದ ಮನೆ. ಲೋಕ ದುಷ್ಟರು ಕಟ್ಟಿದ ಮನೆ ಆದ್ರೆ ಹಾಂಗೆ ಇರುತೈತಿ, ಇಲ್ಲಾ ಈಭೂತಿ ಕುಪ್ಪೆ ಬಿಳೈತಿ. ನಮ್ಮ ತಾಯಿ ಸತ್ಯವಂತೆ ಎಂದು ಹೇಳುವನು. ಆಗ ತಾಯಿಯು ತನ್ನ ಆರು ಮಂದಿ ಸೊಸೆಯಂದಿರೊಂದಿಗೆ ಮನೆಯಿಂದ ಹೊರಗೆ ಬರೋ ಹೊತ್ತಿಗೆ , ಧಗ್ಗನಂತೆ ಈಭೂತಿ ಕುಪ್ಪೆಯಾಗಿ ಬೀಳುವುದು. ಇಷ್ಟಾದ್ರು ತಂದೆಯು ಇನ್ನು ನನಗೆ ಅನುಮಾನ ಐತಿ ಅಂದಾಗ, ಮಗನು ಊರಿಗೆ ತನ್ನ ತಾಯಿ, ಹೆಂಡಿರೊಂದಿಗೆ ಬರುವನು. ಅಲ್ಲಿ ಸಿರಿದೇವಿಯ ಅಗ್ನಿ ಪರೀಕ್ಷೆ ನಡೆಯುವುದು. ಧಗಧಗ ಬೆಂಕಿ ಉರಿಯುವುದು ಹೋಗಿ ಹಾಲು ಗುಂಡಾ ಆಗಿ ಬಿಡುವುದು. ಆಗ ಕಾಂಭೋಜರಾಜನು ಚಿಕ್ಕ ಹೆಣ್ತಿಗೆ ಹೀಗೆ ಹೇಳುವನು. ನೀ ನನ್ನ ಜೀವದವ್ಳೆ ಎಂದು ಸಿರಿದೇವಿಯ ಕೈ ಹಿಡಿಯುವನು. ತಂದಿ - ತಾಯಿಯನ್ನು ಮಗ ಒಂದು ಗೂಡಿಸುವನು. ಮಗನಿಗೆ ಹುಟ್ಟಿದ ಕುಲ ಉದ್ಧಾರವಾಗಬೇಕೆಂದು , ಚಾಂಪೂರ ಪಟ್ಣದಾಗ ಗೊಲ್ರು ನೀಲಮ್ಮನ ಮಗಳು ಗಂಗಮ್ಮನೊಂದಿಗೆ ಶರಬಂಧರಾಜನ ಮದುವೆ ಮಾಡಿಸುವರು. ಮಗನಿಗೆ ರಾಜ್ಯಭಾರ ಒಪ್ಪಿಸುವನು. ಇತ್ತ ಕಾಂಭೋಜರಾಜನು ಆರು ಮಂದಿ ಹೆಂಡ್ರು, ಆರು ಮಂದಿ ಅಣ್ಣಂದಿರು, ಬಿಂಡ್ರುಗ್ಹುಟ್ಟಿದೋನು ರಾಜ್ಯ ಆಳೋಕೆ ನಿಂತುಬಿಟ್ಟ, ಗಂಡಗ್ಹುಟ್ಟಿದೋರು ಹಿಂದಕಾದ್ವಿ ಎಂದು ತಾಯಂದಿರ ಮುಂದೆ ಗೋಗರೆಯಲು, ಆಗ ತಾಯಂದಿರು ಮಕ್ಕಳೆ ಸಟ್ಟ ಸರವೊತ್ತಿನ್ಯಾಗ ಹೋಗಿ, ಚಿಮ್ಮಣಿ ಉಗ್ಗಿ ಮನೆಗೆ ಬೆಂಕಿ ಇಟ್ಟು ಬಿಡಿ. ಅವರೆಲ್ಲರೂ ಸತ್ತೋಗುತ್ತಾರೆಂದಾಗ , ಮಕ್ಕಳು ತಾಯಿ ಹೇಳಿದಂತೆ, ಮನಿಗೆ ಬೆಂಕಿ ಹಚ್ಚಿ ಬರುತ್ತಾರೆ. ಉರಿಯುತ್ತಿರುವ ಮನಿ ಕಂಡು ಸಿರಿದೇವಿ,

ಏಳು ಮಂದಿ ಹೆಂಡ್ರು ಮಗ ಶರಬಂಧ ಸತ್ತೋತೀಯ ಮಗನೆ ಅಂತ ದುಃಖ ಮಾಡ್ತಾಳೆ. ಆಗ ಮಗ ನೋಡಿ, ಈಗ ನಾನೊಬ್ಬನಾದ್ರೆ ಎಗರಬಹುದು. ಈ ಏಳು ಮಂದಿ ಹೆಂಡ್ರು, ಈ ಏಸುದಿನ ಇದ್ರೆ ಸಾಯೋದೆ, ಅಂತ ಸ್ವಾಮಿ ನಮ್ಮ ಏಳು ಮಂದಿನ ಕೊಲ್ಲೆಂದು ಕೈ ಮುಗಿಯುವನು. ಆಗ ತಾಯಿ ಸೆರಗೊಡ್ಡಿ ಸ್ವಾಮಿಗೆ ಕೈ ಮುಗಿಯಲು ಮಳೆರಾಜ ಮಳೆ ಊದಿ ಬಿಡಿತೈತೆ. ಉರಿಯೋ ಮನೆ ಗಂಪಾಂಗೆ ಆರಿ ಬಿಡುವುದು. ಆಗ ಮಗ , ಏಳು ಮಂದಿ ಹೆಂಡ್ರು ಬಂದು ತಾಯಿ ಪಾದ ಹಿಡಿದು ಕೊಳ್ಳುವರು. ಯಮ್ಮಾ ಇಷ್ಟು ದಿವಸ ನಾವು ಭೂಮಿ ಮ್ಯಾಲೆ ಒದ್ದ್ಯಾಡಿ , ಈಗಿನ್ನ ಸುಖದಲ್ಲಿ ತಾಯಿ ತಂದಿ ಏಕಾಗಿ ಸುಖ ಜೀವದಲ್ಲಿ ನಡ್ಯಾನ ಅಂದ್ರೆ, ಯಾರಿಗೇನು ಪಾಪ ಮಾಡಿದ್ವಿ ಯಾರಿಗೇನು ಕರ್ಮ ಮಾಡಿದ್ವಿ ಬೆಂಕಿ ಹಚ್ಚಿ ಕೊಲ್ಲಬೇಕಂತ ಮಾಡ್ಯಾರಮ್ಮ ಅಂದಾಗ, ಆಗ ತಾಯಿಯು ಮಗನಿಗೆ, ನಿನ್ನ ಆರು ಮಂದಿ ದೊಡ್ಡಮ್ಮ ನೋರು , ನಿನ್ನ ಅಣ್ಣಂದಿರು ಬಂದು ಬೆಂಕಿ ಹಚ್ಯಾರೆಂದಾಗ ನಂಬುವುದಿಲ್ಲ. ನಮಗ ಅವರು ಇರುಗೋಡಿಸೋದಿಲ್ಲ. ಈ ಬೆಂಕಿ ಹಚ್ಚಿದ್ರನ್ನ ಸಾಯ್ಲಲ್ಲ. ಉಳುಕಂಡ್ರು ಅಂತ ಏನನ್ನು ಯಿಸ ಇಟ್ಟು ಕೊಲ್ಲಿ ಬಿಡ್ತಾರೆ.ಸಾಕಪ್ಪ ಈ ದುಷ್ಟದವರೇ ಆಳಲಿ, ಜೀವದಲ್ಲಿ ನಾವು ಹೋಗಾನ ಅಂತ, ಎಲ್ಲರೂ ತಪ್ಪಸ್ಸಿಗೆ ನಿಲ್ಲುವರು.

ಸ್ವಾಮಿ ನಾವಿನ್ನು ಈ ದುಷ್ಟ ಲೋಕದಲ್ಲಿ ಇರಲಾರೆವು. ನೀನು ನಿನ್ನ ಮಠಕ್ಕೆ ನಮ್ಮನ್ನ ಜೀವ ಎಳದೊಯ್ಯಿ ಎಂದು ಪ್ರಾರ್ಥಿಸುವರು. ಆಗ ಶಿವನು ಹೂ ತೊಟ್ಲು ಮೇಲಿಂದ ಕೆಳಗೆ ಬಿಡುವನು. ಎನ್ರಪ್ಪಾ ಕೃಷ್ಣ , ಹಾಲು ಗೊಲ್ರೆ ನಿಮ್ಗೆ ದುಷ್ಟಲೋಕ ಸಾಕಾಗಿ ಒದ್ಯಾಡಿದ್ರಿ, ಎಲ್ಲಿಗೆ ಬರ್ತಿರೆಂದು ಕೇಳಿದಾಗ , ನಿಮ್ಮ ಮಠಕ್ಕೆ ಬರ್ತೀವಿ. ಹೂವಿನ ಗಿಡಕ್ಕೆ ನೀರ್ಹಾಕತೀವಿ. ಕಸ ಬಳಿತಿವಿ, ನಿನ್ನ ಆಜ್ಞೆಯಂತೆ ನಡಿತೀವೆನ್ನುವರು. ನಿನ್ನ ಅಕ್ಕನವರು, ನಿನ್ನ ಮಕ್ಕಳಿಗೇನು ಮಾಡಬೇಕೆಂದಾಗ, ಅಕ್ಕನವರಿಗೆ ಮಾವಿನ ಹಣ್ಣದಾಗ ಹುಳಾ ಮಾಡುವಂತೆ, ಮಕ್ಕಳನ್ನು ಸತ್ತ ಹೆಣ ತಿನ್ನೊ ಕರೇ ಕಾಕಿ ಮಾಡೆಂದು ಸಿರಿದೇವಿ ಕೇಳಿಕೊಳ್ಳುವಳು. ಸಾಂಬಶಿವ ಸಿರಿದೇವಿ ಹೇಳಿದಂತೆ ಮಾಡುವನು. ಶಿವನು ಶರಬಂಧನಿಗೆ ನಿಮ್ಮ ತಾಯಿ ನೀನು, ಏಳು ಮಂದಿ ಹೆಂಡ್ರು ಮಠಕ್ಕೆ ಬರಬೇಕು. ನಿಮ್ಮ ತಂದಿ ಬರಬಾರದು. ಆತ ದುಷ್ಟರೊಳಗೆ ದುರ್ಮಾರ್ಗವೃದಾನ ಅವನು ಮಠಕ್ಕೆ ಬರಬಾರದೆಂದಾಗ, ಸಿರಿದೇವಿಯು ಜೀವದ ಗಂಡ ಎದುರಾಗಿ ಬಿಟ್ಟ.

ನಾನು ಗಂಡನ ಬಿಟ್ಟು ಮಠಕ್ಕೆ ಬರಲಾರೆ. ಸ್ವಾಮಿ ಕೊಟ್ರೆ ನಮಗಿಬ್ರಿಗಿ ಕೊಡು, ನಿಮ್ಮಟಕೆ ಬರ್ತೀವಿ ಇಲ್ದಿದ್ರೆ ಬ್ಯಾಡ ಅನ್ನುವಳು. ಆಗ ಸಾಂಬಶಿವನು ನಿನ್ನ ಗಂಡ ದುಷ್ಟ , ದರಿದ್ರದವನು. ನಿನ್ನಿಂದಲೇ ಮೋಕ್ಷಾಗೈತಿ ಅವನಿಗೆ . ನಿನ್ನ ಸಲುವಾಗಿ ಅವನನ್ನು ಮಠಕ್ಕೆ ಕರೆದೊಯ್ಯುವೆನೆನ್ನುವನು. ಆಗ ಸಿರಿದೇವಿ ತಾಯಿಯು ಬನ್ನಿ ಪತ್ರಿ, ಕ್ಯಾದಿಗಿ ಹೂವ್ವಾ, ಅಂಬ್ರೆ ಹೂವ್ವಾ, ಎಕ್ಕಿ ಹೂವ್ವಾ ತಂದು ತೊಟ್ಲಿಗಿ ಪೂಜಿ ಮಾಡುವಳು. ಮುತ್ತಿನ ಸೆರಗಿಲಿ ತೊಟ್ಲಿಗಿ ಶರಣು ಮಾಡಿ, ತೊಟ್ಲದಲ್ಲಿ ಕೂಡುವರು. ಮಗ ಮತ್ತು ಗಂಡ , ಸೊಸೆಯಂದಿರು ಹೋಗಿ ತೊಟ್ಲಲಿ ಕೂಡುವರು. ದುಷ್ಟ ಲೋಕ ಬಿಟ್ಟು ಹೋತಿವಿ ನಾವೆಲ್ಲ. ಶಿವ ಶಿವ ಎನ್ನುತ್ತಾ ಶಿವ ಲೋಕ ಮಠಕ್ಕೆ ಹೋಗಿ ಬಿಡುವರು. ಇಲ್ಲಿಗೆ ಶರಬಂಧರಾಜ ಹಾಲುಗೊಲ್ರುದು ಕತಿ ಮುಗಿಯುತ್ತದೆ.

5.3- ಸ್ಯಾಸಿ ಚಿನ್ನಮ್ಮನ ಕಾವ್ಯ *:

ಕದರಿ ಗುಡ್ಡದಲ್ಲಿ ನರಸಿಂಹರೆಡ್ಡಿ ಮತ್ತು ಸಿಲುಮತಾಯಿ ವಾಸಿಸುತ್ತಿರುತ್ತಾರೆ. ಇವರಿಗೆ ಸಂತಾನ ಭಾಗ್ಯವಿರುವುದಿಲ್ಲ. ತಿರುಪತಿ ವೆಂಕಟೇಶ್ವರ ಸ್ವಾಮಿಯ ಭಕ್ತರು. ತಿರುಪತಿ ಗುಡ್ಡಕ್ಕೆ ದಂಪತಿಗಳಿಬ್ಬರೂ ಹೋಗಿ ಸ್ವಾಮಿ ಪೂಜೆಯನ್ನು ಭಕ್ತಿಯಿಂದ ಮಾಡ್ತಾರೆ. ತಿರುಪತಿ ವೆಂಕಟೇಶ್ವರನ ವರ ಪ್ರಸಾದದಿಂದ ಏಳು ಮಂದಿ ಗಂಡು ಮಕ್ಳು ಹುಟ್ಟುತ್ತಾರೆ. ಅವರಿಗೆ ನರಸಿಂಹರೆಡ್ಡಿ , ಚಿಕ್ಕ ತಿರುಪತಿ, ನಾಗ ತಿರುಪತಿ, ದೇವ ತಿರುಪತಿ, ಮುನಿ ತಿರುಪತಿ, ದೊಡ್ಡ ತಿರುಪತಿ ಮತ್ತು ಬೋಗ ತಿರುಪತಿ ಎಂದು ಹೆಸರಿಡುತ್ತಾರೆ. ಬರೇ ಗಂಡು ಮಕ್ಕಳೇ ಇರುವ ಮನೆಯಲ್ಲಿ ಒಂದು ಹೆಣ್ಣು ಮಗಳು ಕೊಡೆಂದು ತಿರುಪತಿ ಸ್ವಾಮಿಯಲ್ಲಿ ಪ್ರಾರ್ಥಿಸುತ್ತಾರೆ. ನಿನ್ನ ಪೂಜೆ ಮಾಡಲು, ನಿನಗೆ ಪಡಗ ತರಲಿಕ್ಕೆ ದಾಸಿಂಗ ಹಿಡಿಲಿಕ್ಕೆ ಸ್ವಾಮಿ ಯಂಕಟರಮಣ ಎಂದು ಬೇಡುವರು. ಇವರನ್ನು ಕಂಡು ಲಕ್ಷ್ಮಿದೇವಿಯು, ಯಂಕಟರಮಣನಿಗೆ

ನನಗೆ ಮೂವತ್ತಾರು ಗಂಟೆ ಪೂಜೆ ಮಾಡೋರು
ನಾಮದಾರ್ರು
ನಾವು ಕೊಡದೇ ಆತಗೆ ಯಾರು ಕೊಡಬೇಕು
ನಮಗೆ ದಾಸಿಂಗ ಮಾಡೋರ್ಯಾರು
ಪಡಗ ತಂದು ಪೂಜೆ ಮಾಡಿ
ಊಟ ಕೊಡಬೇಕಲ್ಲ.
ನಮ್ಮ ಮಠ ಮುಂದೆ ಆಹಾ
ಮತ್ತೆ ಹೆಣ್ಣಮಕ್ಕಳಲ್ಲ ಪಡಗ ತರಾದು
ಗಂಡು ಮಕ್ಕಳು ಹೊರಾಂಗಿಲ್ಲ ಮತ್ತೆ
ಹೆಣ್ಣು ಮಕ್ಕಳು ಕೇಳ್ತೀದ್ದಾರೆ
ಕೊಡೋಣ ದಾಸರಿಗೆ

ಎಂದು ಹೇಳಿದಾಗ, ಹೆಣ್ಣು ಮಗು ಕೊಟ್ಟು ನಾನು ಕಷ್ಟ ನೋಡಲಾರೆನೆನ್ನುವನು. ಗಂಡ ಹೆಂಡ್ತಿ ಇಬ್ರು ಹೆಣ್ಣು ಮಗಳಿಲ್ಲದೆ ನಾವ್ಯಾಂಗೆ ಇರಬೇಕು. ಆಗ ವೆಂಕಟೇಶನು ಎಷ್ಟು ಮಂದಿ ಗಂಡ ಮಕ್ಕಳ್ನ ಕೇಳು, ಕೊಡ್ತಿನಿ ಹೆಣ್ಣು ಮಗಳು ಕೊಡಲ್ಲ ಎಂದಾಗ, ನಾವು ತಿರುಪತಿ ಸ್ವಾಮಿ ಪೂಜೆ ಮಾಡುವರು ನೀನು ಕೊಡಲೇಬೇಕೆನ್ನುವರು. ಇವರ ಹಠಕ್ಕೆ ಸೋತು ಸ್ವಾಮಿಯು ನೋಡಪ್ಪ ಮಗಳ್ನ ಕೊಡ್ತೀನಿ, ಕಷ್ಟ ಬಂದ್ರೆ, ಯಾರಿಗೆ ಕರ್ಮ? ವೆಂದಾಗ. ಪಾಪ ಕರ್ಮವಲ್ಲ ಹಡದವರಿಗಿರಲೆನ್ನುವರು. ಆಗ ತಿರುಪತಿ ಸ್ವಾಮಿಯು ಸಲುವಲು ತಾಯಿಯ ಸೆರಗಿನಲ್ಲಿ ಕಜ್ಜೇರು ಹಣ್ಣು ಹಾಕುವನು. ಆ ಹಣ್ಣನ್ನು ಊಟ ಮಾಡಿದಳು ತಾಯಿ. ದೇವ್ರಿಗೆ ಏಳು ಸರ್ತಿ ದಾಸಿಂಗ ಹಿಡ್ಸೀತ್ತಿನಿ. ಏಳು ಸರ್ತಿ ಓಲೆ ಮಾಡ್ಸಿಕೊಡ್ತಿನಿ. ನಿನಗೆ ಜಡೆ ಕೂದಲು ಕೊಡ್ತಿನಿ ಎಂದು ಹರಕೆ ಮಾಡಿ ಕೊಂಡು ಮನಿಗೆ ಬರುವರು.

---

* ಸ್ಯಾಸಿ ಚಿನ್ನಮ್ಮನ ಕಾವ್ಯ: ಸಂ. ಸ. ಚಿ. ರಮೇಶ, ಕನ್ನಡ ವಿಶ್ವವಿದ್ಯಾಲಯ- ಹಂಪಿ 1999

ಶನಿವಾರ ದಿನ ಮಧ್ಯಾಹ್ನದ ನಾಮದಾರ ಕುಲಕ್ಕೆ ಹನ್ನೆರಡು ಗಂಟೆಯೊಳಗೆ ಮಗಳು ಹುಟ್ಟುವಳು. ಹುಟ್ಟಿದ ಮಗುವಿನ ಹಣೆ ಮೇಲೆ ಮೂರು ನಾಮ ಸೀಲ್ ಹೊಡ್ದಂಗೆ ಇರ್ತಾವೆ. ನರಸಿಂಗರೆಡ್ಡಿಯ ಒಬ್ಬೆ ತಂಗಿ ಗೌಡನಾಗಮ್ಮ. ಅವಳಿಗೆ ಪಾಗುಂಡಕ್ಕೆ ಕೊಟ್ಟಿರುತ್ತಾರೆ. ಸ್ವಾದರತ್ತೆಯನ್ನು ತೊಟ್ಟಿಲಿಗೆ ಕರೆತರಲು ಹಿರಿ ಮಗನಿಗೆ ಕಳುಹಿಸುತ್ತಾನೆ. ಗೌಡನಾಗಮ್ಮಳು ಈಶ್ವರ ಪೂಜೆ ಮಾಡುವಳು. ಇವಳಿಗೂ ಏಳು ಮಂದಿ ಗಂಡು ಮಕ್ಳು. ಎಲ್ಲರ ಕೊಳ್ಳಾಗೂ ಲಿಂಗ ಕಟ್ಟಿರುತ್ತಾರೆ. ಇವು ಹಾಕೋದೆ ಲಿಂಗ. ಮಾಡೋದೆ ಶಿವನ ಪೂಜೆಯಾಗಿರುತ್ತದೆ. ಇವರ ಮನಿಯಲ್ಲಿ ಗೋವಿಂದ , ನಾರಾಯಣೆಂಬ ಶಬ್ದವೆ ಸುಳಿಯುವುದಿಲ್ಲ. ಹೀಗೆ ಗೌಡ ನಾಗಮ್ಮನ ಶಿವ ಭಕ್ತಿಯಾಗಿರುತ್ತದೆ. ಅಣ್ಣನ ಮಗನನ್ನು ಕಂಡು ಓಹೋ ಹೆಣ್ಣು ಮಗಳು ಹುಟ್ಯ್ಯಾಳು. ನಾನು ಕೂಡ ಒಬ್ಬಳೆ ಹೆಣ್ಣು ಮಗಳೆಂದು, ನನಗಾಗಿ ಹೆಣ್ಣು ಕೊಡಂಗಿದ್ದರೆ ನಾನು ಮನಿಗಿ ಬರ್ತಿನೆನ್ನುವಳು. ಆಗ ಅಳಿಯನು ತಾಯಿ ತಂದೆಗೆ ಕೇಳೆನ್ನುವನು. ಇದಕ್ಕೆ ಒಪ್ಪಿ ಗೌಡನಾಗಮ್ಮ ತನ್ನ ಏಳು ಮಂದಿ ಮಕ್ಕಳಾದ ರಾಘವ ರೆಡ್ಡಿ, ಶಾಶಕರೆಡ್ಡಿ, ಮಂಗಳ ರೆಡ್ಡಿ, ಸುಬ್ಬಾರೆಡ್ಡಿ , ಯಂಕರೆಡ್ಡಿ, ಬೋಗರೆಡ್ಡಿ, ಯೋಗರೆಡ್ಡಿರೊಂದಿಗೆ ಬಂಡಿ ಕಟ್ಟಿಕೊಂಡು ಅಣ್ಣನ ಮನಿಗಿ ಬರುವಳು. ತಂಗಿ ಬರುವುದನ್ನು ಕಂಡು ಅಣ್ಣನಿಗೆ ಎಲ್ಲಿಲ್ಲದ ಸಂತೋಷವಾಗಿ ಓಡಿ ಬಂದು ಶರಣಮ್ಮ ತಂಗಿ ಎಂದಾಗ, ತಂಗಿಯು ಅಣ್ಣನಿಗೆ ನೀನು ನನಗೆ ಹೆಣ್ಣು ಕೊಡಂಗಿದ್ದರೆ ನಾನು ನೀಲಡಿತಿನಿ ಎಂದು ಪಟ್ಟು ಹಿಡಿದಾಗ ಅಣ್ಣನು ಹುಟ್ಟಿದ ಮಗಳು ಯಾರಿಗೆ ಪುಣ್ಯೆ ತೊ ಬಾರಮ್ಮಾ. ಹುಟ್ಟಿ ಒಂಬತ್ತು ದಿನ ಆಗಲಿಲ್ಲ. ಮಗಳನ್ನು ಕೇಳ್ತಿಯ. ನಿನ್ನ ಬಿಟ್ಟು ನಾವು ಯಾರಿಗೂ ಕೊಡೊದಿಲ್ಲ. ದೊಡ್ಡವಳಾದ ವ್ಯಾಲೆ ನಿನ್ನ ಕೈಯಾಗ ಇಡ್ತೀವಿ. ನೀನು ಯಾರಿಗಾದ್ರು ಕೊಡೆನ್ನುವನು. ಅದಕ್ಕೂ ಒಪ್ಪದೆ ತಂಗಿಯು ಈಗಲೇ ಕೊಡಬೇಕು. ಒಪ್ಪಿಕಂಡ್ರೆ ಮನ್ಯಾಗ ಬರ್ತಿನೆನ್ನುವಳು. ಇದನ್ನ ಕೇಳಿ ಹಡದ ಬಾಣ್ತಿಯು ಗಂಡನಿಗೆ, ಹೆಣ್ಣು ಮಗಳನ್ನು ಹಿಂದಕ್ಕೆ ಕಳಿಸಿದ್ರೆ ಒಳ್ಳೆಯದಲ್ಲ. ಅವಳು ಸ್ರಾಪ್ಸಿ ಹೋದ್ರೆ ನಮ್ಮ ಮಗಳಿಗೆ ಒಳ್ಳೆದಾಗೊದಿಲ್ಲವೆಂದಾಗ ಅಣ್ಣನು ತಂಗಿಗೆ ನಿನಗೆ ವಾಕ್ಯನ ಕೊಡುತಿನಿ ತಾಯಿ ನಿನಗೆ ನನ್ನ ಮಗಳನ್ನ ಕೊಡ್ತಿನಿ ಎಂದು ಮಾತು ಕೊಡುವನು. ಆಗ ಗೌಡನಾಗಮ್ಮ ತನ್ನ ಮುತ್ತಿನ ಸೆರಗಿನಿಂದ ಬಾಗಿಲಿಗೆ ಶರಣು ಮಾಡಿ. ಬಲ ಪಾದ ಮನಿಯೊಳಗಿಟ್ಟು ಮನೆಯ ಹೆಣ್ಣು ಮಗಳು, ಮನೆಗೆ ಬೆಳಕು ನಾ ಬರುತೀನಣ್ಣ ಎಂದು ಮನೆ ಒಳಗೆ ಬಾಗಿ ಬರುವಳು.

ಮನೆಯ ಒಳಗೆ ಸ್ಯಾಸಿವೆ ಹಾಕಿ ಕರಿಯ ಕಂಬಳಿಯನ್ನು ಅದರ ಮೇಲೆ ಹಾಕಿ ಕುಳಿತು ಕೊಳ್ಳುತ್ತಾಳೆ.ಗಂಧದ ತೊಟ್ಲಾ ಕಟ್ಟಿರುತ್ತಾರೆ. ತಿರುಪತಿ ಸ್ವಾಮಿಯ ವರಪ್ರಸಾದದಿಂದ ಜನಿಸಿದ ಮಗಳಾದ್ದರಿಂದ ವೈಷ್ಣವ ಮತದ ಪ್ರಕಾರವೆ ಹೆಸರಿಡೆನ್ನುವನು. ನಾವು ಶಿವ ಭಕ್ತರು ಲಿಂಗ ಪೂಜಿ ಮಾಡೋರು ಹಾಗೆ ಹೆಸರಿಡುವೆನೆಂದಾಗ, ಅಣ್ಣನು ಹಾಗೆ ಎರಡು ಧರ್ಮಗಳ ಸಂಬಂಧ ಮಾಡದೆ ತಿಳಿದು ಹೆಸರಿಡಮ್ಮ ಎನ್ನುವನು. ಏನೇ ಆಗಲಿ ನಿನ್ನ ಮಗಳನ್ನ ಮಾತ್ರ ನಾನು ನನ್ನ ಸೊಸೆ ಮಾಡಿಕೊಳ್ಳುವೆನೆಂದಾಗ , ಹಾಗೆ ಆಗಲೆಂದು ತಿರುಪತಿ ಸ್ವಾಮಿಯ ವರ ಪ್ರಸಾದದಿಂದ

ಹುಟ್ಟಿದ ಮಗಳಿಗೆ ಸ್ಯಾಸಿವಿ ಚಿನ್ನಮ್ಮ ಎಂದು ಹೆಸರಿಡುವರು. ಕಾರ್ಯಕ್ರಮ ಮುಗಿದ ಮ್ಯಾಲೆ ಮರುದಿವಸ ತಂಗಿಗೆ ಸೀರೆ ತಂದು ಉಡಿಸಿ, ಕಳಿಸಿ ಕೊಡುವರು.

ಮಗಳು ಮೂರು ವರ್ಷದವಳಾಗುವಳು. ಎಂಕಟರಮಣ ಸ್ವಾಮಿಗೆ ದಾಸಿಂಗ, ತಲೆ ಕೂದಲು ತೆಗಿಯುವರು. ಮತ್ತೆ ಐದು ವರ್ಷದಾಗ ದಾಸಿಂಗ ತೆಗೆಯುವ ಸಮಯದಲ್ಲಿ ತಂಗಿಯನ್ನು ಕರೆತರಲು ಕಳಿಸಿದ್ರೆ. ಆಗ ಗೌಡನಾಗಮ್ಮ.

ಹೋಗುಬಾರದು ತಿರುಪತಿ ಸ್ವಾಮ್ಗೆ

ನಾ ಬಾಯಿ ಎಮ್ಮ

ನಾವು ಗೌಡ ನಾಮು ನೋಡಬಾರ್ದು

ಎದುರು ನಾಮುಗಳು

ನಾವಾಗಿ ಲೋಕ

ನಾಮುಗಳು ನೋಡಬಾರರ್ದು

ಅಡ್ಡಾ ನಾಮಗಳು ದವರ ನಾವು

ಎಂದು ಗೌಡನಾಗಮ್ಮ, ನನಗೆ ಕೆಲಸವಿದೆ. ಮಕ್ಕಳು ಜ್ಯೋಳ ಕೊಯ್ಯುತ್ತಿರುವರು. ಸುಸ್ತಾಗಿದೆಂದು ಬರಲು ಆಗುವುದಿಲ್ಲವೆಂದು ತಪ್ಪಿಸಿಕೊಳ್ಳುವಳು. ಸ್ವಾಮಿಗೆ ಏಳು ಸರ್ತಿ ದಾಸಿಂಗ ಮಾಡುವರು. ಶ್ಯಾನ ಭಾಗರ ಬಳಿ ಮಗಳನ್ನ ವಿದ್ಯೆ ಕಲಿಯಲು ಕಳಿಸುವರು. ಭೂತಾಯಿ ಮ್ಯಾಲೆ ಕುತ್ಕಂಡು, ಸರಸ್ವತಿ ನಾಮ ಬರಿಯುವಳು.

ಬಳ್ಳುವಿಟ್ಟಳೆ ಬಳ್ಳುವಿಟ್ಟಲೆ

ಮಗಳಾಗಿ ತಾಯೆ

ವಿs ಕಣ್ಣು ಬಿಟ್ಟರೆ ಕಂಠಪಾಠ

ತಾ ತಂಗಿನಾಥ

ವಿs ಒಂದು ಬರ್ದರೆ ನಾಕು ಬರಿತಾಳೆ

ದೇವ್ರು ವರದಲಿ ಹುಟ್ಯಾಳಪ್ಪ

ಹೀಗೆ ಹನ್ನೆರಡು ವರುಷತನಕ ಸ್ಯಾಸಿವೆ ಚಿನ್ನಮ್ಮ ವಿದ್ಯೆ ಕಲಿಯುತ್ತಾಳೆ. ನರಸಿಂಹರೆಡ್ಡಿ ಇನ್ನು ಮಗಳು ಕೈಗೆ ಬಂದವಳೆ ವಿದ್ಯೆ ಸಾಕೆಂದು ನಿಲ್ಲಿಸುವನು.

ಗೌಡನಾಗಮ್ಮ ಅಣ್ಣನ ಮನಿಗೆ ಮದುವೆ ಪ್ರಸ್ತಾಪ ಮಾಡಲು ಬರುತ್ತಾಳೆ. ನಿನ್ನ ಮಗಳು ನನ್ನ ಮಗಳು ನನಗೆ ಕೊಡಣ್ಣಾ. ನಾನೇ ಮಾಡ್ಕಂಡು ಹೋಗ್ತಿನಣ್ಣ. ನನ್ನೂರಿಗೆ ಬಂದು ಮದಿವಿ ಮಾಡಿ ಕೊಡಬೇಕೆಂದಾಗ, ಅಣ್ಣನು ಅಲ್ಲಿ ಮಾಡುವ ಬದಲು ಇಲ್ಲೆ ಮಾಡ್ತೀನಿ. ತಿರುಪತಿ ಸ್ವಾಮಿ ಮುಂದೆ ಮಾಡ್ತಿನೆನ್ನುವನು. ಆಗ ಗೌಡ ನಾಗಮ್ಮ ಗುಡ್ಡ ಏರಿದರೆ ನನಗೆ ಉಬ್ಬಸ ಬರ್ತದೆ ಮದುವಿ ಮನಿಮುಂದೆ ಮಾಡಣ್ಣವೆನ್ನುವಳು. ತಿರುಪತಿ ಸ್ವಾಮಿ ವರದಲ್ಲಿ ಹುಟ್ಟಿದ ಮಗಳವಳು. ಸ್ವಾಮಿಗೆ ಅಕ್ಕಿ ಬ್ಯಾಳೆ, ಕಾಯಿ ಮುಡಿಸಲಾರದೆ ಲಗ್ನ ಮಾಡಬಾರದು. ನಮಗೆ ಒಳ್ಳೆಯದಾಗುವದಿಲ್ಲ. ಬೆನ್ನಿಂದೆ ಹುಟ್ಟಿದ ತಂಗಿ ನೀನು,

ಮುಂಚೆನೆ ಕೊಟ್ಟು ಬರೋಣವೆಂದಾಗ, ತಂಗಿಯು ಲಗ್ನವಾದ ಮ್ಯಾಲೆ ಕೊಟ್ಟರಾಯಿತಣ್ಣವೆನ್ನುವಳು. ಎಂಥಾ ಮಾತಾಡ್ತಿ ತಂಗಿ ನೀನು ನಾವು ಊಟ ಮಾಡಿ ಎಂಜಲ ಕೈಲಿ ಕೊಟ್ಟರೆ, ತಿರುಪತಿ ಸ್ವಾಮಿ ಒಲ್ಲೆನ್ನುವನು. ಮುಂಚೆನೇ ಹೋಗಿ ಕೊಟ್ಟು ಬರೋಣವೆಂದರೆ. ಮನಸ್ಸಿಲ್ಲದ ಗೌಡ ನಾಗಮ್ಮ ಮತ್ತೆ ಅದೇ ರಾಗ ಹಾಡಿ ಅಣ್ಣನಿಗೆ ಒಪ್ಪಿಸುವಳು. ಮದುವೆ ತಯಾರಿ ನಡೆಯುವುದು. ಮನಿ ಮುಂದೆ ಹಂದರ, ಹೂವಗಳ ಅಲಂಕಾರ ಮಾಡುವರು. ಕರೇ ಕಂಬಳಿ ಹಾಸಿ ಸ್ಯಾಸಿವೆ ಚಿನ್ನಮ್ಮನನ್ನು, ಕುಂದ್ರಿಸುವರು. ಆಗ ಗೌಡನಾಗಮ್ಮ ಎದ್ದು ಯಂಗಳ ರೆಡ್ಡಿಯನ್ನು ಕುಂದ್ರಿಸಿ ಹೀಗೆನ್ನುವಳು.

ಎಪ್ಪಾ ಈ ಕದ್ರಿಗಳು ಕದ್ರಿಗುಡ್ಡಕ್ಕೆ ಬಂದೀವಿ
ಈ ಕದ್ರಿ ಮಂಚಾಗ
ಏನನ್ನ ಬೇಕು ಊರಾಗ
ಕದ್ರಿ ಮಂಚಾಗ
ಗೋವಿಂದ ಅಂತ ತಾಳಿಕಟ್ಟಬೇಕು.
ನಾರಾಯಣ ಅಂತ ಗಂಟ್ಹಾಕಬೇಕು
ಈಗ ನಮ್ಮೂರಿಗ್ಹೋದ ಮ್ಯಾಲೆ
ನಮ್ಮ ದೇವುರೆ ಹಿಡಿಯನಲ್ಲ.
ನಾ ಒಂದೆ ಸೋಲ
ನಮ್ಮ ದೇವುರೆ ಕಳೆಯನಪ್ಪ
ಎಲ್ಲಾ ನಾಮ ಹಚ್ಚಕಳಿ
ಈಗಾಗಿ ಸೋನಾ

ಆಗ ಗೋವಿಂದ ಅಂತ ಮಗ ತಾಳಿ ಕಟ್ಟಿದ. ನಾರಾಯಣ ಅಂತ ಗಂಟುವಾಕುವನು. ಆಗ ಎನ್ ಮಾಡಿ ಕೇಳಿನೋಡಿ, ಎಲೆ, ಅಡಿಕೆ ತಿರುವನ ಮಾಡಿ ಅವರನ್ನ ಸೋಲು ಮಾಡಿ, ಹಾಲು ತುಪ್ಪನೆ ಕರೆಸಿ ಕುಡಿಸ್ತಾರೆ. ಲೋಕಕ್ಕೆಲ್ಲ ಊಟ ಮಾಡಿಸ್ತಾರೆ. ಊರಾಗೆಲ್ಲ ಮೆರವಣಿಗೆ ಮಾಡ್ತಾರೆ ಹೀಗೆ ಸ್ಯಾಸಿ ಚಿನ್ನಮ್ಮನ ಮದುವೆ ನೆರವೇರುವುದು.

ನರಸಿಂಹರೆಡ್ಡಿ ಮಗಳ ಮದುವೆ ಮಾಡಿ ಮೂರುದಿನಗಳ ನಂತರ ಸ್ವಾಮಿಗೆ ಮುಡಿಪು ಸಲ್ಲಿಸಲು ಬರಬೇಕೆಂದು ತಂಗಿ, ಅಳಿಯ ಹಾಗೂ ಮಗಳನ್ನು ಕರೆಯುತ್ತಾನೆ. ಗೌಡನಾಗಮ್ಮ ಇಲ್ಲಣ್ಣ ಯಾರು ಕೊಟ್ಟ ಬಂದ್ರೇನು ನೀನೆ ಹೋಗಣ್ಣವೆಂದ ಅಳಿಯ, ಮಗಳನ್ನು ಕಳಿಸದೆ ತಪ್ಪಿಸಿಕೊಳ್ಳುತ್ತಾಳೆ. ಆಗ ನರಸಿಂಹರೆಡ್ಡಿಗೆ ಮುಡುಪು ಸಲ್ಲಿಸಲು ತಿರುಪತಿ ಸ್ವಾಮಿ ಬಳಿ ಹೋಗಲು, ಮದುವೆಗೆ ಮುಂಚೆಯೇ ಅರ್ಪಿಸಬೇಕಾಗಿದ್ದ ಮುಡಿಪು ಗೌಡನಾಗಮ್ಮನ ತಂತ್ರದಿಂದಾಗಿ ಸ್ವಾಮಿಯಿಂದ ತಿರಸ್ಕೃತವಾಗುತ್ತದೆ.

ಸೊಸೆಯನ್ನು ಮನೆ ತುಂಬಿಸಿಕೊಂಡ ನಂತರ ಗೌಡನಾಗಮ್ಮ ಆಕೆಗೆ, ಕೇಳಮ್ಮ ಸೊಸಗೆ

ಗೋವಿಂದಂಬೋದು ಬಿಡಲೆಬೇಕು.

ನೀನಾಗಿಯಮ್ಮ

ನಾರಾಯಣೆಂಬೋದು ಬಿಡಲೆಬೇಕು.

ಗಂಡನ ಮನಿಗೆ ಬಂದಿದಮ್ಯಾಲೆ ರಾಮ ರಾಮ

ಎಮ್ಮಾ ಗಂಡನ ಪೂಜಿನ ಮಾಡಿರಬೇಕು ರಾಮ ರಾಮ

ಅಚ್ಚವಮ್ಮ ಶಿವವಿಭೂತಿ ನೀನು

ಎಮ್ಮಾ ಆಕವಮ್ಮ ಶಿವಲಿಂಗ ತಾಯಿ

ಅಚ್ಚವಮ್ಮ ಈ ಬೂತಚ್ಚಿ

ಹಾಕವಮ್ಮ ಕೊಳ್ಳಾಗ ಲಿಂಗ ರಾಮ ರಾಮ

ಎಂದೆಲ್ಲಾ ಕಟ್ಟಪ್ಪಣೆ ವಿಧಿಸುತ್ತಾಳೆ. ಚೆನ್ನಮ್ಮನಲ್ಲಿಯ ಮೂಲ ವೈಷ್ಣವ ಭಕ್ತಿಯನ್ನು ಚಿವುಟ ಹೊರಡುತ್ತಾಳೆ. ಆದರೆ ಚಿನ್ನಮ್ಮ ಶಿವ ಜಲ್ಮ ಯೋಗಲಿ ನಾರಾಯಣೆಂಬೆಂದು ಬಿಡೋದಿಲ್ಲ? ಶಿವ ಲಿಂಬದ ನುಡಿಸೋದಿಲ್ಲ. ನನ್ನ ಜೀವ ಹೋದ್ರು ಲಿಂಗ್ಹಾಕೊದಿಲ್ಲವೆಂದು ಹೇಳುತ್ತಾಳೆ. ಆಗ ಅತ್ತೆಯು ಗಂಡನ ಮನಿಗಿ ಬಂದ ಮೇಲೆ ಗಂಡನದೇವ್ರು ಮರ್ತು, ನಿನ್ನ ತಾಯವರ ದೇವ್ರು ಮೆಲೆತ್ತುತ್ತಿವೆಂದಾಗ, ನಾನು ತಾಯಿಯರ ದೇವ್ರಲ್ಲ ನನ್ನ ಜೀವ ಕೊಟ್ಟ ದೇವ್ರು ನಿಡಿತಿನಿ ಎಂದು ಪಟ್ಟು ಹಿಡಿಯುವಳು. ಅತ್ತೆ, ಸೊಸೆಯರ ಮಧ್ಯೆ ಪೈಪೋಟಿ ಜೀಳುವುದು.ತನ್ನ ಮಾತನ್ನು ಮೀರುತ್ತಿರುವ ಸೊಸೆಗೆ ಗೌಡನಾಗಮ್ಮ ಊರ ಹೊರಗಿನ ತಾಳನ ಗುಡಿಸಿನಲ್ಲಿ ಇಡುತ್ತಾಳೆ. ಇಲ್ಲಿಂದ ಚಿನ್ನಮ್ಮ ಕಷ್ಟದ ದಿನಗಳು ಪ್ರಾರಂಭವಾಗುತ್ತದೆ. ಗೌಡನಾಗಮ್ಮ ತನ್ನ ದೊಡ್ಡ ಸೊಸೆಯಾದ ಗೌರಮ್ಮಳೊಂದಿಗೆ ಚಿನ್ನಮ್ಮನನ್ನು ಸುಡಗಾಡದ ತಾಳನ ಗುಡಸಿನಲ್ಲಿ ಬಿಟ್ಟು ಬರಲು ಕಳಿಸುವಳು. ಗೌರಮ್ಮಳು ಇಂಥ ನೀಚ ಸ್ವಾದರತ್ತಿ ಮನಿಗೆ ನಿನ್ನ ಹ್ಯಾಂಗ ಕೊಟ್ರು. ನನಗಾಧ್ರೆ ನನ ತಂದೆ - ತಾಯಿ ತೀರಿದ ಮ್ಯಾಲೆ ಸಾಲ ತೀರಿಸಲಾಗಲ್ಲಿಲ್ಲ ಅದಕ್ಕಾಗಿ ನನಗಿಲ್ಲಿ ಕೊಟ್ರು. ನಾನಾಧ್ರೆ ಪರದೇಶಿ. ಒಬ್ಬನೆ ತಮ್ಮನು. ನಿನಗಾಧ್ರೆ ಏಳು ಮಂದಿ ಅಣ್ಣಂದಿರು ಹೇಗೆ ಈ ಮನಿಗಿ ಕೊಟ್ರು. ನಿನ್ನ ಮದಿವಿಗಿ ನನ್ನನ್ನ ಕರೆದುಕೊಂಡು ಬರಲಿಲ್ಲ. ನಾನು ಅಳಕೊಂತ ಕೊಡಬ್ಯಾಡ್ರಿ ಎಂದು ಹೇಳುತ್ತಿದ್ದೆ ಎಂದಾಗ, ನೋಡಕ್ಕ ಲಿಂಗಹಾಕಂತ್ತಾಳೆ. ಶಿವ ಶಿವ ಅನ್ನಬೇಕು. ಗೋವಿಂದಂಬೊದು ಮರಿಬೇಕನ್ನುವಳು ಅತ್ತಿ. ನನ್ನ ಜೀವ ಹೋದ್ರು ಮರೆಯೊದಿಲ್ಲಕ್ಕ ಎನ್ನುವಳು. ಹೀಗೆ ಮಾತಾಡ್ತಾ ತಾಳನ ಗುಡಿಸಲಿಗೆ ಬರುವರು.

ಗುಡಿಸಲಲ್ಲಿ ಚಕ್ಕೆ ಹಂಬಲ ಉಣ್ಣೆ ವೈದ ಹೇನುಗಳು ಬಿದ್ದ ಎತ್ತುಗಳು. ಕುಂತ್ರ, ನಿಂತ್ರುನೂ ಮ್ಯಾಗೆರತಾವ. ಚಿನ್ನಮ್ಮ ಗುಡಸಿನಲ್ಲಿ ತಂದೆ - ತಾಯಿ, ಅಣ್ಣಂದಿರನ್ನು ನೆನೆಸಿಕೊಂಡು ದುಃಖ ಮಾಡ್ತಾಳೆ. ಕೊಟ್ಟ ದೇವ್ರಿಗೆ ಚಿನ್ನಮ್ಮ ಬೈತಾಳೆ.

ಕೊಟ್ಟ ದೇವ್ರಿಗೆ ಬೇಲಿ ಕೊಡಿಯಲೊ

ಕೊಟ್ಟ ದೇವ್ರಿಗೆ ಬೆಂಕಿ ಹಚ್ಚಲೊ

ಹೆಣ ಮಕ್ಕಳಾಗಿ ಹುಟ್ಟೋ ಬದಲು

ನನ್ನ ದಾರಿ ಒಳಗೆ ಗಿಡ ಮಾಡುಬಾರ್ದ ರಾಮ ರಾಮ

ಯಾಕ ಜಲ್ಮ ಕೊಟ್ಟಾನಲ್ಲೊ ರಾಮಾ ರಾಮಾ

ಎಂದು ಲೋಕದಾಗೆ ಹೆಣ್ಣಾಗಿ ಕೊಡಬಾರದು. ಕೊಟ್ಟು ಕಷ್ಟ ಕೊಡಬಾರದು. ಯಂಕಟರಮಣ ನಿನಗೆ ಏಳು ಸರ್ತಿ ತಲೆ ಕೂದಲು ಕೊಟ್ಟೆ. ನನ ಜಲ್ಮಕ್ಕೆ ನೋಡು ಎಂಥ ದುಃಖ ಕೊಟ್ಟೆ ಎಂದು ದುಃಖ ಮಾಡ್ತಾಳೆ. ಅಲ್ಲಿಗೆ ಅತ್ತೆ ಬರುವಳು. ಸ್ಯಾಸಿ ಚಿನ್ನಮ್ಮಳಿಗೆ ಗೋವಿಂದಂಬೋದು ಮರಿಬೇಕೆಂದು ಶಿವ ಶಿವ ಅಂತ ನೆನಸಬೇಕೆಂದು ಆಜ್ಞೆ ಮಾಡಲು, ಚೆನ್ನಮ್ಮ ಒಪ್ಪುವುದಿಲ್ಲ. ಬಾರಕೋಲಿನಿಂದ ಹೊಡೆಯುತ್ತಾಳೆ. ಚಿನ್ನಮ್ಮನ ತೊಗಲು ಪಟ್ಟಂತ ವಡೆದು, ಚೊಳ್ಳಾಂತ ರಕ್ತ ಬರುತ್ತದೆ. ಸೊಸೆಗೆ ಒಂದು ಖಂಡಗ ನವಣೆ, ಎಲ್ಡು ಒಣಕಿಲಿ ಕುಟ್ಬೇಕು. ಇಲ್ಲಾಂದ್ರೆ ನಿನಗೆ ಕೂಳ್ಹಾಕಾದಿಲ್ಲೆಂದು ಹೇಳಿ ಹೋಗುವಳು. ಮನಿಗಿ ಬಂದು ಏಳು ಮಕ್ಳಿಗೂ, ಅವಳ ಜೊತೆ ಮಾತಾಡಬಾರ್ದು, ಮಗನಿಗೆ ಹೆಂಡ್ತಿ ಬಳಿ ಹೊಗಬಾರದು, ನಾ ಜಿಟ್ರೇನೆ ನೀವು ಹೋಗಿ ಊಟಾ ಮಾಡಿ ಬರ್ಬೇಕೆಂದು ಕಟ್ಟಪ್ಪಣೆ ಮಾಡುವಳು. ತಾಯಿ ಮಾತಿನಂತೆ ಮಕ್ಕಳು ನಡದುಕೊಳ್ಳುವರು.

ಸ್ಯಾಸಿ ಚೆನ್ನಮ್ಮ ಗೋವಿಂದಾ ಗೊವಿಂದಾ ಎಂದು ನಾಮ ಜಪಿಸುತ್ತಾ . ಅಯ್ಯಾ ಬಾರಯ್ಯ ನನ್ನ ಜಲ್ಮದಾಗೆಂದು ಅತ್ತೆ ಕೊಟ್ಟ ಕಷ್ಟಗಳನ್ನು ಸಹಿಸಿಕೊಳ್ಳುತ್ತಾಳೆ. ಸ್ವಾಮಿಯು ದಾಸಪ್ಪನ ವೇಷದಲ್ಲಿ ಲಕ್ಷ್ಮಿಯ ಮಾತಿನಂತೆ ಭೂಮಿ ಮ್ಯಾಲೆ ಗುಡ್ಯಾಗಿದ್ದ ದೀಪ ಗರುಡ ತಗಂಡು, ಮೂರು ನಾಮ ಹಚ್ಚಿಕೊಂಡು ಪಾವಗಂಡಾಗೆ ಎಂಕಟರಮಣ ಚಿನ್ನಮ್ಮನ ಬಳಿ ಬರುತ್ತಾನೆ. ಅವಳ ದುಃಖ ಕಂಡು , ಯಾಕೆ ದುಃಖ ಮಾಡ್ತೆಂದು ಕೇಳುವನು. ಆಗ ಚೆನ್ನಮ್ಮ ತನ್ನ ಪರಿಚಯ ಮಾಡಿ ಕೊಡುವಳು. ಎಂಟು ದಿನದಿಂದ ನನಗೆ ಅನ್ನ ನೀರಿಲ್ಲೆಂದು ಹೇಳುವಳು. ಅನ್ನ ನೀರಿಲ್ಲದೆ ಹೇಗೆ ಬದುಕಿರುವೆಯೆಂದಾಗ, ತ್ವಾಟದಾಗಿನ ಮಾವಿನ ಹಣ್ಣು, ನಿಂಬೆ ಹಣ್ಣು ತಿಂದು , ಭಾಯಾಗಿನ ನೀರು ಕುಡಿದು ಇದ್ದೀನೆನ್ನುವಳು. ನಿನಗೆ ಅತ್ತಿ ಮಾವ ಇಲ್ಲೇನು? ಎಂದಾಗ, ಊರಿಗೆ ದೊಡ್ಡಾಕೆ, , ಈಶ್ವರ ಪೂಜೆ ಮಾಡಾಕಿ ನಮ್ಮತ್ತೆ ಎನ್ನುವಳು. ದಾಸಪ್ಪನು ನಿಮ್ಮ ಅತ್ತೆ ಬಳಿ ಹೋಗಿ ನನಗೆ ಅನ್ನ ಇಡತಾಳೋ ಏನೋ, ಅನ್ನಾ ತರ್ತಿನೆಂದನ್ನುವನು. ಆಗ ಚಿನ್ನಮ್ಮ ಗೋವಿಂದಾ ಅಂದ್ರೆ ಸಾಕು ನಮ್ಮತ್ತೆ ಬಾಲಿಗಿ ತಗಂಡು ಬಡೀತಾಳ. ಹೋಗಬೇಡವೆನ್ನುವಳು. ಆಕೆ ನವಣೆ ಕುಟ್ಟುವುದನ್ನು ಕಂಡು ದಾಸಪ್ಪನು ನಾನು ಕುಟ್ಟು ಕೊಡ್ತಿನೆನ್ನುವನು. ಅಯ್ಯೋ ಸ್ವಾಮಿ ನಮ್ಮತ್ತಿ ಅಳತಿ ಮಾಡ್ತಾಳೆ. ಸರಿ ಬೇಡಮ್ಮ ಎಂದು , ಗಿಡದಲ್ಲಿ ಹಣ್ಣು ತಿಂದು ನೀರು ಕುಡಿವೆನೆನ್ನುವನು. ದಾಸಪ್ಪನು ಖಂಡುಗ ನವಣಿಯನ್ನು ಐದು ತಟಿಗೆ ನುಚ್ಚು ನುಚ್ಚು ಮಾಡುವನು. ಇತ್ತ ಗೌಡನಾಗಮ್ಮ, ದೊಡ್ಡ ಸೊಸಿ ಗೌರಮ್ಮನಿಗೆ ಚಿನ್ನಮ್ಮನ ಬಳಿ ಕಳಿಸುವಳು. ನೋಡಿ ಆಶ್ಚರ್ಯ

ಚಕಿತಳಾಗುವಳು. ದಾಸದ ಮೊಳಗೆ ಹುಟ್ಟಿದವಳು. ಮಾಯ ದಾಸದವಳು ಏಳು ಖಂಡುಗ ಕುಟ್ಟ್ಯಾಳೆಂದು , ಬಂದು ಅತ್ತೆಗೆ ತಿಳಿಸುವಳು. ಅತ್ತೆ ಬಂದು ನೋಡಿ ಸೊಸಿಗೆ ಮತ್ತೆ ರಾಗಿ ಬೀಸಂತಾ ಹೇಳಿ, ಕಬ್ಬಣ ಬೀಸು ಕಲ್ಲು ತೋರಿಸ್ತಾಳೆ.

ಕಬ್ಬಣದ ಬೀಸು ಕಲ್ಲು ಎರ್ಡು ಕೈ ಹಿಡಿದು ತಿರುವಿದ್ರು ತಿರುವಲಿಲ್ಲ. ಆಗ ತಾತನಿಗೆ ನೆನೆಸಿಕೊಳ್ಳುವಳು. ಗಿಡ ಮ್ಯಾಲಿದ್ದ ತಾತನು ಬರುವನು. ತಾನೇ ಬರ ಬರ ಗೋವಿಂದಾ ಅಂತಾ ರಾಗಿ ಬೀಸುವನು. ಐದು ಪಲ್ಲಾರಾಗಿ ಬೀಸುವನು. ಚಿನ್ನಮ್ಮನಿಗೆ ಅತ್ತಿಗೆ ಇದುರು ಆಡಬಾರದೆಂದು,

ಮುಂದಕ ನಿನಗೆ ಪೂಜಾ ಬರ್ತಾದ ನೋಡು ಮಗಳಾ ನಿನಗೆ
ಗೋಪೂಜೆ ಬರ್ತಾದ ನಿನಗೆ
ಗೋಪುಜಮ್ಮ ನಿನ ಜಲ್ಮಕ ಮಗಳೆ
ಅತ್ತಿಗೆ ಮಾವಾಗ ಯಾರಿಗೆನ್ನಾ ಏನು ಹೇಳಬ್ಯಾಡ

ಎಂದು ಬುದ್ಧಿ ಮಾತು ಹೇಳುವನು. ಗೌಡನಾಗಮ್ಮ ಕುಂಬಾರನ ಬಳಿ ಹೋಗಿ ಐವತ್ತು ಸೇರು ಹಿಡಿಯೊ ಪಡಗವನ್ನು ಮಾಡಿಸುತ್ತಾಳೆ. ಅದನ್ನು ತರಲು ಮಕ್ಕಳಿಗೆ ಕಳಿಸಿದ್ರೆ, ಅದು ಅವರಿಂದ ಏಳುವುದಿಲ್ಲ. ದೊಡ್ಡ ಸೊಸೆ ಗೌರಮ್ಮನಿಂದಲೂ ಏಳಲಿಲ್ಲ. ಎಳಕೊಂತ ತಾಳನ ಗುಡಿಸಿಲಿಗೆ ಚಿನ್ನಮ್ಮನ ಬಳಿ ತರುವರು. ಏಳು ಮಂದಿ ಅಣ್ಣೊರು ಕೂಡಿ ಎತ್ತುಗಳಿಗಾಗಿ ರಾಗಿ ಅಂಬಲಿ ಮಾಡುವರು. ಇನ್ನು ಅದನ್ನು ತಂದು ಚಿನ್ನಮ್ಮನಿಗೆ ತಲಿ ಮ್ಯಾಲೆ ಹೊರಲು ಹೇಳುವರು. ಚಿನ್ನಮ್ಮ ಸ್ನಾನ ಮಾಡಿ, ಪಡಗಕ್ಕೆ ಪೂಜೆ ಮಾಡಿ, ಗೋವಿಂದಾ ಗೋವಿಂದಾ ಎನ್ನಲು ಸ್ಯಾಸಿ ಚಿನ್ನಮ್ಮನ ತಲೆ ಮ್ಯಾಲೆ ಪಡಗ ಬಂದು ಕೂಡುವುದು. ಪಡಗ ಹೊತ್ತು ಕೊಂಡು ಹೋಗುವ ದಾರಿಲಿ ಹಳ್ಳಾ ಅಡ್ಡ ಬರುವುದು . ಚಿನ್ನಮ್ಮನ ಭಕ್ತಿ ನೋಡಬೇಕೆಂದು ದಾಸಪ್ಪನು ಹಳ್ಳದ ಮುಂದೆ ಬಂದು ಕೂಡುವನು.

ದಾಸಪ್ಪನ ಮೈತುಂಬಾ ಉಣ್ಣೆ, ಆತನ ಮೊಖ ಮಾತ್ರ ವಜ್ರದಂತೆ ತಳ ತಳ ಹೊಳಿತಿರುತ್ತದೆ. ಪಡಗ ಹೊತ್ತಿಕೊಂಡು ಬರುವ ಚೆನ್ನಮ್ಮಳನ್ನು ಕಂಡು ಶರಣು ಮಾಡಿ ನನ್ನ ಜಲ್ಮ ಹೋತಾದ ರಾಗಿ ಅಂಬಲಿ ಹಾಕಮ್ಮ ಎಂದು ಕೇಳುವನು. ಅದಕ್ಕೆ ಚೆನ್ನಮ್ಮ ಹಳ್ಳದ ಆಕ್ಕಡೆಗೆ ಎರೆ ಹೊಲ, ನಮ್ಮತ್ತಿ ನೋಡಿದ್ರೆ ಬಡಿತಾಳೆಂದಾಗ, ನಿನ್ನನ್ನು ಬಡಿದ್ರೆ ಆಕೆ ಬಕ್ಕಬಾರ್ಲ ಬೀಳ್ತಾಳೆ ನನಗೆ ಅಂಬಲಿ ಹಾಕಮ್ಮ ನೀ ಹಾಕಮ್ಮ ಅಂಬಲಿ ಎಂದು ತಲೆ ಮ್ಯಾಲಿನ ಪಡಗ ಇಳಿಸುವನು. ಅಂಬಲಿ ದಾಸಪ್ಪ ಎದ್ರಾಗ ಕೊಡಲೆಂದಾಗ ದಾಸಪ್ಪನು.

ಎನಿಲ್ಲಮ್ಮ ನಾನು ಬಗಸಿ ಇಡಕಂತೀನಿ
ಇದೇ ನನ್ನ ಬಟ್ಲ ಜೀವಕಾ
ಒಂದೇ ಸರ್ತಿ ಎಲ್ಡು ಮೊರ ಅಡ್ಡಾಲ ಆಯಿತು
ಆತನ ಕೈಯಾರದು ದಾಸಪ್ಪಂದು ಆಹಾ
ಆಗ ಪಡಗ ಬಗ್ಗಿಸಿಬಿಟ್ಲು
ಗಟ ಗಟ ತವಕ ಇಲ್ಲದಂಗ ಕುಡದು ಬಿಟ್ಟಾ ದಾಸಪ್ಪ
ಐವತ್ತು ಸೇರು ಅಂಗೆ ಎಲ್ಲ ಒಂದೆ ಕುಡಿದಾನಲ್ಲ ದಾಸಪ್ಪ

ಹೀಗೆ ದಾಸಪ್ಪ ಪಗಡದಲ್ಲಿದ್ದ ಅಂಬಲಿಯನ್ನೆಲ್ಲಾ ಕುಡಿದನು. ನಮ್ಮತ್ತಿ, ಏಳು ಮಂದಿ ಅಣ್ಣ ತಮ್ಮರು ನೋಡಿದ್ರೆ ನನ್ನನ್ನ ಹೋಡಿತಾರೆ ದಾಸಪ್ಪ ಎಂದು ಪಡಗವೆಲ್ಲಾ ತೊಳೆದು ಕೊಂಡು , ಮುಚ್ಚಳ ಮುಚ್ಚಿ, ಮಣ್ಣದು ಜೀಗ ಹಾಕಿ. ತಲಿ ಮ್ಯಾಲೆ ದಾಸಪ್ಪನಿಂದ ಹೊತ್ತಿಸಿಕೊಂಡು ಮೆಲ್ಲಗೆ ಗೋವಿಂದ ಗೋವಿಂದ ಅಂತ ದಾಸಪ್ಪನೊಂದಿಗೆ ನಡೆಯುವಳು. ಅತ್ತೆಯು ಮ್ಯಾಳಿಗೇರಿ ನೋಡಿದ್ರೆ. ಮಕ್ಕಳಿಗೆಲ್ಲಾ ಇಡು ಅಂತಾ ಅತ್ತಿ ಬುತ್ತಿ ಕೊಟ್ಟು ಕಳಿಸಿದ್ರೆ, ಸೊಸೆ ದಾನ ಮಾಡಿಕೆಂತಾ ಬರ್ತಾಳೆ ಎಂದು ಕೋಪದಿಂದ ಸೊಸಿಯನ್ನು ಕಾಯುವಳು. ಸ್ಯಾಸಿ ಚೆನ್ನಮ್ಮ ಹಳ್ಳಾ ದಾಟಿ ಪಡಗ ಹೊತ್ತುಕೊಂಡು ತಂದಳು. ಎಲ್ಲರೂ ಗಳೇವು ನಿಂದರಿಸಿ ಓಡಿ ಬಂದು ಪಡಗ ಇಳಿಸಿದ್ರು. ತೆಗೆದು ನೋಡಿದ್ರೆ ಖಾಲಿ ಪಡಗ ಇರುವುದು. ಮಗ ಎಂಗಾಳರೆಡ್ಡಿ ಮುಂದೆ ಅತ್ತೆಯು ಸೊಸೆಯನ್ನು ಬೈಯುವಳು. ಇಡೀ ರಾತ್ರಿ ಚೆನ್ನಮ್ಮನನ್ನು ಬಾರಕೋಲಿನಿಂದ ಹೊಡೆಯುವರು. ನೋವಿನಿಂದ ಗೋವಿಂದನನ್ನು ನೆನೆಯುವಳು. ಪಡಗದಲ್ಲಿ ಕಜ್ಜಣ ಮಡಿಕೆಗಳು, ನೊಗಗಳು, ಮಗ್ಗ, ಹಗ್ಗಗಳೆಲ್ಲಾ ಹಾಕಿ ಚಿನ್ನಮ್ಮನ ತಲೆ ಮೇಲೆ ಪಡಗ ಹೊರಿಸಿ ನಡೆಯುವರು. ಈಗ ಮತ್ತೆ ಹಳ್ಳದಾಟಿ ಹೋಗಬೇಕಾಗಿ ಬಂದಿತು. ಚಿನ್ನಮ್ಮ ಕುತ್ತಿಗೆ ಮಟ ನೀರುದಾಗೆ ಹಳ್ಳ ದಾಟಿ ಈ ಕಡೆಗೆ ಬರುವಳು. ಎತ್ತುಗಳು ಈ ಸಲು ಒಡಕಂಡು ಬಂದವು. ಆಗ ಅಲ್ಲೆ ಇದ್ದ ದಾಸಪ್ಪ ಇದನ್ನೆಲ್ಲಾ ನೋಡುವನು. ಶಿವ ಶಿವ ಅಂಬೋರಿಗೆ ಶಿವ ಲೋಕ ತೋರಿಸ್ತಿನೆಂದು, ಹಳ್ಳದಾಗ ಇಳಿದ ಅಣ್ಣ ತಮ್ಮಂದಿರ ಏಳು ಜುಟ್ಲ ಹಿಡಿದು ನೀರಾಗ ಬಗ್ಗಿಸಿ ಸಾಯಿರಿ ಸಾಯಿರಿ ಎನ್ನುವನು. ಎಲ್ಲರೂ ಶಿವ ಶಿವಾ ಗಂಗಾ ದೇವಿ ನಮ್ಮ ಪ್ರಾಣ ಹೋಗ್ತದೆ ಹಳ್ಳದಾಗೆ ಕಾಪಾಡು ಸ್ವಾಮಿ ಲಕ್ಕಿತೇರು ಮಾಡಿಸೇವಪ್ಪಾ ಶಿವನೆ ನಿನಗೆ , ಗಂಗಾನ ಪೂಜೆ ಮಾಡಿ , ಬಂಗಾರದ ಅಂಗ ಮಾಡಿಸ್ತೀವಿ ನಮ್ಮನ್ನ ಗಡ್ಡಿಗೆ ಹಾಕಮ್ಮಾ ಗಂಗಾದೇವಿ ಎಂದು ಪ್ರಾರ್ಥಿಸುವರು. ದಾಸಪ್ಪ ಮತ್ತೆ ಎಲ್ಲರ ಜುಟ್ಲ ಹಿಡಿದು ನೀರಲ್ಲಿ ಬಗ್ಗಿಸುವನು. ಆಗ ಅವರಿಗೆ ಹೀಗನ್ನಲು ಹೇಳುವನು.

ಗೋವಿಂದಂದ್ರೆ ಗಡಿಗೆ ಹಾಕ್ತೀನಿ ನಿಮ್ಮನಾಗಿ ನಾನು
ಸ್ವಾಮಿ ನಿನ್ನ ಗುಡಿಗೆ ನಾವು ಬರ್ತಿವಿ ನಾವು ಶಿವಾ
ನಾವು ಏಳು ತಲೆ ಮಂಡಿ ಕೋಡ್ತಿವಲ್ಲಾ ಒಪ್ಪಿಕೊಳ್ಳಿರಿ ನೀವು
ಗಡಿಗೆ ಹಾಕತೀನಿ ಇಲ್ಲದಿದ್ದರೆ ಹಳ್ಳದಾಗ ಬಿಟ್ಟು ಬಿಡ್ತೀನಿ

ಎಂದು ದಾಸಪ್ಪ ಹೇಳಿಸಲು, ಏಳು ಮಂದಿ ಪ್ರಾಣ ಭಯದಿಂದ ಒಪ್ಪಿಕೊಳ್ಳುವರು. ತಿರುಪತಿ ಗುಡ್ಡಕ್ಕೆ ಬಂದು , ಏಳು ತಲೆ ಕೊಟ್ಟು , ಮುಡುಪು ಕಟ್ಟಿ , ದಾಸಿಂಗ ಮಾಡಿಸ್ತೀನಿ. ಐವತ್ತು ಸೇರು ಪಡಗಕೊಡಲ್ಲಿ ಅಡಿಗಿ ಮಾಡಿಕೊಂಡು ಬರ್ತೀವೆಂದಾಗ, ದಾಸಪ್ಪನು ಅವರನ್ನೆಲ್ಲಾ ಗಡ್ಡಿಗೆ ತಂದು ಒಗದು ಬಿಟ್ಟನು. ಎಲ್ಲರು ದಾಸಪ್ಪನ ಪಾದಕ್ಕೆ ಎರಗಿ ನಮಸ್ಕರಿಸುವರು. ಹೆಣ್ಣು ಮಕ್ಕಳು ಪಡೆದ ಕರ್ಮ ಇದು. ಗಂಗಾದೇವು ಅಂದ್ರ ಹಣ್ಣೆ ದೇವತೆ. ನೀವು ಹೆಣ್ಣು ಮಗಳು ಏನೋ ದಾನ ಮಾಡ್ಯಾಳ ಹೋಗೊ ಜಲ್ಮ ಉಳಿಸ್ಯಾಳ. ಅವಳನ್ನು ನೀವು ಸಿಕ್ಕದಂಗೆಲ್ಲಾ ಬಡಿದಿರಿ ಎನ್ನುವನು. ನಮ್ಮದು ತಪ್ಪಾಗೈತಿ ತಾತಾ ಹೆಣ್ಣು ಮಗಳನಾ ಬಡಿಬಾರದಾಗಿತ್ತು ಎಂದು ಪಶ್ಚಾತಾಮ ಪಡುವರು.

ಹೆಣ ಮಗಳು ಎಳಕಂಡು ಹೋತಿದ್ದಳು. ನಮ್ಮನಾ ನೀನು ಗಣಮಗ ಆಗಿ ಗಡ್ಡಿಗೆ ಹಾಕಿದೆ

ಎಂದು ಹೇಳುವರು. ಎಲ್ಲರೂ ಚಿನ್ನಮ್ಮನ ಹಿಂದೆ ಮನಿಗಿ ಬರುವರು. ಬಂದವ್ರೆ ತಾಯಿ ಕಾಲಿಗೆ ಅಡ್ಡ ಬಿದ್ದು ನಡೆದ ವಿಷಯವೆಲ್ಲಾ ತಿಳಿಸುವರು. ತಾತ ನಮ್ಮ ಪ್ರಾಣ ಉಳಿಸಿದಾ. ಗುಡ್ಡಕ ಬಂದು ಮುಡುಪು ಕಟ್ರೆಂದಾ. ಎಂಟಾಣೆ ಇತ್ತು ಕಟ್ಟಿದ್ವಿ. ಈಗ ನಾವು ತಿರುಪತಿ ಗುಡ್ಡಕ್ಕೆ ಹೋಗಬೇಕಮ್ಮ ಎಂದು ಮಕ್ಕಳೆಲ್ಲರೂ ತಾಯಿಗೆ ಹೇಳುವರು. ಇವರ ಮಾತು ಕೇಳಿ, ಗೋವಿಂದನು ನಾವು ಶಿವ ಭಕ್ತರು ತಿರುಪತಿ ನಮ್ಮ ದೇವ್ರು ಅಲ್ಲ. ಕಟ್ಟಿದ ಎಂಟಾಣೆ ಮುಡುಪು ಭಾಯಾಗ ಒಗೆಸಿದಳು. ಚಿನ್ನಮ್ಮ ಹೊತ್ತು ತಂದ ನೊಗ , ಹಗ್ಗಗಳ ಪಡಗ ಇಳಿಸಿ ತೆರೆದು ನೋಡಿದಾಗ ಅದರಲ್ಲಿ ಚೆನ್ನಮ್ಮ ಅತ್ತೆಗೆ ಬಂದಾದಲಿದ್ದ ಅನ್ನಾ ಇಲ್ಲ ಜಲ್ಮಕ್ಕೆ, ನನಗೆ ಅಂಬಲಿನಾದ್ರು ಹಾಕು ಕುಡೀತಿನಿ , ಅಂದ್ರೆ ಕ್ರೂರಿಯಾದ ಅತ್ತೆ ಮನಸ್ಸು ಕರಗುವುದಿಲ್ಲ. ನಿನಗೇನು ಕೊಡೂದಿಲ್ಲ. ಹತ್ತು ವರುಷದ ಮುಗ್ಗಿನ ಜ್ವಾಳ, ಕೈಯಾಗ ಹಾಕಿ ತಿಕ್ಕಿದರೆ ಮಡಿ ಆತಾವ, ನಾತ, ಬಡಿತಾವ ಅಂಥ ಮೂರು ಸೇರು ಜ್ವಾಳವನ್ನು ಚಿನ್ನಮ್ಮನ ಮುತ್ತಿನ ಸೆರಗಿನಲ್ಲಿ ಹಾಕುವಳು. ಲೆಕ್ಕ ಮಾಡಿ ಎಳೆ ಮೆಣಸಿನಕಾಯಿ, ಇಡಿಕಿ ಉಪ್ಪು, ಎರ್ಡೆ ಬೊಳ್ಳಳ್ಳಿ, ಒಂದು ಉಳ್ಳಾಗಡ್ಡೆ, .ಕೊಟ್ಟಳು, ಒಡೆದು ಹೋದ ಗಡಿಗೆ, ಮುಚ್ಚವಾ ಕೊಟ್ಟು ಹೋಗೆ ದಾಸರ ದೊಳೆ ಅಡಿಗೆ ಮಾಡಿಕೊಳ್ಳೆ, ತಾಳಾನ ಎತ್ತಿನ ಗುಡಿಸಿಲಿಗೆ ಹೋಗೆನ್ನುವಳು. ಆಗ ಚಿನ್ನಮ್ಮ-

ನನಗೆ ಊರಾಗೇನನ ಇಲ್ಲೆ ಜಲ್ಮ ರಾಮಾ ರಾಮಾ
ಎಂತಾ ಊರ ಇರಬೋದು ಇದು ಪಾವಗಂಡ ಪಟ್ಣ
ನಮ್ಮ ಊರಗೇನು ಪಾಪದೋನೆ ರಾಮಾ ರಾಮಾ
ಒಬ್ಬರನ್ನಾ ನನಗೆ ಕೇಳುವಲ್ಲರೆ ರಾಮಾ ರಾಮಾ
ಎಮ್ಮಾ ನನ್ನ ತ್ರಿಗೆ ಯಾರು ಎಮ್ಮಾ ರಾಮಾ ರಾಮ
ಹೇಳುವರೆ ಇಲ್ಲೆ ಜಲ್ಮ ರಾಮಾ ರಾಮಾ

ಎಂದು ತಾಯಿ ದುಃಖ ಮಾಡ್ತಾ, ಉಡಿಕಟ್ಟಿಕಂಡು ಗುಡಿಸಲಿಗೆ ಬರುವಳು. ನಾತಾದ ಮುಗ್ಗಿನ ಜ್ವಾಳನ್ನು ಬಂಡಿ ಮ್ಯಾಗೆ ಹಾಕಿ ತಿಕ್ಕುವಳು. ಸೀಳಿ ಹೋಗಿದ್ದಕ್ಕೆ ಕೆಸರು ಹಚ್ಚಿ, ಗಡಿಗೆಗೆ ಮೂರು ಗುಂಡು ಕಲ್ಲಿಟ್ಟು, ಮುಚ್ಚಳ ಮುಚ್ಚಿ ಉರಿ ಹಚ್ಚಿದಳು. ಜ್ವಾಳದ ಕಟಂಬಲಿ ಕುತ ಕುತ ಅಂತ ಕುದಿಯುವುದು. ಅದರಲ್ಲಿ ಮೆಣಸಿನ ಕಾಯಿ, ಬೆಳ್ಳೊಳ್ಳಿ, ಉಪ್ಪು ಹಾಕುವಳು. ಮುಗ್ಗಿನ ಜ್ವಾಳದ ಅಂಬಲಿ ತಯಾರಾಗುವುದು. ಹತ್ತು ವರ್ಷದ ಮುಗ್ಗಿನ ಜೋಳದ ಅಂಬಲಿ ನನ ಜೀವಗಾ ಬಂತಮ್ಮ ಎಂದು ಕೊಳ್ಳುವಳು.

ವಾರೆ ಎಂಕಟೇಶ್ವರ ಇದನ್ನು ಕಂಡು, ಸ್ಯಾಸಿ ಚೆನ್ನಮ್ಮನ ಸತ್ಯ ಪರೀಕ್ಷಿಸಲು ಅಲ್ಲಿಗೆ ಬರುವನು. ನೀನು ಗೋವಿಂದ ಅಂದೆ ನಾನು ಬಂದೆ ತಾಯಿ ಎನ್ನುವನು. ಇಲ್ಲ ತಾತ ನಾನಿನ್ನ ಕರಿದಿಲ್ಲವೆನ್ನುವಳು. ತಾತನಿಗೆ, ಇಪ್ಪತ್ತು ದಿನಾ ಆಯಿತು ನನಗೆ ಅನ್ನಾ ಇಲ್ಲಾ, ಬಾಯಾಗ ನಿರಿಲ್ಲ. ನನಗೆ ಮುಗ್ಗಿನ ಜ್ವಾಳ ಕೊಟ್ಟಾರೆ. ಅದರಂಬಲಿ ಮಾಡಿನೆನ್ನುವಳು. ಇದನ್ನು ಕೇಳಿ ತಾತನು, ಮತ್ತೆ ನೀನು ಹೋಗಂದ್ರೆ ಹೋತಿನೆಂದಾಗ , ಚಿನ್ನಮ್ಮ ತಾತನಿಗೆ , ನಾತು ಬರುವ ಅಂಬಲಿ ಇರುವುದು. ನೀನು ತಿನ್ನಬಾರ್ದೆನ್ನುವಳು. ಆಗ ತಾತನು–

ಅಯ್ಯೋ ನಿನಿಗನ್ನಾ ಹೆಚ್ಚು ಬಂದೀನಾ

ಎಮ್ಮಾ ಹಾಲು ತುಪ್ಪಾ ಗೋದಿ ರೊಟ್ಟಿ

ಹಾಲು ಸಕ್ಕರೆ ಕುಡಿದಾಕಿ

ನೀನು ಉಂಡಾಕಿ ನಾನು ಉಂತೀನಿ ಆಹಾ

ನೀನು ತುತ್ತು ಉಣು ನನಗೆ ತುತ್ತು ಇಡು

ಎಂದು ಹೇಳಿದಾಗ, ಹಾಗೆ ಆಗಲೆಂದು ಚಿನ್ನಮ್ಮ ಗಡಿಗಿ ತೆರೆದು ನೋಡಲು, ಮೂರು ಸೇರು ಜ್ವಾಳೆಲ್ಲಾ, ಅರ್ಧ ಬೊಗಸೆ ಆಗಿ ಎಲ್ಲವೂ ಸೋಲಿರುತ್ತದೆ. ದಾಸಪ್ಪನು ಎಂಗನ್ನಾ ಆಗಲಿ ತೊಳದು ಹಾಕವ್ಮ ಎನ್ನಲು ಹಾಗೇ ಮಾಡುವಳು. ಊಟಾದ ಮೇಲೆ ತಾತನು, ನಿನಗೆ ಇಲ್ದಾಂಗೆ ಮಾಡಿದೆ ತಾಯಿ ಎನ್ನಲು, ಏನು ಪರವಾಯಿಲ್ಲ ಸಂತೋಷ ತಾತ ನೀ ಉಂಡೆ ಅಂದಾಗ. ದಾಸಪ್ಪ ತ್ವಾಟದಲ್ಲಿ ಹೋಗ್ತಿನೆಂದಾಗ , ಚಿನ್ನಮ್ಮ ಅತ್ತೆ ನೋಡಿದ್ರೆ ಬೈಯುವಳೆನ್ನುವಳು.

ಬೇಸು ತಿಂಬಲಾರದ ದಾಸರಿಗೆ ಇಡತೀಯಾ ಊಟ, ದಾಸರಿಗೆ ಹುಟ್ಟಿದವಳೆಂದು ಬಡಿತಾಳಪ್ಪ ನಿನ್ನ ಕಾಲು ಮುಗಿತೀನಿ ಸಪ್ಪಳ ಇಲ್ಲದಂಗೆ ಹೋಗೆಂದಾಗ ಹಾಗೆ ಆಗಲೆಂದು ದಾಸಪ್ಪನು ಊರೊಳಗೆ ಬರುತ್ತಾನೆ.

ಗೋವಿಂದ ಗೋವಿಂದ ಅಂತಾ ದೀಪ ತಗಂಡು ದಾಸಪ್ಪ ಗೌಡನಾಗವ್ಮನ ಮನಿಗೆ ಬಂದು

ನನಗೆ ಹಾಕ್ಯಾಳೊ ಪುಣ್ಯಾತಿಗಿತ್ತಿ ರನ್ನಾಚಿ ಎಮ್ಮಾ

ತಾವು ಉಪವಾಸ ಇದ್ದು ನನಗೆ ನೀಡಿದಳು ಧರ್ಮಾವ್ಮ

ಆಕೆ ಎಷ್ಟು ಧರ್ಮದಿ ಅಮ್ಮ ಐದಾಳಲ್ಲಾ ಆ ಸ್ಯಾಸಿ ಚಿನ್ನಮ್ಮ

ಎಮ್ಮ ಗೌಡನಾಗವ್ಮ ಸೊಸೆ ನೋಡಾ ಬಹು ಧರ್ಮಕ್ಕಾಗಿ ಸಾಕ್ಷಿ ಚೆನ್ನಮ್ಮ ಲೋಕದಲ್ಲೀನೆ ಬಹು ಧರ್ಮಕ್ಕಾಗಿ ಎಂದು ಚಿನ್ನಮ್ಮನ ಗುಣಗಾನ ಮಾಡುವನು. ಚಿನ್ನಮ್ಮನನ್ನು ಕೊಂಡಾಡುತ್ತಿದ್ದ ದಾಸಪ್ಪನನ್ನು ಕಂಡು ಗೌಡನಾಗವ್ಮನಿಗೆ ಎಲ್ಲಿಲ್ಲದ ಕೋಪ ಬಂದು, ಕೈಯಲ್ಲಿ ಕಸ ಬಳಿಯೋ ಬಾರಿಗೆ ಹಿಡಿದು, ಬಾರಿಸಲು ಹಿಂದೆ ಅವನ ಜೀಳುವಳು. ಇದನ್ನು ನೋಡಿ ದಾಸಪ್ಪ ಕೈಯಲ್ಲಿದ್ದ ದೀಪ ಮುಂದಕ ಮಾಡುವನು. ಬಾರಿಗೆಆದ್ದ ಶೀಲಗಾರ್ತಿ ಗೌಡ ನಾಗವ್ಮನಿಗೆ ಬೆಂಕಿ ಹತ್ತುವುದು. ಬಾರಿಗೆಗೆ ಹತ್ತಿದ ಬೆಂಕಿ ಹಂಗೆ ಸೆರಗಿಗೆ ಹತ್ತಿಕೊಳ್ಳುವುದು. ಬಾಯಿ ಬಾಯಿ ಬಡಿದುಕೊಳ್ಳುವಳು. ಆಗ ದಾಸಪ್ಪನು ಗೋವಿಂದಾ ಅನ್ನು ಬೇಸು ಮಾಡ್ತೀನಿ. ತಿರುಪತಿ ಗುಡ್ಡಕ್ಕೆ ನೀನು ಬರ್ತಿನೆನ್ನು ಸರಿಮಾಡ್ತೀನೆಂದಾಗ, ಗೌಡನಾಗವ್ಮ ಸ್ವಾಮಿ ಗುಡ್ಡಕ್ಕೆ ಬರ್ತೀನಿ, ತಲೆ ಕೂದಲು ಕೊಡತೀನಿ ಐವತ್ತು ಸೇರು ಮಾಡಿಕೊಂಡು ತರತೀನಿ ನನ್ನ ಬೇಸು ಮಾಡೆನ್ನುವಳು. ತಾತನು ಬೆಂಕಿ ಮ್ಯಾಲೆ ಆದಾರ ಉಗ್ಗಲು ಬೆಂಕಿ ನಂದಿತು. ತಾತ ಗೌಡನಾಗವ್ಮನಿಗೆ ಹೀಗೆ ಹೇಳುವನು -

ನೀವು ಶಿವ ಶಿವ ಅಂದರೆ ಬೇಸಾದಿರೆ
ಮತ್ತೆ ಬೆಳ್ಳಿಲಿಂಗ ಬಂಗಾರ ಲಿಂಗ ಆಹಾ
ಒಳಗ ಏನಿರತೈತೆ
ಕೊಲ್ಲು ಇರತೈತೆ ಆಹಾ
ಇಲ್ಲಿದ್ದರೆ ಇಷ್ಟು ರುದ್ರಾಕ್ಷಿ ಇರತೈತೆ
ಹೊರಗಾದರೆ, ಹಡದರೆ, ನೆರ್ತರೆ ಕೊಳ್ಳಾಗೆ
ಅಂತು ಮೈಲದಿಂದಾ ಅದು ಹೊರಗಲಿಲ್ಲಮ್ಮ ಆ ಲಿಂಗ ಎಮ್ಮಾ
ಹೊರಗಿಡಬೇಕು ನೀವು
ಹೊರಲಿಂಗ ಎಮ್ಮಾ ಮೈಲಾರಲಿಂಗ ಅಂಬುದಾ ಲಿಂಗ
ಅದು ಹತ್ತು ಜೀವಾಲಿಂಗ
ಅದು ನಿಜವಾದೆ ಲಿಂಗ
ಆತ್ಮಲಿಂಗ ಜೀವದಲ್ಲಿ ನಿಜವಾದ ಲಿಂಗ

ಎಂದು ತಿಳಿ ಹೇಳುವನು. ಗೌಡನಾಗಮ್ಮನು ಸ್ವಾಮಿ ನಾವು ಮಾತು ತಪ್ಪಂಗಿಲ್ಲ. ಬಲ್ರಿವೆಂದು ಒಪ್ಪಿಕೊಳ್ಳುವಳು. ನಿನ್ನ ಸೊಸೆ ಮಾಡಿದ ಪುಣ್ಯ ನಿನಗೆ ಬಂದೈತೆ, ನಿನ್ನ ಜಲ್ಮ ಉಳಿಸೀನಿ ನೋಡು ಬಾಳಾ ಉಶಾರಾಗಿರೆಂದು ಹೇಳಿ ಹೊರಡುವನು.

ಗೌಡನಾಗಮ್ಮ ಐವತ್ತು ಸೇರು ಜ್ವಾಳ ಕುಟ್ಟಿ, ಕಿಚ್ಚಡಿ ಮಾಡಿಕೊಂಡು, ತನ್ನ ಏಳು ಮಂದಿ ಮಕ್ಕಳೊಂದಿಗೆ ಬಂಡಿ ಕಟ್ಟಿ ಕೊಂಡು ಸೊಸಿ ಮತ್ತು ಗಂಡನಿಗೆ ಬಿಟ್ಟೆ ಗುಡ್ಡಕ್ಕೆ ಹೋಗಿ ಅಲ್ಲಿ ಗುಡ್ಡದ ಕೆಳಗೆ ದಾಸಿಂಗ ಇಡಬೇಕೆಂದು ತಯಾರಿ ಮಾಡುವಳು. ಬಂಡಿ ಕಟ್ಟಿ ಕೊಂಡು ಮಕ್ಕಳೊಂದಿಗೆ ಹೋಗುವಾಗ , ಬಂಡಿ ಚಕ್ರ ಮುರಿಯುವುದು. ಮನಿಗೆ ಹಿಂದಕ್ಕೆ ಬರುವಾಗ ಎತ್ತಿನ ಕಾಲು ಮುರಿಯುವುದು. ಆಗ ಗೌಡ ನಾಗಮ್ಮ ನಮ್ಮ ದೇವ್ರಾದ್ರೆ ನಮ್ಮನ್ನ ಕಾಪಾಡೋನು. ದಾಸಪ್ಪ ಹೇಳಿದಂತೆ ದೇವರಿಗೆ ಹೋಗಿ ಕೈ ಮುಗಿಬೇಕಂದ್ರೆ ನಮ್ಮ ದೇವ್ರು ಹೋಗಬ್ಯಾಡೆಂದು ಹಟ ಮಾಡ್ತಾ ಇರುವನೆಂದು, ಅನ್ನಾ, ಜ್ವಾಳದ ಕಿಚ್ಚಡಿಯೆಲ್ಲಾ ದನಗಳ ಬಾಯಾಗ ಸುರುವಿ ಮನಿಗಿ ಮರಳಿ ಬರುವರು.

ಇದನ್ನೆಲ್ಲಾ ತಿರುಪತಿ ಎಂಕಟೇಶ್ವರ ನೋಡಿ, ಇವರಿಗೆಲ್ಲ ಸರಿಯಾಗಿ ಬುದ್ಧಿ ಕಲಿಸಬೇಕೆಂದು, ವಾರೆಕಂಟೇಶ ಸ್ವಾಮಿಯು ಕೊರವಂಜಿ ವೇಷ ಹಾಕಿಕೊಂಡು ತಲೆ ಮ್ಯಾಲೆ ತಾಳನ ಪುಟ್ಟಿಯಲ್ಲಿ ತಾಳನ ಹೊತ್ತಿಗೆ ಇಟ್ಟುಕೊಂಡು ಹಾಡುತ್ತ ಕೊರಸರವನು ಗೌಡನಾಗಮ್ಮನ ಮನಿಗಿ ಬರ್ತಾನೆ. ಕೊರವ್‌ದೊಳನ್ನ ಗೌಡತಿ ಮನಿಯೊಳಗೆ ಕರೆದು ತಾಳನ ಪುಟ್ಟಿ ಶಾಸ್ತ್ರ ಹೇಳೆನ್ನುವಳು. ನನ್ನ ಸೊಸೆನೆ ನನಗೆ ಎದುರಾಗ್ಯಾಳಮ್ಮ. ಆಗ ಕೊರವಂಜಿ ಆರು ಸೇರು ಜ್ವಾಳಾ, ಒಂದು ಕರೆಕೋಳಿ ಕೊಟ್ರೆ ಹೇಳುವೆ. ಸರಿಯೆಂದಾಗ, ಗೋವಿಂದಾ ಅಂತಾ ತಾಳನ ಪುಟ್ಟಿ ಇಳಿಸಿ, ತಾಳನ ಹೊತ್ತಿಗೆ ತಾನೋಡುವಳು.

ನಿನ್ನ ಸೊಸಿ ತಿರುಪತಿ ಸ್ವಾಮಿ ಪ್ರಸಾದದಿಂದ ಹುಟ್ಟಿದವಳು. ಏಳು ಸರ್ತಿ ದಾಸಿಂಗ ಇಟ್ಟಿರುವ ಮಗಳು, ಕದಿರಿಮಂಜೇರು ಪೂಜೆ ಮಾಡೋರು, ತಿರುಪತಿ ಸ್ವಾಮಿಗೆ ನಾಮುದೋರು ನೀನು ಬ್ಯಾಡಂದ್ರು ಲಗ್ಗನ ಮಾಡಿಕೊಂಡು ಬಂದೀಯಾ. ತಿರುಪತಿ ಸ್ವಾಮಿ ನಿಮ್ಮ ದೇಭ್ರಿಗಿ ಎದುರಾಗ್ಯಾನೆ. ಸೊಸೆ ನಿನಗೆ ಎದುರಾಗಿಲ್ಲಮ್ಮ. ಅದಕ್ಕೆನು ಮಾಡಬೇಕೆಂದಾಗ,

ನೀನು ಶಿವ ಶಿವಾ ಅಂತ ಎಂಕಟರಮಣ ಅಂದರೆ
ಆತ ಈ ಲೋಕದಲ್ಲಿ ದೇಶದಾಗ ಇರೋನು
ದೇಶ ಹುಟ್ಟಿತಲ್ಲಿಗೆ ದೇಶ ಮುಣಿಗರತಲ್ಲಿಗೆ ಆಹಾ
ಆತನ ಕೂಟ ಈತ ಶಿವಾ ಗೆದ್ದು ತಾನ ಏನಮ್ಮ ಆಹಾ
ದೊಡ್ಡೋನು ದಡ್ಡಾ ಅಂದಿಯಲ್ಲಾ ಈ ಶಿವಾ ದಡ್ಡ ಇದ್ದಂಗಾ ಆಹಾ
ಆತ ಗೋವಿಂದ ಅಂಬೊನಮ್ಮ ತಿಳಿವಳಿಕಮ್ಮ
ಆತ ಮೂರು ನಾಮದವನು ಮೂರು ಅವತಾರದವನು.

ಹೀಗೆ ತಿಳಿಸಿ ಹೇಳುವಳು. ಐವತ್ತು ಸೇರು ಜ್ವಾಳ ಕುಟ್ಟಿ ಕಿಚಡಿ ಮಾಡಿ, ಗಿಳಿ ಬಂಡಿ ಮಾಡಿಸಿ , ಅದರಲ್ಲಿ ಅನ್ನ ಇಟ್ಟಕಂಡು, ಅಲ್ಲಿ ಸೊಸಿನ ಕೂಡಿಸಬೇಕು. ಅವಳ ತಂದಿ - ತಾಯಿಯನ್ನು ಕರೆಸಬೇಕು. ಡೊಳ್ಳು ಮ್ಯಾಳ ಮಾಡಿಕ್ಯಾಂತ ಹೋಗಬೇಕು. ನೀವು ಮನ್ಯಾಗಿರೋರೆಲ್ಲರೂ ಬೋಳುಗುಂಡು ಮಾಡಿಸಿಕೊಬೇಕು. ಎಪ್ಪಾ ನಿಮ್ಮ ಮಗಳು ಮಾಡಿಕೊಂಡಿದ್ದು ತಪ್ಪಾಗ್ಯಾತೃತೆಂದು ಬೇಡಿಕೊಳ್ಳಬೇಕೆಂದು ಹೇಳುವಳು. ಇದಕ್ಕೆ ಗೌಡಸ್ಯಾನಿ ಒಪ್ಪುವಳು. ವಾರೆ ಎಂಕಟೇಶ್ವರಾ ಗುಡಿಗೆ ಹೋಗುವನು. ಗೌಡನಾಗಮ್ಮ ಅಣ್ಣನ ಮನಿಗೆ ಹೋಗಿ ಕೊರವರೋಳು ಹೇಳಿದ ಶಾಸ್ತ್ರವೆಲ್ಲಾ ಹೇಳುವಳು. ತಿರುಪತಿ ಗುಡ್ಡಕ್ಕೆ ಎಲ್ರು ಹೋಗಬೇಕಂತೆ, ಗಿಣಿ ಬಂಡಿಯಲ್ಲಿ ಪಡಗ ಇಟ್ಟು, ಡೋಲು ಮ್ಯಾಳ ಬಾರಿಸ್ತಾ, ನಿನ್ನ ಹೆಂಡ್ತಿ ಕಳಸ ಇಡಿಬೇಕಂತೆ. ನಾವು ಸುಮ್ಮನೆ ಹಿಂದೆ ಬರಬೇಕಂತೆ. ನಾವ್ಯಾಕ ಬರಬೇಕು. ಮಗಳನ್ನು ಕಳಿಸಂದರೆ ಅವಳಿಗೆ ಸುಸ್ತಿ , ಎದ್ದೇವಲ್ಲಳು. ಬೇಸದಾಳೆ ಹೋಗಿ ಬನ್ನಿರೆನ್ನುವಳು. ಮನಿಗಿ ಬಂದು, ನಿಮ್ಮಣ್ಣ ತಂದೆ - ತಾಯಿ ನಿನ್ನನ್ನ ಕರ್ಕಂಡು ಹೋಗಲು ಬರ್ತಾರೆ. ಮನೆಯಲ್ಲಿ ಅಡಿಗೆ ಮಾಡಲು ಕಟ್ಟಿಗೆ ಇಲ್ಲ. ಎತ್ತುಗಳಿಗೆ ಮೇವು ತಂದಾಕೋಲಿಲ್ಲ. ಈಗ ನೀನು ಗುಡ್ಡಕ್ಕೆ ಹೋಗಿ ಕಟ್ಟಿಗೆ ತರ್ಬೇಕು ಎಂದು ಚಿನ್ನಮ್ಮಳಿಗೆ ಏಳು ಹಗ್ಗ ಕುಡಗೋಲು ಕೊಟ್ಟು ಕಳಿಸುವಳು. ಚೆನ್ನಮ್ಮ ದುಃಖ ಮಾಡ್ತಾ ಗುಡ್ಡದಲ್ಲಿ ಕಟ್ಟಿಗೆಯನ್ನು ಅರಸುವಳು. ಪಾಪ ಮಾಡಿ ಹುಟ್ಟಿದವಳು, ಕರ್ಮ ಕಳೆಯಲಿಕ್ಕೆ ಹೆಣ್ಣಾಗಿ ಹುಟ್ಟಿದವಳು. ಜಲ್ಮದಾಗೆ ಹುಟ್ಟಬಾರದಿತ್ತೊ ರಾಮ ರಾಮ ಎಂದು ದುಃಖ ಮಾಡ್ತಾಳೆ. ಇವಳನ್ನು ವಾರೆ ಎಂಕಟೇಶ್ವರ ನೋಡಿ, ಚೆನ್ನಮ್ಮನ ಬಳಿ ದಾಸಪ್ಪನ ವೇಷದಲ್ಲಿ ಬರ್ತಾನೆ. ತಾತನನ್ನು ಕಂಡು ಪಾದಕ್ಕೆ ಎರಗಿದಳು. ನಾನು ಹುಟ್ಟಬಾರದಿತ್ತು.

ತಾತ ನನ್ನ ಜೀವ ನೀನು ಕಳಿಯೊ ತಾತ ಎಂದು ಗೋಳಾಡುವಳು. ಅವಳಿಗೆ ತಾತನು

ಅಮ್ಮಾ ಈಸಬೇಕು ಎದರು ಗುಡ್ಡ ರಾಮಾ ರಾಮಾ
ಎಮ್ಮಾ ಜೀವದ ಪೂಜಾ ನಡಿಯಲೇಬೇಕು. ರಾಮಾ ರಾಮಾ
ಯಮನ ಗುಂಡಾದಾಗ ಈಸಬೇಕು.
ಜಲ್ಮ ಇರಲಿಕ್ಕೆ ಕಷ್ಟ ಪಡಬೇಕಮ್ಮ

ಏನೇ ಬಂದ್ರು ಎದುರಿಸಬೇಕವ್ಮ, ಸತ್ತರೇನು ಬಂತು? ಕೇಳವ್ಮ ನನ್ನ ಭಕ್ತಿ ಮಗಳೆ ನಾನೇ ಹೋಗಿ ಏಳು ಹೊರೆ ಕಟ್ಟಿಗೆ ತರುವೆನೆಂದೇ, ತಂದಾಕುವನು. ಕಟ್ಟಿಗೆ ಹೊತ್ತು ಕೊಂಡು ಚೆನ್ನಮ್ಮ ತಾಳನ ಗುಡಿಸಿಲಲ್ಲಿ ಹಾಕುವಳು. ಹಾಗೆ ಓಡಿ ಬಂದು , ಅತ್ತೆ ಪಾದಕ್ಕೆ ಶರಣು ಮಾಡಿ ಅರ್ಧ ರೊಟ್ಟಿ ನನ ಜಲ್ಮಕ್ಕೆ ಕೊಡೆಂದು ಬೇಡುವಳು. ಇಷ್ಟಾದ್ರು ಕಲ್ಲಿನ ಮನಸ್ಸಿನವಳಾದ ಅತ್ತೆಯು ಚೆನ್ನಮ್ಮಿಗೆ ಊಟ ಕೊಡುವುದಿಲ್ಲ. ಐದು ಹೊರೆ ಹಸೆ ಹುಲ್ಲು ತಂದರೆ ನಿನಗೆ ಊಟಕ್ಕಿಡತೀನೆನ್ನುವಳು. ಐದು ಹಗ್ಗ ಕೊಟ್ಟು, ಕುಡುಗೋಲು ಕೊಟ್ಟು , ಬೇಸಿಗೆ ಕಾಲದಲ್ಲಿ ಚೆನ್ನಮ್ಮನಿಗೆ ಗುಡ್ಡಕ್ಕೆ ಕಳಿಸುವಳು. ತಾತನ ಸಹಾಯದಿಂದ ಐದು ಹೊರೆ ಹುಲ್ಲನ್ನು ತಂದು ಹಾಕುತ್ತಾಳೆ. ತಂದಿ - ತಾಯಿ , ಅಣ್ಣಂದಿರೆಲ್ಲಾ ಗೋವಿಂದಾ ಎನ್ನುತ್ತಾ ಗಿಣಿ ಬಂಡಿ ಮಾಡಿಕೊಂಡು, ಊವತ್ತು ಸೇರು ಅನ್ನವನು ಪಡಾಗದಲ್ಲಿ ತುಂಬಿಕೊಂಡು, ವ್ಯಾಳ್ಯಾ ಡೋಲು ಹೊಡಿಕೋತ ಚೆನ್ನಮ್ಮನ ಬಳಿಗೆ ಬರುವರು. ಸ್ಯಾಸಿ ಚೆನ್ನಮ್ಮ ಬಿಳಿಸೀರೆ , ಬಿಳಿ ಕುಬ್ಬಸ ತೊಟ್ಟು, ಪಡಗಕ್ಕೆ ಎಲ್ಲರೂ ಕೂಡಿ ಪೂಜೆ ಮಾಡುವರು. ಆವಾಗ ಚೆನ್ನಮ್ಮ ಐವತ್ತು ಸೇರಿನ ಪಡಗ ತಲೆ ವ್ಯಾಲೆ ಹೊತ್ತು ಕೊಂಡಳು. ಸ್ವಾಮಿ ಜೀವ ಕೊಟ್ಟವನು. ಎಲ್ಲರೂ ಒಂದಾಗಿ ಬಿಲ್ರಿವೆನ್ನುತ್ತ ಚೆನ್ನಮ್ಮಳು,

ಈ ಸಾಕ್ಷಿ ಚೆನ್ನಮ್ಮ ಶೀಲಮ್ಮ ತಾಯಿ ಮಗಳು ಆಹಾ
ಪಾಪ ಮಾಡಿದಾ ಪಾಗುಂಡಮ್ಮಾ ಪಾಪಗಂಡಾಗೆ ಹೋಗಿ
ದೀಪ ಆರದೋಳು ದೀಪ ಆರದಂಗಾ ಇವರ ಕುಲದಾಗ
ಪಾವಗೊಂಡಾಗ,
ದೀಪ ಉರದಂಗ ದೀಪ ಇರದಂಗ ತಾವು ಹೋಗಲಮ್ಮಾ
ಪಾವಗೊಂಡಾ ಒಳಗೆ

ಎಂದು ತಾಯಿ ಶಾಪ ಕೊಡತ್ತಾಳೆ. ಬಂಡಿ ಮುಂದೆ ಹೋಗುವುದು. ಹಿಂದೆ ಚೆನ್ನಮ್ಮ ಪಡಗ ಹೊತ್ತು ನಡೆವಳು. ಕಳಸ ಹೊತ್ತು ತಾಯಿಯು ಮುಂದೆ ನಡೆಯುವಳು. ಗೋವಿಂದಾ ಅಂತಾ ಅನ್ನುತ್ತಾ ಜಲ್ಮ ತಾಯಿ ಸಾಕ್ಷಿ ಚೆನ್ನಮ್ಮ ಐವತ್ತು ಸೇರು ಪಡಗ ಎತ್ತಿಕೊಂಡು ಗುಡ್ಡ ಏರ್ತಾಳೆ. ಗುಡ್ಡಕ್ಕೆ ಬರಲು ಗೌಡನಾಗವ್ಮ ಮಕ್ಕಳಿಗೆಲ್ಲಾ ಸ್ವಾಮಿನ

ನೀವೆಲ್ಲಾ ನೋಡಬ್ಯಾಡೆನ್ನುವಳು. ನಾವೆಲ್ಲರೂ ಕೆಳಗಿರಾನ, ಅವರೆ ಹೋಗಲೆಂದು , ಆಕೆ ಗಂಡ ಮಕ್ಕಳೆಲ್ಲರೂ ಗುಡ್ಡದ ಕೆಳಗೆ ನಿಲ್ಲುವರು.ಕೊನೆಗೂ ತನ್ನ ಹಠವನ್ನೆ ಗೌಡನಾಗಮ್ಮ ಸಾಧಿಸಿ, ಸ್ವಾಮಿ ಮುಖ ನೋಡುವುದಿಲ್ಲ.

ಗೋವಿಂದ ನಾಮಸ್ಮರಣೆ ಮಾಡುತ್ತಾ, ಎಂಕಟೇಶ್ವರನ ಮುಂದೆ ಪಡಗವನ್ನು ಚೆನ್ನಮ್ಮ ಇಳಿಸುವಳು. ನೂರು ಪಡೇವು ಹೂವ ತಾತಂಗೆ ಹಾಕುವರು. ತಾತ ಆನಂದದಿಂದ , ಕಿಲ ಕಿಲ ನಗುವನು. ಆತ ಚೆನ್ನಮ್ಮನಿಗೆ ಲೋಕ ಸುಖ ನೀನು ನೋಡಿದ್ರೆ ಪಾಪ ಕರ್ಮಲೋಕದಲ್ಲಿ ಕಂಡೆಯಾ? ಎಂದು ಕೇಳಲು ಚೆನ್ನಮ್ಮ, ಬೋ ಸುಖ ನನ ಜೀವಕಪ್ಪಾ, ತಾಯಿ ತಂದೆ ಇಲ್ಲದಿದ್ದರೆ , ಸ್ವಾದರತ್ತಿನೆ ನನಗೆಲ್ಲಾ ಆದಳಪ್ಪಾ ಎಂದು ಹೇಳುವಳು. ಎಷ್ಟೊಂದು ಕಷ್ಟ ಕೊಟ್ಟ ನಿನ್ನತ್ತಿನ , ಇನ್ನೂ ನೆನೆಸ್ತಿಯಾ ಎಂದು ಕೇಳಲು , ಸ್ವಾಮಿ ನಾವ ಮಾಡಲಾರದೆ , ಲೋಕದಲ್ಲಿ ಯಾರು ಮಾಡಬೇಕೆನ್ನುವಳು. ನಿನಗೆ ಈಗ ಲೋಕ ಸುಖ ಬ್ಯಾಡ ತಾಯಿ, ಇಷ್ಟೇ ಸಾಕೆನ್ನುವನು. ಜಲ್ಮ ಎಳಿಬೇಕೆನ್ನುವಳು. ಪಡದ ದಾಸಿಂಗ ಇಡುವಳು. ಆಗ ಎಂಕಟರಮಣನು ಸ್ಯಾಸಿ ಚಿನ್ನಮ್ಮನಿಗೆ ಪಡಗದ ಮ್ಯಾಲೆ ಕುಂದರಿಸಿದನು. ಪಾಂಟಿಗೇರಿ ಬರಲಾರದೋಳಾದ ಗೌಡನಾಗಮ್ಮನನ್ನು ಗರುಡ ಗಂಬವನ್ನಾಗಿಸಿ, ಸದಾ ಅವಳ ತಲೆ ಮ್ಯಾಲೆ ದೀಪ ಉರಿಯುವಂತೆ ಮಾಡುವನು. ಅವಳ ಗಂಡ ಮತ್ತು ಮಕ್ಕಳನ್ನು ತಲೆ ಬೋಳಿಸುವ ನಾದರನ ಕಾಯಕ್ಕೆ ಸ್ವಾಮಿಯು ನೇಮಿಸುವನು. ಜೀವದ ಮಗಳ ಪೂಜಾ ಪಡಗಕ್ಕೆ ಆಗಬೇಕು. ಮುಂದೆ ಪೂಜಾ ನಿನ್ನದಾಗಬೇಕು. ಲೋಕದಾಗೆ ಹಿಂದೆ ಪೂಜಾ ನಮಗಾಗಬೇಕಮ್ಮ ಎಂದು ಜೀವದ ಮಗಳಾದ ಸ್ಯಾಸಿ ಚೆನ್ನಮ್ಮನನ್ನು ಪಡಗದ ಮೇಲೆ ಕೂರಿಸಿ, ತಿರುಪತಿ ವೆಂಕಟೇಶ ಸ್ವಾಮಿಯು ತನ್ನಲ್ಲಿ ಐಕ್ಯ ಮಾಡಿಕೊಳ್ಳುವನು. ಭಕ್ತಿ ಮಗಳಾಡಿದ ಮಾತಕೇಳಿ ಬಂದೆನಮ್ಮಾ

ಏನಮ್ಮಾ ದೇಶ ಹುಟ್ಟಿತಲ್ಲಿ ದೇಶ ಮುಳಗಿತಲ್ಲ
ಏ ಎಂಕಟರಮಣ ಈ ಲೋಕ ಬೆಳಸು
ಸಾಲ ಕೇಳಿದರೆ ಕೊಡತೀನಿ
ವಾರಕ್ಕೆ ಬಡ್ಡಿ ಕೊಡಬೇಕು. ನೀನು
ಈಗ ನನ್ನ ತಲ್ಲಿಗೆ ಬಂದೋಲಿಗೆಲ್ಲ ಬೋಳಿ ಮಾಡಿಸಿ ಕಳಸ್ತೀನಿ
ಮಕ್ಕಳ ಫಲ ಕೊಡೂನಲ್ಲಾ ವಾರೆ ಎಂಕಟೇಶ್ವರಾ

ಲೋಕದಲ್ಲಿ ಹೆಣ್ಣು ಮಕ್ಕಳ ಕೊಡೂದಿಲ್ಲ. ಅವರಿಗೆಂದೂ, ಆಗ ಪಾಪಗೊಂಡಾಗ ದೀಪ ಇಲ್ಲದಂತಾಗುವುದು. ಲೋಕದಾಗ ಸ್ಯಾಸಿ ಚೆನ್ನಮ್ಮನ ಪಡಗಕ್ಕೆ ತಿರುಪತಿಯಲ್ಲಿ ಪೂಜೆ ನಡಿತೈತೆ.

5.4- ಎಲ್ಲಮ್ಮನ ಕಾವ್ಯ: *:

ಹೊಳೆದಂಡಿ ಬಗಲಾದ "ಅಂಟಿಮಾವಳಿ" ಪಟ್ಣ. ಅಲ್ಲಿ ಜಗದಾ ದೇವರ ಹೆಂಡ್ತಿ ಚೌಡಿಕ್ಯಾ ಮಾದೇವಿ. ಹೊಳಿದಂಡೀಗೆ ಬರುವರು. ಆವಾಗ ತಾಯಿ ಚೌಡಿಕ್ಯಾಮಾದೇವಿ ಗಂಡನ ನಿಂದ್ರಿಸಿ, ಗಂಡನ ಪಾದ ತೊಳ್ದು, ನೀರು ಕುಡಿತಾಳ. ಅದೇ ಸಮಯದಾಗ ಮೂರೋ ಮೇಘದಾಗಲಿದ್ದ, ಪಾರ್ವತಿ ಪರಮೇಶ್ವರರು ಹೂವ್ವದ ತೋಟ್ಲಾದಾಗ ಬರತಾರ. ಆಗ ಪರಮಾತ್ಮ ಪರಲೋಕ ನೋಡಿ ಹೀಗಂತಾನ. ಇಂಥಾ ಸತ್ಯವಂತ ಹೆಣ್ಣು ಮಗಳು ಎಲ್ಲಿ ಕಾಣೆ. ಗಂಡನ ಪಾದ ತೊಳ್ದು, ನೀರು ಕುಡ್ದು, ಮುತ್ತಿನ ಸೆರಗ್ಹಾಸಿ ಯಾರು ಕೈ ಮುಗಿತಿದ್ದಾರ ಗಂಡನಿಗೆ? ಎಂದು. ನನಗೆ ಸಂತೋಷಾಗೈತೆಂದು ಬಲಗೈಯನ್ನು ಗಿಡದ ಮ್ಯಾಲೆ ಹಾಕಿ ಮಲ್ಲಿಗೆ ಮೊಗ್ಗು ಹರಿದು, ಉಡ್ಯಾಗ ಒಗದು ಬಿಟ್ನು. ಇನ್ನ ಗರ್ಭಕ್ಕೆ ಊಟಾ ಮಾಡ್ದುಳು ಚೌದಿಕ್ಯಾ ಮಾದೇವಿ. ಗಂಡ ಹೆಂಡ್ತಿ ಅಂಟಿ ಮಾವಳಿ ಪಟ್ಣಕ್ಕೆ ಹೋಗಿಬಿಟ್ಟರು. ಅಲ್ಲಿ ಚೌಡಿಕ್ಯಾ ಮಾದೇವಿ ಹೊಟ್ಟೆಯಲ್ಲಿ ಮಾಣುಷಿ ಹುಟ್ಟಿದ. ಆಗ ಪಾರ್ವತಿಯು ಗಂಡನಿಗೆ, ಏನ್ರಿ ಆಕಿನಾ ದುಷ್ಟ ಲೋಕಕ್ಕೆ ಸತ್ಯವಂತಾಕೆ ನಾವೆಲ್ಲ ಸತ್ಯವಂತ ಹೆಣ್ಸರಲ್ಲವೆ? ಎಂದಾಗ ಶಿವನು ನನಗೆ ಸಂತೋಷವಾಗಿ ಮಲ್ಲಿಗಿ ಹೂವ್ವಂತ ಮಾಣುಷಿನ ಕೊಟ್ಟೀನಿ ಎನ್ನುವನು. ಆಗ ಪಾರ್ವತಿಯು ಈ ದುಷ್ಟ ಲೋಕದಾಗ, ನೀನು ಕೊಟ್ಟಿದ ಮಗ ಹೆಚ್ಚಾತಾನೋ ನಾನು ಕೊಟ್ಟಿದ ಮಗಳು ಹೆಚ್ಚಾತಾಳೋ ನೋಡೋಣವೆಂದು, ಪಾರ್ವತಿಯು ತನ್ನ ಮತ್ತು ಗಂಡನ ಮೈಮೇಲಿನ ಮಣ್ಣನ್ನು ತೆಗೆದು ಕೂಡಿಸಿ ಎಲ್ಲಮ್ಮನನ್ನು ಸೃಷ್ಟಿ ಮಾಡುತ್ತಾಳೆ. ಕರಿ ಹುಲಿಗೆವ್ವ ಆಗಬೇಕೆಂದು ಮಗಳಿಗೆ ಬೇವಿನಗರಿ, ಬಳೆ, ಅರಿಶಿಣ ಭಂಡಾರ ಹಚ್ಚಿ , ಬಾರೆಹಣ್ಣು ಗಿಡದ ಕೆಳಗ ಬಿದಿರು ಪುಟ್ಟಿಯಲ್ಲಿ ಮೂರು ತಿಂಗಳ ಮಗಳನ್ನು ಮಲಗಿಸಿ, ರಥದಲ್ಲಿ ಕುಂತು ಮಾಯವಾಗುವರು.

ಏಳ ಗುಡ್ಡದಾಗ 'ಜಮ್ಮಿ ಗಿರಿ' ಪಟ್ಣ. ಅಲ್ಲಿ ಕಾರ್ತಿಕ ರಾಜ. ಇವನ ತಂಗಿ ಸೂರ್ಪಣಕಿ. ಆತನ ಹೆಂಡ್ತಿ ಕುಂತಿ ಮಾದೇವಿ. ರಾಕ್ಷಸಿ ಗರ್ಭದಾಗ ಏಳು ಮಂದಿ ಗಂಡು ಮಕ್ಳು. ರಾಜನು ಪರಿವಾರ ಸಮೇತನಾಗಿ ಕ್ವಾಣದ ಮ್ಯಾಲೆ ಕುಂತಗೊಂಡು ಬೇಟೆಗೆ ಹೋಗುವ ಮಾರ್ಗದಲ್ಲಿ ನೀರಡಿಕೆಯಾಗಿ , ಹೊಳಿದಂಡಿಗೆ ಹೋದಾಗ, ಅಲ್ಲಿ ಜಗಪುಟ್ಟಿ ಸುತ್ತ ಏಳು ಹೆಡೆ ಸರಪಣ, ಮಗಳಿಗಿ ಹೆಡೆ ಎತ್ತಿ, ಗಾಳಿ ಬೀಸುತ್ತಿರುತ್ತದೆ. ನಮಗ ಹೆಣ್ಮಕ್ಳು ಇಲ್ಲ ಈ ಹೆಣ್ಣು ದೇವ್ರಿನ ನಾವೇ ಸಾಕೋಣವೆಂದು ಮಗಳನ್ನು ಒಯ್ಯುವರು. ಜಮ್ಮಿಗಿರಿ ಪಟ್ಣಕ್ಕೆ ಬಂದು, ಹೆಸರಿಡಲು ತಾಳನ ಹೊತ್ತಿಗೆ ತೆಗಿಸಿ ನೋಡಿಸಿದ್ರು. ಹೊತ್ತಿಗೆ ನೋಡಿ ಜೋಯಿಸರು.

ಈಕಿ ದಾನಾಗ ಸಿಕ್ಕಕಿ ಈಕಿ ದಾನಾಬೇಡಕಿ ದೇವಿ
ಏs ಧರ್ಮಗ ಸಿಕ್ಕಾಕಿ ಈಕಿ ಧರ್ಮಬೇಡಾಕಿ
ದೇಶಕ್ಕೆ ಈಕಿ ಮಣ್ಣಲ್ಲಿದ್ದ ಈಕಿ ತಯಾರಾಗ್ಯಾಳ ದೇವಿ
ಬಣ್ಣದ ಎಲ್ಲಮ್ಮ ಈಕಿ ಛಾರಿ ಎಲ್ಲಮ್ಮ
ಏs ಲೋಕ ಎಲ್ಲಮ್ಮ ಈ ತಾಯಿನ ಕಲಿಬೇಕು

---

* ಎಲ್ಲಮ್ಮನ ಕಾವ್ಯ : ಸಂ. ಡಾ. ಕೆ. ಎಮ್. ಮೇತ್ರಿ , ವಿದ್ಯಾ ನಿಧಿ ಪ್ರಕಾಶನ , ಗದಗ - 2005

ಬಾರೆ ಎಲ್ಲಮ್ಮ ಬಾರೆ ಎಲ್ಲಮ್ಮ. ॥ತಂದಾನಾ॥

ಎಂದು ಕೂಸಿಗೆ ಎಲ್ಲಮ್ಮ ಅಂತ ಹೆಸರಿಟ್ರು. ಮಗಳನ್ನು ಒಂದೇ ದಿನಕ್ಕೆ ಮೂರು ಸರ್ತಿ ಮೈ ತೊಳ್ದು, ಭಂಡಾರ ಹಚ್ಚಿ, ಹಾಲ ಕುಡಿಸ್ತಾರ. ಹೀಂಗ ಮಗಳು ಹದ್ನೆಂಟು ವರ್ಷದವಳಾಗಿ ಬೆಳೆಯುವಳು. ನೆರ್ತ ಮಗಳ ಬಂಗಾರದ ಫೋಟೋ ಮಾಡ್ಸಿ, ಆ ಫೋಟೋಕ್ಕೆ ಜಿಳೆ ಸೀರಿ, ಜಿಳೆ ಕುಬುಸ ಉಡ್ಸಿ , ಹೂವಾ ಮುಡಿಸಿದ್ರು. ಬೆಳ್ಳಿ ಹೊಳೆದಂಡಿಗೆ ಬಂದು, ಬೆಳ್ಳಿ ಕೊಡದಲ್ಲಿ ನೀರು ತುಂಬಿ , ಗಿಡದ ಮ್ಯಾಲಿನ ಕಾಯಿ ಹರ್ದು , ಕೊಡದ ಮ್ಯಾಲಿಟ್ಟರು. ತಲೆ ಮ್ಯಾಗೆ ಎತ್ಕೊಂಡು ದೇವಿ ಉಧೋ ಉಧೋ ಎನ್ನುತ್ತಾ ಮನಿಗಿ ಬಂದು, ತುಂಬಿದ ಕೊಡ ತಂದು ಜ್ವಾಳದ ನಿಧಿ ಹಾಕಿ, ಇಳ್ಸಿ ಯಮ್ಮಗ ಮುಟ್ಟಿಸಿದ್ರು. ಮಗಳನ್ನು ಮದಿವಿ ಮಾಡುವುದಾಗಿ ಸುತ್ತಳಗೆಲ್ಲಾ ಪತ್ರ ಕಳಿಸಿದ್ರು. ರಾಕ್ಷಸಿ ಗರ್ಭದಾಗ ಹುಟ್ಟಿದವು. ಕರೆ ಕಾಗಿಗಿ ಉಗ್ಗವು. ನಿಮ್ಮ ಎಲ್ಲಮ್ಮ ನಮಗೆ ಬ್ಯಾಡೆನ್ನುವರು. ಆಗ ಅಂಟಿಮಾವಳ್ಳಿ ಪಟ್ಣಕ್ಕೆ ಪತ್ರ ಬಂತು. ಮಾಋಷಿ ಪತ್ರ ಓದಿ ತಂದಿಗೆ ರೇಣುಕೇನ ನಾನೇ ಮದುವಿಯಾಗ್ತೀನಿ ಎನ್ನುವನು. ತಂದಿ ಬೇಡವೆಂದರೂ, ರಾಕ್ಷಸಿ, ದುಷ್ಟ ಕೈಯಾಗಿರೋ ಎಲ್ಲಮ್ಮನ ಗುಡ್ಡದ ಕೆಳಗಿಳಸದಿದ್ರೆ ನನೆಸ್ರ ಮಾಋಷಿ ಅಲ್ಲವೆಂದು, ಶಾಸ್ತ್ರ ಹೇಳುವವನ ವೇಷ ಹಾಕಿ , ಕೈಯಲ್ಲಿ ತಾಳನ ಹೊತ್ತಿಗೆ ಹಿಡ್ಕೊಂಡು ಕಾರ್ತಿಕ ರಾಜನ ಮನಿಗಿ ಬರುವನು. ತಾಳನ ಹೊತ್ಗಿ ತೆಗೆದು, ಈಕೆ ದಾನ ಸಿಕ್ಕಿದಾಕಿ, ದಾನ ಬೇಡೊಬ್ನಿಗೆ ಕೊಟ್ಟು ಮದಿವಿ ಮಾಡ್ಬೇಕೆನ್ನುವನು. ಲೋಕೆಲ್ಲಾ ತಿರುಗಿದ್ದು ಒಬ್ರು ಸಿಗಲಿಲ್ಲ. ನೀನೇ ಶಾಸ್ತ್ರ ಹೇಳೋನು, ದೇಶ ತಿರುಗೋನು ಎಲ್ಲಮ್ಮನ ಕೊಟ್ಟು ಮದಿವಿ ಮಾಡ್ತೀವಿ ಎನ್ನುವರು. ಅದಕ್ಕೆ ಮಾಋಷಿ ಒಪ್ಪಿಗೆ ಕೊಡುವನು. ಎಲ್ಲಮ್ಮಗೆ ದಾನ ಬೇಡೊಬ್ನಿಗೆ ಕೊಟ್ಟು ಲಗ್ನ ಮಾಡೋದು. ಆಗ ದಾನದ ಮದ್ವಿ ಧರ್ಮ ಲಗ್ನ ಅಂದಾಗ, ನೇಕಾರನು ಧರ್ಮ ಕೊಡಲಾರೆವಾ ಎನ್ನುವನು. ಎಲ್ಲಮ್ಮನ ಸೀರಿ ಯಾರೂ ಉಡುವಂಗಿಲ್ಲ. ಬಂಗಾರ ಕಡ್ಡಿ, ಬೆಳ್ಳಿ ಕಡ್ಡಿ ಹಾಕಿ , ಸೀರಿ ಕುಬುಸ ನೇಯುವನು. ಕ್ವಾಮಟ್ರಪ್ನು ಅಕ್ಕಿ ಬ್ಯಾಳೆ ಕೊಡುವನು. ಅಣ್ಣಂದಿರಿಗೆ ಎಲ್ಲಮ್ಮ ಮನೆಯಲ್ಲಿ ಮದಿವಿ ಬೇಡವೆನ್ನುವಳು. ನಾನೆಲ್ಲಂತಿನಿ ಅಲ್ಲೆ ನನ್ನ ಜೀವಕ್ಕ ಜತೆ ಮಾಡ್ಬೇಕೆನ್ನುವಳು. ಹೊಳದಂಡಿ ಮ್ಯಾಗ ಮದ್ವಿಯಾಗಬೇಕು. ಜೋಡ ಅರಿಷಿಣ, ಜೋಡ ಅಡ್ಡಲಿಗ ನನ್ನ ಕೈಯಾಗಿಟ್ರೆ, ನಾನು ಗುಡ್ಡ ಏರ್ತಿನೆನ್ನುವಳು. ಜೋಡು ಅಡ್ಲಿಗೆ ಎಲ್ಲಿ ಅದಾವಂದಾಗ , ಕೆಳಗಡೆ ಹೋದ್ರೇ ಮ್ಯಾಲೆ ಪಾರ್ವತಿ ಗಂಡನ ಪೂಜೆ ಮಾಡುವಾಗ ಬೆಳ್ಳಿ ಅಡ್ಲಿಗಿ, ಬಂಗಾರ ಅಡ್ಲಿಗಿ , ಗಂಧ , ಕುಂಕುಮ, ದೀಪ ಅವು ಕೈ ಜಾರಿ ಹೊಳಿಯಾಗ ಬೀಳ್ತವೆ. ಅವು ನೀರು ಮೇಲೆ ತೇಲಿಕಂಡು ಹಾಂಗೆ ಮ್ಯಾಲೆ ಬರ್ತಾವ. ಗೂಳೆದಾಗ ನಾಯಕರು ಆವಾಗ ಹೋಳಿದಂಡಿಗಿ ಬರ್ತಾರೆ. ಇವರು ಅಣ್ಣ - ತಮ್ಮಂದಿರು ದೊಡ್ಡವನ ಹೆಂಡತಿ ಕೂಸಿನ ತಾಯಿ. ಚಿಕ್ಕವನ ಹೆಂಡತಿ ಬಸುರಿ ಇವರಿಬ್ಬರು ಹೋಳಿದಂಡಿಗೆ ಬಂದಾಗ ಎರಡು ಅಡ್ಲಿಗೆ ನೀರಾಗ ಬರ್ತಾವ. ನಮ್ಮ ಮ್ಯಾಗ ದೇವ್ರು ಇಲ್ಲ ದಿಂಡ್ರು ಇಲ್ಲ. ಈ ದೇವ್ರು ಹೊತ್ಕೊಂಡೋಗಿ ಮನ್ಯಾಗ

ಇಟ್ಕಬೇಕು ಅಂತ ಸೆರಗು ಒಡ್ಡಿದ್ರೆ ಕೂಸಿನ ತಾಯಿಗೆ ಬಂಗಾರದ ಅಡ್ಲಿಗೆ ಬಸಿರಿನ ತಾಯಿಗೆ ಬೆಳ್ಳಿ ಅಡ್ಲಿಗೆ ಸಿಕ್ತು. ಆವಾಗ ಕಾರ್ತಿಕ ರಾಜರು ಓಡಿ ಬರ್‍ತಾರೆ. ಅಯ್ಯಯ್ಯೋ ನಮ್ಮ ಮಗಳ ಮದುವೆ ನಿಂತು ಹೋಗತೈತಿ ಕೊಡ್ರಿ ಅಂತಾನ. ನಾವೇನು ಕಳತನ ಮಾಡಿಲ್ಲ. ನಿಮ್ಮ ದೇವ್ರು ಹೊತ್ಕೊಂಡು ಬಂದಿಲ್ಲಾ. ಗಂಗಾತಾಯಿ ನಮ್ಮ ಗುಣನೋಡಿ ಸಿಕ್ಕಾಳ, ನಾವು ಕೊಡಲ್ಲ ಎನ್ನುವರು. ಅವ್ವಾ ಇಲ್ಲೆ ನಿಂತ್ಕೋರಿ ಎಲ್ಲಮ್ಮನ ಕರ್‍ಕೊಂಡ ಬರ್‍ತೀನಿ ಎಂದು , ಮಗಳ ಬಳಿ ಬಂದು ಹೇಳಿದಾಗ, ಬೇನ ತಪ್ಲ ಇಡಕ್ಕಂಡು, ಮುತ್ತಿನ ಸೆರಗು ನಡುವು ಸುತ್ತಿದ್ಲು, ಕೂದಲ ಬಿಟ್ಟುಕೊಂಡು , ಕೆವ್ವನ ಅಂತ ಕೇಕೇ ಹೊಡೆಯುತ್ತಾ

ಜೋಗ ಜೋಗ ಜೋಗ ಅಂದಾಳಮ್ಮ
ಉಧೋ ಅಂತ ಊದ ಹಾಕ್ಯಾಳ ದೇವಿಗಿ
ತಾಯಿ ಒಂದನೇ ಇನ್ನು ಬೇನತಪ್ಲ
ಉಧೋs
ತಾಯಿ ಒಂದೇ ಬರುತಾಳ ಅವಳು
ಏs ಥೈ ಥೈ ಥೈ ಥೈ ಕುಣಿತಾಳ ಅವಳು
ಆಯಮ್ಮ ಧಿಮ್ ತೈ ಧಿಮ ತೈ ವಾಡುತಾಳೆ
ಓಡೋಡಿ ಬರುತಾಳ ಎಲ್ಲಮ್ಮದೇವಿ ನೋಡಮ್ಮ
ಗುಡ್ಡ ಇಳ್ದು
ತತ್ ತಕ ದಿಗತೈ ತಾ ॥ತಂದಾನಾ॥

ಎನ್ನುತ್ತಾ ಅಣ್ಣಂದಿರೊಂದಿಗೆ, ಗುಡ್ಡ ಒಂದೇ ಸರ್ತಿಗೆ ಇಳಿದು ಬಿಟ್ಲು, ಓಡಿ ಬಂದು ಮಕ್ಕಳಿರಾ ಎರಡು ಕೊಳದ ನೀರು ನನ್ನ ಪಾದಕ್ಕ ಹಾಕ್ರಿ. ಆ ಎರಡೂ ಅಡ್ಲಿಗೆ ನನ್ನ ಕೈಯಾಗ ಇಡ್ರಿ. ಮುತ್ತಿನ ಸೆರುಗ ಒಡ್ಡಿ ಕೋಳ್ರಿ ನಾ ವರಾ ಕೊಡ್ತೀನಿ ಅಂತಾಳೆ. ಉಡಿಯಾಗ ಇಬ್ಬರಿಗೂ ಲಿಂಬೆ ಹಣ್ಣು, ಅರಿಷಿಣ ಭಂಡಾರ ಹಾಕಿದ್ಲು. ನಿನಗೊಬ್ಬ ಮಗನಿದ್ದಾನೆ. ಅವನಿಂದ ಊರು ಉದ್ಧಾರಾಗಲಿ. ನಿನಗೊಬ್ಬ ಮಗ ಹುಟ್ಟುತ್ತಾನೆ. ಅವನಿಂದ ಊರಾಗಲಿ ಎಂದು ಇಬ್ಬರಿಗೂ ವರಾ ಕೊಟ್ಟಳು. ಆ ಊರೇ ಮುಂದೆ ಬಸರಕೋಡಾಯಿತು.

ಶಾನುಭೋಗ್ರ ವೇಷದಲ್ಲಿಯ ಮಾಋಷಿಯೊಂದಿಗೆ ಹೊಳೆದಂಡಿಮ್ಯಾಗೆ ಆಕೆ ಹುಟ್ಟಿದ ಸ್ಥಳದಲ್ಲೇ ಎಲ್ಲಮ್ಮ ಮದುವೆಯಾಗುವಳು. ತಾಳಿ ಕಟ್ಟಿದ ಮ್ಯಾಲೆ ದೇವಿ ಧಿಗ್ಗನೆದ್ದು ಜಗಹೊತ್ಯಾಳೆ ತೆಲಿ ಮ್ಯಾಲೆ, ಗುಡ್ಡ ಏರಿ ತಾಯಿ ಕುಂತಿ ಮಾದೇವಿ ಬಳಿ ಬರುವಳು. ತಾಯಿ ಪಾದ ತೊಳಿಯುವಳು. ಬಲಪಾದ ಇಟ್ಟು ಒಳ ಬಂದು ಜಗ ಇಳ್ಸಿ. ಬಿಟ್ಟು ಮಾಯವಾದ್ಲು. ಎಲ್ಲರೂ ಗಾಬರಿಯಾಗಿ ಹುಡುಕುವರು. ಆಗ ಮಾಋಷಿಯು ತಾಳಿ ಕಟ್ಟಿದ್ದವ್ನು ಚೀನಕ್ಕ ನಾನೇ ಹಿಡಿತಿನಿ ಎನ್ನುವನು. ಗುಡ್ಡ ಗುಡ್ಡ ತಿರುಗಿ ಬಂದ್ರೂ ಸಿಗಲಿಲ್ಲ. ವಾಪಸ್ಸು ಮನಿಗಿ ಬಂದಾಗ ಎಲ್ಲಮ್ಮ ಅಲ್ಲೆ ಇರುವಳು. ಮದ್ವಿ ಏನೋ ಮಾಡಿದ್ರಿ ನಿಮ್ಮ ಮನಿ ಮುಂದೆ ಇರ್ಬೇಕು. ಮನಿತನ ಅಂದ್ರಿ, ಎಲ್ಲಮ್ಮನ ಜೀವಕ್ಕ

ಯಾವತ್ತ ಉಡಿ ತುಂಬಿ ಕೊಡೋದು ಎಂದು ಕೇಳಿದಾಗ, ತಾಳಿ ಕಟ್ಟಿದ ಮುರು ತಿಂಗಳಿಗೆನ್ನುವರು. ಮದ್ವಿಯಾದ ಎರ್ಡು ತಿಂಗ್ಳಿಗಿ ಮಾಋಷಿಯು, ಈ ಕಾರ್ತಿಕ ರಾಜನೋರು ಬಿಡು ಅಂದ್ರ ಬಿಡ್ತಾರಾ ಮನಿತನ ಬಿಡದಿಲ್ಲ. ಎಲ್ಲಮ್ಮನ ಮನಿಮುಂದೆ ಲಗ್ನ ಮಾಡಿದವು ಈ ಆಸ್ತಿಯೆಲ್ಲ ನನ್ಹೆಸಲ್ಲಿ ಮಾಡಿದವು ಬಿಡದಿಲ್ಲವೆಂದು ಈ ಲೋಕೆಲ್ಲ ಹುಡುಕಿದ್ರು ಔಷಧ ಸಿಗಬಾರ್ದು. ನನ್ನ ಬ್ಯಾನಿಗೆ, ಸಾಯಬಾರ್ದು ಅಂಥ ಅವತಾರ ತಾಳಬೇಕಂತ ,

ಹಿರೇ ರೋಗ ಅವತಾರ ತಾಳೆ ಬಿಟ್ಟಾರ ಮಾಋಷಿ
ಯಮ್ಮಾ ಕೈಗೆ ಉಗರಿಲ್ಲೆ ಯಮ್ಮಾ ಕಾಲಿಗೆ ಉಗರಿಲ್ಲೆ
ಏಸ ಮೈ ತುಂಬ ಹುಣ್ಣಮ್ಮ ಹುಳಾಬಿದ್ದೆ ಬಿಟ್ಟಾವ
ಮಕ ಒಂದೇ ಬಗ್ಸಿ ಅಡ್ಡಾಲಿ
ಕನ್ನಡಿ ಇಂದ್ಹಂಗ
ಮೈ ತುಂಬ ಹುಣ್ಣು
ಪಿಳಿ ಪಿಳಿ ಪಿಳಿ ಪಿಳಿ ಹುಳಾ
ಕಿವ ರಕ್ತ ಇಳಿತೈತಿ
ಅನ್ನ ನುಂಗಾಕ ಬರೋದಿಲ್ಲ
ಶಾನಭಾಗ್ರ ವೇಷಧಾರಿ ಮಾಋಷಿಗಿ
ಬಾರ್ಲು ಬೀಳ್ಬೇಕು ಹಂಗೆ ಅನ್ನ ತಿನ್ಬೇಕು ಅನ್ನ ॥ತಂದಾನಾ॥

ಹೀಗೆ ಹಿರೇ ರೋಗ ಅವತಾರ ತಾಳುವನು. ಕಾರ್ತಿಕ ರಾಜ ಯೇಳು ಮಂದಿ ಅಪ್ಣೋರಿಗೆ ವಿಷಯ ತಿಳಿಯುವುದು. ಬಹಳ ದುಃಖ ಮಾಡ್ತಾರೆ. ತಂಗಿ ಬಳಿ ಬಂದು ದುಃಖಿಸುವರು. ನಿನ್ನ ಗಂಡ ನಿನಗುಳಿಯೋದಿಲ್ಲ. ಮುತ್ತೈದೆತನ ಹೋಯಿತೆಂದು ಅಳುವರು. ಮೂರು ಲೋಕ ತಿರುಗಿದರೂ ಔಷಧಿ ಸಿಗೋದಿಲ್ಲ. ಅಣ್ಣಂದಿರು ತಂಗಿಗೆ ನಾವು ನಿನ್ನ ಗಂಡನ್ನ ಮುಟ್ಟೋದಿಲ್ಲ. ಹೆಂಡೆ ಬುಟ್ಟ್ಯಾಗ ನಿನ ಗಂಡನ ಹಾಕಿ ಹೊಳೆ ದಂಡ್ಯಾಗ ಒಗ್ದ ಬರ್ತೀವಿ ಅಂದಾಗ, ಎಲ್ಲಮ್ಮ ಏ ದುಷ್ಟರಾ ದುರ್ಮಾರ್ಗರ್ಯಾ ನನ್ನ ಮುತ್ತೈದೆತನ ಕಳಿತಿರಾ, ಗಂಡನ ಬ್ಯಾನಿ ನನ್ನ ಜೀವಕ ಬರ್ಲ್ರೈಯ್ಯ, ನಾನೇ ಯೇಳದೇಶ ತಿರುಗಿ ಗಂಡನ ಬ್ಯಾನಿ. ತೋಲಿಸ್ತಿನೆನ್ನುವಳು. ಕಾಯಿ ಅರಿಷಿಣ ಭಂಡಾರ, ಬೇನ ತಪ್ಲ ಉಡ್ಯಾಗ ಕಟ್ಟಿಕ್ಯಂಡ್ಳು. ಜಗ ಪುಟ್ಟ್ಯಾಗ, ಗಂಡನ ಕುಂದ್ರಿಸಿ, ಮುತ್ತಿನ ಸರಗಿಲಿ ಸಿಂಬೆ ಮಾಡಿ, ಉಟ್ಟಿದ ಸೀರೆ ಕಾಸಿ ಹೊಯ್ದು , ಜೀವದ ಗಂಡನ್ನ ತಲಿ ಮ್ಯಾಲ ಹೊತ್ಕೊಂಡು ಗುಡ್ಡ ಇಳಿದಳು.

ಓರಗಲ್ಲಿಗೆ ಬಂದ ಎಲ್ಲಮ್ಮನನ್ನ ಕರೆಗೌಡ್ರು ನೋಡಿ ನೀನು ಊರೊಳಗೆ ಇರಬಾರ್ದು, ಗಾಳಿ ಬೀಸಿದ್ರೆ ಊರಿಗೆಲ್ಲ ಬ್ಯಾನಿ ಬರ್ರೈತಿ, ನೀನು ಊರ ಹೊರಗಿರ್ಬೇಕೆನ್ನುವರು. ಕನೇಕಲ್ಲ ಕೆರಿಗೆ ಬಂದು, ಪುಟ್ಟಿ ಇಳಿಸಿ ,ಗಂಡನಿಗೆ ಮೈ ತೊಳಿತಿನೆನ್ನುವಳು. ಆಗ ಗಂಡನ ಹಿರೇಬ್ಯಾನಿಯ ಕೀವು ರಕ್ತದ ನೀರು ಭೂಮಿ ಮ್ಯಾಲೆ ಬೀಳಬಾರ್ದು ಎಂದಾಗ, ಎಲ್ಲಮ್ಮ ಅವನ ಮೈ ತೊಳೆದು ಹಿರೇ

ಬ್ಯಾನಿಯ ಕೀವು ರಕ್ತದ ನೀರು ಕುಡಿಯುವಳು. ಅವಳ ಹೊಟ್ಟೆಯಲ್ಲಿ ಕಳುವಿಗೆ ಹುಳ ಜಿಳ್ತಾವ. ಗಂಡನ ಹುಣ್ಣು ಮಾಯುವುದು. ಪುಟ್ಟ್ಯಾಗಿಂದ ಮಾಋುಷಿ ಕೆಳಗಿಳಿಯುವನು. ಮುಂದೆ ನೋಡುತ್ತಾ ನಡೆಯುತ್ತಿರುವ ಎಲ್ಲಮ್ಮನಿಗೆ ಗಂಡ ಹಿಂದೆ ಬರುವುದು ತಿಳಿಯೊದಿಲ್ಲ. ಎದುರು ಬಂದು ಕೊಡ್ಲಿ, ಭಲ್ಲೆವು ತೋರ್ಲಿ, ಬಣ್ಣದ ಸೀರೆಯವ್ವೆ ನಿನ್ನ ಭಂಗ ಮಾಡ್ತೀನಿ ಎಂದಾಗ ನೀನು ನನ್ನ ತಂದೆಪ್ಪಾ ನಾನು ನಿನ್ನ ಮಗಳು ಎಂದು ಅಳುತ್ತಾ ಆತನ ಕಾಲು ಹಿಡಿಯಲು ಮಾಋುಷಿ ಕಿಲ ಕಿಲ ನಗುತ್ತಾನೆ. ನಿನ್ನ ಸತ್ಯ ನೋಡಿದೆನು.

ನನ್ನ ಜೀವ ಉಳ್ಸಿಕ್ಯಂಡೆ ನೀನು
ಈಗ ನನ್ನ ಜೀವ ಹೊದ್ರೇನಾ
ಜೀವ ಇರತನಕಾ ಮುತ್ತೈದೆತನ ಉಳಿಯಲಿ
ನನ್ನ ಜಲ್ಮ ಹೋದರೆ ಹಣಿಮ್ಯಾಲ ಭಂಡಾರ ಇರಲಿ ನಿನ್ಗೆ ॥ತಂದಾನಾ॥

ಅಂತ ಜೀವದ ಗಂಡ ಹೆಣ್ತಿಗೆ ಹಲಿಕಿಕೊಡುವನು. ಇಬ್ರು ಅಂಟಿ ಮಾವಳ್ಳಿ ಪಟ್ಣಕ್ಕೆ ಬರುವರು. ಅತ್ತೆ ಮಾವನ ಪಾದ ಮುಗಿದ್ರು. ಸ್ನಾನಕ್ಕೆ ಬರ್‍ರಿ ಎಂದಾಗ, ಹೆಣ್ತಿಗೆ ಹಿರೇಬ್ಯಾನಿ ಬಂದೈತೆಂದು ದುಃಖ ಮಾಡ್ತಾನ. ಈ ದುಷ್ಟಲೋಕ ಇಲ್ಲದ ಹೆಣ್ತಿ ಮಕ್ಕಳ ಯಾಕ ನೋಡ್ಕೊಂಡು ಇರ್ಬೇಕು. ಕರ್ಮ ಲೋಕ ಇಲ್ಲದ ಕರ್ಮ ಯಾಕ ನೊಡ್ಕೊಂತ ಇರ್ಬೇಕೆಂದು, ಜಗದಾದೇವರು ಹೊಳಿ ದಂಡಿಗಿ ಬಂದು ಏಳುಸಮುದ್ರಾಗ ಸ್ನಾನ ಮಾಡಿ ತಪ್ಪಸ್ಸಿಗೆ ಕುಂತು ಬಿಡುವನು. ಒಂದು ತಿಂಗಾಳಯ್ತು ಮಾಋುಷಿಗೆ ಗಡ್ಡ ಬೆಳದೈತಿ, ಮೀಸಿ ಬೆಳತೈತಿ. ಸ್ನಾನಕ್ಕೆಂದು ಪಾರ್ವತಿ ಪರಮೇಶ್ವರರು ಸ್ವರ್ಗದಿಂದಿಳಿದು ಬರುವರು. ಇವನ ಘೋರ ತಪಸ್ಸಿಗೆ ಮೆಚ್ಚಿದ ಶಿವ - ಪಾರ್ವತಿಯರು ಇವನನ್ನು ಬದುಕಿಸುವುದಕ್ಕಾಗಿ ಕಲ್ಪವೃಕ್ಷದ ಕಾಮದೇವತಿಯನ್ನು ಕಳುಹಿಸುತ್ತಾರೆ. ಅದು ದಿನಾಲು ಇವನ ಬಾಯಲ್ಲಿ ಹಾಲು ಬಿಟ್ಟು ಇವನನ್ನು ರಕ್ಷಿಸುತ್ತಿರುತ್ತದೆ. ಎಲ್ಲಮ್ಮನ ಅತ್ತೆ ಮಾವಂದಿರು ಜೀವಗ ಹುಟ್ಟಿದ ಮಗನೆ ಹೋದ ಮ್ಯಾಲೆ, ನೀನೇನು ವಿಶೇಷ ನಮ್ಗೆ,

ಕಂಡ್ಪರಿಗೆ ಹೋಗೋಳು ಕಂಡ ಬ್ಯಾನಿ ತಂದವ್ವ
ಕಂಡಪ್ರಿಗ ಸೆರಗ ಹಾಸವ್ವ ನೀನು ದೇಶ ತಿರುಗವ್ವ
ದೇಶ ತಿರುಗವ್ವ
ಆಗ ಇನ್ನ ಕೇಳದೆ ನೀನು ಮನೆ ಬಿಡವೆ ಲೋಕ
ತತ್ ತಕ ದಿಗತ್ತೈ ತಾ ।ತಂದಾನಾ॥

ಎಂದು ಎಲ್ಲಮ್ಮನ ಮೇಲೆ ಅಪವಾದ ಹೊರೆಸಿ ಮನೆಯಿಂದ ಹೊರ ಹಾಕುತ್ತಾರೆ. ಊರೂರು ಮನೆ - ಮನೆ ಅಲೆದರೂ ಆಶ್ರಯ ದೊರೆಯದ ಎಲ್ಲಮ್ಮನಿಗೆ ಕಾಡು ಮೇಡು ಗತಿಯಾಗುತ್ತದೆ. ಜನರಿಂದ ಅನೇಕ ರೀತಿಯ ಕಷ್ಟಗಳನ್ನು ಅನುಭವಿಸುತ್ತಾಳೆ. ತಿರುಗುತ್ತ ಗಂಡ ಕುಳಿತ ತಪಸ್ಸಿನ ಸ್ಥಳಕ್ಕೆ ಬರುತ್ತಾಳೆ. ಗಂಡನ ಸಲಹೆಯಂತೆ ಆರು ಸಮುದ್ರ ಕಡೆಯ ಏಳು

ಸಮುದ್ರದೊಳಗಿನ ವಿಷ ಸಮುದ್ರದಲ್ಲಿ ಮುಳುಗಿದಾಗ ರೋಗ ವಾಸಿಯಾಗುತ್ತದೆ. ಆಗ ಗಂಡನ ಪಾದ ಮುಗಿಯೋಣ ಅಂತ ತಪಸ್ಸಿಗೆ ಕುಂತ ಗಂಡನನ್ನು ಕಾಣಲು ಬರುತ್ತಾಳೆ. ಅಲ್ಲಿ ಗಂಡ ಕಾಣುವುದಿಲ್ಲ. ಬೇಟೆಗಾಗಿ ಬಂದ ಕಾರ್ತಿಕರಾಜ ಮಾಋುಷಿ ತಪಸ್ಸಿಗೆ ಕುಳಿತಿದ್ದನ್ನು ಕಂಡು ನಾನು ಸತ್ಯವಂತ ದೇಶಕ್ಕೆ ದೊಡ್ಡವನು. ತಪಸ್ಸಿಗೆ ಕುಳಿತ ನನಗಿಂತ ದೊಡ್ಡವನು ನೀನು ಯಾರು ? ಎಂದು ಅಸೂಯೆಯಿಂದ ಮಾಋುಷಿಯನ್ನು ತುಳಿದು ಬಿಡುತ್ತಾನೆ. ಇದರಿಂದ ಮಾಋುಷಿಯ ತಲೆ, ಮೂಗಿನೊಳಗಿಂದ ರಕ್ತ, ಹೊಟ್ಯಾಗಿನಿಂದ ಹಾಲು ಬರುತ್ತವೆ. ಈ ವಿಷಯ ಕಾಮದೇವ್ರಿ ಶಿವ ಪಾರ್ವತಿಯರಿಗೆ ಮುಟ್ಟಿಸುತ್ತದೆ. ಇವತ್ತು ನಮ್ಮ ಶಿಶುವನ್ನು ತುಳಿದವ್ನು, ನಾಳೆ ನಮ್ಮ ಕೇಡಿಗೂ ಮೂಲಾಗುತ್ತಾನೆ ಎಂದು ಶಿವ - ಪಾರ್ವತಿಯರು ಕಾರ್ತಿಕರಾಜನ ಸಂಹಾರಕ್ಕಾಗಿ ಎಲ್ಲಮ್ಮನಿಗೆ ಮಗು ಕೊಡುತ್ತಾರೆ. ಇಲ್ಲಿ ಶಿವ - ಪಾರ್ವತಿಯರಿಂದ ಎಲ್ಲಮ್ಮನ ಅಗ್ನಿ ಪರೀಕ್ಷೆ ನಡೆಯುತ್ತದೆ. ಮಾಋುಷಿಯ ಎರಡು ಹನಿರಕ್ತ, ಎರಡು ಹನಿ ಹಾಲು ಎಲ್ಲಮ್ಮನಿಗೆ ಕುಡಿಯಲು ಹೇಳುತ್ತಾರೆ. ಇದರಿಂದ ಎಲ್ಲಮ್ಮ ಗರ್ಭಧರಿಸುತ್ತಾಳೆ. ಇದನ್ನು ನೋಡಿದ ಮಋುಷಿ ಈ ದುಷ್ಟದವ್ಳೆ ನನ್ನ ರಕ್ತ ಹಾಲು ಕುಡಿದ್ಯಾ, ಹಾಲು ಕುಡಿಯುವಂತ ಮಗ ಹುಟ್ಟಾನೆ ರಕ್ತ ಕುಡಿವಂತ ಮಗ ಹುಟ್ಟುತ್ತಾನೆ. ಅವನಿಗೆ ನನ್ನ ಹೆಸರು ಹೇಳಿದರೆ ನಿನ್ನ ತಲೆ ಹೋಗುತ್ತದೆ ಎಂದು ಹೇಳುವನು. ಆಗ ಎಲ್ಲಮ್ಮ ಸರ್ವ ತಪ್ಪಾಯ್ತು ನನ್ನ ತಂದೆ ಕಣ್ಣು ತೆರ್ದು ನನ್ನ ಕಡಿಗೆ ನೋಡಯ್ಯ, ಮಾತಾಡಯ್ಯ ಎಂದು ಗಂಡನಲ್ಲಿ ಕೇಳಿಕೊಂಡರೂ ಗಂಡ ಮಾತಾಡಲಿಲ್ಲ. ಎಂಟು ದಿನದಲ್ಲೆ ಗರ್ಭದಾಗ ಮಗ ಮಾತಾಡ್ತಾನೆ. ಊರಲ್ಲಿ ಹೋದ್ರೆ ಯಾರೂ ಎಲ್ಲಮ್ಮನಿಗೆ ಜೋಗಾ ನೀಡುವುದಿಲ್ಲ. ಬಾರಿಗಿಲಿ ಹೊಡಿಯಲು ಬರ್ತಾರೆ. ತಾಯಿಯ ಕಷ್ಟವನ್ನು ನೋಡಿ ಮಗ ತಾಯಿಯ ಗರ್ಭದೊಳಗಿಂದಲೇ ಮಾತನಾಡಿ ತಾಯಿಗೆ ಸಾಂತ್ವನ ಹೇಳುತ್ತಾನೆ. ಊಂಗನಗೌಡ್ರು ವಿಳ ಮಂದಿ ಮಕ್ಳಿಗಿ ಗಂಡು ಹೋಗಿ ಹೆಣ್ಣು ಮಾಡ್ತೀನಿ ಅನ್ನುತ್ತಾಳೆ.

ಬಾಗ್ಲಿ ಇಟ್ಟು ಯಮ್ಮಾ ಬಳಿಯವ್ರಿಲದ್ಹಂಗ ಆಗ್ಬೇಕು
ನಿಮ್ಮ ಮನ್ಯಾಗ
ಹುಟ್ಟಿದ ಮಕ್ಕಳ ಹುಟ್ಟಿದ್ಹಂಗೆ ಇರಬೇಕು
ಹಡಿಬಾರದಲ್ಲೊ ಇತ್ತ ಬೆಳೆಸಬಾರದಲೊ
ಹಾಂ ನಾ ಹುಟ್ಟಿದ ಹುಲುಗೆಮ್ಮ ಹುಟ್ಟಿದ ಮಕ್ಕಳ ನೀವಲೆ
ನನಗ ಹುಟ್ಟಿ ದಂಗಲೇ ನೀವು ಲೋಕ ಇರಬೇಕು ॥ತಂದಾನಾ॥

ಬಸರು ತಾಯಿನ ಬಡಿದವ್ರು . ನೀವು ಬಸರಾಗಲಾರದ್ಹಂಗ, ಹಡಿಲಾರದ್ಹಂಗ, ಬೆಳೆಸಲಾರದ್ಹಂಗ, ಸೀರೆ ಉಡ್ಸಿ, ತಾಳಿ ಕಟ್ಟಿ ಬಿಡ್ತೀನಿ ಎನ್ನುತ್ತಾಳೆ. ಆಗ ಊರಾಗಿನ ಗೌಡ್ರು ಮನಿಗಿ ಕರೆದೊಯ್ಯುವರು. ಅಲ್ಲಿ ಎಲ್ಲಮ್ಮನಿಗೆ ಬ್ಯಾನಿ ವಿಳುತ್ತದೆ. ಪರಶು ರಾಮನಿಂದಲೇ ತನ್ನ ಅವಸಾನ ಎನ್ನುವುದನ್ನರಿತ ಕಾರ್ತಿಕರಾಜ ಹುಟ್ಟಿದ ಕೂಡಲೇ ಮಗುವನ್ನು ನಾಶ ಪಡಿಸಲು ಸೂಲಗಿತ್ತಿಯನ್ನು ಕಳುಹಿಸುತ್ತಾನೆ. ಪರಶುರಾಮ ತಾಯಿಯ ಹೊಟ್ಟೆಯಿಂದಲೇ ಸೂಲಗಿತ್ತಿಯ

ಮುಖದ ಮೇಲೆ ಒದ್ದು ಆಕೆಯ ಕಣ್ಣು ಕಳೆಯುತ್ತಾನೆ. ಪರಶುರಾಮನಾಗಿ ಹುಟ್ಟುತ್ತಾನೆ. ಬೆಳೆದು ಹದ್ನೆಂಟು ವರ್ಷದ ಮಗನಾಗುವನು. ಹುಡುಗ್ರು ಜೊತೆಯಲ್ಲಿ ಬಗ್ರಿ ಆಟ ಆಡುವಾಗ ಏ ಊರಿಗಿ ಹುಟ್ಟಿದೋನು ನೀನು, ಎಲ್ಲರಿಗೂ ಹುಟ್ಟಿದೊನು, ಊರಿನ ಜೋಗಮ್ಮನ ಮಗ ನೀನೆಂದು ಗೇಲಿ ಮಾಡುವರು. ತಂದೆಯಿಲ್ಲದೆ ಹುಟ್ಟಿದವನು ಎನ್ನುವ ಜನರ ಅಪವಾದದಿಂದ ತಂದೆಯ ಸಾಕ್ಷಾತ್ಕಾರಕ್ಕಾಗಿ ತನ್ನ ತಾಯಿ ಎಲ್ಲಮ್ಮನನ್ನು ಪಲಿ ಪಲಿಯಾಗಿ ಕಾಡಿಸಿ ಪೀಡಿಸುತ್ತಾನೆ. ಇದರಿಂದ ತಪ್ಪಿಸಿಕೊಳ್ಳಲು ಎಲ್ಲಮ್ಮ ನಾಗಸರಪೆಣಿವಾದರೆ, ಪರಶುರಾಮ ಮುಂಗಲಿಯಾಗುತ್ತಾನೆ. ಎಲ್ಲಮ್ಮ ಮೀನಿನ ಹೊಟ್ಟೆಯಲ್ಲಿ ಹೋದರೆ , ಪರಶುರಾಮ ಏಡಿಯಾಗುತ್ತಾನೆ. ಎಲ್ಲಮ್ಮ ಕಪ್ಪೆಯಾದರೆ, ಪರಶುರಾಮ ಒಡ್ಡನಾಗುತ್ತಾನೆ. ಹೀಗೆ ಯಾವ ರೂಪ ತಾಳಿದರೂ , ತಾಯಿ ಎಲ್ಲಿ ಬಚ್ಚಿಟ್ಟು ಕೊಂಡರೂ, ಮಗನು ಬೆನ್ನುಬಿಡದೆ ತಾಯಿಗೆ ತನ್ನ ತಂದೆಯಾರೆಂದು ಪೀಡಿಸುತ್ತಾನೆ. ಮತ್ತೆ ಎಲ್ಲಮ್ಮ ಕೋಣದ ರೂಪ ತಾಳುತ್ತಾಳೆ. ಆ ಕೋಣಕ್ಕೆ ಹುಲಿಗಿಯಲ್ಲಿ ಬಲಿಕೊಡಲು ಹೋದಾಗ ಎಲ್ಲಮ್ಮ ಪವಾಡದಿಂದ ಲೋಕಕ್ಕೆ ಬೆಳಕು ತೋರುತ್ತಾಳೆ. ಜಗ ಹೊತ್ತು ಉಧೋ ಉಧೋ ಎನ್ನುತ್ತ ತಿರುಗುತ್ತಾಳೆ. ಮಾರೆಕ್ಕಳೊಂದಿಗೆ ಪರಶುರಾಮನ ಮದುವೆಯಾಗಿ ಚೌಡಿಕೆ ರಾಮನ ಜನನವಾಗುವುದು. ಮಗನು ತಾಯಿಯ ಬೆನ್ನ ಬಿಡದೆ ಕಾಡುವುದರಿಂದ ಎಲ್ಲಮ್ಮನು ಮಗನಿಗೆ, ತಂದೆಯ ಹೆಸರು ಹೇಳಿದ್ರೆ ನನ್ನ ತಲೆ ಹೋಗುತ್ತದೆ. ಹೇಳದಿದ್ದರೆ, ಮಗನು ನನ್ನನ್ನು ಬಿಡುವುದಿಲ್ಲ ಎನ್ನುವ ಧರ್ಮ ಸಂಕಟದಲ್ಲಿ ಸಿಲುಕಿ ಮತ್ತೊಂದು ಯೋಜನೆ ಹಾಕುತ್ತಾಳೆ.

ಕಣೆಕಲ್ ಕೆರೆಯ ಹತ್ತಿರ ಮುನೀಶ್ವರನಿರುವನು ಅವನ ಹತ್ತಿರ ಹೋಗಿ, ಮೂರು ದಡೆವು 'ಗಂಡ್ರ ಗೊಡ್ಲಿಯಿದೆ' ಅದನ್ನು ತಂದರೆ, ನಿನ್ನ ತಂದೆಯ ಹೆಸರು ಹೇಳುತ್ತೇನೆ ಎಂದು ಮಗನಿಗೆ ಹೇಳಿದಾಗ ಪರಶುರಾಮ ಗಂಡ್ರ ಗೊಡ್ಲಿಗಾಗಿ ಮುನೀಶ್ವರನ ಬಳಿ ಬರಲು, ಮುನೀಶ್ವರನು ನನಗೆ ಮೂರು ಖಂಡಗ ಅನ್ನ ತಂದು ಕೊಟ್ಟರೆ ಕೊಡ್ಲಿ ಕೊಡುತ್ತೇನೆ ಎನ್ನುವ ಷರತ್ತು ಹಾಕುತ್ತಾನೆ. ಮೂರು ಖಂಡಗ ಅನ್ನಕ್ಕೋಸ್ಕರ ಪರಶುರಾಮನು ಬಹಳ ಕಷ್ಟ ಪಟ್ಟು ಷರತ್ತು ಪೂರೈಸುತ್ತಾನೆ. ಆಗ ನಾಗಮುನೀಶ್ವರ ಗಂಡ್ರ ಗೊಡ್ಲಿಯನ್ನು ಪರಶುರಾಮನಿಗೆ ಕೊಡುವನು. ನಿನ್ನ ತಂದೀ ತಪಸ್ಸಿಗೆ ಕುಂತಾಗ ಕಾರ್ತಿಕ ರಾಜನೋರು ತುಳ್ದು ಬಿಟ್ಟಾರ, ಅವರನ್ನ ಒಂದೇಟಿಗೆ ಕಡಿಬೇಕು. ಆಗ ನಿಮ್ಮ ತಾಯಿ ನಿಮ್ಮ ತಂದಿನ ತೋರ್ಸ್ತಾಳೆಂದು ನಾಗಮುನೀಶ್ವರ ಮಗನಿಗೆ ಹೇಳಿದಾಗ, ಪರಶುರಾಮ ಗಂಡ್ರುಗೊಡ್ಲಿಯಿಂದ ಕಾರ್ತಿಕ ರಾಜನ ಸಂಹಾರ ಮಾಡುವನು. ಹಾಗೆ ಏಳು ಮಂದಿ ಅಣ್ಣ - ತಮ್ಮಂದಿರನ್ನು ಕಡ್ದು ಹಾಕುವನು. ಎಲ್ಲಮ್ಮನ ತಾಯಿ ಬಂದು ಮಗಳ ಪಾದಕ್ಕೆ ಬಿದ್ದು ದುಃಖ ಮಾಡುವಳು. ಮುಂದೆ ಎಲ್ಲಮ್ಮ ಪರಶುರಾಮನಿಗೆ ತಂದೆಯನ್ನು ತೋರಿಸಿ, ಆಕೆಯೂ ಸಾಯುತ್ತಾಳೆ. ಕೊನೆಯಲ್ಲಿ ಪಾರ್ವತಿ ಪರಮೇಶ್ವರರಿಂದ ಜೀವನ್ಮುಕ್ತಿ ಪಡೆಯುವಳು. ಎಲ್ಲಮ್ಮ ಯೇಳು ದೇಶ ತಿರುಗಿ ಹುಲುಗಿಯಲ್ಲಿ ಹುಟ್ಟಿ ಲೋಕಕ್ಕಾಗಿ ಸವದತ್ತಿ ಎಲ್ಲಮ್ಮನಾಗಿ ಎಲ್ಲರ ದೈವವಾಗಿ ಪೂಜೆ ಗೊಳ್ಳುವಳು.

2.5- ಜೈಸಿಂಗರಾಜನ ಕಾವ್ಯ *

ಇದು ಸರ್ವಧರ್ಮ ಸಮನ್ವಯತೆಯನ್ನು ಸಾರುವ ಕಾವ್ಯ. ಎರಡು ಧರ್ಮಗಳ ನಡುವಿನ ಅನ್ಯೋನ್ಯತೆ, ಭ್ರಾತೃತ್ವದ ಸಂಕೇತವಾಗಿ ಈ ಕಾವ್ಯ ನಿಂತಿದೆ. ಮನುಷ್ಯನಿಗೆ ಧರ್ಮ ಮುಖ್ಯವಲ್ಲ. ಮಾನವೀಯತೆ, ಪ್ರೀತಿ, ಭ್ರಾತೃತ್ವ, ಸ್ನೇಹ ಮುಖ್ಯ ಎನ್ನುವ ಆಶಯವನ್ನು ವ್ಯಕ್ತ ಪಡಿಸುವ ಈ ಕಾವ್ಯ, ಇಬ್ಬರು ಅನ್ಯಧರ್ಮೀಯ ಸ್ನೇಹಿತರ ನಡುವಿನ ಸಂಬಂಧ, ಆತ್ಮೀಯತೆ ಮತ್ತು ತ್ಯಾಗ ಮನೋಭಾವವನ್ನು ಚಿತ್ರಿಸುತ್ತದೆ. ಜೈಸಿಂಗ ರಾಜ ಮತ್ತು ಮಹಮ್ಮದ ಖಾನ ಇವರಿಬ್ಬರ ನಡುವಿನ ಸಂಬಂಧವನ್ನು ಸೂಚಿಸುತ್ತದೆ. ದಿಲ್ಲಿಯ ನವಾಬನ ಜೊತೆ ಇವರಿಬ್ಬರೂ ಹೋರಾಡುವುದು ಭ್ರಾತೃತ್ವದೊಂದಿಗೆ ತಾಯ್ನೆಲದ ಪ್ರೀತಿಯ ದ್ಯೋತಕವೆನಿಸುತ್ತದೆ. ಜೈಸಿಂಗರಾಜ ಮತ್ತು ಮಹಮ್ಮದ ಖಾನ ದಿಲ್ಲಿಯ ನವಾಬನೊಡನೆ ಹೋರಾಡಿ ಮಡಿದದ್ದು, ಸ್ನೇಹಿತನ ಜೀವಕ್ಕಾಗಿ ಜೀವ ಕೊಟ್ಟದ್ದು ಒಂದು ಐತಿಹಾಸಿಕ ಘಟನೆ ಇಂತಹ ಐತಿಹಾಸಿಕ ಘಟನೆಯನ್ನೇ ರಮಣೀಯವಾಗಿ ಬುರ್ರಕಥೆಯ ಮೂಲಕ ಹೇಳುತ್ತ ಈರಮ್ಮ ಜೀವಂತವಾಗಿರಿಸಿದ್ದಾಳೆ. ಈ ಮೂಲಕ ಸರ್ವಧರ್ಮ ಸಮನ್ವಯದ ಮಂತ್ರವನ್ನು ಉಸುರುತ್ತಾಳೆ.

ಜೈಸಿಂಗರಾಜ ರಂಗನಾಯಕ ಸ್ವಾಮಿಯ ವರ ಪ್ರಸಾದದಿಂದ ಹುಟ್ಟುವುದು. ಮಹಮ್ಮದ ಖಾನ ದರ್ಗಾದೇವರ ವರ ಪ್ರಸಾದದಿಂದ ಹುಟ್ಟುವುದು. ಈ ಎರಡು ಸಂದರ್ಭಗಳು (ಅದರಲ್ಲೂ ರಂಗನಾಯಕ ಸ್ವಾಮಿ ರಾಣಿಗೆ ಪ್ರಸಾದವಾಗಿ ಖರ್ಜೂರ ಹಣ್ಣು ಕೊಟ್ಟರೆ , ಹುಸೇನಿಗೆ ದರ್ಗಾ ದೇವರು ಮಲ್ಲಿಗೆ ಹೂ ವರ ಪ್ರಸಾದವಾಗಿ ಕೊಡುವುದು) ಧಾರ್ಮಿಕ ಪ್ರಜ್ಞೆಯ ಹಿನ್ನೆಲೆಯನ್ನೊಳಗೊಂಡಿವೆ. ಬೇರೆ ಬೇರೆ ಧರ್ಮದ ದೇವರ ವರಪ್ರಸಾದದಿಂದ ಇವರಿಬ್ಬರೂ ಒಂದೇ ದಿನ ಹುಟ್ಟುವುದು. ತೊಟ್ಟಿಲು ಎರಡಾದರೂ ಒಂದೇ ತೊಟ್ಟಿಲಲ್ಲಿ ಆಡಿ ಬೆಳೆಯುವುದು. ಕಥೆಯುದ್ದಕ್ಕೂ ಒಡಹುಟ್ಟಿದ ಅಣ್ಣ - ತಮ್ಮಂದಿರಂತೆ ಚಿತ್ರಿಸಲ್ಪಟ್ಟಿದ್ದಾರೆ. ಸ್ನೇಹಿತರಾದರೂ ಅಣ್ಣ - ತಮ್ಮಂದಿರ ಭಾವನೆಯನ್ನೇ ಹೊಂದಿರುತ್ತಾರೆ. ತಪ್ಪಾಗಿ ಅರ್ಥ ಮಾಡಿಕೊಂಡ ಜೈಸಿಂಗರಾಜ ತಮ್ಮನಾದ ಮಹಮ್ಮದ ಖಾನನ ಮೇಲೆ ಗುಂಡು ಹಾರಿಸಿ ಅವನ ಸಾವಿಗೆ ಕಾರಣನಾಗುತ್ತಾನೆ. ಇದರಿಂದ ಪ್ರಾಯಶ್ಚಿತ್ತವಾಗಿ ತಾನೂ ಸಾಯುತ್ತಾನೆ. ಇವರ ಅನ್ಯೋನ್ಯತೆಯ ಪ್ರತೀಕವಾಗಿ ಇವರನ್ನು ಒಂದೆಡೆ ಸಮಾಧಿ ಮಾಡುವುದು. ಇಂದಿಗೂ ಜನ ಅವರನ್ನು ಧರ್ಮಾತೀತವಾಗಿ ಪೂಜಿಸುತ್ತಿರುವುದು. ಜನರ ಭಾವೈಕ್ಯತೆಯ ಮನೋಭಾವದ ಸಂಕೇತವಾಗಿ ನಿಂತಿದೆ. ಇದು ಚಿಕ್ಕ ಖಂಡಕಾವ್ಯವಾದರೂ ತನ್ನದೇ ಆದ ಸಾಂಸ್ಕೃತಿಕ ಮೌಲ್ಯವನ್ನು ಎತ್ತಿ ಹಿಡಿದೆ. ಕಥೆಯ ಸಂಕ್ಷಿಪ್ತಸಾರ ಇಲ್ಲಿದೆ.

ಹೊಂಗ ನಾಯಕರದು ರಜಪೂತ ಕುಲ. ಇವರ ಕುಲದೇವರು ರಂಗನಾಯಕ ಸ್ವಾಮಿ. ಇವನಿಗೆ ಇಬ್ಬರು ಮಕ್ಕಳು. ಸೂರಸಿಂಗರಾಜ, ಧರಣಿ ಸಿಂಗರಾಜ. ಧರಣಿಸಿಂಗರಾಜನ ಹೆಂಡ್ತಿ ರಾಣಿಲದೇವಿ. ರಾಜನು ರಂಗನಾಯಕ ಸ್ವಾಮಿಗೆ ವರ ಕೇಳಿಕೊಳ್ಳುವನು. ಆಗ ರಂಗನಾಯಕ ಸ್ವಾಮಿಯು ಖರ್ಜೂರ ಹಣ್ಣು ಕೊಡುವನು. ಈ ಹಣ್ಣನ್ನು ರಾಣಿಯು ಊಟ ಮಾಡುವಳು. ಇವಳಿಗೆ ಮಗ ಹುಟ್ಟುವನು. ರಂಗನಾಯಕನ ವರದಲ್ಲಿ ಹುಟ್ಟಿದ ಈತನಿಗೆ ಜೈಸಿಂಗ್ ರಾಜ ಎಂದು ನಾಮಕರಣ ಮಾಡುವರು.

---

* ಜೈಸಿಂಗರಾಜನ ಕಾವ್ಯ : ನನ್ನ ಸಂಗ್ರಹ - ಅಪ್ರಕಟಿತ

ಇನ್ನೊಂದೆಡೆ ಮಹಮ್ಮದಖಾನನು. ಆತನ ತಂದೆ ಪೀರು ಸಾಬು, ತಾಯಿ ಹುಸೇನಿ ದರ್ಗಾದೇವ್ರು ಹುಸೇನಿ ಉಡಿಯಲ್ಲಿ ಮಲ್ಲಿಗೆ ಹೂ ಹಾಕುವನು. ಹುಸೇನಿಯು ಮಲ್ಲಿಗೆ ಹೂ ಉಣ್ಣಲು ಮಗ ಹುಟ್ಟುವನು. ಈತನಿಗೆ ಮಹಮ್ಮದ ಖಾನ ಅಂತ ಹೆಸರಿಡುವರು. ಬೇರೆ ಬೇರೆ ಕುಲದವರಾದ್ರು ಇವರ ಮನೆಗಳು ಅಕ್ಕ ಪಕ್ಕದಲ್ಲೇ ಇರುತ್ತವೆ. ಇವರಿಬ್ರು ಒಂದೇ ಟೈಂ ನಾಗ ಹುಟ್ಟುವರು. ಇಬ್ರು ಮಕ್ಕಿಗೆ ತೊಟ್ಟಿಲು ಕಟ್ಟುವರು. ಆಗ ಹುಡುಗ್ರು ಒಂದ ತೊಟ್ಲಾಗಿಂದ ಇನ್ನೊಂದು ತೊಟ್ಲಾಗ್, ಇನ್ನೊಂದು ತೊಟ್ಲಾಗಿಂದ್ ಆ ತೊಟ್ಲಾಗ್ ಎಗರೋದು ಮಾಡುತ್ತಾವೆ. ಒಮ್ಮೊಮ್ಮೆ ಮಕ್ಕಳು ಬದಲಿ ಕೂಡ ಆದ್ರೂ ಇಬ್ಬರಿಗೂ ತಂದೆ - ತಾಯಂದಿರು ಭಾಳ ಪ್ರೀತಿ ಮಾಡ್ತಾರೆ. ಹೀಗೆ ಜೈಸಿಂಗರಾಜ ಮತ್ತು ಮಹಮ್ಮದ ಖಾನ್ ಜೊತೆಯಲ್ಲಿಯೇ ಪಾಠ ಕಲಿತು ದೊಡ್ಡವರಾಗುವರು. ಒಬ್ಬರಿಗಿ ಬಿಟ್ಟು ಇನ್ನೊಬ್ಬ ಇರೋದಿಲ್ಲ. ಪ್ರಾಣ ಸ್ನೇಹಿತರಾಗುವರು.

ದಿಲ್ಲಿಯ ಲಾಲಸಾಬ ಮತ್ತು ಗೋಲ್ಕಂಡ ಅಂತ ಇಬ್ರು ಚಿಗದೊಡ್ಡಪ್ಪನ ಮಕ್ಕಳಿರುವರು. ಅರ್ಧ ಊರು ಆತನದು ಇನ್ನರ್ಧ ಊರು ಈತನದ್ದು. ಇವರಿಗೆ ವರ್ಷಕ್ಕೆ ಇಂತಿಷ್ಟು ರೊಕ್ಕ ರಜಪೂತ ಕುಲದವ್ರು ಕೊಡಬೇಕೆಂದು ಮಾತಾಗಿರುತ್ತದೆ. ರಜಪೂತ ಕುಲದವ್ರು ನಾವು ನಿಮಗೆ ರೊಕ್ಕ ಕೊಡೊದಿಲ್ಲವೆಂದು ಹೇಳಿ ಕಳಿಸುತ್ತಾರೆ. ಇದನ್ನು ಕೇಳಿ ಡಿಲ್ಲಿ ಲಾಲ ಸಾಬು ಯುದ್ಧಕ್ಕೆ ಬರ್ತಾನೆ. ಯುದ್ಧಕ್ಕೆ ಬಂದವರ್ನೆಲ್ಲಾ ಇವರಿಬ್ಬರೂ ಸ್ನೇಹಿತರು ಕೂಡಿ ಕಡಿದು ಹಾಕುತ್ತಾರೆ. ಇವರನ್ನು ನೋಡಿ ಡಿಲ್ಲಿ ನವಾಬನು ಅಂಜಿ ಓಡಿ ಹೋಗ್ತಾನೆ. ಇದನ್ನೆಲ್ಲಾ ಅಗಸರವನು ನೋಡಿ ನವಾಬನಿಗೆ ಹೀಗೆ ಹೇಳುತ್ತಾನೆ. ಜಗಕ ದೊಡ್ಡವ್ರು, ಬೆಳ್ಳಿ ಟೋಪಿ, ಬಂಗಾರದ ಟೋಪಿ, ಬೆಳ್ಳಿ ಅಂಗಿ, ದೇಶಕ್ಕೆ ದೊಡ್ಡವರಾಗಿ ಅಬ್ರಿಗೆಲ್ಲಾ ಹೆದರಿಕೊಬೇಕೇನು? ಅದು ರಜಪೂತ ಕುಲದವನಿಗೆ ನೀವು ಏಳು ಸಮುದ್ರದ ನೀರು ತಗದು ಹಾಕಿ ಬಿಡಿ, ಕೆರಿ ಕಟ್ಟಿಬಿಡಿ, ಮತ್ತೆ ಯುದ್ಧಕ್ಕೆ ಹೋಗ್ರಿ. ಅವ್ರು ಓಡಿ ಬಂದಾಗ ಅಲ್ಲಿ ಡೋಲು ಹೊಡೆದು ಬಿಡ್ರಿ. ಆಗ ಅಲ್ಲಿ ಕೆರೆ ಒಡೆದು ಬಿಡ್ತಾರ. ಆಗ ಏಳು ಸಮುದ್ರದ ನೀರೆಲ್ಲಾ ಊರಾಗ ಬಂದು ಬಿಡ್ತವ. ಅದರಲ್ಲಿ ಅವ್ರು ಹರಕೊಂಡು ಹೋಗಿ ಹಾಳಾಗಿ ಬಿಡ್ತಾರ. ಆಗ ಅವರ ರಾಜ್ಯವೆಲ್ಲಾ ನಿನ್ನದಾಗತೈತೆಂದು ಉಪಾಯ ಹೇಳಿಕೊಡವನು. ಅಗಸ ಹೇಳಿದಂತೆ ಏಳು ಸಮುದ್ರರ ನೀರು ತೆಗೆದು ಕೆರೆ ಕಟ್ಟಿ ಬಿಡುವನು. ಮತ್ತೆ ಯುದ್ಧಕ್ಕೆ ಬರುವನು. ಊರಸುತ್ತೆಲ್ಲಾ ಸೈನಿಕರು ಮುತ್ತಿಗೆ ಹಾಕಿ ಅವರನ್ನ ಕಡಿಯಲು ಹೊಂಚುಹಾಕಿ ಕೂಡುವರು. ಇದೆಲ್ಲವೂ ಜೈಸಿಂಗ ರಾಜನಿಗೆ ತಿಳಿಯುವುದು. ಏನು ಮಾಡಬೇಕೆಂಬುದು ತಿಳಿಯದೆ ಯೋಚಿಸುತ್ತಾನೆ.

ಅದೇ ಸಮಯದಲ್ಲಿ ಮಲಕನೂರಿನಲ್ಲಿ ಮಹಮ್ಮದ ಖಾನನ ಮದುವೆ ಏರ್ಪಟ್ಟಿರುತ್ತದೆ. ನಾನಿಲ್ಲದ ಸಮಯದಲ್ಲಿ ನಮ್ಮ ಸಾಹೇಬ್ರು ಮ್ಯಾಲೆ ಹೇಗೆ ಯುದ್ಧ ಮಾಡ್ತಿ? ಅಂತ ಸ್ನೇಹಿತ ಕೇಳಿದ್ರೆ ಏನ್ ಹೇಳಬೇಕು? ಯುದ್ಧ ಮಾಡಲೊ, ಬೇಡವ್ರೊ ಎಂದು ಗೊಂದಲದಲ್ಲಿ ಸಿಲುಕುವನು. ಈ ಊರಿನಲ್ಲಿಯೇ ಗೊಂದಲಿಗರವನೊಬ್ಬ ಇರುತ್ತಾನೆ. ಆ ಮನುಷ್ಯ ಇಪ್ಪತ್ತು ಸಾವಿರ ನಲವತ್ತು ಸಾವಿರ ಜನ ಬರಲಿ, ಎಡಗೈಯಲ್ಲೇ ಕಡಿತಾನೆ. ಅಂತಹ ಬಲವಂತನಾಗಿರುವನು. ಜೈಸಂಗರಾಜನ ಬಳಿ ಬಂದು, ನೀನು ಆರ್ಡರ್ ಕೊಟ್ಟರೆ, ಅವರನ್ನೆಲ್ಲಾ ನಾನೇ ಕಡಿದು ಹಾಕ್ತೀನೆನ್ನುವನು. ಹಾಂಗಲ್ಲಪ್ಪ ನಾನು ಬಲವಂತ,

ನನಗಿಂತ ಅಪ್ಪು ಬಲವಂತ ಅವನಿಗಿಂತ ಬಲವಂತ ನೀನು. ಆದರೆ ನನ್ನ ಸ್ನೇಹಿತ ಹೇಳಿದಂತೆ ಮಾತು ಕೇಳ್ತಿನಿ ಎನ್ನುವನು. ಜೈ ಸಿಂಗರಾಜನು ಗೊಂದಲಿಗರನಿಗೆ ನೀನು ವೇಷ ಹಾಕಿಕೊಂಡು ಊರು ದಾಟಿ ನನ್ನ ಗೆಳೆಯನಿಗೆ ನಾನು ಕೊಡುವ ಪತ್ರ ಕೊಟ್ಟು, ಆತ ಕೊಡುವ ಪತ್ರವನ್ನು ಹೇಗಾದರೂ ತಂದು ಒಪ್ಪಿಸೆಂದು ಕೇಳಿಕೋಳ್ಳುವನು. ಏಳು ಸಾವಿರ ಮಂದಿ ನನ್ನನ್ನು ಹಿಡಿದರೂ ನಾನಾರೆಂದು ಅವರಿಗೆ ತಿಳಿಯಬಾರದು. ಹಾಗೆ ಒಂದು ಕಾಲಿಗೆ ಕಾಲ್ಮರಿ ನೀಲಿ ಕುಂಚಿ, ಏಳು ಕಂಡ ಪುರಾಣದಾಗ ಪತ್ರ ಮುಚ್ಚಿಕ್ಕಿ ಕೈಯಲ್ಲಿ ಬಕರಿಬಟ್ಲ, ಸೊಂಟಾಕೋಲು , ಬಕರೀ ವೇಷ ಹಾಕಿಕೊಂಡು ಹೊರಡುವನು. ಗುರು ವೇಷಾ ಹಾಕಿಕೊಂಡರೆ ತನ್ನನ್ನು ಯಾರು ಮುಟ್ಟುವುದಿಲ್ಲ. ಎಲ್ಲರೂ ಗುರು ಅಂತ ಪಾದ ಮುಗೀತಾರೆ. ಗುರು ಬಂದ್ರೆ ರಸ್ತಾ ಚೋಡೊ, ರಸ್ತಾ ಚೋಡೋ , ಸಲಾಂದೆ ಸಲಾಂದೆ ಎನ್ನುವರು. ಸೈನಿಕರ ಜೊತೆಯಲ್ಲೇ ಇದ್ದ ಅಗಸರವನು. ಇವನ ವೇಷ ನೋಡಿ ಈತ ಗೊಂದಲಿಗೆ ಕುಲದವನು. ಇವನ್ಯಾಕೆ ಈ ಕಡಿಗೆ ಹೋಗ್ತಿದ್ದಾನೆಂದು ಕೇಳುವನು. ಆಗವನು ನಹೀ ಸಾಬ್, ನನ್ನ ಡಿಲ್ಲಿ ಒಳದಂಡಿ ಬಗಲಾಗ ಹುಟ್ಟಿದವನು ನಮ್ಮದು ದೇವು ದರ್ಗಾ ಹುಸೇನಿ, ಅಲ್ಲೆ ನಾನು ಪೂಜೆ ಮಾಡಲಿಕ್ಕೆ ಹೋಗ್ತಾ ಇರೋದು. ನನ್ನ ಹೆಸ್ರು ಬಕ್ರಿ ಸಾಹೇಬಂತ. ಮಹಮ್ಮದ ಖಾನನ ಮದುವೆ ನಡಿತೈತೆ. ಅಲ್ಲಿಗೆ ನಾನು ಹೋಗಬೇಕು. ನಾನೇ ತಾಳಿ ಕಟ್ಟಿಸಬೇಕು. ಈ ದಾರಿ ನೆಟ್ಟಗೆ ಹೋಗುತೈತೆಂದು ನಾನ ಬಂದೀನಿ. ಅದ್ಕೆ ದಾರಿ ಬಿಡ್ರೆಂದು ಕೇಳುವನು. ಆತನ ಟೋಪಿ, ಕಾಲ್ಮರಿಗೆ, ಬೂಟು ಕುರಾನ ಪತ್ರ ಎಲ್ಲವನ್ನು ಚೆಕ್ ಮಾಡ್ತಾರೆ. ಏನೂ ಸಿಗೊದಿಲ್ಲ. ಅಚ್ಚಾ ಚೋಡೋ ನಮ್ಮ ಗುರು , ಮನಿದೇವು ಅಂತ ಬಿಟ್ಟು ಬಿಡ್ತಾರೆ.

ಅಲ್ಲಿ ಮದುವಿ ನಡಿದಿರತೈತೆ. ಮದುವ್ಯಾಗ ಜನ ಜಾತ್ರಿಗಿ ಸೇರದಂಗ ಸೇರಿರ್ತಾರೆ. ಮದುವೆಯಲ್ಲಿ ಇಪ್ಪತ್ತು ದಡೇವು ಹೂವು ಹಾಕಿ ಪರದೆ ಕಟ್ಟಿ ಮಹಮ್ಮದ ಖಾನಗೆ ಕುಂದ್ರಿಸಿರ್ತಾರೆ. ಏಳು ಕಂಡ ಕುರಾನ್ ಮುಗಿಯತನಕ ಅವು ಕರೀಮಣಿ ಕಟ್ಟಂಗಿಲ್ಲ. ಅಲ್ಲಿಗೆ ಬಂದ ಗೊಂದಲಿಗನು, ಮನೀ ಮುಂದೆ ಬಾಗಿಲು ಕಾಯೋರಿಗೆ , ನಾನು ಬಹಳ ದೂರದಿಂದ ಬಂದೀನಿ. ಒಳಗ ಬಿಡ್ರೆಪ್ಪಾ ಎಂದು ಕೇಳುವನು. ಅವರು ನಾವು ಈಗ ಯಾರಿಗೂ ಒಳಗೆ ಬಿಡೋದಿಲ್ಲ. ತಾಳಿ ಕಟ್ಟುವ ಟೈಂ ಆಗೈತಿ ಇನ್ನೂ ಒಂದು ಗಂಟೆ ಕುರಾನ ಓದ್ಬೇಕು. ಅಂತಾರೆ . ಆಗ ಗೊಂದಲಿಗರವನು ಮನಸ್ಸಿನಲ್ಲಿ ಜೊತೆಗಾರನ ಮ್ಯಾಲೆ ಜೀವ ಇದ್ರೆ ಈ ಪತ್ರ ಹೋಗಿ ಮಹಮ್ಮದಖಾನನ ಬೊಗಸ್ಯಾಗ ಬೀಳಬೇಕೆಂದು ಕೊಂಡು ಬಾಗಿಲು ಹೊರಗಿನಿಂದಲೆ, ಪತ್ರವನ್ನು ಮನಿಯೊಳಗೆ ಬೀಸಿ? ಬಗೆಯುವನು. ಅದು ನೇರ ಬಂದು ಮಹಮ್ಮದ ಖಾನನ ಬೊಗಸ್ಯಾಗ ಬೀಳುವುದು. ಕರೆಕ್ಟು ತಾಳಿ ಕಟ್ಟುವ ವೇಳೆದಾಗ ಪತ್ರ ಬಿದ್ದಾಗ, ಮಾರಿ ಮ್ಯಾಲಿನ ಹೂಬಿನ ಪರದಾ ಒಳಗಿಂದಲೇ ಪತ್ರ ಓದ್ತಾನೆ. ಓದಿದವನೆ ಧಿಗ್ಗನೆ ಹೂವು , ಕರಿಮಣಿ ತಾಳಿ ಕೆಳಗಿಟ್ಟು ಎಳುವನು. ಹೀಗೇಕೆ ಎಂದು ಎಲ್ಲರು ಕೇಳಿದಾಗ ನನಗೆ ಮದುವೆ ಬ್ಯಾಡ, ಹೆಂಡ್ತಿ ಬ್ಯಾಡ, ನಮ್ಮಣ್ಣನ ಕಡಿಯಾಕ, ಯುದ್ದಕ್ಕ ಬಂದಾರೆ. ನಾನು ಅಲ್ಲಿಗೆ ಹೋಗ್ತಿನಿ ಅಂತಾನೆ. ನೀನು ಹೀಗೆ ಕರಿಮಣಿ ಕೆಳಗಿಟ್ಟು ಹೋಗ್ಬಾರ್ದು. ಇದು ಒಳ್ಳೆಯದಲ್ಲಪ್ಪ ಎಂದು ತಡೆದರೂ ನನ್ನ ಜೀವ ಹೋದ್ರು ಚಿಂತೆ ಇಲ್ಲ. ನಾನು ಹೋಗ್ಬೇಕೆಂದು ಯುದ್ಧಕ್ಕೆ ಕುದುರಿ ಮ್ಯಾಲೆ ಗೊಂದಲಿಗರವನು ಮಹಮ್ಮದ ಖಾನ

ಹೊರಡುವರು. ಇಬ್ಬರು ಯುದ್ಧ ಮಾಡುವರು. ಜೈಸಿಂಗರಾಜನು ಬಂದೆಯಾ ತಮ್ಮ ನೋಡು ಇತ್ತ ಕಡಿಕಂತ ಬಂಧ್ರೆ ಮತ್ತೆ ಓಡಿ ಹೋಗ್ತಾರೆ ಎನ್ನುತ್ತಾನೆ. ಇಬ್ಬರು ಕುದ್ರಿ ಮ್ಯಾಲೆ ಯುದ್ಧಕ್ಕೆ ಹೋಗ್ತಾರೆ. ಇವರು ಬರೋದ್ದನ್ನು ನೋಡಿ ಓಡಿ ಹೋಗಿ ಏಳು ಸಮುದ್ರದ ಆಕಡೆ ಹೋಗಿ ಡೋಲು ಹೊಡಿತಾರೆ. ಅಲ್ಲಿ ನೂರಾರು ಆಳು ಕೆರೆ ಒಡೆದು ಬಿಡುತ್ತವೆ. ಇಪ್ಪತ್ತು ಏಕರೆ ಭೂಮಿ ಆಗಲಾಗ ಗದ್ದೆ ಏರಿ ಬರ್ತದೆ. ನೀರಿನ ಪ್ರವಾಹ ಉಕ್ಕುತ್ತಾ ಹೋಗುತ್ತದೆ. ಅಣ್ಣ - ತಮ್ಮಂದಿರು ಕುದುರಿ ಇಳಿದು ರೆಕ್ಕೆ ಕುದುರೆ ಮ್ಯಾಲೆ ಹೋಗ್ತಾರೆ. ಪತ್ರ ತಂದವನು ಆನಿ ಮ್ಯಾಲೆ ಕುಂತು ಕೊಂಡು ಸಮುದ್ರದಾಗೆ ಹೋಗ್ತಾನೆ.

ತಮ್ಮನಿಗೆ ನೀನು ಬರಬೇಡಾ ನಾನೊಬ್ಬನೆ ಅವರನ್ನೆಲ್ಲಾ ಕಡಿದು ಬರುವೆನೆನ್ನುವನು. ಆಗ ತಮ್ಮನು ಬೇಡಣ್ಣ ನೀನು ರಜಪೂತ ಕುಲದವನು ಕಡಿಬಾರ್ದು. ನಾನು ಹೋಗಿ ಕಡಿವೇನು. ಅಲ್ಲಿ ನಾನು ಕಡಿಯುವಾಗ ನೀರಲ್ಲಿ ಕೆಂಪು ಬಟ್ಟೆ ಬಂದವನಿಗೆ ಗುಂಡು ಬಿಟ್ಟು ಬಿಡು. ಬಿಳೇ ಬಟ್ಟೆ ಬಂದಿದ್ದರೆ ಸುಮ್ಮನಿದ್ದು ಬಿಡೆಂದು ಹೇಳಿ ಹೋಗುವನು. ಜೈ ಸಿಂಗರಾಜನು ಬಂದೂಕದೊಂದಿಗೆ ಈ ಕಡೀಗಿ ನಿಲ್ಲುವನು. ಅಲ್ಲಿ ಮಹಮ್ಮದ ಖಾನ ಎಲ್ಲರನ್ನು ಕಡಿದು ಕಡಿದು ಹಾಕುವಾಗ ಮೈಯಾಗಿನ ಬಿಳಿ ಬಟ್ಟೆಯೆಲ್ಲಾ ಕೆಂಪು ರಕ್ತ ಆಗುವುದು. ನವಾಬ ಸಾಬನು ಬಚ್ಚಿಟ್ಟು ಕೊಳ್ಳುವನು. ತಮ್ಮನು ಎಲ್ಲರನ್ನೂ ಕಡಿದು ಈ ಕಡೆಗೆ ಬಂದು ಆತನಿಗಾಗಿ ಎಲ್ಲಾ ಕಡೆಗೂ ಹುಡುಕುತ್ತಿದ್ದರು ಸಿಗುವುದಿಲ್ಲ. ಮುಂದೆ ನವಾಬ ಸಾಬನು ಅವನನ್ನು ನೋಡಿ ಕಡಿಯಲು ಹಿಂದಿನಿಂದ, ಮಹಮ್ಮದ ಖಾನನು ಮೈಯೆಲ್ಲಾ ರಕ್ತದಂಗಿಯೊಂದಿಗೆ ಹೋಗುವಾಗ ಈತನನ್ನು ಜೈಸಿಂಗರಾಜನು ತಪ್ಪಾಗಿ ತಿಳಿದುಕೊಳ್ಳುವನು. ತನ್ನ ಬಿಳಿ ಅಂಗಿ ತಮ್ಮನನ್ನು ಕಡಿಯಾಕ ಈ ಕೆಂಪು ಬಟ್ಟೆ ಸಾಹೇಬ ನಡೇದಾನೆಂದು ಗುಂಡು ಹಾರಿಸಿ ಬಿಡುವನು. ಅಣ್ಣಾ ಅಂತ ತಮ್ಮನು ಪ್ರಾಣ ಬಿಡುವನು. ನನ್ನ ತಮ್ಮನನ್ನ ನಾನೇ ಕೊಂದು ಬಿಟ್ಟೆನಲ್ಲಾ. ಎಷ್ಟು ಮೋಸ ಹೋದ್ಯಪ್ಪ ನೀನು ಎಂದು ಅಳುವನು. ಇನ್ನು ನಿನ್ನ ನಾನು ಕೊಲ್ಲಿದ ಮ್ಯಾಲೆ ನಾನ್ಯಾಕೆ ಇರಬೇಕೆಂದು ಕುದುರಿಕೊಳ್ಳಾಗ ತನ್ನದೊಂದು ತಮ್ಮನದೊಂದು ಪತ್ರ ಬರೆದು ಕಟ್ಟಿ ತಾನೇ ಕಡಕಂದು ಸಾಯ್ತಾನೆ.

ಕುದುರೆಯು ಪತ್ರದೊಂದಿಗೆ ಧರಣಿಸಿಂಗರಾಜನ ಸೂರ್ಯ ಸಿಂಗರಾಜರ ಬಳಿ ಬರುವುದು. ಅವರು ಪತ್ರವನ್ನು ಓದುವರು. ಮಹಮ್ಮದ ಖಾನನ ಪತ್ರ ವಂದಲೂರಿಗೆ ಕುದುರಿ ಬಂದು ತೋರಿಸುವುದು. ತಂದೆ - ತಾಯಿ ಅಳುತ್ತಾ ಮಗಸತ್ತ ಸ್ಥಳಕ್ಕೆ ಬರ್ತಾರೆ. ಜೈಸಿಂಗ್‌ರಾಜನನ್ನು ಹೊತ್ತುಕೊಂಡು ಧರಣಿಸಿಂಗ ರಾಜನು ಮಣ್ಣು ಮಾಡ್ತಾನೆ. ಮಹಮ್ಮದ ಖಾನನ ಮಣ್ಣು ದರ್ಗಾದ ಹತ್ತಿರ ಮಾಡ್ತಾರೆ. ಮಕ್ಕಳಿಬ್ಬರನ್ನು ಕಳೆದುಕೊಂಡ ತಾಯಿ - ತಂದೆ ಸಮಾಧಿ ಮುಂದ ಕುಳಿತು ದುಃಖಿಸುತ್ತಾರೆ. ಏಳು ಸಮುದ್ರದ ಬಳಿ ಇಬ್ಬರಿಗೂ ಮಠ ಕಟ್ಟುವರು. ಆತನಿಗೆ ಸಕ್ಕರೆ ಹೋಯ್ಸಿದರೆ, ಈತನಿಗೆ ಕಾಯಿ ಹೊಡೀತಾರೆ. 'ದೀನ್ ವೋಲಾಲ' ಎಂದು ಇಬ್ಬರಿಗೂ ನಮಸ್ಕಾರ ಮಾಡ್ತಾರೆ. ಹೀಗೆ ಇಬ್ರು ಪ್ರಾಣ ಸ್ನೇಹಿತರು. ಪ್ರಾಣ ತ್ಯಾಗ ಮಾಡಿ, ಒಂದೆ ಕಡಿಗೆ ಸಮಾಧಿಯಲ್ಲಿ ಲೀನರಾಗ್ತಾರೆ. ಈಗಲೂ ಶಿರಗುಪ್ಪದ ಹೊಳಿದಂಡಿ ಬಗಲಾದ ದಡೇ ಸೂಗುರಲ್ಲಿ ಈ ಇಬ್ಬರ ಸಮಾಧಿ ಇದೆ. ಅಲ್ಲಿ ಇವರಿಬ್ಬರಿಗೂ ಪೂಜೆ ನಡೀತೈತೆ.

2.6- ಬಾಲ ನಾಗಮ್ಮನ ಕಾವ್ಯ *:

ಮಂಡಲಗೇರಿ ಪಟ್ಟದಲ್ಲಿ ಸಿರಿಗಂಧರಾಜ ಆತನ ಪತ್ನಿ ಅಡಿವಕ್ಕ ಮಹಾದೇವಿ ಆತನ ತಮ್ಮ ನೌಭೋದ ರಾಜ ಹೆಂಡ್ತಿ ಭೂದೇವತಿ. ಅವರದು ಛತ್ರಿಕುಲ ಒಂದು ದಿನ ಅಣ್ಣ, ತಮ್ಮಂದಿರು ಬೇಟೆಗೆ ಹೋಗುತ್ತಾರೆ. ಸೋಮವಾರ ಉಗಾದಿ ಪಾಡ್ಯದ ದಿವಸ ಬೆಟ್ಟದ ಮಾರ್ಗವಾಗಿ ಬೇಟೆಗೆ ಹೋಗುವಾಗ, ದಾರಿ ಮಧ್ಯೆ ನೀರಡಿಕೆಯಾಗಿ ವಾಪಸ್ಸು ಬರುತ್ತಾರೆ.

ಊರಿನ ಮುಂದೆ ಇರುವ ಈಶ್ವರ ಗುಡಿಗೆ ಹೋಗಿ , ಹೋಗಿದ ಕಾರ್ಯಯಾಕೆ ಆಗಲಿಲ್ಲ ಎಂದು ಕೇಳುತ್ತಾರೆ. ಅದಕ್ಕೆ ದೇವು ಈ ರೀತಿಯಾಗಿ ಹೇಳುತ್ತಾನೆ. ಸ್ನಾನವಿಲ್ಲದೆ ನನ್ನನ್ನು ಮುಟ್ಟಲಿಕ್ಕೆ ಬಂದಿದ್ದಿಯಾ. ಅದಕ್ಕಾಗಿ ನೀನು ಹುಲಿಯಾಗಿ ಬೆಟ್ಟದಾಗ ಅಡ್ಯಾಡೆಂದು ಕೊಲ್ಲು ದೇವು ಈಶ್ವರ ಶಾಪ ಕೊಡುತ್ತಾನ. ಆಗ ಸಿರಿಗಂಧರಾಜ ನಾನಾ ರೀತಿಯಿಂದ ದೇವ್ರಿಗೆ ಬೇಡಿಕೊಳ್ಳುತ್ತಾನೆ. ನಿನಗೆ ಬೆಳ್ಳಿ ಈಶ್ವರ, ಗೋಪುರ, ಕಟ್ಟಿಸ್ತೀನಿ, ಹಾಲಿಂದ ಅಭಿಷೇಕ ಮಾಡಿಸ್ತೀನಿ ಎಂದಾಗ ದೇವು ನನಗೇನು ಬೇಡವೆನ್ನುತ್ತಾನೆ. ಹುಲಿಯಾಗಿ ಊರಾಕ ಬರುತ್ತಾನೆ.

ಹುಲಿಯನು ಊರಲ್ಲಿ ಕಂಡು ಜನ ಗಾಬರಿಯಾಗುತ್ತಾರೆ. ನಮ್ಮಣ್ಣನ ಕೊಲ್ಲಬೇಡ್ರಿ ಅಂತ ತಮ್ಮನು ಊರಿನ ಜನರಿಗೆ ಕೇಳಿ ಕೊಳ್ಳುತ್ತಾನೆ. ಊರಲ್ಲಿದ್ದರೆ ಊರ ಜನರು ಕೊಂದು ಬಿಡುತ್ತಾರೆಂದು ಅಡವ್ಯಾಗ ಮನಿ ಕಟ್ಟಿಸಿ ಇಳೆ ಭಾವಿ ತೋಡಿಸಿ, ಗಂಡಾ - ಹೆಂಡ್ತಿಗೆ ಅಡವ್ಯಾಗ ಬಿಟ್ಟು ಬರುತ್ತಾನೆ. ಹೀಗೆ ಗಂಡ ಹೆಂಡ್ತಿ ಅಡವಿಯೊಳಗೆ ಜೀವನ ಸಾಗಿಸುತ್ತಿರುತ್ತಾರೆ.

ಇತ್ತ ನೌಭೋದರಾಜನ ಹೆಂಡ್ತಿ ಭೂದೇವತಿ ತನ್ನ ಗಂಡನಿಗೆ ನಮಗೆ ಮಕ್ಕಳಿಲ್ಲ ಗುಡಿಗೆ ಹೋಗಿ ಮಕ್ಕಳ ಇಸ್ಕೊಂಡು ಬರೋಣ ಅಂದಾಗ, ಗಂಡನು ನೀನೆ ಹೋಗೆನ್ನುತ್ತಾನೆ. ಭುದೇವತಿ ಒಬ್ಬಳೆ ಜಟಿಂಗೇಶ್ವರ ಮಠಕ್ಕೆ ಬಂದು ಹುತ್ತಿಗೆ ಪೂಜೆ ಮಾಡಿ, ತಪಸ್ಸಿಗೆ ನಿಲ್ಲುತ್ತಾಳೆ. ಆಗ ನಾಗೇಂದ್ರ ಭೂಮ್ಯಾಗಿಂದ ಹೊರಗೆ ಬಂದು ತಲೆ ಎತ್ತಿ ನೋಡಿ ಈಕೆ ನನ್ನನ್ನು ಈ ರೂಪದಲ್ಲಿ ನೋಡಿದ್ರೆ ಹೆದರುತ್ತಾಳೆಂದು ದಾಸಪ್ಪನ ವೇಷದಲ್ಲಿ ಬರುತ್ತಾನೆ. ಗುಡ್ಯಾಗ ಇರೋದು ಗರುಡು ದೀಪ, ಜಾಗಟೆ ಕೈಯಾಗ ಹಿಡಕೊಂಡು , ಭೂದೇವತಿಗೆ ಕೇಳುತ್ತಾನೆ. ನೀನು ಮಕ್ಕಳ ಫಲ ಕೇಳಲಿಕ್ಕೆ ಬಂದೇನು? ಎಂದು ಪ್ರಶ್ನಿಸಿದಾಗ , ಹೌದೆನ್ನುತ್ತಾಳೆ. ಮಕ್ಕಳ ಕೊಟ್ರೆ ನೀನು ಸಾಯುತ್ತಿ ಎನ್ನುತ್ತಾನೆ. ನಾನು ನಿನಗೆ ಕೇಳಿದ್ದನ್ನ ಕೊಟ್ರೆ, ನೀನು ಏಳು ಮಂದ್ಯಾಗ ಒಬ್ಬ ಮಗಳನ್ನು ನನಗೆ ಕೊಡಬೇಕೆಂದಾಗ , ಕೊಡುತ್ತೇನೆನ್ನುತ್ತಾಳೆ. ಆಗ ದಾಸಪ್ಪ ಜೋಳಗ್ಯಾಗಿಂದ ಏಳು ಖಜೂರ ತೆಗೆದು ಉಡಿಯೊಳಗೆ ಹಾಕುತ್ತಾನೆ. ನಂತರ ನಾಗೇಂದ್ರನಾಗಿ ಹುತ್ತಿನೊಳಗೆ ಹೋಗುತ್ತಾನೆ.

ಭೂದೇವತಿ ಮನೆಗೆ ಬಂದು , ಗಂಡನಿಗೆ ಎಲ್ಲ ವಿಷಯವನ್ನು ತಿಳಿಸುತ್ತಾಳೆ. ಹಾಗೆ ಗಂಡನಿಗೆ ಏಳು ಖಜೂರು ತಿನ್ನಲೇ ಅಥವಾ ಬೇಡ ಎಂದು ಅನುಮಾನದಿಂದ ಕೇಳುತ್ತಾಳೆ. ಅದು ದೇವರ ಫಲ ಬಿಸಾಕಬೇಡ ಊಟಾ ಮಾಡೆನ್ನುತ್ತಾನೆ. ಅವಳ ಗರ್ಭಕ್ಕೆ ಊಟಾ ಮಾಡಿದ್ಳು.ಒಂಭತ್ತು ತಿಂಗಳು , ಒಂಭತ್ತು ತಾಸು ಶುಕ್ರವಾರ ಹನ್ನೆರಡು ಗಂಟೆಗೆ ಏಳು ಮಂದಿ ಹುಟ್ಟುತ್ತಾರೆ.

---

* ಬಾಲ ನಾಗಮ್ಮನ ಕಾವ್ಯ ನನ್ನ ಸಂಗ್ರಹ - ಅಪ್ರಕಟಿತ

1) ಉತ್ತರ ನಾಗಮ್ಮ 2) ದಕ್ಷಿಣ ನಾಗಮ್ಮ 3) ಸೂರ್ಯ ನಾಗಮ್ಮ 4) ಚಂದ್ರ ನಾಗಮ್ಮ5) ದೊಡ್ಡೀರಮ್ಮ 6) ನಡು ಈರಮ್ಮ ಮತ್ತು 7) ಚಿಕ್ಕತಾಯಿ ಬಾಲನಾಗಮ್ಮ.

ಮಕ್ಕಳಿಗೆ ಐದು ವರ್ಷ ತುಂಬಲು ದಾಸಪ್ಪ ಜಾಗಟೆ ಬಡೆಯುತ್ತಾ, ಶಂಖ ಉದುತ್ತಾ ಭೂದೇವತಿ ಮನೆಗೆ ಬರುತ್ತಾನೆ. ಒಬ್ಬ ಮಗಳ ನನಗೆ ಕೊಡೆನ್ನುತ್ತಾನೆ. ಆಗ ಭೂದೇವತಿ ಅದಕ್ಕೆ ಒಪ್ಪೊದಿಲ್ಲ. ಮಗಳ್ನ ಕೊಡಕ್ಕವೆನ್ನುವಳು ನಾನು ಮತ್ತೆ ಬರುತ್ತೇನೆಂದು ವಾಪಸ್ಸು ಹೋಗುತ್ತಾನೆ. ದಾಸಪ್ಪ ಮತ್ತೆ ಬಂದು ಮಗಳನ್ನು ಒಯ್ಯುವನೆಂಬ ಭಯದಿಂದ ಭೂದೇವತಿಯು ಗಂಡನಿಗೆ ವಿಷಯ ತಿಳಿಸುತ್ತಾಳೆ. ಗಂಡನು ಆಗ ಏಳು ಅಂತಸ್ತು ಮಾಳಿಗಿ ಮನಿ ಊರ ಹೊರಗೆ ಕಟ್ಟಿಸಿದ. ಮನೆ ಕಟ್ಟಿದ ಮೇಲೆ ಅಲ್ಲಿ ಹೆಂಡ್ತಿ ಮಕ್ಕಳ್ನ ಇಡುತ್ತಾನೆ. ಹೀಗಿರಲು ಒಂದು ದಿನ ದಾಸಪ್ಪ ಬರುತ್ತಾನೆ. ಊರಿನ ಜನರಿಗೆ ಭೂದೇವತಿ ಎಲ್ಲೆಂದು ಕೇಳುತ್ತಾನೆ. ಊರ ಬಿಟ್ಟ ಎಳು ಅಂತಸ್ತು ಮನೆಯೊಳಗೆ ಇದ್ದಾಳೆ ಯಾಕಂದ್ರೆ ಭಿಕ್ಷೆ ಕೊಡಬೇಕು. ಮಕ್ಕಳನ್ನು ಹುಟ್ಟಿದ ಮ್ಯಾಲೆ ದಾನ ಕೊಡ್ತಿನಿ ಅಂದಾಳೆ. ಅದಕ್ಕಾಗಿ ಸಿಗಬಾರದೆಂದು ಊರ ಹೊರಗೆ ಇದ್ದಾರೆಂದು ಊರಿನ ಜನರು ದಾಸಪ್ಪನಿಗೆ ಹೇಳುತ್ತಾರೆ. ಆಗ ದಾಸಪ್ಪನು ನಾಗೇಂದ್ರನಾಗಿ ಭೂದೇವತಿಯ ಹೂವಿನ ತ್ವಾಟದಾಗ ಬಂದು ಗುಲಾಬಿ ಹೂದಾಗೆ ಸುತ್ತ ಹರಕೊಂಡು, ಬೊಗಸಿ ಅಡ್ಡಾಲ ಮಲಕೊಳ್ಳುತ್ತಾನೆ. ಆ ಹೂವನ್ನು ದಾಸಿ ಬಂದು, ಹರಕೊಂಡು ಬುಟ್ಯಾಗ ಇಟ್ಟಕೊಂಡು, ಮಕ್ಳಿಗೆ ಕೊಡಲು ಬರುತ್ತಾಳೆ. ಆಗ ಅದೇ ಸಮಯದಲ್ಲಿ ಭೂದೇವಿ ಮಕ್ಕಳಿಗೆ ತಲೆ ಬಾಚುತ್ತಿರುತ್ತಾಳೆ. ಆಗ ಹೂಬುಟ್ಟಿಯೊಳಗಿಂದ ಏಳು ಸರ್ಪ ನಾಗಪ್ಪನಾಗಿ ಎದ್ದು ಬಿಡುತ್ತಾನೆ. ನಿನ್ನ ಮಗಳ್ನ ಕೊಡು, ಕೊಟ್ಟ ಭಾಷೆ ತಪ್ಪಬೇಡ. ಆಗ ಭೂದೇವತಿ ಹೀಗೆನ್ನುತ್ತಾಳೆ. ಭಾಷೆ ಕೊಟ್ಟೀನಿ, ನಾನು ಕೊಡಲ್ಲಾ ಜೀವದ ಜೀವ ನನ್ನ ಜೀವ ತಗೊಂಡು ಹೋಗು ಎನ್ನುತ್ತಾಳೆ. ನೀನು ಸತ್ರ ನಿನ್ನ ಮಕ್ಕಳಿಗೆ ಕಷ್ಟ ಆಗತೈತೆ. ನಿನ ಗಂಡಗ ಕೊಡೆನ್ನುತ್ತಾನೆ. ನನ್ನ ಗಂಡನ ಮಾತ್ರ ಕೊಡಂಗಿಲ್ಲ. ನನ್ನ ಜೀವ ಕೊಡುತ್ತೇನೆಂದು ವಾದಿಸುತ್ತಾಳೆ. ನಿನ್ನಿಷ್ಟ ಬಂದಂತೆ ಆಗಲಿ ಎಂದು ಆಕೆಯ ಬೆನ್ನಿಗೆ ಕಚ್ಚಿ ಹಾಗೆ .. ಮಾಳಿಗೆ ಮೇಲಿಂದ ಎಗರಿ ಹುತ್ತಿನಾಗ ಹೋಗಿ ಬಿಡುತ್ತಾನೆ. ಭೂದೇವಿ ವಿಷವೇರಿ ಸಾಯುತ್ತಾಳೆ. ಅವಳನ್ನು ಸುಡುತ್ತಾರೆ. ಸುಟ್ಟ ಬೂದಿಯ ಮೇಲೆ ಬೆಳೆ (ಫಲ) ಬೆಳೆಸಬೇಕೆಂದು ಬೂದಿಯನ್ನು ಬೆಳೆಗೆ ಹಾಕುತ್ತಾರೆ.

ನೌಬೋಧ ರಾಜನು ಮಕ್ಕಳನ್ನು ಸಾಕುವ ಕಷ್ಟ ನೋಡಲಾರದೆ, ಊರಿನ ಜನರೆಲ್ಲರೂ ಆತನಿಗೆ ಮರು ಮದುವೆ ಮಾಡಿಕೊಳ್ಳಲು ತಿಳಿಸುತ್ತಾರೆ. ಆಗ ರಾಜನು ಮಾಣಿಕ್ಕಮ್ಮ ಎಂಬುವಳನ್ನು ಮದುವೆಯಾಗಿ ಮಕ್ಕಳಿಗೆ ಮಲತಾಯಿಯಾಗಿ ತರುತ್ತಾನೆ. ಮಾಣಿಕ್ಕಮ್ಮ ಪಾಪಿಷ್ಟಗೇಡಿಯಾಗಿರುತ್ತಾಳೆ. ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವುದಿಲ್ಲ. ಸದಾ ಕಷ್ಟವನ್ನೆ ಕೊಡುತ್ತಾಳೆ. ಮಕ್ಕಳನ್ನು ಈ ಮನೆಯಿಂದ ಹೇಗಾದ್ರೂ ಮಾಡಿ ಹೊರಗಟ್ಟಿ ತಾನೊಬ್ಬಳೇ ಗಂಡನೊಂದಿಗ ಸುಖವಾಗಿರಬೇಕೆಂದು ಕೊಂಡು ಒಂದು ಉಪಾಯ ಮಾಡುತ್ತಾಳೆ. ಉತ್ತರ ಬೀಜ , ತತ್ತರ ಪಾತರಸ, ಕೇರೆ ಬೀಜ, ಬಳೆ ಚೂರು, ಕಳ್ಳಿ ಹಾಲು, ಬೆಣ್ಣಂತ ಸುಣ್ಣ

ಇದನ್ನೆಲ್ಲವನ್ನು ಹಾಕಿ ಬೆಲ್ಲಾ ಹಾಕಿ ಹುಗ್ಗಿ ಮಾಡುತ್ತಾಳೆ. ಮಕ್ಕಳನ್ನು ಪ್ರೀತಿಯಿಂದ ಕರೆದು ಹುಗ್ಗಿ ಉಣಿಸುತ್ತಾಳೆ. ಮಕ್ಕಳು ಉಂಡ ಮ್ಯಾಲೆ ಮಾತನಾಡದೆ ಕೆಳಗೆ ಬೀಳುತ್ತಾರೆ. ಮಕ್ಕಳನ್ನು ಎತ್ತಿಕೊಂಡು ಹೋಗಿ ಬೂದಿ ಕೋಠಡಿಯೊಳಗೆ ಹಾಕುತ್ತಾಳೆ.

ತಾನು ಗಂಡನು ಬರುವ ಸಮಯಕ್ಕೆ ಸರಿಯಾಗಿ ತಲೆಗೆ ಬಟ್ಟೆ ಕಟ್ಟಿಕೊಂಡು ಬಳೆ ಒಡೆದುಕೊಂಡು ಹೊರಸಿನ ಮ್ಯಲೆ ಮಲಗುತ್ತಾಳೆ. ನೌಬೋಧ ರಾಜನು ಡಜನ್ ಬಾಳೆ ಹಣ್ಣು ತೆಗೆದುಕೊಂಡು ಮನೆಗೆ ಬರುತ್ತಾನೆ. ಗಂಡನಿಗೆ ಈ ರೀತಿ ಹೇಳುತ್ತಾಳೆ. ನಿನ್ನ ಹೆಂಡ್ತಿ ದೆವ್ವಾಗ್ಯಾಳ. ನನ್ನ ಎದಿ ಮ್ಯಾಲೆ ಬಿದ್ದಾಳೆ. ಹುಡುಗ್ರುನ ಕೋಠಡ್ಯಾಗ ದಬ್ಬಿ ಬಿಟ್ಟೀನಿ , ಸತ್ತಾರೋ ಬದುಕ್ಯಾರೋ ನೋಡೆನ್ನುತ್ತಾಳೆ. ತಂದೆ ಮಕ್ಕಳನ್ನ ನೋಡಿ ಅವರ ಮ್ಯಾಲ ಬಿದ್ದು ಬಾಯಿ ಬಾಯಿ ಬಡಕೋತಾನ. ಹೊರಗಿನ ಜನ ಬರುತ್ತಾರೆ. ತಾಯಿ ಮಕ್ಕಳ ಮೇಲೆ ಪ್ರೀತಿಯಿಂದ ದೆವ್ವಾಗಿ ಬಂದಿರಬಹುದೆನ್ನುತ್ತಾರೆ. ಹಳೆ ಹುಣಸಿ ಹಣ್ಣು, ಮಜ್ಜಿಗೆ ಕಲಿಸಿ ಕುಡಿಸುತ್ತಾರೆ. ಎಲ್ಲರಿಗೂ ಉಲ್ಟಿ ಆಗುತ್ತದೆ. ಆಗ ಮಕ್ಳು ಎದ್ದು ಕೂಡುತ್ತಾರೆ. ಗಂಜಿ ಕಾಸಿ ಕುಡಿಸುತ್ತಾರೆ. ಸ್ವಲ್ಪ ಸುಧಾರಿಸಿದ ನಂತರ, ಮಕ್ಕಳಿಗೆ ತಂದಿ ಕೇಳುತ್ತಾನೆ. ನಿಮ್ಮಮ್ಮ ಬಂದಿದ್ದಳಾ ಎಂದಾಗ ಹೌದೆನ್ನುತ್ತಾರೆ.ಹೀಗೆ ಮುಂದೆ ಮತ್ತೆ ಕೆಲವು ದಿನಗಳವರೆಗೆ ಚೆನ್ನಾಗಿ ಮಕ್ಕಳ್ನ ಮಲತಾಯಿ ನೋಡಿಕೊಳ್ಳುತ್ತಾಳೆ. ನಂತರ ಮತ್ತೆ ಮಕ್ಕಳಿಗೆ ಕಷ್ಟಕೊಡಲು ಪ್ರಾರಂಭಿಸುತ್ತಾಳೆ. ಮಕ್ಕಳನ್ನು ಕರೆದು ನೀರು ತರಲು ಸುಡಗಾಡಿನ ಇಳೆಬಾವಿಗೆ ಕಳಿಸುತ್ತಾಳೆ. ಅಲ್ಲಿ ಭಾವಿ ಬಗಲಾಗ ಅತ್ತಿಗಿಡ ಆಗಿ ಇವರ ತಾಯಿ ನಿಂತಿರುತ್ತಾಳೆ. ಬೆಳಗ್ಗೆಯಿಂದಲೂ ನೀರು ತರಲು ಹಚ್ಚುತ್ತಾಳೆ. ಮಕ್ಕಳು ನೀರು ತಂದು ಹೌದಿಗೆ ಹಾಕೆ ಹಾಕುತ್ತಾರೆ. ಹೌದಿನಲ್ಲಿ ನೀರೆ ತುಂಬೋದಿಲ್ಲ. ಮಲತಾಯಿ ಹೌದಿಗೆ ತೂತು ಹಾಕಿರುತ್ತಾಳೆ. ಮಕ್ಕಳು ಹಾಗೆ ಸಾಯಲಿ ಎನ್ನುವ ಉದ್ದೇಶ ಅವಳದಾಗಿರುತ್ತದೆ. ಗಂಡನು ಮನೆಗೆ ಬಂದಾಗ, ಮತ್ತೆ ಆತನ ಕಿವಿ ತುಂಬುತ್ತಾಳೆ. ಮತ್ತೆ ನಿನ್ನ ಹೆಂಡ್ತಿ ದೆವ್ವಾಗಿ ಬಂದಾಳ. ಮಕ್ಳು ಇದ್ದ ತೌಲಿ ತಾಯಿ ಇರ್‍ತಾಳೆ. ಅದಕ್ಕಾಗಿ ನಿನ್ನ ಮಕ್ಕಳನ್ನು ಕಾಡಿನಲ್ಲಿ ಬಿಟ್ಟು ಬಾ ಎನ್ನುತ್ತಾಳೆ. ಇಲ್ಲದಿದ್ದರೆ ನಾನು ತವರಿಗೆ ನನ್ನ ತಾಯಿ ಬಳಿ ಹೋಗಿ ಇರ್‍ತೀನಿ ಎನ್ನುತ್ತಾಳೆ. ಚಿಕ್ಕ ಮಕ್ಕಳಿಗೆ ಹೇಗೆ ಕಾಡಿನಲ್ಲಿ ಬಿಟ್ಟು ಬರಲಿ ಎಂದಾಗ ಮತ್ತೆ ಅದೇ ಮಾತನ್ನ ಮುಂದುವರಿಸುತ್ತಾಳೆ. ಹೆಂಡ್ತಿ ಕಿರಿ ಕಿರಿಗೆ ಗಂಡನು ಮಕ್ಕಳನ್ನು ಕಾಡಿನಲ್ಲಿ ಬಿಟ್ಟು ಬರಲು ಒಪ್ಪಿಕೊಳ್ಳುತ್ತಾನೆ.

ಮಲತಾಯಿ ಬುತ್ತಿಯನ್ನು ತಯಾರಿಸುತ್ತಾಳೆ. ಮಕ್ಕಳಿಗೆ - ಚಟ್ನಿ ಎಂದು ಸುಣ್ಣ ಕಟ್ಟಿ, ರಾಜನಿಗೆ - ಚಿತ್ರಾನ್ನ, ಎಳ್ಳಿನ ಉಂಡಿ ಹೀಗೆ ಗಂಡನಿಗೆ ಬೇರೆ ಬುತ್ತಿ ಕಟ್ಟುತ್ತಾಳೆ.

ಇತ್ತ ರಾಜನು ಮಕ್ಕಳ ಬಳಿ ಬಂದು , ನಿಮ್ಮಮ್ಮ ಸತ್ತು ಮೂರು ತಿಂಗಳಾಯ್ತು. ಜಾತ್ರಿಗಿ ಹೋಗೋಣ, ಅಲ್ಲಿ ನಿಮ್ಮಮ್ಮನ ತಮ್ಮ ಬರ್‍ತಾನೆ ಎಂದಾಗ, ಮಕ್ಕಳು ಸಂತೋಷ ಪಡುತ್ತಾರೆ. ಹನ್ನೆರಡು ಗಾವುದ ಆರಡಿ ಅಡವ್ಯಾಗ ನಡಕೋತ ಬರ್‍ತಾರೆ. ಆಗ ಹೊತ್ತು ಮುಣಗುತ್ತದೆ. ಹುಲಿರಾಜನಿರುವ ಸ್ಥಳಕ್ಕೆ ಬರುತ್ತಾರೆ. ಭಾವಿ ಬಳಿ ಬಂದು ಕೈಕಾಲು, ಮುಖ ತೊಳೆದು ಕೊಂಡು ಊಟ ಮಾಡಲಿಕ್ಕೆ ಬುತ್ತಿ ಬಿಚ್ಚುತ್ತಾನೆ. ಬುತ್ತೆಲ್ಲಾ ಸೆಗಣಾಗಿರ್‍ತುದೆ. ಆಗ ರಾಜನಿಗೆ ತಿಳಿಯುತ್ತದೆ. ನನ್ನ ಹೆಂಡ್ತಿ ದೆವ್ವಾಗಿದ್ದಾಳೆಂದು ಕೊಳ್ಳುತ್ತಾನೆ. ಮಕ್ಕಳ ಬುತ್ತಿ ಸೆಗಣಿ ಆಗಿದೆ, ನನ್ನ ಬುತ್ತಿ ಆಗಿಲ್ಲ. ಮಕ್ಕಳಿಗೆ ತನ್ನ ಬುತ್ತಿಯಿಂದ

ಒಂದೊಂದು ತುತ್ತು ಊಟ ಕೊಡುತ್ತಾನೆ. ಇಲ್ಲೆ ಮಲಗೋಣ ಬೆಳಿಗ್ಗೆ ಊರಿಗೆ ಹೋಗೋಣ ಎಂದು ಮಕ್ಕಳಿಗೆ ಹೇಳುತ್ತಾನೆ. ಮಕ್ಕಳು ಗಾಢ ನಿದ್ರೆಯಲ್ಲಿ ಇದ್ದಾಗ, ಮಕ್ಕಳನ್ನು ಬಿಟ್ಟು (ಕಾಡಿನಲ್ಲಿ) ಊರಿಗೆ ಹೋಗುತ್ತಾನೆ. ಮಕ್ಕಳೆದ್ದು ನೋಡಿದಾಗ ನಮ್ಮಪ್ಪನಿಗೆ ಹುಲಿ ತಿಂದಿತೆಂದು ಅಳುತ್ತಾರೆ.

ಅದೇ ಸಮಯಕ್ಕೆ ಅಡಿವಕ್ಕಮ್ಮ ನೀರಿಗೆ ಬಂದು, ಮಕ್ಕಳಿಗೆ ಕರೆದುಕೊಂಡು ತನ್ನ ಮನೆಗೆ ಒಯ್ಯುತ್ತಾಳೆ. ಆಗ ಇವರು ತನ್ನ ತಂಗಿ ಮಕ್ಕಳೆಂದು ಆಕೆಗೆ ತಿಳಿಯುತ್ತದೆ. ಒಂದು ಸೀರ್ಯಾಗ ಐದು ತುಂಡು ಮಾಡಿ ಸೀರೆ ಉಡಿಸುತ್ತಾಳೆ. ಮಕ್ಕಳು ಅಲ್ಲೇ ದೊಡ್ಡವರಾಗುತ್ತಾರೆ. ತನ್ನ ತಂಗಿ ಮಕ್ಕಳನ್ನು ಹನ್ನೆರಡು ವರ್ಷ ಜೋಪಾನ ಮಾಡುತ್ತಾಳೆ.

ಇತ್ತ ಸೂರ್ಯಬಗಲಾಗ ಪಾನಗಲ್ಲ ಪಟ್ಟದಾಗ, ದೇವಗಿರಿ ರಾಜ ಅವನಿಗೆ ನಾಗವದ್ದ ರಾಜ, ದೊಡ್ಡೀರಣ್ಣ ರಾಜ, ಸೂರ್ಯವದ್ದ ರಾಜ, ಚಂದ್ರ ವದ್ದ ರಾಜ, ಚಿಕ್ಕ ವದ್ದ ರಾಜ, ಹೀಗೆ ಏಳು ಮಂದಿ ಮಕ್ಕಳು ಇರುತ್ತಾರೆ. ಇವರೆಲ್ಲರೂ ಕೂಡಿಕೊಂಡು ಬೇಟೆಗ ಅಕ್ಕ ಮಹಾದೇವಿ ಗುಡ್ಡಕ್ಕೆ ಬರುತ್ತಾರೆ. ದಾರಿ ಮಧ್ಯೆ ಸಿರಿಗಂಧವರಾಜ ಹುಲಿಯಾಗಿ ಕಾಣುತ್ತಾನೆ. ಹುಲಿ ಬೇಟೆಯಾಡಲು ಹುಲಿ ಹಿಂದೆ ಬರುತ್ತಾರೆ. ಹುಲಿ ಮನೆಯೊಳಗೆ ಹೊಕ್ಕಿ ಮನುಷ್ಯನಾಗುತ್ತಾನೆ. ಮನೆ ಮುಂದೆ ಬಂದ, ಅಣ್ಣ - ತಮ್ಮಂದಿರು ಬೇಟೆಗಾಗಿ ಕಾಯುತ್ತಾರೆ. ಆಗ ಮನೆಯೊಳಗಿಂದ ಅಡಿವಕ್ಕಮ್ಮ ಬರುತ್ತಾಳೆ. ನನ್ನ ಗಂಡನಿಗೆ ಕಡಿಬ್ಯಾಡ್ರಿ ಎಂದು ಬೇಡುತ್ತಾಳೆ. ತನ್ನ ತಂಗಿಯ ಏಳು ಮಂದಿ ಮಕ್ಕಳನ್ನು ನಿಮಗೆ ಮದುವೆ ಮಾಡಿಕೊಡ್ತಿನಿ ಎನ್ನುತ್ತಾಳೆ. ಆಗ ರಾಜ ಕುಮಾರರು ಮದುವೆ ಮಾಡಿಕೊಂಡು ಊರಿಗೆ ಬರುತ್ತಾರೆ.

ಐದು ವರ್ಷದೊಳಗೆ ಗೌರಮ್ಮನ ಹಬ್ಬ ಬರುತ್ತದೆ. ಅಕ್ಕ - ತಂಗಿಯರು ಭಕ್ತಿಯಿಂದ ಗೌರಮ್ಮನಿಗೆ ಪೂಜೆ ಮಾಡುತ್ತಾರೆ. ಆರು ಮಂದಿಯ ಕಣ್ಣಿಗೆ ಗೌರಮ್ಮ ಕಾಣೋದಿಲ್ಲ. ಚಿಕ್ಕವಳಾದ ಬಾಲನಾಗಮ್ಮಳಿಗೆ ಕಾಣಿಸಿಕೊಂಡು ಫಲ ಕೊಡುತ್ತಾಳೆ. ಆರೂ ಅಕ್ಕ ತಂಗಿಯರಿಗೆ ಮಕ್ಕಾಗುವುದಿಲ್ಲ.

ಚಿಕ್ಕ ತಂಗಿ ಬಾಲ ನಾಗಮ್ಮಳಿಗೆ ಶನಿವಾರದ ಹಗಲು ಹನ್ನೆರಡಕ್ಕೆ ಮಗನು ಹುಟ್ಟುತ್ತಾನೆ. ಬಾಲ ನಾಗಮ್ಮ ಚಿಕ್ಕವದ್ದರಾಜನ ಮಗ - ಬಾಲವದ್ಧ ರಾಜ ಎಂದು ಮಗುವಿಗೆ ನಾಮಕರಣ ಮಾಡುತ್ತಾರೆ.

ಹೀಗಿರಲು ಒಂದು ದಿನ ದಂಡಿ ಕೋಟದಿಂದ ಪಾನಗಲ್ಲ ವದ್ದಿ ಮುನಿರಾಜನಿಗೆ ಪತ್ರ ಬರುತ್ತದೆ. ಆಗ ಏಳು ಮಂದಿ ಅಣ್ಣ ತಮ್ಮಂದಿರು ಯುದ್ಧಕ್ಕೆ ಹೋಗುತ್ತಾರೆ. ಮನೆಯಲ್ಲಿ ಬಾಲನಾಗಮ್ಮ ಬಾಣಂತಿಯಾಗಿ ಹಸುಕಂದನೊಂದಿಗೆ ಇರುತ್ತಾಳೆ. ರಾಕ್ಷಸನಾದ ಮಾಯಾ ಮರಾಠ ಜಂಗಮ ವೇಷದಿಂದ ಪಾನಗಲ್ಲಿಗೆ ಮಂತ್ರ ಬರೆಯಲು ಬರುತ್ತಾನೆ. ಬಾಲನಾಗಮ್ಮನ ಅಕ್ಕಂದಿರೆಲ್ಲರೂ ಒಂದು ಮನೆಯಲ್ಲಿ ವಾಸವಾಗಿರುತ್ತಾರೆ. ತಂಗಿ ಬೇರೆ ಮನೆಯಲ್ಲಿ ಒಂಟಿಯಾಗಿ, ಮಗುವಿನೊಂದಿಗೆ ಇರುತ್ತಿರುತ್ತಾಳೆ. ಈ ಸಂದರ್ಭದಲ್ಲಿ ಗಂಡನು ಇರುವುದಿಲ್ಲ. ಆಗ ಜಂಗಮ ವೇಷಧಾರಿ ಬಾಲನಾಗಮ್ಮನ ಮನೆಗೆ ಭಿಕ್ಷೆ ಬೇಡಲು ಬರುತ್ತಾನೆ. ಮುಸ್ಲಿಂ ಭಾಷೆಯಲ್ಲಿ , ಮರಾಠಾ ಭಾಷೆಯಲ್ಲಿ ಧರ್ಮ ಭಿಕ್ಷೆ ಕೇಳುತ್ತಾನೆ. ನಾಗಮ್ಮನಿಗೆ ಅರ್ಥವಾಗುವುದಿಲ್ಲ. ನಂತರ ಕನ್ನಡದಲ್ಲಿ ಭಿಕ್ಷೆ ಕೇಳುತ್ತಾನೆ. ಮನೆಯೊಳಗಿಂದಲೇ ನಾಗಮ್ಮ ಈ ರೀತಿ ಹೇಳುತ್ತಾಳೆ. "ನಾನು ಸೂರ್ಯನ ಮುಖ ನೋಡುವ

ಹಾಗಿಲ್ಲ. ಮನೆಯಲ್ಲಿ ಗಂಗಮ್ಮನ ಪೂಜೆ ಮಾಡೋತನಕ ನಾವು ಹೊರಗೆ ಬರಬಾರದು, ಹಾಗೆ ಭಿಕ್ಷೆ ನೀಡಬಾರದು" ಎಂದು ಜಂಗಮನಿಗೆ ಹೇಳುತ್ತಾಳೆ.

ಆಗ ಮಾಯಾ ಮರಾಠರು ಹೀಗೆ ಉತ್ತರಿಸುತ್ತಾನೆ. ನಾನು ಕೊಡಲಾರದೆ ನಿನಗೆ ಮಗ ಹುಟ್ಟಿದ್ನ, ಮಗ ಹುಟ್ಲಾರ್ದೆ ತೊಟ್ಲ ಕಟ್ಟಿದಿಯಾ. ಕೊಟ್ಟಿದ ದೇವ್ರನ ನಡಿಕೊಬೇಕು. ಎಂದಾಗ ಬಾಲನಾಗಮ್ಮ ಇಲ್ಲ ಸ್ವಾಮಿ ನನ್ನ ಅಕ್ಕೋರ ಮನಿಗಿ ಹೋಗೆನ್ನುತ್ತಾಳೆ.

ಆಗ ಮಾಯಾ ಮರಾಠ : ನಾನು ಬಂಜಿ ಇರುವವರ ಕೈಲೆ ಭಿಕ್ಷಾ ತೆಗೆದು ಕೊಂಡು ಉಣೋದಿಲ್ಲ. ನಿನ್ನ ಕೈಲೆನೇ ಭಿಕ್ಷೆ ಬೇಕೆನ್ನುತ್ತಾನೆ. ಇಲ್ಲಾಂದರೆ ನಿನಗೆ ಶಾಪ ಕೋಡ್ತಿನಿ. ತೊಟ್ಲಾಗಿರೋ ಮಗ ಸಾಯ್ಲಿ.

ನೀವು ಏಳು ಮಂದಿ ಅಕ್ಕ - ತಂಗಿಯರು ರಂಡೆಯರಾಗಿರಿ ಎನ್ನುತ್ತಾನೆ. ಹಾಗೆ ಶಾಪ ಕೊಡಬ್ಯಾಡ್ರಿ ಎಂದು ಹೊರಗೆ ಬಂದು ಭಿಕ್ಷೆ ನೀಡುತ್ತಾಳೆ.

ಬಂಗಾರದ ಮರದಾಗ ಅಕ್ಕಿ, ಬ್ಯಾಳಿ ತರುತ್ತಾಳೆ. ಜಂಗಮ ಗೆರೆ ಹಾಕುತ್ತಾನೆ. ಗೆರೆ ಒಳಗೆ ನಿಲ್ಲುತ್ತಾಳೆ. ತನ್ನ ಜೋಳಗಿಯನ್ನು ತೆರೆಯುತ್ತಾನೆ. ಮರದಾಗಿನ ಅಕ್ಕಿ ಹಾಕುವಾಗ ಜೋಳಗಿಯನ್ನು ಮುಚ್ಚುತ್ತಾನೆ. ಮರದಾಗಿನ ಅಕ್ಕಿ ನೆಲಕ್ಕೆ ಚೆಲ್ಲುತ್ತದೆ. ಆಗ ನಾಗಮ್ಮ ಕೆಳಗೆ ಬಗ್ಗಿದಾಗ ಕರೆ ಕೋಲಿಂದ ನಾಗಮ್ಮನ ಬೆನ್ನ ಮ್ಯಾಲೆ ಇಡುತ್ತಾನೆ. ಆಗ ಬಾಲನಾಗಮ್ಮ ಕರೆ ನಾಯಿಯಾಗುತ್ತಾಳೆ. ನಾಯಿಯಾಗಿ ಮಗನನ್ನು ನೋಡಿ ಅಳುತ್ತಾಳೆ. ನಾಲಿಗೆಯಿಂದ ತಲೆಗೆ ಎಣ್ಣಿ ಹಚ್ಚುತ್ತಾಳೆ.

ಮಾಯಾ ಮರಾಠನು ಬಾಲನಾಗಮ್ಮನನ್ನು ನಾಯಿಯನ್ನಾಗಿ ಮಾಡಿಕೊಂಡು ತನ್ನ ಜೊತೆಗೆ ಕರೆದು ಕೊಂಡು ಹೋಗುವ ಮುಂಚೆ ಮನೆಯ ಬಾಗಿಲು ಮೇಲೆ ಈ ರೀತಿಯಾಗಿ ಸಂದೇಶ ಬರೆಯುತ್ತಾನೆ. ಬಾಲ ನಾಗಮ್ಮಳಿಗೆ ನಾಯಿ ಮಾಡಿ ಒಯ್ಯುತ್ತಿದ್ದೇನೆ. ಹುಡಕಲು ಯಾರು ಬರಬ್ಯಾಡಿ - ಎನ್ನುವ ಸಂದೇಶ ಬರೆದಿಡುತ್ತಾನೆ. ಹಾಗೆ ನಾಯಿಯೊಂದಿಗೆ ಊರ ಬಿಟ್ಟು ಹೊರಗೆ ಹೋಗುವ ಸಮಯದಲ್ಲಿ ಬೆಳ್ಳಗಿನ ಕೋಲು ನಾಯಿಯ ತಲೆ ಮ್ಯಾಲೆ ಇಟ್ಟಾಗ, ನಾಯಿ ಬೂದಿಯಾಗುತ್ತದೆ. ತನ್ನ ಜೋಳಗಿಯೊಳಗೆ ಬೂದಿಯನ್ನು ತುಂಬಿಕೊಂಡು ತಳವಾರನ ಕಡೆಗೆ ಬಂದು ಬೆಳ್ಳಿ ಪಾದ ತಟ್ಟಿಕೊಂಡು, ಜೈಪಾತಾಳದೀ ಜೈ ಎಂದು ತನ್ನ ಗುಡ್ಡಕ್ಕೆ ಬರುತ್ತಾನೆ.

ಬಂದ ನಂತರ ಜೋಳಗಿಯೊಳಗಿಂದ ಬೂದೆಲ್ಲ ಗುಂಪಾಕಿ, ಉದ್ದ ಮಾಡಿ 60 ಸೂತ್ರ ಬರೆಯುತ್ತಾನೆ. ನಾಗರ ಕೋಲಿನಿಂದ ಮತ್ತೆ ನಾಗಮ್ಮ ಮಾಡುತ್ತಾನೆ. ಆಗ ನಾಗಮ್ಮ ಮಾಯಾ ಮರಾಠನಿಗೆ ನೀನು ಧರ್ಮ ಅಂತ ಬಂದೆ, ನಾನು ಕರ್ಮ ಮಾಡಲಿಕ್ಕೆ ಬಂದ್ರೆ ನನ್ನನ್ನು ಕರೆ ನಾಯಿನ ಮಾಡ್ದೆ ಎಂದು ಬೈಯುತ್ತಾಳೆ. ಆಕೆಯನ್ನು ಗವ್ಯಾಗ ಇಟ್ಟು ಅಡ್ಡ ಗುಂಡ ಅದಕ್ಕೆ ಹಚ್ಚಿ ಹೋಗುತ್ತಾನೆ.

ಇತ್ತ ತೊಟ್ಟಿಲದಿಂದ ಮಗು ಕೆಳಗೆ ಬಿದ್ದು ಅಳುತ್ತಿರುತ್ತದೆ. ಮಗುವಿನ ಅಳುಧ್ವನಿಯನ್ನು ಕೇಳಿ ದೊಡ್ಡಮ್ಮಂದಿರು ಓಡಿ ಬಂದು, ಮಗುವನ್ನು ಎತ್ತಿ ಕೊಳ್ಳುತ್ತಾರೆ. ಬಾಗಿಲು ಮೇಲೆ ಬರೆದ

ಸಂದೇಶವನ್ನು ಓದುತ್ತಾರೆ. ಎಲ್ಲಾ ವಿಷಯವನ್ನು ಒಂದು ಚೀಟಿಯಲ್ಲಿ ಬರೆದು ಗಿಳಿ ಕೊಳ್ಳಿಗೆ ಕಟ್ಟಿ ದಂಡಿಕೋಟೆಗೆ ಕಳಿಸುತ್ತಾರೆ. ವದ್ದಿನರಾಜನ ಮುಂದೆ ಗಿಳಿ ಇಳಿಯುತ್ತದೆ. ಪತ್ರದಲ್ಲಿ ಮಾಯಾ ಜಂಗಮ ಬಂದು, ನಮ್ಮ ಬಾಣಂತಿಗೆ ಒಯ್ದಿದ್ದಾನೆ ಎಂಬ ವಿಷಯವನ್ನು ತಿಳಿದು ಯುದ್ಧವನ್ನು ಅರ್ಧಕ್ಕೆ ಬಿಟ್ಟು ಹಾಗೆ ಏಳು ಗುಡ್ಡಕ್ಕೆ ಹೋಗುತ್ತಾರೆ.

ಬೆಳ್ಳಿ ಗುಡ್ಡ, ಬಂಗಾರ ಗುಡ್ಡ, ಮಾಯಾ ಗುಡ್ಡ ಹೀಗೆ ಏಳು ಗುಡ್ಡವನ್ನು ದಾಟಿ ಮಾಯಾ ಮರಾಠನ ಬಳಿ ಹೋಗುತ್ತಾರೆ. ನನ್ನ ಹೆಂಡ್ತಿ ಎಲ್ಲೆಂದು ಕೇಳಿದಾಗ ನಿಮ್ಮ ಹೆಂಡ್ರಿನ ತರವಾಗ ಎಲ್ಲಿ ಹೋಗಿದ್ರಿ ಎನ್ನುತ್ತಾನೆ. ಯುದ್ಧಕ್ಕೆ ಹೋಗಿದ್ವಿ ಎನ್ನುತ್ತಾರೆ. ನಿನ್ನ ಹೆಂಡ್ರಿನ ಕೊಡೊದಿಲ್ಲವೆಂದಾಗ ತಲವಾರದಿಂದ ಹೊಡೆಯಲು ಹೋಗುತ್ತಾರೆ. ಕೈಯಲ್ಲಿದ್ದ ತಲವಾರುಗಳು ಮುರಿಯುತ್ತವೆ. ಬೆಂಕಿ ಹಚ್ಚುತ್ತೇವೆನ್ನುತ್ತಾರೆ. ರಾಕ್ಷಸನು ಕೈಯಲ್ಲಿದ್ದ ಝುಂಡಾದಿಂದ ತಿರುಗಿಸುತ್ತಾನೆ. ಆಗ ಏಳು ಮಂದಿ ಅಣ್ಣ ತಮ್ಮಂದಿರು ಕಲ್ಲು ಗುಂಡುಗಳಾಗುತ್ತಾರೆ. ರಾಕ್ಷಸನೇ ಈ ರೀತಿಯಾಗಿ ಪತ್ರ ಬರೆಯುತ್ತಾನೆ. ನಾವು ಕಲ್ಲಾಗಿವಿ ನೀವೆ ರಾಜ್ಯವಾಳಿ, ಮಗ ಸತ್ತೋದ್ರೆ ಬಿಸಾಕಿ ಎಂದು ಗಿಳಿ ಕೊಳ್ಳಿಗೆ ಕಟ್ಟಿ ಕಳಿಸುತ್ತಾನೆ.

ಗಿಳಿ ಪತ್ರದೊಂದಿಗೆ ಅಕ್ಕನವರ ಬಳಿ ಬರುತ್ತದೆ. ಓದಿ ಎಲ್ಲರೂ ದುಃಖ ಪಡುತ್ತಾರೆ. ಹೊಳಿ ದಂಡಿಗೆ ಬಂದು ಎಡಕ್ಕೆ ಅರ್ಧ ಬಳೆ ತೆಗೆದು ಅರ್ಧ ಉಳಿಸುತ್ತಾರೆ. ಹೆಣ್ಣು ಮಕ್ಕಳೇ ರಾಜ್ಯವನ್ನು ಆಳುತ್ತಾರೆ. ಹೊಳೆ ದಂಡಿಗೆ ತಂದು ಮಗುವನ್ನು ಒಗಿಯುವ ಸಂದರ್ಭದಲ್ಲಿ ಆರಾರ ಶೆಶಮ್ಮ ನೋಡಿ ನೀವು ಈ ಮಗುವನ್ನು ಸಾಕುವುದಿಲ್ಲವೆಂದರೆ ನನ್ನ ಉಡಿಯೊಳಗೆ ಹಾಕಿರೆನ್ನುವಳು . ಆಕೆಗೆ ಮಗುವನ್ನು ಕೊಡುತ್ತಾರೆ. ನಂತರ ಊರಿಗೆ ಬಂದು ಅಗಸಿ ಬಾಗಿಲಿಗೆ ಇದು ರಂಡೆ ಪಾನಗಲ್ಲ ಪಟ್ಣ ಎಂದು ಬೋರ್ಡು ಬರೆದು ಹಾಕುತ್ತಾರೆ.

ಮೂರು ದಿನಗಳು ಶೆಶಮ್ಮ ಕೂಸಿಗೆ ಹಾಲು ಹಾಕುತ್ತಾಳೆ. ಮೂರು ದಿವಸ ಇತ್ತ ಮಗುವಿನ ದೊಡ್ಡಮ್ಮಂದಿರು ಊಟಾ ಮಾಡೊದಿಲ್ಲ. ಗಂಡಸರು ಉಂಬಾತನಕ ಉಣಬಾರದು ಎಂಬ ನಿಯಮ ಪಾಲಿಸುತ್ತಾರೆ.

ತಮ್ಮ ಮನೆತನದಲ್ಲಿ ಉಳಿದ ಗಂಡು ಅಂದರೆ, ಮಗುವೊಂದೆ ಎಂದು ನೆನಪಾಗಿ ಮಗುವನ್ನು ತರಲು ಶೆಶಮ್ಮನ ಬಳಿ ಹೋಗುತ್ತಾರೆ. ಮಗುವನ್ನು ನಮಗೆ ಕೊಟ್ಟು ಬಿಡು ಎಂದಾಗ ಶೆಶಮ್ಮ ನಿರಾಕರಿಸುತ್ತಾಳೆ. ಕೊನೆಗ ಮಗುವನ್ನು ಅವರಿಗೆ ಒಪ್ಪಿಸುತ್ತಾಳೆ.

ಆರು ಮಂದಿ ದೊಡ್ಡಮ್ಮಂದಿರು ಮಗುವನ್ನು ಹನ್ನೆರಡು ವರ್ಷ ಜೋಪಾನ ಮಾಡುತ್ತಾರೆ. ಒಂದು ದಿವಸ ಮಗು ಬಗರಿ ಆಡುವ ಸಮಯದಲ್ಲಿ ದಾರಿಯಲ್ಲಿ ಹೋಗುವ ಮುದ್ಯಾಕಿ ಪಾದಕ್ಕೆ ಬಗರಿ ಹೋಗಿ ಬೀಳುತ್ತದೆ. ಆಗ ಆಕೆಯು ನೀನು ಹುಟ್ಟಿದ ದಿವಸವೇ ನಿನ್ನ ತಾಯಿಯನ್ನು ಮಾಯಾ ಮರಾಠ ನಾಯಿ ಮಾಡಿ ಒಯ್ದ . ನಾನು ಮೂರು ದಿವಸ ನಿನ್ನನ್ನು ಜೋಪಾನ ಮಾಡ್ದೆ. ಊರಾಗಿದ್ದ ಗಂಡಸರನ್ನೆಲ್ಲಾ ಕೊಲ್ಲು ಮಾಡಿಸಿದ್ದಿ. ನಿನಗೆ ತಂದೆ ಇದ್ದಾನೆಂದು ಹೇಳುತ್ತಾಳೆ. ಹಾಗೆ ವಜ್ರದ ಉಂಗುರ ಕೊಡುತ್ತಾಳೆ. ಮಗ ಮನಿಗೆ ಬರುತ್ತಾನೆ. ಬಂದವನೆ ತನ್ನ ದೊಡ್ಡಮ್ಮಂದಿರಿಗೆ ನನ್ನ ಅಪ್ಪ - ಅಮ್ಮ ಎಲ್ಲೆಂದು ಕೇಳುತ್ತಾನೆ. ಅವರು ನಡೆದ ಎಲ್ಲಾ ಸಂಗತಿಯನ್ನು ವಿವರವಾಗಿ ವಿವರಿಸುತ್ತಾರೆ. ನಾನು ಆ

ಗುಡ್ಡಕ್ಕೆ ಹೋಗುತ್ತೇನೆಂದಾಗ, ತಾಯಂದಿರು ನೀನು ಚಿಕ್ಕವನು ಅಲ್ಲಿಗೆ ಹೋಗಬೇಡ. ಆತ ರಾಕ್ಷಸನು ಅಪಾಯವಾಗುತ್ತದೆ. ಬೇಡ ಹೋಗೊದು ಎಂದಾಗ ಇಲ್ಲ ನಾನು ಹೋಗಿ ಅಪ್ಪಾ - ಅಮ್ಮನ ಬಿಡಿಸಿ ಕೊಂಡು ಬರುತ್ತೇನೆ ಎಂದು ಹೇಳಿದಾಗ ದೊಡ್ಡಮ್ಮಂದಿರು ಮಗನಿಗೆ ಹೀಗೆ ಕೇಳುತ್ತಾರೆ - ನೀನು ಸತ್ರೆ ನಮಗೆ ಹೇಗೆ ತಿಳಿಯುತ್ತದೆ ಎಂದಾಗ ಮಗ ಎರಡು ಬೊಗಸಿ ಮಣ್ಣು ತೆಗೆದು ಮಲ್ಲಿಗೆ ಹೂವಿನ ಬೀಜ ಹಾಕಿನಿ, ಆ ಗಿಡಕ್ಕ ದಿನಾ ನೀರ ಹಾಕ್ರಿ, ಅದು ಬೆಳದು ದೊಡ್ಡದಾಗಿ ಹಚ್ಚಗಿದ್ರ ನಾ ಬದಕ್ತೀನಿ. ಆ ಗಿಡ ಬಾಡಿದ್ರ ನಾ ಸಾಯ್ತಿನಿ. ಆ ಗಿಡ ಬೆಳದ್ರ ಗಿಡಕ್ಕೆ ನೀವು ಪೂಜೆ ಮಾಡಿ ಊಟ ಮಾಡ್ರಿ ಎಂದು ಹೇಳಿ ಹನ್ನೆರಡು ವರ್ಷದ ಬಾಲಕನು ತನ್ನ ತಂದೆ - ತಾಯಿಯನ್ನು ಹುಡುಕಲು ಹೊರಡುತ್ತಾನೆ. ಹನ್ನೆರಡು ಗಾವುದ ಭೂಪತ ಮಹಾರಾಜನ ಪಟ್ಟಕ್ಕೆ ಬಂದು , ಜಗದಂಬಾ ಮಠದಲ್ಲಿ ಕೂಡುತ್ತಾನೆ. ಆ ಪಟ್ಣದಲ್ಲಿ ಹುಲಿ ಕಾಟ ಜಾಸ್ತಿಯಾಗಿರುತ್ತದೆ. ಆರು ಗಂಟೆಗೆ ಸರಿಯಾಗಿ ಆ ಮಠಕ್ಕೆ ಹುಲಿ ಬರುತ್ತದೆ. ಹುಲಿಯನ್ನು ಕಡ್ದು ಅಗಸಿ ಮ್ಯಾಲೆ ಕುಂಡ್ರಿಸಿದಾ ಊರಿನ ನಾಯಕ ಹನುಮಕ್ಕ ನ ಮಗ ಹಣಮಂತನು ನಾನೇ ಹುಲಿಯನ್ನು ತಿವಿದೆ ಹುಲಿ ಸತ್ತಿತು. ಹುಲಿಯನ್ನು ಕಡಿದಿದ್ದು ನಾನೇ ಎನ್ನುತ್ತಾನೆ.

ರಾಜನು ಬಾಲವುದ್ದ ರಾಜನಿಗೆ ತನ್ನ ಮಗಳಾದ ಮಾಣಿಕಮ್ಮಳನ್ನು ಆತನಿಗೆ ಕೊಟ್ಟು ಮದುವೆ ಮಾಡುತ್ತಾನೆ. ರಾಜನು ಅಡಗಿ ಮಾಡುವ ಶಾಸ್ತ್ರಿ ಜೊತೆ ಮಾಡಿ ಮದುಮಕ್ಕಳನ್ನು ಅವನ ಜೊತೆಗೆ ಕಳಿಸುತ್ತಾನೆ. ಗಾವುದ ಬಂದ ಮ್ಯಾಲೆ ಸೆದೋ ಭಾವಿ ಕಾಣಿಸುತ್ತದೆ. ನೀರಡಿಕೆಯಾಗಿ , ನೀರು ಕುಡಿಯುತ್ತಾರೆ. ಬಾವಿಯಲ್ಲಿ ಬಾಲವುದ್ದ ರಾಜನನ್ನು ಬಿಟ್ಟು ಹೋಗುತ್ತಾನೆ.

ಕುಸುಮಗಿರಿ ಪಟ್ನಕ್ಕೆ ಅಡಿಗೆಯವನು ಹೋಗುತ್ತಾನೆ. ಅಲ್ಲಿ ರಾಜನ ಮಗಳಿಗೆ ಎಡಗಾಲಿನ ಹೆಬ್ಬಟ್ಟಿಗೆ ಹುಣ್ಣು ಆಗಿರುತ್ತದೆ. ಆರಾರ ಶೇಶಪ್ಪನು ಮನೆಗೆ ಬಂದು, ನಾನು ಹುಣ್ಣು ಸರಿ ಮಾಡ್ತಿನಿ ಎನ್ನುತ್ತಾನೆ. ಇತ್ತ ಬ್ಯಾಟಿ ಮಾರ್ಗದಲ್ಲಿ ಹೋಗುವವರು ಭಾವಿಯಿಂದ ಬಾಲವದ್ದ ರಾಜನನ್ನು ತೆಗೆಯುತ್ತಾರೆ. ಆಗ ಕುಸಮ ಗಿರಿಗೆ ಬರುತ್ತಾನೆ. ಕುಸುಮಗಂದೆ ಸಾಯುತ್ತಾಳೆ. ಬಾಲವದ್ದ ರಾಜ ಅಲ್ಲಿಗೆ ಬಂದು ಗಿಡದ ತಪ್ಪಲ ರಸದಿಂದ ಆಕೆಯನ್ನು ಸರಿ ಮಾಡಿ ಮದುವೆ ಮಾಡಿಕೊಂಡು ತನ್ನ ಜೊತೆ ಕರೆದುಕೊಂಡು ಹೋಗುತ್ತಾನೆ.

ಜೀರಗಿರ ಸುಬ್ಬಮ್ಮ ಎಂಬುವವಳು ಹೂ ಮಾರುವವಳು. ಅವಳು ದಿನಾಲು ಫಕೀರನ ಸೂಳೆಗೆ ಹೂ ಒಯ್ದು ಕೊಡುತ್ತಿರುತ್ತಾಳೆ. ಅದಕ್ಕಾಗಿ ಹದಿನಾರು ಮಳ ಸೀರೆ ಹೆಣೆದು , ಕುಪ್ಪಸ ಎಲ್ಲಾ ಕೊಟ್ಟು ಅವನಿಗೆ (ಫಕೀರನಿಗೆ) ಒಂದು ಪುಟ್ಟಿ, ನಾಗಮ್ಮನಿಗೊಂದು ಪುಟ್ಟಿ ತಯಾರಿಸುತ್ತಾಳೆ. ತಾಯಿಯ ಸೀರೆಗೆ ಉಂಗುರ ಕಟ್ಟುತ್ತಾನೆ. ಪುಟ್ಟಿಯನ್ನು ಒಯ್ದು ಜಿರಗಿರ ಸುಬ್ಬಮ ನಾಗಮ್ಮನಿಗೆ ಸೀರೆ ಉಡಿಸುತ್ತಾಳೆ. ಸೀರೆಗೆ ಕಟ್ಟಿದ ಉಂಗುರ ನೋಡಿ ನಾಗಮ್ಮ ದುಃಖಿಸುತ್ತಾಳೆ. ಫಕೀರ ಬರುತ್ತಾನೆ. ಬಂದವನೇ ನಾಗಮ್ಮನಿಗೆ ನನ್ನನ್ನು ಮದುವೆಯಾಗೆನ್ನುತ್ತಾನೆ. ಅದಕ್ಕೆ ನಾಗಮ್ಮ ನಿನ್ನನ್ನು ಧಗ್ನೆ ಉರಿಸ್ತೀನಿ ಎಂದಾಗ ಮತ್ತೆ ಆಕೆಯನ್ನು ಬೂದಿ ಮಾಡುತ್ತಾನೆ. ಆಕೆಯನ್ನು ಕಾಯಲಿಕ್ಕೆ ದೆವ್ವಗಳನ್ನು ಇರಿಸುತ್ತಾನೆ.

ತಾಯಿಯನ್ನು ಹುಡುಕುತ್ತಾ ಬಾಲುವದ್ದ ರಾಜನು ಸ್ಥಳಕ್ಕೆ ಬರುತ್ತಾನೆ. ಗುಂಡ ತೆಗೆದು ಗುಹೆ ಒಳಗೆ ಬಂದು ಬೂದಿಯನ್ನು ತೆಗೆದು ಕೊಲ ಮಾಡಿ, ಮುಖ ಮಾಡಿದಾಗ ನಾಗಮ್ಮ

ಆಗುತ್ತಾಳೆ. ತಾಯಿ ಆತನ ಮುಖ ನೋಡೊದಿಲ್ಲ. ಈತನು ಕೂಡ ಮಾಟಗಾರನೆಂದು ಕೊಳ್ಳುತ್ತಾಳೆ. ಮಗನು ತನ್ನ ತಾಯಿಗೆ ನಾನೇ ನಿನ್ನ ಮಗನೆಂದು ಸಾರಿ ಸಾರಿ ಹೇಳಿದರೂ ಆಕೆ ನಂಬೋದಿಲ್ಲ. ಬೊಗಸಿ ತುಂಬ ಮೊಲೆ ಹಾಲು ಮಗನ ಕೈಗೆ ಬಿದ್ದಾಗ ಹನ್ನೆರಡು ವರುಷದ ಮಗ ಹಾಲನ್ನು ಕುಡಿಯುತ್ತಾನೆ. ಆಗ ತಾಯಿಯು ಮಗನನ್ನು ಅಪ್ಪಿ ಮುದ್ದಾಡುತ್ತಾಳೆ. ತಾಯಿ ಮಗನಿಗೆ ನಡೆದ ಎಲ್ಲ ವಿಷಯಗಳನ್ನು ಸವಿಸ್ತಾರವಾಗಿ ತಿಳಿಸುತ್ತಾಳೆ. ತಾಯಿಗೆ ಮಗನು ಉಪಾಯವೊಂದನ್ನು ಹೇಳಿ ಹೇಗಾದರೂ ಮಾಡಿ ರಾಕ್ಷಸನ ಜೀವ ಎಲ್ಲಿದೆ ಎಂಬುದನ್ನು ತಿಳಿದುಕೊಳ್ಳೆಂದು ಹೇಳಿ ಹೋಗುತ್ತಾನೆ.

ರಾಕ್ಷಸನು ಬರುತ್ತಾನೆ. ನಾಗಮ್ಮನಿಗೆ ಮತ್ತೆ ನೀನು ನನಗೆ ಮದುವೆಯಾಗುತ್ತಿಯಾ ಎಂದು ಕೇಳಿದಾಗ ಮೂರು ದಿವಸ ಆದ ನಂತರ ಗೌರಮ್ಮನ ಹಬ್ಬ ಮಾಡಿ, ನಾನು ನಿನ್ನ ಜೊತೆ ಮದುವೆ ಆಗ್ತೀನಿ ಎನ್ನುತ್ತಾಳೆ. ಇದರಿಂದ ಸಂತೋಷಗೊಳ್ಳುತ್ತಾನೆ. ಹಾಗೆ ಸವಿ ಸವಿಯಾಗಿ ನಾಗಮ್ಮ ಮಾತನಾಡುತ್ತ ರಾಕ್ಷಸನಿಗೆ ನಿನ್ನ ಜೀವ ಎಲ್ಲೈತೆ ಎನ್ನುತ್ತಾಳೆ. ನಿಸ್ಸಂದೇಹವಾಗಿ ಅವಳನ್ನು ನಂಬಿ ರಾಕ್ಷಸನು ಹೀಗೆ ಹೇಳುತ್ತಾನೆ. ಏಳು ಸಮುದ್ರದಾಚೆ ಸಾವಿರ ಬಣ್ಣದ ಗಿಳಿ ಅದು ಸತ್ರೆ ನಾನು ಸಾಯ್ತಿನಿ ಎಂದು ವಿವರಿಸುತ್ತಾನೆ. ಮತ್ತೆ ನಾಗಮ್ಮನನ್ನು ಬೂದಿ ಮಾಡಿ ಹೋಗುತ್ತಾನೆ.

ಮರುದಿನ ಮಗ ಬಂದಾಗ ಎಲ್ಲಾ ವಿಷಯ ತಿಳಿಸುತ್ತಾಳೆ. ಏಳು ಸಮುದ್ರ ಕಡೆ ಬಾಲವದ್ದ ರಾಜ ಬರುತ್ತಾನೆ. ಆಲದ ಮರದ ಮೇಲೆ ಕುಳಿತಿದ್ದಾಗ , ನಾಗರ ಹಾವು ಕಡಿಯುತ್ತದೆ. ಪಕ್ಷಿಗಳು ಆತನನ್ನು ಎಬ್ಬಿಸುತ್ತವೆ. ಪಕ್ಷಿಗಳ ಮೇಲೆ ಕುಳಿತು ಏಳು ಗುಡ್ಡಕ್ಕೆ ಹೋಗುತ್ತಾನೆ. ಅಲ್ಲಿ ಗಿಳಿಯನ್ನು ಹಿಡಿದು ರೆಕ್ಕೆ, ಕಾಲು ಕಟ್ಟಿ ಕೈಚೀಲದಲ್ಲಿ ಕಟ್ಟಿಕೊಂಡು ಗುಹೆಗೆ ಬರುತ್ತಾನೆ. ತನ್ನ ತಾಯಿ ಬಳಿ ಗಿಳಿ ಕೈ - ಕಾಲುಗಳನ್ನು ಒಂದೊಂದೆ ಮುರಿದು ರಾಕ್ಷಸನ ಮುಂದೆ ಬೆಂಕಿಗೆ ಹಾಕುತ್ತಾನೆ. ನಮ್ಮ ತಾಯಿ ತಂದಿನ ಬದುಕಿಸು ಇಲ್ಲಂದ್ರೆ ನಿನ್ನನ್ನು ಕೊಲ್ಲುತ್ತೇನೆ ಎಂದಾಗ ರಾಕ್ಷಸನು ಬಾಲ ವದ್ದರಾಜನ ತಾಯಿ - ತಂದೆಯರನ್ನು ಎಬ್ಬಿಸುತ್ತಾನೆ. ನಂತರ ಆತನನ್ನು ಬೆಂಕಿಗೆ ಹಾಕುತ್ತಾನೆ. ಹೀಗೆ ಫಕೀರನ ಅಂತ್ಯವಾಗುತ್ತದೆ.

ಬಾಲವದ್ದ ರಾಜನನ್ನು ತಮ್ಮ ಮಗನೆಂದು ತಿಳಿದು ಎಲ್ಲರಿಗೂ ಸಂತೋಷವಾಗುತ್ತದೆ. ಮಗನೇ ನಮ್ಮೆಲ್ಲರ ಪ್ರಾಣ ಉಳಿಸಿದನೆಂದು ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಹೀಗೆ ತನ್ನ ತಾಯಿ ತಂದೆ ದೊಡ್ಡಪ್ಪರನ್ನು ಬದುಕಿಸಿಕೊಂಡು ಜೊತೆಗೆ ತನ್ನ ಇಬ್ರು ಹೆಂಡ್ತಿಯರೊಂದಿಗೆ ಪಟ್ನಕ್ಕೆ ಬರುತ್ತಾನೆ. ದೊಡ್ಡಮ್ಮಂದಿರು ತಮ್ಮ ಗಂಡಂದಿರನ್ನು ಕಂಡು ಅತಿ ಸಂತೋಷಗೊಳ್ಳುತ್ತಾರೆ. ಹೀಗಿರಲು ಕುಲದ ಹೆಣ್ಣನ್ನು ತೆಗೆದು ಮಗನಿಗೆ ಮದುವೆ ಮಾಡುತ್ತಾರೆ. ಕೊನೆಗೆ ಈ ದುಷ್ಟ ಲೋಕ ನಮಗೆ ಬೇಡ. ಇಲ್ಲಿ ಇಷ್ಟು ಕಷ್ಟ ಪಟ್ಟಿದ್ದಿವಿ ಅದಕ್ಕಾಗಿ ಎಲ್ಲರೂ ದೇವ ಲೋಕಕ್ಕೆ ಹೋಗಿ ಬಿಡುತ್ತಾರೆ.

2.7- ಬಲಿಚಕ್ರವರ್ತಿ ರಾಜನ ಕಾವ್ಯ *:

ಕಾಶಿ ಎಂಬ ಪಟ್ಟಣದಲ್ಲಿ ಕಾಶಿರಾಜ. ಇವನ ಮನೆದೇವು ಕಾಳಿಕಾದೇವಿ. ಕಟ್ಟು ನಿಟ್ಟಿನ ದೇವಿಯಾಗಿರುತ್ತಾಳೆ. ಕಾಶಿರಾಜ ಭಕ್ತಿಯಿಂದ ಕಾಳಿಕಾ ದೇವಿಯನ್ನು ಪೂಜಿಸುತ್ತಾನೆ. ಇವನ ಭಕ್ತಿಗೆ ಮೆಚ್ಚಿ ದೇವಿಯು ಮಗನನ್ನು ವರವಾಗಿ ನೀಡುತ್ತಾಳೆ. ಮಗನಿಗೆ ಬಲಿಚಕ್ರವರ್ತಿ ಎಂದು ನಾಮಕರಣ ಮಾಡುತ್ತಾರೆ. ಪ್ರೀತಿಯಿಂದ ಮಗನನ್ನು ಜೋಪಾನ ಮಾಡುವರು. ಓದು, ಬರಹ ಕಲಿಸುವರು. ಮಗನಿಗೆ ಹನ್ನೆರಡು ವರುಷವಿರುವಾಗಲೇ ಪಟ್ಟಾಭಿಷೇಕ ಮಾಡುವರು. ರಾಜನು ಚಂದಕ್ಕೆ ತನ್ನ ಮನೆ ಮಾಳಿಗಿ ಮೇಲೆ ಕಬ್ಬಿಣದ ಕಾಗಿ ಮಾಡಿಸಿ ಇಟ್ಟಿರುತ್ತಾನೆ. ಇದನ್ನು ನೋಡಿದ ಕಾಗೆಗಳು ಮನುಷ್ಯರಿಗೆ ಕಚ್ಚುತ್ತಿರುತ್ತವೆ. ಈ ಚಂದದ ಕಾಗೆಯನ್ನು ದಿನವೂ ನೋಡಿದರೆ, ದರಿದ್ರವೆಂದು ಊರಿನ ಜನರು ಅದನ್ನು ತೆಗೆದು ಹೊರಹಾಕಬೇಕೆಂದು ರಾಜನಿಗೆ ಹೇಳಿದರೂ ರಾಜನು ಲಕ್ಷಕ್ಕೆ ತೆಗೆದುಕೊಳ್ಳುವುದಿಲ್ಲ. ಒಮ್ಮೆ ಬಲಿಚಕ್ರವರ್ತಿ ಕುದುರೆ ಮೇಲೆ ಹೋಗವಾಗ ತಲೆ ಎತ್ತಿ ಮನೆ ಮೇಲೆ ನೋಡುವನು. ಅಲ್ಲಿ ಕಾಗೆ ಕಂಡು , ನಮ್ಮಪ್ಪ ಎಷ್ಟು ಚಂದ ಕಾಗೆಯನ್ನು ಮಾಡಿಸಿರುವನೆಂದು ಕೊಳ್ಳುವನು. ಆದರೆ ರಾಜದರ್ಬಾರದಲ್ಲಿ ಜನರಿಂದ ವಿರೋಧ ವ್ಯಕ್ತವಾಗುತ್ತದೆ. ಎಲ್ಲರೂ ಕಾಗೆ ಅಲ್ಲಿ ಇರಕೂಡದೆಂದು ವಾದಿಸುತ್ತಾರೆ. ಬಲಿಚಕ್ರವರ್ತಿ ಕಾಗೆ ಅಲ್ಲೇ ಇರಲೆಂದಾಗ , ಊರಿನವರು ನಿನಗೆ ಬೇಕಾದರೆ ಗಿಡವನ್ನು ಕಡಿದು ಅದರಿಂದ ಎರಡು ರೆಕ್ಕೆ ಕುದ್ರಿ ಮಾಡಿಸೆನ್ನುತ್ತಾರೆ. ಬಡಿಗೇರ ಬಳಿ ಹೋಗಿ ಕುದುರೆ ವಿಷಯ ಹೇಳಿದಾಗ ಮಾತಾಡುವ ಗಿಡ ವನ್ನೇ ಕಡಿದು ತರಬೇಕೆನ್ನುತ್ತಾನೆ. ಏಳು ಗುಡ್ಡ ಕಾಡು ತಿರುಗಿದರೂ ಮಾತಾಡುವ ಗಿಡ ಸಿಗಲಿಲ್ಲ. ಆಲದ ಮರ, ಗೋಬಿನ ಗಿಡ, ಗಂಧದ ಗಿಡ, ಬನ್ನಿ ಗಿಡ, ಟೀಕಾ ಗಿಡ, ಬೇವಿನ ಗಿಡ, ಬಸರಿ ಗಿಡ ಎಲ್ಲಾ ಗಿಡಗಳನ್ನು ನೋಡಿದರೂ ಮಾತಾಡಲಿಲ್ಲ. ಆಗ ಬಲಿಚಕ್ರವರ್ತಿ ಮನೆದೇವು ಕಾಳಿಕಾದೇವಿಗೆ ಪ್ರಾರ್ಥಿಸುತ್ತಾನೆ. ದೇವಿಯ ವರದಿಂದ ಹುಟ್ಟಿದ ಮಗನು ತಾಯಿಯನ್ನು ಬೇಡಿ ಕೊಳ್ಳುತ್ತಾನೆ. ಕಾಳಿಕಾದೇವಿ ಗುಡಿ ಮುಂದೆ ಬಿಳಿ ಗಂಧ ಕೆಂಪು ಗಂಧ, ದೇವು ಗಂಧ ಗಿಡಗಳಿರುತ್ತವೆ. ಮಗನ ಪರದಾಟವನ್ನು ನೋಡಲಿಕ್ಕಾಗದೆ ಕಾಳಿಕಾದೇವಿಯು ಗಂಧದ ಗಿಡದಲ್ಲಿ ಸೇರಿಕೊಂಡು ಮಾತನಾಡುತ್ತಾಳೆ.

ನನ್ನ ಗಿಡವನ್ನು ಕಡಿದು ಕೊಂಡು ಕುದುರೆ ಮಾಡೆನ್ನುತ್ತಾಳೆ. ಆಗ ಪೂಜೆ ಮಾಡಿ ಕಡಿಯುತ್ತಾರೆ. ಘಮ ಘಮ ಸುವಾಸನೆ ಗಿಡದಿಂದ ಮೂಗಿಗೆ ಹೊಡೆಯುವುದು. ಗಿಡವನ್ನು ಒಯ್ದು ಬಡಿಗೆರವನಿಗೆ ಕೊಡುವನು. ಬಡಿಗೇರವನು ಗಿಡವನ್ನು ಕೊಯ್ದು ಚೆನ್ನಾಗಿ ಎರಡು ರೆಕ್ಕೆ , ನಾಲ್ಕು ಕಾಲು ಇರುವ ಕುದುರೆಯನ್ನು ಮಾಡುವನು.

ಬಲರೆಕ್ಕೆಯ ಕಡೆ ಒಂದು ಕೀಲು ಮಾಡುವನು. ಅದು ಕುದುರೆಯನ್ನು ಆಕಾಶದಲ್ಲಿ ಹಾರಿಸುವುದು. ಎಡ ರೆಕ್ಕೆಯಡಿಯಲ್ಲಿ ಇನ್ನೊಂದು ಕೀಲು ಮಾಡುವನು. ಅದು ತಿರುವಿದಾಗ ಕುದುರೆ ಕೆಳಕ್ಕೆ ಇಳಿಯುವುದು. ಕುದುರೆಗೆ ಲಕ್ಕಿ ನೀರು ಕೂಡಿಸಿ, ಬಣ್ಣ ಹಚ್ಚುವನು. ಆಗ ಅದು ಬೆಳ್ಳಿ ಕುದ್ರಿಯ ಮೂರ್ತಿಯಂತೆ ಕಾಣುತ್ತದೆ. ಕುದುರೆಯನ್ನು ಮ್ಯಾಳಿಗೆ ಮ್ಯಾಲೆ ಓಡಾಡಿಸೋಣ ಬನ್ನಿರೆಂದು ಜನರಿಗೆ ಕರೆದಾಗ ಎಲ್ಲರೂ ನಿರಾಕರಿಸುವರು. ನಾವು ಅದರ ಮೇಲೆ ಕುಳಿತರೆ ಮೇಲಿಂದಬಿದ್ದು

---

* ಬಲಿಚಕ್ರವರ್ತಿ ರಾಜನ ಕಾವ್ಯ : ನನ್ನ ಸಂಗ್ರಹ - ಅಪ್ರಕಟಿತ

ಸಾಯ್ತುವೆನ್ನುತ್ತಾರೆ. ತಂದೆ - ತಾಯಿ ಕೂಡಾ ಮಗನಿಗೆ ನರ ಪ್ರಾಣಿಗಳಾದ ನಮಗೆ ಈ ದೇವ ಮಾನವರ ಕುದುರೆ ಬೇಡ. ದುಷ್ಟ ಲೋಕ ಕರ್ಮ ಲೋಕದೊಳು ಹುಟ್ಟಿದ ನಮ್ಗೆ ಈ ಕುದುರೆ ಸಹವಾಸ ಬೇಡ ಎನ್ನುವರು. ಮಗನು ತಾಯಿಗೆ ಇದು ಮಾತನಾಡುವ ಕುದುರೆ, ಕಟಗಿ ಕುದುರೆ ಎನ್ನುವನು ಅದನ್ನು ಒಪ್ಪದ ತಂದೆ - ತಾಯಿ ಕುದುರೆಯನ್ನು ಮಾತಾಡಿಸೆಂದಾಗ ಕಾಳಿಕಾದೇವಿ ಕುದುರೆ ಹೊಟ್ಯಾಗ ಹೊಕ್ಕಿ ಮಾತಾಡುವಳು. ಆಗ ಕುದುರಿಗೆ ಪೂಜೆ ಮಾಡಿ, ಮಗನನ್ನು ಮೂರು ಲೋಕ ತಿರುಗಿ ಬರಲು ಅಪ್ಪಣೆ ಕೊಡುತ್ತಾರೆ. ಬಲಿಚಕ್ರವರ್ತಿ ರಾಜನು ಕುದುರೆಯ ಕೀಲು ತಿರುವಿದಾಗ ಕುದ್ರಿ ಮೇಲೆ ಲೋಕಕ್ಕೆ ಹಾಕುತ್ತದೆ.

ಹಗಲು ಏಳು ದಿವಸ, ರಾತ್ರಿ ಏಳು ದಿವಸ ಕುದ್ರಿ ಹಾಗೆ ಹಾರುತ್ತ ಹೋಗುವುದು. ಕೆಳಗಡೆ ಇಳಿಯುವುದೇಯಿಲ್ಲ. ಗಿಲ್ಕಪೂರವೆಂಬ ಪಟ್ಟಣಕ್ಕೆ ಬಂದು, ಕುದುರಿ ಹೊಟ್ಯಾಗ ಕಾಳಿಕಾದೇವಿ ಬಂದು ಕುದುರಿ ಕೀಲು ತಿರುವಿದಾಗ , ಅದು ಚಂದ್ರಾವತಿಯ ಮನಿಯ ಮ್ಯಾಳಿಗಿ ಮ್ಯಾಲೆ ಇಳಿಯುವುದು. ಗಿಲ್ಕ ರಾಜನ ಮಗಳು ಚಂದ್ರಾವತಿ ಮಗಳಿಗೋಸ್ಕರವೇ ತಂದೆ ಮೂರು ಅಂತಸ್ತಿನ ಮನೆ ಕಟ್ಟಿಸಿ ಅಲ್ಲಿ ಮಗಳನ್ನು ಇಟ್ಟಿರುತ್ತಾನೆ. ತಾಯಿ ತಂದೆ ಬೇರೆ ಮನೆಯಲ್ಲಿ ವಾಸ ಮಾಡುತ್ತಿರುತ್ತಾರೆ. ಕುದುರೆ ಮಾಳಿಗೆ ಮೇಲೆ ಇಳಿದ ಶಬ್ದಕ್ಕೆ ಚಂದ್ರಾವತಿಯ ಮನಿ ಮ್ಯಾಳಿಗಿ ಗಡ ಗಡ ಅನ್ನುತ್ತದೆ.ಬಲಿಚಕ್ರವರ್ತಿ ರಾಜ ನಡಗುತ್ತಾನೆ. ಮನೆಯಲ್ಲಿ ಹೊರಸಿನ ಮೇಲೆ ಮಲಗಿದ್ದ ಚಂದ್ರಾವತಿ, ಮನಿ ನಡುಗುವ ಶಬ್ದ ಕೇಳಿ ಯಾರದು, ನನ್ನ ಮನಿಮೇಲೆ ಗುಂಡು ಒಗಿದದ್ದು .ಅವನ ರಕ್ತ ಕುಡಿವೆನೆಂದು ನಿಚ್ಚಣಿಕೆಯಿಂದ ಮಾಳಿಗೆ ಏರಿ ಬರುತ್ತಾಳೆ. ಅಲ್ಲಿ ಲೋಕ ಕುದುರೆಯನ್ನು ನೋಡುತ್ತಾಳೆ. ಭಯ ಭೀತನಾಗಿ ನಿಂತ ರಾಜನನ್ನು ನೋಡಿ, ಮನೆಯೊಳಗೊಯ್ದು ಅವನಿಗೆ ನೀರು ಕೊಡುತ್ತಾಳೆ. ರಾಜನಿಗೆ ಆತನ ಹೆಸರು, ದೇಶ , ಕುಲ ವಿಚಾರಿಸುತ್ತಾಳೆ. ನೀರನ್ನು ಕುಡಿದು ಸುಧಾರಿಸಿಕೊಂಡು ಬಲಿಚಕ್ರವರ್ತಿಯು ಎಲ್ಲಾ ವಿಷಯ ವಿವರುಸುವನು. ಎಲ್ಲ ವಿಷಯ ಅರಿತ ಚಂದ್ರಾವತಿ ರಾಜನಿಗೆ ಊಟ ಬಡಿಸುತ್ತಾಳೆ. ಊಟವಾದ ನಂತರ ರಾಜ ಹೊರಡುವೆನೆಂದಾಗ ನಿನಗೆ ಮಾರ್ಗ ತಿಳಿಯುವುದಿಲ್ಲ. ಆದ್ದರಿಂದ ಹೋಗಬೇಡ ಎಂದು ಕುದುರೆಯನ್ನು ಬನ್ನಿ ಗಿಡದ ಮ್ಯಾಗೆ ಇಳಿಸಲು ತಿಳಿಸುವಳು. ಕಾಶಿ ಪಟ್ಟಣಕ್ಕೆ ಪತ್ರ ಹಾಕಿ , ಮಾರ್ಗ ನಾನೇ ತಿಳಿದುಕೊಳ್ಳುವೆನೆನ್ನುತ್ತಾಳೆ. ಇಪ್ಪತಳ್ಳಿ ಪತ್ರ ತಿರುಗಿ ಕಾಶಿ ಪಟ್ಣ ಇಲೆಂದು ವಾಪಸ್ಸು ಬರುವುದು.

ಹೀಗಿರಲು ಚಂದ್ರಾವತಿ ಮತ್ತು ಬಲಿಚಕ್ರವರ್ತಿರಾಜರ ನಡುವೆ ಪ್ರೇಮ ಅಂಕುರಿಸಿ ಇಬ್ಬರೂ ಸೇರುವರು. ಐದಾರು ತಿಂಗಳಲ್ಲೆ ಚಂದ್ರಾವತಿ ಗರ್ಭಿಣಿಯಾಗುವಳು. ಚಂದ್ರಾವತಿಗೆ ತಾಯಿ - ತಂದೆಯರು ಮದುವೆ ಮಾಡಿಕೊಳ್ಳೆಂದಾಗ ಇಷ್ಟವಿಲ್ಲವೆಂದು ಹೇಳುತ್ತಾಳೆ. ಇದೇ ಕಾರಣಕ್ಕೆ ಅವಳನ್ನು ಊರ ಹೊರಗೆ ಮನೆ ಕಟ್ಟಿ ಒಬ್ಬಳನ್ನೇ ಇಟ್ಟಿರುತ್ತಾರೆ. ಕೆಲದಿನಗಳ ನಂತರ ಬ್ಯಾಂಕಿನವರು ಚಂದ್ರಾವತಿಗೆ ಸಂಬಳ ಕೊಡಲು ಮನೆಗೆ ಬರುವರು. ಏಕೆಂದರೆ ಚಂದ್ರಾವತಿ ಊರಿಗೆ ಹತ್ತನೆ ಕ್ಲಾಸನಲ್ಲಿ ಫಸ್ಟ ಕ್ಲಾಸಾಗಿ ಪಾಸಾಗಿರುತ್ತಾಳೆ. ಗೌರ್ನಮೆಂಟದವರು ಅವಳಿಗೆ ತಿಂಗಳು ತಿಂಗಳು ಹಣ ಕಳಿಸುತ್ತಿರುತ್ತಾರೆ. ಸಂಬಳ ಕೊಡಲು ಬಂದವರು ಚಂದ್ರಾವತಿಯ ಮೇಲೆ ಅನುಮಾನ ಪಟ್ಟು, ಆಕೆಯ ತೂಕ ಮಾಡುತ್ತಾರೆ. ಎಷ್ಟೇ ಸುಖದಿಂದಿದ್ದರೂ ದಡೇ ಮ್ಯಾಲೆ ಒಂದು ಕೇಜಿ ತೂಕ ಬರಬೇಕು.

ಆದರೆ ಮೂರು ಕೇಜಿ ಜಾಸ್ತಿ ಬರುವುದು. ಚಂದ್ರಾವತಿಯು ಆರು ತಿಂಗಳು ಗರ್ಭಿಣಿಯಾಗಿರುವಳೆಂದು ಖಾತ್ರಿ ಮಾಡಿಕೊಂಡು ಸಂಬಳ ಕೊಡದೆ, ಚಂದ್ರಾವತಿಯ ತಂದೆ - ತಾಯಿಯವರಿಗೆ ಹೋಗಿ, ನಿಮ್ಮ ಮಗಳು ಒಂದು ಭಾಗ ಇದ್ದೋಳು , ಎರಡು ಭಾಗವಾಗಿದ್ದಾಳೆಂದು ವಿಷಯ ತಿಳಿಸುವರು. ಸಿಟ್ಟಿಗೆದ್ದ ತಂದೆ - ತಾಯಿ ಯಾರದಿದು ಮಗುವೆಂದು ಕೇಳಿದರೂ ಹೇಳುವುದಿಲ್ಲ. ಮನಿಗೆ ಯಾರು ಬಂದು ಹೋಗುವರೆಂದು ತಿಳಿಯಲು ತಳವಾರರಿಗೆ ಊರು ಕಾಯಲು ಹೇಳುವರು. ಬಲಿಚಕ್ರವರ್ತಿ ನಿಚ್ಚಣಿಕೆ ಹತ್ತಿ ಮನಿ ಏರುವಾಗ, ಆತನನ್ನು ಹಿಡಿದುಕೊಳ್ಳುವರು. ಕೈ ಕಾಲಿಗೆ ಸರಪಣಿ ಹಾಕಿ, ಬನ್ನಿ ಗಿಡಕ್ಕೆ ಒಯ್ದು ಅಲ್ಲಿ ಕಡಿಬೇಕೆಂದಾಗ , ರಾಜ ನಾನು ಬನ್ನಿ, ತಪ್ಪಲು ತಿಂದ ಮೇಲೆ ಕಡಿರೆನ್ನುವನು. ಆಗ ಸರ್ರನೆ ಗಿಡ ಏರಿ ತಾನು ಬಚ್ಚಿಟ್ಟ ಕುದುರೆ ಮೇಲೆ ಕುಳಿತು ಗಗನಕ್ಕೆ ಹಾರಿ ಬಿಡುವನು.

ಇತ್ತ ಚಂದ್ರಾವತಿಗೆ ಔಷಧಿ ತಿಂದು ಬಸಿರು ತೆಗೆದು ನಮ್ಮ ಮರ್ಯಾದಿ ಉಳಿಸೆಂದು ತಂದೆ - ತಾಯಿ ಎಷ್ಟೇ ಹೇಳಿದರು ಕೇಳದೆ ನಾನು ನಿಮ್ಮ ಮಗಳಲ್ಲ. ನೀವು ನನ್ನ ತಂದೆ - ತಾಯಿಯರಲ್ಲವೆನ್ನುವಳು. ಬಲಿಚಕ್ರವರ್ತಿಗೆ ಚಂದ್ರಾವತಿಯ ನೆನಪು ಕಾಡುವುದು. ಕಾಳಿಕಾದೇವಿಯಲ್ಲಿ ಪ್ರಾರ್ಥಿಸಿಕೊಳ್ಳುವನು. ಕೀಲು ಕುದುರೆಯಲ್ಲಿ ಕುಳಿತು ಹಾರಿ, ತುಂಬಿದ ಬಸಲಿಯನ್ನು ಎತ್ತಿಕೊಂಡು ಹೋಗುವಾಗ ಅದೇ ಸಮಯದಲ್ಲಿ ಚಂದ್ರಾವತಿಗೆ ಬ್ಯಾನಿ ಏಳುತ್ತದೆ. ನನ್ನ ಕೈಲಿ ಬ್ಯಾನಿ ತಿನ್ನೋದಾಗೊಲ್ಲ ಕುದ್ರಿ ಕೆಳಗಿಳಿಸೆನ್ನುವಳು. ಗಿಡದ ಬಡ್ಡೆಯನ್ನು ಹಿಡಿದುಕೊಂಡು ಬ್ಯಾನಿ ತಿನ್ನುವಳು. ಅದೇ ಸಮಯದಲ್ಲಿ ಆಕೆಗೆ ನೀರಡಿಕೆಯಾಗುವದು. ಭಯಂಕರವಾದ ಅಡವಿಯಲ್ಲಿ ನೀರಿಗಾಗಿ ತಿರುಗಿದರೂ ರಾಜನಿಗೆ ನೀರು ಸಿಗದೆ ಮರಳಿ ಬರುವನು. ಇಬ್ಬರೂ ನೀರಡಿಕೆಯಿಂದಾಗಿ ಅಳುತ್ತಾರೆ. ಆಗ ಕಾಳಿಕಾದೇವಿಯು ಇವರ ಕಷ್ಟ ನೋಡಲಾರದೆ ಪ್ರತ್ಯಕ್ಷಳಾಗುವಳು. ದೇವಿಯ ಅನುಗ್ರಹದಿಂದ ಚಂದ್ರವತಿಯ ಹೆರಿಗೆಯು ಸುಖಮಯವಾಗಿ ಆಗುವುದು. ಅಡವ್ಯಾಗ ಹುಟ್ಟಿದ ಮಗನಿಗೆ 'ಧರ್ಮಾಂಧಿಕರಾಜ' ನೆಂದು ಹೆಸರಿಡುವರು.

ರಾಜನು ಹೆಂಡ್ತಿ ಮಗನನ್ನು ಕಾಡಿನಲ್ಲಿಯೇ ಬಿಟ್ಟು ಧರ್ಮಗಿರಿ ಪಟ್ಟಣಕ್ಕೆ ಬಾಣಂತಿ ಎಚ್ಚ, ನೀರು, ತರಲು ಹೋಗುವನು. ಊರಲ್ಲಿ ಬಂದು ಎಣ್ಣೆ, ಬಟ್ಟೆ, ಎಚ್ಚ ಎಲ್ಲಾ ಅಂಗಡಿಯವನಿಗೆ ಕೇಳಿ ಪಡೆಯುವನು. ಹೆಂಗಸ್ರಿಗೆ ಕಡ್ಡಿ ಬೇಕೆನ್ನುವನು, ಆಗ ಹೆಂಗಸು ಘಡಗಾ (ಗಡಿಗೆ) ಒಳಗೆ ಕುಳ್ಳಿಟ್ಟು ಅದರ ಮೇಲೆ ಒಂದು ಬೆಂಕಿ ಕಿಡಿ ಹಾಕಿ ಕೊಡುವರು. ಎಲ್ಲ ಸಾಮಾನುಗಳನ್ನು ಗೋಣಿ ಚೀಲದಲ್ಲಿ ಹಾಕಿ, ಕುದ್ರಿ ಹೊಟ್ಟಿಗೆ ಕಟ್ಟುವನು. ರಾಜನು ಊರ ಬಿಟ್ಟು ದಾರಿ ಹಿಡಿದು , ಆರು ಗಾವುದ ಮುಂದೆ ಬಂದಾಗ ಕುದ್ರಿಗೆ ಬೆಂಕಿ ಹತ್ತಿ ಕೊಳ್ಳುತ್ತದೆ. ಕುದ್ರಿ ಹಾಗೆ ನೆಲ್ಕೆ ಸುಟ್ಟು ಸುಮಂಡಲಾಗಿ ಬೀಳುತ್ತದೆ. ಕಾಳಿಕಾದೇವಿ ಜಗದಂಬಾ ಮನೆದೇವ್ರು ಬಂದು ರಾಜನ ಪ್ರಾಣ ಉಳಿಸುವಳು. ಪಾಪ ಮಾಡಿದ ಜಲ್ಮಕ್ಕೆ ಯಾಕ ಜೀವಕೊಟ್ಟೆಂದು ದೇವಿಗೆ ಕೇಳುವನು. ನಿನ್ನ ಹೆಂಡ್ತಿ, ಮಗನನ್ನು ತೊರೆದು ನಿನ್ನನ್ನು ಸಾಯಲು ಹೇಗೆ ಬಿಡಲಿ. ಅವರಿಗಾಗಿ ಪ್ರಾಣ ಉಳಿಸಿದೆನೆನ್ನುವಳು. ಕುದ್ರಿಯಿಲ್ಲಾ ನನ್ನ ಬಳಿ ಹಾದಿ ಗೊತ್ತಿಲ್ಲ ನನಗೆ , ನಾನೇನು ಮಾಡಲೆಂದು ರಾಜ ಕೇಳುವನು. ನಾನು ನಿನಗೆ ದಾರಿ ತೋರಿಸ್ತಿನೆಂದು ಮಾಯವಾಗುವಳು.

ದಟ್ಟ ಅಡವಿಯಲ್ಲಿ ದಾರಿ ಹುಡುಕುತ್ತಾ ರಾಜನು ಅಲೆಯುವನು. ಅದೇ ಸಮಯದಲ್ಲಿ ಗೊಡ್ಡವಿರವಂದಿ ರಾಜನು ಅಡವಿಗೆ ಬೇಟೆಯಾಡಲು ಬಂದಿರುತ್ತಾನೆ. ರಾಜನಿಗೆ ಬ್ಯಾಟಿ ಸಿಗೋದಿಲ್ಲ. ದಾರಿಯಲ್ಲಿ ಬಲಿಚಕ್ರವರ್ತಿ ರಾಜ ಕಾಣಿಸುವನು. ಆತನ ಬಗ್ಗೆ ವಿಚಾರಿಸುವನು. ರಾಜ ಅಡವಿಯಲ್ಲಿ ಕ್ರೂರ ಪ್ರಾಣಿಗಳ ಮಧ್ಯೆ ಹೇಗಿರುವಿ, ನನ್ನ ಜೊತೆ ಬಾ ನಾನು ನಿನಗೆ ಸಹಾಯ ಮಾಡುವೆನೆಂದು ಹೇಳುವನು. ರಾಜ ದುಃಖದಿಂದಲೇ ಗೊಡ್ಡವಿರವಂದಿ ರಾಜನ ಜೊತೆ ಹೋಗುವನು. ರಾಜನ ಮನೆಯಲ್ಲಿ ಸ್ನಾನ ಊಟ ಮಾಡಿದ ಮೇಲೆ ಹಂಡತಿ , ಮಗನನ್ನು ನೆನೆಸಿಕೊಂಡು ಅಳುತ್ತಾ ಕೂಡುವನು. ಆಗ ರಾಜನು ಅಳಬೇಡವೆಂದು ಸಮಾಧಾನ ಪಡಿಸಿ, ಬುತ್ತಿ ಕಟ್ಟಿಕೊಟ್ಟು ಅಡವಿಗೆ ಹೋಗಿ ಹೆಂಡತಿ ಮಗನನ್ನು ಹುಡುಕಿ ತರಲು ಕಳುಹಿಸಿಕೊಡುವನು. ಬಲಿಚಕ್ರವರ್ತಿಗೆ ಅಡವಿಯಲ್ಲಿ ದಾರಿ ಸಿಗದೆ ಮತ್ತೆ ರಾಜನ ಬಳಿ ಬಂದು , ಗುಮಾಸ್ತನಾಗಿ ರಾಜನು ಹೇಳಿದಂತೆ ಕೇಳುತ್ತಾ ಕೆಲಸಕ್ಕಿರುತ್ತಾನೆ.

ಅಡವಿಯಲ್ಲಿ ರಾಜನ ಹೆಂಡತಿ ಚಂದ್ರಾವತಿಯು ಗಂಡನ ದಾರಿ ಕಾಯುತ್ತಾ, ವನ್ಯ ಮೃಗಗಳಿಂದ ಅಂಜಿ ಗಿಡದ ಮೇಲೆ ಕುಳಿತಿರುವಾಗ, ಕೆಳಗೆ ಬೀಳುತ್ತಾಳೆ. ಹಸಿ ಬಾಣಂತಿಯಾದ ಚಂದ್ರಾವತಿ ಮಗುವನ್ನು ಬಗಲಲ್ಲಿ ಎತ್ತಿಕೊಂಡು ಅರಣ್ಯದಾರಿಗೆ ಬರುತ್ತಾಳೆ. ಕಾಡಿನಲ್ಲಿ ಪ್ರಾಣಿಗಳು ಅವಳನ್ನು ಮುಟ್ಟುವುದಿಲ್ಲ. ಜೋರಾಗಿ ಗಾಳಿ ಬೀಸುವುದು, ರಪರಪನೇ ಮಳೆ ಬಿದ್ದು, ಎಲ್ಲಾ ಕಡೆಗೂ ನೀರು ತುಂಬುವುದು. ನೀರು ಹೆಚ್ಚಾಗಿ ಚಂದ್ರಾವತಿಯ ಕುತ್ತಿಗೆಯವರೆಗೂ ಬಂದು , ತುಂಬಿ ಹರಿಯುವುದು. ನೀರಿನಲ್ಲೆ ಕಷ್ಟ ಪಡುತ್ತಾ ಮಗುವನ್ನೆತ್ತಿಕೊಂಡು ಸಾಗುವಾಗ ಈರಣ್ಣನ ಗುಡಿ ಕಾಣಿಸುವುದು. ಗುಡಿಯಲ್ಲಿ ಕುಳಿತೊಂಡು ದುಃಖಿಸುವಳು. ಊರಿನ ದಾರಿಯು ಇನ್ನೂ ಮೂರು ಗಾವುದ ಇರುತ್ತದೆ. ಆಗ ಅಲ್ಲಿಗೆ ಎಳವನರು ಬರುವನು. ಚಂದ್ರಾವತಿಯನ್ನು ನೋಡಿದಾಗ ಅವಳು ವ್ಯಾಘ್ರದ ಹಾಗೆ ಮಿಂಚುವಳು. ಇದು ಹುಲಿಯೋ , ಕರಡಿಯೋ ದೇವ್ರೆ, ಯಾರು ಬಂದು ಕುಂತ್ಕೊಂಡಾರೋ ಏನೋ? ಎಂದು ಭಯ ಭೀತಾಗುವನು. ಇವನನ್ನು ಕಂಡು ಚಂದ್ರಾವತಿ ಮಾತನಾಡುವಳು. ಆಕೆಯ ಧ್ವನಿ ಕೇಳಿದೊಡನೆ ಎಳವನರು ಆಕೆಗೆ ದುಷ್ಟಗೇಡಿ ಅಂಟು ಮೈಲಿಗೆಯವಳೆ ಗುಡಿಯನ್ನು ಭ್ರಷ್ಟ ಮಾಡ್ದೆ . ನೀನ್ಯಾಕೆ ಗುಡ್ಯಾಗ ಬಂದು ಕುಂತಿ, ನೀನು ಕಳ್ಳಿ ಎಂದು ಅವಳಿಗೆ ಕಟ್ಟಿಗೆಯಿಂದ ಹೊಡೆಯುವನು. ಕಟ್ಟಿಗೆಯ ಹೊಡೆತವನ್ನು ತಾಳಲಾರದೆ ಎಪ್ಪಾ ನನ್ನನ್ನು ಹೊಡಿ ಬ್ಯಾಡಿ , ಹಸಿ ಬಾಣಂತಿ ಇದ್ದಿನಿ, ನನ್ನ ಮೇಲೆ ಕರುಣೆ ತೋರಿಸ್ರೆಂದು ಕೇಳಿಕೊಳ್ಳುವಳು. ಚಂದ್ರಾವತಿಯ ಮೈಮೇಲೆ ವಜ್ರದ ಉಡುಗೆ ನೋಡಿ, ನಿನ್ನ ಮೈಮೇಲಿರುವ ಬಳೆ, ವಾಚು, ಮುತ್ತು , ಕುಪ್ಪಸ ಸೀರೆ, ಬಿಚ್ಚಿಕೊಡೆಂದು ಹೇಳುವನು. ಹುಟ್ಟಿದ ಮಾಲಿಲಿ ನಾನು ಹೇಗಿರಲೆಂದು ಟವೆಲದಿಂದ ಮೈಮುಚ್ಚಿಕೊಂಡು ಸೀರೆ ಕುಪ್ಪಸ ಬಿಚ್ಚಿ ಕೊಡುವಳು. ಅವನಿಗೆ ಊರಿನ ದಾರಿ ತೋರಿಸೆಂದಾಗ ಆತ ಬೇರೆ ದಾರಿ ತೋರಿಸಿ ಹೋಗುವನು. ಅಡವಿಯೆಲ್ಲ ಸುತ್ತಾಡಿ ಸುತ್ತಾಡಿ ಚಂದ್ರಾವತಿ ಮತ್ತೆ ಈರಣ್ಣನ ಗುಡಿಗೆ ಬಂದು ಸೇರುವಳು. ನನ್ನ ಪಾಲಿಗೆ ಯಾರೂ ಇಲ್ಲದಂತೆ ಮಾಡಿದೆ ದೇವರೆ ಎಂದು ಗುಡಿಯಲ್ಲಿ ಅಳುತ್ತಾ ಕೂಡುವಳು. ಸ್ವಲ್ಪ ವೇಳೆ ಆದ ಮೇಲೆ ಊರ ದಾರಿ ಹಿಡಿದು ನೆಟ್ಟಗೆ ಅಗಸಿ ಕಟ್ಟೆಗೆ ಬಂದು ಕೂಡುವಳು. ಬೆಳಗ್ಗೆ ಅಗಸಿ ಬಾಗಿಲು ತೆರೆದಾಗ ಯಾ ವೂರು ಹೆಣ್ಮಗಳವಳು, ವಜ್ರ ಕಂಡಂಗ ಕಾಣುತ್ತಿದ್ದಾಳೆ. ಇಲ್ಲೇಕೆ ಬಂದು ಕುಳಿತಿದ್ದೀಯಾ? ನೀನು

ಯಾವೂರಿನವಳು ಎಲ್ಲಿಂದ ಬಂದಿರುವಿ? ಹೇಗೆ ಬಂದಿರುವಿ? ಹೀಗೆ ನಾನಾ ರೀತಿಯ ಪ್ರಶ್ನೆಗಳನ್ನು ಚಂದ್ರಾವತಿಗೆ ವೂರ ಜನ ಕೇಳುತ್ತಾರೆ. ನಾನು ಕಾಶಿ ಪಟ್ಟಣ , ಬಲಿಚಕ್ರವರ್ತಿ ರಾಜನ ಹೆಂಡತಿ ಚಂದ್ರಾವತಿ ಎಂದು ತನ್ನ ಪರಿಚಯ ಮಾಡಿ ಕೊಡುವಳು. ಊರಿನವರು ಚಂದ್ರಾವತಿಗೆ ಸೀರಿ, ಕುಪ್ಪಸ, , ಎಣ್ಣೆ, ಬೆಣ್ಣೆ ಎಲ್ಲವನ್ನು ತಂದು ಕೊಡುತ್ತಾರೆ. ಹೀಗೆ ಚಂದ್ರಾವತಿ ಮುರ್‍ನಾಲ್ಕು ದಿವಸ ಅಗಸಿಯೊಳಗೆ ಇರುವಳು. ಮಗುವಿನ ಬಟ್ಟೆ ಒಗೆದುಕೊಂಡು ಬರಲು ಅಗಸಿಯಲ್ಲಿ ಚಂದ್ರಾವತಿ ಹೋದಾಗ ಇತ್ತ ಕುರುಡ ಹೆಳವನು ತೊಟ್ಲಿನಲ್ಲಿ ಮಲಗಿಸಿದ ಮಗುವನ್ನು ಎತ್ತಿಕೊಂಡು ಹೋಗಿ, ಸುಡಗಾಡಿನಲ್ಲಿ ಮೊಳಕಾಲುಮಟ ಕುಣಿ ತೋಡಿ, ಕುಣಿಯಲ್ಲಿ, ಕುತ್ತಿಗೆವರೆಗೆ ಮಣ್ಣಾಕಿ ಬಿಟ್ಟು ಹೋಗುವನು.

ಗೊಡ್ಡಿರವಂದಿರಾಜನು ಊರ ಹೊರಗೆ ದೊಡ್ಡಿಗೆ ಬೈಲಕಡಿಗೆ ಬಂದಾಗ, ಮಗುವಿನ ಅಳುವ ಧ್ವನಿ ಕೇಳಿ, ಮಗುವನ್ನು ಹುಡುಕುತ್ತ ಕುಣಿಯಲ್ಲಿ ಮಗುವಿರುವ ಸ್ಥಳಕ್ಕೆ ಬಂದು ಮಕ್ಕಳಿರದ ರಾಜನು ಪ್ರೀತಿಯಿಂದ ಮಗುವನ್ನು ಎತ್ತಿಕೊಂಡು , ಅರಮನೆಗೆ ಒಯ್ದು ಜೋಪಾನ ಮಾಡುವನು. ಚಂದ್ರಾಪವತಿಯು ಬಟ್ಟೆ ಒಗೆಯುವ ಸ್ಥಳದಲ್ಲಿ ಕೋತಿಗಳು ತಮ್ಮ ಮಕ್ಕಳನ್ನು ಹೊಟ್ಟೆಗೆ ಕಟ್ಟಿಕೊಂಡು ಆ ಗಿಡದಿಂದ ಈ ಗಿಡಕ್ಕೆ ಈ ಗಿಡದಿಂದ ಆ ಗಿಡಕ್ಕೆ ಹಾರುತ್ತಿರುತ್ತವೆ. ಚಂದ್ರಾವತಿ ಕೋತಿಗಳನ್ನು ನೋಡಿ, ಅವುಗಳಿಗೆ ಮಾತನಾಡಿಸುವಳು. ಅಕಸ್ಮಾತಾಗಿ ಮಗು ಹಾರುವಾಗ ಜಾರಿ ಕೆಳಗೆ ಬಿದ್ದರೆ ನಿವೇನು ಮಾಡ್ತಿರಿ? ಎಂದು ಪ್ರಶ್ನಿಸುತ್ತಾಳೆ. ಆಗ ಕೋತಿಯು ನನ್ನ ಮಗು ನನ್ನ ಕಡೆನೇ ಇದೆ. ನಿನ್ನ ಮಗುವನ್ನು ನೀನು ತೊಟ್ಲಾಗ ಒಂಟಿಯಾಗಿ ಬಿಟ್ಟು ಬಂದಿದ್ದೀಯಾ. ಅಲ್ಲಿ ನಿನ್ನ ಮಗುವನ್ನು ಯಾರು ನೋಡ್ತಾರೆ? ಎಂದು ಮರು ಪ್ರಶ್ನಿಸುತ್ತದೆ. ತಕ್ಷಣ ಮಗುವಿನ ನೆನಪಾಗಿ ಚಂದ್ರಾವತಿಯು ಓಡಿ ತೊಟ್ಟಿಲಲ್ಲಿ ಮಗು ಇಲ್ಲದ್ದನ್ನು ಕಂಡು , ತೊಟ್ಲಿಗೆ ಬಿದ್ದು ದುಃಖ ಮಾಡುವಳು. ಇವಳ ರೋಧನವನ್ನು ಕೇಳಿ ಊರಿನ ಜನರೆಲ್ಲರು ಬಂದು ಏನಾಯಿತೆಂದು ವಿಚಾರಿಸುವರು. ಮಗು ಕಾಣೆಯಾದ ವಿಷಯ ತಿಳಿಸಿ ಅತಿಯಾಗಿ ಅಳುತ್ತಾಳೆ. ಇವಳ ರೋಧನವನ್ನು ಕೇಳಿ ನೀರಿಗೆ ಬಂದಿದ್ದ ಕೊಮುಟ್ರು ಆಯಮ್ಮ ಮಕ್ಕಳಿಲ್ಲದವಳು. ಚಂದ್ರಾವತಿಯನ್ನು ನೀನು ನನ್ನ ಮಗಳಿದ್ದಂತೆ , ನಾನು ನಿನ್ನನ್ನು ನೋಡಿಕೊಳ್ಳುತ್ತೇನೆಂದು ತನ್ನೊಂದಿಗೆ ಕರೆದೊಯ್ಯುವಳು. ರಾಜನ ಆಶ್ರಯದಲ್ಲಿ ಚಂದ್ರಾವತಿಯ ಮಗನು ಬೆಳೆದು ಹನ್ನೆರಡು ವರುಷದವನಾಗುತ್ತಾನೆ. ಹೀಗಿರಲು ಊರಿನ ಒಂಟಿ ಈರಣ್ಣನ ತೇರು ನಡೆಯುವುದು. ಜಾತ್ರೆಯಲ್ಲಿ ಮಗನಿಗೆ ತನ್ನ ತಾಯಿಯೆಂದು ತಿಳಿಯದೆ ಚಂದ್ರಾವತಿಯ ಅನುಪಮ ಸೌಂದರ್ಯ ಕಂಡು , ಮರುಳಾಗುವನು. ತಾನು ಮದುವೆಯಾದರೆ ಆ ಚೆಲುವೆಯನ್ನೇ ಆಗಬೇಕೆಂದು ತೀರ್ಮಾನಿಸುವನು.

ಗೊಡ್ಡಿರವಂದರಾಜನು ಮಗು ಬದುಕುಳಿದರೆ ಈರಣ್ಣ ದೇವಸ್ಥಾನಕ್ಕೆ ಥೇರು ಕಟ್ಟಿಸುವೆನೆಂದು ಬೇಡಿಕೊಂಡಿರುತ್ತಾನೆ. ತಂದೆಗೆ ಮಗನು ನಮ್ಮನಿ ದೇವ್ರೆಲ್ಲೆಂದು ಕೇಳುವನು. ಊರಿನಿಂದ ಮೂರು ಹರದಾರಿಯಲ್ಲಿ ಒಂಟಿ ಈರಣ್ಣನ ಗುಡಿ ಇದೆ. ಅದರಲ್ಲಿ ಉರಿಯುವ ದೀಪವನ್ನು ಮನೆಯವರೇ ನೋಡಬೇಕು. ಬೇರೆ ಯಾರೂ ನೋಡಬಾರದು. ಅಲ್ಲಿಗೆ ನೀನೊಬ್ಬನೆ ಹೋಗುವುದು ಸರಿಯಲ್ಲವೆಂದು ರಾಜ ಮಗನ ಜೊತೆಗೆ ಹೂಗಾರನಿಗೆ ಕಳುಹಿಸುವನು. ಹೂಗಾರನನ್ನು ಗುಡಿ ಹೊರಗೆ ನಿಲ್ಲಿಸಿ ಮಗನು

ತಾನೇ ಗುಡಿಯೊಳಗೋಗಿ ದೇವ್ರಿಗೆ ಪೂಜೆ ಮಾಡಿ, ತಪಸ್ಸಿಗೆ ನಿಲ್ಲುವನು. ದೇವರಲ್ಲಿ ಮದುವೆ ಮಾಡಿಕೊಳ್ಳುವ ವಿಚಾರ ತಿಳಿಸುವನು. ದೇವ್ರು ನನ್ನ ತೇರು ಮಾಡಿದ ಮ್ಯಾಲೆನೇ ನೀನು ಮದುವೆ ಮಾಡಿಕೊಳ್ಳುವುದು ಎನ್ನುವನು. ಈ ವಿಷಯವನ್ನು ಮಗನು ತಂದಿಗೆ ತಿಳಿಸುವನು. ಆಗ ರಾಜನು ಊರಾಗಿನ ಮಂದಿ ಕೈಯಿಂದ ಥೇರು ಮಾಡಿಸುವನು.

ಥೇರಿಗೆ ಪೂಜೆಯನ್ನು ಮಗನೇ ಮಾಡಬೇಕು. ಮಗನು ಬೆಳ್ಳಿ ಕೊಡದಿಂದ ನೀರು ತಂದು, ಮೈ ತೊಳೆದು ಕೊಳ್ಳುವನು. ಗಿಡದಿಂದ ಕಾಯಿಗಳನ್ನು ಹರಿದು ತಂದು ನೀರಿನಕೊಡವನ್ನು ತಂದು ಥೇರ ಮ್ಯಾಲಿಡುವನು ಥೇರನ್ನು ಎಳಿಯೊದಿದೆ ಊರಿನವರೆಲ್ಲರೂ ಬರಬೇಕೆಂದು ರಾಜ ಡಂಗುರ ಹೊಡಿಸುತ್ತಾನೆ. ಕೊಮುಟ್ರಕಿ ಈ ವಿಷಯವನ್ನು ಚಂದ್ರಾವತಿಗೆ ತಿಳಿಸಿ, ನನ್ನ ಜೊತೆ ಬಾ ಎಂದಾಗ, ಒಲ್ಲೆನ್ನುವಳು. ಊರ ಮಂದಿ ಥೇರನ್ನು ಹಿಡಿದು ಎಳೆದ್ರು ಥೇರು ಮುಂದೆ ನಡಿಯೋದೆಯಿಲ್ಲ. ಹುಡುಗನು ಮನಸ್ಸಿನಲ್ಲಿಯೇ ಈರಣ್ಣದೇವ್ರಿಗೆ ತಾತಾ ನಮ್ಮ ಅಪ್ಪ - ಅಮ್ಮ ಬಂದ್ರೇನೆ ಥೇರು ನಡೆಯುವಂತೆ ಮಾಡೆಂದು ಬೇಡಿಕೊಳ್ಳುವನು. ಮತ್ತೆ ಊರಲ್ಲಿ ಯಾರೊಬ್ಬರೂ ಮನಿಯಲ್ಲಿರಬಾರದೆಂದು ಡಂಗೂರ ಸಾರುತ್ತಾರೆ. ಆಗ ಚಂದ್ರಾವತಿ ಕೋಮುಟ್ರಕಿ ಜೊತೆಗೆ ಜಾತ್ರೆಗೆ ಬರುತ್ತಾಳೆ. ಥೇರಿಗೆ ಕೈ ಮುಗಿದು ಹಗ್ಗ ಹಿಡಿದು ಕೊಳ್ಳುವಳು. ಅವಳ ಹಿಂದೆನೆ ಬಲಿಚಕ್ರವರ್ತಿಯು ಥೇರಿನ ಹಗ್ಗ ಹಿಡಿದು ನಿಂತಿರುತ್ತಾನೆ. ಆ ಥೇರಿಗೆ ಇಬ್ರು ಕೈ ಹಿಡಿಯೊಟ್ಟಿಗೆ ಈರಣ್ಣನ ಥೇರು ಧಡ ಧಡವೆಂದು ನಡೆಯುತ್ತದೆ. ತಾಯಿ - ತಂದೆ ತಲೆ ಮೇಲೆ ಒಂದೊಂದು ಹೂ ಬೀಳುತ್ತದೆ. ಆಗ ಮಗನಿಗೆ ಇವರೇ ತನ್ನ ತಂದೆ - ತಾಯಿಯೆಂದು ತಿಳಿಯುತ್ತದೆ. ತನ್ನ ತಾಯಿ ಮೇಲೆ ಮಗನಾಗಿ ಮನಸ್ಸು ಮಾಡಿದೆನೆಂದು ಪಶ್ಚಾತ್ತಾಪ ಪಡುವನು. ಚಂದ್ರಾವತಿಯು ಮಗನಿಗೆ ನಡೆದ ಎಲ್ಲಾ ವಿಷಯ ತಿಳಿಸುವಳು. ಮಗನೇ ಮುಂದೆ ನಿಂತು ತಾಯಿಗೆ ತಂದಿ ಕೈಯಿಂದ ಈರಣ್ಣದೇವ್ರು ಮುಂದೆ ತಾಳಿಕಟ್ಟಿಸುತ್ತಾನೆ. ಗೊಡ್ಡಿರವಂದರಾಜನು ಮಗನಿಗೆ ಅದೇ ಊರಲ್ಲಿ ಹೆಣ್ಣು ತೆಗೆದು ಮದ್ವಿ ಮಾಡುತ್ತಾನೆ. ಸ್ವಲ್ಪ ಕಾಲ ಕಳೆದ ಬಳಿಕ, ಈರಣ್ಣ ತಾತನು ಹುಡುಗನ ಮೈಯಲ್ಲಿ ಬಂದು , ನನ್ನ ಕುದ್ರಿ ನಾನು ಉಳಿಸ್ಕೋತೀನಿ ಎನ್ನುವನು. ತನ್ನ ನಂತರ ಮಗನು ತಾತ. ಅಜ್ಜಿಯರ ನೆನಪು ತೆಗೆದು ತಾತ ಅಜ್ಜಿಯರೆಲ್ಲೆಂದು ಅವರು ಇದ್ದಾರೋ, ಇಲ್ಲೋ ನೋಡೆ ಬರೋಣವೆನೆನ್ನುವನು. ತಂದೆ - ತಾಯಿ ಧರ್ಮವಂದರಾಜ ಎಲ್ಲರೂ ಕೂಡಿ ರೆಕ್ಕೆ ಕುದ್ರಿ ಮ್ಯಾಲೆ ಕುಂತು ಕೀಲು ತಿರುವಿ, ಇಪ್ಪತ್ತು ಹಳ್ಳಿ , ಅರವತ್ತು ಊರು ತಂದೆ - ತಾಯಿ, ಧರ್ಮ ರಾಜ ಕೂಡಿ ರೆಕ್ಕೆ ಕುದ್ರಿ ಮ್ಯಾಲೆ ಕುಂತು ಕೀಲು ತಿರುವಿ ಇಪ್ಪತ್ತಳ್ಳಿ ಅರವತ್ತು ಊರು ತಟಾದು ಕಾಶಿ ಪಟ್ಟಕ್ಕೆ ಬರುವರು. ಅಲ್ಲಿ ಬಲಿಚಕ್ರವರ್ತಿ ರಾಜನ ತಂದೆ - ತಾಯಿಯರು ಮಗನ ದಾರಿ ಕಾಯುತ್ತಾ ಜೀವ ಹಿಡಿದುಕೊಂಡು ಬದುಕುತ್ತಿರುತ್ತಾರೆ. ಮಗನನ್ನು ನೋಡಿ ಪ್ರಾಣ ತ್ಯಾಗ ಮಾಡುವರು. ಬಲಿಚಕ್ರವರ್ತಿ ರಾಜನು ತಂದೆಯ ಬೆಳ್ಳಿ ಫೋಟೊ -ತಾಯಿಯ ರಾಗಿ ಫೋಟೋ ತೆಗೆಸಿ ಮಠ ಕಟ್ಟಿಸುವನು. ಅವರಿಗೆ ಪೂಜಿಸಲು ಪೂಜಾರಿಯನ್ನ ನೇಮಿಸುವನು. ಅದಕ್ಕೆ ಕಾಶಿದೇವ್ರು ಮಠ ಅಂತ ಹೆಸರಿಡುತ್ತಾನೆ. ಮಠಕ್ಕೆ ಬಂದ ಜನರಿಗೆ ಊಟ ಹಾಕಿಸುವ ವ್ಯವಸ್ಥೆ ಕೂಡ ಮಾಡಿಸುತ್ತಾನೆ. ಅಲ್ಲಿಂದ ಗಿಲಕ ಊರ ಪಟ್ಟಕ್ಕೆ ಬರುವರು. ಅಲ್ಲಿ ಚಂದ್ರಾವತಿಯ ತಂದೆ-ತಾಯಿ ಜೀವ ಕೈಯಲ್ಲಿ ಹಿಡಿದು ಕೊಂಡು ಮಗಳು ಅಳಿಯನ ದಾರಿ

ಕಾಯುತ್ತಿರುತ್ತಾರೆ. ಅವರು ಅಳಿಯ - ಮಗಳ ಮುಖ ನೋಡಿ ಪ್ರಾಣ ತ್ಯಜಿಸುವರು. ತಾಯಿಯ ರಾಗಿ ಫೋಟೋ, ತಂದಿಯ ಕಂಚಿನ ಫೋಟೋ ತೆಗಿಸುವರು. ಕಾಶಿಯಿಂದ ಕಂಚಿಯವರೆಗೂ ತಾತನ ಪೂಜೆಯಾಗಬೇಕೆಂದು ಮೊಮ್ಮಗ ಹೇಳುತ್ತಾನೆ. ಹಾಗೆ ಗೊಡ್ಡಿರವಿಂದ ರಾಜನ ಬಳಿ ಎಲ್ಲರೂ ಬರುವರು. ಅಲ್ಲಿ ರಾಜ ರಾಣಿ ಮಕ್ಕಳು ಬಂದ ಮೂರನೆ ದಿವಸಕ್ಕೆ ಸಾಯುತ್ತಾರೆ. ಸಾಕಿದ ತಂದೆಯ ಬಂಗಾರದ ಫೋಟೊ ಸಾಕಿದ ತಾಯಿಯ ರಾಗಿ ಫೋಟೋ ತೆಗೆಸುವನು. ಅಲ್ಲಿ ಕೈಲಾಸ ಮಠವನ್ನು ಕಟ್ಟಿಸಿ ತಾನೆ ಪೂಜೆ ಮಾಡುತ್ತಾನೆ. ಮುಂದೊಂದು ದಿನ ಈರಣ್ಣ ತಾತನು ಪ್ರತ್ಯಕ್ಷನಾಗಿ ಕುಮಾರನಿಗೆ ಹೀಗೆ ಹೇಳುವನು. ಲೋಕೆಲ್ಲಾ ಧರ್ಮ ಪೂಜೆ ಮಾಡಿ ಬಂದಿರುವೆ. ನಿನ್ನಪೂಜೆ ನಾನು ಮಾಡ್ತಿನಿ. ನೀನು ನನ್ನ ಗುಡಿ ಮುಂದೆ ಗುಂಡು ಕಲ್ಲು ಮಾಡಿ , ಅಲ್ಲಿ ಕಾಯಿ ಒಡೆಯಬೇಕೆನ್ನುತ್ತಾನೆ. ಹಾಗೆ ಮಗನು ಮಾಡುತ್ತಾನೆ. ಮುಂದೆ ಧರ್ಮಂದರಾಜನಿಗೆ ಮಗ ಹುಟ್ಟುತ್ತಾನೆ. ಆತನಿಗೆ ಈರಣ್ಣ ಅಂತ ನಾಮಕರಣ ಮಾಡುತ್ತಾರೆ. ಈರಣ್ಣ ದೇವ್ರನ್ನು ಭಕ್ತಿಯಿಂದ ಪೂಜಿಸುತ್ತಾ , ಎಲ್ಲರೂ ಅವನ ಪೂಜೆ ಮಾಡುತ್ತಾ ಸುಖವಾಗಿ ಬಾಳುತ್ತಾರೆ.

2.8- ಆದೋನಿ ಲಕ್ಷ್ಮಮ್ಮನ ಕಾವ್ಯ *:

ಸತಿ ಧರ್ಮವನ್ನು ಸಾರುವ ಇದೊಂದು ಖಂಡ ಕಾವ್ಯ. ಇಲ್ಲಿ ಲಕ್ಷ್ಮಮ್ಮ ಹೆಸರೇ ಸೂಚಿಸುವಂತೆ ಲಕ್ಷ್ಮಿ ಅಥವಾ ಸಂಪತ್ತಿನ ಸಂಕೇತವಾಗಿ ನಿಲ್ಲುತ್ತಾಳೆ. ಹುಟ್ಟಿದ ಮನೆಯನ್ನು ಬೆಳಗಿಸಿ ಕೊಟ್ಟ ಮನೆಯನ್ನು (ಊರನ್ನೂ) ಬೆಳಗಿಸುವ ಈಕೆ, ಕಥೆಯುದ್ದಕ್ಕೂ ಸ್ತ್ರೀತನಕ್ಕೆ ಸಂಕೇತವಾಗಿ ನಿಲ್ಲುತ್ತಾಳೆ. ಅತ್ತೆ ಮಂಗಮ್ಮ ಕೊಡುವ ಕಾಟ, ಹೊರಿಸುವ ಅಪವಾದಗಳಿಗೆ ಸಂಯಮ, ತಾಳ್ಮೆಯಿಂದಲೇ ವರ್ತಿಸುವ ಲಕ್ಷ್ಮಮ್ಮ ಆದರ್ಶ ಗೃಹಿಣಿಯಾಗಿ ಕಂಡು ಬರುತ್ತಾಳೆ. ಕಥೆಯುದ್ದಕ್ಕೂ ಮುಗ್ಧತೆ ಸಂಯಮದಿಂದಲೇ ಚಿತ್ರಣಗೊಂಡ ಈಕೆ ಶಾಂತಿಯ ಸಾಕಾರ ರೂಪವಾಗಿ ನಿಲ್ಲುತ್ತಾಳೆ. ಅತ್ತೆಯ ಒತ್ತಡಕ್ಕೆ ಮಣಿದು ಗಂಡನಿಂದಲೇ ಕೊಲೆಯಾಗುವ ಈಕೆ ಊರ ಜನರಿಗೆ ಆದರ್ಶ ಸತಿಯಾಗುತ್ತಾಳೆ. ಹೀಗಾಗಿ ಆದೋನಿಯಲ್ಲಿ ಗುಡಿ ಕಟ್ಟಿಸಿ ಪೂಜಿಸಲ್ಪಡುತ್ತಾಳೆ. ಹೀಗೆ ಸ್ತ್ರೀತ್ವದಿಂದ ದೈವತ್ವಕ್ಕೇರಿದ ಲಕ್ಷ್ಮಮ್ಮನ ಕಥೆ ಹೀಗೆ ಸಾಗುತ್ತದೆ.

'ಆದೋನಿ' ಎಂಬ ಊರಲ್ಲಿ ಮುಸ್ಲುಗ ರೆಡ್ಡೇರು ಇರ್ತಾರೆ. ಮುದೆ ರಂಗಯ್ಯ, ಕನಕಾದೇವಿ ಎಂಬ ದಂಪತಿಗಳು ವಾಸಿಸುತ್ತಿರುತ್ತಾರೆ. ಇವರಿಗೆ ಮೂವರು ಮಕ್ಕಳಿರುತ್ತಾರೆ. ದೊಡ್ಡಾತ ಕೋಲಾರೆಡ್ಡಿ, ನಡುವಿನಾತ ಸುಬ್ಬಾರೆಡ್ಡಿ ಮತ್ತು ಚಿಕ್ಕಾತ ಯಂಕಾರೆಡ್ಡಿ. ಇವರಿಗೆ ತುಂಬಾನೇ ಬಡತನವಿರುತ್ತದೆ. ಊರ ಹೊಲದ ಬಾವಿ ಹತ್ತಿರ ದೇವಗಣಿಕೆಯರು ಹೂವಾಗಿ ತಿರುಗುತ್ತಿರುತ್ತಾರೆ. ಅದೇ ಸಮಯಕ್ಕೆ ಕನಕಾಚದೇವಿಯು ನೀರು ತರಬಲು ಬಾವಿಗೆ ಹೋಗುವಳು. ಕೊಡದಲ್ಲಿ ನೀರೊಂದಿಗೆ ಹೂ ಬರುವುದು. ಯಾರೋ ಬಾವಿಯಲ್ಲಿ ಹೂ ಒಗೆದು ಹೋಗಿರುವರೆಂದು, ಕೊಡದಿಂದ ಹೂ ಹೊರಗೆಸೆಯುವಳು. ಮತ್ತೆ ನೀರು ತುಂಬಿದಾಗ, ಕೊಡದಲ್ಲಿ ಹೂ ಬಂದು ಸೇರುತ್ತದೆ. ತಾಯಿ ಆಶ್ಚರ್ಯಳಾಗುವಳು. ಬಾವಿ ಬಳಿ ಆಡುತ್ತಿರುವ ಮಕ್ಕಳು ಇದನ್ನು ಗಮನಿಸಿ. ಏಕಮ್ಮಾ ನೀರು ತುಂಬಿ ಚೆಲ್ಲುತ್ತಿರುವಿ ಎಂದಾಗ,

---

* ಆದೋನಿ ಲಕ್ಷ್ಮಮ್ಮನ ಕಾವ್ಯ : ನನ್ನ ಸಂಗ್ರಹ - ಅಪ್ರಕಟಿತ

ತಾಯಿಯು ಹೂವಿನ ವಿಷಯ ತಿಳಿಸುವಳು. ಮಕ್ಕಳು ತಾಯಿಗೆ ಈ ಹೂವು ದೇವತೆಯರು ಮುಡಿದಿದ್ದು. ಅದು ನಮಗೆ ಸಿಗಬೇಕೆಂದರೆ ನಾವು ಪುಣ್ಯ ಮಾಡಿರ್ಬೇಕೆಂದು, ಈ ಪವಿತ್ರ ಹೂವನ್ನು ಬೀಸಾಕದೇ ತುರುಬಿಗೆ ಸಿಗಿಸದೆ, ತಾಯಿಗೆ ಊಟ ಮಾಡೆನ್ನುವರು. ಇಷ್ಟೊಂದು ಅಗಲಿರುವ ಈ ಹೂವನ್ನು ಹೇಗೆ ಊಟ ಮಾಡಬೇಕೆಂದಾಗ, ಹೂವನ್ನು ನುಂಗಿ ನೀರು ಕುಡಿಯಮ್ಮ ಎನ್ನುವರು. ಮಕ್ಕಳ ಮಾತಿನಂತೆ ತಾಯಿಯು ಹೂ ನುಂಗಿದಾಗ ಆಕೆಯ ಹೊಟ್ಟೆಯಲ್ಲಿ ಮಗಳಾಗಿ ಬೀಳುವುದು. ಕನಕಾಚದೇವಿ ಮಗಳನ್ನು ಹಡೆಯುವಳು. ಆ ಹುಡ್ಗಿ ಹುಟ್ಟೋ ಟೈಂನಾಗ ಅರಿಶಿನ ಜೋಳವೆಲ್ಲ ಮುತ್ತಾಗ್ತವೆ, ಬಿಳೇ ಜೋಳ ನವರತ್ನ ಆಗ್ತವೆ. ಒಂದು ಆಕಳು ಎರಡು ಕರ ಈಯ್ತದೆ. ಹಿತ್ತಾಳೆ ಹೋಗಿ ಬಂಗಾರವಾಗುವುದು. ಸಿಲವರ ಹೋಗಿ ಬೆಳ್ಳಿ ಆಗುವುದು. ಮಗಳು ಶುಕ್ರವಾರ ದಿವಸ ಹುಟ್ಟಿರುವಳೆಂದು `ಲಕ್ಷ್ಮಿ ದೇವಿ' ಎಂದು ನಾಮಕರಣ ಮಾಡುವರು. ಆಕಿ ಆಡುವ ಮಾತೆಲ್ಲಾ ಕರೆಕ್ಟ ಆಗುವುದು. ಇವರ ಬಡತನ ಮಾತ್ರ ಹಿಂಗುವುದಿಲ್ಲಾ. ಅಣ್ಣ ಕೆಲಸಕ್ಕೆಂದು ಹೊರಡುವಾಗ ತಂಗಿಯು, ನೀನೇಕೆ ಕೆಲಸಕ್ಕೆ ಹೋಗಬೇಕೆಂದು ಪ್ರಶ್ನಿಸುವಳು ಅದಕ್ಕೆ ಅಣ್ಣನು ಏನಮ್ಮಾ ಮಾಡೋದು. ನಮ್ಮ ಊರಾಗ ನಮಗ ಮನಿಯಿಲ್ಲ. ಅಡಿವ್ಯಾಗ ಹೊಲವಿಲ್ಲ. ನಮ್ಮ ಕುಲನೋಡಿದ್ರೆ ದೊಡ್ಡದು. ನಮಗೆ ಬಡತನ ಬಂದೈತಿ ಎನ್ನುವರು. ಆಗ ತಂಗಿಯು ಅಂಗಲ್ಲಣ್ಣ ವಡ್ಡರ ಬಂಡೆಮ್ಯಾಲೆ ಮೊಣಕಾಲಿನಷ್ಟು ಮಣ್ಣು ಹಾಕಿ, ಮಣ್ಣಿನ ಮ್ಯಾಲೆ ಕಾಳು ಬಿತ್ತಿದ್ರೆ ನಿಮಗೆ ಬೇಕಾದಂಗೆ ಬೆಳಿ ಬರತೈತೆ ಎನ್ನುತ್ತಾಳೆ. ಹಾಗೆ ಆಗಲೆಂದು ಅಣ್ಣಂದಿರು ಬಂಡೆ ಮ್ಯಾಲೆ ಬಿತ್ತಿದಾಗ, ಬೆಳೆ ಬೆಳೆಯುವುದು. ಮುಂದೆ ಇವರ ಗುಡಿಸಲು ಮನಿ ಹೋಗಿ ಗಚ್ಚಿನ ಮನಿ ತಯಾರಾಗುವುದು. ಇವರು ಬಂಡಿಯ ಮ್ಯಾಲೆಯೆ ರೊಟ್ಟಿ ಮಾಡಿಕೊಳ್ಳುವರು. ಹೀಗಾಗಿ ಊರಿಗೆಲ್ಲಾ ಬಂಡೆಗೌಡ್ರು ಅಂತ ಹೆಸರಾಗುವರು.

ದಿನದಿಂದ ದಿನಕ್ಕೆ ಇವರ ಶ್ರೀಮಂತಿಕೆ ಹೆಚ್ಚಾಗಿ ಲಕ್ಷ್ಮೀದೇವಿಯನ್ನು ಕೇಳಲು ಮಂದಿ ಬರತೊಡಗಿದರು. ಈ ಹುಡುಗಿಯ ಕಾಲುಗುಣ ಭಾಳ ಒಳ್ಳೆಯದಿದೆ. ಇವಳು ಹುಟ್ಟಿದ ಮ್ಯಾಲೆನೇ ಇವರ ಮನಿ ಏರ್ತೈತೆ, ಮನೆಯಲ್ಲಿ ದನಾ, ಕರಾ, ಎಮ್ಮೆ ಜಗ್ಗಿ ಆಗ್ಯಾವೆ. ನಾವು ಮಾಡಿಕೊಂಡ್ರೆ ನಮ್ಮ ಮನಿನೂ ಏರತೈತೆಂದು, ತಂಗಿಗೆ ಮದುವೆ ಪ್ರಸ್ತಾಪ ಊರಿನವರು ಒಯ್ದರೆ, ಅಣ್ಣಂದಿರು ನಾವು ನಮ್ಮ ತಂಗಿನ ಇನ್ನೂ ಕೊಡೊದಿಲ್ಲವೆನ್ನುವರು. ಸ್ವಲ್ಪ ದಿವಸಗಳ ಬಳಿಕ ತಂಗಿಯನ್ನು ಎಂಕಾರೆಡ್ಡಿಗೆ ಕೊಟ್ಟು ವೈಭವದಿಂದ ಮದುವೆ ಮಾಡುವರು. ಯಂಕಾ ರೆಡ್ಡಿಯು ಲಕ್ಷ್ಮೀ ದೇವಿಯ ಸೋದರತ್ತೆ ಮಂಗಮ್ಮನ ಮಗನಾಗಿರುವನು. ಭಾವ ಸುಬ್ಬಾರೆಡ್ಡಿ ಸೊಸೆಯಾದ ಲಕ್ಷ್ಮಿದೇವಿಯನ್ನು ಅತ್ತೆ ಸೇರುವುದಿಲ್ಲ. ಏಕೆಂದರೆ ತನ್ನ ಅಣ್ಣನ ಮಗಳಿಗೆ ಕೊಟ್ಟು ಮದುವೆ ಮಾಡಬೇಕೆಂಬುದು ಅವಳ ಮಹದಾಸೆಯಾಗಿರುತ್ತದೆ. ಹೀಗಾಗಿ

ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದು ಬಂದ ಸೊಸೆಗೆ ಕೊಡಬಾರದ ಕಷ್ಟ ಕೊಟ್ಟು ಹಿಂಸಿಸುತ್ತಾಳೆ. ದಿನದಿಂದ ದಿನಕ್ಕೆ ಅತ್ತೆಯ ಜೋರು ಜಾಸ್ತಿಯಾಗಿ, ಮಗನ ಕಿವಿ ತುಂಬಲು ಪ್ರಾರಂಭಿಸುತ್ತಾಳೆ. ಮಗನು ತಾಯಿಯು ಹೆಂಡ್ತಿ ಬಗ್ಗೆ ಹೇಳುವ ಮಾತಿಗೆ ಗಮನಹರಿಸುವುದಿಲ್ಲ. ಮಗನೆ ತಾಯಿಗೆ ಬುದ್ಧಿ ಮಾತು ಹೇಳುವನು. ಎಂಕಾರೆಡ್ಡಿಗೆ ತನ್ನ ಹೆಂಡ್ತಿ ಬಗ್ಗೆ ಬಹಳ ಪ್ರೀತಿ, ವಿಶ್ವಾಸವಿರುತ್ತದೆ. ಭಾವನಾದ ಸುಬ್ಬಾರೆಡ್ಡಿ ಲಕ್ಷ್ಮಿದೇವಿಯ ಮೇಲೆ ತುಂಬಾ ಜೀವವಿರುತ್ತಾನೆ. ಅವಳ ಬಗ್ಗೆ ಅವನಿಗೆ ಎಲ್ಲಿಲ್ಲದ ಕಾಳಜಿಯಿರುತ್ತದೆ.

ತಾಯಿಯು ಸೊಸೆಗೆ ಬೈದಾಗಲೆಲ್ಲಾ ಸಮಾಧಾನದ ಮಾತು ಹೇಳುತ್ತಿರುತ್ತಾನೆ.

ಮನೆಯಲ್ಲಿ ಕೆಲಸದಾಳು ರಂಗಯ್ಯನೆಂಬುವನಿರುತ್ತಾನೆ. ಅತ್ತೆಯು ಸೊಸೆಗೆ ರಂಗಯ್ಯನೊಂದಿಗೆ ಸಂಬಂಧ ಕಲ್ಪಿಸಿ, ಮಗನಿಗೆ ಇಲ್ಲ ಸಲ್ಲದ ಚಾಡಿ ಮಾತುಗಳನ್ನು ಹೇಳುತ್ತಾಳೆ. ನಿನ್ನ ಹೆಂಡ್ತಿ ನಡವಳಿಕೆ ಸರಿಯಿಲ್ಲ. ನೀನು ಅವಳನ್ನು ಕೊಂದುಬಿಡು. ನಾನು ನಿನಗೆ ಬೇರೊಂದು ಮದುವೆ ಮಾಡುವೆ. ಈ ಮಾತಿಗೆ ಮಗನು, ನನ್ನ ಹೆಂಡ್ತಿ ಅಂಥವಳಲ್ಲಾ. ಅವಳು ಶುಕ್ರವಾರ ದಿನದಂದು ನೀರಿನ ಕಮಲದಲ್ಲಿ ಹುಟ್ಟಿರುವಳು. ಅಂಥವಳನ್ನು ಕೆಲಸದಾಳಿನೊಂದಿಗೆ ಸಂಬಂಧ ಕಲ್ಪಿಸಿ ಮಾತಾಡುವದು ಸರಿಯಲ್ಲವೆನ್ನುವನು. ನನ್ನ ಹೆಂಡ್ತಿ ಮನೆಯವರೆಲ್ಲರನ್ನು ಪ್ರೀತಿಯಿಂದ ಕಾಣುವಳು. ಹಾಗೆ ಆಳು ರಂಗಯ್ಯನಿಗೆ ಪ್ರೀತಿಯಿಂದ ಉಪಚರಿಸುವಳು. ಇದನ್ನು ನೀನು ತಪ್ಪಾಗಿ ಅರ್ಥೈಸಿಕೊಂಡು, ಆಕೆ ಮೇಲೆ ವಿನಾಕಾರಣ ಸಂಶಯ ಪಡಬೇಡವೆಂದು ತಾಯಿಗೆ ಬುದ್ಧಿ ಮಾತು ಹೇಳುವನು. ಮಗನ ಮಾತನ್ನು ಕೇಳಿ ತಾಯಿಗೆ ಎಲ್ಲಿಲ್ಲದ ಕೋಪ ಜಾಸ್ತಿಯಾಗುವುದು.

ಲಕ್ಷ್ಮೀ ದೇವಿಯ ಅಣ್ಣಂದಿರಾದ ಕೋಲಾರೆಡ್ಡಿ ಮತ್ತು ಸುಬ್ಬಾರೆಡ್ಡಿ ತಂಗಿಯನ್ನು ತವರಿಗೆ ಕರೆದೊಯ್ಯುವರು. ತಂಗಿಗೆ ಗಂಡನ ಮನೆಯಲ್ಲೇನಾದರೂ ನಿನಗೆ ಕಷ್ಟವಿದ್ದರೆ ಹೇಳೆಂದು ಕೇಳಿದರೂ ಆಕೆ ಒಂದು ಮಾತು ಆಡುವುದಿಲ್ಲ. ಅಣ್ಣಂದಿರಿಗೆ ತಂಗಿಯ ಬಾಡಿದ ಮುಖ ನೋಡಿ ಅನುಮಾನ ಬರುವುದು. ಎಷ್ಟೇ ಕೇಳಿದರೂ ತಂಗಿಯು ಗಂಡನ ಮನೆಯವರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನೇ ಕೊಡುವಳು. ಸ್ವಲ್ಪದಿನ ಕಳೆದ ಮೇಲೆ ತಂಗಿಯನ್ನು ಗಂಡನ ಮನಿಗೆ ಬಿಟ್ಟು ಬರುವರು. ಚೌಡೇಶ್ವರಿ ದೇವಿಯ ವರ ಪ್ರಸಾದದಿಂದ ಮುಂದೊಂದು ದಿನ ಲಕ್ಷ್ಮಿ ದೇವಿಗೆ ಮಗಳು ಹುಟ್ಟುವಳು. ಮಗಳಿಗೆ 'ಪಾಪಮ್ಮ' ಎಂದು ಹೆಸರಿಡುವರು. ಹೆಂಡತಿಯನ್ನು ಕರೆತರಲು ಗಂಡ ಊರಿಗೆ ಹೋದಾಗ , ಇತ್ತ ತಾಯಿಯು ತನ್ನ ಹಿರಿಮಗನಿಗೆ ಊಟ ಮಾಡಲು ಕರೆದು ಕೂಡಿಸಿ, ಲಕ್ಷ ರೂಪಾಯಿಗಳೊಂದಿಗೆ ಅರ್ಧ ಹಣ ತೆಗದಿಟ್ಟು ಕೊಂಡು , ಮಗನಿಗೆ ಗೊತ್ತಾಗದಂತೆ ಚೀಲ ಕೊಟ್ಟು , ಬ್ಯಾಂಕಿಗೆ ಹೋಗಿ ಸಾಲ ಕಟ್ಟಿ ಬಾ ಎಂದು ಕಳುಹಿಸುವಳು. ಅಮಾಯಕನಾದ ಮಗನು ತಾಯಿಯ ಮಾತಿನಂತೆ ಬ್ಯಾಂಕಿಗೆ ಹೋದಾಗ, ಬ್ಯಾಂಕಿನವರು ಅರ್ಧ ದುಡ್ಡಿಲವೆಂದು ಆತನನ್ನು ಐದು ತಿಂಗಳು ರೂಮ್‌ನಾಗ ಹಾಕುವರು. ಎಂಕಾರೆಡ್ಡಿಯು ತನ್ನ ಹೆಂಡ್ತಿ, .ಮಗಳೊಂದಿಗೆ ಮನಿಗೆ ಬರುವನು. ಮೊಮ್ಮಗಳ ಮುಖನೋಡಿಯಾದರೂ ಅತ್ತೆಯ ಮನಸ್ಸು ಕರಗುವುದಿಲ್ಲ. ಹೆಣ್ಣಿಗೆ ಹಣ್ಣೇ ಶತ್ರುವೆಂಬುದನ್ನು ತೋರಿಸಿಕೊಡುವಳು. ಸೊಸೆಯನ್ನು ಸಾಯಿಸಿ, ಮಗನಿಗೆ ಅಣ್ಣನ ಮಗಳನ್ನು ತಂದುಕೊಳ್ಳಬೇಕೆಂದು ಮತ್ತೆ ಮಗನಿಗೆ ಸೊಸೆ ಬಗ್ಗೆ ಚಾಡಿ ಮಾತು ಹೇಳಲು ಶುರು ಮಾಡುವಳು.

ಒಂದು ದಿನ ಎಂದಿನಂತೆ ಎಂಕಾರೆಡ್ಡಿಯು ಬೆಳಿಗ್ಗೆ ಎದ್ದವನೇ ಹೊಲಕ್ಕೆಹೋಗುವನು. ಲಕ್ಷ್ಮೀದೇವಿಯು ಆಳು ರಂಗಯ್ಯನ ಕೈಯಿಂದ ಊಟವನ್ನು ಗಂಡನಿಗೆ ಕೊಟ್ಟು ಕಳುಹಿಸುವಳು. ಅತ್ತೆಯು ಇದೇ ಸರಿಯಾದ ಸಮಯವೆಂದು ಹಿರಿ ಮಗ ಊರಲಿಲ್ಲ. ಮನೆಯಲ್ಲಿ ಈಗ ಯಾರೂ ಇಲ್ಲ. ಸೊಸಿ ಒಬ್ಬಳೆ ಇರುವಳೆಂದು ಸರಸರನೆ ಹೊಲಕ್ಕೆ ಹೋಗಿ ಮಗನಿಗೆ, ಸೊಸೆ ಕುರಿತು ಇಲ್ಲ ಸಲ್ಲದ ಕಥೆ ಹೆಣೆದು ವಿವರಿಸುತ್ತಾಳೆ. ನಿನ್ನ ಹೆಂಡ್ತಿ ಅವನಿಗೆ ಎಷ್ಟೊಂದು ಕಾಳಜಿ, ಪ್ರೀತಿ ಮಾಡ್ತಾಳೆ. ಅವಳಿಗೆ ನಿನ್ನ ಮೇಲೆ ಪ್ರೀತಿಯಿಲ್ಲ. ನಿನ್ನ ತಲೆ ಚೆನ್ನಾಗಿ ಸವರಿ ತನ್ನ ಮಾತಿನ ಜಾಲದಲ್ಲಿ ನಿನ್ನನ್ನು ಬಂಧಿಸಿಟ್ಟಿದ್ದಾಳೆ. ಅವಳನ್ನು ಮನೆಯಲ್ಲಿ ಇರಿಸಿ ಕೊಳ್ಳಬೇಡ. ನಾನು ನನ್ನ ಕಣ್ಣ ತುಂಬ ನೋಡಿ, ಕಿವಿ ತುಂಬಾ ಕೇಳಿದ್ದೀನಿ. ಅಂಥವಳ ಮುಖ

ನೋಡಬಾರದು. ಅವಳಂತೆ ನಡತೆಗೆಟ್ಟವಳು ಈ ಭೂಮಿ ಮೇಲೆ ಬದುಕಿರಬಾರದೆಂದು , ಕೈಯಲ್ಲಿ ಬಲ್ಲೇವು (ಕತ್ತಿ, ಆಯುಧ) ಕೊಟ್ಟು ಹೆಂಡ್ತಿಯನ್ನು ಕೊಲ್ಲೆನ್ನುತ್ತಾಳೆ. ಆ ಸಮಯದಲ್ಲಿ ಮಗನಿಗೆ ಏನೂ ತೋಚದೆ ಗಾಬರಿಯಾಗುವನು. ಆಗ ತಾಯಿಯು ನಿನಗೆ ತಾಯಿ ಬೇಕಾ, ಹೆಂಡ್ತಿ ಬೇಕಾ ಎಂದು ಪ್ರಶ್ನಿಸುತ್ತಾಳೆ. ಸಿಟ್ಟಿನಿಂದ ಎಂಕಾರೆಡ್ಡಿ ಕೈಯಲ್ಲಿ ಕತ್ತಿ ಹಿಡಿದುಕೊಂಡು ಬರುತ್ತಾನೆ. ಮನೆಯಲ್ಲಿ ಲಕ್ಷ್ಮೀ ದೇವಿಯು ಮಗುವಿನೊಂದಿಗೆ ಮಲಗಿರುತ್ತಾಳೆ. ರೂಂ ನೊಳಗೆ ಬರುವುದನ್ನು ಕಂಡ ಐದು ತಿಂಗಳ ಮಗು ಅಂಬೆಗಾಲಾಕುತ್ತ ತಂದೆ ಬಳಿಗೆ ಬರುವುದು. ಮಗಳನ್ನು ತಂದೆ ಎತ್ತಿಕೊಳ್ಳುವುದಿಲ್ಲ. ನೀನು ನನ್ನ ಮಗಳಲ್ಲವೆಂದು ತಾಯಿ ಬಳಿ ಮಗಳನ್ನು ನೂಕುವನು. ಮತ್ತೆ ಮಗು ಬಂದು ಕಾಲು ಹಿಡಿದಾಗ , ತಂದೆಯ ಮನ ಕರಗಿ ಕನಿಕರದಿಂದ ಮಗುವಿಗೆ ಮುದ್ದು ಕೊಟ್ಟು ಎತ್ತಿಕೊಳ್ಳುವನು. ಇದನ್ನೆಲ್ಲಾ ರೂಮ ಹೊರಗಿನಿಂದ ನೋಡುತ್ತಿದ್ದ ಅತ್ತೆಯು ಮಗನು ತನ್ನ ಮಗಳ ಮುಖ ನೋಡಿ ಎಲ್ಲಾ ಮರೆತು ಹೆಂಡ್ತಿಯನ್ನು ಕೊಲ್ಲುವುದಿಲ್ಲವೆಂದು , ಸರಸರನೆ ರೂಂ ಒಳಗೆ ಬಂದು ಮಗುವನ್ನು ಎತ್ತಿಕೊಂಡು ಹೊರಗೆ ಹೋಗುವಳು. ಆಗ ಎಂಕಾರೆಡ್ಡಿಯು ಏನೂ ಅರಿಯದಂತೆ ಮಲಗಿರುವ ಲಕ್ಷ್ಮೀದೇವಿಯ ಹೊಟ್ಟೆಯನ್ನು ಕತ್ತಿಯಿಂದ ಸೀಳುವನು. ಅಮಾಯಕಳಾದ ಲಕ್ಷ್ಮೀದೇವಿ ಸಾಯುತ್ತಾಳೆ. ಹೆಂಡ್ತಿಯನ್ನು ಕೊಂದು ಗಂಡನು ಅಡಿವ್ಯಾಗ ಓಡಿ ಹೋಗುವನು. ಲಕ್ಷ್ಮೀ ದೇವಿಯ ಹೊಟ್ಟೆಯಿಂದ ರಕ್ತವು ಹಳ್ಳವಾಗಿ ಹರಿಯುವುದು. ಇದನ್ನು ಕಂಡು ಅತ್ತೆಯು ಸೊಸೆ ಹೊಟ್ಟೆಯೊಳಗೆ ಮೂರು ಸೀರೆ ತುರುಕುವಳು, ನನ್ನ ಸೊಸೆಗೆ ಹಾವು ಕಡಿಯಿತೆಂದು ಬಾಯಿ ಬಾಯಿ ಬಡಿದುಕೊಂಡು ಅಳುವಳು. ತೊಯ್ದ ರಕ್ತದ ಬಟ್ಟೆಯೆಲ್ಲಾ ಅಗಸರಕಿ ಚೆಂಜುವಮ್ಮಾಳಿಗೆ ಒಗೆಯಲಿಕ್ಕೆ ಹಾಕುವಳು. ಆಗ ಅಗಸರಕಿ ದೇವ್ರಾಗುತ್ತಾಳೆ.

ಆಕೆ ಮೈಯಲ್ಲಿ ಲಕ್ಷ್ಮಿದೇವಿ ಬಂದು ಮಾತಾಡುತ್ತಾಳೆ. ರಕ್ತದ ಬಟ್ಟೆಯೊಂದಿಗೆ ಅಗಸರಕಿ ಊರೊಳಗೆ ಬಂದು, ನಮ್ಮತ್ತಿನೇ ನನ್ನ ಕೊಲ್ಲಿಸ್ಯಾಳೆ ಗಂಡ ನನ್ನನ್ನು ಹೊಡೆದಾನೆ. ನಾನೇನು ಹಾವು ಕಚ್ಚಿ ಸಾಯಲಿಲ್ಲವೆಂದು ಹೇಳುವಳು. ಹಾಗೆ ಅಣ್ಣಂದಿರ ಬಳಿ ತವರಿಗೆ ಓಡಿ ಬಂದು, ಎಲ್ಲಾ ವಿಷಯ ತಿಳಿಸುವಳು. ನಮ್ಮತ್ತಿ ನನ್ನ ಕೊಲ್ಲಿಸಿ ಬಿಟ್ಟಾಳೆಂದಾಗ ಅಣ್ಣಂದಿರು ಅವಳನ್ನು ಸುಮ್ಮನೆ ಬಿಡುವುದಿಲ್ಲ ಕೊಂದು ಹಾಕುವೆವೆಂದಾಗ , ನಾನೇ ಶಿಕ್ಷೆ ಕೊಡುವೆನೆನ್ನುವಳು. ಅಣ್ಣಂದಿರೊಂದಿಗೆ ಗಂಡನ ಮನಿಗೆ ಬರುವಳು. ಗಂಡನನ್ನು ಅಗಸರಕಿ ವೇಷದಲ್ಲಿಯೇ ಹುಡುಕಿ ತರುವಳು. ಗಂಡನು ಈ ರೂಪ ನೋಡಿ ಗಡಗಡ ನಡಗುವನು. ಆದೋನಿಯಲ್ಲಿ ನನ್ನ ಗುಡಿ ಕಟ್ಟಿರೆಂದು ಸಾಯುವಳು. ಗಂಡನನ್ನು ಊರಿನ ಜನರೆಲ್ಲ ಥೀ, ಥೂ ಎಂದು ಉಗಳುವರು. ಸಾವನಪ್ಪಿದ ಲಕ್ಷ್ಮೀ ದೇವಿಗೆ ಸ್ನಾನ ಮಾಡಿಸಿ, ಬಟ್ಟೆ ಉಡಿಸಿ, ಗುಡಿ ಕಟ್ಟಿ ಅದರಲ್ಲಿ ಲಕ್ಷ್ಮೀ ದೇವಿಯನು ಕೂಡಿಸಿ ಪೂಜೆ ಮಾಡುವರು. ದೇವಿ ಸ್ಥಾಪನೆ ಮಾಡುತ್ತಾರೆ. ಅತ್ತಿಯಾದ ಮಂಗಮ್ಮ ಗುಡಿ ಮುಂದೆ ದೀಪವಾಗಿ ಉರಿಯದೇ, ತನ್ನ ತಲೆಮ್ಯಾಲೆ ದೀಪ ಉರಿಸುತ್ತ ನಿಲ್ಲುವಳು. ಗಂಡನು ಹೆಂಡ್ತಿ ಗುಡಿ ಹಿಂದೆ ಕಂಬನಾಗಿ ನಿಲ್ಲುವನು. ಅತ್ತ ರೂಮಿನಲ್ಲಿ ಕೂಡಿ ಹಾಕಿದ ಭಾವನನ್ನು ತಾನಾಗಿಯೇ ಬಿಡುವರು. ಭಾವನು ಊರಿಗೆ ಬಂದು ಎಲ್ಲ ವಿಷಯ ತಿಳಿದು ದುಃಖಿಸುವನು. ಕನಸಿನಲ್ಲಿ ಲಕ್ಷ್ಮಿದೇವಿಯು ಬಂದು ಭಾವನಿಗೆ ನೀನೆ ನನ್ನ ಪೂಜೆ ಮಾಡಬೇಕೆನ್ನುವಳು. ಭಾವನು ಹೆಚ್ಚು ರೊಕ್ಕಾ ಹಾಕಿ ಲಕ್ಷ್ಮಮ್ಮನ ಗುಡಿ ಕಟ್ಟಿಸುವನು. ದಿನಾಲೂ ತಾನೇ ಗುಡಿ ಪೂಜೆ ಮಾಡುತ್ತ ಇರುವನು.

2. 9- ಮಾರ್ವಾಡಿ ಸೇರಿ ಕಾವ್ಯ *:

ಕವಡೇಶಕೋಟ ಎಂಬ ಊರಿನಲ್ಲಿ ಬಜೇರಾಮ ತಾತ. ಇವರ ಕುಲ ಮಾರವಾಡಿ ಸೇರದವರದು. ಅವರಿಗೆ ಮೂರು ಮಕ್ಕಳು ಹುಟ್ಟುತ್ತಾರೆ. ಮಕ್ಕಳು ಹುಟ್ಟಿದ ಮೇಲೆ ಮಾರವಾಡಿಯು ಬೆಳ್ಳಿ ವ್ಯಾಪಾರ, ಬಟ್ಟಿ ವ್ಯಾಪಾರ, ದಲ್ಲಾಳಿ ಅಂಗಡಿಗಳು, ಜವಳಿ ಅಂಗಡಿಗಳನ್ನು ಹಾಕಿ ವ್ಯಾಪಾರ ಮಾಡಿ ಆಸ್ತಿ, ಮನಿ, ಊರಲ್ಲಿ ಜಮೀನು, ಇಪ್ಪತ್ತಾರು ಗಾವುದ ಅಗಲ, ಇಪ್ಪತ್ತಾರು ಗಾವುದ ಸುತ್ತಲೂ ಜಮೀನು ಮಾಡಿ ಕೊಂಡು ಊರಿಗೆ ದೊಡ್ಡ ಸಾಹುಕಾರನಾಗುವನು. ಮಕ್ಕಳಿನ್ನೂ ಚಿಕ್ಕವರಿರುವಾಗಲೇ ಗಂಡ - ಹೆಂಡತಿ ಸಾಯುತ್ತಾರೆ. ಬಜೇರಾಮನೊಂದಿಗೆ ಆತನ ಇಬ್ರು ತಮ್ಮಂದಿರು ವಡೇಗಾಂ, ಬಡೇಗಾಂ ಅಂತ ಊರು ಹಂಚಿಕೊಂಡು ಮದುವೆ ಮಾಡಿಕೊಂಡು ಇಲ್ಲೇ ವಾಸಿಸುತ್ತಿರುತ್ತಾರೆ. ಇವರೂ ಕೂಡ ಬೆಳ್ಳಿ - ಬಂಗಾರ, ವ್ಯಾಪಾರ ಮಾಡಿಕೊಂಡಿರುತ್ತಾರೆ. ಆದರೆ ಇಬ್ಬರಿಗೂ ಮಕ್ಕಳಾಗಿರುವುದಿಲ್ಲ. ಅಣ್ಣ, ಅತ್ತಿಗೆ ಸತ್ತ ಮೇಲೆ ಮಕ್ಕಳನ್ನು ಪ್ರೀತಿಸದೆ, ಜೋಪಾನ ಮಾಡದೆ, ಮನದಲ್ಲಿ ಆಸ್ತಿ ಲೋಭವು ಜಾಸ್ತಿಯಾಗಿ ಮಕ್ಕಳ ಕೈಕಾಲಿಗೆಲ್ಲಾ ಹಗ್ಗ ಕಟ್ಟಿ, ಅವರನ್ನು ಒಂದು ರೂಮಿನಲ್ಲಿ ಕಂಬಕ್ಕೆ ಕಟ್ಟುತ್ತಾರೆ. ಮಕ್ಕಳು ಬಾಯಿ, ಬಾಯಿ ಬಡಿದುಕೊಳ್ಳುತ್ತವೆ. ಕಕ್ಕನವರೇ ನಾವು ನಿಮ್ಮೊಂದಿಗೆ ಬರೋದಿಲ್ಲ. ನಮಗೆ ಆಸ್ತಿ - ಪಾಸ್ತಿ , ದುಡ್ಡು, ಜಮೀನು ಏನೂ ಬ್ಯಾಡ. ನೀವು ನಮ್ಮನ್ನು ಬಿಟ್ಟು ಬಿಡಿ ಎಂದು ಅಳುತ್ತಾ ಕೇಳಿಕೊಳ್ಳುವರು. ಅವರ ಸಂಕಟವನ್ನು ಕಂಡು ಅರಿಯದೆ , ನಾವು ನಮ್ಮಣ್ಣನ ಹಿಂದೆ ಹುಟ್ಟಿದವರು. ಅವನು ಕುಡಿದ ಹಾಲೆಂಜಲನ್ನು ಕುಡಿದವರು. ಅಣ್ಣನ ಆಸ್ತಿ ನಮಗೆ ಸೇರಬೇಕು. ಅದನ್ನು ನಾವೇ ತಿನ್ನಬೇಕು. ನೀವಿದ್ದರೆ ನಮಗೇನು ಲಾಭವೆಂದು ಅಣ್ಣನ ಬೆಳ್ಳಿ, ಬಂಗಾರ, ಭೂಮಿ ಪತ್ರಗಳು ಮನಿಪತ್ರಗಳು, ಗೌರ್ನಮೆಂಟು ರಿಕಾರ್ಡುಗಳನ್ನೆಲ್ಲಾ ವಶ ಮಾಡಿಕೊಳ್ಳುವರು. ಲಕ್ಷಾಂತರ ರೂಪಾಯಿಗಳ ಆಸ್ತಿಯನ್ನು , ಮನಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವರು. ಊರ ಮುಂದೆ ಇದ್ದು ಕವಲೇಶ ಕೋಟಿ ಗಡೇಗಾಂಗೆ ಸೇರಿದ್ದು. ಕರ್ನಾಟಕದಾಗ ಇರೋದು, ಆಂಧ್ರದೊಳಗೆ ಸೇರಿದ್ದು , ಅಂತ ಸೀಲ್ ಹಾಕಿ ಹೋಗುವರು.

ಇತ್ತ ಹುಡುಗ್ರು ಜೋರಾಗಿ ಅಳುವರು. ಇವರ ಧ್ವನಿಯು ಊರಿನ ಜನ ಕೇಳಿ ಅಲ್ಲಿಗೆ ಓಡಿ ಬಂದು, ಮಕ್ಕಳ ಕೈ ಕಾಲು ಬಿಚ್ಚುವರು. ಅದೇ ಮಾರ್ಗವಾಗಿ ಎಲ್ಲಪ್ಪ ಶೆಟ್ಟಿ ಕ್ಷಾಮಟ್ರವನು ಹೋಗುತ್ತಿರಲು, ಇವರ ಚೀರಾಟ ಕೇಳಿ ಅಲ್ಲಿಗೆ ಬರುವನು. ಆತನಿಗೆ ಮಕ್ಕಳ ಭಾಗ್ಯವಿರುವುದಿಲ್ಲ. ಈ ಮಕ್ಕಳನ್ನು ನೋಡಿ ಇವರು ಮಾರವಾಡಿ ಸೇರಿ ಕುಲದವರು. ಇವರನ್ನು ನಾನು ಜೋಪಾನ ಮಾಡ್ತೀನೆಂದು, ತನ್ನೊಂದಿಗೆ ಮೂರು ಮಕ್ಕಳನ್ನು ಊರಿಗೆ ಕರೆದೊಯ್ಯುವನು. ಮಕ್ಕಳಿಗಾಗಿ ವ್ಯಾಪಾರ ಮಾಡಿ , ಅಲಸಂದಿ, ಗುಗ್ಗರಿ , ಗೋದಿ ರೊಟ್ಟಿ, ಹಾಲು ಸಕ್ಕರೆ ಹೀಗೆ ಸವಿಯಾದ ಭಕ್ಷ ಭೋಜನ ಮಾಡಿಸುವನು. ಇವರು ಮಾರವಾಡಿ ಸೇರಿ ಮಕ್ಕಳು ಚೆನ್ನಾಗಿ ಉಂಡು-ತಿಂದು ಬೆಳೆಯಲೆಂದು ಅನ್ನಕ್ಕೇನೂ ಕಡಿಮೆಯಾಗದಂತೆ ಮಕ್ಕಳನ್ನು ಪ್ರೀತಿಯಿಂದ ಆರೈಕೆ ಮಾಡುವನು.

---

* ಮಾರ್ವಾಡಿ ಸೇರಿ ಕಾವ್ಯ : ನನ್ನ ಸಂಗ್ರಹ - ಅಪ್ರಕಟಿತ

ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವನು. ವರ್ಷಗಳುರುಳಿದಂತೆ ಎಲ್ಲಪ್ಪ ಶೆಟ್ಟಿ ಸಾಹುಕಾರನಾಗುವನು. ತನಗೆ ಮನಿ ಕಟ್ಟಿ ಕೊಳ್ಳುವನು. ಐದು ಎಕರೆ ಭೂಮಿ ತೆಗೆದುಕೊಳ್ಳುವನು. ತನ್ನ ಹೆಂಡ್ತಿ ಮೈಮೇಲೆಲ್ಲಾ ಬಂಗಾರ ಮಾಡ್ಸಿ ಹಾಕುವನು. ಹೀಗೆ ಈತನ ವ್ಯಾಪಾರ ಚೆನ್ನಾಗಿ ನಡೆಯುವುದು. ಮಕ್ಕಳೂ ಹತ್ತು ವರ್ಷದವರಾಗಿ ಬೆಳೆದು ದೊಡ್ಡವರಾಗುವರು. ಒಂದು ದಿನ ಮಕ್ಳು ಇಸ್ಕೂಲಿನಿಂದ ಬರೋವಾಗ , ಅಗಸಿ ಕಟ್ಟಿ ಮೇಲೆ ಕುಂತು ಮಾತನಾಡುತ್ತಿರುವಾಗ , ಅದೇ ದಾರಿಯಲ್ಲಿ ಹುಡುಗರ ತಾತನ ತಂಗಿ ಗಂಡನಾದ ಡಿಂಗಲದಾರನು ನಡೆದುಕೊಂಡು ಹೋಗುತ್ತಿರುತ್ತಾನೆ. ಮೂವರು ಮಕ್ಕಳ ಮಾತುಗಳನ್ನು ಆಲಿಸುವನು. ಈ ಹುಡುಗ್ರು ನಮ್ಮ ಕುಲದವರಂತೆ ಕಾಣುವರಲ್ಲ. ಇವರನ್ನು ಪರೀಕ್ಷಿಸಬೇಕೆಂದು ಒಂದೇ ಕೈ ಎತ್ತಿ ಸಲಾಮ್ ಎನ್ನುವನು. ಆಗ ಹುಡುಗ್ರು, ಇವರು ನಮಗಿಂತಲೂ ದೊಡ್ಡವರಾಗಿ, . ಸಣ್ಣವರಾದ ನಮಗೇಕೆ ಸಲಾಮ್ ಮಾಡ್ತಿದ್ದಾರೆಂದು ಎದ್ದು ಒಂದೇ ಪಾದದ ಮೇಲೆ ನಿಂತು, ಒಂದೇ ಕೈಲೆ ಸಲಾಮ್ ಸಲಾಮ್ ಎನ್ನುವರು. ಹುಡುಗ್ರಿಗೆ ನಿಮ್ಮ ಊರಾವುದು? ನಿಮ್ಮ ಹೆಸರು, ಕುಲವಾವುದೆಂದು ಡಿಂಗಲದಾರ ಕೇಳುವನು. ಹುಡುಗ್ರು ನಮ್ಮ ತಾತ ಬಜೇರಾಮು - ನಮ್ಮ ತಂದೆ ನಾನಂದ ರಾವು, ಅವರ ಮಕ್ಕಳಾದ ನಾವು ತೀರೋಜಿ , ಸೋಮಾಜಿ, ರಾಜನಂದನ ಎಂದು ತಮ್ಮ ಪರಿಚಯ ಮಾಡಿಕೊಡುವರು. ನೀವೆಲ್ಲಾ ಈ ಊರಿಗೆ ಹೇಗೆ ಬಂದು ಸೇರಿದ್ರೆಂದು ಕೇಳಿದಾಗ , ಹುಡುಗ್ರು ನಮ್ಮ ಕಾಕನವರು ನಮ್ಮಪ್ಪ , ಅಮ್ಮ ಸತ್ತ ಮ್ಯಾಲೆ ನಮ್ಮನ್ನು ಕಟ್ಟಿ ಹಾಕಿ, ನಮ್ಮ ಎಲ್ಲಾ ಆಸ್ತಿ, ಜಮೀನೆಲ್ಲಾ ಅವರೇ ನುಂಗ್ಯಾರ ಶೆಟ್ರು ನಮ್ಮನ್ನು ಕರತಂದು ವ್ಯಾಪಾರ ಮಾಡಿ ಜೋಪಾನ ಮಾಡಿದ್ರು. ಹೀಗೆ ನಡೆದ ಎಲ್ಲಾ ವಿಷಯವನ್ನು ವಿವರಿಸುವರು. ಇವರು ನಮ್ಮ ಕುಲದವ್ರು. ಕಟ್ಟೆ ನಾನು ಕೆಟ್ಟಂಗೆ. ಮೂ ವರು ಮಕ್ಕಳಿಗೆ ತನ್ನೊಂದಿಗೆ ಕಳುಹಿಸಿಕೊಡಿರೆಂದು ಎಲ್ಲಪ್ಪ ಶೆಟ್ಟಿಗೆ ಕೇಳಿ , ಮಕ್ಕಳೊಂದಿಗೆ ಮನಿಗೆ ಬರುವನು.

ಡಿಂಗಲದಾರನು ಮಕ್ಕಳಿಗೆ ಓದು, ಯುದ್ಧವನ್ನು ಕಲಿಸುವನು. ಆತನಿಗೆ ಮೂವರು ಹೆಣ್ಣು ಮಕ್ಕಳಿರುವರು. ದೊಡ್ಡಾತನಿಗೆ ಮಗಳನ್ನು ಕೊಟ್ಟು ಮದುವೆ ಮಾಡಿ, ಅರ್ಧ ಆಸ್ತಿ ಕೊಡುವನು. ದೊಡ್ಡವರಾದ ನಾವು ಒಬ್ರು ಆಸ್ತಿಗೆ ಆಸಿ ಜೀಳಬಾರ್ದು. ನಾವೇ ಸ್ವಂತ ವ್ಯಾಪಾರ , ನೌಕರಿ ಮಾಡಿ , ಹಣ ಗಳಿಸಿ, ನಮ್ಮಪ್ಪನಂತೆ ಊರ ಕಟ್ಟಬೇಕೆಂದು ನಿರ್ಧರಿಸಿ ಊರು ಬಿಟ್ಟು, ಕುದುರೆ ಮ್ಯಾಲೆ ಕುಳಿತು ಹೊರಡುವರು. ಇವರಿಗೆ ದಾರಿ ಮಧ್ಯೆ 'ಕುಂದ್ರಿವೋಲ' ಅಡ್ಡಾಗುವುದು. ಅದೇ ಸ್ಥಳದಲ್ಲಿ ಇಳಿದು ಕೊಳ್ಳುವರು. ಅಲ್ಲೊಂದು ದೂರದಲ್ಲಿ ಗುಡಿಸಲು ಕಾಣಿಸುವುದು. ಗುಡಿಸಲ ಹತ್ತಿರ ಮೂವರು ಹೋಗುವರು. ಗುಡಿಸಲಲ್ಲಿ ಗೊಲ್ಲರ ನಾರಾಯಣಮ್ಮ ಅಂತ ಇರುವಳು. ಅವಳು ಭೂಮಿಯೊಳಗೆ ಏಳು ಕೊಪ್ಪರಿಗೆ ದುಡ್ಡನ್ನು ಕೊಡಗಳಲ್ಲಿ ಹಾಕಿ ಮುಚ್ಚಿಟ್ಟಿರುತ್ತಾಳೆ. ಅವಳಿಂದ ಹುಡುಗ್ರು ಏಳು ಕೊಪ್ಪರಿಗೆ ಆಸ್ತಿ ಸಾಲದ ರೂಪದಲ್ಲಿ ತಂದು, ಅಲ್ಲಿಯೇ ಮನಿ ಕಟ್ಟಿ ವಾಸಿಸುವರು.

ಅವರು ಮನಿ ಕಟ್ಟಿದ ಭೂಮಿಯು ಹುಡುಗ್ರ ಕಕ್ಕನವರದಾಗಿರುತ್ತದೆ. ತಮ್ಮ ಜಾಗದಲ್ಲಿ

ಯಾರೊ ಮನಿಕಟ್ಟಿರುವರೆಂದು ನೋಡಿ ನಮ್ಮ ಜಾಗದಲ್ಲಿ ಊರು ಕಟ್ಟಿದ ಇವು, ನಾಳೆ ಆಸ್ತಿ ಕೇಳಾಕ ಬರ್ತಾರೆಂದು ತಿಳಿದು , ಕಕ್ಕನು ಐದು ಮಂದಿ ಕಳ್ಳರನ್ನು, ಈ ಮೂವರು ಹುಡುಗ್ರನ್ನು ಕಡಿಯಲು ನೇಮಿಸುತ್ತಾನೆ. ದೊಡ್ಡ ಹುಡುಗನು ಹೊತ್ತು ಮುಣಿಗಿ ನಾಲ್ಕು ಗಂಟ್ಯಾಗ ಚೆಂಬು ಹಿಡಕೊಂಡು ಹೋಗುವಾಗ , ಅಲ್ಲೆ ಕಾಯ್ದು ಕುಳಿತ ಕಳ್ರು ಅವನ ಕುತ್ತಿಗೆಯನ್ನು ಕೊಯ್ದು ಕೊಂದಾಕುವರು. ಇನ್ನು ಇಬ್ರು ಉಳಿದರೆಂದು ಸುದ್ದಿ ತಿಳಿಸುವರು. ಉಳಿದಿಬ್ಬರ ಕುತ್ತಿಗೆ ಕೊಯ್ದು ತನ್ನಿರೆಂದು ಮತ್ತೆ ಕಳ್ಳರನ್ನು ಕಳುಹಿಸುವನು. ಇತ್ತ ತೀರೋಜಿ ಹೆಂಡ್ತಿಗೆ ಗಂಡ ಸತ್ತ ವಿಷಯ ತಿಳಿಯುವುದು. ನನ್ನ ಮಾವನೆ, ಗಂಡನನ್ನು ಕೊಂದನು ಅವನ ಕುತ್ಗಿ ನಾನೇ ಕೊಯ್ದು , ಕರ್ಮ ಕಳಿಬೇಕೆಂದು ತೀರ್ಮಾನಿಸುವಳು. ನನ್ನ ಮೈದುನರುಗಳಾದರು ಚೆನ್ನಾಗಿರಲೆಂದು ಆಶಿಸಿ ಗಂಡಿನ ವೇಷಹಾಕಿಕೊಂಡು ಕೈಯಲ್ಲಿ ಕತ್ತಿ ಹಿಡಿದು ಕುದ್ರಿ ಮ್ಯಾಲೆ ಹೊರಡುವಳು. ದಾರಿಯಲ್ಲಿ ಬರುವ ಎಲ್ಲ ಕಳ್ಳರನ್ನು ಕಡಿದು ಹಾಕುವಳು. ಹಾಗೆ ಮಾವನನ್ನು ಕಡಿದು ಹಾಕಿ ಬರುವಳು. ತನ್ನ ಮೈದುನರಿಗೆ ಮದುವೆ ಮಾಡುವಳು. ತಮ್ಮಂದಿರು ಅಣ್ಣನ ಗುಡಿ ಕಟ್ಟಿ, ಆತನ ಪೂಜೆಮಾಡುವರು. ಎಲ್ಲರೂ ಬೆಳ್ಳಿ ವ್ಯಾಪಾರ, ಬಂಗಾರ ವ್ಯಾಪಾರ ಮಾಡ್ತಾ ರಾಜ್ಯವಾಳ್ತಾ ಸುಖವಾಗಿ ಬಾಳುವರು.

2.10- ಬೊಬ್ಬಿಲಿ ನಾಗಿರೆಡ್ಡಿ ಕಾವ್ಯ *:

ಗಡೆಕಲ್ಲ ಊರಲ್ಲಿ ರೆಡ್ಡಿ ಕುಲದಲ್ಲಿ ನಾಟಿಗೌಡ್ರು. ನಾರಾಯಣರೆಡ್ಡಿ ಮಗ ಅಂಗಾರೆಡ್ಡಿಯು ಭೀಮಲಿಂಗದೇವರು ಗುಡಿಗೆ ಬಂದು ವರ ಕೇಳುವನು. ಭೀಮಲಿಂಗ ತಾತನ ವರ ಪ್ರಸಾದದಿಂದ ಶನಿವಾರ ಅಮವಾಸ್ಯೆಯ ಹನ್ನೆರಡು ಗಂಟೆಯಲ್ಲಿ ಮಗ ಹುಟ್ಟುವನು. ಅವನಿಗೆ 'ನಾಗಿರೆಡ್ಡಿ' ಎಂದು ನಾಮಕರಣ ಮಾಡುವರು. ಕೆಲವು ದಿನಗಳುರುಳಿದ ಮೇಲೆ ನಾಗಿರೆಡ್ಡಿಗೆ ಗೌರಮ್ಮ ಎಂಬ ತಂಗಿ ಹುಟ್ಟುವಳು. ಚಿಕ್ಕ ವಯಸ್ಸಿನಲ್ಲಿಯೇ ನಾಗಿರೆಡ್ಡಿ ಜಾಣನಾಗಿರುವನು. ಹನ್ನೆರಡನೇ ವಯಸ್ಸಿನಲ್ಲಿಯೇ ಓದು ಬರಹ ಕಲಿತು ಕೊಳ್ಳುವನು. ಹುಡುಗನಿಗೆ ಲೋಕ ಜ್ಞಾನ ಹೆಚ್ಚಾಗುವುದು. ತಂದೆಯು ಮಗನನ್ನು ಇಸ್ಪೀಟಾಟಕ್ಕೆ ಕೂಡಿಸುವನು. ಚಿಕ್ಕವನಾದ ಇವನ ಜೊತೆಯಲ್ಲಿ ದೊಡ್ಡವರು ಇಸ್ಪೀಟು ಆಡುವರು. ಆಟದಲ್ಲಿ ನಾಗಿರೆಡ್ಡಿ ನೂರು ಎಕರೆ ಭೂಮಿ, ತೋಟ ಎಲ್ಲವನ್ನು ಗೆಲ್ಲುವನು. ಆಟದಲ್ಲಿ ಸಾಕಷ್ಟು ದುಡ್ಡು ಮಾಡಿಕೊಳ್ಳುವನು. ನಾಗಿರೆಡ್ಡಿಯ ಜಾಣತನಕ್ಕೆ ಎಲ್ಲರೂ ಬೆರಗಾಗುವರು. ನಾವು ಇಷ್ಟು ಮಂದಿ ದೊಡ್ಡೋರು ಇದ್ದೂ ಇನ್ನು ನಿನ್ನೆ ಮೊನ್ನೆ ಹುಟ್ಟಿದಂಥವನು ನಮ್ಮನ್ನೆ ಸೋಲಿಸಿದನಲ್ಲಾ ಎಂದು ಆತನ ಮೇಲೆ ಹಲ್ಲು ಮಸೆಯುವರು.

ನಾಗಿರೆಡ್ಡಿ ಇಸ್ಪೀಟ್ ಆಟದಲ್ಲಿ ಗೆದ್ದು ಮ್ಯಾಲೆ ಭೀಮಲಿಂಗ ತಾತನಿಗೆ ತೇರು ಮಾಡಿಸ್ತಾನೆ. ಊರಿನವರು ಹೇಗಾದರೂ ಮಾಡಿ ನಾಗಿರೆಡ್ಡಿಯ ತಲೆ ಕಡಿಯಲು ಐದು ಮಂದಿಯನ್ನು ನೇಮಿಸುತ್ತಾರೆ. ಇದನ್ನು ಅರಿತ ನಾಗಿರೆಡ್ಡಿಯು ತನ್ನನ್ನು ಕಡಿಯಲು ಬಂದವರನ್ನೇ ಕಡಿದು ಹಾಕುತ್ತಾನೆ. ಕೊಲೆ ವಿಷಯ ತಿಳಿದು ಇನ್ಸ್‌ಪೆಕ್ಟರ್ ನಾಗಿರೆಡ್ಡಿಯನ್ನು ಬಳ್ಳಾರಿ ಜೈಲಿಗೆ ಒಯ್ದು ಹಾಕುತ್ತಾರೆ. ಭೀಮಲಿಂಗ ತಾತನ ವರ ಪ್ರಸಾದದಿಂದ ಹುಟ್ಟಿದ ನಾಗಿರೆಡ್ಡಿ ಕೈಯಲ್ಲಿ ಬೇಡಿ

★ ಬೊಬ್ಬಿಲಿ ನಾಗಿರೆಡ್ಡಿ ಕಾವ್ಯ : ನನ್ನ ಸಂಗ್ರಹ - ಅಪ್ರಕಟಿತ

ಹಾಕಿದ್ರೆ ಹಾಂಗೆ ಕಳಚಿ ಬೀಳುತ್ತವೆ. ಮತ್ತೆ ಮತ್ತೆ ಬೇಡಿ ತೊಡಿಸಿದಂತೆಲ್ಲಾ ಕಳಚುತ್ತಾ ಹೋಗುತ್ತವೆ. ಸದಾ ಇವನೊಂದಿಗೆ ತಾತ ಇರುತ್ತಾನೆ. ಜೈಲಿನಲ್ಲಿದ್ದ ಸಬ್ ಇನ್ಸ್‌ಪೆಕ್ಟರ್‌ರನ್ನು ಕಡಿದು , ಅವನ ಮಗಳನ್ನು ಕುದುರೆ ಮ್ಯಾಲೆ ಹೊತ್ತುಕೊಂಡು ನಾಗಿರೆಡ್ಡಿ ಗಡೆಕಲ್ಲನ್ನು ಸೇರುತ್ತಾನೆ.

ನಾಗಿರೆಡ್ಡಿ ಜೈಲಿನಿಂದ ಪರಾರಿಯಾದ ವಿಷಯ ತಿಳಿದು ಗೌರ್‍ನಮೆಂಟದವರು ಇವನನ್ನು ಹಿಡಿಯಲು ಹೊಂಚು ಹಾಕುವರು. ಕೂನಿ ಮಾಡಿ ಮಗಳನ್ನು ಎತ್ತುಕೊಂಡೋದವನ ಜೀವ ತೆಗೆಯಬೇಕೆಂದು ತೀರ್ಮಾನಿಸುವರು. ಎಷ್ಟೆಲ್ಲಾ ಸ್ಥಳಗಳಲ್ಲಿ ಹುಡುಕಿದರು ನಾಗಿರೆಡ್ಡಿ ಸಿಗುವುದಿಲ್ಲ. ಗುಮ್ಮನೂರಿನ ಮಾದಯ್ಯ ಇನ್ಸ್‌ಪೆಕ್ಟರ್‌ಗೆ ನಾಗಿರೆಡ್ಡಿ ಬಗ್ಗೆ ತಿಳಿಸುವನು. ನಾಗಿರೆಡ್ಡಿಗೆ ದೇವರ ಅನುಗ್ರಹವಿದೆ. ಆತನಿಗೆ ಭೀಮಲಿಂಗ ತಾತನು ಮಂತ್ರಿಸಿ ಕೊಟ್ಟ ರಿವಾಲ್ವರ (ಬಂದೂಕು) ಇರುವ ವಿಷಯ ಹೇಳಿ, ನಾಗಿರೆಡ್ಡಿಯ ಸಾವು ಆತ ಹುಟ್ಟಿದ ದಿವಸ ಅಂದರೆ ಅಮವಾಸ್ಯೆ ಶನಿವಾರ ಹನ್ನೆರಡು ಗಂಟೆಗೆ ಅವನ ಬಂದೂಕಿನಿಂದ ಹೊಡೆದರೆ ಸಾವನ್ನಪ್ಪುವ ಮಾಹಿತಿ ನೀಡುವನು. ಎಲ್ಲರಿಗೂ ಒಂದೇ ಚಿಂತೆ ಕಾಡುವುದು. ನಾಗಿರೆಡ್ಡಿ ಬಲು ಜಾಣ ಹುಡುಗ. ಸುಲಭವಾಗಿ ಸಿಗುವವನಲ್ಲ. ಹೇಗಾದರೂ ಪ್ಲಾನು ಮಾಡಿ ಹಿಡಿಯಬೇಕೆಂದು ಚಿಂತಿಸುತ್ತಾರೆ. ಎಲ್ಲರ ಪಾಲಿಗೂ ನಾಗಿರೆಡ್ಡಿ ಸಿಂಹ ಸ್ವಪ್ನನಾಗುತ್ತಾನೆ.

ಆಗ ನಾಗಿರೆಡ್ಡಿಯ ತಂಗಿ ಗೌರಮ್ಮನಿಗೆ ಗುಂತಕಲ್ಲ ಬಗಲಾಗ ಇರುವ ಖಜಾಪೂರಕ್ಕೆ ಕೊಟ್ಟಿರ್ರಾರೆ. ಅವಳ ಸಹಾಯ ಪಡೆಯಬಹುದೆಂದು ಮಾದರವನು ಹೇಳುವನು. ತಂಗಿಯ ಬಳಿಗೆ ಮಾದರವನು ಹೋಗಿ ನಿನ್ನ ಅಣ್ಣನಿಗೆ ಗಂಡ ಸತ್ತಾನೆಂದು ಪತ್ರ ಬರೆದು ಹಾಕು. ಪತ್ರ ಓದಿ ತಂದೆ - ತಾಯಿ ಎದಿ ಒಡೆದು ನಿನ್ನಣ್ಣನನ್ನು ಕಳುಹಿಸುವರು. ಮನಿಗಿ ಬಂದಾಗ , ಆತನ ರಿವಾಲ್ವರ ತೆಗೆದುಕೊಂಡು ಗೌರ್‍ನಮೆಂಟದವರಿಗೆ ಕೊಡಬೇಕೆಂದು ನನ್ನನ್ನು ನಿನ್ನ ಬಳಿಗೆ ಹೇಳಿ ಕಳುಹಿಸಿರುವರೆಂದು ಹೇಳುವನು. ಇದನ್ನು ಕೇಳಿ ಮೊದಲು ಒಪ್ಪಿಕೊಳ್ಳದ ತಂಗಿ ಅಣ್ಣನೊಂದಿಗೆ ಆದ ಜಗಳವನ್ನು ಒಮ್ಮೆ ನೆನಪಿಸಿಕೊಳ್ಳುವಳು. ಒಮ್ಮೆ ಅಣ್ಣನೊಂದಿಗೆ ತವರು ಮನೆಯಲ್ಲಿ ಜಗಳವಾಡಿರುತ್ತಾಳೆ. ಯಾವುದೇ ವಿಷಯಕ್ಕೆ ನಾನು ಗಂಡನ ಮನಿಗೆ ಹೋಗುವುದಿಲ್ಲವೆಂದಾಗ , ಅಣ್ಣನು ನಿನ್ನ ಕೈ ಕಾಲು ಕಟ್ಟಿ ಗೋಣಿ ಚೀಲದಲ್ಲಿ ಹಾಕಿ ಕಳಿಸ್ತೀನಿ. ಸತ್ತರೆ ಅಲ್ಲೆ ಸಾಯಬೇಕು. ಇದ್ದರೆ ಅಲ್ಲೆ ಇರಬೇಕು. ಇಲ್ಲಿದ್ದು ನಮಗೆ ಅಪಕೀರ್ತಿ ತರ್‍ತೀಯಾ. ನಿನ್ನ ಮನಿಗೆ ನೀನು ಹೋಗೆಂದು ಕಳುಹಿಸಿರುತ್ತಾನೆ. ಅಣ್ಣನ ಬಗ್ಗೆ ಮೊದಲೆ ಸಿಟ್ಟು ತುಂಬಿಕೊಂಡು ಕುಳಿತ ತಂಗಿಯು ಇಂತಹ ದುಷ್ಟದವನು ಇರಬಾರದೆಂದು ತನ್ನ ಅಣ್ಣನನ್ನು ಹಿಡಿದುಕೊಡಲು ಒಪ್ಪಿಗೆ ಕೊಡುತ್ತಾಳೆ.

ಇನ್ಸ್‌ಪೆಕ್ಟರು ಹೇಳಿದ ಹಾಗೆ ಗಂಡ ಸತ್ತನೆಂದು ಸುಳ್ಳು ಪತ್ರ ಬರೆಯಿಸಿ, ತವರೂರಿಗೆ ಹಾಕುತ್ತಾಳೆ. ನಾಗಿರೆಡ್ಡಿಯು ಹುಟ್ಟಿದ ದಿವಸವೇ ಅದಾಗಿರುತ್ತದೆ. ಆ ದಿವಸ ಆತ ಊರ ಬಿಟ್ಟು ಹೋಗಬಾರದೆಂದು ಹೇಳಿರುತ್ತಾರೆ. ಅದೇ ವಾರದ ದಿವಸವೇ ತಂಗಿಯ ಊರಿಗೆ ಬರ್‍ತಾನೆ. ಅಣ್ಣ ಬಂದದ್ದು ನೋಡಿ ತಂಗಿಯು ಮನೆಯಲ್ಲಿ ನೀರಿಲ್ಲವೆಂದು ಹೇಳುವಳು. ಸತ್ರಂತ ಪತ್ರ ಬಂದಿತಲ್ಲಾ ತಂಗಿ ಎಂದು ಕೇಳುವನು. ಆಗ ತಂಗಿಯು ಹೌದಣ್ಣ ಹೋದ ಜೀವವನ್ನು ನಮ್ಮ ಮನೆದೇವು

ಛೀಮಲಿಂಗದೇವರನ್ನು ನೆನೆಸಿಕೊಂಡ್ರೆ ಮತ್ತೆ ಜೀವ ಉಳಿಸಿದಣ್ಣಾ ಎಂದು ಸುಳ್ಳು ಹೇಳುವಳು. ನಿನ್ನ ಗಂಡ ಎಲ್ಲೆಂದಾಗ ಹೊಲ ದಲ್ಲಿ ಕಳ್ಳರು ಕಲೇ ಬಿದ್ದಿದ್ರಂತೆ ಅಲ್ಲಿಗೆ ಹೋಗಿದ್ದಾರೆನ್ನುವಳು.ನೀರು ತರಬೇಕೆಂದು ಕೊಡ ತೆಗೆದುಕೊಂಡು ಹೋಗುವಾಗ , ಬಕ್ಕನದಾಗ ಗುಡಿನ ಚೀಲದಿಂದ ರಿವಾಲ್ವರ ತೆಗೆದು ಗೂಟಕ್ಕೆ ಸಿಗಿಸಿ, ನೀರು ತರಲು ಹೊರಡುವನು. ಆಗ ತಂಗಿಯು ರಿವಾಲ್ವರನ್ನು ತೆಗೆದುಕೊಂಡು ಯಾರಿಗೂ ಕಾಣದಂತೆ ಮಾದರವನಿಗೆ ಕೊಡುವಳು.

ಆ ಸಮಯಕ್ಕಾಗಲೇ ಆ ಊರಲ್ಲಿ ಮಾದರವನೊಂದಿಗೆ ಪೋಲೀಸಿನವರು ಬಂದು ಕಾಯುತ್ತಿರುತ್ತಾರೆ. ನಾಗಿರೆಡ್ಡಿಯು ಕೊಡ ಹೊತ್ತು ಕೊಂಡು ಬರುವಾಗ ಅವನ ರಿವಾಲ್ವರನಿಂದಲೇ ಗುಂಡು ಹಾರಿಸುವರು. ಅದು ನಾಗಿರೆಡ್ಡಿಯ ಬೆನ್ನಿಗೆ ಹೊಕ್ಕು ಎದೆಲಿಂದ ಹೊರ ಬರುತ್ತದೆ. ಆಗ ನಾಗಿರೆಡ್ಡಿಯನ್ನ ಒಂದಿಷ್ಟು ಜೀವವಿರುವಾಗಲೇ ಕುದುರೆ ಮೇಲೆ ಹಾಕಿಕೊಂಡು ಛೀಮಲಿಂಗತಾತನ ಗುಡಿಗೆ ಬರ್ತಾರೆ. ತಾತನು ಮಗನಿಗೆ ಗುಂಡು ಬಿದ್ದ ಜಾಗಕ್ಕೆ ಆಧಾರ ಹಾಕ್ತೀನಿ, ಗಾಯ ಬೇಸಾಗುತ್ತದೆಂದು ಸ್ವಾಮಿ ನಾವು ರೆಡ್ಡಿ ಕುಲದವರು. ನಮ್ಮ ಕಾಲಮರಿ ಹೊಲಿಯುವವನ, ಕಾಲಡಿಯಲ್ಲಿದ್ದವನ ಕೂಟ ಏಟು ತಿಂದವನು ನಾನು. ಇಂಥ ಜೀವ ಇದ್ರೆಷ್ಟು? ಬಿಟ್ರೆಷ್ಟು? ಏನು ಪ್ರಯೋಜನ ಆಗುವುದು? ನನ್ನ ಜೀವ ಇಲ್ಲಿಗೆ ಸಾಕೆಂದು ಪ್ರಾಣ ಬಿಡುವನು. ಗಡೇಕಲ್ಲ ಮುಂದೆ ನಿನ್ನ ಪೂಜೆ ಆಗಲಿ , ಹಿಂದೆ ನನ್ನ ಪೂಜೆ ಆಗಲೆಂದು ತಾತ ಹೇಳುವನು.

2.11- ಗಂಗಿ - ಗೌರಿ ಹಾಡು *:

ದಕ್ಷಿಣ ತಾಯಿ ಗೌರಮ್ಮ. ಈಕಿ ಭಾಗಿ ಗೌರಮ್ಮ ದೊಡ್ಡವಳು. ಸಣ್ಣಾಕಿ ಭಾಗಿ ಗಂಗಮ್ಮ ಗೌರಮ್ಮಗ ಭಿಕ್ಷಾ ಬೇಡೋ ಶಿವನಿಗೆ ಕೊಟ್ಟು ಮದಿವಿ ಮಾಡ್ತಾರ. ಬುಧವಾರ ಹುಟ್ಟಿದಳು ಬೂಧ ಗಂಗಮ್ಮ. ಬುಧವಾರದಂದೇ ನೆರೆತಳು ಬೂಧ ಗಂಗಮ್ಮ ಇದ್ಕಕಾಗಿ ತಂದೆಯು ಚಿಂತೆ ಮಾಡುತ್ತಾನೆ. ಒಲ್ಲದ ಮಲ್ಲನಿಗೆ ಮಗಳನ್ನು ಕೊಡಬಾರದು. ಕೊಟ್ಟಿದ ಮನಿಯೆಲ್ಲಾ ನಾಶವಾಗುವುದು. ಅವರ ಮನಿ ಉದ್ಧಾರವಾಗುವುದಿಲ್ಲ. ಒಂದು ಗಡಗಿಯಲ್ಲಿ ಮಗಳನ್ನು ಕುಂದ್ರಿಸಿ, ಬೀಗ ಹಾಕದೆ , ನೀರಲ್ಲಿ ಹೊಳಿ ದಂಡಿಯೊಳಗೆ ಒಯ್ದು ಬಿಟ್ಟು ಬರಬೇಕು. ಯಾರಿಗೆ ಮಗಳು ಸಿಗುವಳೊ, ಅವರ ಮನಿ ಉದ್ಧಾರವಾಗ್ತದೆ ಎಂದು ತಂದಿ - ತಾಯಿ ಇಬ್ರು ದುಃಖ ಮಾಡ್ತಾರ. ನೀವು ಅಳಬ್ಯಾಡ್ರಿ ನಿಮ್ಮ ಮಗಳೀಗ ಗಂಗೀ ಮಗಳು. ಗಂಗೀ ಮಗಳನ್ನು ಗಂಗೀದಾಗ ಬಿಟ್ಟು ಬರ್ರಿ ಎನ್ನುವಳು. ಗಂಗಮ್ಮನ ಕೈಯಾಗ ರುದ್ರಾಕ್ಷಿ ಕಟ್ಟಿ ಚಿಗಲಿಯ ತೊಗಲಿನ ಸೀರ್ಯಾಕಿ, ಗಡಗಿಯ ಒಳಗೆ ಕುಂದ್ರಿಸಿ, ಗಡಿಗೆ ಬೀಗ ಹಾಕಿ, ಪೆಟ್ಟಿಗೆ ತಲೆ ಮ್ಯಾಲೆ ಹೊತ್ತುಕೊಂಡು ಹೋಗಿ ಹೊಳಿದಂಡಿಯೊಳಗೆ ಒಗಿದು ಬರ್ತಾರೆ.

ಹೊಳಿ ದಂಡಿಗೆ ಅಂಬಿಗರು ಭಲ್ಲೆ ತೆಗೆದುಕೊಂಡು ಮೀನು ಹಿಡಿಯಲು ಏಳು ಮಂದಿ ಅಣ್ಣ ತಮ್ಮಂದಿರು ಬರುವರು. ಮೀನು ಹಿಡಿಯಲು ಬಲಿ ಒಡ್ಡುವರು. ಆಗ ಒಡ್ಡಿದ ಬಲಿಯೊಳಗೆ ಪೆಟ್ಟಿಗೆ ಬೀಳುವುದು. ಅದನ್ನು ಹೊರಗೆ ಎಳೆದು ತೆರೆದು ನೋಡುವರು. ಆಗ ಪೆಟ್ಟಿಗೆಯಲ್ಲಿದ್ದ

★ ಗಂಗಿ-ಗೌರಿ ಹಾಡು : ನನ್ನ ಸಂಗ್ರಹ - ಅಪ್ರಕಟಿತ

ಗಂಗಮ್ಮ ನಾನು ದೆವ್ವ, ಪೀಡೆವಲ್ಲಾ, ಗಂಗದಲ್ಲಿ ಸಿಕ್ಕ ಗಂಗ ಬಾಲೆ ಬುಧವಾರ ಹುಟ್ಟಿದ ಗಂಗವ್ವ ಬಾಲೆನಿರುವೆನೆಂದು ಹೇಳಿದಾಗ ಹೆದರಿ ಬಿಟ್ಟ ಅಣ್ಣವ್ರು ಆಗ, ಬಾಜಾ ಭಜಂತ್ರಿ ತರಿಸಿ, ಅವಳನ್ನು ಮನಿಗಿ ಕರೆದುಕೊಂಡು ಹೋಗುವರು. ಅಂಬಿಗರಾದ ಇವ್ರು ಮೀನು ಮಾರಿಕೊಂಡು ಬಂದ ಹಣದಲ್ಲಿ ಬದುಕುತ್ತಿರುತ್ತಾರೆ. ಇವರಿಗೆ ಅಡವ್ಯಾಗ ಭೂಮಿ, ಊರಾಗ ಮನಿ ಏನೂ ಇರುವುದಿಲ್ಲ. ಇವರ ಜಲ್ಮಕ್ಕೆ ಬಡತನವಿರುತ್ತದೆ. ಅಣ್ಣಂದಿರಿಗೆ ಗಂಗಮ್ಮ ಹೀಗೆ ಹೇಳುವಳು. ಅಣ್ಣವ್ರೆ ನೀವು ಮೀನು ಕೌಜು, ಹಿಡಿಬ್ಯಾಡ್ರಿ, ನಿನ್ನಿಗಿ ನಿಮ್ಮ ಬಡತನ ಹೊಯ್ತು ನೀವು ಹೊಳಿದಂಡಿ ಬಗಲಾಗ ಭೂಮಿ ಎಲ್ಲಾ ಕಾಲಲ್ಲಿ ತುಳಿದು , ಬಾಳುನೆಲ್ಲಾ ನೀವುಹೊಳಿ ತಳಿ, ಮುಳ್ಳುವನ್ನೆಲ್ಲಾ ತೆಗೆದು ನೀರು ಒಗ್ಗಿ, ನೆಲ್ಲು ಹಾಕಿ ನೀರು ಉಣಿಸಿರಿ. ಗಜ್ಜಿನ ಮಾಳಿಗಿ, ಮೇಲ ಮಾಳಿಗಿ , ಮೂರು ಮಾಳಿಗಿ, ಮೂರು ಮಾಳಿಗಿ ಮನಿ ಕಟ್ಟಿರಿ, ನಿಮ್ಮ ಮನಿಯೆಲ್ಲಾಬೆಳಗೊದು ಎನ್ನುತ್ತಾಳೆ. ತಂಗಿಯ ಮಾತಿನಂತೆ ಹಾಗೆ ಮಾಡುವರು. ನೆಲ್ಲು ಹಾಕಿ ಬಿತ್ತಿದ್ರೆ. ಕುಡುಗಿಲು ಹಿಡಿಲಾರ್ದ ಹಾಗೆ ಬೆಳೆದು ನಿಂತವು. ಲಾರಿಗಿ ಬಂಡಿಗೆ ಹಾಕಿ ಪಟ್ಟಕ್ಕೆಹೋಗಿ ಮಾರಿ ಬರ್ತಾರೆ. ಏಳು ಗಜ್ಜಿನ ಮನಿ ಕಟ್ಟುತ್ತಾರೆ. ತಂಗಿಯು ಅಣ್ಣಂದಿರಿಗೆ ತನಗಾಗಿ, ಹೊಳೆದಂಡಿಯಲಿ ಸಿಕ್ಕ ನನಗೆ ಅಲ್ಲೆ ಹಂಚಿನ ಮನಿ ಕಟ್ಟಿ, ಹೂವಿನ ತ್ವಾಟ ಮಾಡಿಕೊಡ್ರಿ, ಹೂವಿನ ನೆರಳು ನನಗಿರಬೇಕೆಂದಾಗ , ಹಾಗೆ ಆಗಲೆಂದು ತಂಗಿ ಗೌರಮ್ಮನಿಗೆ ಮನಿ ಕಟ್ಟುವರು.

ಹೊಳಿ ದಂಡಿಲಿ ಗಂಗವ್ವ - ಗೌರವ್ವ ಬಾಜಿ ಆಡುವರು. ಗಂಗಮ್ಮ ಗೌರಿಗೆ ಹೇಳುವಳು. ಲೋಕದಾಗ ಶಿವನು ಎನಂತಾಗಿ ನಿನ್ನ ಒಯ್ದಾನ, ಮಠದೊರೆಲ್ಲ ನನ್ನ ಬೈದಾರೆ. ಈಶ್ವರ ಪೂಜಿಲ್ಲ ಮಾಡುವರೆಂದು ಆಗ ಶಿವನು ದೇಶದ ಮ್ಯಾಗೆ ಹೋಗಿ ಬರ್ತೀನಿ. ಉರ ಪಟಿ ಮ್ಯಾಲ ತಡಿ ಬ್ಯಾಡ ನನ್ನನ್ನು. ನನ್ನ ಮೈಯೆಲ್ಲಾ ಉರಿತೈತಿ ನನ್ನ ಜೀವಕ್ಕೆ ಎಂದು ಗೌರಮ್ಮ ಮಗ ಈರಣ್ಣನನ್ನು ಬಿಟ್ಟು ಶಿವನು ಊರು ದೇಶಾ ತಿರುಗಿ ಬರಲು ಹೋಗುವನು. ಹೆಂಡ್ತಿ ಮನಿಗಿ ಬಂದು ಶಿವಾ ಕಂತಿ ಭೀಕ್ಷಾ ಎಂದು ಕೇಳುವನು. ಧರ್ಮಾ ನೀಡಲು ಮರಾ ಹಿಡಿದುಕೊಂಡು ಗೌರಿ ಬರುವಳು. ಶಿವನಿಗೆ ಬಾಗಿ ನೋಡಿ ಕಿಲ ಕಿಲನೆ , ಪಕ ಪಕನೆ ನಗುವಳು. ಆಗ ಶಿವನು ಹೆಂಡ್ತಿಗೆ ಏನನ್ನು ನೋಡಿ ನಗುತ್ತಿರುವೆ. ಭಿಕ್ಷೆ ಬೇಡುವವನೆಂದರೆ ಸೊಮಾರನೇ? ಭಿಕ್ಷೆ ಬೇಡುವವನಲ್ಲ. ಆಸರಾಗಿರುವವನು ನಿನಗಷ್ಟೊಂದು ಬ್ಯಾಸರ ಬಂದೈತ್ಯಾ ? ಎಂದಾಗ ಗೌರಿಯು ನಿನ್ನ ನೋಡಿ ನಕ್ಕಿಲ್ಲ, ಮಗನನ್ನು ನೋಡಿ ನಕ್ಕಿನೆನ್ನುವಳು. ಆಗ ಶಿವನು ನನ್ನನ್ನು ನೋಡಿ ನಕ್ಕಂತ ನಿನ್ನ ಮ್ಯಾಲೆ ಸವತಿನ ನಾನು ತರ್ತೀನಿ. ಆಗ ನೀನು ಈಗ ನಕ್ಕಂಗನಗಬೇಕೆನ್ನುವನು. ಗೌರಿಯು ಗಂಡನಿಗೆ ತಂದರೆ ಒಳ್ಳೆಯದಾಗುವದೆನ್ನುವಳು. ಶಿವನು ಭಿಕ್ಷೆ ಬೇಡಲು ಹೊಳಿದಂಡಿಗಿ ಬರುವನು. ಅಲ್ಲಿ ಸಾನ್ನ ಮಾಡಿ, ಹೂವಿನ ತೋಟಕ್ಕೆ ಬಂದು ಮಲ್ಲಿಗಿ ಹೂವ ಮಗ್ಗಿ ಕಡಿಯುತ್ತ ಕೂಡುವನು. ಆಗ ಅಲ್ಲಿಗೆ ಗಂಗವ್ವ ಬರುವಳು. ಹೂವ ಆರಿಸಿ ಕೊಂತ ಬರಲು, ಅಲ್ಲಿ ಅಕ್ಕನ ಗಂಡ ಶಿವ ಕಾಣಿಸುವನು. ಏಕೆ ಶಿವನೇ ಇಲ್ಲಿಗೆ ಬಂದಿರುವೆ? ಎಂದು ಕೇಳಿದಾಗ, ನನ್ನ ಮೈಯೆಲ್ಲ ಉರ್ಪನ ತಡಿಯಲಾರ್ದು ಅದಕ್ಕಾಗಿ ಹೊಳಿದಂಡಿಗಿ ಓಡಿ ಬಂದಿನಿ. ನನ್ನ ಮೈಯೆಲ್ಲಾ

ತಣ್ಣಗಾಗಬೇಕನ್ನುವನು. ಆಗ ಗಂಗಮ್ಮ ಏಳು ಮಂದಿ ಅಣ್ಣಂದಿರನ್ನು ಕರೆದು ನನಗೆ ಶಿವನಿಗಿ ಕೊಟ್ಟು ಮದಿವಿ ಮಾಡ್ರೆನ್ನುವಳು. ಆಗವು ದೇಶ ದೇಶ ತಿರುಗೋನು, ಗುಡಿಯಿದ್ದಲೆಲ್ಲಾ ನಿದ್ದಿ ಮಾಡೋನು. ಒಳ್ಯೋಲಿಗೆ ನಾವು ಕೊಡ್ತಿವಿ ಎಂದಾಗ , ನನಗಾತ ಸಾಕುತ್ತಾನೆ. ಕೊಟ್ಟರೆ ಶಿವನಿಗೆ ಕೊಡಬೇಕು. ಇಲ್ಲಾಂದ್ರೆ ನಾನು ಶಿವನಿಂದೆಲ್ಲಾ ಹೋಗುತ್ತಿನಿ ಎನ್ನುತ್ತಾಳೆ. ಆಗ ಅಂಬಿಗರು ಮದುವೆಗೆ ಒಪ್ಪಿ ತಾಳಿ ತರಲು ಊರೆಲ್ಲಾ ಹುಡುಕಿದ್ರು ತಾಳಿ ಸಿಗುವುದಿಲ್ಲ. ಆಗ ತಂಗಿಯು ಅಂಬ್ರೆ ಹೂವಾ , ಅಲಿಶಿನ ದಾರ, ಮಲ್ಲಿಗಿ , ಎಕ್ಕಿ ಹೂವಾ, ಬನ್ನಿ ಪತ್ರಿ ತಲಿಸುವಳು. ಅಣ್ಣಂದಿರೆ ಪದ ಹಾಡೋರು. ತಂಗಿಗೆ ಉಡಿಯಕ್ಕಿ ಹಾಕುವರು. ಶಿವ ತಾಳಿ ಕಟ್ಟಿದ ದೇಶ ತಿರುಗುವ ಜಂಗಮ್ಮ ನಿನ ಗಂಡ. ನಾವು ಎಲ್ಲಂತ ನಿನ್ನ ಹುಡುಕಬೇಕೆಂದಾಗ , ತಂಗಿಯು ನೀವು ದುಃಖಿಸಬ್ಯಾಡ್ರಿ. ನಾನು ವರ್ಷಿಗಿ ಒಂದು ಸರ್ತಿ ಬಿಲ್ತಿನೀ. ನೀವು ಮಾತ್ರ ಹುಡುಕಾಡಲಿಕ್ಕೆ ಬರಬ್ಯಾಡ್ರಿ ಎನ್ನುವಳು. ದೇಶಕ್ಕೆ ಗಂಗಮ್ಮ ಅಣ್ಣಂದಿಲಿಗೆ ಶರಣೆಂದು, ಶಿವನಿಂದೆ ಹೊರಡುವಳು.

ದಾಲಿ ಮಧ್ಯೆ ಶಿವ ನಿಲ್ಲುವನು. ಆಗ ಗಂಗಮ್ಮ ಏಕೆ ಶಿವರಾಯ ನಿಂತುಕೊಂಡೆ? ಎನ್ನಲು. ನನ್ನ ಮೈಯೆಲ್ಲಾ ಉಲಿತೈತೆ. ನೀನು ನನ್ನ ತಲಿ ಮ್ಯಾಲೆ ಕುಂತು ಕೊಳ್ಳೆನ್ನುವನು. ಮುಟ್ಟಾದ ಹೆಣ್ಣ ಮಗಳು ನಾನು ಹೇಗೆ ಕುಂತು ಕೊಳ್ಳಲಿ ? ಎಂದಾಗ ಶಿವನು ಭೇದವೆ ಇಲ್ಲ. ಅಂಟವಿಲ್ಲದಂಗೆ ನಾನು ಹುಟ್ಟಿನಿ. ಮೈಲಿಗೆಯಿಲ್ಲದಂಗೆ ನಾನು ಬೆಳೆದಿನಿ. ನೀನು ಲೋಕಕೆ ಗಂಗಾ ಮಾತೆಯು. ನಿನ್ನ ಭೇದವೆ ಇಲ್ಲ ನನ್ನ ಜೀವಕ್ಕೆ ಕೂಡೆಂದು ತನ್ನ ತಲಿ ಕೂಡಲಲ್ಲಿ ಗಂಗೆಯನ್ನು ಕೂಡಿಸಿ ಕೊಳ್ಳುವನು. ಗಂಗೀನ ಹೊತ್ತುಕೊಂಡು ಶಿವನು ಗೌರಿ ಮನಿಗಿ ಬರುವನು. ಗಂಡನ ಪಾದ ತೊಳೆಯಲು ಗೌಲಿಯು ಚಲಿಗಿ ನೀರು ತರುವಳು. ಪಾದ ತೊಳೆಯುವಳು. ತೆಲ್ಯಾಗಿದ್ದ ಗಂಗಮ್ಮ ನಮ್ಮಕ್ಕ ಹೆಂಗೆ ಪಾದಕ್ಕೆ ಪೂಜೆ ಮಾಡುವಳೆಂದು , ಬಗ್ಗಿ ನೋಡುವಾಗ , ಆಕಿಯ ನೆರಳು ನೀಲಿನೊಳಗೆ ಕಾಣುವುದು. ಆಗ ಗೌಲಿಯು ಗಂಡನ ಒಂದೇ ಪಾದ ತೊಳೆವಳು. ಶಿವನು ಹೆಂಡ್ತಿಗೆ ಇನ್ನೊಂದು ಪಾದ ತೊಳೆಯದೆ ಯಾಲಿಗೆ ಬಿಟ್ಟೆ ? ಎನ್ನಲು.ಗೌಲಿಯು ನನ್ನ ಸ್ವಂತದಲ್ಲಾ, ಗಂಗೀ ಸ್ವಂತದಯ್ಯಾ ಎಂದಾಗ ಶಿವನು ನನಗೆ ಕಾಣಲಾದ್ದ ಗಂಗಿ ನಿನಗೆಲ್ಲಿ ಕಂಡಳು? ಎನ್ನುತ್ತಾನೆ. ಆಗ ಗೌರಿ ಅವನ ಮೈಮಾಗೆಲ್ಲ ನೀರು ಹೊಯ್ಯುವಳು. ತೆಲಿ ಮ್ಯಾಲಿನ ಗಂಗಮ್ಮ ಕಪ್ಪಳಸಿ ಕೆಳಗೆ ಹಾರುವಳು. ಅಕ್ಕಳಿಗೆ ಗಂಗಿಯು, ನಿನ್ನ ಗಂಡವಲ್ಲಕ್ಕ ನನ್ನ ಗಂಡ. ನಿನಗೊಂದು ಪಾದ, ನನಗೊಂದು ಪಾದವೆಂದು ಕೈಯಾಗ ಚರಗಿ ನೀರು ತಗೊಂಡು ಪಾದ ತೊಳೆಯುವಳು ಇಬ್ರಿಗೂ ಇಲ್ಲಿಗೆ ಜಗಳ ಜೀಳುತ್ತದೆ.

ಗೌಲಿಯು ಗಂಗೀಗೆ ಬೈಯುವಳು. ನನ ಪಾದ ಗಂಡನಿಗೆ ಎದ್ದು ಬಂದಳು ನೀನು. ಜೋಳಗಿ ನೋಡಿ ಬಂದವಳು. ಅಂಬಿಗರ ಕೈಯಾಗ ಬೆಳೆದು, ಏಡಿ, ಕಪ್ಪಿ, ತಿಂಬೊಳು ನೀನು. ಒದ್ದೇನೆ ನಾನು ನಿನ್ನ ಎದ್ದು ಬಂದವಳೆ ಎಂದಾಗ, ಗಂಗಿಯು ನನ್ನ ಒ ದೆಯವಳೇ ನಿನಗೆ ಬುದ್ಧಿಯಿಲ್ಲ. ನಿನ್ನ ತಂದ ಶಿವನೆ ನನಗೂ ತಂದನು ಅವನ ಕೂಟ ಜಗಳವಾಡೆನ್ನುವಳು. ಶಿವನು ಇವಲಿಬ್ಬರ ಜಗಳ ನೋಡಿ ಕಿಲ ಕಿಲ ನಗುವನು. ಇಬ್ರು ಹೆಂಡ್ರನ್ನು ಯಾಕೆ ತಂದೆ ನೀನು. ತಂದವನು

ನಮ್ಮ ನೋಡಿ ನಗೋದು ಬಿಟ್ಟು ,ತಿದ್ದಿ ಬುದ್ಧಿ ಹೇಳಯ್ಯಾ ಎಂದಾಗ . ಶಿವನು ಗೌರಿಗೆ, ಎಲೆ ಗೌರಿ ನೀನು ದೊಡ್ಡವಳು. ಚಿಕ್ಕವಳ ಕೂಟ ವಾದ ಯಾತಕ್ಕೆ? ಒಂದೆ ತಾಯಿ ಮಕ್ಳು ಒಂದಾಗಿರಬೇಕು. ಒಂದೆ ಗಂಡನ ಪಾದ ಹಿಡಕ್ಯಂಡಿರಬೇಕು. ನಾಲ್ಕು ಮನಿ ಭಿಕ್ಷೆ ಬೇಡಿ ನಾನು ಸಲ್ಹಹಾಕೋನು. ಉಂಬಲಾರ್ದೆ, ತಿಂಬಲಾರ್ದೆ ಯಾಕೆ ನೀವು ಗುದ್ದ್ಯಾಡತೀರಿ ಸುಮ್ಮನಿರೆಂದು ಹೇಳುವನು. ಆಗ ಗೌರಿಯು ಗಂಡನಿಗೆ ನನ ಮ್ಯಾಲೆ ಯಾಕೆ ಸವತಿ ತಂದೆ? ಇಬ್ಬರಲ್ಲಿ ಒಬ್ಬಳ್ನ ಬಿಟ್ಟು ಬಿಡೆನ್ನುವಳು. ಈ ಮಾತಿಗೆ ಶಿವನು ನಿನ್ನನ್ನು ಬಿಟ್ಟನಿ ಗಂಗೀನ ಬಿಡಲಾರೆ. ಬೇಕಾಗಿ ಅವಳ್ನ ನಾ ತಂದಿನಿ ಎನ್ನುವನು. ಗೌರಿಯು ತಂದು ಕೊಂಡವಳೆ ಹೆಚ್ಚಾದಳೇನು? ಮದಿವಾದವಳು ಕಮ್ಮ್ಯಾದಳೇನು? ಮಠಕ್ಕೆ ಹೋಗಿ ಹಾಳಾಗಿರಿ. ಕರ್ರಗಿದ್ದವಳೆ ನಿಮಗೆಚ್ಚಾದಳು. ಕೆಂಪಗಿದ್ದವಳು ಕಮ್ಮ್ಯಾದಳು. ಆಗ ಶಿವನು ನಾನು ಇಬ್ರಿಗೂ ಏನೂ ಹೇಳಲಾರೆ. ನಿಮ್ಮವ ನಾನಲ್ಲ ನಾನೇ ಹೋಗ್ತಿನೆಂದು ಶಿವನು ಈಶ್ವರ ಮಠದಲ್ಲಿ ಬಂದು ಕೂಡುವನು. ಅಲ್ಲಿಯೇ ಮಲಗುವನು. ಇದನ್ನು ನೋಡಿ ಗಂಗಮ್ಮ ಯಾಕ ನೀನು ಅಳತೆಕ್ಕ ಹುರಿಬಿದ್ದ ನಾವೆಲ್ಲ ಯಾಕೆ ಸಾಯೋಣ, ನಿನ್ನೆ ಬಂದವಳು ನಾನೇ ಹೋಗ್ತೀನಿ, ಮೊನ್ನೆ ಬಂದವಳು ನಾನೇ ಹೋಗತೀನಿ ಅಕ್ಕ ನೀನಿರಕ್ಕ ಎಂದು ನಕ್ಕಂತ ಗಂಗೀ ತವರು ಮನಿಗಿ ಬರುವಳು.

ಅಣ್ಣೋರ ಮನಿಗಿ ಬರುವಳು. ಅಣ್ಣಂದಿರಿಗೆ ನಿಮ್ಮಂಗೆ ನೋಡೋರು ನನಗ್ಯಾರಿಲ್ಲಣ್ಣ. ಅದಕ್ಕಾಗಿ ನಾನು ಓಡಿ ಬಂದಿನಿ. ಹಂಗೆ ಆಗಲಿ ತಂಗಿ ಎಂದು ಹೂವಿನ ತ್ವಾಟದಲ್ಲಿ ಗಂಗಮ್ಮ ಇರುವಳು. ಇತ್ತ ಗೌರಿಯು ಗಂಗಮ್ಮ ಹೋದ ಎರಡು ದಿನಕ್ಕೆ ಹೊರಗಾಗಿ ಕೂಡುವಳು. ಮಗನಾದ ಈರಣ್ಣ ಗಣಪತಿಗೆ ನೀರು ತರಲು ಹೊಳಿದಂಡಿಗೆ ಕಳುಹಿಸುವಳು. ಮಗನು ಹೊಳಿದಂಡಿಗೆ ನೀರು ತರಲು ಕೊಡ ಒಯ್ಯುವನು. ಎಲ್ಲೆಲ್ಲೂ ನೋಡಿದ್ರು ನೀರಿಲ್ಲ. ಹೊಳಿದಂಡಿ ಯೆಲ್ಲ ಒಣಗಿ ಹೋಗ್ಯೆತಿ. ಬಾಯೆಲ್ಲ ಸೇದಿದ್ರು ನೀರಿಲ್ಲ. ಆಗ ತಂಗಿ ಗಂಗಮ್ಮ ನೋಡಿದಳು. ಈಗ ನಮ್ಮಕ್ಕಳ ಸತ್ಯವ ಕಂಡೇನು. ನಮ್ಮಕ್ಕ ನನ್ನ ಕೈಗಿ ಈಗ ಸಿಕ್ತಾಳೆಂದು. ಗಾಳಿದೇವ್ರು, ಮಳೆದೇವ್ರು, ಬಿಸಿಲು ದೇವ್ರು, ಎಲ್ಲರನ್ನೂ ಕರೆದಳು. ಎಲ್ಲರೂ ಬಂದು ಏನವ್ವಾ ತಂಗಿ ನಿನಗೇನು ಕಷ್ಟ ಬಂದೈತೆನ್ನುವರು. ಲೋಕದಾಗ ಅಣ್ಣಾರಯ್ಯಾ, ಗಾಳಿಯು, ಮಳಿಯು, ತಡಿಯಿರಣ್ಣಾ, ಎಲ್ಲೆಲ್ಲೂ ನೀರಿಲ್ಲದಂಗೆ ಮಾಡಿರಣ್ಣ, ಬಿಸಿಲಿನ ಬಣ್ಣ ಹೆಚ್ಚು ಮಾಡಿರಣ್ಣ ಅಂದಾಗ ಹಾಗೆ ಮಾಡುವರು. ಗೌರಿಯು ಮಗನಿಗೆ ತಾತನೂರುಗೆ ಹೋಗಿ ಎರ್ಡು ಕೊಡಾ ನೀರು ತಗೊಂಡು ಬಾ ಎಂದು ಕಳುಹಿಸುವಳು. ಮಗ ಹೋಗಿ ಕೇಳಲು ಅವ್ವ, ತಾತನವರು ನಮ್ಮೂರದಾಗ ನೀರೆ ಇಲ್ಲಪ್ಪ. ನಿಮಗಿಲ್ಲ ನೀರು ನಮಗೆಲ್ಲಿ ಬಂತು, ಮಳೆಯಿಲ್ದೆ ದನ -ಕರು ಸಾಯುತ್ತಿವೆ. ಅದರಾಗಿನ ಹಾಲು ನಾವು ಕುಡಿದೆವು. ಒಂದು ಕೊಡ ಹಾಲು, ಒಂದು ಕೊಡ ತುಪ್ಪ ಕೊಟ್ಟು ಮಗಳಿಗಾಗಿ ಕೊಟ್ಟು ಕಳಿಸ್ತಾರೆ. ಮನಿ ಮಗಳು ಕಾದು ಕುಂತಿರುತ್ತಾಳೆ. ಗೌರಿಯು ತುಪ್ಪ ಚರಗಿಗ್ಯಾಕಿ, ಹಾಲು ಮೈಗ್ಹಾಕುತ್ತಾಳೆ. ಎಲ್ಲಿಲ್ಲದ ಇರಿವೆಲ್ಲಾ ಓಡಿ ಬಂದು ಕಂಡಲೆಲ್ಲಾ ಕಡಿತಾವೆ. ಬಾಯಿಗಿ ಬಡಿತಾವೆ. ಉರಿ ತಾಳಲಾರದೆ ಗೌರಿಯ ಮಗನಿಗೆ, ಭಲ್ಲೆವ ಕೊಡೊ ಗಣಪತಿ ತಿವಿಕೊಂತಿನಿ ಎನ್ನುವಳು.

ಆಗ ಮಗನು ತಾಯಿಗೆ ಎಂಥವಳವ್ವಾ ನೀನು ಗಂಡನ ಹೆಂಡ್ತಿಯಾಗಿ ತಂದವಳ ಕೂಟ ಯಾಕೆ ಗುದ್ದ್ಯಾಡಿದೆ? ಲೋಕವ ಸಾಯಂಗೆ ಮಾಡಿದೆ. ಇನ್ನು ನಡಿಯಮ್ಮ ತಂಗಿ ಬಳಿಗೆ ಎಂದು ಹೇಳಿದಾಗ ಗೌರಿಯು ನಾ ಹ್ಯಾಂಗೆ ಅಂಜಿಗರ ಮನಿಗಿ ಬರಲಿ. ನಾವು ಹೋಗೋತನಕ ನಮಗೆ ಕಷ್ಟ ತಪ್ಪಂಗಿಲ್ಲ ಅಮ್ಮಾ ಅಲ್ಲಿಗೆ ಹೊಧ್ರೆನೆ ದೋಷೆಲ್ಲಾ ಕಳಿಯುವುದು. ಮಗನ ಮಾತಿನಂತೆ ಗೌರಿಯು ತಂಗಿ ಮನಿಗಿ ಹೋಗಲು ಒಪ್ಪಿ, ತಾಳ, ಮ್ಯಾಳ ತರಿಸಿ ತಂಗಿಗಾಗಿ ಚಕ್ಕೆ ಬುಂದೆ, ಬಾಲುಷಾ ಎಲ್ಲವನ್ನೂ ತೆಗೆದುಕೊಂಡು ತಂಗಿ ಮನಿಗೆ ನಡೆಯುತ್ತಾಳೆ. ಇತ್ತ ಗಂಗೀಗೆ ಅಕ್ಕ ಬರುವ ಸೂಚನೆ ತಿಳಿದು , ನನ್ನಕ್ಕ ನನ್ನ ಮನಿಗಿ ಹ್ಯಾಂಗ ಬರ್ತಾಳೆ. ಇವಾಗ ನಮ್ಮಕ್ಕನ ಸತ್ಯ ನೊಡ್ತಿನಿ. ಒಂದು ದಿನದಲ್ಲಿ ಮೂರು ಸರ್ತಿ ಸ್ನಾನ ಮಾಡಾಕಿ , ಮೂರು ಸರ್ತಿ ಪೂಜೆ ಮಾಡಾಕಿ. ಅಕ್ಕಳನ್ನು ಪರೀಕ್ಷಿಸಲು ಗಂಗೀಯು ದೊಡ್ಡ ದೊಡ್ಡ ಮಿನೆಲ್ಲಾ ಕಂಬಕ್ಕೆ ಕಟ್ಟುವಳು. ಏಡಿ, ಕಪ್ಪೆಗಳನ್ನೆಲ್ಲಾ ಅಂಗಳದಲ್ಲಿ ಒಣಗಾಕುವಳು. ಅವುಗಳ ಗಬ್ಬು ನಾತೆಲ್ಲಾ ಕಡೆಗೂ ಹರಡುವುದು. ಅಕ್ಕ ಮ್ಯಾಳಾದೊಂದಿಗೆ ತಂಗಿ ಮನಿಗಿ ಬರುವಳು.

ಇಂಥ ಗಬ್ಬು ನಾತವನ್ನು ತಡಿಲಾರ್ದೆ ಮಗನಿಗೆ ಹೆಂಗ ಹೋಗಬೇಕಪ್ಪ ಅಂದಾಗ, ಈರಣ್ಣನು ಮೈಲಗಿ ಜಲಮ ಇದು ಹಂಗೆ ಜೀವನ್ನ ಹಿಡಕೊಂಡು ಹೋಗಬೇಕೆನ್ನುವನು. ಗೌರಿಯು ಏಡಿ, ಕಪ್ಪಿ ತುಳಿಯುತ್ತಾ ತಂಗಿ ಬಳಿ ಹೋಗುವಳು. ತಂಗಿಗೆ ಶರಣು ಮಾಡುವಳು. ಶರಣು ಮಾಡುತಾ ನನ್ನ ಬಳಿಗೆ ಯಾಕೆ ಬಂದಿರುವೆಯಕ್ಕಾ ಎಂದು ಗಂಗೀ ಕೇಳುವಳು. ಗೌರಿಯು ತಂಗಿಗೆ ತಾನು ಹೊರಗಾಗಿ ಆರು ದಿನವಾಯ್ತು ಮನಿಯಾಗ ನೀರಿಲ್ಲ. ಭಾಯಾಗ, ಹೊಳಿದಂಡಿದಾಗ ನೀರಿಲ್ಲಮ್ಮ. ಅದಕ್ಕಾಗಿ ನಿನ್ನ ಮನಿಯಾಗಿನ ನೀರು ಕೊಡಮ್ಮ ಎಂದು ಕೇಳಿಕೊಳ್ಳುವಳು. ನಿನಗಿಲ್ಲದ ಮಳೆ ನನಗಿಲ್ಲ. ನಾನು ಅಂಜಿಗದವಳು ಗಲೀಜದವಳು ಏಡಿ, ಕಪ್ಪಿ ತಿಂಬುವಳು. ನನಗೆ ನೀರು ನೀ ಕೇಳಬೇಡಕ್ಕ ಎಂದು ಗಂಗೀ ಹೇಳುವಳು. ನಿನಗೆ ನಾನು ವಡವಿ, ವಸ್ತ್ರ, ಹೊಲಮನಿ ಕೊಡ್ತಿನಿ. ನೀನು ನನಗೆ ನೀರು ಕೊಡು ತಂಗಿ ಎಂದು ಗೌರಿ ಕೇಳಲು, ನಿನ್ನ ವಡವಿ , ವಸ್ತ್ರ,ಮನಿ, ಹೊಲ ನನಗೆ ಬೇಕಿಲ್ಲ. ದೇಶಕ್ಕೆ ಗಂಗಮ್ಮ ನಾನಿದ್ದಿನಿ. ನನ ಪಾಲ ಗಂಡಕ್ಕೆ ಬಂದು ಬಿಟ್ಟಿ, ನನ ಗಂಡನ್ನೆ ನಿನಗೆ ಕೊಟ್ಟೆನು. ಆಗಿಲ್ಲ ಮದುವಿ ಈಗ ಮಾಡೆನೆಂದು ನೀನು ಮಾತು ಕೊಡಕ್ಕಾ ಎಂದು ಕೇಳುವಳು. ನನ್ನ ಜೀವದ ಗಂಡನ ಹೆಂಗ ಕೊಡಲಿ. ನನ್ನ ಜೀವನ್ನೆ ಬಿಟ್ಟೆನು ನಾ ನನ್ನ ಗಂಡನ ಕೊಡಲಾರೆನ್ನುವಳು. ಈ ಮಾತಿಗೆ ಗಂಗೀಯು ನಿನೊಬ್ಬಳು ಜೀವ ಬಿಟ್ಟಾಕಿ . ಅದಕ್ಕಾಗಿ ಲೋಕದ ಜೀವೆಲ್ಲ ಕಳಿಬ್ಯಾಡ. ದನ ಕರ ಕೊಲ್ಲ ಬ್ಯಾಡಮ್ಮ ಎನ್ನಲು. ಆಗ ಅಕ್ಕ ಒಪ್ಪಿ ನನ್ನ ಪಾಲ ಗಂಡನ ನಿನಗೆ ಕೊಟ್ಟೆನೆನ್ನುವಳು.

ತಂಗಿಯು ಅಕ್ಕಳಿಗೆ ಮೈ ತೊಳೆಯಲು ನೀರು ಕಾಸುವಳು. ಗೌರಿಯು ಆಗ ಇಂಥ ನಾತು, ಗಜ್ಬಿನಲ್ಲಿ ಮೈತೊಳೆಯಲು ಆಗುವುದಿಲ್ಲ. ಕೊಡ ನೀರು ನನಗಾಗುವುದಿಲ್ಲ. ಹೊಳಿ ದಂಡಿಗೆ ಹೋಗಿ ಎರಕೋತಿನೆನ್ನುವಳು. ಹಾಗೆ ಆಗಲೆಂದು ಅಕ್ಕ - ತಂಗಿಯರು ಹೊಳಿ ದಂಡಿಗಿ ಬರುವರು. ಅಲ್ಲೆ ನೀರು ಕಾಸಿ ತಂಗಿಯು ಅಕ್ಕಳ ಮೈತೊಳೆಯುವಳು. ತಂಗಿಯು ಅಕ್ಕಳಿಗೆ ಅಡಿಗೆ ಮಾಡುವಳು.

ಗಿಡದಿಂದ ಪತ್ರಾಳ ತಂದು, ಅದರಲ್ಲಿ ಊಟ ಬಡಿಸುವಳು. ಗೌರಿಯು ತಂಗಿಗೆ ಒಂದೇ ಪತ್ರಾಳದೊಳಗೆ ಊಟ ಮಾಡೋಣ , ಒಂದೆ ಗಂಡನಿಗೆ ಇಬ್ರು ಹೆಂಡ್ರಿದ್ದಿವೆಂದು ಇಬ್ರು ಒಂದೇ ಪತ್ರಾಳದಲ್ಲಿ ಊಟ ಮಾಡುವರು. ಊಟಾದ ಮೇಲೆ ಗೌರಿ ಗಿಡದ ನೆಳ್ಳಿನಲ್ಲಿ ನಿದ್ದಿ ಮಾಡೋಣವೆನ್ನುವಳು. ಹಾಗೆ ಆಗಲೆಂದು ಅಕ್ಕ ಮಲಗುವಳು. ಗಂಗಾ ಬಾಲೆ ಕುಂತುಕೊಳ್ಳುವಳು.

ನಿದ್ದಿಯಲ್ಲಿ ಗೌರಮ್ಮಳು ಬಡಬಡಿಸುತ್ತಾಳೆ
ನನಬಾಳ ಗಂಡ ನಾ ಕೊಡಲಾರೆ
ತಾಳಿ ಕಟ್ಟಿದ ಗಂಡ ನಾ ಕೊಡಲಾರೆ
ಬೆಳ್ಳಿ ಬಂಗಾರ ನಾ ಕೊಟ್ಟೆನಮ್ಮಾ

ಅಕ್ಕಳ ಮಾತನ್ನು ಕೇಳಿ ತಂಗಿಯು. ನಿನ್ನ ಗಂಡ ನನಗೆ ಬೇಕಿಲ್ಲ. ತಾಳಿ ಕಟ್ಟಿದವಳು ನೀನೆ ಇರಕ್ಕ ಎಂದು ಗಂಗಮ್ಮ ಅಕ್ಕಳ ಎಲ್ಲಾ ಬಟ್ಟೆಗಳನ್ನು ಹೊಳಿಯೊಳಗೆ ಒಗೆದು ಬಿಡುವಳು. ನೀರಲ್ಲಿದ್ದ, ಕಪ್ಪಿ , ಮೀನು ತಿಂದು ಬಟ್ಟೆಲ್ಲಾ ಕಡಿತಾವೆ. ನಿದ್ದೆಯಿಂದ ಎದ್ದ ಗೌರಿಯು ನೋಡಿ, ತಂಗಿಗೆ,ಶರಣು ಮಾಡಿ ಕೊಟ್ಟ ಮಾತು ತಪ್ಪೋದಿಲ್ಲಮ್ಮ. ನಿನ್ನ ಲಗ್ನ ನಾನೇ ಮಾಡ್ತೀನಿ. ಜೀವ ಉಳಿಸೋ ನನ್ನ ಜೀವ ಗಂಡನನ್ನು ನಿನ್ನ ಜೀವಕ್ಕೆ ಕೊಡ್ತಿನೆನ್ನುವಳು. ಆಗ ಇಬ್ರು ಕೂಡಿ ಶಿವನ ಬಳಿಗೆ ಬರುವರು. ಈಶ್ವರ ಮಠದಲ್ಲಿ ಶಿವನು ಮಲಗಿರುತ್ತಾನೆ. ಇಬ್ರು ಬಂದಿದ್ದು ಶಿವನಿಗೆ ತಿಳಿದ್ರು ಕೂಡ ಕಣ್ಣು ತೆರೆಯದೆ ಮಲಗುವನು. ಗೌರಿಯು ಗಂಡನನ್ನು ಕಂಡು ಅಳುವಳು. ನಮ್ಮನ್ನು ಬಿಟ್ಟು ಇಲ್ಲಿಗೆ ಬಂದು ನಿದ್ದಿ ಮಾಡ್ಯಾನ. ಆಹಾರ, ನೀರು, ಇಲ್ಲದೆ ಸತ್ತಾನ . ನೀನು ಹೋದ ಮ್ಯಾಲೆ ನಾವ್ಯಾಕ ಇರಬೇಕು. ನಾವು ಸಮುದ್ರದಾಗ ಬಿದ್ದೇವು ಎಂದು ದುಃಖಿಸುವಳು. ಮಲ್ಲಿಗಿ, ಚೆಂಡು ,ಅಂಬ್ರೆ ಹೂ, ಎಕ್ಕೆ ಹೂ ತರುವರು. ಗಂಡನ ಪೂಜಾ ಅಕ್ಕ-ತಂಗಿಯರು ಕೂಡಿ ಮಾಡುವರು. ಆಗ ಶಿವನು ಕಿಲ ಕಿಲನೆ ನಗುವನು. ಯಾತಕ್ಕಾಗಿ ಅಳುತ್ತಿರುವಿರಿ. ನಾನು ಸತ್ತಿನೆಂದು ತಿಳಿದುಕೊಂಡಿರೇನು. ಜೀವ ಹೆಂಡ್ತಿ ನನಗೆ ಜೀವ ಹಾಕುವಳು. ಏಕವಾಗಿ ನೀವು ಯಾಕ ಬಂದಿರೆಂದು ಕೇಳಲು. ಆಗ ಗೌರಿಯು ಶಿವನಿಗೆ, ಒಂದೇ ತಾಯಿಗೆ ಹುಟ್ಟಿದ ಮಕ್ಕು ನಾವಿಬ್ರೂ ಒಂದೇ ಗಂಡನಿಗೆ ಮಾಡಿಕೊಂಡಿಲ್ರಿವಿ. ನೀನು ಮೆಚ್ಚಿ ತಂದ ಗಂಗೀಯನ್ನು ಮದುವಿ ಮಾಡ್ತೀನಿ. ಅರಿಶಿಣದಾರದಿಂದ ತಾಳಿ ಮಾಡಿ, ಶಿವನ ಕೈಗೆ ಕೊಟ್ಟು ಕಟ್ಟೆನ್ನುವಳು. ಆಗ ಗಂಗಿಯು, ನಾನು ತಾಳಿ ಕಟ್ಟಿ ಕೊಳ್ಳುದಿಲ್ಲಕ್ಕ. ನಿನ್ನ ಪಾಲಿನ ಗಂಡ ನನಕೊಟ್ಟ್ಯಲ್ಲ ನೀನು. ನಿನ್ನ ಕೊಳ್ಳಾಗಿನ ತಾಳಿ ಬೇಕೆಂದಾಗ , ಗೌರಿಯು ಗಂಡ ಕಟ್ಟಿದ ತಾಳಿ ಹ್ಯಾಂಗ ಕೊಡಲಮ್ಮಾ ಎಂದು ತೆಗೆದು ಶಿವನ ಕೈಗೆ ತಾಳಿ ಕೊಡುತ್ತಾಳೆ. ಆಗ ಶಿವನು ಗಂಗೀಗೆ ತಾಳಿ ಕಟ್ಟುವನು. ದೇವರ ಮಠದಾಗ ದೇವ್ರು ಮದುವೆಯಾಗುವುದು.ಗೌರಮ್ಮ ಮಗನನ್ನು ಕರೆದುಕೊಂಡು ಮನಿಗಿ ಹೋಗುವಳು. ಚಿಕ್ಕೆಂಡ್ತಿ ಶಿವನು ಮಠದಲ್ಲಿ ಉಳಿಯುವರು. ಗಂಗೀ ಹೊಟ್ಟ್ಯಾಗ ಕೋಟಿ ಮಕ್ಕು ಹುಟ್ಟುವರು. ಇದನ್ನು ಕಂಡು ಶಿವನು ಗೌರಮ್ಮ, ಗಂಗಮ್ಮನನ್ನು ಬಿಟ್ಟು ಕೈಲಾಸಕ್ಕೆ ಹೋಗುವನು. ಗಂಡನು

ಇನ್ನೂ ಭಿಕ್ಷಾ ಬೇಡಿ ಬಾರದಿದ್ದನ್ನು ಕಂಡು ಗಂಗಮ್ಮ, ಬೂದಿ ಮಕ್ಕಳ್ನ ನಾ ಹೆಂಗ ಸಲುವಲೆಂದು ಅಳುತ್ತಾ ಮಠದಲ್ಲಿ ಕೂಡುವಳು. ಅಳುವ ತಾಯಿಯನ್ನು ಕಂಡು ಮಕ್ಳು, ನಾವು ಕೋಟಿ ಮಕ್ಳು ಕೋಟಿ ಜೋಳಿಗಿ ಹಾಕಿ ದೇಶೆಲ್ಲಾ ಅಡ್ಡಾಡಿ, ಭಿಕ್ಷಾ ಬೇಡಿ ತಂದು ಮಠದಲ್ಲಿ ಸುರಿವೆವು.

ಅಪ್ಪ ತಂದಿದ್ದು ನಮಗ್ಯಾತಕಮ್ಮ
ಅರ್ಧರ್ಧ ರೊಟ್ಟಿ ನಮಗಿರಲಮ್ಮ
ಆವಾಗ ನಾವು ಹೊಟ್ಟಿ ತುಂಬ ತಿಂತಿವಿ.

ಎಂದು ತಾಯಿಗೆ ಹೇಳಿ, ತಲಿಗೊಂದು ಜೋಳಿಗಿ ಹಾಕುವರು. ಬಟ್ಟಿ ಅಂಗಪ್ಪ ಕಟ್ಟಿಕೊಂಡು, ರುದ್ರಾಕ್ಷಿ ವಿಭೂತಿ ಹಚ್ಚಿಕೊಂಡು ಊರಾಗ ಜೋಳಿಗಿ ಹಿಡಿದು ಹೋಗುವರು. ಮಠವೆಲ್ಲಾ ಆಹಾರ ತುಂಬಿ ಬಿಡುವರು. ಆಗ ತಾಯಿಯು ನಿಮಗೆಲ್ಲಾ ನಾ ಹೇಗೆ ಮದುವಿ ಮಾಡಲೆಂದಾಗ, ಹೆಣ್ಣಿಗೆ ಗಂಡು ಸಿಗತೈತಿ, ಭೂಮಿ ಮ್ಯಾಲೆ ನಾವಿರ್ತಿವಮ್ಮ ಎನ್ನುವರು. ಮಕ್ಕಳೆ ನಿಮ್ಮ ಸಾಥಿ ನಾನಿರೋದಿಲ್ಲ. ನಾ ನನ್ನ ಶಿವನ ಹುಡುಕಲು ಹೋಗುವೆನು. ದಂಡಿ ಮ್ಯಾಲೆ ನನ್ನ ಬಿಟ್ಟು ಬರ್ರೆನ್ನಲು ಮಕ್ಳು ತಾಯಿಗಾಗಿ ಜ್ವಾಳಾದ ಬಂಡಿ ಕಟ್ಟಿ, ಮಲ್ಲಿಗಿ ಉಡಿಸಿ, ಹೊಳಿದಂಡಿಗಿ ಒಯ್ಯುವರು. ಅಲ್ಲಿ ಗಂಗಮ್ಮ ಮಕ್ಳಿಗೆ ಹೀಗೆ ಹೇಳುವಳು.

ದೇಶದ ಮ್ಯಾಲೆ ನೀವು ಇರ್ರೆಪ್ಪಾ
ಗಂಗಾದ ಸ್ನಾನ ಇಲ್ಲಿರಲಪ್ಪಾ
ದೇಶಕ್ಕೆ ಗಂಗಮ್ಮ ದೇಶ ಸ್ನಾನವಮ್ಮ
ಗಂಗನ ಪೂಜಾ ನೀವು ಮಾಡಿರಿ
ಗಂಗನ ಒಳಗೆ ನಾನು ಹೋಗೆನ

ಎಂದು ಬೂದ ಗಂಗಮ್ಮ ಗಂಗಮ್ಮನೊಳಗೆ ಹೋಗಿ ಹಾಗೆ ಶಿವನ ಬಳಿ ಕೈಲಾಸಕ್ಕೆ ಹೋಗಿ ಸೇರುವಳು.

ಅಧ್ಯಾಯ - 6

ಬುರ್ರಕಥಾ ಈರಮ್ಮ ಹಾಡುವ ಕಥನ ಕಾವ್ಯಗಳ ವಿಶ್ಲೇಷಣೆ.

ಅಧ್ಯಾಯ 6

ಈರಮ್ಮನ ಕಥನ ಕಾವ್ಯಗಳ ವಿಶ್ಲೇಷಣೆ

ಬುರ್ರಕಥಾ ಈರಮ್ಮ ಹಾಡುವ ಕಥನ ಕಾವ್ಯಗಳು ಹೆಚ್ಚಾಗಿ ಆಕೆಯ ಸುತ್ತ ಮುತ್ತಲಿನ ಪರಿಸರದಿಂದ ಮೂಡಿ ಬಂದವುಗಳಾಗಿವೆ. ಅವು ಹೆಚ್ಚಾಗಿ ಸಾಮಾಜಿಕ, ಧಾರ್ಮಿಕ ಮತ್ತು ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿವೆ. ಈರಮ್ಮ ಬುರ್ರಕಥೆಗಳನ್ನು ಹಾಡುವ ಪ್ರದೇಶ ಬಳ್ಳಾರಿ, ರಾಯಚೂರು, ಈ ಭಾಗಕ್ಕೆ ಹೊಂದಿಕೊಂಡ ಕರ್ನಾಟಕಾಂಧ್ರ ಗಡಿಭಾಗ. ಈ ಭಾಗದಲ್ಲಿ ಅತಿ ಹೆಚ್ಚು ಜನಪ್ರಿಯ ಹೊಂದಿದ ಕಾವ್ಯಗಳು ಎಂದರೆ ಕುಮಾರರಾಮನ ಕಾವ್ಯ ಕೃಷ್ಣಗೊಲ್ಲರ ಕಾವ್ಯ, ಬಾಲನಾಗಮ್ಮನ ಕಾವ್ಯ, ಸ್ಯಾಸಿ ಚಿನ್ನಮ್ಮನ ಕಾವ್ಯ, ಆದೋನಿ ಲಕ್ಷ್ಮಮ್ಮನ ಕಾವ್ಯ, ಜೈಸಿಂಗ್ ರಾಜನ ಕಾವ್ಯ, ಬೊಜ್ಜಲಿ ನಾಗಿರೆಡ್ಡಿ ಕಾವ್ಯ , ಎಲ್ಲಮ್ಮನ ಕಾವ್ಯ ಈ ಮುಂತಾದವುಗಳು ಕನ್ನಡ ನೆಲದಿಂದ ಮೂಡಿ ಬಂದವುಗಳು. ಕುಮಾರರಾಮನ ಕಾವ್ಯ, ಎಲ್ಲಮ್ಮನ ಕಾವ್ಯ, ಹೊಸಪೇಟೆಯ ಕಂಪ್ಲಿ, ಕಮ್ಮಟದುರ್ಗದಲ್ಲಿ ನಡೆದ ಐತಿಹಾಸಿಕ ಘಟನೆಯಿಂದ ಮೂಡಿ ಬಂದರೆ, ಜೈಸಿಂಗ್ ರಾಜನ ಕಾವ್ಯ ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲ್ಲೂಕಿನ ಪರಿಸರದಲ್ಲಿ ನಡೆದ ಐತಿಹಾಸಿಕ ಘಟನೆಯ ಹಿನ್ನೆಲೆಯಿಂದ ಮೂಡಿ ಬಂದಿವೆ. ಎಲ್ಲಮ್ಮನ ಕಾವ್ಯವಂತೂ ಕರ್ನಾಟಕಾಂಧ್ರದೆಡೆಯಲ್ಲೂ ಹಾಡುವರು. ಸ್ಯಾಸಿಚಿನ್ನಮ್ಮ, ಆದೋನಿ ಲಕ್ಷ್ಮಮ್ಮ, ಬೊಜ್ಜಲಿ ನಾಗಿರೆಡ್ಡಿ ಈ ಮುಂತಾದ ಕಾವ್ಯಗಳು ಆಂಧ್ರ ಪರಿಸರದ ಪ್ರಭಾವದಿಂದ ಮೂಡಿ ಬಂದಿವೆ. ಬಾಲನಾಗಮ್ಮನ ಕಾವ್ಯ ಕರ್ನಾಟಕಾಂಧ್ರ ಪ್ರದೇಶಗಳೆರಡಲ್ಲು ಬಹು ಜನಪ್ರಿಯ ಹೊಂದಿದ ಕಾವ್ಯವಾಗಿದೆ. ಇಂತಹ ಜನಪ್ರಿಯ ಹೊಂದಿದ ಕಾವ್ಯಗಳನ್ನೇ ಈರಮ್ಮ ಹಾಡುತ್ತಾಳೆ.

ಈರಮ್ಮ ಹಾಡುವ ಕಥನ ಕಾವ್ಯಗಳಲ್ಲಿ ಗದ್ಯ ಪದ್ಯ ಮಿಶ್ರಿತವಾದ ಕಾವ್ಯ ಬಂಧ ಕಂಡು ಬರುತ್ತದೆ. ಇಲ್ಲಿಯ ಗದ್ಯದ ಗತಿ ಪದ್ಯದ ಓಘ ವಿಶಿಷ್ಟವಾಗಿದೆ. ಈ ಕಾವ್ಯಗಳಲ್ಲಿ ಗದ್ಯಕ್ಕಿಂತಲೂ ಹಾಡು ಪ್ರಧಾನ ಅಂಶವಾಗಿದೆ. ಗದ್ಯದ ಪ್ರಮಾಣ ಹೆಚ್ಚಿದ್ದರೂ ಹಾಡಿನಿಂದಲೇ ಕಾವ್ಯದ ಸೊಗಸು. ಪದ್ಯಗಂದಿಯಾದ ಗದ್ಯ ಇಲ್ಲಿದೆ. ಗದ್ಯ ಪದ್ಯ ಮಿಶ್ರಿತವಾದ ಚಂಪೂಧಾಟಿಯಲ್ಲಿ ಬರುವ ಇಲ್ಲಿನ ಕಥೆಗಳು ಈರಮ್ಮ ನಾಟಕೀಯವಾಗಿ, ಅಭಿನಯ ಪೂರ್ವಕವಾಗಿ ಗದ್ಯದಲ್ಲಿಯೇ ಕಥೆಯನ್ನು ನಿರೂಪಿಸುತ್ತ ಒಂದೊಂದು ಸನ್ನಿವೇಶ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತ ಹೊಗುತ್ತಾಳೆ. ಕಥೆಯು ಭಾವಕ್ಕೆ ತಕ್ಕಂತೆ ನಿರೂಪಿಸಲ್ಪಡುತ್ತದೆ. ಹೀಗಾಗಿ ಇಲ್ಲಿಯ ಕಾವ್ಯಗಳು ಸಂವಾದ, ಅಭಿನಯ, ನೃತ್ಯ, ಸಂಗೀತದ ದೃಷ್ಟಿಯಿಂದ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

6.1 ಬುರ್ರಕಥನ ಕಾವ್ಯಗಳ ವಸ್ತು :

ಬುರ್ರಕಥಾ ಈರಮ್ಮ ಹಾಡುವ ಕಥನಕಾವ್ಯಗಳ ವಸ್ತು ವೈವಿಧ್ಯತೆಯಿಂದ ಕೂಡಿದೆ. ಜಾನಪದ ಪ್ರೇಕ್ಷಕ ವರ್ಗವನ್ನೇ ಮುಖ್ಯವಾಗಿರಿಸಿಕೊಂಡು ಹಾಡುವ ಕಥನ ಕಾವ್ಯಗಳು ವೀರ , ಛಲ, ತ್ಯಾಗ, ಧರ್ಮ - ಸಂಘರ್ಷ, ಧರ್ಮ ಸಮನ್ವಯತೆ ಮುಂತಾದ ಅಂಶಗಳ ಹಿನ್ನೆಲೆಯಿಂದ ರಚನೆಗೊಂಡಿವೆ. ಹೀಗಾಗಿ ಕುಮಾರರಾಮ ಕಾವ್ಯ, ಕೃಷ್ಣ ಗೊಲ್ಲರ ಕಾವ್ಯ, ಬಾಲನಾಗಮ್ಮನ ಕಾವ್ಯ, ಬಲಿಚಕ್ರವರ್ತಿ ಕಾವ್ಯ

ಮುಂತಾದವುಗಳಲ್ಲಿ ವೀರ, ಛಲ, ತ್ಯಾಗ ಮೌಲ್ಯಗಳು ಚಿತ್ರಿಸಲ್ಪಟ್ಟಿವೆ. ಸ್ಯಾಸಿ ಚಿನ್ನಮ್ಮ ಮತ್ತು ಆದೋನಿಲಕ್ಷ್ಮಮ್ಮನ ಕಾವ್ಯಗಳು ಭಕ್ತಿ ಪ್ರಧಾನವಾದವುಗಳು.ಜೈಸಿಂಗರಾಜನ ಕಾವ್ಯ ಸರ್ವಧರ್ಮ ಸಮನ್ವಯವನ್ನು ಸಾರುವ ಕಾವ್ಯವಾಗಿದೆ. ಜೊತೆಗೆ ಈ ಮೇಲಿನ ಕಾವ್ಯಗಳಲ್ಲಿ ಮತ ಸಂಘರ್ಷವೂ ಕೂಡ ಕಂಡು ಬರುತ್ತದೆ. ಅಲ್ಲದೆ , ಪ್ರಾಣಿ - ಪಕ್ಷಿಗಳು, ಪ್ರಕೃತಿ ಸಂಪತ್ತು, ದ್ವೇಷ - ಅಸೂಯೆ ಮುಂತಾದ ಅನೇಕ ಅಂಶಗಳು ಕಾವ್ಯದ ಪೂರಕ ವಸ್ತುವಾಗಿದೆ.

ಕುಮಾರರಾಮನ ಕಾವ್ಯ :

ಕರ್ನಾಟಕದ ಐತಿಹಾಸಿಕ ಪರಂಪರೆಯಲ್ಲಿ ಕುಮಾರ ರಾಮ ಅತ್ಯಂತ ಜನಪ್ರೀಯ ಹೊಂದಿದ ವೀರ ಪುರುಷ. ತಾನು ನಂಬಿದ ಮೌಲ್ಯಗಳನ್ನು ಜೀವನದುದ್ದಕ್ಕೂ ಪರಿಪಾಲಿಸಿಕೊಂಡು ಬಂದವನು. ಅದಕ್ಕಾಗಿಯೇ ತನ್ನ ಜೀವವನ್ನು ತೆತ್ತವನು. ಇಲ್ಲಿ ಅವನಿಗೆ ತನ್ನ ಜೀವ ಮುಖ್ಯವಲ್ಲ. ತಾನು ಒಪ್ಪಿಕೊಂಡ ಮೌಲ್ಯಮುಖ್ಯ. ಪರನಾರಿ ಸೋದರನೆಂದು ಬಿರುದು ಪಡೆದ ಇವನು ಇಂದಿಗೂ ಜನಮನದಲ್ಲಿ ಜೀವಂತವಾಗಿದ್ದಾನೆ. ಇಂದಿಗೂ ಜನ ಇವನ ಗುಡಿ ಕಟ್ಟಿ ಪೂಜೆ ಮಾಡುವುದು, ಜಾತ್ರೆ ನಡೆಸುವುದು, ಅವನನ್ನು ಆರಾಧಿಸುವುದು ಮುಂತಾದವುಗಳು ಮಾಡುತ್ತಾರೆ. ಕುಮಾರರಾಮನ ಕಾವ್ಯ ಕನ್ನಡಿಗರ ಜನ ಮನದಲ್ಲಿ ಶಾಶ್ವತವಾಗಿ ಉಳಿದುಕೊಂಡು ಬಂದಿರುವ ಬಹಳ ಪ್ರಸಿದ್ಧವಾದ ಕಾವ್ಯ. ಕುಮಾರ ರಾಮನ ಕುರಿತು ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯಗಳೆರಡರಲ್ಲಿಯೂ ಕಾವ್ಯ ರಚನೆಗೊಂಡಿದೆ. ಶಿಷ್ಟರಿಗಿಂತಲೂ ಜನಪದರು ಕುಮಾರರಾಮನನ್ನು ವಿಶಿಷ್ಟ ರೀತಿಯಲ್ಲಿ ಕಂಡಿದ್ದಾರೆ. ಕುಮಾರ ರಾಮ ಐತಿಹಾಸಿಕ ವ್ಯಕ್ತಿ. ಅವನದು ಧೀರ ವ್ಯಕ್ತಿತ್ವ. ಅಪ್ರತಿಮ ವೀರನಾದ ಕುಮಾರರಾಮ ಓರಗಲ್ಲಿನ ಅಧಿಪತಿ ಗಣಪತಿ ರಾಜನಿಗೆ ಸೋಲಿಸಿದವನು. ದಿಲ್ಲಿ ಸುಲ್ತಾನನೊಂದಿಗೆ ಯುದ್ಧದಲ್ಲಿ ಜಯಿಸಿದವನು. ಹೀಗೆ ಇವನೊಬ್ಬ ಸಾಂಸ್ಕೃತಿಕ ವೀರನಾಗಿ ವಿಜಯ ನಗರ ಪರಿಸರದ ಜನರಲ್ಲಿ ಆರಾಧ್ಯ ದೈವನಾಗಿ ಕಂಡು ಬರುತ್ತಾನೆ. ಇವನು ವೀರನಾಗಿ ಹುಟ್ಟಿ, ವೀರನಾಗಿ ಬೆಳೆದು, ವೀರ ಮರಣವನ್ನಪ್ಪಿದ ಕುಮಾರರಾಮ ಅವನೊಬ್ಬ ಸಾಂಸ್ಕೃತಿಕ ವೀರನಾಗಿ ಕಂಡು ಬರುತ್ತಾನೆ.

ಮುಸಲ್ಮಾನರ ದೈತ್ಯದಾಳಿಯನ್ನು ದಕ್ಷಿಣ ಭಾರತದಲ್ಲಿ, ಏಕಾಂಗ ವೀರನಾಗಿ ತಡೆಗಟ್ಟಿದ, ಮಲತಾಯಿಯ ಮೋಹ ನಿರಾಕರಣೆಯಲ್ಲಿ ನಲುಗಿದ, ಕೊನೆಗೂ ಮಾದಿಗಿತ್ತಿಯೆಂಬ ಹೆಣ್ಣಿನ ಕೈಯಲ್ಲಿ ಹತನಾದ - ಈ ಎಲ್ಲ ವಿಶಿಷ್ಟ ಘಟನೆಗಳು ಕಾರಣವಾಗಿ ಬಾಲವೀರ ಅಭಿಮನ್ಯುವಿನಂತೆ ಕುಮಾರರಾಮ ಕನ್ನಡಿಗರ ಮನಸ್ಸಿನಲ್ಲಿ ಅಂದಿನಿಂದ ಇಂದಿನವರೆಗೂ ಜೀವಂತನಾಗಿದ್ದಾನೆ. ಮಯೂರ ವರ್ಮ, ಪುಲಿಕೇಶಿ, ವಿಕ್ರಮಾದಿತ್ಯ, ವಿಷ್ಣು ವರ್ಧನ, ಏಕೆ ಕೃಷ್ಣ ದೇವರಾಯನಂಥ ಪ್ರಸಿದ್ಧ ಅರಸರ ಹೆಸರನ್ನುಮರೆತ ಕನ್ನಡ ಜನ ಸಮುದಾಯ ಕುಮಾರರಾಮನನ್ನು ಮರೆಯದೆ ಒಬ್ಬ ಸಾಂಸ್ಕೃತಿಕ ವೀರನನ್ನಾಗಿ ಬೆಳೆಸಿಕೊಂಡು ಬಂದರು. ಇದರ ಫಲವಾಗಿ ಇವನ ವಿಷಯದಲ್ಲಿ ಕಾಲ ಕಾಲಕ್ಕೆ ಭೌತಿಕ, ಅಭೌತಿಕ ಆಕರ ಸಾಮಗ್ರಿ ಅಪಾರ ಪ್ರಮಾಣದಲ್ಲಿ ಹುಟ್ಟಿ ಕೊಂಡಿತು[1]. ಕುಮಾರ ರಾಮ ಜನಪದರಿಗೂ ಶಿಷ್ಟ ಕವಿಗಳಿಗು ಅಚ್ಚು ಮೆಚ್ಚು. ಹೀಗಾಗಿ ಶಿಷಟ ಸಾಹಿತ್ಯದಲ್ಲಿ ಕುಮಾರರಾಮನ ಕುರಿತು ಐದು ಕೃತಿಗಳು ರಚನೆಗೊಂಡಿವೆ[2].

ವೀರ ಪ್ರಾಚೀನ ಕಾಲದಲ್ಲಿ ಬಹು ಮುಖ್ಯ ಮೌಲ್ಯವಾಗಿದ್ದಿತು. ವೀರನೊಬ್ಬ ಯುದ್ಧದಲ್ಲಿ ಮಡಿಯುತ್ತಲೇ

ಒಂದೆಡೆ ವೀರಗಲ್ಲ ಪೂಜೆ ನಡೆದರೆ, ಇನ್ನೊಂದೆಡೆ ಸಾಹಿತ್ಯ (ಶಿಷ್ಟ - ಜಾನಪದ) ಮಾಧ್ಯಮದಲ್ಲಿ ಅವನ ಕೀರ್ತಿ ಪ್ರಸಾರಕಾರ್ಯ ನಡೆಯುತ್ತಿದ್ದಿತು. ಚಕ್ರವರ್ತಿಯಿಲ್ಲದ ಕರ್ನಾಟಕದಲ್ಲಿ ಸಂಭವಿಸಿದ ಚಿಕ್ಕ ಪುಟ್ಟ ಪಾಳೆಯಗಾರರ ಪರಸ್ಪರ ಘರ್ಷಣೆ ಮತ್ತು ಮುಸಲ್ಮಾನರ ಆಕ್ರಮಗಳಿಂದಾಗಿ ಈ ವೀರ ಮತ್ತು ಅದರ ಪ್ರಸಾರ ಇನ್ನೂ ಮಹತ್ವ ಪಡೆದವು. ಸಾಮಾನ್ಯವಾಗಿ "ವೀರನ ಸಾವು ಕತೆಯಾಗಿ ಪರಿದುದು" ಎಂಬ ಶಾಸನ ಮಾತಿನಂತೆ ಸಾವನ್ನು ಸಾಹಿತ್ಯ ಮಾಡುವ ಮತ್ತು ಅದನ್ನು ಸಮಾಜದ ತುಂಬ "ಪರಿಯಿಸುವ" ಸಲುವಾಗಿ ಚಾರಣ ಕವಿಗಳು, ಜಾನಪದ ನೀಲಗಾರರು (ಅೀಲೆಗಾರರು) ಹುಟ್ಟಿಕೊಂಡರು[3]. ಕುಮಾರ ರಾಮ ಜಾನಪದರಲ್ಲೂ ಕೂಡ, ಶಿಷ್ಟರಂತೆಯೇ ಚಿತ್ರಣಗೊಂಡಿದ್ದಾನೆ. ಕುಮಾರ ರಾಮ ಐತಿಹಾಸಿಕ ವ್ಯಕ್ತಿಯಾದರೂ ಆ ವೀರನನ್ನು ನಮ್ಮ ಜನಪದರು ಕಂಡ ಬಗೆ ಬೇರೆ . ಬಹುಶಃ ವಿಜಯ ನಗರ ಇತಿಹಾಸದಲ್ಲಿ ಕುಮಾರ ರಾಮನಷ್ಟು ಜನಮನದಲ್ಲಿ ಉಳಿದ ಪುರಾಣದ ವ್ಯಕ್ತಿಯಾದ ವೀರ ಇನ್ನೊಬ್ಬನಿಲ್ಲ. ಬಳ್ಳಾರಿ ಜಿಲ್ಲೆಯ ಬುಡುಗ ಜಂಗಾಲರು ಅಥವಾ ವೇಷಗಾರರು ತಮ್ಮ ಬುರ್ರ ಕಥಾ ಮಾದರಿಯಲ್ಲಿ ಕನ್ನಡದಲ್ಲಿ ಹಾಡಿರುವ ಈ ಕಾವ್ಯ ಅತ್ಯಂತ ವಿಶಿಷ್ಟವಾದದ್ದು. ಜಟ್ಟಂಗೇಶ್ವರ ನೀಡುವ ಬಾಳೆಹಣ್ಣಿನ ವರ ಪ್ರಸಾದಕ್ಕೆ ಇಬ್ಬರು ವೀರರು ಜನ್ಮಿಸುತ್ತಾರೆ. ಹಣ್ಣು ತಿಂದ ರಾಣಿಯ ಹೊಟ್ಟೆಯಲ್ಲಿ ಕುಮಾರ ರಾಮ ಹುಟ್ಟಿದರೆ, ಹೋಲಿಕೆ ರಾಮ ಸಿಪ್ಪೆ ತಿಂದ ದಾಸಿಯ ಹೊಟ್ಟೆಯಲ್ಲಿ ಹುಟ್ಟುತ್ತಾನೆ. ಆರಂಭದಲ್ಲಿಯೇ ಅಪವಾದಕ್ಕೆ ಗುರಿಯಾಗುವ ದಾಸಿ ಅದನ್ನು ಪರಿಹರಿಸಿಕೊಳ್ಳುತ್ತಾಳೆ. ಆದರೆ ಅವಳ ಮಗ ಹೋಲಿಕೆರಾಮ, ಕುಮಾರರಾಮನಷ್ಟೇ ವೀರನಾದರೂ ದಾಸಿಯ ಮಗನಾದ ಕಾರಣಕ್ಕೆ ಹಲವು ರೀತಿಯ ಶೋಷಣೆಗೆ ಒಳಗಾಗುತ್ತಲೇ ಹೋಗುತ್ತಾನೆ. ವಿಜಯ ನಗರ ಸಾಮ್ರಾಜ್ಯದ ಸಂದರ್ಭದ ಹಲವು ಬುಡಕಟ್ಟುಗಳು ಕುಮಾರರಾಮನನ್ನು ತಮ್ಮ ಸಾಂಸ್ಕೃತಿಕ ವೀರನನ್ನಾಗಿ ಪರಿಗಣಿಸಿ ಅವನ ಅಣತಿಯಂತೆ ನಡೆಯುತ್ತಾರೆ. ಇವತ್ತಿಗೂ ಅನೇಕ ಕೆಳವರ್ಗಗಳಿಂದ ಪೂಜೆಗೊಳ್ಳುತ್ತಿರುವ ಕುಮಾರ ರಾಮ ಹಾಗೂ ಡೊಂಬರ ಕನ್ಯೆ ಎಂದು ಹೇಳಲಾಗುವ ರತ್ನಾಜಿ ಹಾಗೂ ಅವಳಸುತ್ತ ಹೆಣೆದ ಕಾಮದ ಕಥೆ ಈ ಕಾವ್ಯದಲ್ಲಿ ಬಿನ್ನರೂಪದಲ್ಲಿ ಪ್ರಸ್ತಾಪಿಸಲ್ಪಡುತ್ತವೆ. ಇತಿಹಾಸದ ಘಟನೆ ಜನಪದರ ಬಾಯಲ್ಲಿ ಕಾವ್ಯವಾದಾಗ ಸಹಜವಾಗಿ ಅದು ಜನ ಸಾಮಾನ್ಯರ ಪರ್ಯಾಯ ಇತಿಹಾಸದಂತೆ ಕಂಡು ಬರುತ್ತದೆ. ಇಂಥ ಒಂದು ಪರ್ಯಾಯ ಇತಿಹಾಸದಂತೆ ಕಂಡು ಬರುತ್ತದೆ. ಇಂಥ ಒಂದು ಪರ್ಯಾಯ ಇತಿಹಾಸದ ಆಶಯ ಹೊತ್ತ ಈ ಕಾವ್ಯ ಹಲವು ಜನವರ್ಗಗಳು ವಿಜಯನಗರದ ಜೊತೆಗೆ ಇಟ್ಟುಕೊಂಡ ಸಂಬಂಧ ಮತ್ತು ಭಾವನೆಗಳನ್ನು ಪ್ರತಿಬಿಂಬಿಸುತ್ತದೆ[4].

ಕುಮಾರ ರಾಮ ಜಟಿಂಗೇಶ್ವರನ ವರ ಪ್ರಸಾದದಿಂದ ಜನಿಸಿದವನು. ಜಟಿಂಗೇಶ್ವರ ಬಾಳೆಹಣ್ಣಿನ ಪ್ರಸಾದ ಕೊಡಲು, ಕಂಪಿಲರಾಯನ ಹೆಂಡತಿ ಹರಿಯಾಲದೇವಿ ಬಾಳೆಹಣ್ಣು ತಿನ್ನುತ್ತಾಳೆ. ಇದರಿಂದ ಕುಮಾರರಾಮ ಜನಿಸುತ್ತಾನೆ. ಬಾಳೆಹಣ್ಣು ತಿಂದು ಎಸೆದ ಸಿಪ್ಪೆಯನ್ನು ದಾಸಿ ತಿನ್ನುತ್ತಾಳೆ. ಈ ವರ ಪ್ರಸಾದವಾಗಿ ದಾಸಿಯ ಹೊಟ್ಟೆಯಲ್ಲಿ ಹೋಲಿಕೆ ರಾಮ ಹುಟ್ಟುತ್ತಾನೆ. ಇವರಿಬ್ಬರು ಅಣ್ಣ - ತಮ್ಮಂದಿರಂತೆ ಬೆಳೆಯುತ್ತಾರೆ. ಆದರೆ ಮುಂದೆ ಕುಮಾರ ರಾಮ ವೀರನಾಗಿ, ತ್ಯಾಗಿಯಾಗಿ, ಪರನಾರಿ ಸಹೋದರನಾಗಿ ಚಿತ್ರಿಸಲ್ಪಟ್ಟರೆ, ಹೋಲಿಕೆ ರಾಮ ಸ್ತ್ರೀ ಲಂಪಟನಾಗಿ, ಕಳ್ಳನಾಗಿ ಚಿತ್ರಿಸಲ್ಪಡುತ್ತಾನೆ. ಸಕಲ ವಿದ್ಯೆಗಳನ್ನು ಕಲಿತ ರಾಮ ತನ್ನ ಸೋದರ ಮಾವ ಮತ್ತು ಮಂತ್ರಿಯಾದ ಬಚ್ಚಣ್ಣನ ಗರಡಿಯಲ್ಲಿ ಪಳಗಿ ಬೆಳೆದು

ದೊಡ್ಡವನಾಗುತ್ತಾನೆ. ವೀರ ಶೂರನಾಗಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಗೆದ್ದು ಬರುತ್ತಾನೆ. ಓರಗಲ್ಲಿನ ಅಧಿಪತಿ ಗಣಪತಿಯ ಮಗ ಗಣರಾಜನಿಗೆ ಸಂಹರಿಸಿ, ಗಣಪತಿ ರಾಜನಿಗೆ ಸೋಲಿಸಿ , ಎರಡು ರೆಕ್ಕೆ ನಾಲ್ಕು ಪಾದದ ದೇವತಾ ಕುದುರೆ ಗೆದ್ದು ತರುತ್ತಾನೆ. ಅಲ್ಲದೆ ಏಳು ದಡೆವು ಚಂದ್ರಾಯುಧ, ವಜ್ರ ವೈಡೂರ್ಯ, ಮುತ್ತು - ರತ್ನಗಳು ಮುಂತಾದ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಾನೆ. ಪದೆ ಪದೆ ತನ್ನ ರಾಜ್ಯಕ್ಕೆ ತೊಂದರೆ ಕೊಡುತ್ತಿದ್ದ ದಿಲ್ಲಿ ನವಾಬನೊಂದಿಗೆ ಮೂರು ಸಲ ಯುದ್ಧ ಮಾಡಿ ಮೂರು ಸಲ ಗೆದ್ದು ಒಬ್ಬ ಅಪ್ರತಿಮ ವೀರನಾಗುತ್ತಾನೆ. ಅಪ್ರತಿಮ ವೀರನಂತೆ, ಅತ್ಯಂತ ಸುಂದರನೂ ಆದ ಇವನು ಪರನಾರಿ ಸೋದರನೆಂದೇ ಖ್ಯಾತಿ ಪಡೆಯುತ್ತಾನೆ. ಇಂತಹ ಸುಂದರನೂ ಪರಾಕ್ರಮಿಯೂ ಆದ ಕುಮಾರ ರಾಮನೊಂದಿಗೆ ಚೆಲುವೆ ರತ್ನಾಕ್ಷಿಯ ಮದುವೆ ನಿಶ್ಚಯವಾಗುತ್ತದೆ. ಆದರೆ ಈಕೆಯ ಚೆಲುವಿಕೆಗೆ ಮನಸೋತ ಕುಮಾರರಾಮನ ತಂದೆ ಕಂಪಿಲರಾಜ ಮಗನಿಗೆ ತರಬೇಕಾದ ಹೆಣ್ಣನ್ನು ತಾನೇ ಮದುವೆ ಮಾಡಿಕೊಳ್ಳುತ್ತಾನೆ. ಇದರಿಂದ ಭಗ್ನ ಪ್ರೇಮಿಯಾದ ರತ್ನಾಕ್ಷಿ ಮಗನ ಸ್ಥಾನದಲ್ಲಿದ್ದ ಕುಮಾರ ರಾಮನೊಂದಿಗೆ ಕಾಮತೃಪ್ತಿ ಪಟ್ಟುಕೊಳ್ಳಲು ಹೊಂಚು ಹಾಕಿ ವಿಫಲಳಾಗುತ್ತಾಳೆ. ಇದರಿಂದ ಕುಪಿತಳಾದ ರತ್ನಾಕ್ಷಿ ಕೂಮರ ರಾಮ ನನ್ನನ್ನು (ತಾಯಿಯನ್ನು) ಕೆಡಿಸಲು ಬಂದನೆಂದು ಸುಳ್ಳು ಅಪವಾದ ಹೊರಿಸುತ್ತಾಳೆ. ರತ್ನಾಕ್ಷಿಯ ಮೋಹ ಪಾಶದಲ್ಲಿ ಸಿಲುಕಿದ ಕಂಪಿಲರಾಯ ಮಗನಿಗೆ ಮರಣ ದಂಡನೆ ಶಿಕ್ಷೆ ವಿಧಿಸುವನು. ಸೋದರ ಮಾವ ಬಚ್ಚಣ್ಣನ ತಂತ್ರದಿಂದ ಕೂಮರ ರಾಮನ ಜೀವ ಉಳಿಯುವುದು. ಬಚ್ಚಣ್ಣನು ಸೆರೆಯಲ್ಲಿದ್ದ ಹೋಲಿಕೆರಾಮನ ಮನ ವೊಲಿಸಿದಾಗ ಅಣ್ಣ ಕುಮಾರರಾಮನಿಗಾಗಿ ತಾನೇ ತಲೆ ಕಡಿದುಕೊಂಡು ಜೀವ ತ್ಯಾಗ ಮಾಡುವನು. ಇದು ಕುಮಾರ ರಾಮನ ತಲೆಯೆಂದು ಕಂಪಿಲ ರಾಯನಿಗೆ ನಂಬಿಸಿದ ಬಚ್ಚಣ್ಣ ಕುಮಾರ ರಾಮನನ್ನು ನೆಲ ಮಾಳಿಗೆಯೊಳಗೆ ಬಚ್ಚಿಡುವನು. ಕುಮಾರ ರಾಮನಿಗಾದ ಮರಣ ದಂಡನೆಯ ಸುದ್ದಿ ತಿಳಿದ ದಿಲ್ಲಿ ನವಾಬ ಕಂಪಿಲರಾಯನ ಮೇಲೆ ದಂಡೆತ್ತಿ ಬರುವನು. ದಿಲ್ಲಿ ನವಾಬನ ದಾಳಿಗೆ ತತ್ತರಿಸಿದ ಕಂಪಿಲರಾಯ ಚಿಂತಾಕ್ರಾಂತನಾಗಲು, ಬಚ್ಚಣ್ಣನು ಬಚ್ಚಿಟ್ಟಿದ್ದ ಕುಮಾರರಾಮನನ್ನು ಬಿಡಿಸಿ ಯುದ್ಧಕ್ಕೆ ನಿಲ್ಲಿಸಲು, ದಿಲ್ಲಿ ನವಾಬನ ಸೈನ್ಯ ದಿಕ್ಕೆಟ್ಟು ಹೋಗುವುದು. ಆನೆಗುಂದಿ ರಾಜ್ಯ ಉಳಿಯುವುದು ಕೊನೆಗೆ ಸತ್ಯಾ ಸತ್ಯತೆಯನ್ನು ತಿಳಿದ ಕಂಪಿಲರಾಯ ಹೆಂಡತಿ ರತ್ನಾಕ್ಷಿಗೆ ಮರಣ ದಂಡನೆ ವಿಧಿಸುವನು.

ಮುಂದೆ ರತ್ನಾಕ್ಷಿ ಕುಮಾರ ರಾಮನ ಮೇಲೆ ಸೇಡು ತೀರಿಸಿಕೊಳ್ಳಲು ದಿಲ್ಲಿ ಗೋಲ್ಕಂಡ ನವಾಬುದಾರನ ಕುದುರೆ ಕಿವಿಯಿಂದ ಜನಿಸುವಳು. ಹುಸೇನಿಯಾಗಿ ಅವತಾರ ತಾಳುವಳು. ಪುರುಷ ೀಷವನ್ನು ಹಾಕಿ ಕುಮಾರ ರಾಮನೊಂದಿಗೆ ಯುದ್ಧಕ್ಕೆ ಬರುವಳು. ಕುಮಾರರಾಮದಿಲ್ಲಿಯ ನವಾಬುದಾರನ ಸೈನ್ಯದೊಂದಿಗೆ ವೀರಾವೇಶದಿಂದ ಹೋರಾಡುವನು. ಮಾರು ವೇಷದಲ್ಲಿದ್ದ ಹುಸೇನಿ ಹೆಣ್ಣೆಂದು ಕುಮಾರರಾಮನಿಗೆ ತಿಳಿದಾಗ, ನಾನು ಹೆಣ್ಣಿನ ಜೊತೆ ಯುದ್ಧ ಮಾಡಿದೆನಲ್ಲಾ ಎಂದು ದುಃಖ ಪಡುವನು. ನನ್ನನ್ನು ಕ್ಷಮಿಸು ತಾಯಿ ಎಂದು ಬೇಡಿಕೊಳ್ಳುವನು. ಆಗ ಹುಸೇನಿಯು ತಾನು ಹಿಂದಿನ ಜನ್ಮದಲ್ಲಿ ರತ್ನಾಕ್ಷಿಯಾಗಿದ್ದವಳೆಂದು ಕುಮಾರ ರಾಮನಿಗೆ ತನ್ನನ್ನು ಮದುವೆಯಾಗಲು ಒತ್ತಾಯಿಸುವಳು ಆಗ ರಾಮನು

ನೀನು ತಾಯಿ ಆಗಿದ್ದಿಯೋ ನಾನು ಮಗನಾಗುತ್ತೇನೆ

ನನಗೆ ರಾಜ್ಯವೆ ಬೇಕಿಲ್ಲ , ದೇಶವೂ ಬೆಕಿಲ್ಲ ,

ಈ ಲೋಕವೆ ಬೇಕಿಲ್ಲ, ನಿನ್ನ ರಾಜ್ಯವೆ ಬೇಕಿಲ್ಲ ತಾಯಿ

ನಾನು ಜೀವ ಕಅಯಂಗಿಲ್ಲಮ್ಮ

ನಾನು ಜೀವದ ಮಗನಿನಗಮ್ಮ ॥ತಂದಾನಾ॥[5]

ಎಂದು ಆಕೆಯ ಇಚ್ಛೆಯನ್ನು ಬಿನಯದಿಂದ ತಿರಸ್ಕರಿಸುತ್ತಾನೆ. ನನ್ನನ್ನು ಮದುವೆಯಾಗದಿದ್ದರೆ ನಿನ್ನ ರಾಜ್ಯ ಕೊಡು ಎನ್ನುತ್ತಾಳೆ , ಒಪ್ಪದಿದ್ದಾಗ ನಿನ್ನ ತಲೆ ಕಡೆದು ದಿಲ್ಲಿಗೆ ಒಯುತ್ತೇನೆ. ನಿನು ಸಾಯಬೇಕು ಎಂದಾಗ, ತನ್ನ ತಲೆ ಕಡೆದುಕೊಂಡು ರಾಮ ಸಾಯುತ್ತಾನೆ. ಅವನ ತಲೆ ದಿಲ್ಲಿ ಪಟ್ಟದ ಆಗಸಿ ಮ್ಯಾಲೆ ಬಂದು ಕೂಡುತ್ತದೆ. ದಿಲ್ಲಿಯಲ್ಲಿ ಅನೇಕ ರೀತಿಯ ಅಪಶಕುನಗಳಾಗುತ್ತವೆ. ತಾಯಿ ಹರಿಯಳಾದೇವಿ ದುಃಖ ಪಟ್ಟು ರಾಮನ ತಲೆ ಆನೆಗುಂದಿಗೆ ತರುತ್ತಾಳೆ. ತನಗೆ ರಾಮ ಸಿಗಅಲ್ಲವೆಂದು ಹುಸೇನಿ ಆತ್ಮ ಹತ್ಯೆ ಮಾಡಿಕೊಳ್ಳುತ್ತಾಳೆ. ರಾಮನ ತಲೆ ಆನೆಗುಂದಿಗೆ ತಂದು ಬೆಳ್ಳಿ ತಂತಿ ತಗಂಡು ಬೆಳ್ಳಿ ಸೂಜಿಯಿಂದ ತಲೆಯನ್ನು ದೇಹಕ್ಕೆ ಹಚ್ಚಿ ಹೊಲೆಯಲಾಗಿ ರಾಮ ಎದ್ದೇಳುತ್ತಾನೆ. ಈ ದುಷ್ಟ ಲೋಕ ಕರ್ಮ ಲೋಕದ ಸಹವಾಸ ಬೇಡವೆಂದು ಅರಣ್ಯ ಸೇರಿ ಕುಮಾರ ಸ್ವಾಮಿಯಾಗಿ ಜನ ಮನದಲ್ಲಿ ನಿಲ್ಲುತ್ತಾನೆ.

ಹೀಗೆ ಈರಮ್ಮ ಹಾಡುವ ಕುಮಾರ ರಾಮನ ಕಾವ್ಯ ಅದ್ಭುತವಾದುದ್ದು. ಕಾವ್ಯದುದ್ದಕ್ಕೂ ಕುಮಾರ ರಾಮನ ವೀರತನ ಶೌಚ ಗುಣ, ಪರಾಕ್ರಮ ,ತಾಯಿ ಮಗನ ಸಂಬಂಧದ ಅನನ್ಯತೆ ಸುಂದರವಾಗಿ ಚಿತ್ರಿಸಿದ್ದಾಳೆ. ಕುಮಾರ ರಾಮ ಎಷ್ಟೇ ವೀರನಾದರೂ ಅಪ್ರತಿಮ ಶೂರನಾದರೂ, ಮಾನವೀಯ ಸಂಬಂಧಕ್ಕೆ ಬೆಲೆ ಕೊಟ್ಟು ಅದಕ್ಕಾಗಿ ತನ್ನ ಜೀವ ಕೊಟ್ಟವನು. ತಾಯಿ ಮಗನ ಸಂಬಂಧದ ಪಾವಿತ್ರ್ಯತೆಯನ್ನು ಕಾಯ್ದುಕೊಂಡು ಬಂದವನು. ಈ ಜನ್ಮದಲ್ಲಿ ಕುಮಾರ ರಾಮ ಸಿಗಲಿಲ್ಲವೆಂದು ರತ್ನಾಕ್ಷಿ ಮತ್ತೆ ಜನ್ಮ ತಾಳಿ ಹುಸೇನಿಯಾಗಿ ಬಂದು ಅವನನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರೂ ಅವಳನ್ನು ಕುಮಾರ ರಾಮ ತಾಯಿ ಸ್ಥಾನದಲ್ಲೇ ನಿಂತು ನೋಡುತ್ತಾನೆ. ನನ್ನ ಜೀವನಕ್ಕೆ ಕಲಿ ಇಲ್ಲದಿದ್ದರೆ ಕಪ್ಪ ಕಾಣಿಕೆ ಒಪ್ಪಿಸಿ ಶರಣಾಗು ಇಲ್ಲದಿದ್ದರೆ ತಲೆ ಬಗ್ಗಿಸು, ನಿನ್ನ ತಲೆ ಕಡಿತಿನಿ ಎಂದು ಹುಸೇನಿ ಹೇಳಲು ಕುಮಾರ ರಾಮ ತನ್ನ ವೀರತನವನ್ನು ಮರೆತು ಆಕೆಯ ಎದರು ಕೈ ಜೋಡಿಸಿ ಬಂದು ಪಾದದ ಮೇಲೆ ನಿಂತು

ಯಮ್ಮ ನೀನು ಮಗನ ಯಾಕೆ ಕಡಿತಿಯಮ್ಮ

ಅಮ್ಮ ಕಡಿಬ್ಯಾಡೇ ತಾಯಿ

ಯಮ್ಮ ಹಾಲು ಕೊಟ್ಟು ಕೈಯಾಗ ಬೆಳೆಸಿದಿ ಯಮ್ಮ

ಯಮ್ಮ ತಾಯಿ ಎರಡು ಅವತಾರದಲ್ಲಿ ಬಂದಿದ್ದೆ ದೇವಿ ॥ತಂದಾನಾ॥[6]

ಎಂದು ಕೈ ಮುಗಿಯುತ್ತಾನೆ. ಕೊನೆಗೆ ಹುಸೇನಿ ಯಾವದಕ್ಕೂ ಒಪ್ಪದಿದ್ದಾಗ ತನ್ನ ತಲೆ ತಾನೇ ಕಡೆದು ಕೊಳ್ಳುತ್ತಾನೆ. ತನ್ನ ತಾಯಿಯ ಸ್ಥಾನದಲ್ಲಿ ನಿಂತ ಹುಸೇನಿಯ ಎದುರುಗಡೆ ತನ್ನ ತಲೆ ಕಡಿದು ಕೊಳ್ಳಲು ಯಾವ ಹಿಂಜರಿಕೆ ಅವನಿಗಿಲ್ಲ. ಇಂತಹ ಆದರ್ಶ ಭಾವನೆಗಳೇ ಕಥೆಯುದ್ದಕ್ಕೂ ಕಂಡು ಬರುತ್ತವೆ. ಹೀಗಾಗಿ ಕುಮಾರ ರಾಮ ಜನಪದರಿಗೆ ಆರಾಧ್ಯ ದೈವವಾಗಿ ಸಾಂಸ್ಕೃತಿಕ ವೀರನಾಗಿ ಕಂಡು ಬರುತ್ತಾನೆ.

ಕೃಷ್ಣ ಗೊಲ್ಲರ ಕಾವ್ಯ :

ಇದು ವಿಶಿಷ್ಟ ರೀತಿಯ ಕಥಾ ವಸ್ತುಗಳನ್ನೊಳಗೊಂಡ ಕಾವ್ಯವು ಈರಮ್ಮನಂತೆ ಅನೇಕ ಜನಪದ ವೃತ್ತಿಗಾಯಕರು ಹಾಡುತ್ತಾರೆ. ಇದೇ ಕಥೆಯನ್ನು ಚೌಡಿಕೆಯವರೂ ಹಾಡುತ್ತಾರೆ. ಅವರು ಇದನ್ನು ಕಾಂಭೋಜ ರಾಜನ ಕಥೆ[7] ಎಂದು ಕರೆದಿದ್ದಾರೆ. ಆಂಧ್ರದ ಬುಡ್ಗ ಜಂಗಮರು (ಬುರ್ರ ಕಥೆಗಾರರು) ಈ ಕಾವ್ಯವನ್ನು ಕಾಂಬೋಜ ರಾಜ ಕಥೆಯೆಂದು ಕರೆದಿದ್ದಾರೆ[8]. ಈರಮ್ಮ ಇದನ್ನು ಕೃಷ್ಣ ಗೊಲ್ಲರ ಕಾವ್ಯವೆಂದು ಕರೆದಿದ್ದಾಳೆ. ಹೀಗೆ ಕರೆದಿರುವುದರಲ್ಲಿ ಔಚಿತ್ಯವಿದೆ. ಈ ಕಥೆ ಕೃಷ್ಣಗೋಲ್ಲ ಬುಡಕಟ್ಟು ಸಮುದಾಯ ಪ್ರತಿನಿಧಿಸುವಂತದ್ದು, ಇದು ಬರಿ ಕಾಂಭೋಜರಾಜನ ಚರಿತ್ರೆಯಲ್ಲ ಒಟ್ಟು ಸಮುದಾಯದ ಚಿತ್ರಣ. ಈ ಕಾವ್ಯದ ಮುಖಾಂತರ ಕಟ್ಟಿ ಕೊಟ್ಟಿದ್ದಾಳೆ. ಇದೊಂದು ಅತಿ ಮಾನುಷವಾದ ಜನಪದ ಕಥೆ .ಈ ಕಾವ್ಯದಲ್ಲಿ ಪ್ರಾಣಿ ಕಥೆಗಳಿಗೆ ಹೆಚ್ಚು ಪ್ರಾಧಾನ್ಯತೆ ದೊರೆತಿದೆ. ಮನುಷ್ಯನ ಸ್ವಾರ್ಥ ಮತ್ತು ಅವನ ಹೀನ ಬುದ್ಧಿಯನ್ನು ಪ್ರತಿಬಿಂಬಿಸುವ ಕಾವ್ಯ ಇದಾಗಿದೆ. ಈ ಭೂಮಿಯ ಮೇಲೆ ಮನುಷ್ಯ ಜೀವದಷ್ಟೆ ಸಕಲ ಚರ ಜೀವಿಗಳಿಗೂ ಪ್ರಾಧಾನ್ಯತೆ ಇದೆ. ಅವುಗಳಿಗೂ ಬಾಳುವ ಬದುಕುವ ಹಕ್ಕು ಇದೆ. ಅವು ಕೂಡ ಮನುಷ್ಯನ ಜೀವನದಷ್ಟೆ ಮೌಲ್ಯಯುತವಾದ ಬದುಕನ್ನು ಹೊಂದಿವೆ ಎಂದು ಸಾರುವುದೆ ಈ ಕಾವ್ಯದ ಪ್ರಮುಖ ಧ್ಯೇಯವೆನಿಸಿದೆ. ಪ್ರಕೃತಿ ರಮ್ಯತೆಯನ್ನು ಸಾರುವ ಸುಂದರ ಕಾವ್ಯ ಇದಾಗಿದೆ.

ಕೃಷ್ಣ ಗೊಲ್ಲರ ಕಾವ್ಯ ಮೂರು ತಲೆ ಮಾರಿನ ಅರಸರ ಕಥೆಯನ್ನು ಹೊಂದಿದೆ ಚಾಮರಾಜ, ಕಾಂಭೋಜರಾಜ ಮತ್ತು ಶರಬಂಧ ರಾಜ ಈ ಮೂವರ ಅರಸರ ಶೌರ್ಯ, ಸಾಹಸಗಳನ್ನು ಅವರ ಪ್ರಕೃತಿ ಪ್ರೇಮವನ್ನು ಈ ಕಾವ್ಯದಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ. ಅಲ್ಲದೆ ಬುಡ ಕಟ್ಟು ಜನಾಂಗದ ಸಾಂಪ್ರದಾಯಿಕತೆ ಇಲ್ಲಿ ಕಾಣುವ ವಿಶೇಷ ಅಂಶವೆನಿಸುತ್ತದೆ. ಬೆಟ್ಟ ಗುಡ್ಡ, ನದಿ , ಗಿಡ ಮರ , ಬಳ್ಳಗಳು, ಪ್ರಾಣಿ ಪಶು, ಪಕ್ಷಿಗಳು ಮುಂತಾದ ಪ್ರಕೃತಿ ಬುಡ ಕಟ್ಟು ಜನ ಜೀವನದ ಅವಿಭಾಜ್ಯ ಅಂಗ ನಿಸರ್ಗ ಸಹಜವಾದ ಪ್ರಕೃತಿಯ ಮಡಿಲಲ್ಲೇ ಅವರ ಜೀವನ. ಹೀಗಾಗಿ ಪ್ರಕೃತಿಯನ್ನು ಆರಾಧಿಸುವ, ಪೂಜಿಸುವ ಮತ್ತು ಪ್ರೀತಿಸುವ ಗುಣ ಅವರಲ್ಲಿ ಸಹಜವಾಗಿ ಬಂದದ್ದು. ಜೊತೆಗೆ ಅವರು ತಮ್ಮದೆ ಆದ ಸಂಪ್ರದಾಯ, ನಂಬಿಕೆ, ಆಚಾರ ವಿಚಾರಗಳನ್ನು ಹೊಂದಿದವರು.ಸಾಂಪ್ರದಾಯಿಕತೆ ಬುಡಕಟ್ಟು ಜನಾಂಗದಲ್ಲಿ ಹೇಗೆ ಪ್ರಬಲವಾಗಿರುತ್ತದೆ ಎನ್ನುವುದು ಈ ಕಾವ್ಯ ಚಿತ್ರಿಸುತ್ತದೆ.

ಮೂರು ತಲೆಮಾರಿನ ಅರಸರ ಕಥೆಯನ್ನು ಹೇಳುವ ಕಾವ್ಯ ಇದಾದರೂ, ಈ ಕಾವ್ಯದ ಕಥಾ ನಾಯಕ ಶರಬಂಧರಾಜ ಇವನು ತನ್ನ ತಂದೆ ಕಾಂಭೋಜರಾಜನ ಪಾಪ ಮುಕ್ತಿಗಾಗಿ ಮಾಡುವ ಪ್ರಯತ್ನ ಹಾಗೂ ಅವನ ಬೆನ್ನು ಹುಣ್ಣನ್ನು ಮಾಯಿಸುವ ಔಷಧಿಗಾಗಿ ಏಳು ಸಮುದ್ರ ದಾಟಿ ಹೋಗಿ ಔಷಧಿ ತರುವ ಶೌರ್ಯ , ಸಾಹಸಗಳು ಕಾವ್ಯದಲ್ಲಿ ಸುಂದರವಾಗಿ ವರ್ಣಿತವಾಗಿದೆ.

ಈ ಕಾವ್ಯ ವಸ್ತುವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಶೈವ - ವೈಷ್ಣವ ಮತದ ಸಂಘರ್ಷ ಇಲ್ಲಿರುವುದು ಕಂಡು ಬರುತ್ತದೆ. ಮೇಲ್ನೋಟಕ್ಕೆ ಶಿವ - ವಿಷ್ಣು ಸ್ವರ್ಗ ಲೋಕದಲ್ಲಿ (ಮೇಲೆ) ಒಂದೇ ಕಡೆ ವಾಸಿಸುವರು. ಕಾಂಭೋಜರಾಜನ ಏಳು ಹೆಂಡಂದಿರಲಿಗೆ ಹನ್ನೆರಡು ವರ್ಷವಾದರೂ ಮಕ್ಕಳಾಗದೆ ಇರುವ

ಸಂದರ್ಭದಲ್ಲಿ ಶಿವ- ವಿಷ್ಣು ಇವರ ನಡುವೆ ಚರ್ಚೆ ನಡೆದು ಶಿವನೇ ವಿಷ್ಣುವಿಗೆ ಕಾಂಭೋಜರಾಜನಿಗೆ ಮಕ್ಕಳ ಫಲ ಕೊಡಲು ಹೇಳುತ್ತಾನೆ. ವಿಷ್ಣುವಿನ ವರಪ್ರಸಾದದಿಂದ ಹುಟ್ಟಿದ ನಾಗಛತ್ರಿ, ದೇವ ಛತ್ರಿ, ಕುಲ ಛತ್ರಿ, ಯೋಗ ಛತ್ರಿ, ಭೋಗಛತ್ರಿ, ಮುನಿಛತ್ರಿ ಎಂಬ ಆರು ಜನ ಮಕ್ಕಳು ಕಾವ್ಯದುದ್ದಕ್ಕೂ ದುಷ್ಟರಾಗಿಯೇ ಚಿತ್ರಿಸಿಲ್ಪಟ್ಟಿದ್ದಾರೆ. ಕೊನೆಯ ಹೆಂಡತಿ ಸಿರಿದೇವಿ ಈ ಮಕ್ಕಳನ್ನು ಸಾಕಿ ಸಂಸ್ಕಾರ ಕೊಟ್ಟರೂ, ಈ ಮಕ್ಕಳು ಮುಂದೆ ದುಷ್ಟರಾಗುತ್ತಲೇ ಹೋಗುತ್ತವೆ. ಈ ಮಕ್ಕಳು ತಾಯಿಯಂದಿರ ದುಷ್ಟತನಕ್ಕೆ ಮಕ್ಕಳನ್ನು ಪ್ರೀತಿಯಿಂದ ಸಾಕಿ ಸಲುಹಿದ ಸಿರಿದೇವಿ ಸ್ಮಶಾನಕ್ಕೆ ದೂಡಲ್ಪಡುತ್ತಾಳೆ. ಆಗ ಶಿವ ಬಂದು ಆಕೆಯನ್ನು ರಕ್ಷಿಸಿ ಆಕೆಗೆ ಸಂತಾನ ಫಲ ಕೊಡುತ್ತಾನೆ ಅವನೇ ಶರಬಂಧ ರಾಜ . ಕಥೆ ಉದ್ದಕ್ಕೂ ಇವನು ವೀರ , ಶೂರನಾಗಿ ಚಿತ್ರಿಸಲ್ಪಟ್ಟಿದ್ದಾನೆ. ಎಂತಹ ಸಂದರ್ಭ ಬಂದರೂ ಸ್ವಯಂ ತಾಳ್ಮೆಯಿಂದಲೇ ವರ್ತಿಸುತ್ತಾನೆ.

ಕಾಂಭೋಜರಾಜನಿಗೆ ಬೆನ್ನಲ್ಲಿ ಹುಣ್ಣು ಹುಟ್ಟುವುದು. ದಾಸಪ್ಪನ ವೇಷದಲ್ಲಿ ಬಂದು ಶಿವನಿಗೆ ಅಪಮಾನ ಮಾಡುವುದರಿಂದ ಎನ್ನುವುದು ಬಹು ಮುಖ್ಯ ಅಂಶ. ಶಿವ ದಾನ ಬೇಡಿದಾಗ ಕಾಂಭೋಜರಾಜ,

ಇಕ್ರಿ ನಾವು ಗೊಲ್ರು ಹಾಲು ಗೊಲ್ರು

ಕೃಷ್ಣ ಗೊಲ್ರು ನಾವು

ನಾವು ನಾಮ ಉದ್ದಕ್ಕ ಹಚ್ಚಿಕ್ಯಂಡೋರಿಗೆ ದಾನ ಮಾಡೋದು

ಅಡ್ಡ ಹಚ್ಚಿದವರಿಗೆ ದಾನ ಮಾಡೋದಿಲ್ಲ

ಗೋವಿಂದ ಅಂದೋರಿಗೆ ನಾವು ದಾನ ಕೊಡೋದು ಗೊಲ್ರು

ಈಗ ಶಿವ ಶಿವ ಅಂದವರಿಗೆ ದಾನ ಮಾಡುವುದಿಲ್ಲ[9]

ಎಂದು ದಾನ ಕೊಡಲು ತಿರಸ್ಕರಿಸುತ್ತಾನೆ. ಕೊನೆಗೆ ಶಿವ ಮನವೊಲಿಸಿ ದಾನ ಕೊಡದಿದ್ದರೂ ಸರಿ ವಿಭೂತಿಯಾದರೂ ಹಚ್ಚಿಕೋ ಎಂದಾಗ ನಾವು ಹಣೆಗೆ ವಿಭೂತಿ ಹಚ್ಚಿಕೊಳ್ಳುವುದಿಲ್ಲ ಅನ್ನುತ್ತಾನೆ. ಆಗ ಎಲ್ಲಿ ಹಚ್ಚಲಿ ಅಂದಾಗ ಸಿಟ್ಟಿನಿಂದ ಕಾಂಭೋಜರಾಜ ಬೆನ್ನಿಗೆ ಹಚ್ಚು ಅನ್ನುತ್ತಾನೆ. ಶಿವ ವಿಭೂತಿ ಬೆನ್ನಿಗೆ ಹಚ್ಚಲು ಶನಿ ಮಹಾತ್ಮಾ ವಿಭೂತಿ ಮುಖಾಂತರ ಕಾಂಭೋಜರಾಜನ ಬೆನ್ನೊಳಗೆ ಹೋಗಿ ಹುಣ್ಣಾಗುತ್ತಾನೆ.

ಚೌಡಿಕೆಯವರ ಕಾಂಭೋಜರಾಜನ ಕಾವ್ಯದಲ್ಲಿ ಶೈವ - ವೈಷ್ಣವರ ಸಂಘರ್ಷವೇ ಪ್ರಧಾನ ಅಂಶವಾಗಿದೆ. ಪರಮಾತ್ಮನು ಜಂಗಮ ವೇಷವನ್ನು ತೊಟ್ಟು ಕುರುಪಿಯಾಗಿ ಕಾಂಭೋಜ ಪಟ್ಟದ ರಾಜಸ್ಥಾನದಲ್ಲಿ ಭವತಿ ಭಿಕ್ಷಾಂದೇಹಿ ಎಂದು ಭಿಕ್ಷೆ ಬೇಡಲು ಬಂದಾಗ, ಕಬ್ಬಿಣದಂಗಡಿಯಲ್ಲಿ ನೋಣಕ್ಕೆ ಆಹಾರ ಸಿಗುವುದೇ? ಹೋಗು ಹೋಗು ಎಂದು ಮಂತ್ರಿ ಹೆದರಿಸುತ್ತಾನೆ. ಶಿವ ಪಟ್ಟು ಬಿಡದೆ ಭಿಕ್ಷೆ ನೀಡಿ ಎಂದಾಗ ಅರಮನೆಯ ಹತ್ತಿರ ಬಾ ಊಟ ಕೊಡತಿನಿ ಎಂದು ಕಾಂಭೋಜರಾಜ ಶಿವನಿಗೆ ಹೇಳುತ್ತಾನೆ. ಶಿವ ಅರಮನೆಗೆ ಹೋಗಲು ಕಾಂಭೋಜರಾಜ ಎಲವೋ ಜಂಗಮ ಎಲ್ಲಿಗೆ ಬರುತ್ತಿದ್ದಿಯೆ? ಹೋಗು ಎನ್ನುತ್ತಾನೆ. ಆಗ ಶಿವ ಮಹಾರಾಜ ಒಂದು ಗಂಟೆಗೆ ಆಡಿದ ಮಾತು ಇವಾಗಿಲ್ಲ. ರಾಜಸ್ಥಾನದಲ್ಲಿ ಭಿಕ್ಷೆಯನ್ನು ಬೇಡಿದಾಗ ಅರಮನೆಗೆ ಬಾ ಕೊಡತಿನಿ ಎಂದು ಹೇಳಿ ಇವಾಗ ನೀನು ಯಾರೆಂದು ಕೇಳುತ್ತಿದ್ದಿಯಾ? ನೀನು ನ್ಯಾಯಾಧಿಪತಿಯೇ? ನಿಮ್ಮಂತಹ ಅಜ್ಞಾನಿಗಳು ಈ ನ್ಯಾಯ ಸಿಂಹಾಸನವನ್ನು ಏರಬಾರದು ಎಂದು

ಮೊದಲಿಸುತ್ತಾನೆ. ಆಗ ಕಾಂಭೋಜರಾಜ ಸಿಟ್ಟಿಗೆದ್ದು ನಿನ್ನಂತಹ ತಿರುಕನಿಗೆ ಇಷ್ಟೋಂದು ಅಹಂಕಾರವೇ? ಎಂದು ಕೋಪದಿಂದ ಶಿವನನ್ನು ಝಾಡಿಸಿ ಒದೆಯುತ್ತಾನೆ. ಆಗ ಶಿವ ನೋಣವಾಗಿ ಹಾರಿ ನಡು ಬೆನ್ನಿನಲ್ಲಿ ಬಂದು ಇರುವೆ ಕಡಿದ ಹಾಗೆ ಕಡಿದು ಮಾಯವಾಗುತ್ತಾನೆ[10]. ಇದು ಮುಂದೆ ದೊಡ್ಡ ಹುಣ್ಣಾಗಿ ಪರಿವರ್ತನೆಯಾಗುತ್ತದೆ. ಈ ರೀತಿ ವೈಷ್ಣವನಾದ ಕಾಂಭೋಜರಾಜ ಜಂಗಮ (ಶಿವ)ನನ್ನು ಅಪಮಾನಿಸುವುದು ಅದರ ಪ್ರತಿಫಲವಾಗಿ ಹುಣ್ಣಾಗುವುದು, ಎರಡೂ ಕಾವ್ಯಗಳಲ್ಲಿ ಕಂಡು ಬಂದರೂ ಈರಮ್ಮ ಹಾಡುವ ಕೃಷ್ಣಗೊಲ್ಲರ ಕಾವ್ಯದಲ್ಲಿ ಮತ ಸಂಘರ್ಷ ಸೌಮ್ಯ ರೀತಿಯಲ್ಲಿದೆ, ಚೌಡಿಕೆ ಕಾವ್ಯದಲ್ಲಿದ್ದಷ್ಟು ತೀಕ್ಷ್ಣತೆ ಇಲ್ಲಿಲ್ಲ.

ಮುಂದೆ ಶರಬಂಧ ರಾಜ ಕಾಂಭೋಜರಾಜ ತನ್ನ ತಂದೆ ಎಂದು ತಿಳಿದು ಅವನ ಬೆನ್ನಿನ ಹುಣ್ಣಿಗೆ ಮೇಟೌಷಧಿ ತರಲು ಏಳು ಸಮುದ್ರ ದಾಟಿ ಹೋಗುತ್ತಾನೆ. ದಾರಿಯಲ್ಲಿ ಹೋಗುವಾಗ ಅನೇಕ ರೀತಿಯ ಅಡ್ಡಿ ಆತಂಕಗಳನ್ನು ಎದುರಿಸುತ್ತಾನೆ. ದಾರಿಯಲ್ಲಿ ಹೋಗುವಾಗ ಭೂಪತಿ ಪಟ್ಟದಲ್ಲಿ ಹುಲಿ ಸಂಹಾರ ಮಾಡಿ, ಅರಸನ ಮಗಳಾದ ಮಾಣಿಕ್ಯದೇವಿಯೊಂದಿಗೆ ಮದುವೆಯಾಗುತ್ತಾನೆ. ಮುಂದೆ ಚಾವುಲ್‌ರಾಜ ಪಟ್ಟದ ಶಾಮಗಂಧಿ, ಚಿತ್ರಗಿರಿ ಪಟ್ಟದ ಚಿತ್ರಾಂಗಿ ಗಾಜಿನ ಬುಡ್ಡಿಯ ಎದಿನಗಂಧಿ ಇವರನ್ನೆಲ್ಲ ವರಿಸಿಕೊಂಡು ಏಳು ಸಮುದ್ರಾಚೆಗಿನ ಮೇಟೌಷಧಿಯನ್ನು ತೆಗೆದುಕೊಂಡು, ಎಲ್ಲಾ ಹೆಂಡಂದಿರನ್ನು ಕರೆದುಕೊಂಡು ವಾಪಸ್ಸು ಪ್ರಯಾಣ ಬೆಳೆಸುತ್ತಾನೆ. ಇಲಾಮಂತ್ರ ಪಟ್ಟದ ಪಾತರಗಿತ್ತಿ ಪಂದ್ಯದಲ್ಲಿ ಸೋಲಿಸಿ, ಆಕೆಯನ್ನು ಮದುವೆಯಾಗಿ ಆಕೆ ಸೆರೆಯಿಟ್ಟಿದ್ದ ತನ್ನ ಅಣ್ಣಂದಿರನ್ನು ಬಿಡಿಸಿಕೊಂಡು ಬರುತ್ತಾನೆ. ದಾರಿಯಲ್ಲಿ ಇವನ ಅಣ್ಣಂದಿರರೂ ಇವನನ್ನು ಕೊಲ್ಲುತ್ತಾರೆ. ಆಗ ಶಿವ ಬಂದು ಉಳಿಸುತ್ತಾನೆ. ಎದಿನಗಂಧಿಯೊಂದಿಗೆ ಶರಬಂಧ ರಾಜ ತಂದೆಯ ಬಳಿ ಬರುವನು. ತಂದೆಯ ಬೆನ್ನಿಗೆ ಮೇಟೌಷಧಿ ಹಚ್ಚಿ ಅವನನ್ನು ಗುಣ ಮುಖನಾಗಿ ಮಾಡುತ್ತಾನೆ. ಇಷ್ಟು ಜನ ಹೆಂಡತಿಯರನ್ನು ಗೆದ್ದು ಬಂದರೂ ಕೊನೆಯಲ್ಲಿ ಕೃಷ್ಣಗೊಲ್ಲರ ಬುಡಕಟ್ಟಿನ ಮಹಿಳೆಯನ್ನು ಮದುವೆಯಾಗುತ್ತಾನೆ. ತನ್ನ ಸಾಂಪ್ರದಾಯವನ್ನು ಮೆರೆಯುತ್ತಾನೆ. ಹೀಗೆ ಕೃಷ್ಣ ಗೊಲ್ಲರ ಕಾವ್ಯದಲ್ಲಿ ಶರಬಂಧ ರಾಜನ ಸಾಹಸ, ಅವನ ಭಾವನಾತ್ಮಕ ವ್ಯಕ್ತಿತ್ವವೂ ಮತ ಸಂಘರ್ಷ , ಬುಡಕಟ್ಟಿನ ಜನ ಜೀವನ ಅದ್ಭುತವಾಗಿ ಚಿತ್ರಣ ಗೊಂಡಿದೆ.

ಸ್ಯಾಸಿ ಚಿನ್ನಮ್ಮನ ಕಾವ್ಯ :

ಮತ ಸಂಘರ್ಷವನ್ನು ಚಿತ್ರಿಸುವ ಕಾವ್ಯ. ಈರಮ್ಮ ಈ ಕಾವ್ಯವನ್ನು ತನ್ನ ಎಲ್ಲ ಕಾವ್ಯಗಳಿಗಿಂತಲೂ ಭಿನ್ನವಾಗಿ ಹಾಡುತ್ತಾಳೆ. ಎಲ್ಲಾ ಕಾವ್ಯಗಳು ತಂದಾನ ತಂದಾನ ಎನ್ನುವ ಸೊಲ್ಲಿನಿಂದ ಹಾಡಿದರೆ, ಈ ಕಾವ್ಯದಲ್ಲಿ ರಾಮ ರಾಮ ಎನ್ನುವ ಸೊಲ್ಲು ತನ್ನ ಹಾಡುಗಾರಿಕೆಗೆ ಉಪಯೋಗಿಸಿಕೊಂಡಿದ್ದಾಳೆ.

ಸ್ಯಾಸಿ ಚಿನ್ನಮ್ಮನ ಕಾವ್ಯ ಎರಡು ವಿಭಿನ್ನ ಸಾಮಾಜಿಕ, ಸಾಂಸ್ಕೃತಿಕ ಜೀವನ ಮೌಲ್ಯಗಳನ್ನು ಆರಾಧಿಸುವ ಕುಟುಂಬಗಳ ಮಧ್ಯ ನಡೆಯುವ ಸಂಘರ್ಷ ದ ಕತೆಯನ್ನು ನಿರೂಪಿಸುತ್ತದೆ. ಒಂದೆಡೆ ಸ್ವಂತಿಕೆಯನ್ನು ಕಾಪಾಡಿಕೊಳ್ಳುವ ಪ್ರಯತ್ನ ನಡೆದರೆ, ಇನ್ನೊಂದೆಡೆ ಅದನ್ನು ಕಸಿದುಕೊಂಡು ಸ್ವಾತಂತ್ರ್ಯ ಹರಣಗೊಳಿಸುವ ಹುನ್ನಾರವಿರುವುದು ಕಂಡು ಬರುತ್ತದೆ. ಧರ್ಮ-ಧರ್ಮಗಳ ಮಧ್ಯದ ಸೆಣಸಾಟ,ಪಂಥ-ಮತಗಳ ನಡುವಿನ ಘರ್ಷಣೆ, ಒಂದನ್ನು ಸೋಲಿಸಿ ತನ್ನದಾಗಿಸುವ ಇಲ್ಲವೆ

ತನ್ನಂತಾಗಿಸುವ ಸಂದರ್ಭಗಳಲ್ಲಿ ನಡೆದ ಘರ್ಷಣೆ-ಯುದ್ಧಗಳು ಭಾರತದ ಒಟ್ಟು ಚರಿತೆಯ ಪ್ರಾರಂಭದಿಂದಲೂ ಕಂಡು ಬರುತ್ತದೆ.

ಈ ರೀತಿಯ ಸಂಘರ್ಷ ಈ ಕಾವ್ಯದಲ್ಲಿ ಶೈವ- ವೈಷ್ಣವ ಮತಗಳ ಸಂಘರ್ಷವಾಗಿ ಕಂಡು ಬರುತ್ತದೆ. ಸ್ಯಾಸಿ ಚಿನ್ನಮ್ಮ ವೈಷ್ಣವ ಮನೆತನದ ನರಸಿಂಹರೆಡ್ಡಿ ಹಾಗೂ ಶೀಲುವಮ್ಮನವರ ಮಗಳಾಗಿ ಜನಿಸಿದವಳು. ಗೌಡನಾಗಮ್ಮ ನರಸಿಂಹರೆಡ್ಡಿಯ ತಂಗಿ, ಮಧುರೆಡ್ಡಿಯ ಹೆಂಡತಿ. ಶೈವ ಮನೆತನದವಳು. ಸಾಂಪ್ರದಾಯಿಕವಾಗಿ ಎರಡು ವಿಭಿನ್ನಮತಗಳ ಮಧ್ಯ ವಿವಾಹಸಂಬಂಧ ನಡೆಯುವ ಹಾಗಿಲ್ಲ. ಆದರೆ ಇಲ್ಲಿ ಗೌಡನಾಗಮ್ಮ ಅಣ್ಣ ನರಸಿಂಹರೆಡ್ಡಿಯೊಂದಿಗೆ ಹಟಹಿಡಿದು ಆತನ ಮಗಳಾದ ಸ್ಯಾಸಿ ಚಿನ್ನಮ್ಮನನ್ನು ತನ್ನ ಮಗನಿಗೆ ತಂದು ಕೊಳ್ಳುತ್ತಾಳೆ. ಅಣ್ಣ ಪರಿಪರಿಯಾಗಿ ಕೇಳಿಕೊಂಡರೂ ಆಕೆ ಕೇಳದೆ, ಇದಕ್ಕೆ ಒಪ್ಪದಿದ್ದರೆ ನಿನ್ನ ಮನೆಯಲ್ಲಿ ನೀರೂ ಮುಟ್ಟಲಾರೆನೆಂದು ನುಡಿಯುತ್ತಾಳೆ. ಅಣ್ಣನಿಂದ ಭಾಷೆ ತೆಗೆದು ಕೊಂಡೇ ನೀರು ಪಡೆದು,

ಅಣ್ಣ ತಣ್ಣಾಗಾಗಿ ಬೆಳೆಗೆವಣ್ಣಾ
ನಿಮ್ಮನೆ ಲೋಕ
ಮನೆಯ ಹೆಣ್ಣ ಮಗಳು
ಮನೆಗೆ ಬೆಳಕು ನಾ ಬರುತೀನಣ್ಣ[11]

ಎಂದು ಮನೆಯೊಳಗೆ ಬರುತ್ತಾಳೆ. ಮಗುವಿಗೆ ಹೆಸರಿಡುವಾಗಲೂ ನರಸಿಂಗಹ ರೆಡ್ಡಿ ತಮ್ಮ ಮೂಲವನ್ನು ಹೇಳಿ ತಂಗಿಗೆ ಎಚ್ಚರಿಸುತ್ತಾನೆ. ಆದರೂ ಆಕೆ, ಯಾರಾದರೇನಣ್ಣ ಏನು ಪರವಾಗಿಲ್ಲ. ನಾನು ಹೋಗ್ತಿನಿ ಗಂಡನ ಮನಿಗೆ, ನೀವು ನಾಮದಾರು, ನಾವು ನೋಡಿದ್ರೆ ಶಿವ ಭಕ್ತರು. ನಾವು ಅಂಗ ಪೂಜೆ ಮಾಡೋರು. ಈಶ್ವರ ಭಕ್ತರು ನಾವು ಕಟ್ಟೋದು ಅಂಗ, ಹಚ್ಚೋದು ಈಭೂತಿ ಎಂದಾಗಲೂ ಅಣ್ಣನು ತಂಗಿಗೆ ಬ್ಯಾಡಮ್ಮ ಎದುರಾತದ ನನ ಮಾತುಕೇಳಮ್ಮ ಎಂದರೂ ಆಕೆ ನಾ ಬಿಡೋದಿಲ್ಲ, ಅಣ್ಣ ದೀಪ ಇಲ್ದಂಗಾಗಲಣ್ಣ, ನಾ ಬಿಡೋದಿಲ್ಲೊ ಎಂದು ಹಡ ಹಿಡಿದಾಗ, ಅನಿವಾರ್ಯವಾಗಿ ನರಸಿಂಹ ರೆಡ್ಡಿ ಒಪ್ಪಬೇಕಾಗುತ್ತದೆ. ಮಗುವಿಗೆ ಸ್ಯಾಸಿ ಚಿನ್ನಮ್ಮ ಎಂದು ನಾಮಕರಣ ಮಾಡುತ್ತಾರೆ. ತನ್ನ ಮತವನ್ನು ನಂಬಿಕೊಂಡಿದ್ದ ಗೌಡನಾಗಮ್ಮ ಮುಂದೆ ಅಣ್ಣನ ಮನೆಯಲ್ಲಿ ನಡೆಯುವ ಯಾವ ಶುಭ ಕಾರ್ಯದಲ್ಲೂ ಭಾಗಿಯಾಗುವದಿಲ್ಲ. ಆರೋಗ್ಯ ಸರಿಯಿಲ್ಲ ಎಂದು ನೆವವೊಡ್ಡಿ ತಪ್ಪಿಸಿಕೊಳ್ಳುತ್ತಾಳೆ. ನಾಗಮ್ಮನಿಗೆ ತನ್ನ ಮತವೇ ಮುಖ್ಯವಾಗಿ ಕಾಣುತ್ತದೆ.

ಸ್ಯಾಸಿ ಚಿನ್ನಮ್ಮನಿಗೆ ಮದುವೆಯ ವಯಸ್ಸು ಬಂದಾಗ ಗೌಡನಾಗಮ್ಮ ಪರಿವಾರ ಸಮೇತ ಕದಿರೆಗೆ ಬಂದು ತನ್ನ ಮಗ ಯಂಗಳ ರೆಡ್ಡಿಗೆ ಚಿನ್ನಮ್ಮನನ್ನು ಕೊಟ್ಟು ತನ್ನೂರಿನಲ್ಲಿಯೇ ಮದುವೆ ಮಾಡಿ ಕೊಡೆಂದು ಅಣ್ಣನಿಗೆ ಕೇಳುತ್ತಾಳೆ. ಇಲ್ಲಿಯೂ ಆಕೆ ವೈಷ್ಣವ ಸಂಪ್ರದಾಯವನ್ನು ಮುರಿಯುವ ಪ್ರಯತ್ನ ಮಾಡುತ್ತಾಳೆ. ಅಣ್ಣ ಅದಕ್ಕೆ ಒಪ್ಪದೆ ಚಿನ್ನಮ್ಮ ತಿರುಪತಿಯ ಕೃಪೆಯಿಂದ ಹುಟ್ಟಿದ ಮಗಳಾದಲಿಂದ ತಿರುಪತಿ ಮುಂದೆ ಮಾಡೋ ನಮ್ಮ ಎಂದು ನುಡಿಯುತ್ತಾನೆ. ಆದರೆ ತಂಗಿಯು ಗುಡ್ಡ ಎರಲಿಕ್ಕೆ ಆಗುವುದಿಲ್ಲ, ಉಬ್ಬಸ ಬರುತ್ತದೆ ಎಂದು ನೆವ ಹೇಳುತ್ತಾಳೆ. ಅಲ್ಲದೆ ನಿನ್ನ ಮನೆಯ ಮುಂದೆಯೇ ಮದುವೆ ಮಾಡಿಕೊಡು ಎಂದು ಹೇಳುತ್ತಾಳೆ. ನರಸಿಂಹ ರೆಡ್ಡಿ ಅದಕ್ಕೆ ಒಪ್ಪಿಕೊಂಡು, ಶಾಸ್ತ್ರದಂತೆ ಸ್ವಾಮಿಗೆ ಮುಡಿಪನ್ನು ಮೊದಲು ಅರ್ಪಿಸಬೇಕು ಎಂದಾಗ, ಇದನ್ನೆಲ್ಲ ಮದುವೆಯ ನಂತರ ಮಾಡಿದರಾಗುತ್ತದೆ ಎಂದು ತಡೆಯುತ್ತಾಳೆ.

ಗೌಡನಾಗಮ್ಮ ತನ್ನೆಲ್ಲ ತಂತ್ರಗಳನ್ನು ಬಳಸಿಕೊಂಡು ಒಟ್ಟಾರೆ ವೈಷ್ಣವ ಸಂಸ್ಕೃತಿಯನ್ನು ಮುರಿದಿಕ್ಕುವ ಪ್ರಯತ್ನ ಮಾಡುತ್ತಾಳೆ. ಅಲ್ಲಲ್ಲಿ ಯಶಸ್ಸನ್ನು ಪಡೆಯುತ್ತಾಳೆ. ಮದುವೆ ಸಿದ್ಧವಾದಾಗ ಮಗನಿಗೆ, ಚಿನ್ನಮ್ಮನನ್ನು ತಾಳಿ ಕಟ್ಟುವಾಗ ಗೋವಿಂಧ ಎಂತಲೂ ಗಂಟು ಹಾಕುವಾಗ ನಾರಾಯಣ ಎಂತಲೂ ಹೇಳಬೇಕೆಂದು ಸೂಚಿಸುತ್ತಾಳೆ. ನೆರೆದಿದ್ದವರನ್ನೆಲ್ಲ ಉದ್ದನಾಮ ಹಾಕಿಕೊಳ್ಳಲು ಹೇಳಿ ಒಪ್ಪಿಸುತ್ತಾಳೆ. ಇಲ್ಲಿ ಗೌಡನಾಗಮ್ಮನ ನಾಟಕೀಯತೆ ಎಂತಹದ್ದು ಎಂಬುದನ್ನು ಅರಿಯಬಹುದಾಗಿದೆ.

ನರಸಿಂಹರೆಡ್ಡಿ ಮಗಳ ಮದುವೆ ಮಾಡಿ ಮೂರು ದಿನಗಳ ನಂತರ ಸ್ವಾಮಿಗೆ ಮುಡಿಪು ಸಲ್ಲಿಸಲು ಬರಬೇಕೆಂದು ತಂಗಿ, ಅಳಿಯ ಹಾಗೂ ಮಗಳನ್ನು ಕರೆಯುತ್ತಾನೆ. ತಂಗಿ ನಾನಾ ರೀತಿಯ ನೆವವೊಡ್ಡಿ ತಪ್ಪಿಸಿಕೊಳ್ಳುತ್ತಾಳೆ. ಮದುವೆಗೆ ಮುಮಚೆಯೇ ಅರ್ಪಿಸಬೇಕಾಗಿದ್ದ ಮುಡಿಪು ಗೌಡನಾಗಮ್ಮನ ತಂತ್ರದಿಂದ ತಿರಸ್ಕೃತವಾಗುತ್ತದೆ. ಸೊಸೆಯನ್ನು ಮನೆ ತುಂಬಿಸಿಕೊಂಡ ನಂತರ ಗೌಡನಾಗಮ್ಮ ಆಕೆಗೆ , ಕೇಳಮ್ಮ ಸೊಸೆ.

ಗೋವಿಂದಂ ಬೋದು ಬಿಡಲೆಬೇಕು
ನಾರಾಯಣೆಂಬುದು ಬಿಡಲೆಬೇಕು
ಗಂಡನ ಮನೆಗೆ ಬಂದ ಮ್ಯಾಲೆ
ಗಂಡನ ಪೂಜೆ ಮಾಡಬೇಕೆ ರಾಮ ರಾಮ
ಗಂಡನ ದೇವ್ರು ನಡೆಯಮ್ಮ
ಅಚ್ಚವಮ್ಮ ಶಿವವಿಬೂತಿ ನೀನು
ಎಮ್ಮಾ ಆಕವಮ್ಮ ಶಿವಲಿಂಗ[2]

ಎಂದೆಲ್ಲ ಕಟ್ಟಪ್ಪಣೆ ವಿಧಿಸುತ್ತಾಳೆ. ಚಿನ್ನಮ್ಮನಲ್ಲಿಯ ಮೂಲ ವೈಷ್ಣವ ಭಕ್ತಿಯನ್ನು ಚಿವುಟಿ ಹೊರಡುತ್ತಾಳೆ. ಆದರೆ ಚಿನ್ನಮ್ಮ ತನ್ನ ತನವನ್ನು ಬಿಡದೆ ತನ್ನ ಜೀವದ ಜೀವ ವೆಂಕಟರಮಣ ಎನ್ನುತ್ತಾಳೆ.

ತನ್ನ ಮಾತನ್ನು ಮೀರುತ್ತಿರುವ ಸೊಸೆಗೆ ಊರ ಹೊರಗಿನ ಹೊಲದಲ್ಲಿಯ ತಾಳನ ಗುಡಿಸಲಲ್ಲಿ ಇಡುತ್ತಾಳೆ. ಬಾರಕೋಲಿನಿಂದ ಹೊಡೆಯುತ್ತಾಳೆ. ಶಿವ ನೆಂದು ಹೇಳದಿದ್ದರೆ ಕೊಲ್ಲುವುದಾಗಿ ಎಚ್ಚರಿಸುತ್ತಾಳೆ. ಆದರೆ ಚಿನ್ನಮ್ಮ ತನ್ನುಸಿರು ಇರುವವರೆಗೂ ಗೋವಿಂದ ಎಂಬ ನಾಮ ಬಿಡಲಾರೆನೆನ್ನುತ್ತಾಳೆ. ಅತ್ತೆ ಕೊಡುವ ಎಲ್ಲ ಕಷ್ಟಗಳನ್ನು ಸಹಿಸಿಕೊಳ್ಳುತ್ತಾಳೆ. ಸ್ವಾಮಿಯು (ದಾಸಪ್ಪ) ಸ್ಯಾಸಿ ಚಿನ್ನಮ್ಮ ಹೊತ್ತು ತಂದ ಅಂಬಲಿಯೆಲ್ಲವನ್ನು ಕುಡಿಯುವುದರ ಮೂಲಕ ಆಕೆಯ ನಿಷ್ಠೆಯನ್ನು ಪರೀಕ್ಷಿಸುತ್ತಾನೆ. ಮುಂದೆ ಆಕೆಗೆ ಒದಗುವ ಎಲ್ಲ ಕಷ್ಟಗಳನ್ನು ಪರಿಹರಿಸಿ ಮುಂದೆ ಆಕೆಗೆ ಒದಗುವ ಎಲ್ಲಾ ಕಷ್ಟಗಳನ್ನು ಪರಿಹರಿಸುತ್ತಾನೆ. ಹೊಲದಲ್ಲಿ ಗಂಜಿ ಇಲ್ಲದ ಗಡಿಗೆ ನೋಡಿ ಎಲ್ಲರು ಚಿನ್ನಮ್ಮನಿಗೆ ಬಾರುಕೋಲಿನಿಂದ ಹೊಡೆಯುತ್ತಾರೆ. ಪಡಗದಲ್ಲಿ ನೊಗಗಳು, ಹಗ್ಗಗಳು ಹಾಕಿ ಚಿನ್ನಮ್ಮನ ತಲೆಯ ಮೇಲೆ ಹೊರೆಸುತ್ತಾರೆ. ಎಲ್ಲರೂ ಮನೆಯ ಕಡೆಗೆ ಹೋರಟಾಗ ದಾರಿಗೆ ಅಡ್ಡಲಾಗಿ ದೊಡ್ಡ ಹಳ್ಳವೊಂದು ತುಂಬಿ ಹರೆಯುತ್ತಿರುವುದನ್ನು ಕಂಡು ಏಳು ಮಂದಿ ಅಣ್ಣ ತಮ್ಮಂದಿರು ಮುಳುಗ ಹತ್ತಿದರು. ಗಾಬರಿಯಿಂದ ಶಿವನನ್ನು ಗಂಗೆಯನ್ನು ಪ್ರಾರ್ಥಿಸಿದರು. ಹರಕೆ ಹೊತ್ತರೂ ಆದರೆ ಇದಾವದು ಇವರನ್ನು ರಕ್ಷಿಸದೆ ಇದ್ದಾಗ ದಾಸಪ್ಪನು ನೀವು ಗೋವಿಂದ

ಎನ್ನುವದಾದರೆ , ತಿರುಪತಿ ಗುಡ್ಡಕ್ಕೆ ಬಂದು ಏಳು ಸಲ ತಲೆ ಬೋಳಿಸಿ ಕೊಳ್ಳುವದಾದರೆ , ನಾನು ನಿಮ್ಮನ್ನು ದಡ ಸೇರಿಸುತ್ತೇನೆ ಎನ್ನುತ್ತಾನೆ. ಇಲ್ಲಿ ಒಂದು ರೀತಿಯ ಒತ್ತಾಯ ಪೂರ್ವಕ ಒಪ್ಪಿಸುವ ಕ್ರಮ ಕಂಡು ಬರುತ್ತದೆ.

ಗೌಡ ನಾಗಮ್ಮನ ಮಕ್ಕಳೆಲ್ಲರು ಒಪ್ಪಿಕೊಂಡ ಹಾಗೆಯೇ ಗೋವಿಂದ ಗೋವಿಂದ ಎನ್ನುತ್ತ ಹೊರಟಿರಲು ದಾರಿಯಲ್ಲಿ ದಾಸಪ್ಪ ಚಿನ್ನಮ್ಮನ ಮಹಿಮೆಯನ್ನು ಕೊಂಡಾಡುತ್ತಿರಲು ಗೌಡ ನಾಗಮ್ಮನಿಗೆ ಎಲ್ಲಿಲ್ಲದಕೋಪ ಬಂದು ಆತನಿಗೆ ಕಸ ಬಳಿಯಲು ಹೇಳುತ್ತಾಳೆ. ಬಾರು ಕೋಲಿನಿಂದ ಹೊಡೆಯಲು ಮುಂದಾಗುತ್ತಾಳೆ. ಆತನ ಕೈಲಿದ್ದ ಗರುಡ ಗಂಬದಿಂದ ಬೆಂಕಿ ಸಿಡಿದು ಆಕೆಯ ಸೀರೆಗೆ ತಗಲುತ್ತದೆ. ಕೊನೆಗೆ ದಾಸಪ್ಪನನ್ನು ಉರಿಯಿಂದ ರಕ್ಷಿಸಲು ವಿನಂತಿಸುತ್ತಾಳೆ. ಆಗ ಆಕೆಗೂ ಗೋವಿಂದ ಎನ್ನುವುದಾದರೆ, ತಲೆ ಬೋಳಿಸುವುದಾದರೆ , ತಿರುಪತಿಯ ಗುಡ್ಡಕ್ಕೆ ಬರುವುದಾದರೆ ನಿನ್ನನ್ನು ರಕ್ಷಿಸುತ್ತೇನೆ ಎನ್ನುತ್ತಾನೆ. ಆಕೆಯು ಅದಕ್ಕೆ ಒಪ್ಪಿದಾಗ ಬೆಂಕಿ ಆರಿಸಲು ಪವಾಡ ಮಾಡುತ್ತಾನೆ.

ಬಂಡಿ ಕಟ್ಟಿಕೊಂಡು ತಿರುಪತಿ ಗುಡ್ಡಕ್ಕೆ ಕಿರಿ ಸೊಸೆ ಚಿನ್ನಮ್ಮನನ್ನು ಬಿಟ್ಟು ಹೋರಟಾಗ ಅಪಶಕುನಗಳಾಗುತ್ತವೆ. ಬಂಡಿ ಮುರಿದು ಬೀಳುವ, ಎತ್ತಿನ ಕಾಲು ಮುರಿಯುವ ಸಂಕೇತಗಳು ಮುಂದೆ ಗೌಡ ನಾಗಮ್ಮನಿಗೊದಗ ಬಹುದಾದ ಕಷ್ಟಗಳನ್ನು ಸೂಚಿಸುತ್ತದೆ. ಕೊರವಂಜಿ ವೇಷದಲ್ಲಿ ಬಂದ ವಾರೆಂಕಟೇಶ ಗೌಡ ನಾಗಮ್ಮನಿಗೆ `ನಿನ್ನ ಸೊಸೆ ನೀನು ಹೇಳಿದ ಹಾಗೆ ಕೇಳಬೇಕಾದರೆ , ತಿರುಪತಿ ಗುಡ್ಡಕ್ಕೆ ಗಿಣಿ ಕಟ್ಟಿಕೊಂಡು , ಸೊಸೆಯಿಂದ ಪಡಗವನ್ನು , ಶೀಲಮ್ಮ ತಾಯಿಯಿಂದ ಕಳಸ ವನ್ನು ಹೊತ್ತು ಸ್ವಾಮಿಯ ಸನ್ನಿಧಾನಕ್ಕೆ ಮಡಿಯಲ್ಲಿ ಹೋಗಬೇಕು. ಪಡಗದ ಹಿಂದೆ ನೀವು ನಿಮ್ಮ ಗಂಡು ಮಕ್ಕಳು ಹೋಗಬೇಕು. ಕಳಸ ಮತ್ತು ಪಡಗವನ್ನು ಡೊಳ್ಳು ಮೇಳಗಳಿಂದ ಕರೆದುಕೊಂಡು ಹೋಗಬೇಕು. ಹಾಗದರೆ ನಿಮ್ಮ ಇಷ್ಟದಂತೆ ನಡೆಯುತ್ತದೆ' ಎಂದು ಹೇಳುತ್ತಾನೆ. ಕೊರವಂಜಿಯ ಮಾತಿನಂತೆ ಬಂಡಿಯನ್ನು ತಯಾರಿಸಿ ಹೊರಡಲು ಸಿದ್ಧರಾಗುತ್ತಾರೆ. ಸ್ವಾಮಿ ಬಳಿ ಹೋಗಲು ಚಿನ್ನಮ್ಮನ ತಂದೆ - ತಾಯಿಯಂದಿರಲಿಗೆ ಕರೆ ಕಳಿಸುತ್ತಾಳೆ. ಸೊಸೆಗೆ ಏಳು ಹಗ್ಗಗಳನ್ನು, ಕೊಡಲಿಯನ್ನು ಕೊಟ್ಟು ಕಟ್ಟಿಗೆ ತರಲು ಕಳಿಸುತ್ತಾಳೆ. ಸ್ವಾಮಿಯ ಸಹಾಯದಿಂದ ಕಟ್ಟಿಗೆ ತರುತ್ತಾಳೆ. ಇಷ್ಟಕ್ಕೆ ತೃಪ್ತಳಾಗದ ಗೌಡ ನಾಗಮ್ಮ ಸೊಸೆಗೆ ಅನ್ನ, ನೀರು ಕೊಡದೆ ಐದು ಹೊರೆ ಹುಲ್ಲನ್ನು ತರಲು ಹೇಳುತ್ತಾಳೆ. ಇದನ್ನೂ ಸ್ವಾಮಿಯು ದಾಸಪ್ಪನ ವೇಶದಲ್ಲಿ ಬಂದು ಅವಳ ಕಷ್ಟವೆಲ್ಲ ಪರಿಹರಿಸುತ್ತಾನೆ. ತವರಿನಿಂದ ಎಲ್ಲರೂ ಬರುತ್ತಾರೆ. ಐವತ್ತು ಸೇರು ಅನ್ನವನ್ನು ಪಡಗದಲ್ಲಿ ತುಂಬಿ ಸ್ವಾಮಿಯ ಸನ್ನಿಧಾನಕ್ಕೆ ಚಿನ್ನಮ್ಮ ಗಿಳಿ ಬಂಡಿಯೊಂದಿಗೆ ಹೊರಡುತ್ತಾಳೆ. ತನ್ನ ಹಡೆದವ್ವ ಕಳಸವನ್ನು ಹಿಡಿದು ಮುಂದೆ ನಡೆಯುತ್ತಾಳೆ. ಪಡಗದ ಹಿಂದೆ ಅತ್ತೆ , ಮಾವ , ಗಂಡ ಹಾಗೂ ಮೈದುನರು ಹಿಂಬಾಲಿಸುತ್ತಾರೆ. ಚಿನ್ನಮ್ಮ ಭಾರವಾದ ಪಡಗವನ್ನು ಹೊತ್ತು ಗುಡ್ಡದ ಒಂದೊಂದು ಮೆಟ್ಟಿಲನ್ನು ಏರುವಾಗಲೂ ತನ್ನ ಜೀವದ ದೇವರನ್ನು ನೆನೆಯುತ್ತ ಏರುತ್ತಾಳೆ. ಗೌಡನಾಗಮ್ಮ ಅನೇಕ ಸುಳ್ಳು ನೇಪಗಳನ್ನು ಒಡ್ಡಿ ಮೆಟ್ಟಿಲೇರದೆ ಗುಡಿಯ ಕೆಳಗೆ ಕುಳಿತು ಕೊಳ್ಳುತ್ತಾಳೆ.

ಶೀಲಮ್ಮ ತಾಯಿ ಮತ್ತು ಚಿನ್ನಮ್ಮ ಸ್ವಾಮಿಗೆ ಪೂಜೆ ಸಲ್ಲಿಸುತ್ತಾರೆ. ಎಲ್ಲರೂ ತಲೆ ಬೋಳಿಸಿಕೊಳ್ಳುತ್ತಾರೆ. ದಾಸಿಂಗ ಮಾಡುತ್ತಾರೆ. ಸ್ವಾಮಿಯು ಏಳು ಮಂದಿ ಸೋದರರನ್ನು ` ಲೇ ನಿಮ್ಮ ಲಿಂಗಾಯತರೇ ಲಿಂಗಾ

ಹಾಕ್ಯಂಡು ಬಂದೋಲಿಗೆಲ್ಲ ಬೋಳು ಗುಂಡು ಮಾಡಬೇಕೆಂದು' ಆದೇಶಿಸಿದ. ಏಳು ಜನರನ್ನು ತಲೆ ಬೋಳಿಸಿ ನಾದರನ ಮಾಡಿಬಿಟ್ಟ. ಜೊತೆಗೆ ಕೆಳಗೆಯೇ ಉಳಿದ ಗೌಡನಾಗಮ್ಮನ ತಲೆಯ ಮೇಲೆ ದೀಪ ಉರಿಯಲಿ ಎಂದು ಆಕೆಯನ್ನು ಗರುಡ ಗಂಬ ಮಾಡಿಬಿಟ್ಟ. ಸ್ಯಾಸಿ ಚಿನ್ನಮ್ಮನನ್ನು ಪಡಗದಲ್ಲಿ ಕುಳ್ಳಿರಿಸಿ ತನ್ನಲ್ಲಿ ಐಕ್ಯ ಮಾಡಿಕೊಳ್ಳುತ್ತಾನೆ.

ಈ ರೀತಿಯಾಗಿ ಸ್ಯಾಸಿ ಚಿನ್ನಮ್ಮನ ಕಾವ್ಯ ಪ್ರಾರಂಭದಲ್ಲಿ ಶೈವ ಪರಂಪರೆ, ಸಂಸ್ಕೃತಿಯು ವೈಷ್ಣವ ಸಂಸ್ಕೃತಿಯ ಮೇಲೆ ಹಿಡಿತ ಸಾಧಿಸಿದಂತೆ ಕಂಡು ಬಂದರೂ , ಕೊನೆಗೆ ಶೈವ ಸಂಸ್ಕೃತಿಯ ನಾಗಮ್ಮನ ಇಡೀ ಕುಟುಂಬ ವೈಷ್ಣವ ಪರಂಪರೆಯಲ್ಲಿ ಸೇರುವ ನೆಲೆಯನ್ನು ಕಾಣುತ್ತೇವೆ. ಶೈವ ಸಂಸ್ಕೃತಿಯ ಒಡಲಲ್ಲಿ ವೈಷ್ಣವ ಮನೆತನವೊಂದನ್ನು ವಿಲೀನಗೊಳಿಸಿಕೊಳ್ಳುವ ಪ್ರಯತ್ನ ಗೌಡ ನಾಗಮ್ಮನಿಂದ ನಡೆದರೆ ಎಲ್ಲ ಕಷ್ಟಗಳನ್ನು ಸಹನೆಯಿಂದಲೇ ಸಹಿಸಿಕೊಂಡು ಬರುವ ಸ್ಯಾಸಿ ಚಿನ್ನಮ್ಮ ನೊಂದಿಗೆ ತನ್ನ ಅತ್ತೆಯ ಇಡೀ ಕುಟುಂಬವನ್ನು ತಾನೇನೂ ಮಾಡದಂತೆ , ಪವಾಡದಂತೆ ವೈಷ್ಣವೀಕರಿಸಿಕೊಳ್ಳುವಲ್ಲಿ ಈ ಕಾವ್ಯ ಮುಕ್ತಾಯಗೊಳ್ಳುತ್ತದೆ.

ಎಲ್ಲಮ್ಮನ ಕಾವ್ಯ :

ಬುರ್ರಕಥಾ ಈರಮ್ಮ ಹಾಡುವ ಎಲ್ಲಮ್ಮನ ಕಾವ್ಯ ಕಥಾ ವಸ್ತುವಿನ ದೃಷ್ಟಿಯಿಂದ ಒಂದು ವಿಶಿಷ್ಟವಾದ ಕಾವಚ್ಯವಾಗಿದೆ. ಐತಿಹಾಸಿಕ, ಪೌರಾಣಿಕ ಮತ್ತು ಜಾನಪದ ಧೋರಣೆಯ ಹಿನ್ನೆಲೆಯಿಂದ ಈ ಕಾವ್ಯ ರಚನೆಗೊಂಡಿವೆ. ಕರ್ನಾಟಕದಲ್ಲಿ ಎಲ್ಲಮ್ಮನ ಕುರಿತು ದೊಡ್ಡ ಪರಂಪರೆಯೇ ಇದೆ. ಶಿಷ್ಟ ಪರಂಪರೆ, ಜಾನಪದ ಪರಂಪರೆ ಎರಡರಲ್ಲೂ ಕಾವ್ಯಗಳು ಹುಟ್ಟಿಕೊಂಡಿವೆ. ಪೌರಾಣಿಕ ಪರಿಕಲ್ಪನೆ, ಬೌದ್ಧ, ಜೈನ , ವೈದಿಕ , ಶೈವ ಧರ್ಮಗಳ ಪರಂಪರೆಡಯಲ್ಲೂ ಎಲ್ಲಮ್ಮನ ಕಥೆ ಬೆಳೆದು ಬಂದಿದೆ. ಈ ಎಲ್ಲ ಅಂಶಗಳು ಈರಮ್ಮ ಹಾಡುವ ಎಲ್ಲಮ್ಮನ ಕಾವ್ಯಕ್ಕೆ ಹಿನ್ನೆಲೆಯನ್ನು ಒದಗಿಸಿಕೊಟ್ಟಿವೆ.

ಈ ಕಾವ್ಯ ಎಲ್ಲಮ್ಮನ ಜನನ, ಆಕೆಯ ಪತಿ ಭಕ್ತಿ, ಅಗ್ನಿ ಪರೀಕ್ಷೆ, ಜೀವನ ಸಂಘರ್ಷ, ಮಹಿಮೆ ಮುಂತಾದ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ಮೂಲತಃ ಜನಪದ ಮಹಾಕಾವ್ಯವಾದರೂ ಶಿಷ್ಟ ಪರಂಪರೆಯ ಪ್ರಭಾವ ಇದರ ಮೇಲೆ ಅಪಾರವಾಗಿದೆ. ಒಂದು ರೀತಿಯಲ್ಲಿ ಹೇಳುವುದಾದರೆ, ಇಲ್ಲಿಯ ಕಥೆ ಜಾನಪದ ಕಥೆಯಾದರೆ ಅದರ ಚೌಕಟ್ಟು ಮಾತ್ರ ಶಿಷ್ಟ ಪರಂಪರೆಯನ್ನು ನೆನಪಿಸುತ್ತದೆ. ಪೌರಾಣಿಕ ಘಟನೆಗಳ ಪ್ರಭಾವ ಇಲ್ಲಿ ಅದ್ಭುತವಾಗಿ ಕಂಡು ಬರುತ್ತದೆ. ಮಾಋಷಿ ಮತ್ತು ಎಲ್ಲಮ್ಮನ ಹುಟ್ಟು, ಗಣಪತಿಯ ಹುಟ್ಟನ್ನು ನೆನಪಿಗೆ ತರುತ್ತದೆ. ಶಿಷ್ಟರಲ್ಲಿ ಪಾರ್ವತಿಯೊಬ್ಬಳೇ ತನ್ನ ಮೈಮೇಲಿನ ಮಣ್ಣನ್ನು ತೆಗೆದು ಗಣಪತಿಯನ್ನು ಸೃಷ್ಟಿ ಮಾಡಿದರೆ, ಈ ಕಾವ್ಯದಲ್ಲಿ ಶಿವ ಪಾರ್ವತಿಯರಿಬ್ಬರೂ ತಮ್ಮ ಮೈಮೇಲಿನ ಮಣ್ಣನ್ನು ತೆಗೆದು ಕೂಡಿಸಿ ಎಲ್ಲಮ್ಮನನ್ನು ಸೃಷ್ಟಿ ಮಾಡುತ್ತಾರೆ. ಈ ಅಂಶ ಶಿಷ್ಟರಿಗಿಂತಲೂ ಜನಪದರ ಸಾತ್ವಿಕ ಮನೋವೃತ್ತಿಗೆ ಕನ್ನಡಿ ಹಿಡಿಯುತ್ತದೆ. ಎಲ್ಲಮ್ಮನ ಅಗ್ನಿ ಪರೀಕ್ಷೆ ಸತಿ ಸಾವಿತ್ರಿ , ಅನಸೂಯಾ ಮುಂತಾದ ಪೌರಾಣಿಕ ಸಾಧ್ವಿ, ಮಹಿಳೆಯರನ್ನು ನೆನಪಿಸುತ್ತದೆ. ಪರಶುರಾಮನ ಹುಟ್ಟು ಮತ್ತು ಕಾರ್ತಿಕ ರಾಜನ ಸಂಹಾರ, ಕೃಷ್ಣ - ಕಂಸದ ಪೌರಾಣಿಕ ಸನ್ನಿವೇಶಗಳನ್ನು ಹೋಲುತ್ತದೆ. ಎಲ್ಲಮ್ಮನ ಹೊಟ್ಟೆಯಲ್ಲಿ ಪರಶುರಾಮ ಮಾತನಾಡುವುದು. ಸುಭದ್ರೆ - ಅಭಿಮನ್ಯುವಿನ ಸಂದರ್ಭವನ್ನು ನೆನಪಿಸುತ್ತದೆ. ಈ ರೀತಿಯಾದ ಅನೇಕ ಪೌರಾಣಿಕ ಅಂಶಗಳಿಂದ ಪ್ರಭಾವಿತವಾದ ಈ ಕಾವ್ಯ ವಿಶಿಷ್ಟವೆನಿಸುತ್ತದೆ.

ಕಥೆಯ ಹೊರಗಿನ ಚೌಕಟ್ಟು ಈ ರೀತಿಯಾದರೆ, ಕಥೆಯ ಒಳಸತ್ವ ಜಾನಪದೀಯ ಅಂಶಗಳಿಂದ ಕೂಡಿದೆ. ಎಲ್ಲಮ್ಮನ ಹುಟ್ಟು ಅಸಾಮಾನ್ಯವಾದರೂ ಆಕೆ ಸಾಮಾನ್ಯ ಜಾನಪದ ಹೆಣ್ಣು ಮಗಳು, ಸಾಮಾನ್ಯ ನಡೆ - ನುಡಿ ಹೊಂದಿದವಳು. ಜನ ಸಾಮಾನ್ಯರಂತೆ ಅನೇಕ ಕಷ್ಟ ಕೋಟಲೆಗಳಿಗೆ ಒಳಗಾಗಿ, ಅದನ್ನು ಅಷ್ಟೇ ಧೈರ್ಯವಾಗಿ ಎದುರಿಸಿ ಜಯಿಸಿದವಳು. ಜಗ ಹೊತ್ತುಕೊಂಡು ಊರೂರು, ಮನೆ - ಮನೆ ಅಲೆಯುವ ಸಾಮಾನ್ಯ ಸ್ತ್ರೀಯಾಗಿ ಕಂಡರೂ ಅಸಾಮಾನ್ಯ ಗುಣಗಳಿಂದ ಕಂಗೊಳಿಸುವಳು ಪರಶುರಾಮ ತನ್ನ ತಾಯಿ ಎಲ್ಲಮ್ಮನನ್ನು ತನ್ನ ತಂದೆ ಯಾರೆಂದು ಪೀಡಿಸುವ ರೀತಿ, ಮಾಯಿಷಿಯ ತಪಸ್ಸು, ಎಲ್ಲಮ್ಮನ ಪತಿಭಕ್ತಿ ಆಕೆಯ ಮೌನ ಸಂಘರ್ಷ, ಪರಶುರಾಮನ ಛಲ ಮುಂತಾದ ಅಂಶಗಳು ಇಲ್ಲಿ ವಿಶಿಷ್ಟವಾಗಿ ಕಂಡು ಬರುತ್ತವೆ. ಕಥೆಯುದ್ದಕ್ಕೂ ದುಃಖ, ದೌರ್ಭಾಗ್ಯ ಆವರಿಸಿಕೊಂಡರೂ ಕೊನೆಯಲ್ಲಿ ಕಾವ್ಯ ಸುಖಾಂತದಲ್ಲಿ ಕೊನೆಗೊಳ್ಳುತ್ತದೆ. ಹೆಣ್ಣು ತನ್ನ ತನವನ್ನು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮಾಡುವ ಸಂಘರ್ಷ ಇಲ್ಲಿದೆ[13].

ಬಾಲನಾಗಮ್ಮನ ಕಾವ್ಯ :

ಈ ಕಾವ್ಯ ಕರ್ನಾಟಕಾಂಧ್ರಗಳೆರಡರಲ್ಲೂ ಜನಪ್ರಿಯ ಹೊಂದಿದ ಕಾವ್ಯ. ಈ ಕಾವ್ಯ ಬುರ್ರಕಥೆಗಾರರಲ್ಲದೆ ತೆಲುಗು ಜಂಗಮರು, ನೀಲಗಾರರು, ಕಂಸಾಳೆಯವರು, ದೊಂಬಿದಾಸರು , ಹೆಳವರು ಹಾಡುತ್ತಾರೆ. ಅತ್ಯಂತ ದೀರ್ಘವಾದ ಕಾವ್ಯ ಇದಾಗಿದೆ. ಈ ಕಾವ್ಯ ಆಂದ್ರ ಪ್ರದೇಶದಿಂದ ಕರ್ನಾಟಕವನ್ನು ಪ್ರವೇಶಿಸಿತೋ ಅಥವಾ ಕರ್ನಾಟಕದಿಂದ ಆಂಧ್ರಕ್ಕೆ ಹೋಯಿತೋ ಹೇಳುವುದು ಕಷ್ಟ. ಆದರೆ ಇದು ಕರ್ನಾಟಕದ ನೆಲದಲ್ಲೇ ಸೃಷ್ಟಿಯಾದ ಒಂದು ಕಾವ್ಯವಿರಬೇಕಯು ಎಂಬುದಕ್ಕೆ ಇದು ಬೇರೆ ಬೇರೆ ಸಂಪ್ರದಾಯಗಳಲ್ಲಿ ಕಂಡು ಬಂದಿರುವುದೇ ಒಳ್ಳೆಯ ಆಧಾರವಾಗಿದೆ. ತೆಲುಗು ಜಂಗಮರ, ಹೆಳವರ, ದೊಂಬಿದಾಸರ ಯಾವ ಪ್ರಭಾವಕ್ಕೂ ಒಳಗಾಗದೆ ಕರ್ನಾಟಕದ ದಕ್ಷಿಣದ ತುದಿಯಲ್ಲಿ ಚದುರಿರುವ ನೀಲಗಾರರು ಮತ್ತು ದೇವರ ಗುಡ್ಡರಲ್ಲಿ ಕಂಡು ಬರುವ ಬಾಲನಾಗಮ್ಮನ ಕಥೆ ಒಂದು ಅತ್ಯುತ್ತಮ್ಮ ಕಾವ್ಯವಾಗಿ ರೂಪಗೊಂಡಿದೆ. ವ್ಯಾಪಕತೆಯ ದೃಷ್ಟಿಯಿಂದಲೂ ಕಾವ್ಯ ಸತ್ವದ ದೃಷ್ಟಿಯಿಂದಲೂ ಈ ಎರಡು ಸಂಪ್ರದಾಯಗಳ ಕಾವ್ಯ ಉತ್ಕೃಷ್ಟ ಸ್ವರೂಪದಲ್ಲಿ ಇರುವುದನ್ನು ಕಾಣಬಹುದು[14]. ಮಂಡಲಗೇರಿ ಪಟ್ಟದ ಸಿರಿಗಂಧರಾಜನ ತಮ್ಮ ನೌಬೋಧರಾಜ. ಅವನ ಹೆಂಡ್ತಿ ಭೂದೇವತಿ ಇವರಿಗೆ ದಾಸಪ್ಪನು ಸಂತಾನದ ಫಲವಾಗಿ ಏಳು ಜನ ಹೆಣ್ಮಕ್ಕು ಹುಟ್ಟುತ್ತಾರೆ. ಆ ಏಳು ಜನರಲ್ಲಿ ಕೊನೆಯವಳೇ ಬಾಲನಾಗಮ್ಮ. ಶಿವನು ದಾಸಪ್ಪನ ವೇಷದಲ್ಲಿ ಬಂದು ಭೂದೇವತಿಗೆ ಸಂತಾನ ಫಲಕೊಡುವಾಗ, ಏಳು ಮಂದಿ ಮಕ್ಕಳಲ್ಲಿ ಒಬ್ಬಳನ್ನು ನನಗೆ ಕೊಡಬೇಕೆಂದಾಗ ಕೊಡುತ್ತೇನೆಂದು ಮಾತು ಕೊಟ್ಟಿರುತ್ತಾಳೆ. ಮುಂದೆ ಮಕ್ಕಳ ಮೇಲಿನ ಮಮತೆಯಿಂದ ಒಂದು ಮಗುವನ್ನು ದಾಸಪ್ಪನಿಗೆ ಕೊಡದೆ ಇರಲು ಅವನ ಹಾವಿನ ವೇಷವನ್ನು ತೊಟ್ಟು ಭೂದೇವತಿಯನ್ನು ಕೊಲ್ಲುತ್ತಾನೆ. ಆಗ ಮಕ್ಕಳು ಅನಾಥವಾಗಲು ನೌಬೋಧರಾಜ ಮದುವೆಯಾಗಿ ಈ ಮಕ್ಕಳಿಗೆ ಮಲತಾಯಿ ತರುತ್ತಾನೆ. ಮಲತಾಯಿಯ ಕಾಟ ಹಾಗೂ ಆಕೆಯ ಕುತಂತ್ರದಿಂದ ಈ ಮಕ್ಕಳನ್ನು ನೌಬೋಧರಾಜ ಕಾಡಿಗೆ ಅಟ್ಟುತ್ತಾನೆ. ಅಡವಿಯಲ್ಲಿ ಅನಾಥವಾದ ಮಕ್ಕಳಿಗೆ ಅಡಿವೆಕ್ಕಮ್ಮ ಎನ್ನುವವಳು ಸಾಕಿ ಸಲುಹಿ ದೊಡ್ಡವರನ್ನಾಗಿಸುತ್ತಾಳೆ. ಮುಂದೆ ಪಾನಗಲ್ ಪಟ್ಟದ ಏಳು ಮಂದಿರಾಜ ಕುಮಾರರು ಈ ಏಳು ಮಂದಿ ಹೆಣ್ಮಕ್ಕಳನ್ನು ಮದುವೆಯಾಗುತ್ತಾರೆ. ಗೌರಮ್ಮನ ವರಪ್ರಸಾದದಿಂದ ಬಾಲನಾಗಮ್ಮನಿಗೆ ಮಗ

ಹುಟ್ಟುತ್ತಾನೆ. ಅವನಿಗೆ ಬಾಲವದ್ದ ರಾಜ ಎಂಬ ಹೆಸರಿಡುತ್ತಾರೆ. ಮುಂದೆ ರಾಕ್ಷಸನಾದ ಮಾಯಲ್ ಮರಾರ ಜಂಗಮ ವೇಷದಲ್ಲಿ ಪಾನಗಲಫಗೆ ಬಂದು ಬಾಲ ನಾಗಮ್ಮನನ್ನು ಮಂತ್ರದ ಕೋಲಿನಿಂದ ನಾಯಿಯನ್ನಾಗಿ ಮಾಡುತ್ತಾನೆ. ಆ ನಾಯಿಯನ್ನು ಕರೆದುಕೊಂಡು ಊರು ಬಿಟ್ಟು ಹೊರಗೆ ಹೋಗುವ ಸಂದರ್ಭದಲ್ಲಿ ಆ ನಾಯಿಯ ಬೆನ್ನ ಮೇಲೆ ಕೋಲಿಟ್ಟು ಬೂದಿಯನ್ನಾಗಿ ಮಾಡುತ್ತಾನೆ. ಆ ಬೂದಿ ಜೋಳಿಗೆಯಲ್ಲಿ ಹಾಕಿಕೊಂಡು ಗುಡ್ಡದ ಮೇಲೆ ಬಂದು ಜೋಳಿಗೆಯೊಳಗಿನ ಬೂದಿ ನೆಲಕ್ಕೆ ಹಾಕಿ ಉದ್ದ ಮಾಡಿ 60 ಸೂತ್ರ ಬರೆಯುತ್ತಾನೆ - ನಾಗರ ಕೋಲಿನಿಂದ ಮತ್ತೆ ನಾಗಮ್ಮನನ್ನಾಗಿ ಮಾಡುತ್ತಾನೆ. ಆಕೆಗೆ ಗವಿಯೊಳಗಿಟ್ಟು ಹೋಗುತ್ತಾನೆ. ಆಗ ಬಾಲನಾಗಮ್ಮನ ಗಂಡ ಮತ್ತು ಅವನ ಅಣ್ಣಂದಿರರು ಬಾಲನಾಗಮ್ಮನನ್ನು ಹುಡುಕಲು ಬೆಳ್ಳಿ ಗುಡ್ಡ, ಬಂಗಾರದ ಗುಡ್ಡ ಹೀಗೆ ಏಳು ಗುಡ್ಡ ದಾಟಿ ಮಾಯಲ್ ಮರಾಲಿ ಇವರನ್ನು ಮಂತ್ರ ದಂಡದಿಂದ ಕಲ್ಲುಗಳನ್ನಾಗಿಸುತ್ತಾನೆ.

ಬಾಲವದ್ದ ರಾಜ ದೊಡ್ಡವನಾಗಿ ತಂದೆ- ತಯಯರನ್ನು ಬಿಡಿಸಿ ಕೊಂಡು ಬರಲು ಹೊರಡುತ್ತಾನೆ. ಭೂಪತರಾಜನ ಪಟ್ಟದಲ್ಲಿ ಹುಲಿಯನ್ನು ಕೊಂದು ರಾಜಕುಮಾರಿ ಮಾಣಿಕಮ್ಮಳನ್ನು ಮದುವೆಯಾಗುತ್ತಾನೆ. ಮುಂದೆ ಕುಸುಮಗಿರಿಗೆ ಬಂದು ಕುಸುಮಗಂಧೆಯನ್ನು ಬದುಕಿಸಿ ಅವಳನ್ನು ಮದುವೆಯಾಗುತ್ತಾನೆ. ಗುಹೆಯಲ್ಲಿದ್ದ ತಾಯಿಗೆ ಭೇಟಿಯಾಗುತ್ತಾನೆ. ನಾನೇ ನಿನ್ನ ಮಗನೆಂದು ಪರಿಚಯಿಸಿಕೊಳ್ಳುತ್ತಾನೆ. ರಾಕ್ಷಸನ ಜೀವ ಯಾವುದರಲ್ಲಿದೆ ಎನ್ನುವುದನ್ನು ಭೇದಿಸುತ್ತಾನೆ. ಏಳು ಸಮುದ್ರಾಚೆ ಇದ್ದ ಸಾವಿರ ಬಣ್ಣದ ಗಿಳಿ, ಅದು ಸತ್ತ್ರೆ ರಾಕ್ಷಸ ಸಾಯುವನು ಎನ್ನುವುದನ್ನು ಅರಿತು ಗರುಡ ಪಕ್ಷಿಯ ಸಹಾಯದಿಂದ ಏಳು ಸಮುದ್ರಾಚೆ ಹೋಗಿ ಸಾವಿರ ಬಣ್ಣದ ಗಿಳಿಯನ್ನು ತಂದು ಅದರ ಕೈಕಾಲುಗಳನ್ನು ಒಂದೊಂದಾಗಿ ಮುರಿದು ಬೆಂಕಿಗೆ ಹಾಕುತ್ತಾನೆ. ರಾಕ್ಷಸನನ್ನು ಕೊಂದು ತಂದೆ- ತಾಯಿ, ದೊಡ್ಡಪ್ಪಂದಿರರನ್ನು ಬದುಕಿಸುತ್ತಾನೆ. ಎಲ್ಲರನ್ನು ಕರೆದುಕೊಂಡು , ತನ್ನ ಹೆಂಡಂದಿರರೊಡನೆ ತನ್ನ ರಾಜ್ಯಕ್ಕೆ ಬರುತ್ತಾನೆ. ಅಲ್ಲಿ ಬಾಲನಾಗಮ್ಮನನ್ನು ಅಗ್ನಿ ಪರೀಕ್ಷೆಗೆ ಒಳಪಡಿಸುವರು. ಅಲ್ಲಿ ತನ್ನ ಕುಲದ ಹೆಣ್ಣನ್ನು ತೆಗೆದು ಬಾಲವದ್ದರಾಜನಿಗೆ ಮತ್ತೊಂದು ಮದುವೆ ಮಾಡುವರು. ನಂತರ ಎಲ್ಲರೂ ದೇವಲೋಕಕ್ಕೆ ಹೋಗುವರು[15]. ಹೀಗೆ ಇದೊಂದು ಅತಿಮಾನುಷ ಕತೆಯಾಗಿದೆ.

ಬಲಿಚಕ್ರವರ್ತಿ ಕಾವ್ಯ :

ಇದು ಬುರ್ರ ಕಥೆಗಾರಲ್ಲದೆ, ತೆಲುಗು ಜಂಗಮರೂ ಈ ಕಾವ್ಯವನ್ನು ಹಾಡುತ್ತಾರೆ. ಈರಮ್ಮ ಹಾಡುವ ಕಾವ್ಯದ ವಸ್ತು ಬಲಿ ಚಕ್ರವರ್ತಿರಾಜನ ಜೀವನವನ್ನು ಕುರಿತದ್ದಾಗಿದೆ. ಬಲಿ ಚಕ್ರವರ್ತಿ ಕಾಶಿ ರಾಜನ ಮಗ. ಕಾಳಿಕಾ ದೇವಿಯ ವರ ಪ್ರಸಾದದಿಂದ ಹುಟ್ಟಿದವನು. ಕಾಳಿಕಾದೇವಿಯ ಮಹಿಮೆಯಿಂದ ಗಂಧದ ಗಿಡದಿಂದ ಕೀಲು ಕುದುರೆ ತಯಾರಿಸುವರು. ಈ ಕೀಲು ಕುದುರೆಯ ಮೇಲೆ ಬಲಿ ಚಕ್ರವರ್ತಿರಾಜ ಕುಳಿತುಕೊಳ್ಳು ಅದು ಏಳು ದಿವಸ ಹಗಲು, ಏಳು ದಿವಸ ರಾತ್ರಿ ಹಾರುತ್ತ ಹೋಗಿ ಗಿಲ್ಕಪುರ ಪಟ್ಟದ ಚಂದ್ರಾವತಿಯ ಮನೆಯ ಮೇಲೆ ಇಳಿಯುವುದು. ಬಲಿ ಚಕ್ರವರ್ತಿ ಮತ್ತು ಚಂದ್ರಾವತಿ ಇಬ್ಬರೂ ಪ್ರೀತಿಸಿದಸಾಗ ಚಂದ್ರಾವತಿ ಬಸುರಾಗುವಳು. ಚಂದ್ರಾವತಿಯ ತಂದೆ - ತಾಯಿಯವರ ವಿರೋಧ ವ್ಯಕ್ತವಾಗುವುದು. ಬಲಿ ಚಕ್ರವರ್ತಿ ಚಂದ್ರಾವತಿಯನ್ನು ಕೀಲು ಕುದುರೆಯ ಮೇಲೆ ಕೂಡಿಸಿಕೊಂಡು

ಹೋಗುವಾಗ ಬ್ಯಾನಿ ಎದ್ದು ಅಡವಿಯಲ್ಲೇ ಚಂದ್ರಾವತಿಯ ಹೆರಿಗೆಯಾಗುವುದು. ಬಾಣಂತಿಗಾಗಿ ಎಣ್ಣೆ, ಬಟ್ಟೆ, ಎಚ್ಚಾ ತರಲು ಹೋಗುತ್ತಾನೆ. ಮಾರ್ಗ ಮಧ್ಯದಲ್ಲಿ ಬರುವಾಗ ಕೀಲು ಕುದುರೆಗೆ ಬೆಂಕಿ ಹತ್ತಿ ಕೀಲು ಕುದುರೆ ಸುಟ್ಟು ಹೋಗುತ್ತದೆ. ಆಗ ಚಂದ್ರಾವತಿ ಮಗುವಿನೊಂದಿಗೆ ಅಡವಿಯಲ್ಲಿಯೇ ಉಳಿದು ಇವನ ಬರುವಿಕೆಗಾಗಿ ಕಾಯುತ್ತಾಳ. ಕಾದು ಕಾದು ಬೇಜಾರಾಗಿ ಮಗುವಿನೊಂದಿಗೆ ಈರಣ್ಣ ಗುಡಿಯಲ್ಲಿ ಆಶ್ರಯ ಪಡೆಯುವಳು. ಮುಂದೆ ಊರಿನವರು ಆಶ್ರಯ ಕೊಡಲು, ಹೆಳವನು ಮಗುವನ್ನು ಒಯ್ದು ಸುಡಗಾಡಿನಲ್ಲಿ ಕುತ್ತಿಗೆಯವರೆಗೆ ಮಣ್ಣು ಹಾಕಿ ಹೂಳುವನು. ಗೊಡ್ಡರ ವಂದಿರಾಜನು ಬೈಲಕಡ್ಡಿಗೆ ಹೋದಾಗ ಮಗು ಕಾಣಿಸುತ್ತದೆ. ಮಕ್ಕಳಿರದ ರಾಜ ಆ ಮಗುವನ್ನು ಜೋಪಾನ ಮಾಡುವನು. ಮುಂದೆ ಮಗ ಬೆಳೆದು ತಾಯಿಯ ಸೌಂದರ್ಯಕ್ಕೆ ಮರುಳಾಗುವನು. ಆಕೆಯನ್ನು ಮದುವೆಯಾಗಲು ತೀರ್ಮಾನಿಸುವನು. ಈರಣ್ಣ ದೇವರ ಜಾತ್ರೆಯಲ್ಲಿ ಥೇರು ಎಳೆಯುವುದಿರುತ್ತದೆ. ನಮ್ಮಪ್ಪ ಅಮ್ಮ ಬಂದ್ರೆನೆ ಥೇರು ಎಳೆಯುವಂತೆ ಮಾಡು ಎಂದು ಹುಡುಗನು ಈರಣ್ಣ ದೇವರಲ್ಲಿ ಬೇಡಿಕೊಳ್ಳುವನು. ಬಳಿಚಕ್ರವರ್ತಿ ಚಂದ್ರಾವತಿ ಬಂದು ತೇರಿಗೆ ಕೈ ಹಚ್ಚಿದಾಗ, ಥೇರು ಮುಂದೆ ಹೋಗುತ್ತದೆ. ತಾನು ಮೋಹಿಸಿದ ಚಂದ್ರಾವತಿಯೇ ತನ್ನ ತಾಯಿ ಎಂದು ತಿಳಿದು ಮಗನು ಪಶ್ಚಾತ್ತಾಪ ಪಡುವನು. ಈರಣ್ಣ ದೇವರ ಗುಡಿಯ ಮುಂದೆ ತನ್ನ ತಂದೆಯ ಕೈಯಿಂದ ತನ್ನ ತಾಯಿಗೆ ತಾಳಿ ಕಟ್ಟಿಸುವನು. ಅಲ್ಲೇ ಗೊಡ್ಡಿರವಿಂದ ರಾಜನು ಧರ್ಮಾಂದ ರಾಜನ ಮದುವೆ ಮಾಡುತ್ತಾನೆ. ಮುಂದೆ ಎಲ್ಲರೂ ತಮ್ಮ ತಂದೆ-ತಾಯಿಯರನ್ನು ಭೇಟಿಯಾಗಲು ಹೋಗುತ್ತಾರೆ. ತಂದೆ - ತಾಯಿಯಂದಿರರು ಮಕ್ಕಳ ಮುಖ ನೋಡಿ ಜೀವ ಬಿಡುತ್ತಾರೆ. ಹೀಗೆ ತಂದೆ - ತಾಯಿ ಮಕ್ಕಳ ಪ್ರೀತಿ - ವಾತ್ಸಲ್ಯದ ಸುಂದರ ಚಿತ್ರಣ ಈ ಕಾವ್ಯದಲ್ಲಿದೆ.

ಜೈಸಿಂಗ್‌ರಾಜನ ಕಾವ್ಯ :

ಸ್ಯಾಸಿ ಚಿನ್ನಮ್ಮ, ಕೃಷ್ಣಗೊಲ್ಲರ ಕಾವ್ಯಗಳಲ್ಲಿ ಮತ ಸಂಘರ್ಷ ಕಂಡು ಬಂದರೆ, ಜೈಸಿಂಗರಾಜನ ಕಾವ್ಯದಲ್ಲಿ ಧರ್ಮ ಸಮನ್ವಯತೆ ಕಂಡು ಬರುತ್ತದೆ. ಹಿಂದೂ ಮುಸ್ಲಿಂ ಧರ್ಮಗಳ ನಡುವಿನ ಅನ್ಯೋನ್ಯತೆ, ಭ್ರಾತೃತ್ವ ಈ ಕಾವ್ಯ ಚಿತ್ರಿಸುತ್ತದೆ. ಜೈಸಿಂಗರಾಜ ಮತ್ತು ಮಹಮದ್ ಖಾನ್ ಇವರಿಬ್ಬರು ಆತ್ಮೀಯ ಸ್ನೇಹಿತರು. ಅನ್ಯ ಧರ್ಮಿಯರಾದರೂ, ಅಣ್ಣ - ತಮ್ಮಂದಿರಂತೆ ಭಾವನೆಯುಳ್ಳವರು. ದಿಲ್ಲಿಯ ನವಾಬನ ಜೊತೆಗೆ ಹೋರಾಡಿ, ಇವರಿಬ್ಬರು ಪ್ರಾಣ ತ್ಯಾಗ ಮಾಡುವರು. ಸಿರಗುಪ್ಪ ತಾಲ್ಲೂಕಿನಲ್ಲಿ ನಡೆದ ಘಟನೆಯೇ ಈ ಕಥೆಯ ವಸ್ತುವಾಗಿದೆ. ಇವರ ತ್ಯಾಗ , ಬಲಿದಾನಕ್ಕಾಗಿ ಜನ ಇವರ ಗುಡಿ ಕಟ್ಟಿ ಪೂಜೆ ಮಾಡುತ್ತಾರೆ. ಇಂದಿಗೂ ಪೂಜೆ ನಡೆಯುತ್ತಿದೆ ಎನ್ನುವ ಅಂಶ ಜನ ಪದರ ಸರ್ವಧರ್ಮ ಸಮನ್ವಯ ಮನೋಧೋರಣೆಯನ್ನು ಚಿತ್ರಿಸುತ್ತದೆ. ಅದರಂತೆ ಬೊಜ್ಜಿಲಿ ನಾಗಿರೆಡ್ಡಿ ಕಾವ್ಯ, ಆದೋನಿ ಲಕ್ಷ್ಮಮ್ಮನ ಕಾವ್ಯ, ಮಾರವಾಡಿ ಸೇಟಿ ಕಾವ್ಯಗಳು ಸಾಮಾಜಿಕ ಕಾವ್ಯಗಳಾಗಿವೆ.

ಗಂಗಿ ಗೌರಿ ಹಾಡು :

ಬುಡ್ಗ ಜಂಗಮ ಬುಡಕಟ್ಟಿನ ಪ್ರಾತಿನಿಧಿಕ ಕಾವ್ಯ. ಗಂಗಿ ಗೌರಿ ಕಥೆ ಪುರಾಣ ಮೂಲಕ್ಕೆ ಸಂಬಂಧಿಸಿದ ಕತೆಯಾಗಿದೆ. ಶಿವ ಗಂಗೆಯರ ಪ್ರಣಯ ಸಂಬಂಧವಾದ ಜನಪದ ಲಾವಣಿಗಳು ಕರ್ನಾಟಕದ ನಾನ ಕಡೆಗಳಲ್ಲಿ ಕಂಡು ಬರುತ್ತವೆ. ಬೆಸ್ತಕುಲದ ಹೆಣ್ಣಾದ ಗಂಗೆಯನ್ನು ಶಿವಕದ್ದು ತಂದ ಪ್ರಸಂಗ ಅದು. ಇದೇ

ಕಥೆ ಕೆಲವು ಶೈವ ಕ್ಷೇತ್ರಗಳಿಗೂ ಆರೋಪಿತವಾಗಿ ಸ್ಥಳೀಯ ಹಿನ್ನೆಲೆಯನ್ನು ಪಡೆದು ಕೊಂಡು ಸ್ವತಂತ್ರ ಕತೆಯಾಗಿ ಬೆಳವಣಿಗೆ ಸಾಧಿಸಿಕೊಂಡಿದೆ. ಈ ಆಶಯ ಕ್ರಮೇಣ ವೈಷ್ಣವ ಕ್ಷೇತ್ರಗಳಿಗೂ ವ್ಯಾಪಿಸಿ ಕೆಲವು ಸ್ವಾರಸ್ಯ ಕಥೆಗಳ ಉಗಮಕ್ಕೆ ಕಾರಣವಾಗಿದೆ[16]. ಶಿವಗಂಗೆಯನ್ನು ತನ್ನ ಎರಡನೆಯ ಹೆಂಡತಿಯಾಗಿ ಸ್ವೀಕರಿಸುವುದು. ಗಂಗಿ - ಗೌರಿಯರ ನಡುವೆ ಜಗಳವಾಗುವುದು. ಮೂದಲಿಕೆಗೆ ಒಳಗಾದ ಗಂಗೆ ಎಲ್ಲೆಡೆಯಿಯೂ ನೀರಿಲ್ಲದಂತೆ ಮಾಡುವುದು. ಗೌರಿ ಗಂಗೆಯ ಕ್ಷಮೆ ಕೇಳಿ, ಶಿವನನ್ನು ಮದುವೆಯಾಗಲು ಒಪ್ಪಿಗೆ ನೀಡಿದಾಗ, ನೀರು ಬರಿಸುವುದು ಮುಂತಾದ ಅಂಶಗಳು ಪೌರಾಣಿಕ ಹಿನ್ನೆಲೆಲಯಿಂದ ಮೂಡಿ ಬಂದಿದೆ.

ಈರಮ್ಮ ಹಾಡುವ ಕಾವ್ಯಗಳು ಐತಿಹಾಸಿಕ, ಸಾಮಾಜಿಕ ಪೌರಾಣಿಕ ಹಿನ್ನೆಲೆಯಿಂದ ಕೂಡಿವೆ. ಈಕೆ ಹಾಡುವ ಎಲ್ಲ ಕಾವ್ಯಗಳ ನಾಯಕರು ದೈವದ ವರ ಪ್ರಸಾದದಿಂದ ಹುಟ್ಟುವರು. ವರ ಪ್ರಸಾದವಾಗಿ ಎಲ್ಲ ಕಾವ್ಯಗಳಲ್ಲಿ ಬಾಳೆಹಣ್ಣು, ಖಜೂರ ಹಣ್ಣು ಬಳಕೆಯಾಗಿದೆ. ಕುಮಾರ ರಾಮನ ಕಾವ್ಯದಲ್ಲಿ ಬಾಳೆಹಣ್ಣು ವರ ಪ್ರಸಾದವಾಗಿ ಜಟಿಂಗೇಶ್ವರ ನೀಡುತ್ತಾನೆ. ಉಳಿದ ಕಾವ್ಯಗಳಲ್ಲಿ ಖಜೂರ ಹಣ್ಣು, ಹೂ ಬಳಕೆಯಾಗಿರುವುದು ವಿಶಿಷ್ಟ ಅಂಶವಾಗಿದೆ. ಎಲ್ಲಮ್ಮನ ಕಾವ್ಯದಲ್ಲಿ ಶಿವ ಪಾರ್ವತಿಯರು, ಕೂಡಿ ತಮ್ಮ ಮೈಮೇಲಿನ ಮಣ್ಣು ತೆಗೆದು ಎಲ್ಲಮ್ಮನನ್ನು ಸೃಷ್ಟಿಸುತ್ತಾರೆ. ಈ ಕಲಾವ್ಯಗಳಲ್ಲಿ ಲೌಕಿಕ ಪವಾಡುಗಳು ನಡೆಯುತ್ತವೆ. ಶಿವ , ವಿಷ್ಣು, ಕಾಳಿಕಾ ದೇವಿ ಮುಂತಾದ ದೇವತೆಗಳು ಕಥಾನಾಯಕರ ಭಕ್ತಿಗೆ, ತಪಸ್ಸಿಗೆ ಮೆಚ್ಚಿ ಮೂರು ವೇಷದಲ್ಲಿ ಬಂದು ಪವಾಡಗಳನ್ನು ಸೃಷ್ಟಿಸುತ್ತಾರೆ. ಅವರ ಸಮಸ್ಯೆಗಳನ್ನು ಬಗೆಹರಿಸುತ್ತಾರೆ. ದೈವಿ ಶಕ್ತಿಯನ್ನು ಅವರಲ್ಲಿ ತುಂಬುತ್ತಾರೆ. ಹೀಗಾಗಿ ಈ ಕಥೆಗಳು ರೋಚಕವೆನಿಸುತ್ತವೆ.

ಈರಮ್ಮ ಹಾಡುವ ಕಾವ್ಯಗಳು ಐತಿಹಾಸಿಕ, ಸಾಮಾಜಿಕ ಪೌರಾಣಿಕ ಹಿನ್ನೆಲೆಯಿಂದ ಕೂಡಿವೆ. ಈಕೆ ಹಾಡುವ ಎಲ್ಲ ಕಾವ್ಯಗಳ ನಾಯಕರು ದೈವದ ವರ ಪ್ರಸಾದದಿಂದ ಹುಟ್ಟುವರು. ವರಪ್ರಸಾದವಾಗಿ ಎಲ್ಲ ಕಾವ್ಯಗಳಲ್ಲಿ ಬಾಳೆಹಣ್ಣು, ಖಜೂರ ಹಣ್ಣು ಬಳಕೆಯಾಗಿದೆ. ಕುಮಾರ ರಾಮನ ಕಾವ್ಯದಲ್ಲಿ ಬಾಳೆಹಣ್ಣು ವರಪ್ರಸಾದವಾಗಿ ಜಟಿಂಗೇಶ್ವರ ನೀಡುತ್ತಾನೆ. ಉಳಿದ ಕಾವ್ಯಗಳಲ್ಲಿ ಖಜೂರ ಹಣ್ಣು, ಹೂ ಬಳಕೆಯಾಗಿರುವುದು ವಿಶಿಷ್ಟ ಅಂಶವಾಗಿದೆ. ಎಲ್ಲಮ್ಮನ ಕಾವ್ಯದಲ್ಲಿ ಶಿವ - ಪಾರ್ವತಿಯರು ಕೂಡಿ ತಮ್ಮ ಮೈಮೇಲಿನ ಮಣ್ಣು ತೆಗೆದು ಎಲ್ಲಮ್ಮನನ್ನು ಸೃಷ್ಟಿಸುತ್ತಾರೆ. ಈ ಕಾವ್ಯಗಳಲ್ಲಿ ಲೌಕಿಕ ಪವಾಡಗಳು ನಡೆಯುತ್ತವೆ. ಶಿವ, ವಿಷ್ಣು, ಕಾಳಿಕಾ ದೇವಿ ಮುಂತಾದ ದೇವತೆಗಳು ಕಥಾನಾಯಕರ ಭಕ್ತಿಗೆ, ತಪಸ್ಸಿಗೆ ಮೆಚ್ಚಿ ಮಾರು ವೇಷದಲ್ಲಿ ಬಂದು ಪವಾಡಗಳನ್ನು ಸೃಷ್ಟಿಸುತ್ತಾರೆ. ಅವರ ಸಮಸ್ಯೆಗಳನ್ನು ಬಗೆಹರಿಸುತ್ತಾರೆ. ದೈವ ಶಕ್ತಿಯನ್ನು ಅವರಲ್ಲಿ ತುಂಬುತ್ತಾರೆ. ಹೀಗಾಗಿ ಈ ಕಥೆಗಳು ರೋಚಕವೆನಿಸುತ್ತವೆ.

ಈರಮ್ಮ ಹಾಡುವ ಕಾವ್ಯಗಳಲ್ಲಿ ಪ್ರಸ್ತುತ ಸಂದರ್ಭದ ಅನೇಕ ಅಂಶಗಳು ಸೇರಿಕೊಂಡಿವೆ. ಈರಮ್ಮ ಹಾಡುವ ಬಲಿ ಚಕ್ರವರ್ತಿ ಕಾವ್ಯದಲ್ಲಿ ಚಂದ್ರಾವತಿ ಹತ್ತನೆಯ ಕ್ಲಾಸಿನಲ್ಲಿ ಊರಿಗೆ ಫಸ್ಟ ಕ್ಲಾಸಿನಲ್ಲಿ ಪಾಸಾಗಿರುತ್ತಾಳೆ. ಅದಕ್ಕಾಗಿ ಬ್ಯಾಂಕಿನವರು ತಿಂಗಳು ತಿಂಗಳು ಆಕೆಗೆ ಸಂಬಳ (ಸ್ಕಾಲರ್‌ಶಿಪ್) ಕೊಡುತ್ತಿರುತ್ತಾರೆ. ಆಕೆ ತೂಕ ಹೆಚ್ಚಾಗಿರುವುದು ಕಂಡು ಅನುಮಾನ ಪಟ್ಟು ಆಕೆ ಗರ್ಭಿಣಿಯಾಗಿರುವಳೆಂದು ಖಾತ್ರಿ ಮಾಡಿಕೊಂಡು ಸಂಬಳ ಕೊಡಲು ನಿರಾಕರಿಸುವುದು[17]. ಅದರಂತೆ ಆದೋಣಿ ಲಕ್ಷ್ಮಮ್ಮನ ಕಾವ್ಯದಲ್ಲಿ

ಲಕ್ಷ್ಮಮ್ಮನ ಭಾವನಾದ ಸುಬ್ಬಾರೆಡ್ಡಿ ಬ್ಯಾಂಕಿಗೆ ದುಡ್ಡು ಕಟ್ಟಲು ಹೋದಾಗ , ದುಡ್ಡು ಕಡಿಮೆ ಇರುವುದರಿಂದ ಬ್ಯಾಂಕಿನವರು ಅವನನ್ನು ಕೂಡ ಹಾಕುವುದು [18]. ಅದರಂತೆ ಕೃಷ್ಣ ಗೊಲ್ಲರ ಕಥೆಯಲ್ಲಿಯೂ, ಇಲಾಮಂತ್ರ ಪಟ್ಟದ ಪಾತರಗಿತ್ತಿಯು ಕಾಂಭೋಜರಾಜನ ಆರು ಮಂದಿ ಮಕ್ಕಳನ್ನು ಹಗೇದಾಗೇ ಹಾಕಿಡುತ್ತಾಳೆ. ಗವರಮೆಂಟಗ್ಹೋಗಿ ರೊಕ್ಕಾ ಕಟ್ಟಿ, ಅಲ್ಲಿದ್ದ ಪತ್ರ ತಂದು ನನ್ಗೆ ಪತ್ರ ತೋಲಿಸಿದ್ರೆ ನಿನ್ನ ಮಕ್ಕನ್ನ ಹೋರ್ಗ ಬಿಡ್ತಿನಿ[19] ಎಂದು ರಾಜನಿಗೆ ಪತ್ರ ಹಾಕುತ್ತಾಳೆ. ಆದರೆ ಬಾಲನಾಗಮ್ಮನ ಕಾವ್ಯದಲ್ಲಿ ಭೂಪತಿರಾಜ ಪಟ್ಟದಲ್ಲಿ ಸರ್ಕಸ್, ನಾಟಕವಾಡೋರು ಬಂದಿರುತ್ತಾರೆ. ಆರು ಗಜ ಹುಲಿರಾಜ ಸರ್ಕಸ್‌ದಲ್ಲಿ ಇರುತ್ತದೆ [20]. ಇಂತಹ ಸನ್ನಿವೇಶಗಳು ಆಧುನಿಕ ಕಾಲದ (ಪ್ರಸ್ತುತ) ಪ್ರಭಾವದಿಂದ ಬಂದವುಗಳಾಗಿವೆ. ಕಲಾವಿದೆ ಈರಮ್ಮ ತನ್ನ ಪರಿಸರದಲ್ಲಿ ನಡೆದ ಕೆಲವೊಂದು ಘಟನೆಗಳಿಂದ ಪ್ರಭಾವಿತಳಾಗಿ ಈ ರೀತಿ ಕಾವ್ಯದಲ್ಲಿ ಅವುಗಳನ್ನು ಬಲಸಿಕೊಂಡಿದ್ದಾಳೆಯೆನಿಸುತ್ತದೆ. ಹೀಗೆ ಕಾವ್ಯದ ವಸ್ತು ಹಳೆಯದಾದರೂ ಜಾನಪದ ಕಲಾವಿದರಲ್ಲಿ ಕಾಲಾನುಕ್ರಮವಾಗಿ ಆ ವಸ್ತುವಿನಲ್ಲಿ ಹೊಸ ಹೊಸ ಸಂಗತಿಗಳು ಸೇರುತ್ತ ಕಾವ್ಯದ ಪರೀಧಿ ವಿಸ್ತಾರವಾಗುತ್ತ ಹೋಗುತ್ತದೆ. ಜಾನಪದ ಕಾವ್ಯಗಳಲ್ಲಿ ಈ ಗುಣ ಇರುವುದರಿಂದಲೇ ಅದು ರೆಲೆವೆಂಟ್ ಎನಿಸುತ್ತದೆ.

ಅಲ್ಲದೆ ರಾಮಾಯಣ, ಮಹಾಭಾರತ ಮತ್ತು ಪೌರಾಣಿಕ ಸನ್ನಿವೇಶಗಳೂ ಇಲ್ಲಿಯ ಕಾವ್ಯದ ಮೇಲೆ ಪ್ರಭಾವ ಬೀರಿವೆ. ಸುಂದರ ಸನ್ನಿವೇಶ ನಿರ್ಮಾಣಕ್ಕೆ ಕಾರಣವಾಗಿವೆ. ಬಳಿಚಕ್ರವರ್ತಿ ಕಾವ್ಯದಲ್ಲಿ ಬರುವ ಚಂದ್ರಾವತಿ ಕಥೆ ಸೀತೆಯ ವನವಾಸವನ್ನು ನೆನಪಿಸುತ್ತದೆ. ಮಗುವನ್ನು ಅಗಸಿಯಲ್ಲಿನ ತೊಟ್ಟಿಲಲ್ಲಿ ಬಿಟ್ಟು, ಬಟ್ಟೆ ಒಗೆಯಲಿಕ್ಕೆ ಹೋಗುವುದು. ಬಟ್ಟೆ ತೊಳೆಯುವಾಗ ಮಂಗಗಳು ತನ್ನ ಮರಿಗಳನ್ನು ಹೊಟ್ಟೆಗೆ ಅಂಟಿಸಿಕೊಂಡು ಆ ಮರದಿಂದ ಈ ಮರಕ್ಕೆ ಜಿಗಿಯುವಾಗ ಅವುಗಳನ್ನು ನಿಮ್ಮ ಮರಿ ಬಿದ್ದರೆ ಹೇಗೆ ಎಂದು ಕೇಳುವುದು. ಅವು ತಿರುಗಿ ನಿನ್ನ ಮಗು ತೊಟ್ಲಿಂದ ಜಾರಿ ಬಿದ್ದರೆ ಹೇಗೆ ಮಾಡುತ್ತಿ? ಎಂದು ತಿರುಗಿ ಕೇಳುವುದು. ಚಂದ್ರಾವತಿ ಗಡಿಬಿಡಿಯಿಂದ ಬಂದು ತೊಟ್ಟಿಲಿನಲ್ಲಿ ಮಗು ಇರದಿರುವುದನ್ನು ರೋಧಿಸುವುದು ಇಂತಹ ಪ್ರಸಂಗಗಳು ರಾಮಾಯಣದ ಪ್ರಸಂಗಗಳನ್ನು ನೆನಪಿಸುತ್ತವೆ[21]. ಎಲ್ಲಮ್ಮನ ಕಾವ್ಯದಲ್ಲಿ ಶಿವ ಪಾರ್ವತಿಯರಿಬ್ಬರೂ ತಮ್ಮ ಮೈಮೇಲಿನ ಮಣ್ಣನ್ನು ತೆಗೆದು ಎಲ್ಲಮ್ಮನನ್ನು ಸೃಷ್ಟಿ ಮಾಡುವುದು, ಗಣಪತಿಯ ಕಥೆಯನ್ನು ನೆನಪಿಸಿದರೆ ಕಾವ್ಯದ ಇನ್ನೊಂದು ಸಂದರ್ಭದಲ್ಲಿ ವಿಷ್ಣು, ಪರಮಾತ್ಮ, ಪಾರ್ವತಿ ಮೂವರು ಕಳ್ರಾಗಿ ವೇಷ ಮಾಡಿಕೊಂಡು ಬಂದು ಎಲ್ಲಮ್ಮನಿಗೆ ಮೂವಾರಿಗಿ ಮೂರು ದಿವಸದ ಅನ್ನ ಇಡಬೇಕು. ಹುಟ್ಟಿದ ಮಾರ್ಲೆ ನಮ್ಗೆ ಉಂಬಾಕಿಡಬೇಕು, ನೀನು ಉಟ್ಟಿದ ಸೀರೆಯಮ್ಮ ಬಿಚ್ಚಿ ಊಟಕ್ಕೆ ಇಡಬೇಕೆಂದು [22] ಅವಳ ನಿಜ ಸತ್ಯವನ್ನು ಪರೀಕ್ಷಿಸುವ ಸನ್ನಿವೇಶವು ಅನುಸೂಯ ತ್ರಿಮೂರ್ತಿಗಳಿಗೆ ಊಟ ಮಾಡಿಸುವುದನ್ನು ನೆನಪಿಸುತ್ತದೆ. ಪರಶುರಾಮ ತಾಯಿಯ ಹೊಟ್ಟೆಯಲ್ಲಿ ಮಾತನಾಡುವುದು, ಸುಭದ್ರೆಯ ಹೊಟ್ಟೆಯಲ್ಲಿ ಅಭಿಮನ್ಯು ಮಾತನಾಡುವ ಸನ್ನಿವೇಶ ನೆನಪಿಗೆ ತಂದರೆ, ಪರಶುರಾಮನ ಹುಟ್ಟು, ಕಾರ್ತಿಕ ರಾಜನ ಸಂಹಾರ , ಕೃಷ್ಣ ಕಂಸರ ಸನ್ನಿವೇಶಗಳನ್ನು ನೆನಪಿಗೆ ತರುತ್ತದೆ. ಅಲ್ಲದೆ ಗೊಡ್ಡಿರವಂದರಾಜನಲ್ಲಿ ಬೆಳೆದ ಚಂದ್ರಾವತಿ ಮಗ ಮುಂದೆ ತಾಯಿಯ ಸೌಂದರ್ಯ ಕಂಡು ಮರುಳಾಗುವುದು [23], ನಮ್ಮ ಪೌರಾಣಿಕ ಶೇಟವಿ ಕಥೆ ನೆನಪಿಗೆ ತರುತ್ತದೆ. ಕೃಷ್ಣ ಗೊಲ್ಲರ ಕಾವ್ಯದಲ್ಲಿ ಶರಬಂಧ ರಾಜನಿಗೆ ಆರು ಮಂದಿ ಹೆಂಡಂದಿರು. ಬಾವಿಯೊಳಗಿದ್ದ ಹೆಂಡ್ತಿರ ಸೀರೆಯನ್ನೆಲ್ಲ ಗಿಡದ ಮ್ಯಾಲೆ ಒಗೆದು ಬಿಟ್ಟು , ಗಿಡ ಎರಿ ಗಿಡಮ್ಯಾಲೆ ಕುಂತಾನ

ಮಗ , ಬೆಳ್ಳನ ಊದುನು ಗೋಲು ಹಿಡಿದಾನ. ಬರ್ರೆಲೆ ನಿವು ಗೊಲ್ರು ಹೆಂಡ್ರುದವರೆ. ಆಗ ನೀವು ಬಾಯಾಗ ಸಾಯಬ್ಯಾಡ್ರಿ, ಅಯ್ಯೋ ಕೃಷ್ಣವಂತ ಬಂದಾರಣ್ಣಾ ಎಂದು ಬಗ್ಗಿ ಬಗ್ಗಿ ಬರುವರು[24]. ಈ ಸನ್ನಿವೇಶವು ಕೃಷ್ಣ ಗೋಪಿಕೆಯರ ಪೌರಾಣಿಕ ಕಲ್ಪನೆ ನೆನಪಿಸುತ್ತದೆ. ಸಿರಿದೇವಿಯ ಅಗ್ನಿ ಪರಿಕ್ಷೆ, ಬಾಲನಾಗಮ್ಮನ ಅಗ್ನಿ ಪರೀಕ್ಷೆ, ಸೀತೆಯ ಅಗ್ನಿ ಪರೀಕ್ಷೆ ಇತ್ಯಾದಿ ಸನ್ನಿವೇಶಗಳನ್ನು ನೆನಪಿಗೆ ತರುತ್ತದೆ.

6.2 ಕಥನ ಕಾವ್ಯಗಳ ಭಾಷೆ :

ವೃತ್ತಿ ಗಾಯಕ ಕಾವ್ಯಗಳು ಮೌಖಿಕ ಕಾವ್ಯಗಳು. ಜನಪದ ಬಾಯಿಯಿಂದ ಬಾಯಿಗೆ ಹರಿದು ಬಂದವುಗಳು. ಜನ ಸಾಮಾನ್ಯರ ಆಡು ನುಡಿ ಇಲ್ಲಿ ಬಹಳ ಮುಖ್ಯ . ಆಡು ನುಡಿಯ ಸೊಗಸು ಇಲ್ಲಿದೆ. ಇಲ್ಲಿಯ ಭಾಷೆಗೆ ಯಾವುದೇ ರೀತಿಯ ಶ್ಲೀಲ - ಅಶ್ಲೀಲವೆಂಬ ಭಾವವಿಲ್ಲ. ಶಿಷ್ಟರಂತೆ ಜಟಿಲವಾದ ಬಂಧ ಇಲ್ಲಿಲ್ಲ . ಸರಳ ಸುಂದರವಾದ ಅಭಿವ್ಯಕ್ತಿ ಇಲ್ಲಿದೆ. ಈ ಮಾತು ಈರಮ್ಮ ಹಾಡುವ ಕಾವ್ಯಗಳಿಗೂ ಅನ್ವಯಿಸುತ್ತದೆ. ಇಲ್ಲಿಯ ಕಥಾ ವಸ್ತುವಿನ ಭಾವಕ್ಕೆ ತಕ್ಕಂತಹ ಭಾಷೆ ಇಲ್ಲಿದೆ. ಇಲ್ಲಿಯ ರಚನೆಗಳಲ್ಲಿ ಸರಳತೆ, ಸಹಜತೆ, ಆಡಂಬರವಿಲ್ಲದ ಭಾವ ತುಂಬಿದೆ. ಆಡು ಮಾತಿನ ಸೊಗಡು ಪ್ರಾದೇಶಿಕ ಬನಿ, ಆಶು ಕವಿತ್ವ ಆಗಾಗ ಉದ್ಭವಿಸಿ ಜನ ಮನವನ್ನು ಮುಟ್ಟುವ ಭಾಷೆ ಇಲ್ಲಿದೆ. ಈರಮ್ಮನ ಮಾತೃ ಭಾಷೆ ತೆಲಗು. ಬುರ್ರ ಕಥೆಗಳು ಹೆಚ್ಚಾಗಿ ತೆಲಗು ಭಾಷೆಯಲ್ಲಿಯೆ ಬುರ್ರ ಕಥೆಗಾರರು ಹಾಡುತ್ತಾರೆ. ತೆಲುಗಿನ ಬುರ್ರ ಕಥೆಗಳೇ ಈರಮ್ಮ ಕನ್ನಡಕ್ಕೆ ತಂದು ಹಾಡಿದ್ದಾಳೆ. ಈರಮ್ಮನ ಪರಿಸರದಲಿ ತೆಲುಗಿನ ಪ್ರಭಾವವಿದೆ. ಹೀಗಾಗಿ ಈಕೆ ಹಾಡುವ ಕಾವ್ಯಗಳಲ್ಲಿ ತೆಲುಗು ಪದಗಳು ಸಹಜವಾಗಿಯೇ ಸೇರಿಕೊಂಡಿವೆ. ಜೊತೆಗೆ ಇಂಗ್ಲಿಷ , ಉರ್ದು ಪದಗಳು ಕಾವ್ಯಗಳಲ್ಲಿ ಕಂಡು ಬರುತ್ತವೆ. ನುಡಿಗಟ್ಟುಗಳು, ಗಾದೆಗಳು, ಒಗಟುಗಳು, ನಾಣ್ಣುಡಿಗಳು ಅಲ್ಲಲ್ಲಿ ಪ್ರಕಟಗೊಂಡಿವೆ.

ಈರಮ್ಮ ಹಾಡುವ ಕಾವ್ಯಗಳು ಬಳ್ಳಾರಿ, ರಾಯಚೂರ ಮತ್ತು ಈ ಪರಿಸರದ ಆಂಧ್ರದ ಗಡಿಭಾಗದಲ್ಲಿಯ ಪ್ರಾದೇಶಿಕ ಭಾಷೆಯ ಸೊಬಗು ಇಲ್ಲಿದೆ. ಮಾಡಿ ಕ್ಯಂಡಾರ, ಸಲುವಿಕ್ಯಂಡಾನ, ಅಮ್ಮಾರ, ಹೆಣ್ಸು, ಗಣ್ಸು ಮಾಡಕ್ಯಂಡಿವಿ, ಹೊಟ್ಯಸ್ಗಂಡು, ಕುಂದ್ರುಸ್ಕ್ಯಂಡು, ಅನ್ನಿಸಿಗ್ಯಂಲಾರ್ದಂಗ, ಹೇಳಿಕ್ಯಂತ, ಎತ್ತಿಗ್ಯಂಡು. ತೆಲುಗು ಪ್ರಭಾವದಿಂದಾಗಿ, ಬಂಡ್ರೇಳು, ಗೊಡ್ಡೋಳು [25], ಕೇಳ್ಬೆ, ಕಡಿದ್ದಿದ್ದಿಗೆ, ಕೊಲ್ಲಿದ್ದಗೆ, ಬಂದಿದ್ದಗೆ ಮುಂತಾದವುಗಳು. ಉರ್ದು ಪದಗಳ ಪ್ರಭಾವದಿಂದಾಗಿ, ಮಾದರಚೋರ್ , ಲುಚ್ಚಾ , ಪಕಡ್ರೆ, ಚೋಡಮತ್, ರಸ್ತಾ ಛೋಡೊ, ಸಲಾಂದೇ ಸಲಾಂದೇ ಮುಂತಾದವುಗಳು ಅಲ್ಲಲ್ಲಿ ತೇಲುತ್ತವೆ. ಅಲ್ಲದೆ ಇಂಗ್ಲೀಷ್ ಪದಗಳು ಸೇರಿಕೊಂಡಿರುವುದು ಕಂಡು ಬರುತ್ತದೆ. ಟೈಮು, ರೆಕಾರ್ಡು, ಟ್ರಂಕು , ರೂಮಿನಾಗ, ಜೇಲು, ಕುರ್ಚಿ, ಇಂಗ್ಲೀಷ್, ಮರಾಠಿ , ಹಿಂದಿ ಡಿಗ್ರಿ, ಸ್ಟ್ಯಾಂಗ್, ಅರ್ಜೆಂಟ್, ಆರ್ಡರ್ [26], ಡಿರುಸೆಲ್ಲ ಕಂಪ್ಲೀಟ, ಪಾರ್ಟಿ, ಜೈಂಟು, ಲೈನು, ಕೇಸು , ಗವರಮೆಂಟಿಗೆ, ಲಾಸ್ಟಿಗೆ, ಡಾಕುಟ್ರು, ಬೆಂಚ, ಟ್ರಂಕ್, ಬಸ್ ಸ್ಟ್ಯಾಂಡಿಗೆ [27], ಬೋರ್ಡು, ಕರೆಕ್ಟ್, ರೋಡು, ಗೇಟು , ಟೆಲ್ಲಿನ್ ಟೆಲಿಕಾಟ್ [28], ನೀಟಿದ್ದೊರು , ಸಿಲವರ್, ಸ್ಟೀಲ್, ಕೇಕ್ [29] ರಗ್ಗ, ಸೇಮ , ಬಸ್ [30], ಮಂಡ ನಿಕ್ಕರ, ಲೋಡು, ಡೈರೆಕ್ಟ [31], ಮುಂತಾದ ಪದಗಳು ಕಾವ್ಯಗಳಲ್ಲಿ ಬಳಸಲ್ಪಟ್ಟಿವೆ.

ಅದರಂತೆ ಗಾದೆಗಳು, ನಾಣ್ಣುಡಿಗಳು, ನುಡಿಗಟ್ಟುಗಳು ಸೇರಿ ಕಾವ್ಯಕ್ಕೆ ಹೊಸಕಳೆ ತಂದಿವೆ.

ಅವು ಇಂತಿವೆ

ಲಂಕಾ ನೋಡಿ ಬಾ ಅಂದ್ರೆ , ಬೆಂಕಿ ಹಚ್ಚಿ ಬರೋನು

ಉಟ್ಟಿದ ಸೀರೆ ಸುಡಬಾರದು, ಇಟ್ಟಿದ ಕುಂಕುಮ ಕೆಡಬಾರದು

ಅರ್ಧ ಕಣ್ಣಾಗ ಸುಣ್ಣ , ಅರ್ಧ ಕಣ್ಣಾಗೆ ಬೆಣ್ಣಿ

ಪಂತ್ಯಾಪರಪಂಗ್ತಿ ಮಾಡಿಬಿಟ್ಟ

ಬೈದ್ರೆ ಗಾಳಿಗೆ ಹೋಯ್ತು , ತಿಂದ್ರೆ ಹೊಟ್ಟ್ಯಾಗ ಹೋಯ್ತು

ಶರಣು ಎಂಬೋರಿಗೆ ಮರಣಿಲ್ಲ

ಮಗ ಹುಟ್ಟಿ ಕುಲ ಉದ್ಧಾರ ಮಾಡಬೇಕು,

ಮಗಳ ಹುಟ್ಟಿ ಕೀರ್ತಿ ತರಬೇಕು ಭೂಮಿ ಮ್ಯಾಲ

ಗಂಡ್ಸರಿಗೆ ಕೈಚೀಲ ಚಂದ, ಹೆಂಗ್ಸರಿಗೆ ತಲೆ ಮ್ಯಾಗ ಗಂಟ ಚಂದ[32]

ಪಾಲಿಗೆ ಬಂದದ್ದು ಪರ್ಯಾಣ

ಸೂಟಿ ನೋಡಿ ಏಟು ಹಾಕೊದು, ಕೀಲು ನೋಡಿ ನರ ತಪ್ಪುದು

ಬಿಂದ್ರುಗ್ಹುಟ್ಟಿದವನು ಮಂಜೂರಾದ ಗಂಡನಿಗ್ಹುಟ್ಟಿದವರು ಹಿಂದಕಾದ್ರು

ಧರ್ಮ ಅಂತ ಹೋದ್ರೆ ಕರ್ಮ ಬರತೈತಿ

ನವಣೆಷ್ಟು ಹೆಚ್ಚಿರಬಾರ್ದು, ಜೋಳದಷ್ಟು ಕಮ್ಮ ಇರಬಾರದು

ಭೂಮಿಮ್ಯಾಗ ಹೆಣ್ಮಕ್ಕಿಗೆ ದರಬಾರು ಕೊಡಬಾರದು

ಸುಖದಲ್ಲಿ ಹೋಗಿ , ಲಾಭದಲ್ಲಿ ಬಾರಯ್ಯ

ಕರಕೊಂಡು ಬಂದ ಕರಕೊಂಡು ಬಂದವನಿಗೆ ಕರ್ಮಸುತ್ತೋದು, ಇಬ್ರು ಗುದ್ದಾಟ ನಿನಗ್ಯಾಕ ವದ್ದಾಟ, [33], ಹೆಣ್ಣು ಹುಟ್ಟೋದು ಒಂದೇ ಹುಣ್ಣು ಹುಟ್ಟೋದು ಒಂದೇ, ಕಂಡ್ವರಿಗೆ ಹೋಗೋಳು ಕಂಡ ಬ್ಯಾನಿ ತಂದವ್ಳು[34], ದುಷ್ಟ ಮಾಡಿದ್ರನೆ ಹಡ್ಯೋದು, ಕರ್ಮ ಮಾಡಿದರೋರೆ ಬಸುರಾಗೋದು [35], ಕತ್ತಲಮನ್ಯಾಗ ದೀಪ ವಜ್ರ ಕಂಡ್ಹಂಗೆ ಮಗ, [36] ಹಡೆದಾಗ ಹಳೇ ರಕ್ತ ಹೋತೈತಿ, ಬಸುರಾದಾಗೆಲ್ಲ ಹೊಸರಕ್ತ ಏರು ತೈತಿ, ಕೈಲಾದೋರ್ಗೆ ಬಲಾ ಹೆಚ್ಚಂತ ಬಲ ಇಲ್ದೋರಿಗೆ ಮಾತ್ಹೆಚ್ಚಂತ , ತಾಳಿ ಕಟ್ಟಿದ ಹೆಣ್ತಿನ್ನ ಬಿಟ್ಟ ಬಿಡ್ತಾರ, ಮಾತು ಕೊಟ್ಟಿದ ಹೆಣ್ತಿನ ಬಿಡೋದಿಲ್ಲ, ಯಾರು ಮಾಡಿದ ಕರ್ಮ ಅವರೇ ಊಟ ಮಾಡಬೇಕು, ಮುಂತಾದವುಗಳನ್ನು ನೋಡುತ್ತೆವೆ.

ಉಪಮೆ ದೃಷ್ಟಾಂತಗಳು ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ. ಕುಮಾರ ರಾಮನ ವ್ಯಕ್ತಿತ್ವವನ್ನು ಈರಮ್ಮ ಹೀಗೆ ವರ್ಣಿಸಿದ್ದಾಳೆ.

ಸೂರ್ಯ ಕಂಡಾಂಗ ಕಾಣ್ತಾನ ಕತ್ತಲು ಮನ್ಯಾಗ ನೋಡಣ್ಣ

ದೀಪ ಕಾಣ್ದಂಗ ಕಾಣ್ತಾನ ಮಗ

ಚಂದ್ರ ಚಂದ್ರ ಕಾಣಗ್ಹಂಗ ಕಾಣ್ತಾನಪ್ಪ [37]

ಜಟ್ಟಿಗಳ ವರ್ಣನೆಯಲ್ಲಿ

ಒಬ್ಬೊಬ್ಬರು ಖಳ್ಸಿದಪ್ಪ ಇದಾರ

ಒಬ್ಬೊಬ್ಬರು ಹುಣ್ಸೆ ಬೊಡ್ಡಿ ಇದ್ದಂಗೈದಾರ [38]

ಓಲಿಕ್ಯಾರಾಮನ ತಲೆಹೋಲಿಯೋದು,

ಬೆಳ್ಳಿ ಸೂಜಿ ತಕ್ಕಂಡು

ಬೆಳ್ಳಿ ತಂತಿ ತಗಂಡು

ತಲಿಗೆ ಮಂಡಗ ಹೋಲಿದು ಬಿಟ್ಟಾರಮ್ಮ [39].

ಅದರಂತೆ ಪಾತ್ರಗಳ ಸನ್ನಿವೇಶಕ್ಕೆ ತಕ್ಕಂತೆ ಭಾಷೆ ಉಪಯೋಗವಾಗಬೇಕು. ಇಂತಹ ಭಾಷಾ ಪ್ರಜ್ಞೆ, ಈರಮ್ಮನ ಕಾವ್ಯಗಳಲ್ಲಿ ಕಂಡು ಬರುತ್ತದೆ. ಕಂಪ್ಲಿ ರಾಜನಿಗೆ ಇಳಿವಯಸ್ಸಿನಲ್ಲಿ ಹಲ್ಲು ಬಿದ್ದಿರುತ್ತವೆ. ಬಾಯಲ್ಲಿ ಹಲ್ಲಿಲ್ಲದ ವ್ಯಕ್ತಿಯ ಪಾತ್ರದ ವರ್ಣನೆಯಲ್ಲಿ ಭಾಷೆ ಹೀಗೆ ಬಳಸಿ ಕೊಂಡಿದ್ದಾಳೆ.

ಚಂಪಿ ಚಂಪಿ ಮುದ್ದು ಕೊಡ್ತಾನ

ಬಕಂ ಬಕಂ ಬಕ್ ಅಂತಾನ [40]

ನೀನು ಮಾತಾಡಿದ್ರೆ ಏನಂತಿ

ಅಂವ್, ಅಂವ್, ಅಂವ್ ಅಂತಿ [41]

ಮುದೆವ್ವ ಮಾತಾಡಿದ್ರ

ಅಕುಂ ಅಕುಂ ಅಂತಾನ [42]

ಇಂತಹ ಅನೇಕ ರೀತಿಯ ಪದಬಂಧಗಳು ಕಾವ್ಯಗಳಲ್ಲಿವೆ.

6.3 ಕಾವ್ಯ ಶೈಲಿ :

ಗದ್ಯ - ಪದ್ಯ ಕಥನ ಶೈಲಿ ಇಲ್ಲಿನ ಎಲ್ಲ ಕಾವ್ಯಗಳಲ್ಲಿ ಕಂಡು ಬರುತ್ತದೆ. ಇಲ್ಲಿ ವೀರ , ಛಲ, ಸಾಹಸ, ಅದ್ಭುತರಮ್ಯ, ಕುತೂಹಲ ಕೆರಳಿಸುವ ಸನ್ನಿವೇಶಗಳು ಇಲ್ಲಿವೆ. ಮುಮ್ಮೇಳ, ಹಿಮ್ಮೇಳದ ಮುಖಾಂತರ ಬುರ್ರ ಕಥನ ಕಲೆ ಸಾಗುವುದರಿಂದ ಗದ್ಯದ ಅರ್ಭಟತೆ ಪದ್ಯದ ಧಾಟಿ ಇವುಗಳ ಸಂಗಮದಿಂದ ಕಾವ್ಯ ಜನರ ಭಾವಸ್ಪಂದನೆಗೆ ಕಾರಣವಾಗುತ್ತದೆ. ಬುರ್ರ ಕಥನ ಕಲೆ, ನೃತ್ಯ - ಅಭಿನಯ - ಸಂಗೀತದಿಂದ ಕೂಡಿರುವಂತಹದ್ದು. ನಾಟಕೀಯತೆ ಬುರ್ರ ಕಥನ ಕಲೆಯ ಪ್ರಧಾನ ಗುಣ. ಕಾವ್ಯದ ವಸ್ತು - ಪಾತ್ರ - ಸನ್ನಿವೇಶ ಇವುಗಳಿಗೆ ತಕ್ಕಂತೆ ವಿಶಿಷ್ಟ ಭಾಷೆಯಲ್ಲಿ ಕಂಡು ಬರುತ್ತದೆ. ಇಲ್ಲಿಯ ಕಾವ್ಯಗಳಲ್ಲಿನ ಕಥಾ ನಾಯಕ ಪಾತ್ರಗಳು ಹುಟ್ಟುವುದು ದೈವಿ ಶಕ್ತಿಯಿಂದ. ಜೀವನದುದ್ದಕ್ಕೂ ಸಂಘರ್ಷ ಮಾಡಿ, ಅನೇಕ ರೀತಿಯ ಪವಾಡಗಳನ್ನು ಮೆರೆದು, ವೀರತನ ಪ್ರದರ್ಶಿಸಿ ದುಷ್ಟ ಶಕ್ತಿಯನ್ನು ಸೋಲಿಸಿ ಶಿಷ್ಟರನ್ನು ರಕ್ಷಿಸಿ ಕೊನೆಗೆ ಭೂಲೋಕವನ್ನು ಬಿಟ್ಟು ಸ್ವರ್ಗ ಲೋಕಕ್ಕೆ ಹೋಗುತ್ತವೆ. ದೈವಿ ಶಕ್ತಿಯಾಗಿ ಹುಟ್ಟಿ ಕೊಳ್ಳುತ್ತದೆ. ಜನ ಇವರ ಆರಾಧನೆಗಾಗಿ ಗುಡಿ ಗುಂಡಾರಗಳನ್ನು ಕಟ್ಟಿ ಪೂಜೆ ಮಾಡುತ್ತಾರೆ. ಇಂತಹ ಅಂಶಗಳು ಬಹುತೇಕ ಕಾವ್ಯಗಳಲ್ಲಿ ಕಂಡು ಬರುತ್ತವೆ.

ಕಾವ್ಯ ಹೇಳುತ್ತ ಹೋದಂತೆ ಜನ ಆಕರ್ಷಣೆಗೆ ಒಳಗಾಗಬೇಕು. ಕಥೆ ಹೇಳುವವನ ಮೇಲೆಯೇ ಅವರೆಲ್ಲರ ಮನಸ್ಸು ಕೇಂದ್ರೀಕೃತವಾಗಬೇಕು. ಎನ್ನುವ ಆಶಯದಿಂದ ಕಥಾ ಸಂದರ್ಭಕ್ಕೆ ತಕ್ಕಂತೆ ಹಾಡಿನ ದಾಟಿ ಬದಲಾಗುತ್ತ ಹೋಗುತ್ತದೆ.

ಗಡ ಗಡಗಡ ಗಡ ಅಂತಮ್ಮ [43]

ಫಳ ಫಳ ಫಳ ಫಳ ಮುರದಾನ [44]

ಗಡ್,ಗಡ್,ಗಡ್,ಗಡ್ ಅಂತ ತಿರುಗ್ಯಂತ್ [45]

ತೋಪ್, ತೋಪ್, ತೋಪ್, ತೋಪ್, ಅಂತ ತಲಿಗೆ ಬಡಿದಾವ [46]

ಇಂತಹ ಅನೇಕ ಸಾಲುಗಳು ಕಾವ್ಯದ ಧಾಟಿಯ ವಿಶಿಷ್ಟತೆಕ್ಕೆ ಪೂರಕವಾಗುತ್ತದೆ. ಈ ರೀತಿಯ ಮಾತಿನ ಗತ್ತಿನಿಂದ ಕಾವ್ಯದ ಶೈಲಿ ಗಟ್ಟಿಗೊಳ್ಳುತ್ತದೆ.

ಇಲ್ಲಿಯ ಕಾವ್ಯದ ಶೈಲಿ ನಾಟಕೀಯ ಶೈಲಿಯಿಂದ ಕೂಡಿರುವಂತಹದ್ದು ಪಾತ್ರಗ: ಸಂಭಾಷಣೆ ಕಾವ್ಯದ ಮಹತ್ವದ ಭಾಗ. ಕುಮಾರ ರಾಮನ ಕಾವ್ಯದಲ್ಲಿ ಕುಮಾರ ರಾಮ ಮತ್ತು ಅವನ ಸೋದರ ಮಾವನ ನಡುವಿನ ಸಂಭಾಷಣೆ ಹೀಗಿದೆ -

ಸೋದರ ಮಾವ : ನಿನ್ನ ತಂದಿ ನಿನಗೆ ತೆಗೆದ ಹೆಣ್ಣನ್ನು ತನಗೆ ಮಾಡಂತ ಪಾದ ಹಿಡ್ಕೊಂಡಾನ. ನೋಡಿದ್ರೆ ಸೇಮ ನಿನ್ನ ತಾಯಿ ಇದ್ದಾಂಗೆ ಇದ್ದಾಳೆ.

ಅಳಿಯ : ತಾಯಿ ಇದ್ದಂಗ ಇದ್ದಾರೆ ಅಂದ್ರೆ ನನಗೆ ತಾಯಿಯೇ ನೋಡು ಮಾವ, ನನಗೆ ಬ್ಯಾಡೊಲೋ ಮಾವ, ಲೋಕನೆ ಬ್ಯಾಡಯ್ಯ, ದುಷ್ಟ ಲೋಕ ಹುಟ್ಟಿನಿ ನಾನು ಕರ್ಮ ಲೋಕ ಬೆಳದಿನಿ, ದುಷ್ಟ ಗುಣ ಇಲ್ಲಯ್ಯ ನನಗ , ಕರ್ಮ ಗುಣ ಇಲ್ಲಯ್ಯ.

ಸೋದರ ಮಾವ : ನಿಮ್ಮ ತಂದಿ ದುಷ್ಟದವನು , ನಿನ್ನನ್ನು ಎಲ್ಲಿ ಬಚ್ಚಿಡಬೇಕು, ರಾಮ?

ಅಳಿಯ : ನನ್ನ ಜೀವ ಮದುವಿ ಇಲ್ಲದಿದ್ರು ಆಗತೈತಿ. ಲೋಕ ಹ್ಯಾಂಗ ನಡಿತೈತೋ ಹ್ಯಾಂಗಾಗಿ ದುಷ್ಟರಿಗೆ ಕರ್ಮರಿಗೆ ಹ್ಯಾಂಗ ಲಗ್ನ ಮಾಡತಾರ. ಹೆಣ್ಣು -ಗಂಡು ಜತಿ ಅಂತಾರ. ಮಾವ ನಾನು ನನ್ನ ತಂದಿ ಮದ್ವಿ ನೋಡತಿನಿ. ಮದುವೆ ಮಾಡಿಸು .

ಎಂದು ಕುಮಾರ ರಾಮನು ಸೋದರ ಮಾವ ಬಚ್ಚಣ್ಣನಲ್ಲಿ ಕೇಳಿಕೊಳ್ಳುತ್ತಾನೆ[47].

ಬುರ್ರ ಕಥನ ಕಾವ್ಯಗಳಲ್ಲಿ ಆರಂಭದಲ್ಲಿ ಪ್ರಾರ್ಥನೆ ಹಾಡಿ ಅನಂತರ ನೇರ ಕಾವ್ಯದ ಹಾಡಿಗೆ ಪಾದಾರ್ಪಣೆ ಮಾಡುವುದುಂಟು . ಕಾವ್ಯದ ಆರಂಭ "ತಂದಾನ ತಂದಾನ ತಾನ ತಾನ ತಂದಾನ" ಎಂಬ ಪಲ್ಲವಿಯಿಂದ ಆರಂಭಗೊಂಡು ಮುಂದುವರಿಯುವುದು. ಕಾವ್ಯದ ಪದ್ಯದ ಮುಂದಿನ ನುಡಿಗಳ ಕೊನೆಯಲ್ಲೆಲ್ಲ ಪಲ್ಲವಿಯನ್ನು ಹಿನ್ನೆಲೆ ಗಾಯಕರಿಂದ ಮುಂದುವರೆದಿರುತ್ತದೆ. ಕಾವ್ಯದ ಲಯ ಬದ್ಧತೆಗೆ ತಕ್ಕಂತೆ ಹಿನ್ನೆಲೆ ಗಾಯಕರು ಪ್ರತಿ ಪದ್ಯದ ಕೊನೆಯಲ್ಲಿ ಸಂದರ್ಭೋಚಿತ "ತಂದಾನ ತಂದಾನ ತಾನ" "ತಂದನ" "ಕೇಳೋ ತಾಯಿ" ಎಂಬೀ ಪದಗಳು ಕೂಡ ಪಲ್ಲವಿ ಭಾಗದಲ್ಲಿ ಹೇಳುವುದುಂಟು[48]. ಏs, ಆಹ, ಓಹೋ, ಆಹಹಹ ಮುಂತಾದ ರೀತಿಯ ಧಾಟಿ ಕಾವ್ಯ ಸೌಂದರ್ಯಕ್ಕೆ ಪೂರಕವಾಗುತ್ತದೆ.

ಕಥನ ಕಾವ್ಯಗಳು ಸುದೀರ್ಘವಾಗಿ ಹಾಡಬೇಕಾಗಿರುವುದರಿಂದ ಹಾಸ್ಯ ಭರಿತವಾದ ಶೈಲಿ ಕಾವ್ಯಕ್ಕೆ ಹೊಸಕಳೆ ತಂದು ಕೊಡುತ್ತದೆ. ಕೇಳುಗರ ಮನಸ್ಸು ಪ್ರಫುಲ್ಲಿತವಾಗಿರಿಸಲು ಹಾಸ್ಯ ತರುತ್ತಾರೆ. ಕಾವ್ಯದಲ್ಲಿಯ ಕಥೆಗೆ ತಿರುವು ಕೊಡಲು ಅನೇಕ ಸನ್ನಿವೇಶಗಳು ನಿರ್ಮಾಣವಾಗುತ್ತವೆ. ಇವು ಕಥೆಗೆ ಹೊಸ ಮೆರುಗನ್ನು ಕೊಡುತ್ತವೆ. ಕಥೆಯ ಏಕತಾನತೆಯನ್ನು ಕಡಿಮೆ ಮಾಡುತ್ತವೆ.

ಕುಮಾರ ರಾಮನ ಕಾವ್ಯದಲ್ಲಿ ಬರುವ ರತ್ನಾಕ್ಷಿ ಕುಮಾರ ರಾಮನಿಗೆ ತಾಯಿಯ ಸ್ಥಾನದಲ್ಲಿದ್ದವಳು. ಆದರೂ ಕುಮಾರ ರಾಮನ ಸೌಂದರ್ಯಕ್ಕೆ ಮೋಹಗೊಂಡು ನನ್ನ ಜೀವಕ್ಕ ಕಳಿಬೇಕೆಂದು ಕುಮಾರ ರಾಮನಿಗೆ ಒತ್ತಾಯಿಸುತ್ತಾಳೆ. ಕುಮಾರ ರಾಮ ಒಪ್ಪದಿದ್ದಾಗ, ನನ್ನನ್ನು ಕೆಡಿಸಲಿಕ್ಕೆ ಬಂದಿದ್ದಾನೆ ಎಂಬ ಅಪವಾದ ಹೊರಿಸುವಳು. ಈ ಸಂದರ್ಭದಲ್ಲಿ ಬೇಟೆಗಾಗಿ ಅಡವಿಯಲ್ಲಿದ್ದ ಕಂಪ್ಲಿರಾಜ ನೀರು ಕುಡಿಯುವ ಸಂದರ್ಭದಲ್ಲಿ ಹೆಂಡತಿ (ರತ್ನಾಕ್ಷಿ) ಯನ್ನು ನೆನೆಸಿಕೊಂಡು ಕುದುರೆ ಏರಿ ಬೇಟೆ ಬಿಟ್ಟು ಧಾವಿಸಿ ಬರುತ್ತಾನೆ[49]. ಹೀಗೆ ಧಾವಿಸಿ ಬರುವುದಕ್ಕೂ ರತ್ನಾಕ್ಷಿ ಮಾಡುವ ಅಪರಾಧಕ್ಕೂ ಕಥೆಯಲ್ಲಿ ಸಂಬಂಧ ಕಲ್ಪಿಸಲಾಗಿದೆ.

ಬಲಿ ಚಕ್ರವರ್ತಿ ಕಥೆಯಲ್ಲಿ ಸಾಕಿದವರ ಹೆತ್ತವರ ಋಣ ತೀರಿಸಬೇಕೆನ್ನುವ ಆಶಯ ಅದ್ಭುತವಾಗಿ ಮೂಡಿ ಬಂದಿದೆ. ಬಲಿಚಕ್ರವರ್ತಿ ತನ್ನ ಹೆಂಡತಿ ಮಗನನ್ನು ಕರೆದುಕೊಂಡು ತಂದೆ - ತಾಯಿಯವರನ್ನು ನೋಡಲಿಕ್ಕೆ ಹೋಗುತ್ತಾನೆ. ಅವನ ತಂದೆ - ತಾಯಿಯಂದಿರರು ಮಕ್ಕಳ ಮುಖ ನೋಡಿ ಸಾಯಬೇಕೆಂದು ದಾರಿ ಕಾಯುತ್ತಾ ಜೀವ ಹಿಡಿದುಕೊಂಡಿರುತ್ತಾರೆ. ಮಗ - ಸೊಸೆ - ಮೊಮ್ಮಗನ ಮುಖ ನೋಡಿದ ಮೇಲೆ ಜೀವ ಬಿಡುತ್ತಾರೆ. ತಂದೆ - ತಾಯಿಯವರ ಋಣದ ಪ್ರತೀಕವಾಗಿ ತಂದೆಯ ಬೆಳ್ಳಿ, ತಾಯಿಯರಾಗಿ ಫೋಟೊ ತೆಗೆಸಿ ಮಠ ಕಟ್ಟುವನು. ಮಠದಲ್ಲಿ ಅನ್ನ ದಾಸೋಹ ಏರ್ಪಡಿಸುವನು. ಅಲ್ಲಿಂದ ಚಂದ್ರಾವತಿಯ ತಾಯಿ - ತಂದೆಯರನ್ನು ಭೇಟಿ ಮಾಡುತ್ತಾರೆ. ಅವರೂ ಮಗಳು - ಅಳಿಯನ ಮುಖ ನೋಡಿ ಪ್ರಾಣ ಬಿಡಬೇಕೆಂದು ಜೀವ ಹಿಡಿದಿಟ್ಟು ಕೊಂಡಿರುತ್ತಾರೆ. ಅವರೂ ಮುಖ ನೋಡಿದ ಮೇಲೆ ಪ್ರಾಣತ್ಯಾಗ ಮಾಡುತ್ತಾರೆ. ಆಗ ಚಂದ್ರಾವತಿಯ ತಂದೆಯ ಕಂಚಿನ ಫೋಟೋ, ತಾಯಿಯರಾಗಿ ಫೋಟೋ ತೆಗೆಸುವರು. ಕಾಶಿಯಿಂದ ಕಂಚಿಯವರೆಗೂ ತಾತನ ಪೂಜೆಯಾಗಬೇಕೆಂದು ಮೊಮ್ಮಗ ಹೇಳುವನು. ಹಾಗೆಯೇ ಧರ್ಮಾಂಧರಾಜನನ್ನು ಸಾಕಿ ಸಲುಹಿದ ಗೊಡ್ಡಿರವಿಂದ ರಾಜನ ಬಳಿ ಎಲ್ಲರೂ ಬರುವರು. ಅಲ್ಲಿ ರಾಜರಾಣಿ ಮಕ್ಕಳು ಬಂದ ಮೂರನೆ ದಿನಕ್ಕೆ ಸಾಯುವರು. ಅಲ್ಲಿ ಸಾಕಿದ ತಂದೆಯ ಬಂಗಾರದ ಫೋಟೋ, ತಾಯಿಯ ರಾಗಿ ಫೋಟೋ ತೆಗೆಸುವನು. ಅಲ್ಲಿ ಕೈಲಾಸ ಮಠವನ್ನು ಕಟ್ಟಿಸುವನು. ತಾನೇ ಪೂಜೆ ಮಾಡುವನು. ಹೀಗೆ ಹೆತ್ತವರ , ಸಾಕಿದವರ ಋಣ ತೀರಿಸುವುದಲ್ಲದೆ ಧರ್ಮಕಾರ್ಯ ಮಾಡುವುದು. ಈ ರೀತಿ ಕಾವ್ಯ ಸಾಂಸ್ಕೃತಿಕ ಔನ್ನತ್ಯವನ್ನು ಕಟ್ಟಿ ಕೊಡುವುದರ ಜೊತೆಗೆ ಸಮಾಜದ ಆಶೋತ್ತರಗಳಿಗೆ ಸ್ಪಂದಿಸುತ್ತದೆ[50].

ಹೀಗೆ ಈರಮ್ಮನ ಕಥನ ಕಾವ್ಯಗಳಲ್ಲಿ ವಸ್ತು ವೈವಿಧ್ಯತೆ, ಭಾಷಾ ಸೌಂದರ್ಯತೆ, ಭಾಷಾ ಶೈಲಿ, ನಾಟಕೀಯತೆ, ಹಾಸ್ಯ ಶೈಲಿ, ಸನ್ನಿವೇಶ ನಿರ್ಮಾಣ ಮುಂತಾದವುಗಳಿಂದ ಇವು ಸುಂದರ ಕಾವ್ಯಗಳಾಗಿ ಮೂಡಿ ಬಂದಿವೆ. ಆದರೂ ಒಂದು ಕಥೆಯಲ್ಲಿನ ಪ್ರಸಂಗಗಳು ಇನ್ನೊಂದು ಕಥೆಯಲ್ಲಿ ಚಿತ್ರಿಸಲ್ಪಟ್ಟಿವೆ.

1) ಕೃಷ್ಣಗೊಲ್ಲರ ಕಾವ್ಯದಲ್ಲಿ ಶರಬಂಧನ ರಾಜನ ಸಾವಿನ ಗುರುತು [51] ಮತ್ತು ಬಾಲನಾಗಮ್ಮನ ಕಥೆಯಲ್ಲಿ ಬರುವ ಬಾಲವರ್ಧರಾಜನ ಸಾವಿನ ಗುರುತು ಇವುಗಳಲ್ಲಿ ನಿಕಟ ಸಾಮ್ಯತೆಯಿದೆ. ಒಂದನ್ನೊಂದು ಪೂರಕವಾಗಿವೆ.

2) ಕೃಷ್ಣಗೊಲ್ಲರ ಕಾವ್ಯದಲ್ಲಿ ಸಿರಿದೇವಿಯ ಅಗ್ನಿ ಪರೀಕ್ಷೆ [52] ಮತ್ತು ಬಾಲನಾಗಮ್ಮನ ಕಥೆಯಲ್ಲಿ ಬರುವ ಬಾಲನಾಗಮ್ಮನ ಅಗ್ನಿ ಪರೀಕ್ಷೆಗಳಲ್ಲಿ ನಿಕಟ ಸಾಮ್ಯತೆಯಿದೆ. ಒಂದನ್ನೊಂದು ಪೂರಕವಾಗಿವೆ.

3) ಜೀರಗೂರು ಸುಬ್ಬಮ್ಮ ಕೃಷ್ಣಗೊಲ್ಲರ ಕಾವ್ಯದಲ್ಲೂ ಬರುತ್ತಾಳೆ. ಬಾಲನಾಗಮ್ಮನ ಕಾವ್ಯದಲ್ಲೂ ಬರುತ್ತಾಳೆ.

4) ಹುಲಿಯ ಪ್ರಸಂಗ ಕೃಷ್ಣಗೊಲ್ಲರ ಕಾವ್ಯದಲ್ಲೂ ಮತ್ತು ಬಾಲನಾಗಮ್ಮನ ಕಾವ್ಯದಲ್ಲೂ ಬರುತ್ತದೆ.

5) ಕೃಷ್ಣಗೊಲ್ಲರ ಕಾವ್ಯದಲ್ಲಿ ಶರಬಂಧರಾಜನು ತನ್ನ ತಂದೆಯ ಹುಣ್ಣಿಗಾಗಿ ಮೇಟೌಷಧಿ ತರಲು, ಏಳು ಸಮುದ್ರ ದಾಟಿ ಹೋಗುತ್ತಾನೆ [53]. ಬಾಲನಾಗಮ್ಮನ ಕಾವ್ಯದಲ್ಲಿಯೂ ಬಾಲವೃದ್ಧರಾಜನು ಮಾಯಲ್ ಮರಾಠಿಯ ಸಾವಿನ ಗುರುತಾದ ಗಿಳಿ ತರಲು ಏಳು ಸಮುದ್ರ ದಾಟಿ ಹೋಗುತ್ತಾನೆ. ಎರಡೂ ಕಾವ್ಯಗಳಲ್ಲ ನಿಕಟ ಸಾಮ್ಯತೆಯಿದೆ.

6) ಕೃಷ್ಣ ಗೊಲ್ಲರ ಕಾವ್ಯದಲ್ಲಿ ಅಗಸರ ತಿಪ್ಪಣ್ಣ ಹುಲಿಗೆ ಹೊಡೆಯದಿದ್ದರೂ ನಾನು ಹೊಡೆದಿದ್ದೇನೆಂದು ಸುಳ್ಳು ಹೇಳಿ ರಾಜನ ಮಗಳಿಗೆ ಮದುವೆ ಮಾಡಿಕೊಳ್ಳಬೇಕೆನ್ನುವ ಪ್ರಸಂಗ [54]. ಬಾಲನಾಗಮ್ಮನ ಕಾವ್ಯದಲ್ಲಿಯೂ ಬರುತ್ತದೆ. ಅಲ್ಲಿ ಅಗಸರ ತಿಪ್ಪಣ್ಣನಾದರೆ, ಇಲ್ಲಿ ಮಡಿವಾಳ ತಿಪ್ಪಣ್ಣ ನಾಗುತ್ತಾನೆ.

ಇಂತಹ ಅನೇಕ ರೀತಿಯ ಪ್ರಸಂಗಗಳು ಈರಮ್ಮ ಹಾಡುವ ಕಾವ್ಯಗಳಲ್ಲಿವೆ.

ಈರಮ್ಮ ಹಾಡುವ ಕಾವ್ಯಗಳಲ್ಲಿ ಅಲ್ಲಲ್ಲಿ ರಂಜನೀಯವಾಗಿ ಹಾಸ್ಯದ ಚಟಾಕಿಗಳು ಮೂಡಿ ಬಂದು, ಕೇಳುಗರನ್ನು ನಗೆಗಡಲಲ್ಲಿ ತೇಲಿಸುತ್ತವೆ. ಈರಮ್ಮ ಕಥೆಯ ಜೊತೆಯಲ್ಲಿ ಉಪಕಥೆಯನ್ನು ಜೋಡಿಸಿ ಪ್ರಸ್ತುತ ಸಂದರ್ಭಕ್ಕೆ ಹಾಸ್ಯವನ್ನು ಸೇರಿಸಿ ಕಾವ್ಯವನ್ನು ಹಾಡುತ್ತಾಳೆ.

ಕೃಷ್ಣಗೊಲ್ಲರ ಕಾವ್ಯದಲ್ಲಿ ಬರುವ ಹುಬ್ಬಳ್ಳಿ ಡಾಕಟ್ರ್ ಬಗ್ಗೆ ಹೀಗೆ ವರ್ಣಿಸುತ್ತಾಳೆ-

ಅರ್ಧಮಂದಿ ಹುಬ್ಬಳ್ಳಿಗೆ ಹೋದ್ರು
ಅರ್ಧಮಂದಿ ಕೂಡ್ಲಿಗೆ ಬಂದ್ರು
ಆಗ ಹುಬ್ಬಳ್ಳಿದಾಗ ಎಂಥವನೆಂದ್ರೆ
ಹುಬ್ಬಳ್ಳಿ ಡಾಕಟ್ರ್ ರಾಮಯ್ಯ
ಆತನ ಮುಕುಳ್ಯಾಗ ಕಟ್ಟಿಗೆ ಇಟ್ಟು ನಿಂದ್ರಿಸಿದ್ರೆ
ಪೀರ್ಲ್ಲ ದೇವ್ರೇ ಪೀರ್ಲ್ಲ ದೇವ್ರು
ಗಾಳಿಪಟ ರಾದಿ ಇದ್ದಂಗ ಇದಾನ ॥ತಂದಾನ॥ [55]

ಹತ್ರೆಣ್ಣಿ ಬತ್ರೆಣ್ಣಿ ಹಚಿಕ್ಯಂಡ
ಗಮಗಮ ನಾಥ ಹೊಡೀಯಂಗ
ಕೈ ಚೀಲ ಹಿಡ್ಕಂಡು
ಕಿರಕಿ ಫುರುಕು ಕಿರಕಿ ಫುರುಕಂತಾ
ಒಳ್ಳೇ ನೀಟಾಗಿ ಇನ್ನೂ ಬರುತ್ತಾನಮ್ಮ
ಹುಬ್ಬಳ್ಳಿ ಡಾಕ್ಟ್ರು ॥ತಂದಾನ॥ [56]

ಹೆಣ್ಣೆ ಹುಟ್ಟಲಿ ಗಂಡೇ ಹುಟ್ಟಲಿ

ಈಗ ಏನಂತ ಹೆಸರಿಡ್ತಿನಿ

ನನ್ನ ಹೇಂಡ್ತಿ ಹಡದ್ರೆ

ಹೆಣ್ಣು ಮಗಳು ಹುಟ್ಟಿದ್ರೆ

ಹುಣ್ಣಮ್ಮಾ ಅಂತ ಹೆಸರಿಡ್ತಿನಿ [57]

ಈ ರೀತಿಯಾಗಿ ಈರಮ್ಮ ಹಾಡುವ ಕಥನ ಕಾವ್ಯಗಳು ವಾಸ್ತವಿಕ ನೆಲೆಗಟ್ಟಿನ ಮೇಲೆ ನಿಂತಿವೆ. ಅದ್ಭುತ ಸನ್ನಿವೇಶಗಳು, ರೋಚಕ ಅನುಭವಗಳು, ಪವಾಡಗಳು, ಮಾಂತ್ರಿಕ ಶಕ್ತಿ ಮುಂತಾದವುಗಳು ಪ್ರೇಕ್ಷಕರ ಮನ ಸೂರೆಗೊಂಡಿವೆ. ಇಲ್ಲಿಯ ಕಥಾನಾಯಕ / ನಾಯಕಿಯರು, ನಿಷ್ಕಪಟಿಗಳು, ನಿರ್ದೋಷಿಗಳು, ನಿರಹಂಕಾರಿಗಳು ಆಗಿರುವರು. ಇವರು ತಮ್ಮ ಆದರ್ಶ ಗುಣಗಳಿಂದ ಜನಮನವನ್ನು ಗೆದ್ದಿರುವರು.

ಆಧಾರಗಳು

1. ಕೊಮಾರ ರಾಮಯ್ಯನ ಚರಿತ್ರೆ : ಸಂ. ಎಂ. ಎಂ. ಕಲಬುರ್ಗಿ ಪುಟ-02
2. 1) ಹಳೆಯ ಕುಮಾರ ರಾಮನ ಸಾಂಗತ್ಯ - ಪಾಂಚಾಳಗಂಗ
   2) ಹೊಸ ಕುಮಾರ ರಾಮನ ಸಾಂಗತ್ಯ - ಅನಾಮಧೇಯ ಕವಿ
   3) ಕೊಮಾರ ರಾಮಯ್ಯನ ಚರಿತೆ - ಅನಾಮಧೇಯ ಕವಿ
   4) ಬಾಲರಾಮನ ಸಾಂಗತ್ಯ - ಮಹಾಲಿಂಗಸ್ವಾಮಿ
   5) ರಾಮನಾಥ ಚರಿತೆ - ನಂಜುಂಡ
3. ಹೊಸ ಕುಮಾರ ರಾಮನ ಸಾಂಗತ್ಯ : ಪುಟ-27
   ಸಂ. ಎಂ. ಎಂ. ಕಲಬುರ್ಗಿ,ವೀರಣ್ಣ ರಾಜೂರ
4. ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ : ಪುಟ-XVI
   ಸಂ. ಡಾ॥ ಕೆ. ಎಂ. ಮೈತ್ರಿ
5. ಅದೇ ಪುಟ-207
6. ಅದೇ ಪುಟ-208
7. ಲೌಕಿಕ ಸಂಪ್ರದಾಯದ ಚೌಡಿಕೆ ಕಾವ್ಯಗಳು ಪುಟ-190
   ಸಂ. ಅಂಬಳಿಕೆ ಹಿರಿಯಣ್ಣ
8. ಬುಡಿಗ ಜಂಗಾಲು ಪುಟ-86
   ಡಾ॥ ಎನ್. ಆರ್. ವೆಂಕಟೇಶಂ
9. ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ : ಪುಟ-402
   ಸಂ. ಡಾ॥ ಕೆ. ಎಂ. ಮೈತ್ರಿ
10. ಲೌಕಿಕ ಸಂಪ್ರದಾಯದ ಚೌಡಿಕೆ ಕಾವ್ಯಗಳು ಪುಟ-223
    ಸಂ. ಅಂಬಳಿಕೆ ಹಿರಿಯಣ್ಣ
11. ಸ್ಯಾಸಿ ಚಿನ್ನಮ್ಮನ ಕಾವ್ಯ : ಪುಟ-47
    ಸಂ. ಸ.ಚಿ. ರಮೇಶ
12. ಅದೇ ಪುಟ-69-70
13. ಎಲ್ಲಮ್ಮನ ಕಥನ ಕಾವ್ಯ : ಪುಟ-VIII
    ಸಂ. ಡಾ॥ ಕೆ. ಎಂ. ಮೈತ್ರಿ
14. ಕನ್ನಡ ವೃತ್ತಿಗಾಯಕ ಕಾವ್ಯಗಳು : ಪುಟ-IV
    ಸಂ. ಹಂಪ ನಾಗರಾಜಯ್ಯ

15. ನನ್ನ ಸಂಗ್ರಹದಿಂದ

16. ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು ಪುಟ-355
ಡಾ॥ ಜೀ. ಶಂ. ಪರಮಶಿವಯ್ಯ

17. ಬಲಿಚಕ್ರವರ್ತಿ ಕಾವ್ಯ (ನನ್ನ ಸಂಗ್ರಹ)

18. ಆದೋನಿ ಲಕ್ಷ್ಮಮ್ಮನ ಕಾವ್ಯ (ನನ್ನ ಸಂಗ್ರಹ)

19. ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ : ಪುಟ-507
ಸಂ. ಡಾ॥ ಕೆ. ಎಂ. ಮೈತ್ರಿ

20. ಬಾಲನಾಗಮ್ಮನ ಕಾವ್ಯ (ನನ್ನ ಸಂಗ್ರಹ)

21. ಬಲಿಚಕ್ರವರ್ತಿ ಕಾವ್ಯ (ನನ್ನ ಸಂಗ್ರಹ)

22. ಎಲ್ಲಮ್ಮನ ಕಥನ ಕಾವ್ಯ : ಪುಟ-66
ಸಂ. ಡಾ॥ ಕೆ. ಎಂ. ಮೈತ್ರಿ

23. ಬಲಿಚಕ್ರವರ್ತಿ ಕಾವ್ಯ (ನನ್ನ ಸಂಗ್ರಹ)

24. ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ : ಪುಟ-740
ಸಂ. ಡಾ॥ ಕೆ. ಎಂ. ಮೈತ್ರಿ

25. ಅದೇ ಪುಟ-325

26. ಅದೇ ಪುಟ-26

27. ಅದೇ ಪುಟ-427

28. ಅದೇ ಪುಟ-503

29. ಅದೇ ಪುಟ-709

30. ಎಲ್ಲಮ್ಮನ ಕಥನ ಕಾವ್ಯ : ಪುಟ-40
ಸಂ. ಡಾ॥ ಕೆ. ಎಂ. ಮೈತ್ರಿ

31. ಅದೇ ಪುಟ-133

32. ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ : ಪುಟ-672
ಸಂ. ಡಾ॥ ಕೆ. ಎಂ. ಮೈತ್ರಿ

33. ಬಾಲನಾಗಮ್ಮನ ಕಾವ್ಯ (ನನ್ನ ಸಂಗ್ರಹ)

34. ಎಲ್ಲಮ್ಮನ ಕಥನ ಕಾವ್ಯ : ಪುಟ-50
ಸಂ. ಡಾ॥ ಕೆ. ಎಂ. ಮೈತ್ರಿ

35. ಅದೇ ಪುಟ-90

36. ಅದೇ ಪುಟ-13

37. ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ : ಪುಟ-149
ಸಂ. ಡಾ॥ ಕೆ. ಎಂ. ಮೈತ್ರಿ

38. ಅದೇ ಪುಟ-144

39. ಅದೇ ಪುಟ-175

40. ಅದೇ ಪುಟ-119

41. ಅದೇ ಪುಟ-125

42. ಅದೇ ಪುಟ-125

43. ಅದೇ ಪುಟ-141

44. ಅದೇ ಪುಟ-147

45. ಅದೇ ಪುಟ-152

46. ಅದೇ ಪುಟ-153

47. ಅದೇ ಪುಟ-122

48. ಅದೇ ಪುಟ-X-XI

49. ಅದೇ ಪುಟ-140

50. ಬಲಿಚಕ್ರವರ್ತಿ ಕಾವ್ಯ (ನನ್ನ ಸಂಗ್ರಹ)

51. ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ : ಪುಟ-509
ಸಂ. ಡಾ॥ ಕೆ. ಎಂ. ಮೈತ್ರಿ

52. ಅದೇ ಪುಟ-758

53. ಅದೇ ಪುಟ-655

54. ಅದೇ ಪುಟ-549

55. ಅದೇ ಪುಟ-423

56. ಅದೇ ಪುಟ-424

57. ಅದೇ ಪುಟ-427

ಅನುಬಂಧ

ಅಧ್ಯಾಯ - 7

ಜನಪದ ಮಹಾಕಾವ್ಯಗಳು ಮತ್ತು
ಬುರ್ರಕಥಾ ಈರಮ್ಮ ಹಾಡುವ ಕಥನ ಕಾವ್ಯಗಳು

ಅಧ್ಯಾಯ 7

ಜನಪದ ಮಹಾಕಾವ್ಯಗಳು ಮತ್ತು ಈರಮ್ಮ ಹಾಡುವ ಕಥನ ಕಾವ್ಯಗಳು

ಜನಪದ ಮಹಾಕಾವ್ಯ ಎಂಬ ಪರಿಕಲ್ಪನೆ ತೀರ ಇತ್ತೀಚಿನದು. ಇದಕ್ಕಿಂತ ಮೊದಲು ರಾಮಾಯಣ, ಮಹಾಭಾರತ ಕಾವ್ಯಗಳು ಮಾತ್ರ ಮಹಾಕಾವ್ಯಗಳೆಂದು ಪರಿಗಣಿಸಲ್ಪಟ್ಟಿದ್ದವು. ಜನಪದ ಮಹಾಕಾವ್ಯಗಳ ಸಂಗ್ರಹ, ಸಂಪಾದನೆ ಮತ್ತು ಅಧ್ಯಯನ ಪ್ರಾರಂಭವಾದ್ದು, ಪಾಶ್ಚಾತ್ಯ ಜಾನಪದ ಸಾಹಿತ್ಯ ಪ್ರಭಾವದಿಂದ 'Folklore'ನಿಂದ 'ಜಾನಪದ' ಎಂದು ಹೆಸರಿಸಿದಂತೆ, 'FolkEpic' ನಿಂದ 'ಜಾನಪದ ಮಹಾಕಾವ್ಯ' ಎಂದು ಹೆಸರಿಸಲಾಗಿದೆ. ಫಿನ್ ಲ್ಯಾಂಡಿನ 'ಕಾಲೆವಾಲ' ಸ್ಫೂರ್ತಿ ನೀಡಿತು.

ಜಾನಪದ ಮಹಾಕಾವ್ಯ ಎನ್ನುವುದು ಸುದೀರ್ಘವಾದ ಕಾವ್ಯ. ಇದು ಪರಂಪರಾಗತ, ಆಚಿತ ಕಾವ್ಯಕ್ಕಿಂತ ಭಿನ್ನವಾದದ್ದು. ಮೌಖಿಕವಾಗಿದ್ದು. ತಲೆ ಮಾರಿನಿಂದ ತಲೆಮಾರಿಗೆ ಸಾಗಿ ಬರುವಂತಹದ್ದು. ಇದರ ಕರ್ತೃ ಅಜ್ಞಾತ. ಇದು ಒಬ್ಬ ವ್ಯಕ್ತಿಯ ಸೃಷ್ಟಿಗಿಂತ ಸಾಮೂಹಿಕ ಪುನಃ ಸೃಷ್ಟಿ. ಅಂದರೆ ವೈಯಕ್ತಿಕವಾಗಿ ಹುಟ್ಟಿ, ಸಾಮೂಹಿಕವಾಗಿ ಬೆಳೆದು ಮಹಾಕಾವ್ಯದ ರೂಪತಾಳುತ್ತದೆ, ಬೀಜ ಮೊಳಕೆಯೊಡೆದು ಬೆಳೆದು ಹೆಮ್ಮರವಾಗುವಂತೆ, ಯಾವುದೋ ಒಂದು ಘಟನೆ ಕಥೆಯಾಗಿ ಗೀತ ರೂಪ ತಾಳಿ ಕಾವ್ಯವಾಗಿ, ನಿರಂತರ ಬದಲಾವಣೆಯೊಡನೆ ಬೆಳವಣಿಗೆ ಹೊಂದಿ ಮಹಾಕಾವ್ಯವಾಗುತ್ತದೆ. ಕಾಲಾನುಕಾಲದಿಂದ ತಲೆ ಮಾರಿನಿಂದ ತಲೆಮಾರಿಗೆ ಸಾಗಿ ಬರುವ ಕಥೆ, ವ್ಯಕ್ತಿಯಿಂದ ವ್ಯಕ್ತಿಗೆ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನರೂಪ ಪಡೆದುಕೊಳ್ಳುತ್ತದೆ. ವಾಸ್ತವಿಕತೆ, ಕಲ್ಪನೆ, ಇತಿಹಾಸ, ಐತಿಹ್ಯಗಳ ಸಮನ್ವಯ ಇಲ್ಲಿ ಕಂಡು ಬರುತ್ತದೆ. ಹೆಚ್ಚಾಗಿ ನಾಯಕ ಪ್ರಧಾನ ವಸ್ತುವಾಗಿದ್ದು, ಈ ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತದೆ.

1) ಇದು ಅತ್ಯಂತ ದೀರ್ಘವಾದ ಕಾವ್ಯವಾಗಿರುತ್ತದೆ.
2) ಅದನ್ನು ಹೆಚ್ಚಾಗಿ ವೃತ್ತಿಯಾಗಕರೇ ಹಾಡುತ್ತಾರೆ.
3) ಅದು ಪೌರಾಣಿಕ ಹಾಗು ಸಾಂಸ್ಕೃತಿಕ ಪರಂಪರೆಗಳ ಜೊತೆ ಅವಿನಾಭಾವ ಸಂಬಂಧ ಹೊಂದಿರುತ್ತದೆ.
4) ಜನಪದ ಮಹಾಕಾವ್ಯಗಳಲ್ಲಿ ನಿರೂಪಿತ ಸಂಗತಿಗಳೆಲ್ಲ ಒಂದು ಕಾಲದಲ್ಲಿ ನಡೆದಿರುವ ಸತ್ಯ ಘಟನೆ ಅಥವಾ ಚರಿತ್ರೆ ಎನ್ನುವುದನ್ನು ಗಾಯಕರು ಹಾಗೂ ಶ್ರೋತೃಗಲು ನಂಬಿರುತ್ತಾರೆ.
5) ಜನಪದ ಮಹಾಕಾವ್ಯದ ವೀರರು ಸ್ಥಳೀಯ ದೇವಾಲಯಗಳಲ್ಲಿ ಆರಾಧನೆಗೊಳ್ಳುವ ದೈವಿ ಸ್ವರೂಪಗಳಾಗಿ ಕಂಡು ಬರುತ್ತಾರೆ.
6) ಜನಪದ ಮಹಾಕವ್ಯಗಳು ವೀರರ ಸಾಹಸಗಳನ್ನು, ಧಾರ್ಮಿಕ ವ್ಯಕ್ತಿಗಳ ಸಾಧನೆಗಳನ್ನು ವರ್ಣಿಸುತ್ತವೆ. ಉದಾತ್ತ ಮತ್ತು ಗಂಭೀರ ವಿಷಯಗಳ ವರ್ಣನೆಯಾಗಿರುತ್ತದೆ.
7) ಕಾವ್ಯ ಪದ್ಯ ರೂಪದಲ್ಲಾದರೂ ಇರಬಹುದು ಅಥವಾ ಗದ್ಯ ಪದ್ಯ ಮಿಶ್ರಿತವಾಗಿಯಾದರೂ ಇರಬಹುದು.

ಲಾವಣಿ (ಬ್ಯಾಲೆಡ್) ಗಳೇ ಬೆಳೆದು ಜನಪದ ಮಹಾಕಾವ್ಯಗಳಾಗುತ್ತವೆ. ಇಂತಹ ಮಹಾಕಾವ್ಯಗಳು ಸಾಮಾಜಿಕ - ರಾಜಕೀಯ ಸ್ಥಾನಮಾನಗಳಿಂದ ಅಲಕ್ಷಿತವಾಗುವ ಜನ ಸಮುದಾಯದಲ್ಲಿ ಹುಟ್ಟಿ ಕೊಳ್ಳುತ್ತವೆ. ಭಾರತದ ರಾಷ್ಟ್ರೀಯ ಮೂಲ ಪ್ರಜ್ಞೆ ಹೇಗೆ ರಾಮಾಯಣ, ಮಹಾಭಾರತಗಳಲ್ಲಿ ಪ್ರತಿಪಾದನೆಗೊಂಡಿದೆಯೋ ಹಾಗೆಯೇ ಸ್ಥಳೀಯ ಕಾವ್ಯಗಳಲ್ಲೂ ಪ್ರತಿಬಿಂಬಿಸಲ್ಪಟ್ಟಿದೆ. ಪ್ರತಿಯೊಂದು ಕಾವ್ಯವೂ ಬಹಳಷ್ಟು ವಿಶಿಷ್ಟ ಸಾಂಸ್ಕೃತಿ ಅನನ್ಯತೆಯನ್ನು ಪಡೆದಿರುತ್ತದೆ. ಕಲಿತನದ ಹಾಗೂ ವೀರ ಕಾವ್ಯ ಪರಂಪರೆಗಳು ಮೇಲ್ಮಟ್ಟದ ಸಂಸ್ಕೃತಿಯ ಉತ್ಪನ್ನಗಳು[1].

ಈ ಎಲ್ಲ ಲಕ್ಷಣವನ್ನೊಳಗೊಂಡ ಜನಪದ ಮಹಾಕಾವ್ಯದಲ್ಲಿ ಕಥಾನಾಯಕನ ಪಾತ್ರ ಉದಾತ್ತ ವಾಗಿರುತ್ತದೆ. ವ್ಯಾಪಕವಾದ ವಸ್ತು, ಗಾತ್ರ, ಘಟನೆಗಳಿಂದ ಕೂಡಿರುತ್ತದೆ. ಅದು ಒಂದು ಪ್ರದೇಶದ, ದೇಶದ ಅಥವಾ ಒಂದು ಭಾಗದ ಅಥವಾ ಒಂದು ಸಮುದಾಯದ ಸಂಸ್ಕೃತಿಯನ್ನು ಅಭಿವ್ಯಕ್ತ ಪಡಿಸುವ ಸಾಧನವಾಗಿದೆ. ಜನಪದ ಮಹಾಕಾವ್ಯ ಒಬ್ಬ ಸಾಂಸ್ಕೃತಿಕ ವೀರನ ಅಥವಾ ಧಾರ್ಮಿಕ ನಾಯಕನ ಸುತ್ತ ಹೆಣೆದು ಕೊಂಡು ತನ್ನ ವಿಸ್ತಾರ ಮತ್ತು ವ್ಯಾಪ್ತಿಗಳಿಂದ ಅನೇಕ ಮಜಲುಗಳಲ್ಲಿ ಸಾಗುವುದನ್ನು ಕಾಣಬಹುದು. ಇದು ಒಂದು ಸಾಂಸ್ಕೃತಿಕ ನೆಲಗಟ್ಟಿನ ಮೇಲೆ ನಿಂತು ತನ್ನದೇ ಆದ ಧ್ಯೇಯ ಧೋರಣೆಗಳಿಂದ ಕೆಲಸ ಮಾಡುತ್ತದೆ. ಇಲ್ಲಿ ಒಬ್ಬ ನಾಯಕನಿದ್ದರೂ ಹತ್ತಾರು ಪ್ರತಿನಾಯಕರು ಉದ್ದಕ್ಕೂ ಕಾಣಿಸಿಕೊಂಡು ತಮ್ಮ ಸೋಲನ್ನು ಅನುಭವಿಸುತ್ತಾ ಸಾಗುತ್ತಾರೆ. ಅವರು ನಾಯಕನಿಗೆ ಶರಣಾಗಿ ಅವನ ಅನುಯಾಯಿಗಳಾಗುತ್ತಾರೆ. ಇಲ್ಲವೆ ಸರ್ವನಾಶವನ್ನು ಅನುಭವಿಸುತ್ತಾರೆ. ಆ ಯುಗದ ಜೀವನ ಧರ್ಮ ಸಾಂಸ್ಕೃತಿಕ ಪರಿಸರ ಜನರ ಆಶೋತ್ತರಗಳು. ಈ ಕಾವ್ಯಗಳಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಳ್ಳುತ್ತವೆ. ಕಾವ್ಯದುದ್ದಕ್ಕೂ ಕಥಾನಾಯಕನೊಬ್ಬನೇ ವಿಜೃಂಭಿತನಾಗಿ ಕಂಡು ಬರುತ್ತಾನೆ[2].

ಮಹಾಕಾವ್ಯಗಳು ಸಾಮಾನ್ಯವಾಗಿ ಸಾಂಸ್ಕೃತಿಕ ವೀರರ ಅಪ್ರತಿಮ ಸಾಹಸ, ಧೈರ್ಯ, ಬದ್ಧತೆ, ಪ್ರಾಮಾಣಿಕ ಗುಣ, ಉದಾತ್ತಧ್ಯೇಯ, ಉನ್ನತ ವಿಚಾರ ಮುಂತಾದ ಮೌಲ್ಯಗಳಿಂದ ಕೂಡಿರುತ್ತವೆ. ಇವುಗಳ ಕಥಾನಾಯಕರಲ್ಲಿಯ ಆದರ್ಶ ಗುಣ ಅನುಕರಣೀಯವಾದುದು. ಇವರು ದಾನವೀರರು, ದಯಾವೀರರು, ಧರ್ಮವೀರರೂ ಆಗಿರುತ್ತಾರೆ. ಈ ನಾಯಕರು ಜೀವನದುದ್ದಕ್ಕೂ ತಾವು ನಂಬಿಕೊಂಡ ಮೌಲ್ಯಗಳಿಗಾಗಿಯೇ ಹೋರಾಟ ನಡೆಸುತ್ತಾರೆ. ಅದಕ್ಕಾಗಿ ಸಕಲವನ್ನೂ ತ್ಯಾಗ ಮಾಡಲು ಸಿದ್ಧರಿರುತ್ತಾರೆ. ದುಷ್ಟ ಶಿಕ್ಷೆ ಶಿಷ್ಟ ರಕ್ಷಣೆಗಾಗಿ ಹೋರಾಡುತ್ತಾರೆ. ದುಷ್ಟರೊಡನೆ ಹೋರಾಡಿ ಪ್ರಾಣತ್ಯಾಗ ಮಾಡುತ್ತಾರೆ. ವೀರ ಮರಣವನ್ನಪ್ಪುತ್ತಾರೆ. ವೀರ ಮರಣದ ನಂತರ ಆತನ ಅನುಯಾಯಿಗಳು ದೇವರೆಂದು ಪೂಜಿಸುತ್ತಾರೆ. ಈ ಮೌಲ್ಯಗಳೇ ಮುಂದೆ ಕಾವ್ಯ ಕಟ್ಟಿ ಹಾಡಲು ಕಾರಣಗಳಾಗುತ್ತವೆ. ಇಂತಹ ವೀರನಾಯಕರು ದೇವತೆಗಳಾಗುತ್ತಾರೆ. ಇವರ ಹೆಸರಿನಲ್ಲಿ ಜಾತ್ರೆ, ಉತ್ಸವ, ಹಬ್ಬ, ಆಚರಣೆಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಇವರನ್ನು ಕುರಿತು ಕಾವ್ಯಗಳನ್ನು ಕಟ್ಟಿ ಹಾಡುತ್ತಾರೆ. ಅಂದರೆ ಇಂತಹ ಕಾವ್ಯದ ನಾಯಕರು ಕಾಲ್ಪನಿಕ ವ್ಯಕ್ತಿಗಳಲ್ಲ. ಅವರ ವಾಸ್ತವವಾಗಿ ಸಮಾಜದಲ್ಲಿ ಬಾಳಿ ಬದುಕಿದವರು. ಇವರು ಕಾಲ್ಪನಿಕ ವ್ಯಕ್ತಿಗಳಾಗಿರದೆ ಎಂದೋ ಒಂದು ಕಾಲದಲ್ಲಿ ಸಮಾಜದಲ್ಲಿ ಬಾಳಿ ಬದುಕಿ ವಿಧಿಯ ಕೈವಾಡದಿಂದಲೋ, ಇತರರ ಕೈವಾಡದಿಂದಲೋ ಅತೀವ ಸಂಕಟಕ್ಕೆ ಒಳಗಾದವರು.

ಬದುಕಿನಲ್ಲಿ ಕಷ್ಟ - ನಷ್ಟಗಳನ್ನು ಅನುಭವಿಸಿದವರು. ತಮ್ಮ ಸುಂದರವಾದ ಬದುಕನ್ನು ದುರಂತಕ್ಕೆ ಈಡು ಮಾಡಿಕೊಂಡವರು. ತಮ್ಮದಲ್ಲದ ತಪ್ಪಿಗಾಗಿ ತಮ್ಮ ಪ್ರಾಣವನ್ನೇ ಈಡಾಗಿಡುವರು. ಅವರ ತ್ಯಾಗ , ಬಲಿದಾನ, ನಿಷ್ಠೆ, ಆದರ್ಶಗಳು ಜನಪದದ ಮನಸ್ಸನ್ನು ಕಲಕುತ್ತವೆ. ಅವರ ವ್ಯಕ್ತಿತ್ವದ ಪ್ರಭಾವ ಅನೇಕ ದಿನಗಳವರೆಗೆ ನಿಲ್ಲುತ್ತದೆ. ಅವರ ಬಗ್ಗೆ ಕಥೆಗಳು ಹುಟ್ಟಿಕೊಳ್ಳುತ್ತವೆ. ಪ್ರಸಾರಗೊಳ್ಳುತ್ತವೆ. ಕಾಲ ದೇಶಗಳ ಸಂಚಾರದಲ್ಲಿ ಸಾಕಷ್ಟು ಬದಲಾವಣೆಯನ್ನು ಸಾಧಿಸಿಕೊಂಡು ಮೊದಲು ಏಕ ಕರ್ತೃಕವಾಗಿದ್ದು ಕ್ರಮೇಣ ಬಹುಕರ್ತೃಕ ರೂಪವನ್ನು ಧರಿಸುತ್ತವೆ, ಎಂದರೆ ಸಾಮೂಹಿಕ ಪುನಸ್ಸೃಷ್ಟಿಗೆ ಒಳಗಾಗುತ್ತವೆ [3].

ಇಂತಹ ಸಾಹಸಮಯ ಗಾಥೆ ತಲೆ ಮಾರಿನಿಂದ ತಲೆ ಮಾರಿಗೆ ಹರಿದು ಅನೇಕ ವೃತ್ತಿಗಾಯಕರಲ್ಲಿ ಪುನರ್ ಸೃಷ್ಟಿಗೊಳ್ಳುತ್ತ ಹೋಗುತ್ತದೆ. ಅಂದರೆ , ಒಬ್ಬ ವೀರನ ಸಾಹಸಮಯ ಗಾಥೆ ಜನಮನವನ್ನು ಮುಟ್ಟಿದಾಗ ಪುರಾಣವಾಗಿ ಮಾರ್ಪಟ್ಟು ಕಥನ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಆಗ ವಸ್ತು ನಿಷ್ಠ ಕಾವ್ಯವೊಂದು ರೂಪ ಪಡೆಯುತ್ತದೆ. ಈ ಕಾವ್ಯ ಕಂಠಸ್ಥಗೊಂಡು ಕಾಲಾಂತರದಲ್ಲಿ ಬದಲಾವಣೆಗಳನ್ನು ಪಡೆಯುತ್ತ, ಹಿಗ್ಗುತ್ತ ತನ್ನ ಗಾತ್ರ ಪಾತ್ರ ಸೂತ್ರಗಳನ್ನು ವಿಸ್ತರಿಸಿಕೊಳ್ಳುತ್ತ ಹೋಗುತ್ತದೆ [4]. ಈ ರೀತಿಯ ರಚನೆ ಪಡೆದ ಕಾವ್ಯ ವ್ಯಷ್ಟಿಯಿಂದ ಸಮಷ್ಟಿಯತ್ತ ತಿರುಗಿ ಒಂದು ಸಮುದಾಯದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. "ಗುಂಪಿನ ಸಮಷ್ಟಿ ಪ್ರಜ್ಞೆಯ ಪ್ರತೀಕ ರೂಪವಾಗಿ ಆ ಜನತೆಯ ಔನ್ನತ್ಯದ ಸಂಕೇತವಾಗಿ ಅವಿರ್ಭವಿಸುತ್ತದೆ. ಹೀಗೆ ಅವಿರ್ಭವಿಸುವ ರಚನೆ ಮಹಾಕಾವ್ಯ ಎನಿಸಿಕೊಳ್ಳುತ್ತದೆ. ಈ ರಚನೆ ಏಕ ಕವಿ ಕೃತವಾಗಿರದೆ, ಸಮಷ್ಟಿಕೃತವಾಗಿರುವುದರಿಂದ ಇದನ್ನು ಜನಪದ ಮಹಾಕಾವ್ಯ" (Folk Epic) ಎಂದು ಕರೆಯಲಾಗಿದೆ[5]. ಇಂತಹ ಕಾವ್ಯ ಯಾವುದೋ ಒಬ್ಬ ಅನಾಮಧೇಯ ವ್ಯಕ್ತಿಯಿಂದ ರಚನೆಗೊಂಡು ಕಾಲಾಂತರದಲ್ಲಿ ಅನೇಕ ಪ್ರಸಂಗಗಳು ಹುಟ್ಟಿ ಕಥೆ, ಉಪ ಕಥೆ, ಅಡ್ಡ ಕಥೆ ಮುಂತಾದವುಗಳು ಸೇರಿಕೊಂಡು ಕಥಾ ವಸ್ತುವಿನ ಪರಿಧಿ, ಹಿಗ್ಗುತ್ತ ಹೋಗುತ್ತದೆ. ಹಲವಾರು ಕರ್ತೃಗಳಿಂದ ಕಥೆಯ ಹಂದರ ಬೆಳೆಯುತ್ತಲೇ ಹೋಗುತ್ತದೆ. ಜನಪದ ಗೀತಗಳನ್ನು ಈಗಿರುವಂತೆ ನೋಡಿ ಅವುಗಳ ರಚನಾ ಕಾಲವನ್ನು ಹೇಳಲು ಸಾಧ್ಯವಿಲ್ಲ. ಸ್ವರೂಪ ಲಕ್ಷಣದಿಂದ ಅವು ಸನಾತನವೂ ಅಲ್ಲ ಅರ್ವಾಚೀನವೂ ಅಲ್ಲ. ಅವುಗಳ ಮೂಲವು ಪ್ರಾಚೀನ ಕಾಲ ಗರ್ಭದಲ್ಲಿರುತ್ತದೆ. ಅಲ್ಲಿಂದ ಅದು ಸತ್ವ ಗ್ರಹಣ ಮಾಡಿ ನಿರಂತರವೂ ಹೊಸದಾಗಿ ಪಲ್ಲವಿಸುತ್ತ ಕುಸುಮಿಸುತ್ತ ಫಲಿಸುವ ಸಾಹಿತ್ಯ ಸಸ್ಯಗಳಿವು. ಪ್ರೌಢ ಸಾಹಿತ್ಯದ ಪ್ರಭಾವ ಇವುಗಳಿಗೆ ಬಿದ್ದಿರುವಂತೆ ಇವುಗಳ ಪ್ರಭಾವ ಪ್ರೌಢ ಕೃತಿಗಳ ಮೇಲೂ ಆಗಿದೆ[6]. ಇವು ಗ್ರಂಥಸ್ಥ ರೂಪ ಪಡೆದವುಗಳಲ್ಲ. ಮೌಖಿಕ ಪರಂಪರೆಯಿಂದ ಉಕ್ಕಿ ಹರಿದು ಬಂದವುಗಳು.

"ಮಹಾಕಾವ್ಯಗಳ ಮೂಲವನ್ನು ಶೋಧಿಸ ಹೋದರೆ ಅವು ರಾಷ್ಟ್ರೀಯ ವೀರರ ಅದ್ಭುತ ಸಾಧನೆಗಳ ಸ್ಮರಣೆಗಳು, ತಲೆ ಮಾರುಗಳಿಂದ ಹರಿದು ಬಂದು ಹಿಂದೆ ಸಂಭವಿಸಿದ ಹೋರಾಟಗಳು ಯುದ್ಧಗಳು ರಾಷ್ಟ್ರೀಯ ಅನನ್ಯತೆಗಳಾಗಿ ಒಂದು ವರ್ಗದಲ್ಲಿ ಆವಿರ್ಭವಿಸಿದ ಮಹಾವೀರರ ಹುಟ್ಟು ಸಾಹಸಗಳು ಅವರ ಜನಪ್ರಿಯತೆ ಕೀರ್ತಿಗಳನ್ನು ಅವರ ಕುಟುಂಬದವರು ಎತ್ತಿ ಹಿಡಿದು ಸ್ಥಿರೀಕರಣಗೊಳಿಸಿರುವುದು, ವಿವಿಧ ರಾಜರು, ಮಾಂಡಳಿಕರು, ದಂಡನಾಯಕರು ತಮ್ಮ ಆಸ್ಥಾನಗಳಲ್ಲಿ , ತಮ್ಮ ಪ್ರವಾಸಗಳಲ್ಲಿ ತಮ್ಮ ಸಾಧನೆಗಳನ್ನು ಕೊಂಡಾಡಿ ಹಾಡುವ ಹಾಡುಗಾರಿಕೆಗೆ ಅವಕಾಶ ನೀಡಿರುವುದು, ತಮ್ಮ ತಲೆಮಾರಿನ ಹಿರಿಯರ ವೀರ

ಗಾಥೆಗಳ ಬಗ್ಗೆ ಹಾಡು ಕಟ್ಟಿ ಹಾಡುವ ಸಂಪ್ರದಾಯವನ್ನು ಬಳಕೆಗೆ ತಂದುದು ಕಂಡು ಬರುತ್ತದೆ"[7]. ಮಹಾಕಾವ್ಯ ಎನ್ನುವುದು ಒಂದು ಜನಾಂಗ ಕೃತಿ, ಅದು ಒಂದು ಜನಾಂಗಕ್ಕೆ ಸೇರಿದ್ದು ಆ ಜನರ ಪ್ರಾಚೀನ ನಾಯಕರ ವೀರಕಥೆಯೇ ಅದರ ವಸ್ತು. ಜನರ ನಂಬಿಕೆ, ಜೀವನ ದೃಷ್ಟಿಗಳನ್ನು ಕಾವ್ಯ ಪ್ರತಿಬಿಂಬಿಸುತ್ತದೆ[8]. ಕಾವ್ಯ ವಸ್ತುವನ್ನು ಜನರು (ಗಾಯಕರು) ಸ್ಮರಣೆಯಲ್ಲಿರಿಸಿಕೊಂಡು ಆಶು ಕವಿತ್ವ ಶಕ್ತಿಯಿಂದ ಆಯಾ ಕಾಲಕ್ಕೆ ತಕ್ಕಂತೆ ಬದಲಾವಣೆಗೊಳಪಡಿಸುತ್ತ ಹೋಗುತ್ತಾರೆ. ಇಲ್ಲಿ ರಾಜ - ರಾಣಿ, ದೇವಾನು - ದೇವತೆಗಳು, ನಾಯಕ - ನಾಯಕಿ, ಸಾಧು - ಸಂತರು, ಕಿನ್ನರ - ಕಿಂಪುರುಷರು, ಪ್ರಾಣಿ - ಪಶು - ಪಕ್ಷಿಗಳು, ಪ್ರಾಕೃತಿಕ ಸಂಪತ್ತು ಇವರೆಲ್ಲ ಆದರ್ಶ ಚಿತ್ರಣ ಇಲ್ಲದ್ದರೂ, ಇವರೆಲ್ಲ ಜನಸಾಮಾನ್ಯರಂತೆ ವರ್ತಿಸುತ್ತಾರೆ. ಇದಕ್ಕೆ ಕಾರಣ ಜಾನಪದ ಮನೋಧರ್ಮವೆನ್ನಬಹುದು. ಶಿಷ್ಟ ಕಾವ್ಯಗಳಲ್ಲಿಯಂತೆ ಇಲ್ಲಿಯ ಕಾವ್ಯಗಳಲ್ಲಿ ಉಪಮೆ, ಅಲಂಕಾರ , ರೂಪಕ, ಪ್ರತಿಮೆ, ಛಂದಸ್ಸು, ವ್ಯಾಕರಣ, ರಸ ಧ್ವನಿ - ಔಚಿತ್ಯಾದಿಗಳು ಪಜ್ಞಾಪೂರ್ವಕವಾಗಿ ತರದಿದ್ದರೂ, ಇವೆಲ್ಲವುಗಳು ಸಹಜವಾಗಿಯೇ ಬಳಕೆಗೊಳ್ಳುತ್ತವೆ

ಈ ರೀತಿಯ ಅನೇಕ ಲಕ್ಷಣಗಳುಳ್ಳ ಮಹಾಕಾವ್ಯಗಳು ಭಾರತೀಯ ಪರಂಪರೆಯಲ್ಲಿ ಕಂಡು ಬರುತ್ತವೆ. ಅವು ಹೀಗಿವೆ.

1) ಲೋರಿಕ್ ಚಂದಾ (Lorik Chanda) ಮಹಾಕಾವ್ಯ : ಮಧ್ಯ ಪ್ರದೇಶ, ಉತ್ತರ ಪ್ರದೇಶ, ಬಿಹಾರಗಳಲ್ಲಿ
2) ಅಲ್ಹಾ (Alha) ಮಹಾಕಾವ್ಯ : ಉತ್ತರ ಪ್ರದೇಶದ ಹಿಂದಿ ಭಾಷಾ ಪ್ರಧಾನವಾದ ಪ್ರದೇಶದಲ್ಲಿ.
3) ಅಣ್ಣನ್ಮಾರ್ (Annanmar) ಮಹಾಕಾವ್ಯ : ತಮಿಳ್ನಾಡಿನ ಕೊಂಗು ಪ್ರದೇಶದಲ್ಲಿ.
4) ಬಿಲ್ಲಿನ ಹಾಡು (Bow song) ಮಹಾಕಾವ್ಯ : ತಮಿಳ್ನಾಡಿನ ತಿರುನೆಲ್ವೇಲಿ ಪ್ರದೇಶದಲ್ಲಿ
5) ದೇವನಾರಾಯಣ (Devanarayana) ಮಹಾಕಾವ್ಯ : ರಾಜಸ್ಥಾನದಲ್ಲಿ
6) ಧೋಲಮಾರು (Dholamaru) ಮಹಾಕಾವ್ಯ : ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳ ಪಶ್ಚಿಮ ಭಾಗಗಳಲ್ಲಿ.
7) ಗೂಗಾ (Guga) ಮಹಾಕಾವ್ಯ : ರಾಜಸ್ಥಾನ , ಪಂಜಾಬಿನ ಹರಿಯಾಣ, ಉತ್ತರ ಪ್ರದೇಶದ ಈಶಾನ್ಯ ಭಾಗಗಳಲ್ಲಿ.
8) ಜುಂಜಪ್ಪ (Junjappa) ಮಹಾಕಾವ್ಯ : ಕರ್ನಾಟಕದಲ್ಲಿ
9) ಪಾಬೂಜಿ (Pabuji) ಮಹಾಕಾವ್ಯ : ರಾಜಸ್ಥಾನದಲ್ಲಿ
10) ಪಲ್ನಾಡು (Palnadu) ಮಹಾಕಾವ್ಯ : ಆಂಧ್ರಪ್ರದೇಶದ ತೆಲುಗು ಭಾಷಾ ಪ್ರಧಾನವಾದ ಪ್ರದೇಶದಲ್ಲಿ
11) ಎಲ್ಲಮ್ಮ (Ellamma) ಮಹಾಕಾವ್ಯ : ಉತ್ತರ ಕರ್ನಾಟಕದಲ್ಲಿ
12) ತೆಯ್ಯಂ (Teyyam) ಮಹಾಕಾವ್ಯ : ಕೇರಳದಲ್ಲಿ
13) ಪಾಡ್ದನ (Paddana) ಮಹಾಕಾವ್ಯ : ಕರಾವಳಿ ಕರ್ನಾಟಕದ ತುಳುನಾಡಿನಲ್ಲಿ[9].

ಕರ್ನಾಟಕದಲ್ಲಿಯೂ ಜನಪದ ಮಹಾಕಾವ್ಯಗಳನ್ನು ಹಾಡುವ ವೃತ್ತಿಗಾಯಕರ ಬಹುದೊಡ್ಡ

ಪರಂಪರೆಯಿದೆ. ಶಿಷ್ಟ ಸಾಹಿತ್ಯದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ (ಕಾವ್ಯ)ವನ್ನು ಧಾರ್ಮಿಕ (ಆಗಮಿಕ) ಮತ್ತು ಲೌಕಿಕ ಕಾವ್ಯಗಳೆಂದು ವಿಂಗಡಿಸಿದಂತೆ, ಜಾನಪದ ವಿದ್ವಾಂಸರೂ ವೃತ್ತಿಗಾಯಕರು ಮತ್ತು ಅವರ ಸಂಪ್ರದಾಯದ ಹಿನ್ನೆಲೆಯಿಂದ ಹಾಡುವ ಧಾರ್ಮಿಕ ಮತ್ತು ಲೌಕಿಕ ಕಾವ್ಯಗಳನ್ನು ಗುರುತಿಸಿ, ಕನ್ನಡದಲ್ಲಿ ಹೆಚ್ಚಾಗಿ ಮಹಾಕಾವ್ಯಗಳನ್ನು ವೃತ್ತಿಗಾಯಕರೇ ಹಾಡುತ್ತಾರೆ. ಕಾವ್ಯಗಳ ಅಧ್ಯಯನಕ್ಕಾಗಿ ಡಾ. ಜೀ. ಶಂ. ಪರಮಶಿವಯ್ಯನವರು ಧಾರ್ಮಿಕ ಕಥೋಪಜೀವಿಗಳು, ಲೌಕಿಕ ಕಥೋಪಜೀವಿಗಳೆಂದು ವೃತ್ತಿ ಗಾಯಕರನ್ನು ವಿಂಗಡಿಸಿ ಧಾರ್ಮಿಕ ಮತ್ತು ಲೌಕಿಕ ಹಿನ್ನೆಲೆಯಿಂದ ಹಾಡುವ ಕಾವ್ಯಗಳನ್ನು ಗುರುತಿಸಿದ್ದಾರೆ. ಮುಂದುವರೆದು 'ಲೌಕಿಕ-ಧಾರ್ಮಿಕ' ಎಂಬ ವಿಭಜನೆ ಜನಪದ ಸಾಹಿತ್ಯದಲ್ಲಿ ಅಷ್ಟೇನೂ ಉಚಿತವಲ್ಲ. ಏಕೆಂದರೆ 'ಧಾರ್ಮಿಕ' ಕಲಾವಿದರೆಂದು ಕರೆಸಿಕೊಳ್ಳುವವರೂ ಅನೇಕ ಲೌಕಿಕ ಕಥೆಗಳನ್ನು ಹಾಡುತ್ತಾರೆ. ಮಾದೇಶ್ವರ, ಮಂಟೇ ಸ್ವಾಮಿ, ಎಲ್ಲಮ್ಮ ಮುಂತಾದ ಕತೆಗಳು ಆಯಾ ಒಕ್ಕಲಿನವರಿಗೆ ಮೀಸಲಾದರೂ ಇತರರೂ ಆ ಕತೆಗಳ ಸ್ವಾರಸ್ಯಕ್ಕೆ ಮಾರು ಹೋಗಿ, ಆ ದೇವರುಗಳ ಮಹಿಮೆಗೆ ಮನಸೋತು ಅನನ್ಯ ಶ್ರದ್ಧೆಯಿಂದಲೇ ಎಲ್ಲ ಕತೆಗಳನ್ನು ಕೇಳುತ್ತಾರೆ. ಸಾಮಾನ್ಯರ ಕಲ್ಪನೆಯಲ್ಲಿ ಎಲ್ಲ ದೇವರಿಗೂ ಸಮಾನವಾದ ಸ್ಥಾನವೇ ಇರುವುದರಿಂದ ಒಂದೊಂದು ದೈವವನ್ನು ಕುಲದೈವ , ಆರಾಧ್ಯ ದೈವವೆಂದು ಒಪ್ಪಿಕೊಂಡರೂ ಕಷ್ಟ ಬಂದಾಗ ಹತ್ತು ಹಲವು ದೈವಗಳ ಮರೆ ಹೊಗುವುದಕ್ಕೂ ಅವರು ಹಿಂದೆಗೆಯುವುದಿಲ್ಲ. ಹೀಗಾಗಿ ಎಲ್ಲ ದೈವಗಳ ಕತೆಗಳನ್ನೂ ಮೆಚ್ಚುವ, ಗೌರವಿಸುವ ಪರಿಪಾಠ ಜನರಲ್ಲಿ ಬಂದಿದೆ. ಮಂಟೇ ಸ್ವಾಮಿಯ ಒಕ್ಕಲು, ಮಾದೇಶ್ವರನ ಒಕ್ಕಲು ನೆರೆ ಹೊರೆಯವರು ದೈವದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಎಂದೂ ವಿರಸಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಹೀಗಾಗಿ ಈ ವೃತ್ತಿಗಾಯಕರೆಲ್ಲ ಬೇರೆ ಬೇರೆ ದೈವಗಳ ಹೆಸರಿನಲ್ಲಿ ನಡೆದುಕೊಂಡರೂ, ಉಳಿದ ಸಂದರ್ಭಗಳಲ್ಲಿ ಪರಸ್ಪರ ಪ್ರಭಾವಕ್ಕೆ ಒಳಗಾಗಿ ಒಂದೇ ಪ್ರದೇಶದ ಜನಪದ ಗಾಯಕರ ಸಾಹಿತ್ಯದಲ್ಲಿ ಸಾಕಷ್ಟು ಸಾಮ್ಯವನ್ನು ಕಾಣಲು ಸಾಧ್ಯವಾಗುತ್ತದೆ. ಇವರ ಕತೆಗಳನ್ನು ಅವರೂ ಅವರ ಕತೆಗಳನ್ನು ಇವರೂ ಕೆಲವು ಲೌಕಿಕ ಕತೆಗಳಿಗೆ ಸಂಬಂಧಿಸಿದಂತೆ ಕಲಿಯುವುದನ್ನು ಕಾಬಹುದು. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಸಂಪ್ರದಾಯದ ಕತೆಗಾರರೂ ತಮ್ಮ ಧಾರ್ಮಿಕ ಕಥೆಯ ಜೊತೆಗೆ, ಅನ್ಯ ದೈವಗಳಿಗೆ ಸಂಬಂಧಿಸಿದ ಅನ್ಯ ವಸ್ತುಗಳಿಗೆ ಸಂಬಂಧಿಸಿದ ಅನೇಕ ಕತೆಗಳನ್ನು ಕಲಿಯುತ್ತಾರೆ. ನೀಲಗಾರರೂ, ದೇವರ ಗುಡ್ಡರೂ ತಮ್ಮ ತಮ್ಮ ಧಾರ್ಮಿಕ ಕಥೆಯ ಜೊತೆಗೆ ಉಳಿದ ಲೌಕಿಕ ಕಥೆಗಳನ್ನು ಇಬ್ಬರೂ ಅಭ್ಯಸಿಸುತ್ತಾರೆ[10]. ಆದರೂ ಧಾರ್ಮಿಕ ಕಾವ್ಯಗಳು ದೈವ, ಧರ್ಮ,ಭಕ್ತಿ , ತತ್ತ್ವ ಮುಂತಾದ ಮೌಲ್ಯಗಳಿಂದ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದರೆ , ಲೌಕಿಕ ಕಾವ್ಯಗಳು ಸಾಮಾಜಿಕ ಜೀವನದ ವೀರ ಛಲ, ತ್ಯಾಗ ಸಾಮಾಜಿಕ ಪ್ರಜ್ಞೆ, ಚರಿತ್ರೆ ಈ ಮುಂತಾದ ಮೌಲ್ಯಗಳಿಂದ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

ಕಂಸಾಳೆ ಅಥವಾ ದೇವರಗುಡ್ಡರ ಸಂಪ್ರದಾಯದ ಮಲೆಯ ಮಾದೇಶ್ವರ ಕಾವ್ಯ,

ನೀಲಗಾರರು ಅಥವಾ ಮಂಟೆದಯ್ಯ ಸಂಪ್ರದಾಯದ ಮಂಟೇ ಸ್ವಾಮಿ ಕಾವ್ಯ, ಕಾಡುಗೊಲ್ಲ ಸಂಪ್ರದಾಯದ ಜುಂಜಪ್ಪನ ಕಾವ್ಯ, ಹಾಲುಮತ ಅಥವಾ ಡೊಳ್ಳಿನ ಸಂಪ್ರದಾಯದ ಹಾಲುಮತ ಕಾವ್ಯ, ಗೊರವ ಸಂಪ್ರದಾಯದ ಮೈಲಾರಲಿಂಗನ ಕಾವ್ಯ, ಎಲ್ಲಮ್ಮ ಸಂಪ್ರದಾಯದ ಎಲ್ಲಮ್ಮನ ಕಾವ್ಯ, ತುಳು ಪಾಡ್ದನಗಳು ಮುಂತಾದವುಗಳು ಧಾರ್ಮಿಕ ಸಂಪ್ರದಾಯದ ಮಹಾಕಾವ್ಯಗಳಾಗಿವೆ.

ಕುಮಾರ ರಾಮನ ಕಾವ್ಯ, ಬಾಲನಾಗಮ್ಮನ ಕಾವ್ಯ, ಕೃಷ್ಣ ಗೊಲ್ಲರ ಕಾವ್ಯ (ಕಾಂಭೋಜರಾಜನ ಕಾವ್ಯ) ಮುಂತಾದ ಅನೇಕ ಕಾವ್ಯಗಳು ಲೌಕಿಕ ಸಂಪ್ರದಾಯದ ಕಾವ್ಯಗಳಾಗಿವೆ. ಈ ಎಲ್ಲ ಧಾರ್ಮಿಕ ಮತ್ತು ಲೌಕಿಕ ಮಹಾ ಕಾವ್ಯಗಳನ್ನು ಆಯಾ ಸಂಪ್ರದಾಯದವರು ಪರಂಪರಾನುಗತವಾಗಿ ಹಾಡುತ್ತ ಬಂದಿದ್ದಾರೆ. ಅನೇಕ ಕಾವ್ಯಗಳು ಸಂಪ್ರದಾಯದವರು ಬಿಟ್ಟು ಬೇರೆ ಬೇರೆ ವೃತ್ತಿಗಾಯಕರು ಹಾಡುವುದನ್ನು (ಕಥೆ ಹೇಳುವುದನ್ನು) ಕಾಣುತ್ತೇವೆ. ಉದಾ. ಎಲ್ಲಮ್ಮನ ಕಾವ್ಯ ಎಲ್ಲಮ್ಮನ ಸಂಪ್ರದಾಯದವರೂ ಹಾಡುತ್ತಾರೆ. ಅನ್ಯರೂ ಹಾಡುತ್ತಾರೆ. ಅದರಂತೆ ಕುಮಾರರಾಮನ ಕಾವ್ಯ, ಕಾಂಭೋಜ ರಾಜನ ಕಾವ್ಯ, ಬಾಲನಾಗಮ್ಮನ ಕಾವ್ಯ. ಈ ಮುಂತಾದವುಗಳು ಬೇರೆ ಬೇರೆ ಸಂಪ್ರದಾಯದವರು ಹಾಡುವುದನ್ನು ಕಾಣುತ್ತೇವೆ. ಹೀಗಾಗಿ ಕಾವ್ಯಗಳ ರೂಪ, ವಸ್ತು, ಭಾಷೆ, ತಂತ್ರ ಶೈಲಿ ಮುಂತಾದ ಅನೇಕ ಅಂಶಗಳಲ್ಲಿ ವ್ಯತ್ಯಾಸ ಉಂಟಾಗುತ್ತವೆ. ಒಂದೇ ವಸ್ತು ಬೇರೆ ಬೇರೆ ಸಂಪ್ರದಾಯದವರು ವಿಭಿನ್ನ ರೀತಿಯಲ್ಲಿ ಕಥೆ ಹೇಳುತ್ತಾರೆ.

ಈ ಎಲ್ಲ ಅಂಶಗಳು ಬುರ್ರ ಕಥಾ ಈರಮ್ಮ ಹಾಡುವ ಕಾವ್ಯಗಳಲ್ಲಿ ಕಂಡು ಬರುತ್ತವೆ. ಈ ದೃಷ್ಟಿಯಿಂದ ಎಲ್ಲಮ್ಮನ ಕಾವ್ಯ, ಕುಮಾರ ರಾಮನ ಕಾವ್ಯ,ಕೃಷ್ಣ ಗೊಲ್ಲರ ಕಾವ್ಯ , ಬಾಲನಾಗಮ್ಮನ ಕಾವ್ಯ ಮುಂತಾದವುಗಳು ಪ್ರಮುಖವಾಗುತ್ತವೆ.

ಕುಮಾರ ರಾಮನ ಕಾವ್ಯ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಚದುರಿ ಹೋಗಿವೆ. ಅಷ್ಟೇ ಅಲ್ಲ ಆಂಧ್ರದಲ್ಲೂ ಈ ಕಾವ್ಯವನ್ನು ಹಾಡುತ್ತಾರೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಚದುರಿ ಹೋಗಿರುವ ಕನ್ನಡದ ಕಡುಗಲಿ ಕುಮಾರರಾಮನಿಗೆ ಸಂಬಂಧಿಸಿದ ಜನಪದ ಗೀತೆಗಳ ಸಂಗ್ರಹ ನಡೆಸಿ ಅಧ್ಯಯನ ರೂಪದಲ್ಲಿ ಶಾಸ್ತ್ರೀಯವಾಗಿ ಸಂಪಾದಿಸಿದರೆ ಕನ್ನಡದಲ್ಲೂ ಕಲೆವಾಲದಂತಹ ಕಾವ್ಯ ಕೃತಿ ರಚಿತವಾದೀತು11 ಎಂಬ ಡಾ. ತೀ. ನಂ. ಶಂಕರನಾರಾಯಣ ಅವರ ವಿಚಾರ ಅತ್ಯಂತ ಸೂಕ್ತವಾದುದು. ಕರ್ನಾಟಕ ಪರಂಪರೆಯಲ್ಲೆ ಅತ್ಯಂತ ಜನಪ್ರೀಯ ಕಥಾ ನಾಯಕನೆಂದರೆ, ಕುಮಾರರಾಮ. ಜಪದರ ನಾಲಗೆಯಲ್ಲಿ ಹತ್ತಾರು ವಿಭಿನ್ನ ಮುಖಗಳ ಹಾಡುಗಳು ಮೂಡಿ ಬಂದು. ಕುಮಾರ ರಾಮ ಕನ್ನಡಿಗರ ಪಾಲಿಗೆ ಮರೆಯಲಾಗದ ಮಹಾಸಾಂಸ್ಕೃತಿಕ ವೀರನಾಗಿ ಪರಿಗಣಿತವಾಗಿದ್ದಾನೆ12. ಇವನು ಶಿಷ್ಟ ಕವಿಗಳಲ್ಲೂ ಜನಪದರಲ್ಲೂ ಜನಪ್ರೀಯ ಕಥಾ ನಾಯಕನಾಗಿದ್ದಾನೆ.

ಅದರಂತೆ ಕೃಷ್ಣ ಗೊಲ್ಲರ ಕಾವ್ಯವೂ ಕೂಡ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಕಾಂಬೋಜರಾಜನ ಮಗ ಶರಬಂಧ ರಾಜನ ಬಾಲ್ಯ ಜೀವನ, ಅವನ ಸಾಹಸ , ಪರಾಕ್ರಮಗಳು,

ಜನಾಂಗಿಕ ವಿವರಗಳು ಮತ ಸಂಘರ್ಷ, ಅನೇಕ ಹೆಣ್ಣುಗಳೊಡನೆ ಆಗುವ ಶರಬಂಧ ರಾಜನ ಮದುವೆಗಳು ಮುಂತಾದ ಬುಡಕಟ್ಟು ಸಾಂಸ್ಕೃತಿಕ ನೆಲೆಯಿದೆ. ಭೌಗೋಳಿಕ ವಿಸ್ತಾರವಿದೆ. ತನ್ನ ಸಮುದಾಯದ ವಿಕಾಸ- ಸ್ಥರಗಳನ್ನು ಪರಂಪರಾಗತ ಜ್ಞಾನವನ್ನು , ನಂಬಿಕೆ, ನಡಾವಳಿಗಳನ್ನು ಕಲೆಯ ವಿಚಾರಗಳನ್ನು, ನೀತಿ ನಿಯಮಗಳನ್ನು ಬುಡಕಟ್ಟು ಒಳಗೊಳ್ಳಬಹುದಾದ ಅನೇಕ ಸಾಂಸ್ಕೃತಿಕ ವಿಚಾರಗಳನ್ನು ಒಟ್ಟಾರೆ ಜನಪದ ಮಹಾಕಾವ್ಯದಲ್ಲಿ ಅಭಿವ್ಯಕ್ತಗೊಳಿಸುತ್ತ ಬಂದಿದೆ. ಸಾಂಸ್ಕೃತಿಕ ಮಹತ್ವಕ್ಕಾಗಿ ಹುಟ್ಟಿಕೊಂಡ ಈ ಕಾವ್ಯಗಳು ಆಯಾ ಬುಡಕಟ್ಟು ಜನರಲ್ಲಿ ಸುಪ್ತವಾಗಿ ಹುದುಗಿರುವ ಮುಗ್ಧ ಕಾವ್ಯ ಪ್ರಜ್ಞೆ. ಇದು ಅವರಿಗೆ ಅತ್ಯಂತ ಪ್ರಜ್ಞಾ ಪೂರ್ವಕವಾಗಿ ಹೇಳ ಹೊರಟದ್ದಲ್ಲ[13]. ಹೀಗೆ ಇಲ್ಲಿಯ ಕಾವ್ಯಗಳು ಮೌಖಿಕ ಪರಂಪರೆಯಿಂದ , ತಲೆ ಮಾರಿನಿಂದ ತಲೆಮಾರಿಗೆ ಹಾಯ್ದು ಜನಮನದಲ್ಲಿ ಜೀವಂತವಾಗಿದೆ.

ಕರ್ನಾಟಕದಲ್ಲಿ ಮಹಾಕಾವ್ಯಗಳೆಂದು ಗುರುತಿಸಲ್ಪಟ್ಟ ಕಾವ್ಯಗಳು ಹೆಚ್ಚಾಗಿ ಧಾರ್ಮಿಕ ಸಂಪ್ರದಾಯದ ಕಾವ್ಯಗಳೇ ಆಗಿವೆ. ಮಲೆಯ ಮಾದೇಶ್ವರ, ಮಂಟೆ ಸ್ವಾಮಿ , ಮೈಲಾರಲಿಂಗ ಮುಂತಾದ ಕಾವ್ಯಗಳ ನಾಯಕರು ಕೆಳವರ್ಗದವರು, ಆದರೂ ಮೇಲ್ವರ್ಗದವರೂ ಬೆಚ್ಚಿ ಬೀಳುವಂತೆ ಎತ್ತರದಲ್ಲಿ ಬೆಳೆದವರು. ಅವರ ಸಾಧನೆ , ಪವಾಡಗಳು ಅದ್ಭುತವಾಗಿದೆ.

ಲೌಕಿಕ ಸಂಪ್ರದಾಯದ ಮಹಾಕಾವ್ಯಗಳ ಕಥಾನಾಯಕರೂ ಕೂಡ ಸಮಾಜದ ಕೆಳ ವರ್ಗದಿಂದ ಬಂದವರೇ ಆಗಿದ್ದಾರೆ. ಈ ಕಾವ್ಯಗಳಲ್ಲಿ ಪವಾಡಗಳು ಸೃಷ್ಟಿಯಾಗುತ್ತವೆ. ಆದರೂ ದೈವಿ ಶಕ್ತಿ , ಮಾರುವೇಷದಲ್ಲಿ ಬಂದು ಕಥಾ ನಾಯಕನ ಹಿಂದೆ ನಿಂತು ಪವಾಡಗಳನ್ನು ಸೃಷ್ಟಿಸುತ್ತಾನೆ. ಧಾರ್ಮಿಕ ಕಾವ್ಯಗಳ ಕಥಾನಾಯಕರಂತೆ ಇವರ ವೀರತನ , ಸಾಧನೆಗಳೂ ಅದ್ಭುತವಾದವುಗಳು. ಹೀಗಾಗಿ ಅವರು ಜನ ಮನವನ್ನು ಗೆದ್ದಿದ್ದಾರೆ.

ಲೌಕಿಕ ದೃಷ್ಟಿ ಮಹಾಕಾವ್ಯಗಳಾದ ಜುಂಜಪ್ಪನ ಕಾವ್ಯ, ಕುಮಾರ ರಾಮನ ಕಾವ್ಯ, ಕೃಷ್ಣ ಗೊಲ್ಲರ ಕಾವ್ಯ (ಬಾಲ ನಾಗಮ್ಮನ ಕಾವ್ಯ - ಇದು ಪ್ರಕಟವಾಗಿಲ್ಲ) ಈ ಕಾವ್ಯಗಳ ಕಥಾ ನಾಯಕರು ಆಯಾ ಜನಾಂಗದ ಜನಪ್ರೀಯ ಸಾಂಸ್ಕೃತಿಕ ವೀರರಾಗಿ ವಿಜ್ರಂಭಿಸಿದ್ದಾರೆ. ಜುಂಜಪ್ಪನ ಕಾವ್ಯದಲ್ಲಿ ಜುಂಜಪ್ಪ ಗೋವುಗಳ ರಕ್ಷಣೆಗಾಗಿ ಜೀವದ ಹಂಗು ತೊರೆದು ಹೋರಾಡಿದರೆ, ಕುಮಾರ ರಾಮನ ಕಾವ್ಯದಲ್ಲಿ , ಕುಮಾರ ರಾಮ ತನ್ನ ರಾಜ್ಯದ ರಕ್ಷಣೆಗಾಗಿ ಜೀವದ ಹಂಗು ತೊರೆದು ಹೋರಾಡುವನು. ಕೃಷ್ಣ ಗೊಲ್ಲರ ಕಾವ್ಯದಲ್ಲಿ ಶರಬಂಧ ರಾಜ ತನ್ನ ತಂದೆಯ ಬೆನ್ನುಣ್ಣು ಮಾಯವಾಗಿಸಲು ಏಳು ಸಮುದ್ರ ದಾಟಿ ಮೇಟೌಷಧಿ ತರಲು ಹರ ಸಾಹಸ ಪಡುವನು. ತುಮಕೂರು ಜಿಲ್ಲೆಯಲ್ಲಿ ಜುಂಜಪ್ಪನ ಆರಾಧನೆ ಹೆಚ್ಚು. ಬಳ್ಳಾರಿ ಜಿಲ್ಲೆಯಲ್ಲಿ ಕುಮಾರ ರಾಮನ ಆರಾಧನೆ ಹೆಚ್ಚಾಗಿ ಕಂಡು ಬರುತ್ತದೆ. ಈ ಎಲ್ಲ ಮಹಾಕಾವ್ಯಗಳ ಕಥೆಗಳುದ್ದಕ್ಕೂ ಸುಂದರ ಸನ್ನಿವೇಷಗಳು, ವಿಹಂಗಮ ನೋಟಗಳು , ಸುಂದರ ವರ್ಣನೆಗಳು , ಪ್ರಾಣಿ - ಪಶು - ಪಕ್ಷಿ , ಪ್ರಕೃತಿ ಸಂಪತ್ತು , ಮಾಯ-ಮಾಟ - ಮಂತ್ರಗಳ ಕಾಲ್ಪನಿಕತೆ ಜೋತೆಗೆ ವಾಸ್ತವಿಕ ಅನುಭವಗಳು ಇವೆಲ್ಲವುಗಳಿಂದ ಕಾವ್ಯ ಜೀವಂತಿಕೆ ಪಡೆದುಕೊಂಡಿವೆ.

ಆಧಾರಗಳು

1. ಕರ್ನಾಟಕ ಜಾನಪದ ಮಹಾಕಾವ್ಯಗಳು :
   ಸಂ: ತೀ.ನಂ. ಶಂಕರನಾರಾಯಣ ಪುಟ ಸಂ. 15
2. ಕರ್ನಾಟಕ ವೃತ್ತಿ ಗಾಯಕ ಕಾವ್ಯಗಳು :
   ಸಂ: ಡಾ. ಜೀ. ಶಂ. ಪರಮಶಿವಯ್ಯ ಪುಟ ಸಂ. 23 - 24
3. ಅಲ್ಲೇ : ಸಂ: ಡಾ. ಜೀ. ಶಂ. ಪರಮಶಿವಯ್ಯ ಪುಟ ಸಂ. 20
4. ಜನಪದ ಮಹಾಕಾವ್ಯಗಳು : ಅಂಬಳಿಕೆ ಹಿರಿಯಣ್ಣ ಪುಟ ಸಂ. 1
5. ಅಲ್ಲೇ ಅಂಬಳಿಕೆ ಹಿರಿಯಣ್ಣ ಪುಟ ಸಂ. 1
6. ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು : ಕೇಶವಭಟ್ಟ ಪುಟ ಸಂ. 13
7. ಕರ್ನಾಟಕ ಜನಪದ ಮಹಾಕಾವ್ಯಗಳು :
   ಸಂ: ತೀ.ನಂ. ಶಂಕರನಾರಾಯಣ ಪುಟ ಸಂ. 13
8. ಅಲ್ಲೇ : ಸಂ: ತೀ.ನಂ. ಶಂಕರನಾರಾಯಣ : ಪುಟ ಸಂ. 13
9. ಅಲ್ಲೇ : ಸಂ: ತೀ.ನಂ. ಶಂಕರನಾರಾಯಣ ಪುಟ ಸಂ. 18-19
10. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಸಂಪ್ರದಾಯಗಳು :
    ಸಂ: ಡಾ. ಜೀ. ಶಂ. ಪರಮಶಿವಯ್ಯ ಪುಟ ಸಂ. 27
11. ಕರ್ನಾಟಕ ಜನಪದ ಮಹಾಕಾವ್ಯಗಳು :
    ಸಂ: ತೀ.ನಂ. ಶಂಕರನಾರಾಯಣ ಪುಟ ಸಂ. 22
12. ಕುಮಾರ ರಾಮಯ್ಯನ ಚರಿತ್ರೆ :
    ಸಂ: ಎಮ್. ಎಮ್. ಕಲಬುರ್ಗಿ ಪುಟ ಸಂ. 1
13. ಕರ್ನಾಟಕ ಜನಪದ ಮಹಾಕಾವ್ಯಗಳು :
    ಸಂ: ತೀ.ನಂ. ಶಂಕರನಾರಾಯಣ ಪುಟ ಸಂ. 48

ಅಧ್ಯಾಯ - 8

ಉಪಸಂಹಾರ

ಅಧ್ಯಾಯ 8

ಉಪಸಂಹಾರ

"ಬುರ್ರ ಕಥಾ ಈರಮ್ಮ ಒಂದು ಅಧ್ಯಯನ" ಎಂಬ ವಿಷಯವನ್ನಿಟ್ಟುಕೊಂಡು ಆ ಹಿನ್ನೆಲೆಯಿಂದ ಬುಡ್ಗ ಜಂಗಮ ಪರಂಪರೆ, ಬುರ್ರ ಕಥಾ ಪರಂಪರೆ . ಈರಮ್ಮನ ಜೀವನ ಹಾಗೂ ಸಾಹಿತ್ಯವನ್ನು ಕುರಿತು ಅಧ್ಯಯನ ನಡೆಸಿ ಮಹಾ ಪ್ರಬಂಧ ಸಿದ್ಧ ಪಡಿಸಲಾಯಿತು. ಬುರ್ರ ಕಥಾ ಈರಮ್ಮ ಬುಡ್ಗ ಜಂಗಮರು ಮತ್ತು ಅವರ ಪ್ರಧಾನ ಕಲೆ ಬುರ್ರ ಕಥೆ ಎರಡನ್ನೂ ಪ್ರತಿನಿಧಿಸುವವಳು. ಹೀಗಾಗಿ ಈ ಅಧ್ಯಯನಕ್ಕೆ ಪೂರಕವಾಗಿ ಬುಡ್ಗ ಜಂಗಮರ ಮೂಲ, ಪರ್ಯಾಯ ನಾಮಗಳು, ಅವರ ಕಲೆಗಳು ಮುಂತಾದ ಅಂಶಗಳ ಕುರಿತು ಮಾಹಿತಿ ಸಂಗ್ರಹಿಸಿ ಅಧ್ಯಯನ ಮಾಡಲಾಯಿತು. ಬುಡ್ಗ ಜಂಗಮ ಅಲೆಮಾರಿ ಜನಾಂಗವನ್ನು ಕುರಿತು ಇದುವರೆಗೂ ನಡೆದ ಅಧ್ಯಯನಗಳು ಹೆಚ್ಚಾಗಿ ಅವರ ಕಲೆಯನ್ನಾಧರಿಸಿ ನಡೆದ ಅಧ್ಯಯನಗಳಾಗಿವೆ. ಹೀಗಾಗಿ ಹಗಲು ವೇಷದವರು , ಬಾಳ ಸಂತರು , (ಸುಡಗಾಡ ಸಿದ್ಧರು), ಕುರ್ರ ಮಾಮ , ಕೊಂಡ ಮಾಮ, ಶಂಖುಜಂಗಮರು , ಬುರ್ರ ಕಥೆಗಾರರು ಮುಂತಾದ ವೃತ್ತಿ ಕಲಾವಿದರನ್ನು ಆಯಾ ಹೆಸರಿನಿಂದಲೇ ಗುರುತಿಸಿ , ಪ್ರತ್ಯೇಕಿಸಿ ನೋಡಲಾಗಿದೆ. ಬುಡ್ಗ ಜಂಗಮ - ಬೇಡ ಜಂಗಮ ಬೇರೆ ಬೇರೆ ಎನ್ನುವ ಕಲ್ಪನೆ ಹೊಂದಿ, ಬೇಡ ಜಂಗಮ ಜಾತಿಯ ಹೆಸರಿನಲ್ಲಿ ಸಮಾಜದ ಉಚ್ಚವರ್ಣೀಯರು ಸರಕಾರದ ಸವಲತ್ತುಗಳನ್ನು ಕಬಳಿಸುವ ಹುನ್ನಾರಗಳು ನಡೆದಿವೆ. ಬುಡ್ಗ ಜಂಗಮರು ಅನಕ್ಷರಸ್ಥರು, ಅಲೆಮಾರಿಗಳು ಅವತ್ತಿನ ದಿನದ ಹೊಟ್ಟೆ ತುಂಬಿದರೆ ಸಾಕು ಎನ್ನುವ ಮನೋಭಾವದ ಜನರು. ಜೀವನದ ಭವಿಷ್ಯದ ಬಗೆಗೆ ಯಾವುದೇ ರೀತಿಯ ಮಹತ್ವಾಕಾಂಕ್ಷೆ ಇಲ್ಲದವರು. ತಮ್ಮ ಕಲೆ ಪ್ರದರ್ಶಿಸುತ್ತ ಜನಪದರ ಮಧ್ಯೆ ಹೋದಾಗ ಆ ಕಲೆಯಿಂದಲೇ ಗುರುತಿಸಿಕೊಂಡವರು. ಹೀಗಾಗಿ ಅವರ ಜನಾಂಗದ ಕುರಿತು ಮಾಹಿತಿ ಅವರಿಗಿಲ್ಲ. ಆದರೂ ಪರಸ್ಪರ ರಕ್ತ ಸಂಬಂಧಗಳು , ಬಳಿಗಳು ಮುಂತಾದ ಜನಾಂಗ ಗುರುತಿಸುವುದಕ್ಕ ಪೂರಕ ವಾದ ಅಂಶಗಳ ಅರಿವು ಅವರಿಗಿದೆ. ಸರಕಾರ ಜನಾಂಗ ಗುರುತಿಸುವಿಕೆಗಾಗಿ ರಚಿಸಲಾದ ಆಯೋಗಗಳು ಕೂಡ ಅವರ ಕಲಾ ವೃತ್ತಿಯನ್ನವಲಂಬಿಸಿಯೇ ಗುರುತಿಸಿ ಒಂದೇ ಜನಾಂಗವನ್ನು ಹಲವಾರು ಜಾತಿ - ವರ್ಗ - ಪ್ರವರ್ಗಗಳಲ್ಲಿ ಸೇರಿಸಿವೆ. ಇದರಿಂದ ಇಂತಹ ಅನೇಕ ತಲೆ ಮಾರಿನ ಜನಾಂಗಗಳು ಸರಕಾರದ ಸೌಲಭ್ಯಗಳಿಂದ ವಂಚಿತವಾಗಿವೆ. ಇಂತಹ ಸಮಸ್ಯೆಗಳಿಗೆ ಪ್ರಸ್ತುತ ಅಧ್ಯಯನದಲ್ಲಿ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸಲಾಗಿದೆ. ಇದರಿಂದ ಈ ಕೆಳಕಂಡ ಅಂಶಗಳು ನಿರ್ಣಾಯಕವೆನಿಸುತ್ತವೆ.

1) ಬುಡ್ಗ ಜಂಗಮ - ಬುಡ್ಗ ಜಂಗಾಲರು - ಬೇಡ ಜಂಗಮರು ಈ ಜನಾಂಗ ಸೂಚಕ ಹೆಸರಿನಲ್ಲಿ ಯಾವುದೆ ರೀತಿಯ ಭಿನ್ನತೆಯಿಲ್ಲ. ಅಂದರೆ ಒಂದು ಜನಾಂಗಕ್ಕೆ ಇವೆಲ್ಲ ಪರ್ಯಾಯ ನಾಮಗಳಾಗಿವೆ.

2) ವೇಷಗಾರರು , ಬಾಳಸಂತರು, ಸುಡುಗಾಡ ಸಿದ್ಧರು, ಕುರ್ರ ಮಾಮ ಮುಂತಾದವರಲ್ಲಿ ರಕ್ತ ಸಂಬಂಧ ಏರ್ಪಡುತ್ತದೆ. ಇವರೆಲ್ಲರ ಬೆಡಗುಗಳು ಹೆಚ್ಚು ಕಡಿಮೆ ಒಂದೇ ಆಗಿವೆ. ಹೀಗಾಗಿ ಇವರೆಲ್ಲರೂ ಒಂದೇ ಮೂಲ ಜನಾಂಗದವರಾಗಿದ್ದಾರೆ.

3) ಬುಡ್ಗ ಜಂಗಮರು ಒಂದೇ ಕಲೆಯನ್ನು ಅವಲಂಬಿಸಿ ಬದುಕುವವರಲ್ಲ. ಜೀವನೋಪಾಯಕ್ಕಾಗಿ ವೇಷವನ್ನು ಹಾಕುವರು. ಬುರ್ರ ಕಥೆಗಳನ್ನು ಹೇಳುವರು. ಬಾಳ ಸಂತರಾಗಿ, ಕುರ್ರ ಮಾಮನಾಗಿ ಒಬ್ಬನೇ ವ್ಯಕ್ತಿ ಈ ಎಲ್ಲಾ ಕಲೆಗಳನ್ನು ಕರಗತ ಮಾಡಿಕೊಂಡಿರುತ್ತಾನೆ. ಇದರಿಂದ ಇವರು ಬೇರೆ ಬೇರೆ ಅಲ್ಲ ಒಂದೆ ಮೂಲಕ್ಕೆ ಸೇರಿದವರು ಎನ್ನುವುದು ಮನದಟ್ಟಾಗುತ್ತದೆ.

4) ಆಧುನಿಕತೆಯ ಪ್ರಭಾವದಿಂದ ಬುಡ್ಗ ಜಂಗಮರು ತಮ್ಮ ಕಲೆಯನ್ನು ತೊರೆದು ಬೇರೆ ವೃತ್ತಿಯನ್ನು ಅವಲಂಬಿಸತೊಡಗಿದ್ದಾರೆ. ಆದ್ದರಿಂದ ಅವರ ಕಲೆ ಉಳಿಸಿಕೊಳ್ಳಬೇಕು. ಅದಕ್ಕಾಗಿ ಇನ್ನಷ್ಟು ಅಧ್ಯಯನಗಳು ನಡೆಯಬೇಕು.

5) ಬುಡ್ಗ ಜಂಗಮರು ಅಲೆಮಾರಿಗಳಾಗಿ ಸಮಾಜಿಕ , ಆರ್ಥಿಕ, ರಾಜಕೀಯದಿಂದ ಅತ್ಯಂತ ಹಿಂದುಳಿದವರಾಗಿದ್ದಾರೆ. ಅದರಿಂದ ಪರಿಶಿಷ್ಟ ಜಾತಿ, ಜನಾಂಗಕ್ಕೆ ಸಿಗುವ ಸಂವಿಧಾನಿಕ ಸೌಲಭ್ಯಗಳು ಇವರಿಗೂ ದೊರೆಯುವಂತಾಗಬೇಕು.

ಬುರ್ರ ಕಥಾ ಈರಮ್ಮ ಕನ್ನಡದಲ್ಲಿ ಬುರ್ರ ಕಥೆಗಳನ್ನು ಹಾಡುವ ಅಪರೂಪದ ಕಲಾವಿದೆ. ಈಕೆಯ ಒಡಲಲ್ಲಿ ಹತ್ತೆಂಟು ಕಾವ್ಯಗಳನ್ನು ತುಂಬಿಕೊಂಡು ಊರುರು ಸುತ್ತಾಡುತ್ತ ಬುರ್ರ ಕಥೆಗಳನ್ನು ಹಾಡಿ ಜನಮನದಲ್ಲಿ ಸಾಂಸ್ಕೃತಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದಾಳೆ. ಬುರ್ರ ಕಥಾ ಪರಂಪರೆಯಲ್ಲಿ ಈರಮ್ಮನ ಸಾಧನೆ ಅದ್ವೀತಿಯವಾದುದು. ಬುರ್ರ ಕಥೆಗಳನ್ನು ಹೇಳುವುದು ಈರಮ್ಮನ ವೃತ್ತಿಯೂ ಹೌದು - ಪ್ರವೃತ್ತಿಯೂ ಹೌದು. ಹಾಡಿನಿಂದ ತನ್ನ ಜೀವನದ ಕಷ್ಟ ಕೋಟಲೆಗಳನ್ನು ಮರೆತು ಊದು ಬತ್ತಿ ತನ್ನನ್ನು ಸುಟ್ಟು ಕೊಂಡು ಸುವಾಸನೆ ಬೀರುವಂತೆ, ಶ್ರೀಗಂದ ತನ್ನನ್ನು ಸವೆಸಿಕೊಂಡು ಪರಿಮಳ ಹರಡುವಂತೆ, ದೀಪ ತನ್ನನ್ನು ಉರಿಸಿಕೊಂಡು ಕತ್ತಲೆ ದೂರ ಗೋಳಿಸಿ ಬೆಳಕು ನೀಡುವಂತೆ ತಾನೆಷ್ಟೇ ಕಷ್ಟಗಳನ್ನು ಎದುರಿಸಿದರೂ, ನೋವನ್ನುಂಡರೂ, ಅವಮಾನಿತಳಾದರೂ ತನ್ನ ಕಲೆಯನ್ನು ಇಷ್ಟ ಪಡುವ ಜನರಿಗೆ ನಲಿವನ್ನುಂಟು ಮಾಡಿದವಳು.

ಬುರ್ರ ಕಥನ ಕಲೆಗೆ ತನ್ನನ್ನು ಸಮರ್ಪಿಸಿಕೊಂಡು ನೂರಾರು ಊರಿನ ಜನರ ಕಷ್ಟ ಸುಖಗಳನ್ನು ಮರೆಯಿಸಿ ನೀತಿ - ನಿಯಮ, ಧರ್ಮ - ಶ್ರದ್ಧೆ , ಮಾನವೀಯತೆಯನ್ನು ಬೋಧಿಸಿದವಳು. ಹಾಡಿನಿಂದಲೇ ಅಪಾರ ಜನ ಮನ್ನಣೆಯನ್ನು ಪಡೆದವಳು. ಅದಕ್ಕಾಗಿ ಈಕೆ ಸಂಚರಿಸುವ ಭಾಗದ ಜನ ಈರಮ್ಮ ಬುರ್ರ ಕಥೆಗಳನ್ನು ಹಾಡಿದರೆ ಮಳೆ ಬರುತ್ತದೆ, ಬೆಳೆ ಚೆನ್ನಾಗಿ ಆಗುತ್ತದೆ, ದನ ಕರುಗಳ ಸಮೃದ್ಧಿಯಾಗುತ್ತದೆ. ಮನೆಯಲ್ಲಿ ಸುಖ ಸಮೃದ್ಧಿಯಿಂದ ತುಂಬಿ ತುಳುಕುತ್ತದೆ. ಮಗಳು, ಸೊಸೆಗೆ ಸಂತಾನ ಲಾಭ ಸಿಗುತ್ತದೆ ಎಂದು ತಿಳಿದುಕೊಂಡಿದ್ದಾರೆ.

ಶಿವೇತರಕ್ಷತೆಯೇ (ಅಮಂಗಳ ನಿವಾರಣೆ) ಸಧ್ಯ : ಪರನಿವೃತಯೆ (ತಕ್ಷಣ ಆನಂದ) ಕಾಂತಾ ಸಮ್ಮಿತ ತಯೋಪ ದೇಶೆಯುಜೆ ಎಂದು ಕಾವ್ಯ ಪ್ರಯೋಜನ ಕುರಿತು ಅಲಂಕಾರಿಕರು ಹೇಳುವಂತೆ, ಈರಮ್ಮನ ಕಾವ್ಯವನ್ನು ಕೇಳಿ ಆನಂದಿಸುವ ಜನಕ್ಕೆ ಮಂಗಳಕರವಾಗುತ್ತದೆ ಎನ್ನುವ ಭಾವನೆ ಆಕೆಯ ಹಾಡಿನ ಜನಪ್ರಿಯತೆಯನ್ನು ಎತ್ತಿ ತೋರಿಸುತ್ತದೆ

ಹೀಗಾಗಿ ಈರಮ್ಮ ಜನಪದ ಸಂಸ್ಕೃತಿ ದೃಷ್ಠಿಯಿಂದ ಬಹು ಪ್ರಮುಖವಾಗಿ ಕಂಡು ಬರುತ್ತಾಳೆ. ಈಕೆ ಹಾಡುವ ಬಹುತೇಕ ಕಾವ್ಯಗಳು ಈಕೆ ನಡೆದಾಡಿದ ಪರಿಸರದಿಂದ ಉದಿಸಿ ಬಂದವುಗಳಾಗಿವೆ. ಆದ್ದರಿಂದ ಇಲ್ಲಿಯ ಜನ ಈರಮ್ಮನ ಹಾಡು ಕೇಳುವದೆಂದರೆ ತಮ್ಮ ಸಂಸ್ಕೃತಿ ಅರ್ಥ ಮಾಡಿಕೊಂಡಂತೆ ಎಂದೇ ಭಾವಿಸಿದ್ದಾರೆ. ಈ ನೆಲದ ಮಣ್ಣಿನಿಂದ ಹುಟ್ಟಿ ಬಂದ ಈರಮ್ಮನ ಕಾವ್ಯಗಳು ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂಧಿಸುವ ಶಕ್ತಿ ಪಡೆದಿವೆ. ಇಂತಹ ವಸ್ತುವನ್ನು ಜನ ಸಾಮಾನ್ಯರಿಗೆ ಮುಟ್ಟಿಸುವ ಮಾಂತ್ರಿಕತೆ ಈಕೆಯ ಕಂಠದಲ್ಲಿದೆ. ಈಕೆಯಲ್ಲಿನ ಕವಿತ್ವ ಶಕ್ತಿ ಅದ್ಭುತವಾದದ್ದು. ಒಂದೇ ಕಾವ್ಯವನ್ನು ಹಲವಾರು ಬೇರೆ ಬೇರೆ ಪಠ್ಯದಲ್ಲಿ ಕೊಡುವ ಆಶು ಕವಿತ್ವ ಶಕ್ತಿ ಇವಳಲ್ಲಿದೆ. ಆಯಾ ಪ್ರದೇಶ, ಸ್ಥಳ, ಊರು, ಕೇರಿ, ಜನಾಂಗ ಇವುಗಳನ್ವಯ ಕಥೆಗಳನ್ನು ಹೇಳುವ ಹಾಡುವ ಕಲೆ ಅದ್ಭುತವಾದದ್ದು. ಅವರವರ ಭಾವನೆಗಳಿಗೆ ಸ್ಪಂಧಿಸುವ, ಮನಸ್ಸಿಗೆ ಮುದ ನೀಡುವ ಇವಳ ಕಲಾಶಕ್ತಿ ಅಪೂರ್ವವಾಗಿದೆ. ತೆಲುಗಿನಲ್ಲಿರುವ ಬುರ್ರ ಕಥೆಗಳನ್ನು ಕನ್ನಡಕ್ಕೆ ತಂದು, ಕನ್ನಡ ಜಾನಪದ ಸಾಹಿತ್ಯದ ಹರಹನ್ನು ವಿಸ್ತರಿಸುವಲ್ಲಿ ಅಪೂರ್ವ ಕೊಡುಗೆಯನ್ನು ನೀಡಿದ್ದಾಳೆ. ಅಲ್ಲದೆ, ಬುಡಕಟ್ಟು ಜನಾಂಗದ ಸಂಸ್ಕೃತಿಯನ್ನು ಕಟ್ಟಿಕೊಟ್ಟಿದ್ದಾಳೆ.

ಜನಪದ ಕಲಾವಿದರು ಮತ್ತು ಅವರ ಕಲೆ ಉಳಿದು ಬಂದದ್ದು ಹಳ್ಳಿಗಳಲ್ಲಿ. ಹಳ್ಳಿಯ ಮನೆ - ಮನಗಳಲ್ಲಿ. ಹೀಗಾಗಿ ವೃತ್ತಿಗಾಯಕರ ಅಳಿವು - ಉಳಿವು ಹಳ್ಳಿಗರನ್ನೇ ಅವಲಂಬಿಸಿವೆ. ಇಂದು ಜಾಗತೀಕರಣ , ಕಂಪ್ಯೂಟರೀಕರಣ ಮತ್ತು ಆಧುನಿಕತೆಯ ಬಿರುಗಾಳಿ ಹಳ್ಳಿ ಹಳ್ಳಿಗಳಲ್ಲೂ ಬೀಸುತ್ತಿದೆ. ಇದರಿಂದ ನಮ್ಮ ಸಾಂಪ್ರದಾಯಿಕ ಕಲೆಗಳು, ಕಲಾವಿದರು ಅಷ್ಟೇ ಅಲ್ಲ ನಮ್ಮ ಸಂಸ್ಕೃತಿ , ಆಚಾರ, ವಿಚಾರ ನಡೆ - ನುಡಿ ಎಲ್ಲದರಲ್ಲೂ ಬದಲಾವಣೆಯ ಗಾಳಿ ಬೀಸುತ್ತಿದೆ. ವಿದೇಶಿ ದೂರದರ್ಶನ ಚಾನೆಲ್‌ಗಳು, ಬಂಡವಾಳ ಶಾಹಿ ಪ್ರವೃತ್ತಿ ನಮ್ಮನ್ನಾಳುತ್ತಿವೆ. ಇಂತಹ ಸಂಕೀರ್ಣ ಪರಿಸರದಲ್ಲಿ ವೃತ್ತಿಗಾಯಕ (ಕಲಾವಿದ) ರನ್ನು ಉಳಿಸಿಕೊಳ್ಳುವುದು ಕಷ್ಟವಾದರೂ ಅವರ ಕಾವ್ಯಗಳನ್ನು ಉಳಿಸಿಕೊಳ್ಳುವುದು ಆದ್ಯ ಕರ್ತವ್ಯವೆನಿಸುತ್ತದೆ.

ಅನುಬಂಧ

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

1. ಅನಂತರಂಗಾಚಾರ್ ಎನ್. -ಸಂ	ಕುಮಾರ ರಾಮನ ಸಾಂಗತ್ಯ ಸಂಗ್ರಹ	ಶಾರದಾ ಮಂದಿರ ಮೈಸೂರು 1960
2. ಅಂಬಳಿಕೆ ಹಿರಿಯಣ್ಣ-ಸಂ	ಲೌಕಿಕ ಸಂಪ್ರದಾಯದ ಚೌಡಿಕೆ ಕಾವ್ಯಗಳು	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು,ವಿಶ್ವವಿದ್ಯಾಲಯ, 1985
3. ಇಂದ್ವಾಡಿ ವೆಂಕಟೇಶ -ಸಂ	ಮಂಟೇ ಸ್ವಾಮಿಕಾವ್ಯ	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ , ಹಂಪಿ, 2004
4. ಇಮ್ರಾಪುರ ಎಸ್. ಜಿ. - ಸಂ.	ಜಾನಪದ ವಿಜ್ಞಾನ	ಚೇತನ ಪ್ರಕಾಶನ ಧಾರವಾಡ 1979
5. ಇಮ್ರಾಪುರ ಎಸ್.ಜಿ. - ಸಂ.	ಜಾನಪದ ಸಾಹಿತ್ಯ ದರ್ಶನ ಬಾಗ ॥	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 1996
6. ಇಮ್ರಾಪುರ ಎಸ್. ಜಿ. - ಸಂ.	ಜಾನಪದ ಸಾಹಿತ್ಯ	ಕರ್ನಾಟಕ ವಿಶ್ವವಿದ್ಯಾಲಯ ದರ್ಶನ ಭಾಗ -17 ಧಾರವಾಡ - 1993
7. ಕಲಬುರ್ಗಿ ಎಂ. ಎಂ. - ಸಂ.	ಜಾನಪದ ಸಾಹಿತ್ಯ ದರ್ಶನ	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1987
8. ಕಲಬುರ್ಗಿ ಎಂ. ಎಂ.	ಮಾರ್ಗ - 2	ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, - 1995
9. ಕಲಬುರ್ಗಿ ಎಂ. ಎಂ. - ಸಂ. ವೀರಣ್ಣ ರಾಜೂರ	ಹೊಸ ಕುಮಾರ ರಾಮನ ಸಾಂಗತ್ಯ	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - 2000
10. ಕಲಬುರ್ಗಿ ಎಂ. ಎಂ.- ಸಂ.	ಕೊಮಾರ ರಾಮಯ್ಯನ ಚರಿತ್ರೆ	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - 2001
11. ಕಲಬುರ್ಗಿ ಎಂ. ಎಂ.	ಕನ್ನಡ ಸಂಶೋಧನ ಶಾಸ್ತ್ರ	ಸಪ್ನ ಬುಕ್ ಹೌಸ್, ಬೆಂಗಳೂರು , -2002

12. ಕೋಡಿರಾಂಪುರ ರಂಗಾರೆಡ್ಡಿ	ಬಂಡಾಯ ಜಾನಪದ	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ , ಬೆಂಗಳೂರು - 1995
13. ಕ್ಯಾತನಹಳ್ಳಿ ರಾಮಣ್ಣ	ಜಾನಪದ ವಿಹಾರ	ಸಾಹಿತ್ಯ ಸುಮ ಮೈಸೂರು - 1977
14. ಕೃಷ್ಣರಾವ್ ಎಂ.	ಕನ್ನಡ ತೆಲುಗು ಸಂಬಂಧ ಸಾಮ್ಯ	ಐ. ಬಿ. ಎಚ್. ಪ್ರಕಾಶನ, ಬೆಂಗಳೂರು
15. ಖಂಡೋಬಾ ಪಿ.ಕೆ.	ಕರ್ನಾಟಕದಲ್ಲಿ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ	ದಿ. ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ್, ಗುಲಬರ್ಗಾ - 1991
16. ಗದ್ದಗೀಮಠ ಬಿ. ಎಸ್.	ಕನ್ನಡ ಜಾನಪದ ಗೀತೆಗಳು	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, 1979
17. ಚದುರಂಗ	ಕುಮಾರ ರಾಮ (ನಾಟಕ)	ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು, 1993
18. ಚನ್ನಬಸಪ್ಪ ಗೋ.ರು.	ಕರ್ನಾಟಕದ ಜನಪದ ಕಲೆಗಳು	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು - 1977
19. ಚಿದಾನಂದ ಮೂರ್ತಿ ಎಂ.	ಸಂಶೋಧ ತರಂಗ (ಸಂಪುಟ-2)	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - 1970
20. ಚೇತನಕುಮಾರ ಆರ್	ಬಳ್ಳಾರಿ ಜಿಲ್ಲೆಯ ಜನಪದ ವೃತ್ತಿಗಾಯಕರು	ಪಿ ಎಚ್.ಡಿ. ಪ್ರಬಂಧ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ - 1996
21. ಜವರೇಗೌಡ ದೇ	ಕಡುಗಲಿ ಕುಮಾರರಾಮ	ನರೇಶ ಮತ್ತು ಕಂಪನಿ ಬೆಂಗಳೂರು - 1964
22. ಜವರೇಗೌಡ ದೇ	ಜಾನಪದ ಅಧ್ಯಯನ	ಡಿ. ವಿ.ಕೆ. ಮೂರ್ತಿ ಮೈಸೂರು - 1978
23. ಜವರೇಗೌಡ ದೇ	ಜಾನಪದ ಅಧ್ಯಯನ ಸಂಪ್ರದಾಯಗಳು ಮತ್ತು ಹಬ್ಬಗಳು	ಡಿ. ಇ. ಕೆ ಮೂರ್ತಿ ಪ್ರಕಾಶನ , ಮೈಸೂರು -1978

24. ಜವರೇಗೌಡ ದೇ	ಜಾನಪದ ವಾಹಿನಿ	ಡಿ. ವಿ. ಕೆ ಮೂರ್ತಿ ಮೈಸೂರು -1986
25. ತಪಸ್ವೀಕುಮಾರ ನಂ.	ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
26. ತಾಳ್ತಜೆ ವಸಂತಕುಮಾರ	ಸಂಶೋಧನ ರಂಗ	ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬೆಯಿ - 1998
27. ತಿಪ್ಪೇರುದ್ರಸ್ವಾಮಿ ಹೆಚ್.	ವಚನಗಳಲ್ಲಿ ವೀರಶೈವ ಧರ್ಮ	ಡಿವಿಕೆ ಮೂರ್ತಿ, ಮೈಸೂರು - 1969
28. ತಿಪ್ಪೇರುದ್ರಸ್ವಾಮಿ ಹೆಚ್.	ಕರ್ನಾಟಕ ಸಂಸ್ಕೃತಿ ಸಮೀಕ್ಷೆ	ಡಿವಿಕೆ ಮೂರ್ತಿ, ಮೈಸೂರು - 1968
29. ತಿಪ್ಪೇರುದ್ರಸ್ವಾಮಿ ಹೆಚ್	ವಚನ ಸಾಹಿತ್ಯ ವೈಚಾರಿಕ ಅಧ್ಯಯನ	ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರ್ಗಿ-1992
30. ದಳವಾಯಿ ರಾಜಪ್ಪ - ಸಂ.	ಕನ್ನಡ ಸಾಹಿತ್ಯ ಕೋಶ	ಅ.ವಿ. ಸಂ. ಅನುವನ ಹಳ್ಳಿ, ಬೆಂಗಳೂರು 1998
31. ದಂಡೆ ವೀರಣ್ಣಾ	ಜನಪದ ಕಥೆ ವಸ್ತು ಮತ್ತು ತಂತ್ರ	ಬಸವ ಪ್ರಕಾಶನ, ಕಲಬುರ್ಗಿ 1981
32. ದಂಡೆ ವೀರಣ್ಣ	ಜನಪದ ಕಾವ್ಯ ಮೀಮಾಂಸೆ	ಪ್ರಕಾಶನ , ಕಲಬುರ್ಗಿ ಮಾಡಲ -1982
33. ದಂಡೆ ವೀರಣ್ಣ	ಕನ್ನಡ ಜಾನಪದ ಪ್ರಜ್ಞೆ	ಕವಿಮಾರ್ಗ ಪ್ರಕಾಶನ , ಕಲಬುರ್ಗಿ - 1993
34. ದಂಡೆ ವೀರಣ್ಣ	ಜನಪದ ಕಾವ್ಯ ಪ್ರಥಮ ವಿಮರ್ಶೆ	ಪ್ರಗತಿ ಪ್ರಕಾಶನ , ಕಲಬುರ್ಗಿ - 1993
35. ದಂಡೆ ವೀರಣ್ಣ	ಜನಪದ ಸಾಹಿತ್ಯ ಸಿದ್ಧಾಂತಗಳು	ಬಸವ ಪ್ರಕಾಶನ , ಕಲಬುರ್ಗಿ - 1996
36. ದಂಡೆ ವೀರಣ್ಣ	ಜನಪದ ಕಾವ್ಯ ಮೀಮಾಂಸೆ ಹಾಗೂ ವಿಮರ್ಶಾಪ್ರಸ್ಥಾನಗಳು	ಕವಿಮಾರ್ಗ ಪ್ರಕಾಶನ , ಕಲಬುರ್ಗಿ - 2004

37. ದಾಸನೂರು ಕೂಸಣ್ಣ	ಶೋಷಿತರ ಜಂಗಮರ ಮೀಸಲಾತಿ	ಮಾತಂಗ ಪ್ರಕಾಶನ, ಮೈಸೂರು - 1998
38. ದುರ್ಗಾದಾಸ ಕೆ. ಆರ್.	ಬಳ್ಳಾರಿ ಜಿಲ್ಲೆಯ ಬಯಲಾಟಗಳು	ಕರ್ನಾಟಕ, ವಿಶ್ವವಿದ್ಯಾಲಯ ಧಾರವಾಡ, 1985
39. ದೇವೇಂದ್ರ ಕುಮಾರ ಹಕಾರಿ	ಜಾನಪದ ಸಮ್ಮುಖ	ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ, ಮೂರು ಸಾವಿರ ಮಠ, ಹುಬ್ಬಳ್ಳಿ-1983.
40. ದೇವೇಂದ್ರ ಕುಮಾರ ಹಕಾರಿ	ಜಾನಪದ ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - 1985.
41. ನಲ್ಲೂರ ಪ್ರಸಾದ - ಸಂ.	ಜನಪದ ಭಾರತಿ	ಪ್ರಸಾರಾಂಗ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,ಬೆಂಗಳೂರು -1998
42. ನಾಗೇಗೌಡ ಎಚ್ ಎಲ್	ಹೆಳವರು ಮತ್ತು ಅವರ ಕಾವ್ಯಗಳು	ಸಾಹಿತ್ಯ ಸದನ ಪ್ರಕಾಶನ ಬೆಂಗಳೂರು - 1982
43. ನಾಗೇಗೌಡ ಎಚ್ ಎಲ್	ಜಾನಪದ ಜಗತ್ತು ವಿಶೇಷ	ಕರ್ನಾಟಕ ಜಾನಪದ ಟ್ರಸ್ಟ (ರಿ.) ಬೆಂಗಳೂರು 1998
44. ನಾಯಕ ಡಿ. ಬಿ.	ಲಂಬಾಣಿ ಜನಪದ ಸಾಹಿತ್ಯ	ಬಂಜಾರಾ ಪ್ರಕಾಶನ, ಗುಲಬರ್ಗಾ, 2000
45. ನಾವಡ ಎ ವಿ	ಜಾನಪದ ಸಮಾಲೋಚನ	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೇಮಿ, ಬೆಂಗಳೂರು 1993
46.ನಾಯಕ ಡಿ. ಬಿ. - ಸಂ.	ಗಿರಿಜನ ಸಿರಿ	ಡಾ.ಪಿ.ಕೆ. ಖಂಡೋಬಾ ಅಭಿನಂದನ ಸಮಿತಿ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
47. ಪರಮಶಿವಯ್ಯ ಜೀ. ಶಂ.	ಜಾನಪದ ಸಮಾವೇಶ	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರ ವಿಶ್ವವಿದ್ಯಾಲಯ, ಮೈಸೂರ 1979

48. ಪರಮಶಿವಯ್ಯ ಜೀ. ಶಂ.	ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ , ಮೈಸೂರು-1979
49. ಪುರಂದರ ಎ. ಎಂ.	ಭಾರತೀಯ ವಾದ್ಯಗಳು	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1974
50. ಪುರಾಣಿಕ ಸಿದ್ದಯ್ಯ - ಸಂ.	ಬಸವೇಶ್ವರರ ಸಮಕಾಲೀನರು	ಬಸವ ಸಮಿತಿ ಬೆಂಗಳೂರು 1989
51. ಪ್ರಭಾಕರ ಎ ಎಸ್	ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,2000
52. ಪುರುಷೋತ್ತಮ ಬಿಳಿಮಲೆ	ಕರಾವಳಿ ಜಾನಪದ	ಮಂಗಳ ಗಂಗೋತ್ರಿ, ದಕ್ಷಿಣ ಕನ್ನಡ ಜಿಲ್ಲೆ 1990
53. ಬೆಟಗೇರಿ ಕೃಷ್ಣಶರ್ಮ	ನಮ್ಮ ಸಂಸ್ಕೃತಿ ಪರಂಪರೆ	ಸಮಾಜ ಪುಸ್ತಕಾಲಯ, ಧಾರವಾಡ - 1969
54. ಬೆಟಗೇರಿ ಕೃಷ್ಣಶರ್ಮ	ಕರ್ನಾಟಕ ಜನಜೀವನ	ಸಮಾಜ ಪುಸ್ತಕಾಲಯ ಧಾರವಾಡ - 1970
55. ಬೋರಲಿಂಗಯ್ಯ ಹಿ ಚಿ	ದಾಸಪ್ಪ ಜೋಗಪ್ಪ	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. 1981
56. ಬೋರಲಿಂಗಯ್ಯ ಹಿ ಚಿ	ಕರ್ನಾಟಕ ಜಾನಪದ ಕಲೆಗಳ ಕೋಶ	ಪ್ರಸಾರಾಂಗ , ಕನ್ನಡ ವಿಶ್ವವಿದ್ಯಾಲಯ, ಹಂಪಿ 1996
57. ಭಾಸ್ಕರ ಟಿ. ಎಂ.	ಸುಡುಗಾಡು ಸಿದ್ಧರು ಒಂದು ಅಧ್ಯಯನ	ಪಿ ಎಚ್. ಡಿ .ಮಹಾ ಪ್ರಬಂಧ ಗುಲಬರ್ಗಾ, ವಿಶ್ವವಿದ್ಯಾಲಯ, ಗುಲಬರ್ಗಾ 1995
58. ಮಹದೇವಯ್ಯ	ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ - 1999
59. ಮಲಶೆಟ್ಟಿ ಬಸವರಾಜ	ಉತ್ತರ ಕರ್ನಾಟಕದ ಜನಪದ ವಾದ್ಯಗಳು	ಪ್ರಾದೇಶಿಕ ಜನಪದ ರಂಗ ಕಲೆಗಳ ಅಧ್ಯಯನ ಕೇಂದ್ರ ಉಡುಪಿ-1987
60. ಮಹಾಬಲೇಶ್ವರರಾವ	ಸಂಶೋಧನ ಮಾರ್ಗ	ನವ ಕರ್ನಾಟಕ, ಪಬ್ಲಿಕೇಷನ್ಸ್ ಬೆಂಗಳೂರು 2000

61. ಮುದೇನೂರ ನಿಂಗಪ್ಪ	ಗರಿಗೆದರಿದ ನವಿಲು	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು 2001
62. ಮುದೇನೂರ ನಿಂಗಪ್ಪ	ಬುರ್ರಕಥಾ ಈರಮ್ಮ ಅಲೆಮಾರಿಯ ಆತ್ಮ ಕಥನ	ವಿದ್ಯಾನಿಧಿಪ್ರಕಾಶನ ಗದಗ-2005
63. ಮೈತ್ರಿ ಕೆ. ಎಂ - ಸಂ.	ಕುಮಾರರಾಮ ಮತ್ತು ಕೃಷ್ಣ ಗೊಲ್ಲರ ಮಹಾಕಾವ್ಯ	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ-1997
64. ಮೈತ್ರಿ ಕೆ. ಎಂ. - ಸಂ.	ಬುಡ ಕಟ್ಟು ಕೆಲ ಕಸುಬುಗಳು	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ-2002
65. ಮೈತ್ರಿ ಕೆ. ಎಂ. - ಸಂ.	ಎಲ್ಲಮ್ಮನ ಕಥನಕಾವ್ಯ	ವಿದ್ಯಾನಿಧಿ ಪ್ರಕಾಶನ ಗದಗ-2005
66. ಮೈತ್ರಿ ಕೆ. ಎಂ. - ಸಂ.	ಬುಡ್ಗ ಜಂಗಮರು	ಕರ್ನಾಟಕ ಬುಡ್ಗ ಜಂಗಮ ಸಂಘ , ಹೊಸಪೇಟೆ - 2005
67. ಮೊಗಳ್ಳಿ ಗಣೇಶ	ದಲಿತರು ಮತ್ತು ಜಾಗತೀಕರಣ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 1999
68.ಯಳನಾಡ ಅಂಜಿನಪ್ಪ	ಹಗಲು ವೇಷದವರ ಸಂಸ್ಕೃತಿ	ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು 1993
69. ರಮೇಶ ಸ. ಚಿ. - ಸಂ.	ಸ್ಯಾಸಿ ಚಿನ್ನಮ್ಮನ ಕಾವ್ಯ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 1999
70. ರಮೇಶ ಸ. ಚಿ. - ಸಂ.	ಅಲೆಮಾರಿಗಳ ಸ್ಥಿತಿಗತಿ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 2005
71. ರಾಜೇಂದ್ರ ಡಿ. ಕೆ - ಸಂ.	ಕರಪಾಲಮೇಳ	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು - 1985
72. ರಾಜೂರ ವೀರಣ್ಣ	ಸಮಗ್ರ ವಚನ ಸಂಪುಟ - 10	ಕರ್ನಾಟಕ ಸರಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು - 1993

73. ರಾಮಚಂದ್ರ ಗೌಡ ಹಿ. ಶಿ.- ಸಂ.	ಸುವರ್ಣ ಜಾನಪದ ಸಂಪುಟ - 1 ಮತ್ತು 2	ಕರ್ನಾಟಕ ಜಾನಪದ ಮತ್ತು ಯಕ್ಷಗಾನ, ಅಕಾಡೆಮಿ, ಬೆಂಗಳೂರು 1998
74. ಲಕ್ಕಪ್ಪಗೌಡ ಎಚ್. ಜೆ.	ಕರ್ನಾಟಕ ಬುಡಕಟ್ಟುಗಳು ಸಂಪುಟ - 1	ಕರ್ನಾಟಕ ಜಾನಪದ ಮತ್ತು ಯಕ್ಷಗಾನ, ಅಕಾಡೆಮಿ, ಬೆಂಗಳೂರು 1998
75. ಲಕ್ಕಪ್ಪ ಎಚ್. ಜೆ.	ಕರ್ನಾಟಕ ಬುಡಕಟ್ಟುಗಳು ಸಂಪುಟ - 2	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು 1998
76. ವರದರಾಜ ರಾವ ಜಿ.	ಕಮ್ಮಟ ಕೇಸರಿ	ಉಷಾ ಸಾಹಿತ್ಯ ಮಾಲೆ ಮೈಸೂರು - 1963
77. ವರದರಾಜ ರಾವ ಜಿ.	ಕುಮಾರ ರಾಮನ ಸಾಂಗತ್ಯಗಳು	ಪ್ರಸಾರಾಂಗ ಮೈಸೂರು , ವಿಶ್ವವಿದ್ಯಾಲಯ, ಮೈಸೂರು : 1966
78. ವರದರಾಜ ರಾವ ಜಿ.	ಕಮ್ಮಟ ದುರ್ಗ	ಐ.ಬಿ. ಎಚ್ ಪ್ರಕಾಶನ ಬೆಂಗಳೂರು-1985
79. ವಾಲಿಕಾರ ಚೆನ್ನಣ್ಣ	ಜನಪದ ವೃತ್ತಿ ಗಾಯಕರು	ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-1986
80. ವೆಂಕನಗೌಡ	ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲು ವೇಷಗಾರರು : ಒಂದು ಅಧ್ಯಯನ	(ಪಿಎಚ್‌ಡಿ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ-2002 (ಅಪ್ರಕಟಿತ)
81. ಶಂಕರನಾರಾಯಣ ತೀ. ನಂ.	ಜನಪದ ಮಹಾಕಾವ್ಯ	ಕರ್ನಾಟಕ ಸಂಘ, ದಕ್ಷಿಣ ಕನ್ನಡ -1996
82. ಶಿವರುದ್ರಪ್ಪ ಜಿ. ಎಸ್.	ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ - 3	ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು - 1976
83. ಶ್ರೀಕಂಠ ಕೂಡಿಗೆ	ಕೊಂಡ ಮಾಮ	ಐ.ಬಿ.ಎಚ್. ಪ್ರಕಾಶನ ಬೆಂಗಳೂರು - 1982
84. ಸತೀಶ ಪಿ	ಮಲೆಯ ಮಾದೇಶ್ವರ ಒಂದು ಅಧ್ಯಯನ	(ಪಿ ಎಚ್ ಡಿ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ : 1997

85. ಸರಿತಾ ಕುಸುಮಾಕರ ದೇಸಾಯಿ	ಹರಪನ ಹಳ್ಳಿ ಭೀಮವ್ವನವರ ಹಾಡುಗಳು: ಒಂದು ಅಧ್ಯಯನ	ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು - 2001
86. ಸಾವಿತ್ರಿ ಎಸ್. ಎಂ.	ಕುಮಾರರಾಮ ಸಂಪ್ರದಾಯದ ಅಧ್ಯಯನ	ಚಿತ್ರಶ್ರೀ ಪ್ರಕಾಶನ, ಹೊಸಪೇಟೆ 2002
87. ಸುಂಕಾಪೂರ ಎಂ. ಎಸ್.- ಸಂ.	ಜಾನಪದ ಸಾಹಿತ್ಯ ದರ್ಶನ ಭಾಗ -2	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, 1976
88. ಸುಂಕಾಪೂರ ಎಂ. ಎಸ್.- ಸಂ.	ಸಕಲ ಪುರಾತನರ ವಚನಗಳು ಸಂಪುಟ - 2	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1976
89. ಸುಂಕಾಪೂರ ಎಂ. ಎಸ್.- ಸಂ.	ಜಾನಪದ ಸಾಹಿತ್ಯ ದರ್ಶನ ಸಂಪುಟ - 6	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ , 1980
90.ಸುಂದರಂ ಆರ್. ವಿ. ಎಸ್.	ಆಂಧ್ರ ಪದೇಶದ ಜಾನಪದ	ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ,ನವದೇಹಲಿ, 1978
91.ಸುಂದರಂ ಆರ್. ವಿ. ಎಸ್.	ಕರ್ನಾಟಕಾಂಧ್ರ ಯಕ್ಷಗಾನ ಸಮಿಕ್ಷೆ	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - 1985
92. ಹರ್ಲಾಪುರ ಸುರೇಶ ಬ.	ಕುಮಾರರಾಮನ ಅಧ್ಯಯನದ ಆಕರಗಳು	ಕನ್ನಡ ವಿಶ್ವವಿದ್ಯಾಲಯ , ಹಂಪಿ - 2000
93. ಹಂಪನಾಗರಾಜಯ್ಯ - ಸಂ.	ಕನ್ನಡ ವೃತ್ತಿಗಾಯಕ ಕಾವ್ಯಗಳು	ಪ್ರಸಾರಾಂಗ ಕನ್ನಡ ಸಾಹಿತ್ಯ ಪರಿಷತ್ತ, ಬೆಂಗಳೂರು -1982
94. ಹಿರೆಮಲ್ಲೂರ ಈಶ್ವರನ್	ಜಂಗಮ	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ , ಹಂಪಿ -1996
95. ಹಿರೇಮಠ್ ಆರ್. ಸಿ.	ಸಂಕೀರ್ಣ ವಚನ ಸಂಪುಟ-8	ಜನಪ್ರಿಯ ಆವೃತ್ತಿ - 1971
96. ಹಿರೇಮಠ್ ಆರ್. ಸಿ.	ಬಸವಣ್ಣನವರ ವಚನಗಳು	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1994
97. ಹೊಸಮನಿ ಬಿ. ಎಂ.	ಕರ್ನಾಟಕದಲ್ಲಿ ವೇಷಗಾರರು ಒಂದು ಸಾಂಸ್ಕೃತಿಕ ಅಧ್ಯಯನ	(ಪಿಎಚ್‌ಡಿ ಪ್ರಬಂಧ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1993(ಅಪ್ರಕಟಿತ)

ತೆಲುಗು ಪರಾಮರ್ಶನ ಗ್ರಂಥಗಳು

1. ಕೃಷ್ಣ ಕುಮಾರಿ ನಾಯನಿ(ಆಚಾರ್ಯ)	ತೆಲುಗು ಜಾನಪದ ಗೇಯ ಗಾಥಲು	ತೆಲುಗು ಅಕಾಡೆಮಿ, ಹೈದ್ರಾಬಾದ್ - 1990
2. ನರಸಿಂಹ ರೆಡ್ಡಿ ಪಿ .	ತೆಲುಗು ನಾಮತಲು ಜನಜೀವನಂ	ಶ್ರೀನಿವಾಸ ಮುರಳಿ ಪಬ್ಲಿಕೇಷನ್ಸ್, ತಿರುಪತಿ 1983
3. ನಿಧಾನಕವಿ ವೆಂಕಟೇಶ್ವಂ	ಬುಡ್ಗ ಜಂಗಂ ವಾಣಿ	ಪ್ರತ್ಯೇಕ ಸಂಚಿಕೆ, 1989
4. ಮಿಕ್ಕಿಲಿನೇನಿ ರಾಧಾಕೃಷ್ಣ ಮೂರ್ತಿ	'ಆಂಧ್ರ ನಾಟಕ ರಂಗ ಚರಿತ್ರೆ'	ರೇಣುಕ ಗ್ರಂಥ ಮಾಲೆ, ಮದ್ರಾಸ್ , 1969
5. ವಿಭೂತಿ ಭವಾನಿ ಲಿಂಗಂ -ಸಂ.	ಪಗಟಿವೇಷಾಲು ವಾಟಿ ಪ್ರಾಚೀನತ	ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾಲಯ, ಹೈದ್ರಾಬಾದ್- 1999
6. ಸುಂದರಂ ಆರ್. ವಿ.ಎಸ್.	'ಅನಂತರಾಗಂ'	ರಾಳ್ಳಪಲ್ಲಿ ಅಭಿನಂದನ ಗ್ರಂಥ -1977
7. ರಾಮರಾಜು, ಬಿರುದುರಾಜು	ತೆಲುಗು ಜಾನಪದ ಗೇಯ ಸಾಹಿತ್ಯಂ	ಜಾನಪದ ವಿಜ್ಞಾನ ಪ್ರಚುರಣಲ, ಹೈದ್ರಾಬಾದ್ 1990
8. ವೆಂಕಟೆಶಂ ಎನ್. ಆರ್.	ಬುಡಿಗ ಜಂಗಾಲು ಭಾಷಾ , ಸಾಹಿತ್ಯ, ಸಾಂಸ್ಕೃತಿಕಾಂಶಾಲ ಪರಿಶೀಲನ	ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದ್ರಾಬಾದ - 1995
9. ವೆಂಕಟೇಶಂ ಎನ್. ಆರ್.	ಬುಡ್ಗ ಜಂಗಮದಲ್ಕಿನಿ	ಶ್ರೀ ಸಾಯಿ ಪ್ರೊಸೆಸ್ ನಾರಾಯಣ ಗುಡ, ಹೈದ್ರಾಬಾದ್ 2002

ಇಂಗ್ಲೀಷ ಪರಾಮರ್ಶನ ಗ್ರಂಥಗಳು

1.	Dr. Nadeem Hassain	'Tribal India'	Palaka Prakashan, Delhi
2.	Edgar Thurston	'Caste and Tribes of Southern India'	Government press Madras - 1909
3.	Nanjundayya H.V. and Ananth Krishna Iyyar	'Mysore Tribes and Castes'	Mysore University Mysore - 1930
4.	Nirmalkumar Bose	'Tribal life in India'	National Book Trust, New Delhi, 1971
5.	Elvin Verrier	'The Religion of Indian Tribe'	Oxford University Press, Bombay 1981
6.	Dr. A.N. Perumal	'Folk Arts of the Tamils'	International Institute of Tamil Studies Taramani Madras, 1983
7.	Dr. K.M. Metry	Caste Certificate Problems of Budga Jangama	1999

ನಿಯತಕಾಲಿಕೆಗಳು

1. ಹೊಸಪೇಟೆ ಟೈಮ್ಸ್, ವಿಶೇಷಾಂಕ : 1997
2. ಸುಧಾ, ವಾರ ಪತ್ರಿಕೆ : 25-02-1999
3. ಸಂಜೆವಾಣಿ , ದಿನಪತ್ರಿಕೆ : 26-01-2000
4. ಕರ್ಮವೀರ , ವಾರ ಪತ್ರಿಕೆ : 02-04-2000
5. ತರಂಗ, ವಾರ ಪತ್ರಿಕೆ : 30-05-2002

ವಕ್ತೃಗಳ ಯಾದಿ

ಕ್ರ. ಸಂ.	ಹೆಸರು	ವಯಸ್ಸು	ಬೆಡಗು	ವೃತ್ತಿ	ಸ್ಥಳ
1.	ಶಂಕ್ರಪ್ಪ ತಂದೆ ಯಂಕಪ್ಪ	80	ವೇಷಗಾರಿಕೆ	ಕುರುಗೋಡು	ಬಳ್ಳಾರಿ
2.	ಚಿನ್ನಪ್ಪ ತಂದೆ ರಾಮಣ್ಣ	55	ವೇಷಗಾರಿಕೆ	ಹೊಸ ಹಳ್ಳಿ	ಬಳ್ಳಾರಿ
3.	ಶಿವಲಿಂಗಪ್ಪ ತಂದೆ ದೊಡ್ಡ ರಾಮಣ್ಣ	65	ವೇಷಗಾರಿಕೆ	ಯಾಪಲಪುರವಿ	ರಾಯಚೂರ
4.	ಶಂಕ್ರಪ್ಪ ತಂದೆ ರುದ್ರಪ್ಪ	45	ವೇಷಗಾರಿಕೆ	ಬಲಕುಂದಿ	ಬಳ್ಳಾರಿ
5.	ಸಣ್ಣ ರಾಮಣ್ಣ ತಂದೆ ರಾಮಣ್ಣ	60	ವೇಷಗಾರಿಕೆ	ವೆಂಕಟಾಪುರ	ಕ್ಯಾಂಪ ಬಳ್ಳಾರಿ
6.	ಬಲರಾಮ ತಂದೆ ನರಸಿಂಹಲು	50	ಬುರ್ರ ಕಥೆ	ರಾಜೇಶ್ವರಿ ನಗರ	ಬಳ್ಳಾರಿ
7.	ಗಿಡ್ಡಪ್ಪ ತಂದೆ ರಾಮಣ್ಣ	60	ಬಾಳ ಸಂತರು	ಕಂಪ್ಲಿ	ಬಳ್ಳಾರಿ
8.	ಶಿವಲಿಂಗಪ್ಪ ಎಂ.	55	ವೇಷಗಾರಿಕೆ	ಸಿದ್ಧಾಪೂರ	ಕೊಪ್ಪಳ
9.	ಹಂಬಣ್ಣ ತಂದೆ ಗಿಡ್ಡಪ್ಪ	70	ಬುರ್ರ ಕಥೆ	ಗಂಗಾವತಿ	ಕೊಪ್ಪಳ
10.	ತಿಪ್ಪೆ ಸ್ವಾಮಿ ತಂದೆ ಸುಂಕಪ್ಪ	45	ವೇಷಗಾರಿಕೆ	ರಾಮಪೂರ	ಚಿತ್ರದುರ್ಗ

(ಈರಮ್ಮನ ಸಂಬಂಧಿಕರು)

ಗಂಡಸರು :

ಕ್ರ. ಸಂ.	ಹೆಸರು	ವಯಸ್ಸು	ಬೆಡಗು	ವೃತ್ತಿ	ಸ್ಥಳ
11.	ಅಶ್ವಿನಾಗಭೂಷಣಪ್ಪ	75	ಅಶ್ವಿ	ವೇಷಗಾರಿಕೆ	ಹಳೆದರೋಜಿ
12.	ಗಂಗಾಧರಪ್ಪ	60	ಎಡವಲಿ	ವೇಷಗಾರಿಕೆ	ಹಳೆದರೋಜಿ
13.	ಮಲ್ಲಿಕಾರ್ಜುನಪ್ಪ	59	ಎಡವಲಿ	ವೇಷಗಾರಿಕೆ	ಹಳೆದರೋಜಿ
14.	ತಿಪ್ಪೆ ಸ್ವಾಮಿ	50	ಅಶ್ವಿ	ವೇಷಗಾರಿಕೆ	ಹಳೆದರೋಜಿ
15.	ದನ್ನೂರಪ್ಪ	50	ಎಡವಲಿ	ವೇಷಗಾರಿಕೆ	ಹಳೆದರೋಜಿ
16.	ಮಾರೆಪ್ಪ	56	ಎಡವಲಿ	ವೇಷಗಾರಿಕೆ	ಹಳೆದರೋಜಿ
17.	ಆಂಜನಪ್ಪ	49	ಎಡವಲಿ	ವೇಷಗಾರಿಕೆ	ಹಳೆದರೋಜಿ
18.	ನಾಗರಾಜ	48	ಅಶ್ವಿ	ವೇಷಗಾರಿಕೆ	ಹಳೆದರೋಜಿ
19.	ರಾಮಣ್ಣ	45	ಅಶ್ವಿ	ವೇಷಗಾರಿಕೆ	ಹಳೆದರೋಜಿ

20. ದೊಡ್ಡ ಲಾಲಪ್ಪ	43	ಅಶ್ವಿ	ವೇಷಗಾರಿಕೆ	ಹಳೆದರೋಜಿ
21. ಸಣ್ಣ ಲಾಲಪ್ಪ	35	ಅಶ್ವಿ	ವೇಷಗಾರಿಕೆ	ಹಳೆದರೋಜಿ
22. ನಾಗರಾಜ	33	ಅಶ್ವಿ	ವೇಷಗಾರಿಕೆ	ಹಳೆದರೋಜಿ
23. ಶರಭಯ್ಯ	25	ಅಶ್ವಿ	ವೇಷಗಾರಿಕೆ	ಹಳೆದರೋಜಿ
24. ಬಸವರಾಜ	23	ಅಶ್ವಿ	ವೇಷಗಾರಿಕೆ	ಹಳೆದರೋಜಿ
25. ರಾಮುಡು	38	ಎಡವಲಿ	ಎಲ್.ಐ.ಸಿ ಏಜೆಂಟ್	ಹಳೆದರೋಜಿ
26. ಶಂಕರ ಕುಮಾರ	35	ಎಡವಲಿ	ವೇಷಗಾರಿಕೆ	ಹಳೆದರೋಜಿ
27. ರಾಘವೇಂದ್ರ	32	ಎಡವಲಿ	ವೇಷಗಾರಿಕೆ	ಹಳೆದರೋಜಿ
28. ಶಿವಲಿಂಗ	25	ಎಡವಲಿ	ವೇಷಗಾರಿಕೆ	ಹಳೆದರೋಜಿ
29. ಶಂಕರಪ್ಪ	35	ಎಡವಲಿ	ವೇಷಗಾರಿಕೆ	ಹಳೆದರೋಜಿ
30. ದೊಡ್ಡ ಗಾಜಲಿಂಗಪ್ಪ	23	ಎಡವಲಿ	ವೇಷಗಾರಿಕೆ	ಹಳೆದರೋಜಿ
31. ಹುಸೇನಿ	23	ಎಡವಲಿ	ವೇಷಗಾರಿಕೆ	ಹಳೆದರೋಜಿ
32. ಮಂಜು	18	ಎಡವಲಿ	ವೇಷಗಾರಿಕೆ	ಹಳೆದರೋಜಿ
33. ಸುರೇಶ	17	ಅಶ್ವಿ	ವೇಷಗಾರಿಕೆ	ಹಳೆದರೋಜಿ
34. ಸಣ್ಣ ಗಾಜಲಿಂಗಪ್ಪ	14	ಎಡವಲಿ	ವೇಷಗಾರಿಕೆ	ಹಳೆದರೋಜಿ
35. ಲಿಂಗಪ್ಪ	14	ಎಡವಲಿ	ವೇಷಗಾರಿಕೆ	ಹಳೆದರೋಜಿ
36. ರುದ್ರೇಶ	22	ಅಶ್ವಿ	ವೇಷಗಾರಿಕೆ	ಹಳೆದರೋಜಿ
37. ಬಾಲ ಸ್ವಾಮಿ	48	ಅಶ್ವಿ	ವೇಷಗಾರಿಕೆ	ಹಳೆದರೋಜಿ
38. ತಿಪ್ಪೇ ಸ್ವಾಮಿ	25	ಅಶ್ವಿ	ಇಂಜನಿಯರಿಂಗ ವಿದ್ಯಾರ್ಥಿ	ಹಳೆದರೋಜಿ
39. ರಾಮಾಂಜನೇಯ	19	ಅಶ್ವಿ	ವಿದ್ಯಾರ್ಥಿ	ಹಳೆದರೋಜಿ
40. ಸಣ್ಣ ರಾಮಣ್ಣ	80	ಎಡವಲಿ	ವೇಷಗಾರಿಕೆ	ಹಳೆದರೋಜಿ
41. ತಿಪ್ಪೇ ಸ್ವಾಮಿ	11	ಎಡವಲಿ	ವೇಷಗಾರಿಕೆ	ಹಳೆದರೋಜಿ
42. ರಾಘವೇಂದ್ರ	14	ಅಶ್ವಿ	ವಿದ್ಯಾರ್ಥಿ	ಹಳೆದರೋಜಿ
43. ಸೋಮಶೇಖರ	12	ಅಶ್ವಿ	ವಿದ್ಯಾರ್ಥಿ	ಹಳೆದರೋಜಿ
44. ರಾಮಾಂಜನೇಯ	17	ಎಡವಲಿ	ವಿದ್ಯಾರ್ಥಿ	ಹಳೆದರೋಜಿ
45. ಮಂಜುನಾಥ	11	ಎಡವಲಿ	ವಿದ್ಯಾರ್ಥಿ	ಹಳೆದರೋಜಿ
46. ಮಹೇಶ	15	ಎಡವಲಿ	ವಿದ್ಯಾರ್ಥಿ	ಹಳೆದರೋಜಿ
47. ರುದ್ರೇಶ	10	ಎಡವಲಿ	ವಿದ್ಯಾರ್ಥಿ	ಹಳೆದರೋಜಿ
48. ಚಿನ್ನ ಸ್ವಾಮಿ	15	ಅಶ್ವಿ	ವಿದ್ಯಾರ್ಥಿ	ಹಳೆದರೋಜಿ

ಹೆಣ್ಣು ಮಕ್ಕಳು :

ಕ್ರ.ಸಂ.	ಹೆಸರು	ವಯಸ್ಸು	ಬೆಡಗು	ವೃತ್ತಿ	ಸ್ಥಳ
1.	ಪಾರ್ವತಮ್ಮ	65	ಅಶ್ವಿ	ಹಿಮ್ಮೆಳ ಗಾಯಕಿಯರು	ಹಳೆದರೋಜಿ
2.	ಶಿವಮ್ಮ	60	ಎಡವಲಿ	ಹಿಮ್ಮೆಳ ಗಾಯಕಿಯರು	ಹಳೆದರೋಜಿ
3.	ಜೀಚಮ್ಮ	25	ಅಶ್ವಿ	ಗಂಗಿ ಗೌರಿ	ಹಳೆದರೋಜಿ
4.	ಸಾಲಮ್ಮ	42	ಅಶ್ವಿ	ಗಂಗಿ ಗೌರಿ	ಹಳೆದರೋಜಿ
5.	ಸಾಂತಮ್ಮ	35	ಅಶ್ವಿ	ಗಂಗಿ ಗೌರಿ	ಹಳೆದರೋಜಿ
6.	ಅಂಜನಮ್ಮ	28	ಅಶ್ವಿ	ಗಂಗಿ ಗೌರಿ	ಹಳೆದರೋಜಿ
7.	ಹಂಪಮ್ಮ	23	ಅಶ್ವಿ	ಗಂಗಿ ಗೌರಿ	ಹಳೆದರೋಜಿ
8.	ಸಾಂತಮ್ಮ	16	ಅಶ್ವಿ	ಗಂಗಿ ಗೌರಿ	ಹಳೆದರೋಜಿ
9.	ಲಕ್ಷ್ಮಿದೇವಿ	50	ಅಶ್ವಿ	ಗಂಗಿ ಗೌರಿ ವ್ಯಾಪಾರ	ಹಳೆದರೋಜಿ
10.	ಲಕ್ಷ್ಮಿ	28	ಅಶ್ವಿ	ವ್ಯಾಪಾರ	ಹಳೆದರೋಜಿ
11.	ಪಾರ್ವತಮ್ಮ	38	ಅಶ್ವಿ	ಗಂಗಿ ಗೌರಿ	ಹಳೆದರೋಜಿ
12.	ಶರಣಮ್ಮ	20	ಅಶ್ವಿ	ಗಂಗಿ ಗೌರಿ	ಹಳೆದರೋಜಿ
13.	ಗಾಳೆಮ್ಮ	35	ಅಶ್ವಿ	ಗಂಗಿ ಗೌರಿ	ಹಳೆದರೋಜಿ
14.	ಜಂಬಲಮ್ಮ	48	ಎಡವಲಿ	ಗಂಗಿ ಗೌರಿ	ಹಳೆದರೋಜಿ
15.	ಸುಂಕಲಮ್ಮ	46	ಎಡವಲಿ	ಗಂಗಿ ಗೌರಿ	ಹಳೆದರೋಜಿ
16.	ಲಕ್ಷ್ಮಿ	36	ಎಡವಲಿ	ಗಂಗಿ ಗೌರಿ	ಹಳೆದರೋಜಿ
17.	ಶಾಂತಮ್ಮ	25	ಎಡವಲಿ	ಗಂಗಿ ಗೌರಿ	ಹಳೆದರೋಜಿ
18.	ಲಲಿತ	22	ಎಡವಲಿ	ಗಂಗಿ ಗೌರಿ	ಹಳೆದರೋಜಿ
19.	ಶ್ರೀದೇವಿ	21	ಎಡವಲಿ	ಗಂಗಿ ಗೌರಿ	ಹಳೆದರೋಜಿ
20.	ದೊಡ್ಡ ಮಾರೆಮ್ಮ	58	ಎಡವಲಿ	ಗಂಗಿ ಗೌರಿ	ಹಳೆದರೋಜಿ
21.	ದೊಡ್ಡ ಮಾರೆಮ್ಮ	50	ಎಡವಲಿ	ಗಂಗಿ ಗೌರಿ	ಹಳೆದರೋಜಿ
22.	ಲಕ್ಷ್ಮಿ	21	ಎಡವಲಿ	ಗಂಗಿ ಗೌರಿ	ಹಳೆದರೋಜಿ
23.	ಪಾರ್ವತಮ್ಮ	48	ಎಡವಲಿ	ಗಂಗಿ ಗೌರಿ	ಹಳೆದರೋಜಿ
24.	ಜಯಮ್ಮ	38	ಎಡವಲಿ	ಗಂಗಿ ಗೌರಿ	ಹಳೆದರೋಜಿ
25.	ಜಂಬಕ್ಕ	21	ಎಡವಲಿ	ಗಂಗಿ ಗೌರಿ	ಹಳೆದರೋಜಿ
26.	ಅಂಜನಮ್ಮ	35	ಎಡವಲಿ	ಗಂಗಿ ಗೌರಿ	ಹಳೆದರೋಜಿ
27.	ಈರಮ್ಮ	75	ಎಡವಲಿ	ಗಂಗಿ ಗೌರಿ	ಹಳೆದರೋಜಿ
28.	ಲಕ್ಷ್ಮಿ	18	ಅಶ್ವಿ	ಗಂಗಿ ಗೌರಿ	ಹಳೆದರೋಜಿ
29.	ಅಂಜನಮ್ಮ	40	ಎಡವಲಿ	ಗಂಗಿ ಗೌರಿ	ಹಳೆದರೋಜಿ
30.	ಸಾಂತಮ್ಮ	25	ಅಶ್ವಿ	ಗಂಗಿ ಗೌರಿ ವ್ಯಾಪಾರ	ಹಳೆದರೋಜಿ

ಗಂಗೀ - ಗೌರಿ ಹಾಡು

ದಕ್ಷಿಣ ತಾಯಮ್ಮ ಎನ್ನ ವೈದಾರ , ಮಾನಂದ ಶಿವ
ಗಂಡ ವೈದಾನ, ದೊಡ್ಡಾಕಿ ಭಾಗಿ ಗೌರಮ್ಮ ಭಾಗಿ
ಸಣ್ಣಾಕಿ ಭಾಗಿ ಗಂಗಮ್ಮ ಭಾಗಿ
ಭಿಕ್ಷಾ ಬೇಡೋನಿಗಿ ಶಿವನಿಗೆ ಕೊಟ್ಟಾರ
ಗೌರಮ್ಮಗ ಕೊಟ್ಟು ಮದಿವಿಮಾಡ್ಯಾರ
ಬುಧವಾರ ಹುಟ್ಟಿದ ಭೂದ ಗಂಗಮ್ಮ
ಬುಧವಾರ ನೆರತಾಳ ಭೂದ ಗಂಗಮ್ಮ
ಅವರಪ್ಪ ಏನಂತ ಅನಕೋತಾನ
ಒಲ್ಲದ ಮಲ್ಲ ಕೊಡಬಾರದಮ್ಮ
ಒಳ್ಳೆದಲ್ಲಾ ಕೊಡಬಾರದಮ್ಮ
ಕೊಟ್ಟಿದ ಮನಿಯೆಲ್ಲಾ ನಾಶನವಾಗುವುದು.
ಮಾಡಿಕ್ಯಂಡಿದ ಮನಿ ಉದ್ಧಾರ ವಲ್ಲ
ಗಡಿಗಿನಾಽಗ ನೀರಾಗ ಕುಂದಿರಿಸಿ,
ಜೀಗ ಭಾಗ ನೀರು ಹಾಕಮ್ಮಾ
ಜೀಗ ಭಾಗ ನೀರು ಹಾಕಲ್ಲಾ
ಹೋಳಿದಂಡಿಗಿ ಒಳಗೆ ಬಿಟ್ಟು ಬರಬೇಕ
ಸಿಕ್ಕಿದವರ ಮನಿ ಉದ್ಧಾರವಾಗತ್ತಾದ
ಮಾಡಿಕೊಂಡಿದವರ ಮನಿ ಹೆಂಗ ಬೆಳತೈತೊ
ದಕ್ಷಿಣ ತಾಯಿ ದುಃಖ ಮಾಡಾಕಿ
ಮಾನಂದ ಶಿವನಲ್ಲ ಎನ್ನ ಅಳಿಯುವನು
ಹುಟ್ಟಿದ ಮಗಳ ಹೆಂಗ ಮಾಡ್ಯಾನ
ಹೊಳದಂಡಿಯೊಳಗ ಹೆಂಗ ಬಿಟ್ಟಾರ
ದುಃಖ ಮಾಡುತ್ತಾರ ತಾಯಿ ತಂದಿ ನೊಡಮ್ಮಾ
ಅಳಬ್ಯಾಡ್ರಿ ನೀವು ನಿಮ್ಮ ಮಗಳಲ್ಲಾ
ಗಂಗೀ ಮಗಳು ಗಂಗೀದಾಗಪ್ಪಾ
ಗಂಗೀವಳಗ ನೀವು ಬಿಟ್ಟು ಬರಬೇಕು
ಒಳ್ಳೆದು ಈಗ ಲೋಕದಾಗ ನಿಮ್ಮಿಂದಪ್ಪಾ
ಆ ತಾಯಿ ಬಗ್ಗಿ ನೀರು ಹಾಕ್ಯಾರ

ಕೈಯಾಗ ಬಳೆ ಇನ್ನಿಲ್ಲವಮ್ಮ
ಕೈಯಾಗ ರುದ್ರಾಕ್ಷಿ ಇನ್ನು ಕಟ್ಯಾರ
ಚಿಗರಿಯ ತೊಗಲು ಸೀರ್ಯಾಕ್ಯಾರ
ಆ ತಾಯಿ ನಾನೇ ಎನ್ನ ಗಂಗಮ್ಮಾ
ಗಡಗಿಯ ಒಳಗೆ ಎನ್ನ ಕುಂದಿರಿಸಿ
ಬೀಗಾ ಒಂದೇ ಎನ್ನ ಹಾಕ್ಯಾರ
ತೆಲಿಮ್ಯಾಗ ಹೊತ್ತುಕೊಂಡು ಪೆಟ್ಟಿಗಿ ಬಂದಾರ
ಹೋಳಿ ದಂಡಿಯೊಳಗೆ ಒಗದು ಬಿಟ್ಟಾರ
ಗಂಗಾನಾಗೆ ಗಂಗS ಬಿಟ್ಟಾರ
ನೆಲಕ್ಕ ಕುಂತಾಳ ಗಂಗ - ಬೊರಮ್ಮ
ಅಳಕೊಂತ ಇವರು ಹಿಂದ ಬಂದಾರ
ಅಂಬಿಗರಾಗಿ ಇನ್ನ ನೊಡಮ್ಮಾ
ಮೀನು ಹಿಡಲು ಆಗ ಬರ್ತಾರಮ್ಮಾ
ಅವರಿಗೆ ಭಲ್ಲೆ ತಗೊಂಡಮ್ಮಾ
ಏಳು ಮಂದಿ ಅಣ್ಣ ತಮ್ಮಂದಿರಮ್ಮಾ
ಮೀನುಗಾರದವರು ಬಲಿ ಒಡ್ಯಾರ
ಬಲೆಯೊಳಗೆ ಇನ್ನ ಪೆಟ್ಟಿಗಿ ಬಿದ್ದೈತ
ಪೆಟ್ಟಿಗೆ ಹೊರಗ ಇನ್ನ ತೆಗಿದಾರ.
ತರದು ಬಂದು ಇನ್ನ ನೋಡ್ಯಾರ
ಆವಾಗ ಹೆಣ್ಣುಮಗ್ಳು ಇನ್ನುಬೈದಾಳ
ದೆವ್ವಾ ವಲ್ಲಾ, ಪೀಡೆ ವಲ್ಲಮ್ಮಾ
ಗಂಗದಲ್ಲಿ ಸಿಕ್ಕ ಗಂಗವ್ವ ಬಾಲೆ
ಬುಧವಾರ ಹುಟ್ಟಿದ ಗಂಗವ್ವ
ಗಂಗಲ್ಲಿ ಸಿಕ್ಕವಳೆ ಗಂಗವ್ವ ಬಾಲೆ
ಅಣ್ಣವರಾದರೆ ಹೆದರಿ ಬಿಟ್ಟಾರ
ಬಾಜಾ ಭಜಂತ್ರಿ ಕೂಡ
ಕರಕೊಂಡು ಮನಿಗಿ ಇನ್ನ ಬಂದಾರ
ಮೀನು ಮಾರಿಕೊಂಡು ಇದ್ದಾರಮ್ಮ
ಬಡತನ ಅವರಿಗಿ ಜಲ್ಮಕ್ಕತಮ್ಮ
ಅಡವ್ಯಾಗ ಭೂಮಿ ಇವರೀಗಿಲ್ಲಮ್ಮ

ಊರಾಗ ಮನಿ ಅವರಿಗಿಲ್ಲಮ್ಮ
ಅಂಬಿಗರಾಗಿ ಮೀನಿಗಿ ಇಳಿಯುವರು.
ಬಡತನ ಅವರಿಗಿ ಜಲ್ಮ ಕೈತಮ್ಮ
ಗಂಗ ಸಿಕ್ಕದ ಮ್ಯಾಲ ಏನಂಬುತ್ತಾಳ
ಅಣ್ಣವ್ರು ಮೀನು ಹಿಡಿಬ್ಯಾಡ್ರಣ್ಣಾ
ಮೀನು ಕೌಜು ಹಿಡಿಬ್ಯಾಡ್ರಣ್ಣ
ಬಡತನ ನಿನ್ನಿಗಿ ಇನ್ನು ಹೊಯ್ಯತಣ್ಣಾ
ಹೊಳಿದಂಡಿ ಬಗಲಾಗ ಹಾಕು ವೈಯಾರಿ
ತೆಲಿ ಕಲಿ ಕಡಿಯಿರಿ ನೀವು ಅಣ್ಣಯ್ಯ
ಕಾಲಿಲಿ ತುಳಿಯಿರಿ ನೀವು ಅಣ್ಣಯ್ಯ
ಬಾಳುನೆಲ್ಲಾ ನೀವು ಹೊಳ ತಾಲಿ
ಮುಳ್ಳುವನೆಲ್ಲಾ ನೀರು ಒಗ್ಸ್ಯಾರೆ
ನೆಲ್ಲು ಹಾಕಿ ನೀರು ಬಳದಾರೆ
ಆಕಳು ಕುಡುಗಿಲು ನೆಗಿಲು ಕಿತ್ಯಾರೆ
ಗಚ್ಚಿನ ಮಾಳಿಗಿ ನೀವು ಕಟ್ಟಿರಿ
ಮೇಲಮಾಳಿಗೆಲ್ಲಾ ನೀವು ಮಾಡಿರಿ
ಮೂರು ಮಾಳಿಗಿ ನೀವು ಮನಿ ಕಟ್ಟಿರಿ
ಬಳ್ಳದು ಮನಿಯೆಲ್ಲಾ ನೀವು ಬೆಳಗೊದು
ಹಂಗವಾಗಲಮ್ಮ ತಂಗಿ ಗಂಗಮ್ಮ
ನೆಲ್ಲು ಹಾಕಿಕೊಂಡು ಇನ್ನು ಬಿತ್ಯಾರ
ಕುಡಿಗಿಲು ಹಿಡಿಲಾರ್ದ ಇನ್ನು ಬಳೆದಾವ
ಆವಾಗ ಇನ್ನ ಲಾರಿಗಿ ಹಾಕ್ಯಾರೆ
ಬಂಡಿಗಾಕಿ ಇನ್ನ ತಾವು ಹೊಡದಾರ
ದೊಡ್ಡ ಪಟ್ನಕ್ಕೆ ಇನ್ನು ಬಂದಾರ
ಆವಾಗ ಅಂಗಡಿ ತಾವು ಮಾಡ್ಯಾರ
ನೆಲ್ಲು ಅಂಬುಲಗಿ ಇನ್ನು ಮಾರ್‍ಯಾರ
ಆರೂನೂರು ಮೂರನೂರು ಇನ್ನು ಮಾರ್‍ಯಾರ
ಏಳು ಗಚ್ಚಿನ ಮನಿ ಇನ್ನ ಕಟ್ಯಾರ
ಗಂಗೀಗೆ ಬಾಗಿ ಎಲಿ ಕಟ್ಯಾನ
ಆಗ ಅಣ್ಣವ್ರು ಏನ್ ಅಂಬುತಾರ

ಹೊಳದಂಡಿಯೊಳ ನಾನು ಸಿಕ್ಕಿನಿ
ಹೊಳದಂಡಿಗಿ ಹಂಚಿನ ಮನಿ ಕಟ್ಟಿರಿ
ಹೂವಿನ ತ್ವಾಟ ನನಗ ಮಾಡಿಕೊಡಿರಿ.
ಹೂವಿನ ನೆರಳು ನನಗಿರಬೇಕು
ಅಂಗವಾಗಲೆಮ್ಮಾ ತಂಗಿ ಗೌರಮ್ಮ
ಗಂಗವ್ವ - ಗೌರವ್ವ ಬಾಜಿ ಆಡುವರು
ಹೊಲಿದಂಡಿಲಿ ಹಂಚಿಲಿ ಇನ್ನ ನೋಡವ್ವ
ಗಂಗನವಾಗಿ ಇನ್ನ ಸೇರ್‍ಯಾಳ
ಶಿವನೆ ವಾಗಿ ಲೋಕದಾಗಮ್ಮ
ಏನಂತಾಗಿ ನಿನ್ನ ಒಯ್ದಾನ
ಆವಾಗ ಮಠದೊರ ಎನ್ನ ಬೈದಾರ
ಈಶ್ವರ ಪೂಜಿಲ್ಲ ಎನ್ನ ಮಾಡುವರು
ಶಿವನೇ ವಾದರೆ ಎನ್ನ ಒಯ್ದಾನ
ಗೌರಮ್ಮ ಬಾಗಿಯೆ ನಂಬುತಾಳ
ಕಿಲ ಕಿಲ ನಗತಾಳ ಇನ್ನ ಗಂಗಮ್ಮ
ಆವಾಗ ಶಿವನು ಎನಂಬುತಾನ
ದೇಶದ ಮ್ಯಾಗೆ ಹೋಗಿ ಬರ್ತೀನಿ
ಉರಪಟಿ ಮ್ಯಾಲ ತಡಿಬ್ಯಾಡ ನನ್ನ
ಮೈಯೆಲ್ಲಾ ಉರಿತೈತೆ ನನ್ನ ಜೀವಕ್ಕೆ
ಶಿವನಿಗಿ ವಾಗಿ ಇನ್ನ ಹೊತಾನ
ಆವಾಗ ಗೌರಮ್ಮ ಏನಂಬುತಾಳ
ಮಗನಿಗೆ ಈರಣ್ಣ ಎನ್ನ ಹುಟ್ಯಾನ
ಗಣಪತಿ ಗಣರಾಮ ಎನ್ನ ಒಯ್ದಾನ
ಮಗನಿಗಿ ಜಟ್ಟು ಗಂಡ ನಗತಿದ್ದನಮ್ಮ
ದೇಶಾ ತಿರುಗಿ ಊರು ಶಿವನು ಬಂದಾನಮ್ಮ
ಕಂತಿ ಭಿಕ್ಷಾ ಶಿವನು ಕೇಳ್ಯಾನ
ಹೆಂಡ್ತಿ ಮನಿಗಿ ಬಂದು ಭಿಕ್ಷೆ ಬೇಡುವನು .
ಆವಾಗ ಧರ್ಮಾಯನ್ನು ತಗೊಂಡು
ಮರಾ ಹಿಡಕೊಂಡು ಆಕಿ ಬಂದಾಳ
ಶಿವನಿಗೆ ಬಾಗಿ ಇನ್ನs ನೋಡ್ಯಾಳ

ಕಿಲ ಕಿಲನೆ ನಕ್ಯಾಳ ಗೌರಿ ಗೌರಮ್ಮನೆ
ಪಕ ಪಕನೇ ನಕ್ಯಾಳ ಗೌರಿ ಗೌರಮ್ಮನೇ
ಏನನ್ನು ನೋಡಿ ನಗುತ್ತಿದ್ದ್ಯಲ್ಲಾ
ಭಿಕ್ಷೆ ಬೇಡುವನಲ್ಲಾ ಸೋಮಾರೆ ऽऽನ
ಭಿಕ್ಷೆ ಬೇಡುವನಲ್ಲಾ ಆಸರಾಗಿದ್ಯವನು
ಅಷ್ಟೊಂದು ನಿನಗೆ ಬ್ಯಾಸರ ಬಂದೈತ್ಯಾ
ನಿನ್ನ ಒಂದು ಓ ಶಿವನೇನಾ
ನಿನ್ನಾ ನೋಡಿ ನಾನು ನಕ್ಕಿಲ್ಲಾ
ಮಗನೇ ನೋಡಿ ನಾನು ನಕ್ಕಿನೀ
ನಕ್ಕಂತ ಸೌತ್ಯಲ್ಲ ನಾನು ತಂದೇನ
ನಿನ್ನ ಮ್ಯಾಲ ಸೌತಿಲ್ಲ ನಾನು ತಂದೇನ
ಈಗ ನಕ್ಕಂಗ ಆಗ ನಗಬೇಕು
ನಕ್ಕಿದ್ಯಲ್ಲ ಸೌತಿ ತರ್ತಿದ್ಯಾ
ತಂದರೆ ಒಳ್ಳೆದು ನನ ಮ್ಯಾಲೆ ಶಿವಾ
ಮುಟ್ಟಾದ ಸೀರೆ ತೇಲ್ಯಾಡೆದು
ಹೊರಗಾದ ಸೀರೆಲ್ಲ ತೇಲ್ಯಾಡೆದು
ನಾಳೆ ಬಂದು ನಿನ್ನ ಬಿಟ್ಟೇನ
ಆ ಮಾತಿಗಲ್ಲ ಈಗು ಬಂದಾನ
ಹಿಂದುಕ ಬಾಗಿ ಇನ್ನು ತಿರುಗ್ಯಾನ
ಹೊಳದಂಡಿಗಿ ಭಿಕ್ಷೆಕ ಇನ್ನು ಬಂದಾನ
ತಣ್ಣೀರ ಒಳಗೆಲ್ಲಾ ಸ್ನಾನ ಮಾಡ್ಯಾನ
ಹೂವಿನ ತೋಟಕ್ಕೆ ಇನ್ನು ಬಂದಾನ
ಮಗ್ಗಿ ಮಗ್ಗಿ ಕಡಕೊಂತ ಇನ್ನು ಕುಂತಾನ
ಮಲ್ಲಿಗಿ ಹೂವ ಕಡಕೊಂತ ಇನ್ನು ಕುಂತಾನ
ಆಗ ಗಂಗವ್ವ ಸ್ನಾನ ಮಾಡಾಕಿ
ಮನ್ಯಾಗಂಬೋದು ಸ್ನಾನ ಮಾಡ್ಯಾಳ
ಬುಟ್ಟಿ ತಗೊಂಡು ಇನ್ನು ಬಂದಾಳ
ಹೂವಾ ಬಳಕೊಂತ ಇನ್ನ ಬಂದಾಳ
ಹೂವಾ ಆರಿಸಿಕೊಂತ ಇನ್ನು ಬಂದಾಳ
ಶಿವನ ಕಡಿಗೆ ಇನ್ನ ನೋಡ್ಯಾಳ

ನಮ್ಮಕ್ಕಳ ಗಂಡ ಇಸ ಒಯ್ದಾನ
ಏಕೆ ಶಿವನೇ ನೀನು ಬಂದಿಯೊ
ಮೈಯ ಉರ್ಪನ ತಡಿಲಾರ್ದಕಮ್ಮಾ
ಹೊಳಿ ದಂಡಿಗೆಲ್ಲಾ ಓಡಿ ಬಂದಿನಿ
ತಣ್ಣೀರದಾಗೆಲ್ಲಾ ಸ್ನಾನ ಮಾಡಿನಿ
ಮಲ್ಲಿಗಿ ಹೂವಗಿಡದ ಕೆಳಗ ನಾನು ಕುಂತಿನಿ
ಮೈಯೆಲ್ಲಾ ತಣ್ಣಗ ನನಗಾಗಬೇಕು
ಆವಾಗ ಶಿವನಾಗಿ ಬಾಳ ಜೀಳತಾನ
ನಮ್ಮಕ್ಕ ಗಂಡ ಮೈ ಉರಪಾನ
ಬರ್ರೋ ಅಣ್ಣೊರೇ ಏಳು ಮಂದಿ ಅಣ್ಣಾ
ದೇಶಕೆ ಗಂಗಮ್ಮ ನಾನಿದ್ದಿನಲ್ಲಾ
ದೇಶಕ್ಕೆ ಶಿವನಿಗಿ ನಾನಿದ್ದಿನಲ್ಲಾ
ಶಿವನಿಗಿ ಕೊಟ್ಟು ನನ್ನ ಮಾಡ್ಯಾರೆ
ಯಾಕಮ್ಮ ನಾವೆ ಎನ್ನ ಕೊಡಾನ
ದೇಶ ದೇಶ ತಿರುಗೊನೆಯಮ್ಮಾ
ಗುಡಿ ಗುಡಿಯಿದ್ದಲೆಲ್ಲಾ ನಿದ್ದಿ ಮಾಡೋನು
ಒಳ್ಳೋವರಿಗೆಲ್ಲಾ ನಾವು ಕೊಟ್ಟೆವ
ಗುಡ್ಯಾಗ ನಿದ್ದಿ ಉರಾಗಲ್ಲಣ್ಣ
ಸಾಕುವಂತರ ಜೀವ ಸಾಕು ತಾವಣ್ಣ
ನನಗೇನು ಇಷ್ಟೆ ಇದ್ದರೆ ಸಂತೋಷವಣ್ಣಾ
ಕೊಟ್ರೆ ಕೊಟ್ಟರೆ ನೀವ ಣ್ಣೋರೆ
ಶಿವನಿಂದೆಲ್ಲಾ ನಾನು ಹೋಗತೀನಿ
ಅಂಜಿಗಮ್ಮಾ ನಾವಯ್ಯಿತಿವಮ್ಮಾ
ಕೇಳಮ್ಮಾ ತಂಗಿ ನಾವಯ್ಯಿತಿವಮ್ಮಾ
ಊರೆಲ್ಲಾ ತಿರುಗಿದರೆ ತಾಳಿ ಸಿಗಲಿಲ್ಲ
ಊರೆಲ್ಲಾ ತಿರುಗಿದರೆ ಹೂವ ಸಿಗಲಿಲ್ಲ
ತಾಳಿಯಿಲ್ಲದಂಗೆ ಹೆಂಗ ಮದಿವಿ ಮಾಡ್ಯಾನ
ಮ್ಯಾಳ ವಿಲ್ಲದ ಮದಿವಿ ಹೆಂಗ ಮಾಡ್ಯಾನ
ಎಲ್ಲೋರು ಧಡ್ಡೋರು ನೀವು ಅಣ್ಣಂದಿರಾ
ಅಂಬ್ರೆ ಹೂವಾ ಅಲಿಶಿಣಾ ಧಾರ

ಲೋಕಾದಲ್ಲಿ ಏನಂಬುತ್ತಾಳೆ
ಆವಾಗ ಮಲ್ಲಿಗಿ ಹೂವಲ್ಲಮ್ಮಾ
ಎಕ್ಕಿ ಹೂವಾ ಮಲ್ಲಿಗಿ ಹೂವಮ್ಮಾ
ಬನ್ನಿ ಪತ್ರಿ ಇನ್ನು ತಂದಾರ
ಬಾಯಿಲ್ಲ ಪದ ನಿವ್ಯಾಡಾರೆ
ತಾಳ ಕಟ್ಟು ಕಣ್ಣ ವಣದಿರೆ
ಮ್ಯಾಳ ತಾಳ ಇದೇ ಬಾಯಣ್ಣ
ಹಂಗೆ ಆಗಲಿ ನಿನ ಮಾತಮ್ಮ
ಅಂಬ್ರೆ ಹೂವ ಅರಿಶಿಣ ಧಾರ
ಎಕ್ಕಿ ಹೂವ ಮಲ್ಲಿಗೆ ಹೂವಮ್ಮಾ
ಆವಾಗ ಇನ್ನು ಬನ್ನಿ ಪತ್ರಿ
ಪದ ಹಾಡ್ಯಾರ ತಾಳ ಕಟ್ಯಾರ
ಆ ತಾಯಿಯಮ್ಮ ಧರ್ಮ ಭವಾನಿ
ಉಡಿಯಕ್ಕಿವಾಗಿ ಆಧಾರವಾಗಿ
ದೇಶ ತಿರುಗುವ ಜಂಗಮ ವೈದಾನ
ಎಲ್ಲೆಲ್ಲಂಥ ನಾವು ಹುಡುಕಾಣಾ
ಎಲ್ಲೆಲ್ಲಂಥ ನಾವು ಬರಾಣಾ
ಕೇಳರೇ ಅಣ್ಣವ್ರೆ ಅಳಬ್ಯಾಡ್ರಣ್ಣಾ
ಹಬ್ಬ ಹುಣ್ಣಿಗಿ ಕಳಬ್ಯಾಡ್ರಣ್ಣಾ
ನನ್ನ ದುಃಖ ನಿಮಗ ಬ್ಯಾಡ್ರಣ್ಣಾ
ತಿಳಿದಾಗ ವಲ್ಲಾ ನಾ ಬರ್ತಿನಣ್ಣಾ
ಹದಿನೈದು ದಿವಸ ನಾನಿದ್ದೀನ
ದೀಪಾ ಹಚ್ಚಿ ನಾ ಹೋಗೇನ
ಅದೇ ದೀಪಾ ಬೆಳಕು ಬಣ್ಣಾ
ಆರುತಿ ಬೆಳಕಿಗೆ ನಾನು ಹೋಗೀನ
ಬಡವರು ಗೌರಮ್ಮ ನಾನು ಹೋತೀನ
ವರ್ಷಿಗೊಂದು ಸರ್ತಿ ನಾನು ಬರ್ತಿನ
ನೀವು ಹಬ್ಬ ಕಳಬ್ಯಾಡ್ರಣ್ಣಾ
ಹುಡುಕಾಡಲಿಕ್ಕೆ ಬರಬ್ಯಾಡ್ರಣ್ಣಾ
ದೇಶಕ್ಕೆ ಗಂಗಮ್ಮ ನಾನು ಹೊಯ್ಯಾತೀನಿ

ದೇಶಕ್ಕೆ ಒಂದೇ ಇನ್ನೂ ಬಂದಳಲ್ಲ
ಆಗಲಿ ಶರಣು ಹೋಗಮ್ಮ
ಶರಣೆ ನನ ತಂಗಿ ಗಂಗಮ್ಮ ಹೋಗಮ್ಮ
ಗಂಗಮ್ಮಾವಾಗಿ ಇನ್ನು ಬರ್ತಾಳ
ಶಿವನೇ ವಾಗಿ ಮುಂದೆ ಬರ್ತಾನ
ಒಂದರ ದಾಳಿ ಇನ್ನ ಬರ್ತಾರ
ಆಗ ಹೋಗುವನು ಶಿವನು ನಿಂತಾನ
ಯಾಕಯ್ಯ ಶಿವರಾಯ ನಿಂತು ಕೊಂಡಿ
ಮೈಯೆಲ್ಲಾ ಉರಿತೈತಿ ತಡಿಲಾರೆ ನಾನು
ದೇಶಕ್ಕೆ ಗಂಗಮ್ಮ ನೀನೆ ಹೆಸರೆಲ್ಲಾ
ನನ್ನ ತಲಿಮ್ಯಾಲೆ ನೀನು ಕುಂತುಕೊಳ್ಳು
ತಲಿಮ್ಯಾಲೆ ಹೆಣಮಗಳು ಹೆಂಗ ಕೂಡಲಿ
ಮುಟ್ಟಾದ ಹೆಣಮಗಳು ಹೆಂಗ ಕೂಡಲಿ
ಭೇದವೆ ಇಲ್ಲ ಗಂಗ ಗೋಪಾನಿ
ಅಂಟವಿಲ್ಲದಾಂಗ ನಾನು ಹುಟ್ಟನಿ
ಮೈಲಿಗೆಯಿಲ್ಲದಂಗ ನಾನು ಬೆಳದಿನಿ
ಗಂಗನೇ ತಾಯೆಲ್ಲಾ ಲೋಕಕ್ಕೆ ನಿನ್ನ
ಭೇದವೆ ಇಲ್ಲ ನನ್ನ ಜೀವಕ್ಕೆ
ತಲಿಮ್ಯಾಲ ಇನ್ನ ಕುಂದ್ರಿಸಿಕೊಂಡ
ತಲಿಕೂದಲೆಲ್ಲಾ ಸುತ್ತಲಿಸಿಕೊಂಡಾನ
ಉಸಿರಾಡವಲ್ದು ನನ್ನ ಜೀವಕ್ಕೆ
ಗಾಳಿ ಬರವಲ್ದು ನನ್ನ ಜೀವಕೆ
ಕುತ್ತಿ ಮಟ ನೀನು ಸುತ್ತೈಯ್ಯಾ
ನೋಡಲಿಕ್ಕೆ ದೇಶ ನೋಡಯ್ಯಾ
ಮಾತಾಡಲಿಕ್ಕೆ ಗಾಳಿ ಬಿಡಯ್ಯಾ
ಕುತ್ತಿ ಮಟ ಇನ್ನ ಸುತ್ತಿಕೊಂಡಾನ
ಗಂಗನಿಗಿನ್ನು ಹೊತ್ತುಕೊಂಡನಮ್ಮಾ
ಗೌರಿ ಮನಿಗಿನ್ನು ಬಂದು ಕೊಂಡಾನೆ
ಆಗ ಗೌರಿ ನೀರು ಕೊಡಲೆ
ಚರಿಗೆ ನೀರು ಇನ್ನು ತೊಗೊಂಡು

ಆಗ ಪಾದ ಇನ್ನು ತೊಳದಾನಮ್ಮಾ
ತಲ್ಯಾಗ ಗಂಗಮ್ಮ ಬಗ್ಗಿ ನೋಡ್ಯಾಳ
ನಮ್ಮಕ್ಕ ಹೆಂಗ ಪಾದಕ್ಕೆ ಪೂಜೆ ಮಾಡ್ಯಾಳು
ಗಂಡನ ಪೂಜೆ ಹೆಂಗೆ ಮಾಡ್ಯಾಳು
ತಾಳಿ ಕಟ್ಟಿದವಳು ಏಟು ಚೆಂದಳಾ
ಬಗ್ಗಿ ನೋಡುವಾಗ ನೆಳ್ಳು ಕಂಡೈತಿ
ತೀರಥ ಒಳಗೆ ಗಂಗ ಕಂಡ್ಯಾಳ
ಒಂದೇ ಪಾದ ಗೌರಿ ತೊಳದಾಳ
ಇನ್ನೊಂದು ಪಾದ ಹಂಗೆ ಬಿಟ್ಟಾಳ
ಆವಾಗ ಶಿವರಾಯ ಏನಂಬುತಾನ
ಕೇಳಲೇ ಎಲೇ ಗೌರಿ ನೀನು ಮಾತಾಡೆ
ಇನ್ನೊಂದು ಪಾದೆಲ್ಲಾ ಯಾರಿಗೆ ಬಿಟ್ಟಾಳೆ
ನನ್ನ ಸ್ವಂತದಲ್ಲಾ ಗಂಗಿ ಸ್ವಂತದಯ್ಯಾ
ನನಗ ಕಾಣಲಾರ್ದ ಗಂಗೀ ನಿನಗೆಲ್ಲಿ ಕಂಡ್ಳು
ಮೈಯೆಲ್ಲಾ ಹೊಯ್ದಾಳ ನೀರನ್ನೆಲ್ಲಾ
ತೆಲಿ ಮ್ಯಾಲೆ ಗಂಗಮ್ಮ ಬಗ್ಗಿ ನೋಡ್ಯಾಳೆ
ಏಸ ದೀನ ಇರಬೇಕು ತಲಿ ಮ್ಯಾಲೆ ನಾನು
ತಲೆ ಮ್ಯಾಗಿಂದ ಕುಪ್ಪಳಿಸಿ ಕೆಳಗ ಹಾರ್ಯಾಳ
ನಿನ ಗಂಡವಲ್ಲಕ್ಕ ನನ ಗಂಡನಕ್ಕ
ನಿನಗೊಂದು ಪಾದ, ನನಗೊಂದು ಪಾದಕ್ಕೆ
ಕೈಯಾಗ ಚರಗಿಯೊಂದು ತಗೊಂಡಾನ
ಪಾದಕ್ಕೆ ಬಿದ್ದು ಪಾದ ತೊಳದಾಳ
ಬಿತ್ತಮ್ಮ ಜಗಳ ಅಲ್ಲಿಗೆ ನೋಡು
ನನ ಪಾದ ಗಂಡನಿಗೆ ಎದ್ದು ಬಂದವಳೆ
ಜೋಳಿಗಿ ನೊಡೆಲ್ಲಾ ನೀನು ಬಂದವಳೆ
ಅಂಬಿಗರ ಕೈಯಾಗ ನೀ ಬೆಳೆದು ಬಂದವಳೆ
ಏಡಿ ಕಪ್ಪಿ ತಿಂದು ಬೆಳೆದವಳೆ
ಒದ್ದೇನೆ ನಾನು ನಿನ್ನ ಎದ್ದು ಬಂದವಳೆ
ನನ್ನ ಮ್ಯಾಲೆ ಒದ್ದವಳು ಬುದ್ಧಿ ಇಲ್ಲಕ್ಕ
ನಿನ್ನ ತಂದವನು ಶಿವನು ವೈದಾನ

ತಂದವನು ಗೂಟಾ ಜಗಳವಾಡಿಯಕ್ಕ
ಶಿವನು ಕಿಲ ಕಿಲ ಎಂದು ನಕ್ಕ್ಯಾನ
ನಕ್ಕು ತಿದ್ದಿ ಬುದ್ದಿಲ್ಲವಯ್ಯಾ
ತಂದವನು ಬಲ್ಲ ನಗುತ್ತಿದ್ದೀಯಾ
ಇಬ್ರು ಹೆಂಡ್ರು ನಿನಗ್ಯಾಕಯ್ಯಾ
ಕೇಳಲೇ ಗೌರಿ ಎಲೆ ನೀನು
ದೊಡ್ಡವಳಲ್ಲಾ ಬುದ್ಧಿಯಿದ್ದವಳಲ್ಲಾ
ಚಿಕ್ಕವಳ ಕೂಟ ವಾದಯಾತಕ್ಕ
ಚಿಕ್ಕವಳ ಕೂಟ ಜಗಳ ಯಾತಕ್ಕ
ಒಂದ್ ತಾಯಿ ಮಕ್ಳು ಒಂದಿರಬೇಕು.
ಒಂದು ಗಂಡನ ಪಾದ ಹಿಡಕ್ಯಂದಿಲ್ಲಿ
ಗುಡ್ಯಾಗ ನಿದ್ದಿ ಊರಾಗವಣ್ಣ
ನಾಲ್ಕು ಮನಿ ನಾನು ಭಿಕ್ಷೆ ಬೇಡನ
ಭಿಕ್ಷೆ ಬೇಡಿ ನಾನು ಸಲ್ಹಾಕೋನು
ಉಂಬಲಾರ್ದ ನೀವು ಗುದ್ವ್ಯಾಡತೀರ್ಯಾಕ
ತಿಂಬಲಾರ್ದ ನೀವು ಗುದ್ವ್ಯಾಡತೀರ್ಯಾಕ
ಯಾಕಯ್ಯ ಶಿವರಾಯ ಹಿಂಗ ಮಾತಾಡ್ತಿ
ನನ ಮ್ಯಾಲ ಸೌತಿ ಯಾಕ ತಂದೈಯ್ಯಾ
ಏಡಿ, ಕಪ್ಪಿ ನಾನು ತಿಂಬೋಳಲ್ಲಾ
ಆಂಚಿಗರ ಕೈಯಾಗ ಬೆಳೆದು ಬಂದೋಳು
ಇಬ್ಬರಲ್ಲಿ ಒಬ್ಬರನ್ನು ಬಿಟ್ಟು ಬಿಡೈಯಾ
ಆ ಮಾತಿಗೆ ಶಿವರಾಯ ಏನಂಬುತ್ತಾನೆ.
ನಿನ್ನನ್ನ ಬಿಟ್ಟನಿ ಗಂಗ ಬಿಡಲಾರೆ
ಬೇಕಾಗಿ ಅವಳ್ನ ನಾ ತಂದು ಕೊಂಡಿನಿ
ತಂದು ಕೊಂಡವಳಲ್ಲಾ ಹೆಚ್ಚಾದಳೇನು
ಮದಿವ್ಯಾದ ಹೆಣ್ತಿ ಕಮ್ಮ್ಯಾದಳೇನು.
ಗುಡಿಗಿ ಬಿದ್ದು ಜೀವ ಸಾಯುವುದಲ್ಲದ ಜೀವ
ಮಠಕೆ ಹೋಗಿ ನೀವು ಹಾಳಾದಿರಯ್ಯ
ಕಪ್ಪಗಿದ್ದವಳು ಹೆಚ್ಚಾದಳೇನು
ಕೆಂಪಗಿದ್ದವಳೆಲ್ಲಾ ಕಮ್ಮ್ಯಾದಳೇನು

ಇಬ್ರಿಗೂ ನಾನು ಏನು ಹೇಳಲಾರೆ
ನಿಮ್ಮವ ನಾನಲ್ಲ ಹೊಂಟಹೊಗತಿನಿ
ಶಿವನೆ ಬಿಟ್ಟನಮ್ಮ ಇನ್ನ ದಾರ್ಯಮ್ಮ
ಈಶ್ವರ ಮಠಕ್ಕೆ ಶಿವನು ಬಂದಾನ
ಈಶ್ವರ ಮಠದಾಗ ಶಿವನು ಕುಂತಾನ
ಆಗ ಕಂಬಕ ಮಕೊಂಡಾನ
ಆವಾಗಮ್ಮಾ ಏನಂಬುತಾಳ
ಶಿವನೇ ಹ್ವಾಗಿ ಮಕಂಡಾನಮ್ಮ
ಚಕ್ಕಂದು ಎದ್ದಂಗೆ ಮಲಗ್ಯಾನಮ್ಮ
ಆವಾಗ ಗಂಗಮ್ಮ ಕಣ್ಣಿಲಿನೋಡ್ಯಾಳ
ಅಳಕೋತ ಯಾಕೆ ನೀ ಹೋಗತಿ ಯಕ್ಕಾ
ಹುಲಿ ಬಿದ್ದ , ನಾವೆಲ್ಲ ಯಾಕ ಸಾಯೋಣ
ಮಡಿ ಬಿದ್ದೆ ನಾವೆಲ್ಲ ಯಾಕ ಸಾಯೋಣ
ನಿನ್ನೆ ಬಂದವಳಲ್ಲಾ ನಾ ಹೋಗತೀನಿ
ಮೊನ್ನೆ ಬಂದವಳಲ್ಲಾ ನೀನಿರಕ್ಕ
ಅಲಕೊಂತ ನೀನು ಹೋಗಬ್ಯಾಡಕ್ಕ
ನಕ್ಕಂತ ನಾನು ಗಂಗೀ ಹೋಗೇನ
ನಕ್ಕಂತ ನಾನು ತವರು ಮನಿ ಹೊಗೆನ
ನಕ್ಕಂತ ಗಂಗಮ್ಮ ಬಂದು ಬಿಟ್ಟಾಳ
ಅಣ್ಣೋರ ಮನಿ ತನಕ ಇನ್ನು ಬಂದಾಳ
ಅಂಬಿಗರ ತಂಗಿ ಇನ್ನು ಬಂದು ಬಿಟ್ಟಾಳ
ಏನಮ್ಮ ತಂಗಿ ಬಂದು ಬಿಟ್ಟಿಯೇ
ನಿಮ್ಮಂಗ ನೋಡೊರು ನನಗ್ಯಾರಿಲ್ಲಣ್ಣ
ಅದಕ್ಕಾಗಿ ನಾನು ಓಡಿ ಬಂದಿನಿ
ಹಂಗೆ ಆಗಲಿ ತಂಗಿ ಗಂಗಮ್ಮ
ನಿನಮನಿ ನಿನಗೆಲ್ಲಾ ಇನ್ನೈತಲ್ಲಾ
ಹೂವನು ತ್ವಾಟ ನಿನಗೈತಲ್ಲಾ
ಮನ್ಯಾಗ ತ್ವಾಟದಾಗ ತಾ ಹೊಯ್ಯತಾಳಲ್ಲಾ
ಗಂಗಮ್ಮ ಬಂದ ಇನ್ನು ಎರಡು ದಿವಸಕ್ಕೆ
ಗೌರಮ್ಮ ಹೊರಗಾಗಿ ಇನ್ನು ಕುಂತಾಳ

ಮಗನೇ ಈರಣ್ಣ ಗಣಪತಿ ಮಗ
ಸೇದೆಲ್ಲಾ ಬಾಯೆಲ್ಲಾ ಸೇದಿಕ್ಯಂಬಾರೋ
ಕೊಡಾ ತೊಗೊಂಡು ನೀನು ಹೋಗಪ್ಪಾ
ಸೇದಲ್ಲಾ ಬಾಯೆಲ್ಲಾ ನೀರಿಲ್ಲಮ್ಮಾ
ಹೊಳಿ ದಂಡಿಗಿ ಹೋಗಿ ನೀರು ತುಂಬಿಕೊಂಡು ಬಾರೋ
ಹೊಳಿ ದಂಡಿವೆಲ್ಲಾ ಒಣಗಿಹೋಗ್ಯೆತೊ
ಎಲ್ಲೆಲೂ ನೋಡಿದ್ರು ನೀರಿಲ್ಲಮ್ಮ
ನನ ಜೀವಕ್ಕಾಗಿ ಕಷ್ಟ ಪಡಬ್ಯಾಡ
ಆಗ ತಂಗಿ ಗಂಗ ನೋಡ್ಯಾಳ
ನಮ್ಮಕ್ಕ ಸತ್ಯವ ಈಗ ಕಂಡೇನ
ನಮ್ಮಕ್ಕ ಈಗ ಕೈಗಿ ಸಿಕ್ಕಾಳ
ಗಾಳಿದೇವು ಬಾರೋ, ಕಾಸವಣ್ಣವಯ್ಯಾ
ಮಳೆ ದೇವು ಬಾರೋ ಬುದ್ಧಿವಂತಣ್ಣಯ್ಯ
ಬಿಸಿಲು ದೇವು ಬಾರೋ ದೊಡ್ಡವಣ್ಣವಯ್ಯ
ಏನಮ್ಮಾ ತಂಗಿ ಲೋಕಗಂಗಮ್ಮ
ಲೋಕದಾಗ ನಿನಗ ಏನು ಕಷ್ಟವಮ್ಮ
ಇಲ್ಲ ಅಣ್ಣರ ಲೋಕದಾಗ, ಅಣ್ಣಾರಯ್ಯ
ಗಾಳಿಯು, ಮಳಿಯು ತಡಿಯಬಿರಣ್ಣಾ
ಗಾಳಿ ಮಳೆ ಬಂದು ಮಾಡಣ್ಣಾ
ಎಲ್ಲೆಲ್ಲೂ ನೀರಿಲ್ಲದಂಗ ನೀನು ಮಾಡಣ್ಣ
ಬಿಸಿಲು ಬಣ್ಣ ಹೆಚ್ಚು ಮಾಡಣ್ಣಾ
ಗಾಳಿ ಮಳಿಗೆಲ್ಲಾ ತಡೆಲಾರ್ದೊರು
ಬಿಸಿಲಿಗಿ ಬಣ್ಣ ಒಣಗತಾರಣ್ಣ
ಹಂಗೆ ಆಗಲಿ ಗಂಗಿ ತಂಗೆಮ್ಮಾ
ಎಲ್ಲೆಲ್ಲಿ ನೋಡಿದರೇ ನೀರಿಲ್ಲಮ್ಮ
ಗುಡ್ಡ್ಯಾಗೆ ಮೂಲೆಲಿ ಗೌರಿ ಕುಂತಾಳ
ಏನಂಥ ಅಂತಾಳ ಮಗನಿಗಿ ನೋಡಮ್ಮ
ನಿಮ್ಮ ತಾತನೂರು ಹೋಗಿ ಬಾ ಮಗನೆ
ಎರ್ಡು ಕೊಡಾ ತಗೊಂಡು ಇನ್ನು ಬರತಾನ
ದಕ್ಷಿಣೆ ಅವ್ವಾ ನಿನಗೆ ಶರಣವ್ವಾ

ಮಾನಂದ ಶಿವಾ ನಿನಗೆ ಶರಣವ್ವಾ
ಅವ್ವ ತಾತನವರಿಗೆ ಇನ್ನ ಕೇಳತಾನ
ನಮ್ಮೂರದಾಗ ನೀರೇ ಇಲ್ಲವ್ವಾ
ನಮ್ಮೂರದೊಳಗೆ ನೀರೇ ಇಲ್ವವ್ವಾ
ನಿಮಗಿಲ್ಲ ನೀರು ನಮಗೆಲ್ಲಿ ಬಂತು
ನಿಮಗಿಲ್ಲ ಮಳೆ ನಮಗೆಲ್ಲಿ ಬಂತು
ದನಕರ ಸಾಯಿತಿದ್ದಾವ
ಅದರಾಗಿನ ಹಾಲು ನಾವು ಕುಡಿದೆವ
ಆಕಳ ಹಾಲೆಲ್ಲ ಇನ್ನ ಕುಡಿದೆವ
ನಿನ್ನಿಷ್ಟ ಅಮ್ಮ ಎನ್ನ ಕಳಿಸ್ಯಾಳ
ನಿನ ಮಗಳು ಬಾಗಲಿಗೆ ಎನ್ನ ಕಳಿಸ್ಯಾಳ
ಎರ್ಡು ಕೊಡಾ ಕೊಟ್ಟು ಕಳಿಸ್ಯಾಳ
ಮನಿಮಗಳನ್ನು ಕಾದು ಕುಂತಾಳ
ಚಿಕ್ಕೊಳು ಕೂಟೆಲ್ಲಾ ವಾರಿಯಾಕಪ್ಪ
ಮಾಯಗಾರ್ತಿ ಗಂಗೀ ಮಾಯ ಮಾಡ್ಯಾಳ
ಒಬ್ಬ ಸಾಯೋದು ಲೋಕದಾಗಲ್ಲ
ಲೋಕಕ್ಕ ಸಾಯಂಗ ಇನ್ನು ಮಾಡ್ಯಾಳ
ಆವಾಗಮ್ಮ ಏನಂಬುತಾಳ
ಮಗನೇ ಸ್ವಲ್ಪತ್ತ ಇಲ್ಲೆರಣ್ಣಾ
ನೀರೋ ಇಲ್ಲದಾದರೆ ನಾನು ಕೂಡಲಾರೆ
ಎಲ್ಲೆಲ್ಲಿ ಇಲ್ಲಪ್ಪ ನೀರು ಕೆರ್‍ಯಾಗ
ಒಂದು ಕೊಡಪಾನ ಹಾಲು ಕೊಟ್ಟೆವ
ಒಂದು ಕೊಡಪಾನ ತುಪ್ಪ ಕೊಟ್ಟೆವ
ತುಪ್ಪಾ ಉಂಬೋದು ನನಗ್ಯಾಕಮ್ಮ
ಹಾಲೆಂಬುದು ಮೈಯೆರಿಯುವುದು
ಎರಡೇ ಕೊಡಹಿಂಡಿ ಕಳಿಸ್ಯಾರ
ಮಗನು ಗಣಪತಿ ತಂದು ಬಿಟ್ಟಾನ
ಶರಣೇ ತಾಯಿ ಎನ್ನ ಗೌರಮ್ಮ
ನಿನ್ನ ತಾಯಿಯಾದ್ರೆ ನಿನ್ನ ಕಳಿಸ್ಯಾಳ
ಒಂದು ಕೂಡಪಾನ ಹಾಲು ಕಳಿಸ್ಯಾಳ

ಒಂದು ಕೊಡಪಾನ ತುಪ್ಪ ಕಳಿಸ್ಯಾಳ
ತುಪ್ಪ ಅಂಬೊದು ಚರಿಗ್ಯಾಗ ಹಾಕ್ಯಳ
ಹಾಲಂಬುದು ಮೃಗ್ವಾಕ್ಯಾಳ
ಎಲ್ಲೆಲ್ಲಿ ಇರಿವೆಲ್ಲಾ ಓಡಿ ಬಂದಾವ
ಎಲ್ಲೆಲ್ಲಿ ಕೆಂಪಿರವಿ ಇನ್ನ ಬಂದಾವ
ಎಲ್ಲೆಲ್ಲಿ ಕರೆ ಇರವಿ ಓಡಿ ಬಂದಾವ
ಕಂಡಲ್ಲೆಲ್ಲಾ ಕಡಿತಾವ
ಲಬಸಿ ಲಬಸಿ ಬಾಯಿಗಿ ಬಡಿತಾವ
ಮಗನೆ ಗಣಪತಿ ನನ ಮಾತ ಕೇಳೊ
ಭಲ್ಲೆವ ಕೊಡೊ ತಿವಿಕೊಂತಿನಿ
ಯಾಕಮ್ಮ ತಾಯಿ ಏನು ಕಷ್ಟವಮ್ಮಾ
ಇರಿವಿಗಿ ಆಗಿ ನಾತಡಿಲಾರೆ
ಗಂಡಿರವಿಗಾಗಿ ನಾನಿರಲಾರೆ
ಎಂಥವಳು ತಾಯೆ ನೀನಿರಮ್ಮಾ
ಗಂಡನ ಹೆಂಡ್ತಿಯಾಗಿ
ತಂದವಳ ಕೂಟೆಲ್ಲ ಯಾಕೆ ಗುದ್ದ್ಯಾಡ್ದೆ
ಲೋಕವ ಸಾಯಂಗ ಮಾಡಬ್ಯಾಡವ್ವಾ
ಇನ್ನ ನಡಿಯಮ್ಮ ತಂಗಿ ತವರಿಗೆ
ಹಾಂಗಪ್ಪ ಅವ್ರ ಮನಿಗೆ ಹೆಂಗೋಗೊಣ
ಅಂಜಿಗರ ಮನಿಗಿ ಹೆಂಗs ಹೋಗೋಣ
ಹೆಂಗ ನಾವಲ್ಲೆ ಹಿಂಗ ಹೋಗೋಣ
ಹೋಗೊತನಕ ನಮಗೆ ತಪ್ಪಂಗಿಲ್ಲ
ದೇಷೆಲ್ಲಾ ಹಾಂಗ ಹಾಳ ಮಾಡಬ್ಯಾಡ
ಬಾರಮ್ಮ ಹೋಗೋಣ ಇನ್ನ ಮನಗಿ
ಮ್ಯಾಳ ತಾಳ ಇನ್ನ ತರತಾರ
ಚಕ್ಲೆ ಬುಂದೆ, ಬಾಲುಷಮ್ಮಾ
ಗೌರಿಗಾಗೇ ಇನ್ನತರ ತಾಳ
ಗಂಗಮ್ಮಗಾಗೆ ಬೆಳಕಾತಮ್ಮ
ಗೌರಿನು ನೀನು ಗಂಗೀನು ನೀನಮ್ಮ
ತಂಗಿಗಾಗಿ ಗಂಗೀ ಕೇಳಮ್ಮ

ತಂಗಿ ಬರೋ ಶಬ್ದ ಯಾರು ಕೇಳ್ಯಾರ
ಗಂಗೀ ಹ್ವಾದರೆ ಇನ್ನು ಕೇಳ್ಯಾಳ
ನಮ್ಮಕ್ಕ ನಮ್ಮ ಮನಿಗಿ ಹೆಂಗ ಬರ್ತಾಳ
ಇವಾಗ ನಮ್ಮಕ್ಕ ಸತ್ಯ ನೋಡೆನ
ಹೊತ್ತಿಗೆ ಮೂರು ಸರ್ತಿ ಸ್ನಾನ ಮಾಡಾಕಿ
ಮೂರು ಸರ್ತಿವಾಗಿ ಪೂಜಿ ಮಾಡಾಕಿ
ನೀರಿಲ್ಲದ ಪೂಜೆ ನಾನು ನೋಡೆನ
ಈ ಜೀವ ನಾತೆಲ್ಲ ನಾನ ಹಿಡಿದೆನ
ದೊಡ್ಡ ದೊಡ್ಡ ಮಿನೆಲ್ಲಾ ಕಂಬಕ್ಕ ಕಟ್ಯಾಳ
ಸಣ್ಣ ಸಣ್ಣ ಮೀನೆಲ್ಲ ಮನಿ ಮುಂದೆಮ್ಮಾ
ಎಡಿ , ಕಪ್ಪೆಲ್ಲಾ ಒಣಗ್ಯಾಕ್ಯಾಳ
ಗಬ್ಬು ನಾತು ಇನ್ನು ಬರ್ತಾವ
ಮ್ಯಾಳ ಊದೋರೆಲ್ಲಾ ಓಡಿ ಹೋಗ್ಯಾರ
ಈ ನಾತು ಎಲ್ಲ ನಾ ತಡೀಲಾರೆ
ಈ ಗಬ್ಬು ನಾತಿಗೆಲ್ಲಾ ನಾ ತಡೀಲಾರೆ
ಯಾವಾಗ ಮದಿವಿ ಈರಣ್ಣ ಕೇಳೊ
ಗಣಪತಿ ಹೆಂಗ ನಾ ತೂರಬಿಡಲಿ
ಈ ಗಬ್ಬು ನಾತಿಗೆ ನಾ ತಡೀಯಲಾರೆ
ಹೆಂಥವಳಮ್ಮ ನೀನು ಗೌರಮ್ಮ
ಮೂಗು ಹಿಡಿದ್ರೆ ತಪ್ಪು ಹಿಡಿತಾಳ
ಬಾಯಿ ಮುಚ್ಚಿದ್ರೆ ಜೊಂಡು ತೆಗಿತಾಳ
ಹಂಗೆ ಹೊಗಬೇಕು ಮೈಲಗಿ ಜಲಮ
ಜೀವನ್ನ ಹಿಡಕೊಂಡು ನೀ ಹೋಗಬೇಕು
ಎಡಿ, ಕಪ್ಪಿ ತುಳಕೊಂತಮ್ಮಾ
ಹಂಗೆ ನೀನು ಹೊಗಬೇಕಮ್ಮಾ
ಜೀವೆಲ್ಲಾ ಮೈತುಂಬ ಇಟ್ಟುಕೊಂಡಾಳ
ತುಳಕಂತವಾಗಿ ಆ ತಾಯಿ ಹಾಂಗೆ ಬರತಾಳ
ಶರಣೇ ತಂಗಿ ಗಂಗೆಭೂವಾನಿ
ನನಗ್ಯಾಕ ಶರಣಕ್ಕ ತಿರುಗಿ ಶರಣಕ್ಕ
ಶರಣ ಹಾಕತ್ತ ಯಾಕ ಬಂದಿಯೊ

ಹೊರಗಾಗಿ ನಾನು ಆರು ದಿನವಾಯ್ತು
ಮನಿಯಾಗ ನೀರಿಲ್ಲ, ನನಗಿಲ್ಲಮ್ಮ
ಸೇದಿಲ್ಲ, ಬಾಯಿಲ್ಲ, ನೀರಿಲ್ಲಮ್ಮ
ಹೊಳಿ ದಂಡಿದಾಗ ನೀರಿಲ್ಲಮ್ಮ
ನಿನ ಮನಿಯಾಗಾನ ನೀರು ಕೊಡಮ್ಮ
ನಿನಗಿಲ್ಲ ಮಳೆ ನನಗೆಲ್ಲೆಕ್ಕ
ನಿನಗಿಲ್ಲ ತಂಗೆವ್ವ ನನಗೆ ಎಕ್ಕಾ
ಹೊತ್ತಿಗೆ ಮೂರು ಸರ್ತಿ ಸ್ನಾನ ಮಾಡಾಕಿ
ಮೂರು ಸರ್ತಿ ನೀನು ಪೂಜಿ ಮಾಡಾಕಿ
ಗಳೀಜದವಳು ನಾನು ಅಂಜಿಗದವಳು
ಎಡಿ, ಕಪ್ಪ ತಿಂಬೋಳೆ ಯಕ್ಕಾ
ನೀಚದವಳ ಹತ್ತಿಗಿ ಯಾಕ ಬಂದಳೊ
ನೀರೆ, ಭಾವಿ ಜಿದ್ದಿಳಲಕ್ಕಾ
ನೀರೆ ನೀನು ಕೇಳಬ್ಯಾಡಕ್ಕಾ
ನಿನಗೆಯಾಗಿ ಶರಣು ತಂಗೆಮ್ಮಾ
ವಡವಿ, ವಸ್ತ್ರ ನಾನು ಕೊಟ್ಟೆನ
ವಡವಿ ವಸ್ತ ನಾನೇನು ಮಾಡಲೆ
ಹೊಲಮನಿ ನಾನು ಕೊಟ್ಟೆನ
ಹೊಲಮನಿ ನಾನೇನು ಮಾಡ್ಲಿ
ಗುಡಿ ಗುಡಿಲಿ ಐತಿ ಊರಾನ ಹಣ್ಣ
ದೇಶಕ್ಕೆ ಗಂಗಮ್ಮ ನಾನಿದಿನಲ್ಲಾ
ದೇಶವೇ ಬೆಕಕ್ಕಾ ನನಗೆ ನೋಡಕ್ಕಾ
ಒಣಾ ಮನಿ ನನಗೆ ಬೇಕಿಲ್ಲಾ
ಆ ಮಾತಿಗೆಲ್ಲಾ ಇನ್ನ ನೋಡ್ಯಾನ
ಗಣಪತಿ ಮಗ ಏನೆಂಬುತಾನ
ಕೇಳಮ್ಮಾ ಗೌರಮ್ಮ ನಿನಗೆ ಶರಣಮ್ಮ
ನನ ಪಾಲ ಗಂಡಕ್ಕೆ ಬಂದು ಬಿಟ್ಟಿಯೊ
ನನ ಗಂಡನೆಂಬ ನಾನು ಕೊಟ್ಟೆನ
ನನ ಗಂಡನಲ್ಲ ನಮ್ಮ ನಿನ್ನ ಗಂಡನಮ್ಮ
ಎದ್ದು ಬಂದಳಮ್ಮ ಶಿವನೆ ಇಲ್ಲವಮ್ಮಾ

ಆಗಿಲ್ಲ ಮದುವಿ ಈಗ ಮಾಡೇನ
ಅಂತಾ ನೀನು ಮಾತು ಕೊಡಮ್ಮ
ಹೆಂಗಾ ಕೊಡಲವ್ವ ನನ್ನ ಮಗನೀನು
ಬೆಳ್ಳಿ, ಬಂಗಾರ ನಾನು ಕಳೆದೆನ
ಅಜೀವ ಗಂಡ ನಾ ಹೆಂಗ ಕೊಡಲವ್ವ
ಜೀವನ್ನ ಬಿಟ್ಟೆ ನಾ ಕೊಡಲಾರೆ
ನಿನೊಬ್ಬಳು ಜೀವ ಬಿಟ್ಟಾಕಿ
ಲೋಕದ ಜೀವೆಲ್ಲ ಕಳಬ್ಯಾಡಮ್ಮ
ದನ ಕರ ಕೊಲ್ಲು ಬ್ಯಾಡಮ್ಮ
ನನ ಪಾಲಗಂಡನ ನಾನು ಕೊಟ್ಟೆನ
ಶರಣಮ್ಮ ನಿನ್ನ ಪಾದ ಶರಣು ತಂಗೆಮ್ಮ
ಒಲಿಮ್ಯಾಲೆ ನೀರೆಲ್ಲ ಕಾಸಿ ಬಿಟ್ಟಾಳ
ಸ್ನಾನ ಮಾಡಾಕ್ಕ ನೀನು ಮಾಡ್ಯಾಳ
ಈಗ ಗಬ್ಬು ಮನಿಯ್ಯಾಗ
ನಾನು ಹ್ಯಾಂಗ ತೊಳಿಯಲಿ
ಗಲಿಜು ಮನಿಯಾಗ ನಾನು ಹ್ಯಾಂಗ ತೊಳಿಯಲಿ
ಕೊಡದಾಗ ಹಾಕಿದ್ದ ನಾನಾಗ್ಯಮ್ಮ
ಕೊಡದಾಗ ನೀರು ನನಗಾಗುವುದಿಲ್ಲ
ಹೊಳದಂಡಿಗಮ್ಮ ಈಗ ಎಲ್ಲ ಹೋಗೋಣ
ಹೊಳದಂಡ್ಯಾಗ ಎರಿಯೋ ಸಮಯದಾಗ
ಅಲ್ಲಿ ಸ್ನಾನ ನಾ ಮಾಡೋಣ
ಹಂಗ ವಾಗಲಿ ನಡಿವಕ್ಕಯ್ಯಾ
ಟವಲು ತೊಗೊಂಡು ಎದ್ಲು ನೋಡಮ್ಮ
ಆವಾಗ ಅಕ್ಕ ಎದ್ದು ಬಂದಾಳ
ಮಗನೆ ಗಣಪತಿ ಮನಿಯಾಗ ಬಿಟ್ಟು
ಅಕ್ಕ - ತಂಗಿಯರು ಹೊಳದಂಡಿಗಿ ಬಂದ್ರು
ಅಗ ಮರಕೆಳಗೆ ಇನ್ನ ಬಂದಾರ
ಗಿಡ ಕೆಳಗ ಬಂದು ಎನಂಬುತಾರ
ಪಡಗಂಗೆ ಹಿಂದೆ ಗಂಗಿ ಹಿಡಿದಾಳ
ಮೂರು ಗುಂಡು ಕಲ್ಲು ಇನ್ನು ತಂದಾರ

ಗೌರಮ್ಮವಾಗೆ ಇನ್ನು ತೋಳದಾಳ
ಗಂಗೀ ತೊಳದಿದೆಲಾ ಗೌರಿ ತೊಳದಾಳ
ಮೂರು ಒಳಗುಂಡು ತೊಳೆದು ಬಿಟ್ಟಾಳ
ನೀನು ತರಬ್ಯಾಡಮ್ಮ ನಾನು ತರ್ತಿ ನಮ್ಮಾ
ಗುಂಡಾಳು ತೊಳಕೊತ ನೀರು ತಂದಾಳ
ಕಾವೇರಿದ ನೀರೆಲ್ಲಾ ಕಾಸಿಕೊಂಡಾಳ
ಪತ್ರ ಹುಯ್ಯಯಮ್ಮ ಇನ್ನ ತಂಗಿಯಮ್ಮ
ಆಗ ಏರಿ ಮರಗಿಡಕ್ಕಮ್ಮ।
ಮರಗಿಡೆಲ್ಲಾ ಹರಿದು ಬಿಟ್ಟಾಳ
ಆವಾಗ ತಂಗಿ ಇನ್ನ ಬರತಾಳ
ಪತ್ರಾಳ ಗಿಡಕೆಳಗ ಸುತ್ತುವರಿತಾಳ
ಅಕ್ಕ ಅಂಬೋಳು ಸ್ನಾನ ಮಾಡ್ಯಾಳ
ಅಡಿಗೆ ಒಂದು ನಾ ಮಾಡ್ತಿನಕ್ಕ
ಇಲ್ಲಮ್ಮ ತಂಗಿ ನಾಮಾಡ್ತಿನಮ್ಮ
ಆವಾಗ ಅನ್ನ ತಂಗಿ ಮಾಡ್ಯಾಳ
ಪತ್ರಾಳ ಒಂದು ತೊಳಕೊಂಡಾಳ
ತಾ ವೊಂದು ಪತ್ರಾಳು ತಂಗೀ ಗ್ಹಾಕ್ಯಾಳ
ತಾವೊಂದು ಪತ್ರೋಳಗಿ ಹಾಕಿಕೊಂಡಾಳ
ಇನ್ನ ಇಡತಿನಿ ಉಣ್ಣಕ್ಕ
ಆರು ದಿವಸವಾಗಿ ಊಟ ವಿಲ್ಲದಾಕಿ
ಇಲ್ಲಮ್ಮ ಬಿಸಿ ನೀರು ನನಗೆ ಬಿದ್ದಾವ
ತಣ್ಣೀರು ಬಿದ್ದಾವ ತಣ್ಣೀಗಿ ಆಗೈತಿ
ಏನು ಪರವಾಗಿಲ್ಲ, ಇಬ್ಬರು ಉಂಬೋಣ
ಒಂದೇ ಪತ್ರಾಳ ನಾವು ಉಂಬಾಣ
ಅಂಗಾರೆ ವಕ್ಕಯ್ಯ ನಾವು ಉಂಬಾಣ
ಅಂಗಲ್ಲಾ ತಂಗೆಮ್ಮ ನನ ಮಾತು ಕೇಳು
ಎರಡು ಪತ್ರೋಳು ತಿರುಗ್ಹಾಕಿ ಒಂದಾಕಿ ಉಂಬೋಣ
ಒಂದು ಗಂಡಾಗಲ್ಲ ಇಬ್ರು ಇದ್ದೀವಲ್ಲಾ
ಹಂಗೆ ಆಗಲಿ ಅಕ್ಕಯ್ಯ ನೀನು
ತಿರಕೊಂಡು ಪತ್ರೋಳಗಿ ಹಾಕೊಂಡಾರ

ಹೊಳಿ ದಂಡಿಲಿ ಹಂಚಿಲಿ ಊಟ ಮಾಡ್ಯಾರ
ಊಟಾ ಮಾಡಿದ ಮ್ಯಾಲ ಏನಂಬುತಾಳ
ನಡೆಕ್ಕ ಹೊಗೋಣ, ಮನಿಗಿ ಹೋಗೊಣ
ಮನ್ಯಾಗ ನಿದ್ದಿಲಿ ಮಾಡುವಂತಮ್ಮಾ
ಇಲ್ಲಮ್ಮ ತಂಗಿ ಇಲ್ಲೆ ಮಾಡೆನ
ಗಿಡ ನೆಳ್ಳಾಗ ತಂಪು ಗಾಳಿ ಬೀಸತದ
ಗಂಗಾ ನೆಳೆಲ್ಲಾ ನನಗೆ ಹೊಡೆದು
ಹಂಗಾರೆ ನಿದ್ದಿ ನೀನು ಮಾಡಕ್ಕ
ಎಡಗೈಯಲ್ಲಿ ತಲಿಯಡಿ ಇಟ್ಟುಕೊಂಡಾಳ
ಗಂಗಾಬಾಲೆ ಕುಂತು ಕೊಂಡಾಳ
ಗೌರಮ್ಮ ಬಾಲೆ ನಿದ್ದಿ ಮಾಡಿ ಕೊಂಡಾಳ
ನಿದ್ದಿ ಹತ್ತಿಕೊಂಡಾಗ ಏನಂದಿಕೊಳ್ಳುತ್ತಾಳೆ
ನನ ಬಾಳ ಗಂಡ ನಾಕೊಡಲಾರೆ
ತಾಳಿ ಕಟ್ಟಿದ ಗಂಡ ನಾ ಕೊಡಲಾರೆ
ಬೆಳ್ಳಿ ಬಂಗಾರ ನಾ ಕೊಟ್ಟೆಮ್ಮಾ
ಕೇಳಿದ್ರು ಹಾಲಿತ್ತು ನಿನ್ನ ಬಾಯಕ್ಕ
ನಿನ ಗಂಡ ನನಗೆಲ್ಲ ಬೇಕಿಲ್ಲವಕ್ಕ
ಎದ್ದು ಬಂದವಳಲ್ಲಾಗ , ಎದ್ದು ಹೊದಾಕಿ
ಕೂಡಿ ಕೊಂಡು ಬಂದವಳಲ್ಲಾ, ಕೂಡಿ ಬಿಡಾಕಿ
ತಾಳಿ ಕಟ್ಟಿದವಳು ನೀನೆ ಇರಕ್ಕ
ನಿದ್ದೀನೆ ಇನ್ನು ನೀನು ಮಾಡಕ್ಕ
ಸಂಪೂರ್ಣ ನಿದ್ದಿ ನೀನು ಮಾಡಮ್ಮಾ
ಅಕ್ಕಳ ಒಟ್ಟು ವಸ್ತ್ರ ನೋಡಮ್ಮಾ
ಹೊಳಿದಂಡಿದಾಗ ಒಗಿದು ಬಿಟ್ಟಾಳ
ಆವಾಗ ಎಲ್ಲಾ ಕಪ್ಪಿ ಬಂದು ತಿಂದು ಬಿಟ್ಟಾವ
ಮೀನೆ ಬಂದು ಇನ್ನು ಕಡಿತಾವ
ಕಣ್ಣು ತೆರೆದಿನ್ನು ನೋಡಿ ಬಿಟ್ಟಾಳ
ಆಯಮ್ಮ ಸಮುದ್ರದಾಗ ನಾ ನೋಡುತಿನಿ
ಏಡಿ, ಕಪ್ಪ್ಯಾಗ ನಾ ಹೋಗುತಿನಿ
ನನ್ನ ಜೀವ ಹಾಳಾಗತೈತೊ

ತಂಗಿಯೇ ಗಂಗಮ್ಮ ಶರಣು ಮಾಡೇನ
ಮಾತು ಕೊಟ್ಟೊಳು ನಾ ತಪ್ಪೋದಿಲ್ಲಮ್ಮಾ
ಗಂಗಾ ಭಾಗ್ಯ ನಾ ಲಗ್ನ ಮಾಡೇನ
ಆಗಿಲ್ಲ ಮದುವಿ ಈಗ ಮಾಡೇನ
ಜೀವ ಉಳಿಸೆ ನನಗೆ ಜೀವ ಗಂಡನಮ್ಮ
ನಾನು ಜೀವಕ್ಕ ನಿನಗೆ ಕೊಟ್ಟೆನ
ಹೋಗಕ್ಕ ನೀನು ಸಮುದ್ರವಳಕ್ಕ
ಅಯ್ಯೋ ತಂಗಿ ಶರಣು ಮಾಡೇನ
ಮುತ್ತಿನ ಸೀರೆಲ್ಲಾ ಒಗೆದು ಬಿಟ್ಟಾಳ
ಸೆರಗೆ ಹಿಡಕೊಂಡು ಗಡ್ಡಿಗಿ ಬಂದಾಳ
ಇಬ್ರು ಇನ್ನ ಮನಿಗಿ ಬಂದಾರ
ಶಿವನು ತಲ್ಲಿಗೆ ತಾವು ಬಂದಾರ
ಎಲ್ಲೈದಾನ ಅಂತ ನಾವು ಹುಡುಕೋನ
ಈಶ್ವರ ಮಠಕ್ಕೆ ಇನ್ನು ತಾವು ಬಂದಾರ
ಆಗ ಶಿವನಾಗಿ ಮಕೊಂಡಾನ
ಎದ್ದಾನ ಶಿವರಾಯ ಎದ್ದಾನ ಶಿವ
ಕಂಡಿದ್ರು ಕಣ್ಣ ತೆರೆದು ನೋಡವಲ್ಲವಲ್ಲಾ
ಬಾಯಿ ತೆರೆದು ಇನ್ನು ಮಾತಾಡವಲ್ಲಾ
ಆವಾಗ ಗೌರಮ್ಮ ಎನಂಬುತ್ತಾಳ
ಈಗ ಬಿಟ್ಟು ಇಲ್ಲಿಗೆ ಬಂದೆ ನಿದ್ದಿ ಮಾಡ್ಯಾನ
ಗಂಗಾ ಮುಂದೆ ಇನ್ನ ಅಳತಾಳ
ಆಹಾರ ಬಿಲ್ಲದವನು ನೀರಿಗಿದ್ದವನು
ಅನ್ನಾ ಇಲ್ಲದವನು ಜೀವ ಬಿಟ್ಟಾನು
ನೀನು ಹೋದ ಮ್ಯಾಲೆ ನಾವ್ಯಾಕಯ್ಯಾ
ನಾವು ಸಮುದ್ರದಾಗ ಬಿದ್ದೇವ
ಮಲ್ಲಿಗಿ ಹೂವಾಗಿ ಇನ್ನು ತಂದಾರ
ಚೆಂಡುವ ವಾಗಿ ಇನ್ನು ತಂದಾರ
ಆವಾಗ ಬನ್ನಿ ಬನ್ನಿರಿ, ಬನ್ನಿರಿ
ಅಂಬ್ರೆ ಹೂವ ಇನ್ನು ತಂದಾರ
ಎಕ್ಕೆ ಹೂವ ಇನ್ನು ತಂದಾರ

ಆತನ ಪೂಜಾ ಇನ್ನು ಮಾಡುವರು
ಕಿಲ ಕಿಲ ನಗತಾನ ಶಿವರಾಯ ನಮ್ಮ
ಯಾಕಂತ ಹಿಂಗಾಳತೀರಿ
ಒಬ್ಬರೇ ಆಳತೀರಿ ಈ ಲೋಕಕ್ಕೆ
ಗಂಗವ್ವಳಲ್ಲಾ ದುಃಖ ಮಾಡಾಕಿ
ಮದುವೆಗೆಲ್ಲಾ ಮೋಕ್ಷ ಮಾಡಾಕಿ
ಹೂವೆಲ್ಲಾ ತಂದು ನನಗ್ಯಾಕ್ಕೆಲ್ಲಾ
ಜೀವ ಹೆಂಡ್ತಿ ನನಗೆ ಜೀವ ಹಾಕುವಳು
ಸತ್ತಾನಂತ ತಿಳಕಂಡಿರೇನು
ಏಕವಾಗಿ ನೀವು ಬಂದಿರಿ
ಯಾಕಂತ ನೀವಾಗಿ ಬಂದಿರಿ
ಕೇಳಯ್ಯ ಶಿವರಾಯ ತಲಿಗೊಂದು ಪಾದ
ಒಂದೇ ತಾಯಿಗಿ ನಾವು ಹುಟ್ಟಿವಿ ಅಲ್ಲಾ
ಒಂದೇ ಗಂಡನ ನಾವು ಮಾಡಿಕೊಂಡಿವಿ
ಆಗಲ್ಲಾ ಮದುವಿ ಈಗ ಮಾಡಿನಿ
ಆವಾಗ ಮೆಚ್ಚಿ ತಂದು ಕೊಂಡೊಳು
ಆವಾಗ ಇನ್ನು ಅರಿಶಿಣ ದಾರ
ತಾಳಿಯ ತಂದು ಇನ್ನು ಪೋಣಿಸ್ಯಾಳ
ಶಿವನು ಕೈಯಿಗಿ ಇನ್ನು ಕೊಟ್ಟಾಳ
ಕಟ್ಟಯ್ಯ ಇನ್ನು ಗಂಗೀಯ ಕೊರಳಿಗಿ
ಆ ಮಾತಿಗೆಲ್ಲ ಗಂಗೀ ಏನಂದಳು
ಅಂಗಲ್ಲಾ ನಾನು ಕಟ್ಟುವುದಿಲ್ಲಕ್ಕ
ನಿನ ಪಾಲಿನ ಗಂಡನ ನನಗ ಕೊಟ್ಟಿಲ್ಲ
ನಿನ ಕೋಳ್ಳಾಗಿರೊ ತಾಳಿ ಬೇಕಯ್ಯಾ
ಆವಾಗ ಪೋಣಿಸಿ ನನಗೆ ಕೊಡಕ್ಕ
ನಾನು ಕಟ್ಟ ತಾಳಿ ನೀನು ಕಟ್ಟಕ್ಕ
ನನಿಗಿ ಕೊಟ್ಟ ತಾಳಿ ನೀನು ಕಟ್ಟಿಕೊ ಅಕ್ಕ
ಅಂಗಾರೆ ನಿನ ಗಂಡ ಕೊಟ್ಟಿದಂಗಕ್ಕಾ
ಇಲ್ಲದಿದ್ದರೆ ನಿನ್ನ ಕೊಟ್ಟಿದಂಗಲ್ಲಾ
ಆವಾಗ ಗೌರಮ್ಮ ಏನಂದಳಮ್ಮಾ

ಗಂಡ ಕಟ್ಟಿದ್ದು ಹ್ಯಾಂಗೆ ಕೊಡಲಮ್ಮಾ
ಇನ್ನ ನನ್ನ ಕೈಲಿ ನಾನು ಕೊಟ್ಟೆನ
ನಿನ್ನ ಕೈಲಿ ನನಗೆ ಬೇಕಿಲ್ಲವಕ್ಕಾ
ಕಟ್ಟಿದ ತಾಳೆಲ್ಲ ಇನ್ನ ತೆಗಿದಾಳ
ದಾರಕ್ಕವಾಗಿ ಇನ್ನ ಪೋಣಿಸ್ಯಾಳ
ಶಿವನಿಗಿ ಕೈಗೆ ಇನ್ನ ಕೊಟ್ಟಾಳ
ಶಿವನ ಕೂಟ ಇನ್ನ ತಾಳಿ ಕಟ್ಟಿಸ್ಯಾಳ
ಈಶ್ವರ ಮಠದಾಗ ಮದುವಿ ಮಾಡ್ಯಾಳ
ದೇವರ ಮಠದಾಗ ದೇವು ಮದುವ್ಯಮ್ಮಾ
ಇನ್ನ ತಾಳಿ ಈಗ ಕಟ್ಟ್ಯಾರ
ಆವಾಗ ಗೌರಮ್ಮ ಏನೆನ್ನುತ್ತಾಳ
ಇನ್ನಾ ಚಿಕ್ಕೆಣ್ತಿ ನೀನು ಕೇಳಯ್ಯಾ
ಮಗಾ ನಾನು ಮನಿಗಿ ಹೋಗತೀನಿ
ಗಣಪತಿ ಇನ್ನ ಕರಕಂಡಮ್ಮ
ತಾವೇ ಮನೆಗೆ ಇನ್ನು ಹೋಗ್ಯಾಳ
ಆವಾಗ ಈಶ್ವರ ಮಠದಾಗ ಇವು
ಗಂಗೀ ಹೊಟ್ಟ್ಯಾಗ ಕೋಟಿ ಮಕ್ಕಳು ಹುಟ್ಟ್ಯಾರ
ಶಿವನು ಕಣ್ಣೀಲಿ ಇನ್ನು ನೋಡ್ಯಾನ
ಆ ಯಪ್ಪ ದೇಶ ಹಿಡಿದನಪ್ಪಾ
ಇನ್ನಾ ಹಡಿತಾಳ ಗಂಗಭೂದೇನಾರಿ
ಗಂಗನೀಗೆ ಬಿಟ್ಟು ನಾ ಹೋಗತೀನಿ
ಲೋಕನೆ ಬಿಟ್ಟು ನಾ ಹೋಗತೀನಿ
ಲೋಕನೇ ಗಂಗಿನೇ ಬಿಟ್ಟು ಹೋಗತೀನಿ
ಲೋಕನೆ ಗಂಗಿನೇ ಇನ್ನು ಬಿಟ್ಟಾನ
ಕೈಲಾಸಗೊಂಟೋದ ಈಶ್ವರ ಮಠ
ಶಿವನೇವಾದರೆ ಇನ್ನು ಹೋಗ್ಯಾನ
ಆವಾಗ ಶಿವನಾಗಿ ಇನ್ನು ಗೌರಮ್ಮ
ಇಬ್ರುನು ಬಿಟ್ಟು ಇನ್ನು ಹೋಗುವನು
ಗಂಗಾವಾದರೆ ಇನ್ನು ನೋಡ್ಯಾಳ
ಭಿಕ್ಷೆ ಬೇಡಿ ಬರ್‍ತಾನಂತ ಇನ್ನು ಹೋಗ್ಯಾನಮ್ಮಾ

ಹೋದವನಿನ್ನು ಬರಲಿಲ್ಲವಲ್ಲಮ್ಮಾ
ಬೂಧಿ ಮಕ್ಕಳ್ನ ನಾ ಹೆಂಗ ಸಲುವಲಿ
ಅಳಕೊಂತ ಮಠದಾಗ ಕುಂತುಗೊಂಡಾಳ
ಮಕ್ಕಳು ಕಣ್ಣೀಲೆ ಹಿಂದೆ ನೋಡ್ಯಾರ
ಯಾಕಮ್ಮ ಅಳತಿ ನೀನು ತಾಯಮ್ಮ
ನಿಮ್ಮಪ್ಪ ಹೋದರೆ ಬಿಟ್ಟು ಹೋದನಪ್ಪಾ
ಎಲ್ಲೆಲ್ಲಿ ಅಂತ ಹುಡುಕಲಿಯಪ್ಪಾ
ಬಂದವನೆ ಬಂದಂಗ ಹಿಂಗೆ ಹೋಗ್ಯಾನ
ಮೆಚ್ಚ್ಯಾಗಿ ಹೆಂಡ್ತಿನ ತಂದು ಕೊಂಡವನು
ಮೆಚ್ಚಿಕೊಂಡವನಲ್ಲಾ ಹೆಂಗಿರತಾನಮ್ಮಾ
ಮೆಚ್ಚಿ ಬಂದವಳಮ್ಮಾ ಹೆಂಗಿರತಿಯಮ್ಮಾ
ನಾವು ಐದಿವಲ್ಲಾ ಕೋಟಿ ಮಕ್ಕಳು
ಕೋಟಿಗಿ ಜೋಳಿಗಿ ನಾವಾಕಿಕೊಂಡು
ದೇಶೆಲ್ಲಾ ನಾವೆಲ್ಲಾ ಅಡ್ಡಾಡತೀವಿ
ಪಾವು ಅಚ್ಚೇರು ನಾವು ತಂದೇವ
ತಂದು ತಂದು ಮಠದಾಗ ನಾವು ಸುರದೇವ
ಅಪ್ಪ ತಂದಿದ್ದು ನಮಗ್ಯಾಕಮ್ಮಾ
ಅರ್ಧರ್ಧ ರೊಟ್ಟಿ ನಮಗಿರಲಮ್ಮ
ಆವಾಗ ನಾವು ಹೊಟ್ಟಿ ತುಂಬ ತಿಂತೀವಿ
ನಾವು ತಂದಿದೆಲ್ಲಾ ಗುಡಿ ತುಂಬಬೇಕು
ಮಠ ಅಂಬೋದು ತುಂಬಬೇಕಮ್ಮಾ
ತಲಿಗೊಂದು ಜೋಳಿಗಿ ಇನ್ನು ಹಾಕ್ಯಾರ
ಲಿಂಗಪ್ಪ ನಾನು ಎಲ್ಲಿಂದ ತರ್ಲೆಪ್ಪ
ಈಭೂತಿ, ರುದ್ರಾಕ್ಷಿ ಇಲ್ಲಿಯಮ್ಮಾ
ಬಟ್ಟೆ ಲಿಂಗಪ್ಪ ಬಟ್ಟೆ ಕಟ್ಯಾರ
ಹುಡುಗುರು ಎಲ್ಲಾ ಊರಾಗ ಇನ್ನು ಹೋಗ್ಯಾರ
ಮಠವೆಲ್ಲಾ ತುಂಬಿ ಬಿಟ್ಟಾರ
ಇನ್ನೇನು ಕೇಳಿವಮ್ಮಯ್ಯಾ
ನಿಮ್ಮಿಗಿ ಮದುವಿ ಹೆಂಗಮಾಡಾಲಿ
ಅಯ್ಯೋ ನಿನೆಂಥ ಲೋಕದಾಗವಮ್ಮಾ

ಹೆಣ್ಣಿಗೆ ಗಂಡು ಸಿಗತೈತಮ್ಮಾ
ಭೂಮಿ ಮ್ಯಾಲೆ ನಾವಿರ್ತಿವಮ್ಮಾ
ಕೇಲಪ್ಪ ನಿಮ ಸಾಥಿ ನಾನಾಗೊದಲ್ಲ
ಶಿವನೆ ಹುಡುಕ್ಯಾಡ ನಾ ಹೋಗತಿನಿ
ದಂಡಿ ಮ್ಯಾಲೆ ನನ್ನ ಬಿಡಾರಿ
ಆವಾಗ ಒಂದು ಬಂಡಿ ಕಟ್ಯಾರ
ಯಾವ ಬಂಡಿ ಮಾಡಿದ್ರೆ ಗಂಗೀ ಗಾಗೆಯಮ್ಮ
ಜ್ವಾಳಾ ಬಂಡಿ ಇನ್ನ ಕಟ್ಟ್ಯಾರ
ದಂಡಿನವಾಗಿ ಬಂಡಿ ಕಟ್ಟ್ಯಾರ
ಮಲ್ಲಿಗಿ ಉಡಿಸ್ಯಾರ ಇನ್ನ ಬಂಡಿಗೆ
ಹೊಳಿದಂಡಿಮ್ಯಾಲೆ ನನ್ನ ಬಿಡ್ರೆಪ್ಪಾ
ಜೀವದ ಒಳಗೆ ಜೀವ ಹೋತಿನಿ
ಹೊಳಿದಂಡಿ ಒಳಗೆ ಬಿಟ್ಟು ಬಿಟ್ಟಾರ
ದೇಶದ ಮ್ಯಾಲೆ ನೀವು ಇರ್ರೆಪ್ಪಾ
ಗಂಗಾದ ಸ್ನಾನ ಇಲ್ಲಿರಲಪ್ಪಾ
ದೇಶಕ್ಕೆ ಗಂಗಮ್ಮ ದೇಶ ಸ್ನಾನವಮ್ಮಾ
ಗಂಗನ ಪೂಜಾ ನೀವು ಮಾಡಿರಿ
ಗಂಗನ ಒಳಗೆ ನಾನು ಹೋಗೇನ
ಕೈಲಾಸಕ್ಕೆ ಹೋಗ್ತಾನೆ ಶಿವನು ನೋಡಪ್ಪ
ಆಕಾಶವೆರುತ್ತಾಳ ಇನ್ನು ಗೌರಮ್ಮಾ
ಇಲ್ಲಗಿ ನೋಡಮ್ಮಾ ಇನ್ನು ಮುಗಿತಮ್ಮಾ
ಗಂಗೀ - ಗೌರಿ ಇಲ್ಲಿಗಿ ಮುಗಿತಮ್ಮಾ
ದೇಶದ ಮ್ಯಾಲೆ ನಾವು ಬಳೆಯೋದು
ಗಂಗನ ಬಾಯಾಗ ನಾವು ನೀರು ಕುಡಿಯೊದು
ಆ ತಾಯಿ ಮಲಿಹಾಲು ನಾವು ಕುಡಿಯೊದು
ನೀನು ಕುಡಿದ ನೀರು ನಾವು ಕುಡಿಯೊದು
ನಿನ್ನ ಕೂಪದಿಂದ ನಾವು ನೀರು ಕುಡಿಯೊರು
ಲೋಕಕ್ಕೆ ಗಂಗಮ್ಮ ಇನ್ನ ಹೊಯ್ಯದಾಳ
ಲೋಕಕ್ಕೆ ತಾಯಿ ನಂಜಿಕ್ಯಾಗ್ಯಾಳ.

ಬುರ್ರ ಕಥಾ ಈರಮ್ಮ ನೊಡನೆ ಸಂದರ್ಶನ :

ಪ್ರ 1 : ಅಜ್ಜಿ ನಿಮ್ಮ ಹೆಸರೇನು?

ಉತ್ತರ : ಬುರ್ರ ಕತಿ ಈರಮ್ಮ ಅಂತ.

ಪ್ರ 2 : ಬುರ್ರ ಕತಿ ಈರಮ್ಮ ಅಂತ ನಿಮಗ್ಯಾಕ ಕರೀತಾರ ?

ಉತ್ತರ : ಬುರ್ರ ಕತಿಗಳನ್ನು ಹಾಡ್ತೀನಿ ಅದಕ್ಕ ಬುರ್ರ ಕತಿ ಈರಮ್ಮ ಅಂತ ಕರೀತಾರ.

ಪ್ರ 3 : ನಿಮ್ಮೂರ ?

ಉತ್ತರ : ಇದೇ ಊರು ಹಳೆದರೋಜಿ ಅಂತ.

ಪ್ರ 4 : ಮೊದಲಿನಿಂದನೂ ಇದೇ ಊರಲ್ಲಿ ವಾಸವಾಗಿದ್ದೀರಿ ಅಥವಾ ಬೇರೆ ಊರಿನಿಂದ ಬಂದು ಇಲ್ಲಿ ನೆಲೆಸಿದ್ದೀರಿ?

ಉತ್ತರ : ಮೊದಲು ನಮಗ ಊರ ಉಸಂತ್ರ ಇರಲಿಲ್ಲ. ನಮ್ಮ ಹಿರಿಯರು ಆಂಧ್ರದವರು. ಅಲ್ಲಿ ಊರ, ಊರ ತಿರುಗಿ ಹಾಡು ಹಾಡುತ್ತಿದ್ದರು. ವೇಷ ಹಾಕುತ್ತಿದ್ದರು. ಅಲೆಮಾರಿ ಜೀವನ ನಡೆಸುತ್ತಿದ್ದರು. ನಮ್ಮಜ್ಜ ಹೀಗೇ ಅಲೆಮಾರಿಗಳಾಗಿ ತಿರ್ಗತಾ ಬಂದು ಹಳೆದರೋಜಿಯಲ್ಲಿ ನೆಲೆಸಿದ್ರು ಅಂದಿನಿಂದ ನಾವು ಇಲ್ಲೇ ಇದ್ದೀವಿ.

ಪ್ರ 5 : ನಿಮ್ಮ ಅಜ್ಜ - ಅಜ್ಜಿ ಹೆಸರೇನು?

ಉತ್ತರ : ಅಜ್ಜ ಅಶ್ವಿ ಜಂಬಣ್ಣ, ಅಜ್ಜಿ ಸುಂಕಲಮ್ಮ.

ಪ್ರ 6 : ನಿಮ್ಮ ತಂದೆ - ತಾಯಿ ಹೆಸರೇನು?

ಉತ್ತರ : ತಂದಿ ಅಶ್ವಿಲಾಲಪ್ಪ, ತಾಯಿ ಜಂಬಲಮ್ಮ.

ಪ್ರ 7 : ನಿಮ್ಮಜ್ಜ ಹಾಗೂ ತಂದೆಯವರ ಹೆಸರಿನ ಹಿಂದೆ ಅಶ್ವಿ ಅಂತ ಹೇಳ್ತಿರಲ್ಲಾ? ಹಾಗಂತ ಯಾಕೆ ಕರೀತಾರ?

ಉತ್ತರ : ಅಶ್ವಿ ಅಂದರ ಕುದುರೆ ಅಂದರ್ಥ. ನನ್ನ ತವರು ಮನೆಯವರ ಕುಲದ ಬೆಡಗು ಕುದುರೆಗೋತ್ರ. ನಮ್ಮ ಹಿರಿಯರೆಲ್ಲ ಕುದುರೆಯ ಮೇಲೆ ಕುಟುಂಬ ಕಟ್ಟುಕೊಂಡು ಊರು ಊರು ತಿರುಗುತ್ತಿದ್ರು. ಊರು ಊರು ತಿರುಗಿ ಕತೀ ಹೇಳ್ತಿದ್ರು. ಅದಕ್ಕ ಅಶ್ವಿಅಂತ ಕರೀತಾರ.

ಪ್ರ 8 : ನಿಮ್ಮ ತಂದೆ - ತಾಯಿಯವರು ಹಾಡು ಹಾಡುತ್ತಿದ್ದರೇನು?

ಉತ್ತರ : ನಮ್ಮ ತಂದೆ ಹಾಡು ಹಾಡುತ್ತಿದ್ದರು ಕಥೆ ಹೇಳುತ್ತಿದ್ದರು. ಅವರು ತೆಲುಗಿನಲ್ಲಿ ಹಾಡು ಹಾಡುತ್ತಿದ್ದರು ಕಥೆ ಹೇಳುತ್ತಿದ್ದರು.

ಪ್ರ 9 : ನಿಮಗ ಯಾವ ಜಾತಿಯವರು ಅಂತ ಕರಿತಾರ ?

ಉತ್ತರ : ಬುಡ್ಗ ಜಂಗಮ ಜಾತಿಯವರು ಅಂತಾರ.

ಪ್ರ 10 : ಬುಡ್ಗ ಜಂಗಮರು ಅಂತ ಯಾಕ ಕರೀತಾರ?

ಉತ್ತರ : ಊರೂರು ತಿರುಗಿ ಹಾಡ ಹೇಳ್ತಿವಿ ಅದಕ್ಕೆ ಬುಡ್ಗ ಜಂಗಮರು ಅಂತ ಕಲೀತಾರ.

ಪ್ರ 11 : ಬುಡ್ಗ ಅಂದರೇನು?

ಉತ್ತರ : ಸಣ್ಣ ಕುಲದವರು ಅಂತ, ಬುಡ್ಗ ಬಾರಸವರು ಅಂತ.

ಪ್ರ 12 : ಬುಡ್ಗ ಬಾರಸದು ಅಂದರೇನು?

ಉತ್ತರ : ಇದು ತಂಬೂರಿ ಐತಲ್ಲ ಇದನ್ನ ಬುಡುಗ ಅಂತ ಕಲೀತಾರ.

ಪ್ರ 13 : ಬುಡ್ಗದ ಜೊತೆಯಲ್ಲಿ ಮತ್ತೇನನ್ನು ಬಾಲಿಸುತ್ತೀಲಿ?

ಉತ್ತರ : ಬುಡ್ಗದ ಜೊತೆಯಲ್ಲಿ ಡಿಮ್ಕಿ, ಗಗ್ಗಲೆ ಬಾಲಿಸ್ತೀವಿ.

ಪ್ರ 14 : ಇವುಗಳನ್ನು ಹ್ಯಾಂಗ ಬಾಲಿಸ್ತೀಲಿ ?

ಉತ್ತರ : ಮುಮ್ಮೇಳದಲ್ಲಿ ಹಾಡುತ್ತ ನಾನು ತಂಬೂರಿ ಬಾಲಿಸ್ತೀನಿ ಹಿಮ್ಮೇಳ ಹಾಡುತ್ತ ನನ್ನ ಜತಿಯವರು ಡಿಮ್ಕಿ, ಗಗ್ಗಲೆ ಬಾರಸ್ತಾರ.

ಪ್ರ 15 : ಈಗ ನಿಮಗ ವಯಸ್ಸೆಷ್ಟು?

ಉತ್ತರ : ಗೊತ್ತಿಲ್ಲ.

ಪ್ರ 16 : ಅಂದಾಜು?

ಉತ್ತರ : ಅರವತ್ತು ಅರವತ್ತೈದು ಇರಬಹುದು.

ಪ್ರ 17 : ನಿಮ್ಮ ಮನೆತನದ ಕುಲಿತು ಹೇಳ್ರಿ?

ಉತ್ತರ : ನಮ್ಮಪ್ಪ - ಅವ್ವಗ ನಾವು ಎಂಟು ಜನ ಮಕ್ಳು. ಅಂದ್ರ ನಾವು ಐದು ಮಂದಿ ಅಕ್ಕ- ತಂಗೇರು. ನನಗ ಮೂರು ಜನ ಅಣ್ಣ ತಮ್ಮಂದಿರು. ನನ್ನ ಅಕ್ಕ ತಂಗೇರು ಹೆಸರು ಸುಂಕಮ್ಮ, ಮಾರೆಮ್ಮ, ಶಿವಮ್ಮ, ಸಣ್ಣ ಮಾರೆಮ್ಮ ಅಂತ, ನಾಗಭೂಷಣಪ್ಪ, ತಿಪ್ಪೇಸ್ವಾಮಿ, ಬಾಲಸ್ವಾಮಿ ಅಂತ ಮೂರ ಜನ ಅಣ್ಣ ತಮ್ಮಂದಿರು.

ಪ್ರ 18 : ಮದುವೆ ಮನೆಯವರ ಬಗ್ಗೆ ಸ್ವಲ್ಪ ತಿಳಿಸ್ತಿರಾ?

ಉತ್ತರ : ನನ್ನ ಗಂಡನ ಹೆಸರು ರಾಮಚಂದ್ರಪ್ಪ. ಮಾವ ರಾಮಣ್ಣ. ಅತ್ತಿ ಸಾಯಮ್ಮ. ಊರು ಬಳ್ಳಾರಿ ಜಿಲ್ಲೆಯ ಸಿರಗುಪ್ಪಾ - ತಾಲೂಕಿನ ಹೊಸಳ್ಳಿ. ನನ್ನ ಗಂಡ ರಾಮಚಂದ್ರಪ್ಪಗ ಇಬ್ಬರು ಹೆಂಡಿರು. ನನ್ನ ಸವತಿ ಹೆಸರು ಕಮಲಮ್ಮ. ಆಕಿಗಿ ಹನ್ನೊಂದು ಜನ ಮಕ್ಳು. ಆರು ಗಂಡು , ಐದು ಹೆಣ್ಣು. ನನಗೆ ಒಬ್ಳೆ ಮಗಳು. ನನ್ನ ಗಂಡ ತೀರಕೊಂಡಾನ. ನನ್ನ ಸವತಿ, ಆಕಿ ಮಕ್ಳು ಹೊಸಳ್ಳಿಯಲ್ಲೆ ಇದ್ದಾರ.

ಪ್ರ 19 : ನಿಮ್ಮ ಮನೆಯವರಲ್ಲಿ ಯಾರಾದರೂ ಹಾಡು ಹಾಡ್ತಾರ?

ಉತ್ತರ : ಇಲ್ಲ. ನನ್ನ ತಂಗಿ ಶಿವಮ್ಮ ಮಾತ್ರ ನನಗ ಹಿಮ್ಮೇಳವಾಗಿ ಹಾಡ್ತಾಳ.

ಪ್ರ 20 : ನಿಮ್ಮ ಗಂಡನ ಮನೆ ಕಡೆಯವರು ಯಾರಾದರೂ ಹಾಡ್ತಾರಾ?

ಉತ್ತರ : ಯಾರೂ ಹಾಡದಿಲ್ಲ.

ಪ್ರ 21 : ನಿಮ್ಮ ಮಗಳು ?

ಉತ್ತರ : ಆಕಿನೂ ಹಾಡದಿಲ್ಲ. ಆಕಿ ಗಂಗಿ ಗೌರಿ ಮೆರವಣಿಗೆ ಮಾಡಿ ಭಿಕ್ಷಾ ಬೇಡತಾಳ.

ಪ್ರ 22 : ನಿಮ್ಮ ಮಗಳ ಹೆಸರು ?

ಉತ್ತರ : ಜೀಚಮ್ಮ (ಭಾಗ್ಯಲಕ್ಷ್ಮಿ) ಅಂತ.

ಪ್ರ 23 : ನಿಮ್ಮ ಮಗಳ ಮದುವೆ ಮನೆತನದ ಬಗ್ಗೆ ಹೇಳ್ರಿ?

ಉತ್ತರ : ನನ್ನ ಮಗಳಿಗೆ ನನ್ನಣ್ಣ ಮಗನಿಗೇ ಕೊಟ್ಟೀನಿ. ಆಕಿ ಗಂಡನ ಹೆಸರು ನಾಗರಾಜ ಅಂತ. ಅಂವ ಕಲಾವಿದ. ಒಳ್ಳೇ ವೇಷ ಹಾಕ್ತಾನ. ರಾಮ - ಲಕ್ಷ್ಮಣ, ಭೀಮಾಂಜನೇಯ, ಸಿಂಧೂರ ಲಕ್ಷ್ಮಣರ ವೇಷ ಹಾಕ್ತಾನ. ಮೋಹಿನಿ, ದ್ರೌಪದಿ, ತಿಲೋತ್ತಮೆ ಮುಂತಾದ ಸ್ತ್ರೀ ಪಾತ್ರನೂ ಮಾಡ್ತಾನ. ಸ್ತ್ರೀ ಪಾತ್ರದಲ್ಲಿ ಎತ್ತಿದ ಕೈ. ನನ್ನ ಮಗಳೀಗಿ ಒಬ್ಬ ಮಗಾ ಹುಟ್ಯಾನ. ಅವನ ಹೆಸರು ಓಬಣ್ಣ ಅಂತ.

ಪ್ರ 24 : ನೀವು ಹಾಡಾ ಹಾಡೋದು ಯಾವಾಗಿನಿಂದ ಶುರು ಮಾಡಿದ್ರಿ?

ಉತ್ತರ : ಸಣ್ಣವಳಿದ್ದಾಗಿನಿಂದ ದನಕಾಯ್ಕೋಂತ ಹಾಡ್ತಿದ್ದೆ.

ಪ್ರ 25 : ನೀವು ಹಾಡು ಯಾರಿಂದ ಕಲ್ತಿದ್ದೀರಿ ?

ಉತ್ತರ : ನಮ್ಮ ತಾತ - ಅಜ್ಜಿ, ಅಪ್ಪ - ಅಮ್ಮನಿಂದ ಕಲ್ತಿದ್ದೀನಿ.

ಪ್ರ 26 : ಇವರೆಲ್ಲ ಕನ್ನಡದಲ್ಲಿ ಹಾಡ್ತಿದ್ದರೇನು?

ಉತ್ತರ : ಇಲ್ಲ ತೆಲುಗಿನಲ್ಲಿ.

ಪ್ರ 27 : ಅಂದ್ರ ನೀವು ತೆಲುಗಿನಲ್ಲಿ ಮೊದಲು ಹಾಡಾದು ಕಲ್ತಿದ್ರಿ ಅಂದ್ಹಾಗಾಯ್ತು?

ಉತ್ತರ : ಹೌದು ಮೊದಲು ತೆಲುಗಿನಲ್ಲೇ ಕಲ್ತೀನಿ.

ಪ್ರ 28 : ಕನ್ನಡದಲ್ಲಿ ಹ್ಯಾಂಗ ಕಲ್ತೀರಿ?

ಉತ್ತರ : ಈ ಭಾಗದಲ್ಲಿ ಹೆಚ್ಚ ಜನ ಕನ್ನಡ ಮಾತಾಡವು ನನಗ ಕನ್ನಡ ಬರ್ತಿತ್ತು. ತೆಲುಗು ಬರ್ತಿತ್ತು. ಅದರಿಂದ ತೆಲುಗಿನಿಂದ ಕನ್ನಡದಲ್ಲಿ ಕಲಿತೆ.

ಪ್ರ 29: ಕನ್ನಡಲ್ಲೇ ಯಾಕ ಕಲ್ತೀರಿ?

ಉತ್ತರ : ತೆಲುಗಿನಲ್ಲಿಯ ಬುರ್ರ ಕಥಾ ಹಾಡುಗಳು ಆವಾಗ ಕನ್ನಡದಲ್ಲಿ ಯಾರೂ ಹಾಡ್ತಿರಲಿಲ್ಲ. ಈ ಭಾಗದಲ್ಲಿ ಕನ್ನಡ ಜನಾ ಹೆಚ್ಚು. ಅವ್ರೀಗಿ ಹೇಳಿ ಸಂತೋಷ ಪಡಿಸಬೇಕು ಅಂತ ಕನ್ನಡದಲ್ಲಿ ಹಾಡೋದನ್ನ ಕಲಿತೆ.

ಪ್ರ 30: ಈಗ ನೀವು ಎರಡೂ ಭಾಷೆಯಲ್ಲಿ ಹಾಡ್ತಿರೋ?

ಉತ್ತರ : ಹಾಡ್ತೀನಿ.

ಪ್ರ 31 : ಹೆಚ್ಚು ಹಾಡೋದು ಯಾವುದರಲ್ಲಿ ?

ಉತ್ತರ : ಕನ್ನಡದಲ್ಲಿ.

ಪ್ರ 32 : ತೆಲುಗಿನಲ್ಲಿ ಹಾಡೊದಿಲ್ಲವೇ?

ಉತ್ತರ : ಬಹಳ ಅಪರೂಪವಾಗಿ ಹಾಡ್ತೀನಿ.

ಪ್ರ 33 : ನೀವು ಹಾಡುವ ಹಾಡುಗಳು ಕನ್ನಡದಲ್ಲಿ ಈ ಭಾಗದಲ್ಲಿ ಮತ್ಯಾರಾದರೂ ಹಾಡುತ್ತಾರೆಯೇ?

ಉತ್ತರ : ಇಲ್ಲ.

ಪ್ರ 34 : ನಿಮ್ಮ ಹಾಡುಗಳು ನಿಮ್ಮವರು ಯಾರಾದರೂ ಕಲಿತಿದ್ದಾರೆಯೇ?

ಉತ್ತರ : ಇಲ್ಲ.

ಪ್ರ 35 : ಬೇರೆಯವರು ಯಾರಾದರೂ ಕಲ್ತಿದ್ದಾರೆಯೇ?

ಉತ್ತರ : ಇಲ್ಲ.

ಪ್ರ 36 : ನೀವು ನಿಮ್ಮ ಮಗಳಿಗಾದ್ರು ಕಲಿಸಬಹುದಾಗಿತ್ತಲ್ಲ?

ಉತ್ತರ : ಆಕಿ ಕಲಿ ಅಂದ್ರ ಕಲಿಯಾದಿಲ್ಲ.

ಪ್ರ 37 : ಈ ಹಾಡುಗಳನ್ನು ಏಕೆ ಹಾಡುತ್ತೀರಿ ?

ಉತ್ತರ : ಹೊಟ್ಟಿ ತುಂಬಿಸಿಕೊಳ್ಳೋದಕ್ಕೆ.

ಪ್ರ 38 : ಯಾವ ಸಂದರ್ಭದಲ್ಲಿ ಹಾಡುಗಳನ್ನು ಹಾಡುತ್ತೀರಿ ?

ಉತ್ತರ : ಯುಗಾದಿ, ನಾಗಪಂಚಮಿ, ದಸರಾ , ದೀಪಾವಳಿ, ಗೌರಿ ಹುಣ್ಣಿಮಿ, ಶಿವರಾತ್ರಿ ಜಾಗರಣೆ ಮುಂತಾದ ಹಬ್ಬ ಹರಿದಿನಗಳಲ್ಲಿ ಹಾಡ್ತೀನಿ. ಅಲ್ಲದೆ ಹೆಣ್ಣು ಮಕ್ಕಳು ತಮ್ಮ ತವರು ಮನೀಗಿ ಬಂದಾಗ, ಮದುವೆ ಮಾಡುವಾಗ , ಮಗುವಿನ ತೊಟ್ಟಿಲಿಡುವಾಗ , ಮನಿಶಾಂತಿ ಮಾಡುವಾಗ, ಹೆಣ್ಣು ಮಕ್ಕಳು ದೊಡ್ಡವರಾದಾಗ ನಡೆಯುವ ಕಾರ್ಯಕ್ರಮಗಳಲ್ಲಿ ಹಾಡ್ತೀನಿ.

ಪ್ರ 39 : ಈ ಸಂದರ್ಭಗಳಲ್ಲಿ ಜನ ನಿಮ್ಮನ್ನ ಕರಿಲಿಕ್ಕಿ ಬರ್ತಾರೋ? ಅಥವಾ ನೀವೇ ಹೋಗಿ ಹಾಡ್ತೀರಿ?

ಉತ್ತರ : ಜನ ಬಂದು ಕರ್ಕೊಂಡು ಹೋಗ್ತಾರ.

ಪ್ರ 40 : ನೀವು ಯಾವ ಯಾವ ಹಾಡುಗಳನ್ನು ಹಾಡ್ತೀರಿ ? ಸ್ವಲ್ಪ ತಿಳ್ಸತೀರಾ?

ಉತ್ತರ : 1) ಬಾಲ ನಾಗಮ್ಮ 2) ಕೃಷ್ಣ ಗೋಪಾಲ ಗೊಲ್ಲರು 3) ಕುಮಾರ ರಾಮ 4) ಮಾರವಾಡಿ ಸೇಠಿ 5) ಬಲಿ ಚಕ್ರವರ್ತಿ 6) ಜಯಸಿಂಗರಾಜ 7) ಸ್ಯಾಸಿ ಚಿನ್ನಮ್ಮ 8) ಆದೋನಿ ಲಕ್ಷ್ಮಮ್ಮ 9) ಬಬ್ಬುಲಿ ನಾಗಿರೆಡ್ಡಿ 10) ಗಂಗಿ ಗೌರಿ 11) ಎಲ್ಲಮ್ಮ.

ಪ್ರ 41 : ಇವುಗಳಲ್ಲಿ ಅತ್ಯಂತ ದೊಡ್ಡ ಹಾಡು ಯಾವುದು ?

ಉತ್ತರ : ಬಾಲ ನಾಗಮ್ಮನ ಹಾಡು.

ಪ್ರ 42 : ನಿಮಗಿಷ್ಟವಾದ ಹಾಡು ಯಾವುದು ?

ಉತ್ತರ : ಎಲ್ಲ ಹಾಡುಗಳು ನಗಿಷ್ಟ, ಅದರಲ್ಲಿ ಬಾಲನಾಗಮ್ಮ ಹೆಚ್ಚು ಸಂತೋಷ ಕೊಡ್ತದ. ಮಾರವಾಡಿ ಸೇಠಿ, ಕುಮಾರ ರಾಮ, ಎಲ್ಲಮ್ಮ , ಸ್ಯಾಸಿ ಚಿನ್ನಮ್ಮ, ಆದೋನಿ ಲಕ್ಷ್ಮಮ್ಮ, ಮುಂತಾದ ಎಲ್ಲಾ ಹಾಡುಗಳು ಇಷ್ಟವಾದವು.

ಪ್ರ 43 : ಯಾವ ಹೊತ್ತಿನಲ್ಲಿ ಅಂದರೆ ಹಗಲು ಹೊತ್ತಿನಲ್ಲಿ ಹೆಚ್ಚು ಹಾಡ್ತೀರೋ? ರಾತ್ರಿ ಹೊತ್ತಿನಲ್ಲಿ ?

ಉತ್ತರ : ರಾತ್ರಿ ಹೊತ್ತಿನಲ್ಲಿ ಬೆಳತಾನ ಕುಂತ ಹಾಡ್ತೀವಿ. ಒಂದೊಂದು ಹಾಡು ಎರಡು, ಮೂರು ನಾಲ್ಕು ದಿನವರೆಗೆ ಹಾಡ್ತೀವಿ.

ಪ್ರ 44 : ಒಂದೊಂದು ಹಾಡು ಮೂರು ನಾಲ್ಕು ದಿನ ಹಾಡ್ತೀವಿ ಅಂದಿರಲ್ಲ. ಆ ಹಾಡುಗಳ ಹೆಸರು ಹೇಳ್ತೀರಾ?

ಉತ್ತರ : ಬಾಲ ನಾಗಮ್ಮದು, ಕೃಷ್ಣ ಗೊಲ್ರದು.

ಪ್ರ 45 : ಯಾವ ಯಾವ ಊರಿಗೆ ಹೋಗಿ ಹಾಡಿದ್ದೀರಿ ?

ಉತ್ತರ : ಬಳ್ಳಾರಿ ಜಿಲ್ಲಾದಾಗ, ಎಲ್ಲ ಊರುಗಳಲ್ಲಿ , ಮುದ್ಗಲ್, ಶಿವಮೊಗ್ಗ, ಚಳ್ಳಕೇರೆ ಮುಂತಾದ ಕಡೆಗಳಲ್ಲಿ ಹಾಡ್ತಿವಿ.

ಪ್ರ 46 : ನಿಮ್ಮ ಹಾಡುಗಳು ಕೇಳೋದರಿಂದ ಜನಗಳಿಗಾಗುವ ಉಪಯೋಗವೇನು? ಅದರಿಂದ ಏನು ಸಿಗುತ್ತದೆಯಂತ ಜನ ತಿಳಕೊಂಡಾರ?

ಉತ್ತರ : ಪುಣ್ಯ ಸಿಗ್ತದ ಅಂತ ತಿಳಕೊಂಡಾರ, ಮನಸಿಗಿ ಆನಂದ ಸಿಗ್ತದ ಅಂತ ತಿಳಕೊಂಡಾರ, ತವರು ಮನಿಗಿ ಬಂದ ಮಗಳು ಈ ಹಾಡು ಕೇಳಿದರ ಆಕಿನ ಜೀವನ ಒಳ್ಳೆಯದಾಗ್ತದ ಅಂತ ತಿಳಕೊಂಡಾರ, ಪೂಜೆ ಪುನಸ್ಕಾರಗಳಿಂದ, ಹಾಡು ಕೇಳೋದರಿಂದ ನಮ್ಮ ಮನಸಿಗಿ ಶಾಂತಿ ಸಿಗ್ತದೆ, ನಮಗ ಒಳ್ಳೆಯದಾಗ್ತದ ಅಂತ ತಿಳಕೊಂಡಾರ.

ಪ್ರ 47 : ಈ ಹಾಡುಗಳನ್ನು ಹೇಗೆ ಹಾಡುತ್ತೀರಿ ? ಅಂದ್ರ ನೀವೊಬ್ಬರೇ ಹಾಡ್ತಿರೋ? ಅಥವಾ ಜೊತೆಯಲ್ಲಿ ಯಾರನ್ನಾದರೂ ಕೂಡಿಕೊಂಡು ಹಾಡ್ತಿರೋ?

ಉತ್ತರ : ಬುರ್ರ (ತಂಬೂರಿ) ಮತ್ತು ಗೆಗ್ಗರಿ ಬಾರಿಸ್ತಾ ಮುಂದ ನಾನು ಹಾಡ್ತೀನಿ. ಡಿಮ್ಕಿ ಬಾರಿಸ್ತ ನನ್ಹಿಂದ ನನ್ನ ತಂಗಿ ಮತ್ತು ನನ್ನತ್ತಿಗಿ ಹಾಡ್ತಾರ. ಕತೀ ಕೇಳತಾ ಜನ ಭಾವುಕರಾಗ್ತಾರ, ಕಣ್ಣಲ್ಲಿ ನೀರು ಬರ್ತಾವ. ಕತೀಯಲ್ಲಿ ಬರುವ ಜನರ ಸಂಕಟ ತಿಳಿದು ಮರುಗ್ತಾರ. ಅವರು ಅಳುವುದನ್ನು ನೋಡಿ ನನಗೂ ಅಳು ಬರ್ತದ . ಸಂಕಟ ಆಗ್ತದ. ದುಃಖ ಉಕ್ಕಿ ಬರ್ತದ. ಕಣ್ಣಲ್ಲಿ ತನ್ನ ತಾನೇ ನೀರು ಹೋಗತಿರ್ತದ. ಆದರೂ ಕತೀ ನಿಲ್ಲಿಸುವಾಂಗಿಲ್ಲ. ದುಃಖದಲ್ಲೇ ಕತೀ ಹೇಳ್ತಿನಿ. ನನ್ನ ಕತಿಗಳಲ್ಲಿ ಬರುವ ಸತ್ಯವನ್ನು ಕೇಳಿ ಜನ ಸಂತೋಷ ಪಡ್ತಾರ. ಜನ ತಾವೂ ಸತ್ಯವಾನರಾಗಬೇಕೆಂತಾರ. ಬದುಕಿನಲ್ಲಿ ಎಷ್ಟೇ ಕಷ್ಟ ಬಂದ್ರೂ

ಅವರಂತೆ (ಕಥಾನಾಯಕ) ಎದುರಿಸಿ ಬದುಕಬೇಕು ಅಂತಾರ. ಅಂತಂಥವರಿಗಿ ಹೀಗಾಧ್ರೆ ನಮ್ಮಂಥವರ ಪಾಡೇನು? ಎಂದು ನಿಟ್ಟುಸಿರು ಬಿಡ್ತಾರ. ದುಃಖ ಪಡ್ತಾರ. ಈ ಕತಿಗಳು ಕೇಳೋದರಿಂದ ಕಷ್ಟ ಪರಿಹಾರ ಆಗ್ತದ ಅಂತ ತಿಳಕೊಂತಾರ. ಕುಮಾರರಾಮ ನ್ಹಂಗ ಬಲಿಚಕ್ರವರ್ತಿ ಹಾಂಗ, ಕೃಷ್ಣ ಗೋಪಾಲರ್ಹಂಗ ನಾವೂ ಆಗ್ಬೇಕು. ಸತ್ಯದಿಂದ ನಡೀಬೇಕು, ಹೆಸರ ಪಡೀಬೇಕು, ಹಾಡ ಕೇಳಿ ದುಃಖ ಮರೀಬೇಕು, ಅಂತಾರ. ನಿನ್ನ ಕತೀ ಕೇಳಿ ನಾವ್ ಬದುಕತೀವಿ ಅಂತಾರ. ನಿನ್ನ ಆಶೀರ್ವಾದದಿಂದ ನಮ್ಮ ಮಕ್ಕಳು ಮರಿಗಳು ತಣ್ಣಗಿರಲವ್ವ ಅಂತಾರ. ಹಿಂದಿನ ಕಾಲದವ್ರು . ಆಳಿ - ಬಾಳಿದಂತೆ ನಾವೂ ಬಾಳಬೇಕು ಅಂತಾರ. ಅಂದಿನವರು ಭಾಳ ಪುಣ್ಯಾವಂತ್ರು. ಅವರನ್ನ ಕಣ್ಣೀಲಿ ನೋಡದಿದ್ರೂ ಕಿವಿಲಿ ಅದ್ರು ಕೇಳೋ ಪುಣ್ಯ ನೀ ಮಾಡಿಕೊಟ್ಟಿಯಮ್ಮ ಅಂತ ಸಂತೋಷ ಪಡ್ತಾರ.

ಪ್ರ 48 : ನಿಮ್ಹಿಂದ ಹಾಡೋರ ಹೆಸರ ಹೇಳ್ತಿರಾ?

ಉತ್ತರ : ನನ್ನ ತಂಗಿ ಶಿವಮ್ಮ ಮತ್ತು ನಮ್ಮಣ್ಣನ ಹೇಣ್ತಿ ಪಾರ್ವತೆಮ್ಮ.

ಪ್ರ 49 : ಎಷ್ಟು ವರ್ಷಗಳಿಂದ ಇವರು ನಿಮ್ಮ ಜೊತೆಯಲ್ಲಿ ಹಾಡ್ತಿದ್ದಾರೆ?

ಉತ್ತರ : ಬಹಳ ವರ್ಷಗಳಿಂದ.

ಪ್ರ 50 : ಅಂದ ಮೇಲೆ ನೀವು ಹಾಡುವ ಹಾಡುಗಳು ಇವರಿಗೂ ಬರ್ತಿರಬೇಕಲ್ಲ?

ಉತ್ತರ : ಬರದಿಲ್ಲ. ನನ್ಹಿಂದ ಮಾತ್ರ ಹಾಡಲಿಕ್ಕೆ ಬರ್ತದ . ಹಿಂದ ಹಾಡಾದಕಕೆ ಮಾತ್ರ ಕಲ್ತಿದ್ದಾರೆ. ಮುಂದ್ಹಾಡಲಿಕ್ಕೆ ಕಲೀರಿ ಅಂದ್ರ ಬರಾದಿಲ್ಲ ಅಂತಾರ.

ಪ್ರ 51 : ಬುರ್ರ, ಗೆಗ್ಗರಿ, ಡಿಮ್ಕಿ , ಇವು ನೀವು ಹಾಡುವಾಗ ಬಳಸುವ ವಾದ್ಯಗಳಂದ್ಹಾಂಗಾಯ್ತು?

ಉತ್ತರ : ಹೌದು.

ಪ್ರ 52 : ಹಾಡುವಾಗ ಇವನ್ನ ಬಿಟ್ಟು ಮತ್ತೇನನ್ನಾದರೂ ಬಾರಿಸ್ತೀರೇನು?

ಉತ್ತರ : ಇಲ್ಲ.

ಪ್ರ 53 : ಹಾಡು ಹಾಡುವುದನ್ನು ಬಿಟ್ಟು ಬೇರೆ ಸಮಯದಲ್ಲಿ ಏನು ಮಾಡುತ್ತೀರಿ ?

ಉತ್ತರ : ರಾತ್ರಿ ಕತೀ ಹೇಳಿ ಹಗಲು ಕೂಲಿ ಹೋಗತ್ತೀನಿ. ಬೇರೆಯವರ ಹೊಲದಲ್ಲಿ ಸಸಿ ಹಚ್ಚದು, ಕಸಾ ತೆಗೆಯದು, ಹತ್ತಿ ಬಿಡಸದು ಮಾಡ್ತೀನಿ.

ಪ್ರ 54 : ಹೊಲದಲ್ಲಿ ಕಳೆ - ಕಸ ತೆಗೆಯದು ಮುಂತಾದ ಹೊಲಗೆಲಸ ಮಾಡ್ತೀನಿ ಅಂದ್ರಲ್ಲಾ? ಆ ಸಮಯದಲ್ಲಿ ಹಾಡು ಹೇಳ್ತರೇನು?

ಉತ್ತರ : ಆಗ ದೊಡ್ಡ ಕತೀ ಹೇಳಾದಿಲ್ಲ. ಸಣ್ಣ ಸಣ್ಣ ಪದಾ ಹಾಡ್ತೀನಿ. ಮಳಿ ರಾಜನ ಹಾಡ ಹಾಡ್ತೀನಿ.

ಪ್ರ 55 : ಹಾಡು ಹೇಗೆ ಶುರು ಮಾಡ್ತೀರಿ ?

ಉತ್ತರ : ಹಾಡು ಹೇಳುವ ಜಾಗದಲ್ಲಿ ಮೊದಲು ಪೂಜಾ ಮಾಡ್ತೀವಿ.

ಹಾಡು ಸುರು ಮಾಡುವಾಗ ಕಾಳು ಹಾಕಿದ ತಟ್ಟೆಯಲ್ಲಿ ತುಂಬಿದ ಚೆರಿಗೆ ಇಟ್ಟು ಅದರ ಮ್ಯಾಲ ಕಾಯಿ ಇಡ್ತೀವಿ. ಕಾಯಿಗೆ ಅರಿಶಿನ - ಕುಂಕುಮ ಹಚ್ಚಿ, ಹೂ ಮುಡಸ್ತೀವಿ. ಊದಿನ ಕಡ್ಡಿ ಹಚ್ತೀವಿ. ಆವೊತ್ತು ನಾನು ಯಾರ ಕತೀ ಹೇಳ್ತನಿ ಆ ದೇವರ ಪೂಜೆ ಅದಾಗಿರ್ತದ. ಕುಮಾರ ರಾಮನ ಕತೀ ಇದ್ರ ಅದು ಕುಮಾರ ರಾಮ ದೇವು, ಎಲ್ಲಮ್ಮನ ಕತೀ ಇದ್ರ ಎಲ್ಲಮ್ಮ , ಬಾಲ ನಾಗಮ್ಮ ಕತೀ ಇದ್ರ ಬಾಲನಾಗಮ್ಮ. ಯಾರ ಕತೀ ಹೇಳ್ತೀನಿ ಆ ದೇವರಾಗಿರ್ತದ. ಈ ಪೂಜೆ ಮಾಡಿದ ಮ್ಯಾಲೆ ಹಾಡು ಸುರು ಮಾಡ್ತೀನಿ.

ಪ್ರ 56 : ನಿಮ್ಮ ಹಾಡಿನ ಪ್ರಾರಂಭದಲ್ಲಿ ಯಾವ ಯಾವ ದೇವರುಗಳನ್ನು ಮತ್ತು ಏನೇನನ್ನು ನೆನೆಯುತ್ತೀರಿ?

ಉತ್ತರ : ಮೊದಲು ಕುಲದೈವವನ್ನು ನೆನಿತೀವಿ. ನಂತರ ಸುತ್ತ ಮುತ್ತ ಊರಿನ ದೇವರುಗಳನ್ನು ನೆನಿತೀವಿ. ನಂತರ ಭೂಮ ತಾಯಿಯನ್ನ ನೆನೆದು ಹಾಡು ಹೇಳ್ತೀವಿ.

ಪ್ರ 57 : ಹೀಗೆ ಹಾಡಬೇಕು ಅನ್ನುವ ಪದ್ಧತಿ ಏನಾದರೂ ಇಟ್ಟು ಕೊಂಡಿದ್ದೀರಾ?

ಉತ್ತರ : ಏನಿಲ್ಲ. ಮಂಗಳವಾರ , ಶುಕ್ರವಾದ , ಹುಣ್ಣಿವಿ - ಅಮಾಸಿ ಆದ್ರ ಅವೊತ್ತ ಸ್ನಾನ, ಪೂಜೆ ಮಾಡಿ ಕತೀ ಹ'ೇಳ್ತವಿ. ಬ್ಯಾರೆ ದಿನಗಳಲ್ಲಿ ಬರಿ ಪೂಜೆ ಮಾಡಿ ಕತೀ ಸುರು ಮಾಡ್ತೀವಿ. ಕತೀ ಸುರು ಆದ ಮ್ಯಾಲೆ ಒಂದು ಸಂದು (ಸಂದರ್ಭ) ಬಂದ ಮ್ಯಾಲೆ ಒಂದು ಕಾಯಿ ಒಡಿತೀವಿ. ಹೀಗ ಕಾಯಿ ಒಡೆಯೊದರಿಂದ ದೈವಕ್ಕ ಮುಟ್ಟಿದಂಗಾಯ್ತದ. ಇದರರ್ಥ ಒಬ್ಬ ವೀರ ಇನ್ನೊಬ್ಬನನ್ನು (ರಾಕ್ಷಸ) ಕೊಂದು ಸೋಲಿಸಿದ ಎಂದ ತಕ್ಷಣ ಒಂದ ಕಾಯಿ ಒಡಿತೀವಿ. ಇಲ್ಲಿಗೆ ಒಂದು ಸಂದು (ಪ್ರಕರಣ) ಮುಗಿಯಿತು ಅಂತರ್ಥ. ಕತೀ ಸುರು ಮಾಡಿದರೆ ಒಂದು ಸಂದು ಮುಗಿಬೇಕು. ಮುಗಿಯತನಕ ಏಳುವ ಹಾಂಗಿಲ್ಲ. ಷ್ಟೋ ತ್ರಾಸ ಆದ್ರೂ, ಏನೇ ಆದ್ರೂ ಕಾಯಿ ಒಡೆಯುವ ಸಂದು ಬರುವವರೆಗೂ ಕತೀ ನಿಲ್ಲಿಸಾಕಿಲ್ಲ.

ಪ್ರ 58 : ಐವತ್ತು - ಐವತ್ತೈದು ವರ್ಷಗಳಿಂದ ಸತತವಾಗಿ ಹಾಡು ಹಾಡುತ್ತ ಬರುತ್ತಿದ್ದೀರಿ ಇದರಿಂದ ನಿಮಗ ಏನನಸ್ತದ?

ಉತ್ತರ : ಸಂತೋಷನಸ್ತದ. ಈ ಭಾಗದ ಜನ ಎಲ್ಲಾ ಬೇಸ ಹೇಳ್ತಾಳ ಸಂಗೀತ ಈಯಮ್ಮ ಅಂತಾರ, ಮನಿಗಿ ಕರಿತಾರ , ಸುಖ ದುಃಖ ಇಚಾರಸ್ತಾರ, ಊಟ ಕೊಡ್ತಾರ, ಸಹಾಯ ಮಾಡ್ತಾರ, ದುಡ್ಡು ಕೊಡ್ತಾರ, ಕಾಳು - ಕಡಿ, ಆಕಳು, ಆಡುಗಳು

ಕೊಡ್ತಾರ, ಮತ್ತೆ ಹೊಸ ಸೀರಿ ಕೊಡ್ತಾರ, ನನ್ನ ಹಾಡ ಕೇಳಿ ಸಂತೋಷದಿಂದ ಇದನ್ನೆಲ್ಲ ಕೊಡ್ತಾರ. ಇದರಿಂದ ನಮಗ ತುತ್ತ ಅನ್ನ ಸಿಗ್ತದ . ಮನಸಿಗಿ ಸಂತೋಷಾಗ್ತದ, ಏಳೆಂಟು ವರ್ಷದಿಂದ ಗೋರಮೆಂಟನವರು ನನ್ನ ಕಂಡು ಹಿಡಿದಾರ. ಸಹಾಯ ಮಾಡ್ಯಾರ .ಈ ಮನಿ ಕಟ್ಟಲಾಕ ದುಡ್ಡ ಕೊಟ್ಟಾರ. ಸಭೆ ಸಮಾರಂಭಗಳಲ್ಲಿ ಕರದು ಹಾಡಲಿಕ್ಕಿ ಹಚ್ಯಾರ. ಹೀಂಗ ಜನ ಪಿರಿತಿಯಿಂದ ನೋಡಿ ನನ್ನ ದುಃಖ ಮರಸ್ಯಾರ.

ಪ್ರ 59: ಗೋರಮೇಂಟನವರು ಸಹಾಯ ಮಾಡ್ಯಾರ ಅಂದ್ರಲ್ಲ . ನಿಮಗ ಪ್ರಶಸ್ತಿ ಬಹುಮಾನ ಏನಾದರೂ ಕೊಟ್ಟಾರೇನು?

ಉತ್ತರ : ಹೌದು.

ಪ್ರ 60 : ಯಾವ ಪ್ರಶಸ್ತಿ ಕೊಟ್ಟಾರ?

ಉತ್ತರ : ರಾಜ್ಯೋತ್ಸವ ಪ್ರಶಸ್ತಿ ಕೊಟ್ಟಾರ ಸುತ್ತ ಮುತ್ತಲಿನ ಭಾಗದ ಸಂಘ ಸಂಸ್ಥೆಗಳವರು ಕರೆಸಿ ಸನ್ಮಾನ ಮಾಡ್ಯಾರ.

ಪ್ರ 61 : ರಾಜ್ಯೋತ್ಸವ ಪ್ರಶಸ್ತಿ ಪಡೆದಾಗ ನಿಮಗ ಏನನಸ್ತು ?

ಉತ್ತರ : ಬೆಂಗಳೂರನ್ಯಾಗ ದೊಡ್ಡ ದೊಡ್ಡ ಕಲಾವಿದರು ಬಂದಿದ್ದರು. ಅವರ ನಡುವೆ ಕುಳಿತು ಪ್ರಶಸ್ತಿ ಪಡೆಯುವಾಗ ನಾನು ಹುಟ್ಟಿದ್ದು ಸಾರ್ಥಕಾಯ್ತು ಅನಸ್ತು.

ಪ್ರ 62 : ನೀವು ಹಾಡುವ ಕಾವ್ಯಗಳು ಕುರಿತು ಯಾರಾದರೂ ಪುಸ್ತಕ ಬರದಾರೇನು?

ಉತ್ತರ : ಮೈತ್ರಿ ಸಾರ ಮೊದಲು ಒಂದು ಪುಸ್ತಕ ಬರದ್ರು, ಅವ್ರು ನನ್ನ ಪಾಲಿನ ದೇವ್ರು, ಗೋರಮೇಂಟನವರಿಗೆ ಗೊತ್ತಾಗಲಿಕ್ಕೆ ಅವರೇ ಕಾರಣರು. ನನ್ನ ಹಾಡುಗಳನ್ನು ಮೊದಲು ರಿಕಾರ್ಡ್ ಮಾಡಿ ಪುಸ್ತಕ ಬರದವ್ರು. ಅಷ್ರೇ. ಕುಮಾರ ರಾಮ, ಕೃಷ್ಣ ಗೊಲ್ಲರು ಕುರಿತು ಪುಸ್ತಕ ಬರದಾರ. ನನ್ನ ಎಲ್ಲ ಹಾಡುಗಳು ರಿಕಾರ್ಡ ಮಾಡ್ಯಾರ. ರಮೇಶ ಸಾರು ಸ್ಯಾಸಿ ಚಿನ್ನಮ್ಮನ ಕುರಿತು ಪುಸ್ತಕ ಬರ್ದಾರ. ನಿಂಗಪ್ಪ ಸಾರು ನನ್ನ ಬಗ್ಗೆ ಬರದಾರ.

ಪ್ರ 63 : ಆಕಾಶವಾಣಿ - ದೂರದರ್ಶನ ಅಂದ್ರೆ ರೇಡಿಯೋ, ಟಿ. ವಿ. ಗಳಲ್ಲಿ ನೀವು ಹಾಡಿರೇನು?

ಉತ್ತರ : ಹಾಡೀನಿ.

ಪ್ರ 64 : ಈಗ ನೀವು ಹಾಡ್ತೀರಲ್ಲಾ ಈ ಹಾಡುಗಳು ಬೇರೆ ಯಾರಿಗಾದರೂ ಕಲಿಸಿರೇನು?

ಉತ್ತರ : ಇಲ್ಲ.

ಪ್ರ 65 : ಯಾಕ ಕಲಿಸಿಲ್ಲ?

ಉತ್ತರ : ಬೇರೆಯಾರೂ ಕಲಿಯಾಕ ಮುಂದ ಬರ್ತಾ ಇಲ್ಲ. ನನ್ನ ತಂದೆಯವರು ತಮ್ಮ ಗಂಡ ಮಕ್ಕಳು ತಮ್ಮ ಹಾಡುಗಳನ್ನು ಯಾರೂ ಕಲಿಲಿಲ್ಲ ಅಂತ ನನ್ನನ್ನ ಕಲಿಸಿದ್ರು. ಕಲಿಯಮ್ಮ ಹೊಟ್ಟೆ ಪಾಡಿಗಾಗ್ತದ. ನನ್ನ ನಂತರ ಇವು ಹಾಳಾಗಿ ಹೋಗಬಾರ್ದು

ಆಂತಿದ್ರು. ಇದರಿಂದ ನಾನು ಕಲಿತೆ. ಇನ್ನ ಮುಂದ ಕಲಿರಂದ್ರ ಬೇರೆ ಯಾರೂ ಕಲಿತಾಯಿಲ್ಲ.

ಪ್ರ 66 : ನಿಮ್ಮ ನಂತರ ಈ ಹಾಡುಗಳು ನಾಶವಾಗಿ ಹೋಗ್ತಾವ ಅನಸಾದಿಲ್ಲೇನು ನಿಮಗೆ?

ಉತ್ತರ : ಯಾರಿಗಾದರೂ ಕಲಿಸಬೇಕಂಧ್ರ ಕಲಿಯಾಕಿಲ್ಲ ಅಂತಾರ ಎನ್ ಮಾಡದು. ಅದೊಂದೇ ಕೊರಗು.

ಪ್ರ 67: ನಮಸ್ಕಾರ ಅಜ್ಜಿ?

ಉತ್ತರ : ನಮಸ್ಕಾರ್ರಿಯಮ್ಮ. ಅಂದ ಮೇಲೆ ನೀವು ಹಾಡುವ ಹಾಡುಗಳು ಇವರಿಗೂ ಬರ್‍ತಿರಬೇಕಲ್ಲ?

ಉತ್ತರ : ಬರದಿಲ್ಲ. ನನ್ನಿಂದ ಮಾತ್ರ ಹಾಡಲಿಕ್ಕ ಬರ್‍ತದ . ಹಿಂದ ಹಾಡಾದಕಕೆ ಮಾತ್ರ ಕಲ್ತಿದ್ದಾರೆ. ಮುಂದ್ಹಾಡಲಿಕ್ಕೆ ಕಲೀರಿ ಅಂದ್ರ ಬರಾದಿಲ್ಲ ಅಂತಾರ.

ಪ್ರ 51 : ಬುರ್‍ರ, ಗೆಗ್ಗರಿ, ಡಿಮ್ಕಿ . ಇವು ನೀವು ಹಾಡುವಾಗ ಬಳಸುವ ವಾದ್ಯಗಳಂದ್ಹಾಂಗಾಯ್ತು?

ಉತ್ತರ : ಹೌದು.

ಪ್ರ 52 : ಹಾಡುವಾಗ ಇವನ್ನ ಬಿಟ್ಟು ಮತ್ತೇನನ್ನಾದರೂ ಬಾರಿಸ್ತೀರೇನು?

ಉತ್ತರ : ಇಲ್ಲ.

ಪ್ರ 53 : ಹಾಡು ಹಾಡುವುದನ್ನು ಬಿಟ್ಟು ಬೇರೆ ಸಮಯದಲ್ಲಿ ಏನು ಮಾಡುತ್ತೀರಿ ?

ಉತ್ತರ : ರಾತ್ರಿ ಕತೀ ಹೇಳಿ ಹಗಲು ಕೂಲಿ ಹೋಗತ್ತೀನಿ. ಬೇರೆಯವರ ಹೊಲದಲ್ಲಿ ಸಸಿ ಹಚ್ಚದು, ಕಸಾ ತೆಗೆಯದು, ಹತ್ತಿ ಬಿಡಸದು ಮಾಡ್ತೀನಿ.

ಪ್ರ 54 : ಹೊಲದಲ್ಲಿ ಕಳೆ - ಕಸ ತೆಗೆಯದು ಮುಂತಾದ ಹೊಲಗೆಲಸ ಮಾಡ್ತೀನಿ ಅಂದ್ರಲ್ಲಾ? ಆ ಸಮಯದಲ್ಲಿ ಹಾಡು ಹೇಳ್ತರೇನು?

ಉತ್ತರ : ಆಗ ದೊಡ್ಡ ಕತೀ ಹೇಳಾದಿಲ್ಲ. ಸಣ್ಣ ಸಣ್ಣ ಪದಾ ಹಾಡ್ತೀನಿ. ಮಳಿ ರಾಜನ ಹಾಡ ಹಾಡ್ತೀನಿ.

ಪ್ರ 55 : ಹಾಡು ಹೇಗೆ ಶುರು ಮಾಡ್ತೀರಿ ?

ಉತ್ತರ : ಹಾಡು ಹೇಳುವ ಜಾಗದಲ್ಲಿ ಮೊದಲು ಪೂಜಾ ಮಾಡ್ತೀವಿ.
ಹಾಡು ಸುರು ಮಾಡುವಾಗ ಕಾಳು ಹಾಕಿದ ತಟ್ಟೆಯಲ್ಲಿ ತುಂಬಿದ ಚೆರಿಗೆ ಇಟ್ಟು ಅದರ ಮ್ಯಾಲ ಕಾಯಿ ಇಡ್ತೀವಿ. ಕಾಯಿಗೆ ಅರಿಶಿನ - ಕುಂಕುಮ ಹಚ್ಚಿ, ಹೂ ಮುಡಸ್ತೀವಿ. ಊದಿನ ಕಡ್ಡಿ ಹಚ್ತೀವಿ. ಆವೊತ್ತು ನಾನು ಯಾರ ಕತೀ ಹೇಳ್ತನಿ ಆ ದೇವರ ಪೂಜೆ ಅದಾಗಿರ್‍ತದ. ಕುಮಾರ ರಾಮನ ಕತೀ ಇದ್ರ ಅದು ಕುಮಾರ ರಾಮ ದೇವ್ರು, ಎಲ್ಲಮ್ಮನ ಕತೀ ಇದ್ರ ಎಲ್ಲಮ್ಮ . ಬಾಲ ನಾಗಮ್ಮ ಕತೀ ಇದ್ರ ಬಾಲನಾಗಮ್ಮ. ಯಾರ ಕತೀ ಹೇಳ್ತೀನಿ ಆ ದೇವರಾಗಿರ್‍ತದ. ಈ ಪೂಜೆ ಮಾಡಿದ ಮ್ಯಾಲೆ ಹಾಡು ಸುರು ಮಾಡ್ತೀನಿ.

ಪ್ರ 56 : ನಿಮ್ಮ ಹಾಡಿನ ಪ್ರಾರಂಭದಲ್ಲಿ ಯಾವ ಯಾವ ದೇವರುಗಳನ್ನು ಮತ್ತು ಏನೇನನ್ನು ನೆನೆಯುತ್ತೀರಿ?

ಉತ್ತರ : ಮೊದಲು ಕುಲದೈವವನ್ನು ನೆನಿತೀವಿ. ನಂತರ ಸುತ್ತ ಮುತ್ತ ಊರಿನ ದೇವರುಗಳನ್ನು ನೆನಿತೀವಿ. ನಂತರ ಭೂಮ ತಾಯಿಯನ್ನ ನೆನೆದು ಹಾಡು ಹೇಳ್ತೀವಿ.

ಪ್ರ 57 : ಹೀಗೆ ಹಾಡಬೇಕು ಅನ್ನುವ ಪದ್ಧತಿ ಏನಾದರೂ ಇಟ್ಟು ಕೊಂಡಿದ್ದೀರಾ?

ಉತ್ತರ : ಏನಿಲ್ಲ. ಮಂಗಳವಾರ , ಶುಕ್ರವಾದ , ಹುಣ್ಣಿವಿ - ಅಮಾಸಿ ಆದ್ರ ಅವೊತ್ತ ಸ್ನಾನ, ಪೂಜೆ ಮಾಡಿ ಕತೀ ಹೇಳ್ತವಿ. ಬ್ಯಾರೆ ದಿನಗಳಲ್ಲಿ ಬರಿ ಪೂಜೆ ಮಾಡಿ ಕತೀ ಸುರು ಮಾಡ್ತೀವಿ. ಕತೀ ಸುರು ಆದ ಮ್ಯಾಲೆ ಒಂದು ಸಂದು (ಸಂದರ್ಭ) ಬಂದ ಮ್ಯಾಲೆ ಒಂದು ಕಾಯಿ ಒಡಿತೀವಿ. ಹೀಗ ಕಾಯಿ ಒಡೆಯೊದರಿಂದ ದೈವಕ್ಕ ಮುಟ್ಟಿದಂಗಾಯ್ತುದ. ಇದರರ್ಥ ಒಬ್ಬ ವೀರ ಇನ್ನೊಬ್ಬನನ್ನು (ರಾಕ್ಷಸ) ಕೊಂದು ಸೋಲಿಸಿದ ಎಂದ ತಕ್ಷಣ ಒಂದ ಕಾಯಿ ಒಡಿತೀವಿ. ಇಲ್ಲಿಗೆ ಒಂದು ಸಂದು (ಪ್ರಕರಣ) ಮುಗಿಯಿತು ಅಂತರ್ಥ. ಕತೀ ಸುರು ಮಾಡಿದರೆ ಒಂದು ಸಂದು ಮುಗಿಬೇಕು. ಮುಗಿಯತನಕ ಏಳುವ ಹಾಂಗಿಲ್ಲ. ಷ್ಟೋ ತ್ರಾಸ ಆದ್ರೂ, ಏನೇ ಆದ್ರೂ ಕಾಯಿ ಒಡೆಯುವ ಸಂದು ಬರುವವರೆಗೂ ಕತೀ ನಿಲ್ಲಿಸಾಕಿಲ್ಲ.

ಪ್ರ 58 : ಐವತ್ತು - ಐವತ್ತೈದು ವರ್ಷಗಳಿಂದ ಸತತವಾಗಿ ಹಾಡು ಹಾಡುತ್ತ ಬರುತ್ತಿದ್ದೀರಿ ಇದರಿಂದ ನಿಮಗ ಏನನಸ್ತದ?

ಉತ್ತರ : ಸಂತೋಷನಸ್ತದ. ಈ ಭಾಗದ ಜನ ಎಲ್ಲಾ ಬೇಸ ಹೇಳ್ತಾಳ ಸಂಗೀತ ಈಯಮ್ಮ ಅಂತಾರ, ಮನಿಗಿ ಕರಿತಾರ , ಸುಖ ದುಃಖ ಇಚಾರಸ್ತಾರ, ಊಟ ಕೊಡ್ತಾರ, ಸಹಾಯ ಮಾಡ್ತಾರ, ದುಡ್ಡು ಕೊಡ್ತಾರ, ಕಾಳು - ಕಡಿ, ಆಕಳು, ಆಡುಗಳು ಕೊಡ್ತಾರ, ಮತ್ತೆ ಹೊಸ ಸೀರಿ ಕೊಡ್ತಾರ, ನನ್ನ ಹಾಡ ಕೇಳಿ ಸಂತೋಷದಿಂದ ಇದನ್ನೆಲ್ಲ ಕೊಡ್ತಾರ. ಇದರಿಂದ ನಮಗ ತುತ್ತ ಅನ್ನ ಸಿಗ್ತದ . ಮನಸಿಗಿ ಸಂತೋಷಾಗ್ತದ, ಏಳೆಂಟು ವರ್ಷದಿಂದ ಗೋರಮೆಂಟನವರು ನನ್ನ ಕಂಡು ಹಿಡಿದಾರ. ಸಹಾಯ ಮಾಡ್ಯಾರ .ಈ ಮನಿ ಕಟ್ಟಲಾಕ ದುಡ್ಡ ಕೊಟ್ಟಾರ. ಸಭೆ ಸಮಾರಂಭಗಳಲ್ಲಿ ಕರದು ಹಾಡಲಿಕ್ಕಿ ಹ'ಚ್ಯಾರ. ಹೀಂಗ ಜನ ಪಿರಿತಿಯಿಂದ ನೋಡಿ ನನ್ನ ದುಃಖ ಮರಸ್ಯಾರ.

ಪ್ರ 59 : ಗೋರಮೇಂಟನವರು ಸಹಾಯ ಮಾಡ್ಯಾರ ಅಂದ್ರಲ್ಲ , ನಿಮಗ ಪ್ರಶಸ್ತಿ ಬಹುಮಾನ ಏನಾದರೂ ಕೊಟ್ಟಾರೇನು?

ಉತ್ತರ : ಹೌದು.

ಪ್ರ 60 : ಯಾವ ಪ್ರಶಸ್ತಿ ಕೊಟ್ಟಾರ?

ಉತ್ತರ : ರಾಜ್ಯೋತ್ಸವ ಪ್ರಶಸ್ತಿ ಕೊಟ್ಟಾರ ಸುತ್ತ ಮುತ್ತಲಿನ ಭಾಗದ ಸಂಘ

ಸಂಸ್ಥೆಗಳವರು ಕರೆಸಿ ಸನ್ಮಾನ ಮಾಡ್ಯಾರ.

ಪ್ರ 61 : ರಾಜ್ಯೋತ್ಸವ ಪ್ರಶಸ್ತಿ ಪಡೆದಾಗ ನಿಮಗ ಏನನಸ್ತು ?

ಉತ್ತರ : ಬೆಂಗಳೂರನ್ಯಾಗ ದೊಡ್ಡ ದೊಡ್ಡ ಕಲಾವಿದರು ಬಂದಿದ್ದರು. ಅವರ ನಡುವೆ ಕುಳಿತು ಪ್ರಶಸ್ತಿ ಪಡೆಯುವಾಗ ನಾನು ಹುಟ್ಟಿದ್ದು ಸಾರ್ಥಕಾಯ್ತು ಅನಸ್ತು.

ಪ್ರ 62 : ನೀವು ಹಾಡುವ ಕಾವ್ಯಗಳು ಕುರಿತು ಯಾರಾದರೂ ಪುಸ್ತಕ ಬರದಾರೇನು?

ಉತ್ತರ : ಮೈತ್ರಿ ಸಾರ ಮೊದಲು ಒಂದು ಪುಸ್ತಕ ಬರದ್ರು, ಅವು ನನ್ನ ಪಾಲಿನ ದೇವ್ರು, ಗೋರಮೇಂಟನವರಿಗೆ ಗೊತ್ತಾಗಲಿಕ್ಕೆ ಅವರೇ ಕಾರಣರು. ನನ್ನ ಹಾಡುಗಳನ್ನು ಮೊದಲು ರಿಕಾರ್ಡ್ ಮಾಡಿ ಪುಸ್ತಕ ಬರದವ್ರು. ಅವ್ರೇ. ಕುಮಾರ ರಾಮ, ಕೃಷ್ಣ ಗೊಲ್ಲರು ಕುರಿತು ಪುಸ್ತಕ ಬರದಾರ. ನನ್ನ ಎಲ್ಲ ಹಾಡುಗಳು ರಿಕಾರ್ಡ್ ಮಾಡ್ಯಾರ. ರಮೇಶ ಸಾರು ಸ್ಯಾಸಿ ಚಿನ್ನಮ್ಮನ ಕುರಿತು ಪುಸ್ತಕ ಬರ್ದಾರ. ನಿಂಗಪ್ಪ ಸಾರು ನನ್ನ ಬಗ್ಗೆ ಬರದಾರ.

ಪ್ರ 63 : ಆಕಾಶವಾಣಿ - ದೂರದರ್ಶನ ಅಂದ್ರೆ ರೇಡಿಯೋ, ಟಿ. ವಿ. ಗಳಲ್ಲಿ ನೀವು ಹಾಡಿರೇನು?

ಉತ್ತರ : ಹಾಡೀನಿ.

ಪ್ರ 64 : ಈಗ ನೀವು ಹಾಡ್ತೀರಲ್ಲಾ ಈ ಹಾಡುಗಳು ಬೇರೆ ಯಾರಿಗಾದರೂ ಕಲಿಸಿರೇನು?

ಉತ್ತರ : ಇಲ್ಲ.

ಪ್ರ 65 : ಯಾಕ ಕಲಿಸಿಲ್ಲ?

ಉತ್ತರ : ಬೇರೆಯಾರೂ ಕಲಿಯಾಕ ಮುಂದ ಬರ್ತಾ ಇಲ್ಲ. ನನ್ನ ತಂದೆಯವರು ತಮ್ಮ ಗಂಡ ಮಕ್ಳು ತಮ್ಮ ಹಾಡುಗಳನ್ನು ಯಾರೂ ಕಲಿಲಿಲ್ಲ ಅಂತ ನನ್ನನ್ನ ಕಲಿಸಿದ್ರು. ಕಲಿಯಮ್ಮ ಹೊಟ್ಟೆ ಪಾಡಿಗಾಗ್ತದ. ನನ್ನ ನಂತರ ಇವು ಹಾಳಾಗಿ ಹೋಗಬಾರ್ದು ಅಂತಿದ್ರು. ಇದರಿಂದ ನಾನು ಕಲಿತೆ. ಇನ್ನ ಮುಂದ ಕಲಿರಂದ್ರ ಬೇರೆ ಯಾರೂ ಕಲಿತಾಯಿಲ್ಲ.

ಪ್ರ 66 : ನಿಮ್ಮ ನಂತರ ಈ ಹಾಡುಗಳು ನಾಶವಾಗಿ ಹೋಗ್ತಾವ ಅನಸಾದಿಲ್ಲೇನು ನಿಮಗೆ?

ಉತ್ತರ : ಯಾರಿಗಾದರೂ ಕಲಿಸಬೇಕಂದ್ರ ಕಲಿಯಾಕಿಲ್ಲ ಅಂತಾರ ಏನ್ ಮಾಡದು. ಅದೊಂದೇ ಕೊರಗು.

ಪ್ರ 67: ನಮಸ್ಕಾರ ಅಜ್ಜಿ?

ಉತ್ತರ : ನಮಸ್ಕಾರ್ರಿಯಮ್ಮ.

ಬುರ್ರ ಕಥಾ ಈರಮ್ಮನ ಸ್ವ ವಿವರ

1.ಹೆಸರು ಮತ್ತು ವಿಳಾಸ	:	ಶ್ರೀಮತಿ ಬುರ್ರ ಕಥಾ ಈರಮ್ಮ ಗ್ರಾಮ : ಹಳೆದರೋಜಿ, 583 109. ತಾ. ಸೊಂಡೂರು, ಜಿ. ಬಳ್ಳಾರಿ ದೂರವಾಣಿ : 0839 579451(ಪಿಪಿ) 9242890225
2. ವಯಸ್ಸು	:	66 ವರ್ಷ
3. ಮಾತೃಭಾಷೆ	:	ಬುಡುಗ
4. ಮಾತನಾಡಬಲ್ಲ ಭಾಷೆಗಳು	:	ಕನ್ನಡ, ತೆಲುಗು, ಬುಡುಗ, ಹಿಂದಿ
5. ಜಾತಿ	:	ಬುಡ್ಗ ಜಂಗಮ್ (ಪರಿಶಿಷ್ಟ ಜಾತಿ)
6. ಬದುಕು ಹಾಗೂ ವಾಸ	:	ಅಲೆಮಾರಿ ಬದುಕು. ಗ್ರಾಮಗಳ ಹೊರಗೆ ಗುಡಾರಗಳಲ್ಲಿ ವಾಸ
7. ವಿದ್ಯಾರ್ಹತೆ	:	1) ಅನೌಪಚಾರಿಕ ಶಿಕ್ಷಣದಲ್ಲಿ ಸಹಿ ಮಾಡಲು ಕಲೆತಿರುವೆ. 2) ತಂದೆ - ತಾಯಿಗಳಿಂದ ಬುರ್ರ ಕಥೆಗಳನ್ನು ಹಾಡಿ, ಪ್ರದರ್ಶಿಸಲು ಕಲೆತಿರುವೆ. 3) ತಂದೆ - ತಾಯಿಗಳಿಂದ ಬುರ್ರ ವಾದ್ಯಗಳನ್ನು ನುಡಿಸಲು ಕಲೆತಿರುವೆ.
8. ಆಸ್ತಿ	:	ಚರಾಸ್ತಿ - ಸ್ಥಿರಾಸ್ತಿಗಳ್ಯಾವುವು ಇಲ್ಲ. ಆದರೆ ನಾನು ನುಡಿಸುವ ಬುರ್ರ ವಾದ್ಯಗಳು , ನಾನು ಹಾಡಿ ಹೇಳುವ ಕಥೆಗಳು, ಕಾವ್ಯಗಳು ಹಾಗೂ ಕೇಳುವವರೆಲ್ಲರೂ ನಮ್ಮ ಆಸ್ತಿಗಳು.
9. ವೈವಾಹಿಕ ಸ್ಥಾನ ಮಾನ	:	ವಿಧವೆ
10. ಮಗಳು	:	ಜಿಜ್ಜಮ್ಮ, 25 ವರ್ಷ , ಗ್ರಾಮ : ಹಳೆದರೋಜಿ
11. ಅಳಿಯ	:	ನಾಗರಾಜ 30 ವರ್ಷ, ಗ್ರಾಮ : ಹಳೆದರೋಜಿ
12. ಕೆಲಸ	:	ಬುರ್ರ ಕಥಾ ಮಹಾಕಾವ್ಯಗಳನ್ನು ಹಾಡುವುದು. ದಾನ ಧರ್ಮ ಸ್ವೀಕರಿಸುವುದು.
13. ಜನಪದ ಸಂಗೀತ ಪ್ರಕಾರ	:	ಬುರ್ರ ಕಥಾ

14. ಪ್ರದರ್ಶನಕ್ಕೆ ಬಳಸುವ ವಾದ್ಯಗಳು	:	ತಂಬೂರಿ, ಬುಡುಗ, ಡಿಮ್ಕಿ ಗಗ್ಗರಿ
15. ಕಾವ್ಯ ಪ್ರದರ್ಶಾನಾನುಭವ	:	50 ವರ್ಷ
16. ಸಹ ಕಲಾವಿದರ, ವಿವರ	:	1) ಸೋದರಿ ಶ್ರೀಮತಿ ಶಿವಮ್ಮ , 60 ವರ್ಷ, ಗ್ರಾಮ : ಹಳೆದರೋಜಿ 2) ಅತ್ತಿಗೆ ಶ್ರೀಮತಿ ಪಾರ್ವತಮ್ಮ 68 ವರ್ಷ, ಗ್ರಾಮ : ಹಳೆದರೋಜಿ
17. ಜನಪದ ಸಾಹಿತ್ಯದ ಹರವು	:	ಸುಮಾರು 7000 (ಏಳು ಸಾವಿರ) ಪುಟಗಳು . ಎರಡು ಲಕ್ಷ ಸಾಲುಗಳು, ಹನ್ನೆರಡು ಜನಪದ ಹಾಗೂ ಬುಡ ಕಟ್ಟು ಮಹಾಕಾವ್ಯಗಳು
ಅ. ಪ್ರಕಟಿತ ಕಾವ್ಯಗಳು	:	ನಾಲ್ಕು

1. ಕುಮಾರ ರಾಮ ಮತ್ತು ಕೃಷ್ಣ ಗೊಲ್ಲರ ಮಹಾಕಾವ್ಯ ಸಂಪಾದಕರು : ಡಾ॥ ಕೆ. ಎಮ್. ಮೈತ್ರಿ , ಮುಖ್ಯಸ್ಥರು ಪ್ರವಾಚಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಪ್ರಕಟನೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ (1997) (ಕುಮಾರ ರಾಮನ ಕಾವ್ಯ 221 ಪುಟಗಳು ಮತ್ತು ಕೃಷ್ಣ ಗೊಲ್ಲರ ಮಹಾಕಾವ್ಯ 648 ಪುಟಗಳು ಒಟ್ಟು ಬೆಲೆ ರೂ. 175/-) ಈ ಮಹಾಕಾವ್ಯಗಳಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 1997 ನೇ ಸಾಲಿನ ಅತ್ಯುತ್ತಮ್ಮ ಪುಸ್ತಕ ಪುರಸ್ಕಾರ ಲಭ್ಯವಾಗಿದೆ.

2. ಯಲ್ಲಮ್ಮನ ಕಾವ್ಯ : (ಸಂಪಾದಕರು : ಡಾ॥ ಕೆ. ಎಮ್. ಮೈತ್ರಿ, ಮುಖ್ಯಸ್ಥರು ಮತ್ತು ಪ್ರವಾಚಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 583 276 , ಪ್ರಕಟಣೆ : ವಿದ್ಯಾನಿಧಿ ಪ್ರಕಾಶನ ಗದಗ (2005)

3. ಸ್ಯಾಸಿ ಚಿನ್ನಮ್ಮನ ಕಾವ್ಯ : (ಸಂಪಾದಕರು : ಡಾ॥ ಸ. ಚಿ. ರಮೇಶ , ಪ್ರವಾಚಕರು ಜಾನಪದ ವಿಭಾಗ , ಕನ್ನಡ ವಿಶ್ವವಿದ್ಯಾಲಯ, ಹಂಪಿ , ವಿದ್ಯಾರಣ್ಯ 583 276. ಪ್ರಕಟಣೆ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ (1999) , ಪುಟಗಳು 174, ಬೆಲೆ ರೂ. 90/-)

ಅ. ಪ್ರಕಟಿತ ಜೀವನ ಚರಿತ್ರೆ :	1)	ಡಾ॥ ನಿಂಗಪ್ಪ ಮುದೇನೂರ,ಹಳೆದರೋಜಿ ಈರಮ್ಮ, ಗರಿಗೆದರಿದ ನವಿಲು (ಬೆಂಗಳೂರು ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ 2001)

2) ಡಾ॥ ನಿಂಗಪ್ಪ ಮುದೆನೂರ, ಬುರ್ರ ಕಥಾ ಈರಮ್ಮ, ಅಲೆಮಾರಿಯ ಆತ್ಮಕಥನ (ವಿದ್ಯಾನಿಧಿ ಪ್ರಕಾಶನ ಗದಗ 2005)

ಇ. ಪ್ರಕಟಣೆಗೆ ಸಿದ್ಧಗೊಂಡ ಕಾವ್ಯಗಳು : 1) ಬಬ್ಬುಲಿ ನಾಗಿರೆಡ್ಡಿ ಕಾವ್ಯ (ಸಂಪಾದಕರು : ಶ್ರೀ ವಿ. ಎಸ್. ಮಾರುತಿ)

2) ಆದೋಣಿ ಲಕ್ಷ್ಮಮ್ಮ ಕಾವ್ಯ (ಸಂಪಾದಕರು : ಶ್ರೀ ಎ.ಎಸ್. ಮಾರುತಿ)

3) ಬಾಲನಾಗಮ್ಮನ ಕಾವ್ಯ (ಸಂಪಾದಕರು :ಡಾ॥ ಮಂಜುನಾಥ ಬೇವಿನಕಟ್ಟಿ)

4) ಬಲಿಚಕ್ರವರ್ತಿ ಕಾವ್ಯ (ಸಂಪಾದಕರು:ಡಾ॥ ಮಂಜುನಾಥ ಬೇವಿನಕಟ್ಟಿ)

5) ಮಾರವಾಡಿ ಸೇಠಿ ಕಾವ್ಯ (ಸಂಪಾದಕರು :ಡಾ॥ ಸ. ಚಿ .ರಮೇಶ)

6) ಜಯಸಿಂಗ್ ರಾಜ ಮತ್ತು ಮಹ್ಮದ ಖಾನರ ಕಾವ್ಯ (ಸಂಪಾದಕರು : ನಿಂಗಪ್ಪ ಮುದೇನೂರ)

18. ಆಕಾಶ ವಾಣಿ ಹೊಸಪೇಟೆಯಲ್ಲಿ :1) ಗಂಗಿ ಗೌರಿ ಕಾವ್ಯ (ಪ್ರಸಾರ ದಿನಾಂಕ 8-1-98ರ ಪ್ರಸಾರ ಗೊಂಡ ಕಾವ್ಯಗಳು, ಸಮಯ : ಸಂಜೆ - 6.50ಕ್ಕೆ)

2) ಕುಮಾರ ರಾಮನ ಕಾವ್ಯ (ಪ್ರಸಾರ ದಿನಾಂಕ 8-1-98ರ ,ಪ್ರಸಾರ ಗೊಂಡ ಕಾವ್ಯಗಳು, ಸಮಯ : ಸಂಜೆ - 6.50ಕ್ಕೆ)

ಕಾವ್ಯಗಳ ಆಯ್ದ ಭಾಗಗಗಳನ್ನು ಮಾತ್ರ ಧ್ವನಿ ಮುದ್ರಿಸಿಕೊಂಡು ಪ್ರಸಾರ ಗೊಳಿಸಿರುತ್ತಾರೆ.)

19. ದೂರದರ್ಶನದಲ್ಲಿ ಪ್ರಸಾರ : ಈ ಟಿವಿಯಲ್ಲಿ ಬದುಕು ಮತ್ತು ಸಾಧನೆಯ ಪ್ರಸಾರ ದಿನಾಂಕ 01-5-2003 ಸಮಯ : ಬೆಳಗ್ಗೆ 8 ಗಂಟೆಗೆ

20. ಕಾವ್ಯ ಕಲಾ ಪ್ರದರ್ಶನ :

1) ಕಳೆದ 42 ವರ್ಷಗಳಿಂದ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ರಾಯಚೂರ, ಕೊಪ್ಪಳ, ಗುಲಬರ್ಗಾ, ಬೆಂಗಳೂರು, ಬೆಳಗಾವಿ ಗ್ರಾಮಗಳಲ್ಲಿ ಮತ್ತು ನಗರಗಳಲ್ಲಿ ಕುಮಾರ ರಾಮ ಕೃಷ್ಣ ಗೊಲ್ಲ , ಬಾಲ ನಾಗಮ್ಮ, ಎಲ್ಲಮ್ಮ , ಬಲಿ ಚಕ್ರವರ್ತಿ, ಬಬ್ರುವಾಲಿ ನಾಗಿರೆಡ್ಡಿ, ಆದೋನಿ ಲಕ್ಷ್ಮಮ್ಮ, ಸ್ಯಾಸಿ ಚಿನ್ನಮ್ಮ, ಮಾರವಾಡಿ ಸೇಠಿ, ಗಂಗೀ ಗೌರಿ, ಜಯಸಿಂಗರಾಜ ಮತ್ತು ಮಹ್ಮದ ಖಾನ ಇತ್ಯಾದಿ ಕಥನ ಕಾವ್ಯಗಳು ಯಶಸ್ವಿಯಾಗಿ ಪ್ರದರ್ಶನ ಗೊಂಡು ಜನ ಮನ ಸೂರೆಗೊಳಿಸಿವೆ.

2) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜಿತ ಕಲಾ ಮೇಳ ಸಾಂಸ್ಕೃತಿಕ ಉತ್ಸವ , ಬುಡಕಟ್ಟು, ಉತ್ಸವ, ಜಾನಪದ ಉತ್ಸವ, ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಇತ್ಯಾದಿಗಳಲ್ಲಿ ತಾಲೂಕ, ಜಿಲ್ಲಾ ,ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಕಳೆದ ಎರಡು ದಶಕದಿಂದ ಸಕ್ರಿಯವಾಗಿ ಪಾಲ್ಗೊಂಡು ಕಾವ್ಯ ಕಲಾ ಪ್ರದರ್ಶನಗೊಳಿಸಿ ಜನಮನ ಗಳಿಸಿದೆ.

ಪ್ರಶಂಸನೀಯ ಪತ್ರಗಳು :

1) ಕರ್ನಾಟಕ ಸಂಘ, ಕರ್ನಾಟಕ ಅಧ್ಯಯನ ಸಂಸ್ಥೆ, ಸ್ನಾತಕೋತ್ತರ ಕೇಂದ್ರ, ಕೃಷ್ಣ ದೇವರಾಯ ನಗರ, ಸೊಂಡೂರು ದಿನಾಂಕ 28.8.1992 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿದೆ.
2) ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ದಿನಾಂಕ 8-1-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿದೆ.
3) ಡಾ॥ ಕೆ. ಎಮ್. ಮೈತ್ರಿ (ಪ್ರವಾಚಕರು, ಬುಡ ಕಟ್ಟು ಅಧ್ಯಯನ ವಿಭಾಗ , ಕನ್ನಡ ವಿಶ್ವ ವಿದ್ಯಾಲಯ) ಅವರು ದಿನಾಂಕ 1-5-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿದ್ದಾರೆ.
4) ಜನಪದ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ,ದಿನಾಂಕ 14-8-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿದ್ದಾರೆ.
5) ಡಾ॥ ವಿ. ಎಸ್. ಮಾರುತಿಯವರು ದಿನಾಂಕ 11-7-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿರುವರು.
6) ಡಾ॥ ಸ. ಚಿ. ರಮೇಶ (ಪ್ರವಾಚಕರು , ಜನಪದ ವಿಭಾಗ ಕನ್ನಡ ವಿಶ್ವವಿದ್ಯಾಲಯ) ಅವರು ದಿನಾಂಕ 5-12-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿರುವರು.
7) ಡಾ॥ ನಿಂಗಪ್ಪ ಮುದೇನೂರು ಅವರು ದಿನಾಂಕ 7-12-1998 ರಂದು ಪ್ರಶಂಸನೀಯ ಪತ್ರ ನೀಡಿ ಗೌರವಿಸಿರುವರು.

22. ಪ್ರಶಸ್ತಿ ಪತ್ರ :

1) ಕನ್ನಡ ಸಾಹಿತ್ಯ ಪರಿಷತ್ತು , ಬಳ್ಳಾರಿ ,ದಿನಾಂಕ 1-12-1992 ರಂದು ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ.
2) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಳ್ಳಾರಿ ದಿನಾಂಕ 14-4-1993 ರಂದು ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ.

3) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಳಗಾವಿಯು ಗಡಹಿಂಗ್ಲಜದಲ್ಲಿ ಆಯೋಜಿಸಿದ ಗಡಿನಾಡ ಉತ್ಸವ 2000 ಸಂದರ್ಭದಲ್ಲಿ ದಿನಾಂಕ 29-3-2000 ರಂದು ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ.

4) ಸ್ವರ ಸಂಗಮ ಸಾಂಸ್ಕೃತಿಕ ಬಳಗ ಬಳ್ಳಾರಿಯ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆ.

5) ಅ.ಯು. ಶಿವಕುಮಾರ್ ಗೌಡ ವಕೀಲರು ಬಳ್ಳಾರಿ ಇವರ ಪುಣ್ಯ ತಿಥಿಯಲ್ಲಿ ನೀಡಿದ ಪ್ರಶಸ್ತಿ ಪತ್ರ ಮತ್ತು ಸ್ಮರಣಿ.

23. ಪುರಸ್ಕಾರ ಪತ್ರ

1) ಸ್ಟಾರ್ ಆಫ್ ಬಳ್ಳಾರಿ ಪತ್ರಿಕೆಯ ಪ್ರಥಮ ವಾರ್ಷಿಕೋತ್ಸವ ಪ್ರತಿಭಾ ಪುರಸ್ಕಾರ ದಿನಾಂಕ 30-1-2000


2) ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಬಳ್ಳಾರಿಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ದಿನಾಂಕ 8-3-2000.

24. ರಾಜ್ಯೋತ್ಸವ ಪ್ರಶಸ್ತಿ :	1) 1999 ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1-11-1999)
25. ಸಂದೇಶ ಪ್ರಶಸ್ತಿ :	2003 ನೇ ಸಾಲಿನ ಮಂಗಳೂರಿನ ಸಂದೇಶ ಪ್ರತಿಷ್ಠಾನದ ಸಂದೇಶ ಕಲಾ ಪ್ರಶಸ್ತಿ (14-2-2003)
26. ಅಂಬೇಡ್ಕರ್ ಪ್ರಶಸ್ತಿ :	2003 ನೇ ಸಾಲಿನ ಕರ್ನಾಟಕ ಸರ್ಕಾರದ ಡಾ॥ ಬಿ. ಆರ್. ಅಂಬೇಡ್ಕರ್ ಪ್ರಶಸ್ತಿ (14-4-2003)
27. ನಾಗರಿಕ ಸನ್ಮಾನ :	1) ಹೊಸಪೇಟೆ ತಾಲೂಕಿನ ಕಂಪ್ಲಿ ಪಟ್ಟಣದ ರೋಟರಿ ಕ್ಲಬ್‌ನಿಂದ (ಮಾರ್ಚ್ 1999) 2) ಸಹ ಮತ ಸಾಂಸ್ಕೃತಿಕ ವೇದಿಕೆ, ಹೊಸಪೇಟೆ 19-11-1999 3) ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ, ಬಳ್ಳಾರಿ 4) ನೂರಾರು ಸಾಂಸ್ಕೃತಿಕ ಸಾಹಿತಿಕ, ಸಾಮಾಜಿಕ, ರಾಜಕೀಯ ಸಂಘ ಸಂಸ್ಥೆಗಳು ಸನ್ಮಾನಿಸಿವೆ.
28. ಸಂಪನ್ಮೂಲ ವ್ಯಕ್ತಿ	1) ಪಲ್ಸ ಪೋಲಿಯೋ ಅಭಿಯಾನ, ಬಳ್ಳಾರಿ 2) ಸಾಕ್ಷರತೆ ಅಭಿಯಾನ , ಬಳ್ಳಾರಿ

ಸ್ಥಳ : ಹಳೆ ದರೋಜಿ

ದಿನಾಂಕ : 1-10-2005 (ಶ್ರೀಮತಿ ಬುರ್ರ ಕಥಾ ಈರಮ್ಮ)

ಈರಮ್ಮನ ವಂಶಾವಳಿ



★ ಬುರ್ರ ಕಥಾ ಈರಮ್ಮ



1999ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಸ್ವೀಕಾರ ಸಮಾರಂಭ



2003 ನೇ ಸಾಲಿನ ಮಂಗಳೂರಿನ ಸಂದೇಶ
ಕಲಾ ಪ್ರಶಸ್ತಿ ಸ್ವೀಕಾರ ಸಮಾರಂಭ



ಬುರ್ರಕಥೆಗಳ ಹಾಡುಗಾರಿಕೆ
ಅಶ್ವಿಪಾರ್ವತಮ್ಮ, ಬುರ್ರಕಥಾ ಈರಮ್ಮ ಮತ್ತು ಎಡವಲಿ ಶಿವಮ್ಮ



ಕಾರ್ಯಕ್ರಮವೊಂದರಲ್ಲಿ ಹಾಡುಗಾರಿಕೆ
ಎಡವಲಿ ಶಿವಮ್ಮ, ಬುರ್ರಕಥಾ ಈರಮ್ಮ ಮತ್ತು ಅಶ್ವಿಪಾರ್ವತಮ್ಮ